ISSN No. 19119382

ಅನಿಕೇತನ

ಕರ್ನಾಟಕ ಸಾಹಿತ್ಯ ಅಕಾಡೆಮಿಯ ತ್ರೈಮಾಸಿಕ

ವರಿ-ಮಾರ್ಚ್
೨೦೨೦



ಪ್ರಧಾನ ಸಂಪಾದಕರು
ಡಾ.ಬಿ.ವಿ.ವಸಂತಕುಮಾರ್

ಸಂಪಾದಕರು
ಡಾ.ಎ.ರಘುರಾಂ

ಕರ್ನಾಟಕ ಸಾಹಿತ್ಯ ಅಕಾಡೆಮಿ

ಅನಿಕೇತನ

ಕರ್ನಾಟಕ ಸಾಹಿತ್ಯ ಅಕಾಡೆಮಿಯ ತ್ರೈಮಾಸಿಕ

ಜನವರಿ - ಮಾರ್ಚ್ 2020

ಸಂಚಿಕೆ 116

ಪ್ರಧಾನ ಸಂಪಾದಕರು

ಡಾ.ಬಿ.ವಿ.ವಸಂತಕುಮಾರ್

ಸಂಪಾದಕರು

ಡಾ.ಎ.ರಘುರಾಂ

ಕರ್ನಾಟಕ ಸಾಹಿತ್ಯ ಅಕಾಡೆಮಿ

ಕನ್ನಡ ಭವನ, ಜೆ. ಸಿ. ರಸ್ತೆ, ಬೆಂಗಳೂರು-೫೬೦ ೦೦೨.

ದೂರವಾಣಿ: 080-22211730/22106460

www. sahithyaacademyKarnataka.gov.in

Email: sahithya.academy@gmail.com

ANIKETHANA : (A Quarterly journal of kannada Language and Literature) January 2020 – March 2020, Edited by : Dr. A. Raghuram, Published by : Kariyappa N, Registrar, Karnataka Sahitya Academy , Kannada Bhavana, J. C. Road, Bengaluru – 560002

ISSN No: 19119382

ಪ್ರಧಾನ ಸಂಪಾದಕರು
ಡಾ. ಬಿ. ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

ಸಂಪಾದಕರು
ಡಾ. ಎ. ರಘುರಾಂ

ಪ್ರಕಾಶಕರು
ಕರಿಯಪ್ಪ ಎನ್.
ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಣ : ೨೦೨೨
ಪ್ರತಿಗಳು : ೨೦೦೦
ಬೆಲೆ : **ರೂ.೬೦/-**
ಪುಟಗಳು : x + ೨೯೨=೩೦೨
ಮುಖಪುಟ ಚಿತ್ರ : ಮುರಳೀಧರ ವಿ. ರಾಥೋಡ್

ಬಿಡಿ ಪ್ರತಿ : **ರೂ.೬೦/-**
ವಾರ್ಷಿಕ ಪ್ರತಿ : **ರೂ.೨೫೦/-**
ಆಜೀವ ಚಂದಾ : **ರೂ.೧೦೦೦/-**

ಮುದ್ರಕರು
ಏಕಾಕ್ಷರ ಪ್ರಿಂಟರ್ಸ್
ನಂ. 2, 5ನೇ 'ಬಿ' ಮುಖ್ಯರಸ್ತೆ
ಬ್ಯಾಂಕ್ ಆಫ್ ಬರೋಡಾ ರಸ್ತೆ
ಕಾಮಾಕ್ಷಿಪಾಳ್ಯ, ಬೆಂಗಳೂರು – 560 079
ಮೊಬೈಲ್: 9844365538

ಪ್ರಧಾನ ಸಂಪಾದಕರ ಮಾತು

'ಅನಿಕೇತನ' ಸಂಚಿಕೆಗಳು ವಿಳಂಬವಾಗಿ ನಿಮ್ಮ ಕೈತಲುಪುತ್ತಿರುವುದಕ್ಕೆ ವಿಷಾದಿಸುತ್ತೇನೆ ಹಾಗೂ ಕ್ಷಮೆಯಾಚಿಸುತ್ತೇನೆ. ಈ ವಿಳಂಬಕ್ಕೆ ಕಾರಣಗಳೇನೇ ಇದ್ದರೂ ಸಕಾಲಕ್ಕೆ ಮುದ್ರಿಸಿ ತಲುಪಿಸಬೇಕಾಗಿತ್ತು ಎಂಬ ಅರಿವು ನನ್ನೊಳಗಿದೆ. ಆದರೆ ಅದು ಸಾಧ್ಯವಾಗಲಿಲ್ಲ. ನಮ್ಮ ತಂಡ ಅಕ್ಟೋಬರ್ ೨೦೧೯ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಜವಾಬ್ದಾರಿ ವಹಿಸಿಕೊಂಡ ಬಳಿಕ ನವಂಬರ್ ೨೦೧೯ರಲ್ಲೇ ೨೦೨೦ನೆಯ ಸಾಲಿನ 'ಅನಿಕೇತನ' ಪತ್ರಿಕೆಯ ಸಂಪಾದಕರಾಗಿ ಕಾರ್ಯ ನಿರ್ವಹಿಸಲು ಡಾ. ಎ.ರಘುರಾಂ ಅವರನ್ನು ಕೋರಿದೆವು. ಅವರು ಒಪ್ಪಿ ೨೦೨೦ರ ಮಾರ್ಚ್-ಏಪ್ರಿಲ್ ಹೊತ್ತಿಗೆ ಮೊದಲ ಸಂಚಿಕೆಯನ್ನು ಸಿದ್ಧಗೊಳಿಸಿದ್ದರು. ಅದೇ ಸಮಯದಲ್ಲಿ ೨೦೧೮ನೆಯ ವರ್ಷದ ಹಾಗೂ ೨೦೧೯ನೆಯ ಸಾಲಿನ ಅನಿಕೇತನ ಪ್ರಕಟವಾಗದಿದ್ದುದನ್ನು ಗಮನಿಸಿ ಆ ಎರಡು ವರ್ಷಗಳ ಎರಡು ಸಂಯುಕ್ತ ಸಂಚಿಕೆಗಳನ್ನು ಪ್ರಕಟಿಸಲು ನಿರ್ಧರಿಸಿ ಡಾ.ಚಿತ್ತಯ್ಯ ಪೂಜಾರ್ ಹಾಗೂ ಡಾ.ಎಚ್.ಎಸ್.ರಘುನಾಥ ಅವರನ್ನು ಸಂಪಾದಕರಾಗಿ ಕಾರ್ಯನಿರ್ವಹಿಸಲು ಕೇಳಿದೆವು. ಅವರೂ ಪ್ರೀತಿಯಿಂದ ಒಪ್ಪಿ ಎರಡು ಸಂಯುಕ್ತ ಸಂಚಿಕೆಗಳನ್ನು ಸಿದ್ಧಪಡಿಸಿದರು. ಇನ್ನೇನು ಮುದ್ರಣವಾಗಿ ಹೊರಬರಬೇಕು ಎನ್ನುವ ಹೊತ್ತಿಗೆ ೨೦೨೦ರ ಮಾರ್ಚ್‌ನಲ್ಲಿ ಕೊರೊನಾ ಕಾರಣ ದೇಶಾದ್ಯಂತ ಲಾಕ್‌ಡೌನ್ ಆಯಿತು. ಮುದ್ರಣಾಲಯಗಳು ಮುಚ್ಚಿದವು. ಮಾರ್ಚ್‌ನಿಂದ ನವಂಬರ್‌ವರೆಗೆ ಒಟ್ಟು ಒಂಭತ್ತು ತಿಂಗಳುಗಳ ಕಾಲ ಎಲ್ಲ ಚಟುವಟಿಕೆಗಳು ಸ್ಥಗಿತವಾದದ್ದು ತಮ್ಮೆಲ್ಲರಿಗೂ ತಿಳಿದಿರುವ ಸಂಗತಿಯಾಗಿದೆ. ಈ ನಡುವೆ 'ಅನಿಕೇತನ' ಸಂಚಿಕೆಗೆ 'ಐಎಸ್ ಎಸ್‌ಎನ್' ನಂಬರ್ ಪಡೆಯುವ ಪ್ರಯತ್ನ ಮಾಡಿದೆವು. ಹಾಗಾಗಿ ಡಾ.ಎ.ರಘುರಾಂ ಅವರು ಸಿದ್ಧಪಡಿಸಿದ್ದ ಏಪ್ರಿಲ್-ಜೂನ್ ೨೦೨೦ರ ಸಂಚಿಕೆಯನ್ನು ಮೊದಲು ಪ್ರಕಟಿಸಿದೆವು. ಆ ಸಂಚಿಕೆಯನ್ನು ಕಳಿಸಿ 'ಐಎಸ್‌ಎಸ್‌ಎನ್' ನಂಬರ್ ಪಡೆದಿದ್ದೇವೆ. ಅನಿಕೇತನಕ್ಕೆ ISSN :೯೯೧೯೯೩೮೭ ಸಂಖ್ಯೆ ಬಂದಿದೆ. ೨೦೨೦ರಲ್ಲಿ ಸಂಚಿಕೆ ೧೧೪ ಪ್ರಕಟವಾಯಿತು. ೨೦೨೧ರಲ್ಲಿ ಅನಿಕೇತನ ೨೦೧೯ ಹಾಗೂ ೨೦೨೦ರ ಸಂಯುಕ್ತ ಸಂಚಿಕೆ ಹಾಗೂ ಸಂಚಿಕೆ ೧೧೫ ಪ್ರಕಟವಾಯಿತು. ೨೦೨೧ರ ಮಾರ್ಚ್-ಏಪ್ರಿಲ್ ತಿಂಗಳಲ್ಲಿ ಮತ್ತೆ ಎರಡನೆಯ ಬಾರಿ ಕೊರೋನಾ ಕಾರಣ ಲಾಕ್‌ಡೌನ್ ಆಗಿ ನಮ್ಮ

ಎಲ್ಲ ಚಟುವಟಿಕೆಗಳು ಮೂರು ನಾಲ್ಕು ತಿಂಗಳುಗಳ ಕಾಲ ಸ್ತಬ್ಧವಾದವು. ಇಂಥ ಹಲವು ಅಡೆ ತಡೆಗಳ ನಡುವೆ ೨೦೨೦ರ ನವಂಬರ್ ಸಭೆಯಲ್ಲಿಯೇ ೨೦೨೧ನೆಯ ಸಾಲಿನ 'ಅನಿಕೇತನ' ಪತ್ರಿಕೆಯ ಸಂಪಾದಕರಾಗಿ ಕಾರ್ಯ ನಿರ್ವಹಿಸಲು ಮಂಗಳೂರಿನ ಡಾ.ರಾಜಲಕ್ಷ್ಮಿ ಕೋಡಿಬೆಟ್ಟು ಅವರನ್ನು ವಿನಂತಿಸಿದೆವು. ಅವರು ಒಪ್ಪಿ ತಮ್ಮ ನಾಲ್ಕು ಸಂಚಿಕೆಗಳನ್ನು ಸಿದ್ಧಪಡಿಸಿದ್ದಾರೆ. ಇ-ಟೆಂಡರ್ ಪ್ರಕ್ರಿಯೆಗಳನ್ನೆಲ್ಲ ಮುಗಿಸಿ ಮುದ್ರಣಾಲಯಕ್ಕೆ ಕಳಿಸಿದೆವು. ೨೦೨೧ ನವಂಬರ್‌ನಿಂದ ೨೦೨೨ ಮಾರ್ಚ್‌ವರೆಗೆ 'ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ' ಮಾಲೆಯ ೭೫ ಕೃತಿಗಳನ್ನು ಬರೆಸಿ, ಮುದ್ರಿಸಿ ಬಿಡುಗಡೆ ಮಾಡುವ, ಸ್ವಾತಂತ್ರ್ಯದ ಅಮೃತ ಮಹೋತ್ಸವ ಹಾಗೂ ಅಮೃತ ಭಾರತಿಗೆ ಕನ್ನಡದಾರತಿ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಕಾರ್ಯಕ್ರಮಗಳು ಹಾಗೂ ಪುಸ್ತಕ ಬಿಡುಗಡೆ ಕಾರ್ಯಕ್ರಮವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಡೆಸಿತು. ಒಟ್ಟಾರೆ ೨೦೨೨ನೆಯ ವರ್ಷದಲ್ಲಿ ನಮ್ಮ ಎಲ್ಲ ಪುಸ್ತಕಗಳು ಪ್ರಕಟವಾಗಿ ಹೊರಬರಬೇಕಾದ ಸ್ಥಿತಿ ನಿರ್ಮಾಣವಾಯಿತು. ಕಳೆದ ಎರಡೂ ಮುಕ್ಕಾಲು ವರ್ಷದಲ್ಲಿ ೧೬೦ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿ ಬಿಡುಗಡೆ ಮಾಡಿದ್ದೇವೆಂದು ತಿಳಿಸಲು ಇಚ್ಛಿಸುತ್ತೇನೆ. ಇದಕ್ಕೆಲ್ಲ ಲೇಖಕರ, ಓದುಗರ, ಮುದ್ರಕರ ಹಾಗೂ ಸಂಪಾದಕರ ಸಹಕಾರವೇ ಮುಖ್ಯ ಕಾರಣ. ಅವರೆಲ್ಲರಿಗೂ ತುಂಬು ಹೃದಯದಿಂದ ವಂದಿಸುತ್ತೇನೆ.

ಡಾ.ಎ.ರಘುರಾಂ ಅವರು ಮೊದಲು ಸಂಪಾದಿಸಿದ್ದ ಮೊದಲ ಸಂಚಿಕೆ ೧೧೬ ಈಗ ಮುದ್ರಣವಾಗಿ ಹೊರಬರುತ್ತಿದೆ. ಆ ಮೂಲಕ ಅವರ ೨೦೨೦ರ ನಾಲ್ಕೂ ಸಂಚಿಕೆಗಳು ಓದುಗರ ಕೈಸೇರಿವೆ. ಈ ಎಲ್ಲ ಸಂಚಿಕೆಗಳು ಸಂಗ್ರಹಯೋಗ್ಯವಾದ ಮೌಲಿಕ ಲೇಖನಗಳಿಂದ ಕೂಡಿದ ಸಂಚಿಕೆಗಳಾಗಿವೆ. ಕಾಲದ ಕಟ್ಟಳೆಗಳನ್ನು ಮೀರಿ ಸಹೃದಯಿಗಳು ಹಾಗೂ ಲೇಖಕರು ಉದಾರ ಮನಸ್ಸಿನಿಂದ ಸ್ವೀಕರಿಸುವಿರೆಂಬ ನಂಬಿಕೆ ನಮ್ಮದಾಗಿದೆ.

ಪ್ರಸ್ತುತ 'ಅನಿಕೇತನ'ದಲ್ಲಿ ಒಟ್ಟು ೨೯ ಲೇಖನಗಳಿವೆ. ಡಾ.ಡಿ.ಕೆ ಚಿತ್ತಯ್ಯ ಪೂಜಾರ್ ಅವರ 'ಮದ್ರಾಸ್ ಪರಿಸರದ ಪ್ರಾಚೀನ ಕನ್ನಡ ಸಾಹಿತ್ಯ ಪ್ರಕಟಣಾ ಸಂಸ್ಥೆಗಳು' ಲೇಖನದಿಂದ ಹಿಡಿದು ಡಾ.ಜೆ ಕರಿಯಪ್ಪ ಮಾಳಿಗೆ ಅವರ 'ಬುಡಕಟ್ಟು ಸಮುದಾಯ ಮತ್ತು ಅನುಭಾವ ಪರಂಪರೆ' ಲೇಖನದವರೆಗೆ ಸಂಶೋಧನೆ, ಸಾಹಿತ್ಯ ವಿಮರ್ಶೆ, ಜಾನಪದ, ವೈಚಾರಿಕತೆ, ತಾತ್ವಿಕತೆ, ಅನುವಾದ ಸಾಹಿತ್ಯಾದಿ ಹತ್ತಾರು ವಿಷಯ ವೈವಿಧ್ಯತೆಯ ಅರಿವನ್ನು, ಅನುಭವವನ್ನು ನೀಡುತ್ತವೆ. ಆ ಎಲ್ಲಾ ಲೇಖಕರಿಗೆ, ಸಂಪಾದಕರಾದ ಗೆಳೆಯ ಡಾ.ಎ.ರಘುರಾಂ ಅವರಿಗೆ, ಅಹರ್ನಿಸಿ

ದುಡಿಯುತ್ತಿರುವ ನಮ್ಮ ಬಳಗದ ಸರ್ವ ಸದಸ್ಯರಿಗೆ, ರಿಜಿಸ್ಟ್ರಾರ್ ಶ್ರೀ ಎನ್. ಕರಿಯಪ್ಪ ಅವರಿಗೆ, ಶ್ರೀ ವಿ.ಹರೀಶ್ ಕುಮಾರ್, ಶ್ರೀ ಬ್ರಹ್ಮಣೀಪುರ ಹರೀಶ್, ಶ್ರೀ ಸೈಯದ್ ಜಾವೀದ್, ಶ್ರೀಮತಿ ಎಸ್.ಜಿ.ಸುಮಿತ್ರ, ಶ್ರೀ ಎನ್.ಗೋಪಾಲ್ ಅವರಿಗೆ, ಸುಂದರವಾದ ಮುಖಪುಟ ರಚಿಸಿದ ಶ್ರೀ ಮುರಳೀಧರ ರಾಥೋಡ್ ಹಾಗೂ ಅಂದವಾಗಿ ಮುದ್ರಿಸಿದ ಏಕಾಕ್ಷರ ಪ್ರಿಂಟರ್ಸ್‌ನ ಶ್ರೀ.ಚಂದ್ರಶೇಖರ್ ಬಳಗಕ್ಕೆ ಪ್ರೀತಿಯಿಂದ ವಂದಿಸುತ್ತೇನೆ. ವಿಳಂಬವಾದರೂ ತಪ್ಪಿಸಬಾರದೆಂದು 'ಅನಿಕೇತನ'ವನ್ನು ನಿಮ್ಮ ಹೃದಯಕ್ಕೆ ಮುಟ್ಟಿಸುತ್ತಿದ್ದೇವೆ. ೨೦೧೯ ಅಕ್ಟೋಬರ್‌ನಿಂದ ಈವರೆಗೆ ಒಟ್ಟು ೦೮ 'ಅನಿಕೇತನ' ಸಂಚಿಕೆಗಳನ್ನು ಹೊರತಂದಿದ್ದೇವೆ. ಇನ್ನೂ ಎರಡು ಸಂಚಿಕೆಗಳು ಸದ್ಯದಲ್ಲಿ ಹೊರಬರಲಿವೆ ಎಂಬ ಸಮಾಧಾನದೊಂದಿಗೆ ಎಲ್ಲ ಚಂದಾದಾರರಿಗೆ, ಸಹೃದಯ ಓದುಗರಿಗೆ ಪ್ರೀತಿಯಿಂದ ವಂದಿಸುತ್ತೇನೆ.

ಡಾ. ಬಿ. ವಿ. ವಸಂತಕುಮಾರ್
ಅಧ್ಯಕ್ಷರು

ಸಂಪಾದಕರ ಮಾತು

ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಸಾಹಿತ್ಯ ಪತ್ರಿಕೆಗಳು ತುಂಬ ಪ್ರಮುಖ ಪಾತ್ರ ವಹಿಸುತ್ತವೆ. ಆ ನಿಟ್ಟಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿಸುತ್ತಿರುವ 'ಅನಿಕೇತನ' ತನ್ನದೇ ಆದ ಕಾರಣಗಳಿಂದ ಮಹತ್ವವನ್ನು ಪಡೆದಿದೆ. ವಿದ್ಯುನ್ಮಾನ ಮಾಧ್ಯಮಗಳಲ್ಲಿ ಸಾಹಿತ್ಯದ ಚರ್ಚೆಗಳು ಹೆಚ್ಚು ಚಾಲ್ತಿಗೆ ಬರುತ್ತಿರುವುದು ತುಂಬ ಆಶಾದಾಯಕ ಬೆಳವಣಿಗೆ. ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ಬೆಳೆಸಲು ಜೀವಮಾನವಿಡೀ ಶ್ರಮಿಸಿದ ಇತಿಹಾಸ ನಮ್ಮಲ್ಲಿದೆ. ತಮ್ಮದೇ ಆದ ಚಿಂತನೆಗಳ ಮೂಲಕ ಕರ್ನಾಟಕದ ಚರಿತ್ರೆಯನ್ನು ಕಟ್ಟಲು ಅನೇಕರು ಶ್ರಮಿಸಿದ್ದಾರೆ. ಅಂತಹ ಆದರ್ಶಗಳ ಹಿನ್ನೆಲೆಯಲ್ಲಿ ಸಾಮಾಜಿಕವಾಗಿ, ರಾಜಕೀಯವಾಗಿ, ಸಾಂಸ್ಕೃತಿಕವಾಗಿ ನಮ್ಮ ಚರಿತ್ರೆಯನ್ನು ಕಟ್ಟಿಕೊಳ್ಳುವ ದಿಸೆಯಲ್ಲಿ ಪ್ರಯತ್ನಗಳು ನಿರಂತರ ನಡೆಯಬೇಕಿದೆ. ಓದುವ ಸಂಸ್ಕೃತಿಯೊಂದು ನಮ್ಮ ಬದುಕನ್ನು ಕಟ್ಟಬಲ್ಲದು, ಮುನ್ನಡೆಸಬಲ್ಲದು ಎಂಬ ತಿಳಿವಳಿಕೆಯನ್ನು ಸದಾ ನೆನಪಿನಲ್ಲಿಡಬೇಕಾಗಿದೆ. ಯುವಜನಾಂಗ ಮೊಬೈಲ್‌ಗೀಳಿಗೆ ಬಿದ್ದು ನೋಡುವ ಸಂಸ್ಕೃತಿಯಲ್ಲಿ ಕಳೆದುಹೋಗುತ್ತಿರುವುದನ್ನು ನಿಯಂತ್ರಿಸಬೇಕಿದೆ. ವಿಭಿನ್ನವಾದ ಜ್ಞಾನಶಿಸ್ತುಗಳ ಕಡೆಗೆ ಅವರ ಗಮನ ಕೇಂದ್ರೀಕರಿಸುವಂತೆ ಮಾಡಲು ಶ್ರಮಿಸಬೇಕಾಗಿದೆ. ನಮ್ಮ ಶಿಕ್ಷಣ ವ್ಯವಸ್ಥೆ ಅಂತಹ ಕಿರುದಾರಿಗಳನ್ನು ಮಹಾಮಾರ್ಗವಾಗುವಂತೆ ಮಾಡಬೇಕಿದೆ. ಕರ್ನಾಟಕದ ಚರಿತ್ರೆ, ಕನ್ನಡ ಸಾಹಿತ್ಯ, ಕನ್ನಡ ಸಂಶೋಧನೆ ಮುಂತಾದ ವಿಚಾರಗಳ ಬಗೆಗಿನ ಅಧ್ಯಯನ, ಅನುಸಂಧಾನ ಮತ್ತಷ್ಟು ಹೆಚ್ಚಬೇಕಿದೆ. ಅಂತಹ ಪ್ರಯತ್ನಕ್ಕೆ ಈ ರೀತಿಯ ಸಂಚಿಕೆಗಳು ಸಹಕಾರಿಯಾಗಿವೆ.

'ಅನಿಕೇತನ' ಕರ್ನಾಟಕ ಸಾಹಿತ್ಯ ಅಕಾಡೆಮಿಯು ಪ್ರಕಟಿಸುತ್ತಿರುವ ತ್ರೈಮಾಸಿಕ. ಇದು ೧೧೬ನೆಯ ಸಂಚಿಕೆಯಾಗಿದೆ. ಕನ್ನಡ ಸಾಹಿತ್ಯ ಸೃಜನಶೀಲ ಭಾಷೆ ಎಂದು ಪ್ರೀತಿಸುವವರು ತಮ್ಮದೇ ಆದ ನೆಲೆಗಳಲ್ಲಿ ಕನ್ನಡ ಕಟ್ಟಲು ಪ್ರಯತ್ನಿಸುತ್ತಿರುವುದು ಸಂತೋಷದ ಸಂಗತಿ. ಕನ್ನಡ ಸಾಹಿತ್ಯದಲ್ಲಿ ಹೊಸ ಹೊಸ ಪುಸ್ತಕಗಳು ಪ್ರಕಟವಾಗುತ್ತಿರುವುದು ಭಾಷೆಯ ಜೀವಂತಿಕೆಯ ಲಕ್ಷಣವೇ. ಇದು ಆಶಾದಾಯಕ

ಹಾಗೂ ನಮ್ಮನ್ನು ನಾವೇ ಬೆನ್ನು ತಟ್ಟಿಕೊಳ್ಳಬೇಕಾದ ಸಂಗತಿ. ಹೊಸ ತಲೆಮಾರಿನ ಅನೇಕ ಕವಿಗಳು, ಕತೆಗಾರರು, ವಿಮರ್ಶಕರು ಹೊಸ ಅಲೇಯನ್ನೇ ಸೃಷ್ಟಿಸುತ್ತಿದ್ದಾರೆ. ಕನ್ನಡ ವಿದ್ವತ್ ವಿವೇಕ ಸೃಷ್ಟಿಸಿದ ದಾರಿ ಬಹು ದೊಡ್ಡದು ಅದು ಮಹಾಮಾರ್ಗವಾಗಿ ಎಂದೂ ಉಳಿಯಬೇಕು. ನಾಡಿನ ಸಾಹಿತ್ಯಾಸಕ್ತರು, ಚಿಂತಕರು ತಮಗೆ ತೋರಿದ ಕೆಲವು ವಿಷಯಗಳ ಮೇಲೆ ಚರ್ಚಿಸಿದ್ದಾರೆ. ಸಂಪಾದಕನಾಗಿ ಜವಾಬ್ದಾರಿ ನಿರ್ವಹಿಸಲು ಹೇಳಿದ ಆತ್ಮೀಯ ಗೆಳೆಯರೂ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರೂ ಆದ ಡಾ.ಬಿ.ವಿ.ವಸಂತಕುಮಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿಯ ರಿಜಿಸ್ಟ್ರಾರ್ ಆದ ಶ್ರೀ ಕರಿಯಪ್ಪ.ಎನ್, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಎಲ್ಲ ಸಿಬ್ಬಂದಿ ವರ್ಗಕ್ಕೆ, ನನ್ನ ಮನವಿಗೆ ಸ್ಪಂದಿಸಿ 'ಅನಿಕೇತನ' ಸಂಚಿಕೆಗೆ ಲೇಖನಗಳನ್ನು ಕಳುಹಿಸಿ ಸಹಕರಿಸಿದ ಲೇಖಕರಿಗೆ, ಅಕ್ಷರ ಜೋಡಣೆ ಮಾಡಿದ ಶ್ರೀಮತಿ ಪ್ರಭಾ. ಜಿ ಹಾಗೂ ಅನಿಕೇತನ ಸಂಚಿಕೆಯನ್ನು ಎಂದಿನಂತೆ ಪ್ರೋತ್ಸಾಹಿತ್ತಾ ಬಂದ ಅಪಾರ ಓದುಗ ವರ್ಗಕ್ಕೆ ಹಾಗೂ ನಮ್ಮ ಕೋರಿಕೆಯನ್ನು ಮನ್ನಿಸಿ 'ಅನಿಕೇತನ' ಸಂಚಿಕೆಗೆ ಚಂದಾದಾರರಾದ ಹೊಸ ಸದಸ್ಯರಿಗೆ ಧನ್ಯವಾದಗಳು.

ಡಾ.ಎ.ರಘುರಾಂ,

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ,

ಮಹಾರಾಣಿ ಮಹಿಳಾ ಕಲಾ, ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು,

ಶೇಷಾದ್ರಿ ರಸ್ತೆ, ಬೆಂಗಳೂರು –೫೬೦ ೦೦೧

ಪರಿವಿಡಿ

ಮದ್ರಾಸ್ ಪರಿಸರದ ಪ್ರಾಚೀನ ಕನ್ನಡ ಸಾಹಿತ್ಯ ಪ್ರಕಟಣಾ ಸಂಸ್ಥೆಗಳು

ಡಾ.ಡಿ.ಕೆ. ಚಿತ್ತಯ್ಯ ಪೂಜಾರ್

ಭಾರತಕ್ಕೆ ಮುದ್ರಣ ಯಂತ್ರ ಪ್ರವೇಶವಾಗುವ ಮುಂಚೆ ನಮ್ಮಲ್ಲಿದ್ದ ಪಾರಂಪರಿಕ ಬರಹದ ಸಾಧನ ಸಾಮಗ್ರಿಗಳು ಹಲವಾರು. ಮುದ್ರಣ ಯಂತ್ರ ಮತ್ತು ಕಾಗದದ ಬಳಕೆಯನ್ನು ಕಂಡುಕೊಂಡ ಮೇಲೆ ಕರ್ನಾಟಕದ ಇತಿಹಾಸದಲ್ಲಿ ಶೈಕ್ಷಣಿಕ, ರಾಜಕೀಯ, ಸಾಮಾಜಿಕ ಮತ್ತು ಸಾಹಿತ್ಯಕ ಕ್ಷೇತ್ರಗಳಲ್ಲಿ ಅಪಾರವಾದ ಬದಲಾವಣೆಗಳು ಕ್ಷಿಪ್ರಗತಿಯಲ್ಲಿ ಸಾಗಿದವು. ಮುದ್ರಣ ಸೌಲಭ್ಯವೂ ನಮ್ಮ ಪ್ರಾಚೀನ ಕನ್ನಡ ಗ್ರಂಥ ಸಂಪಾದನಾ ಕ್ಷೇತ್ರದಲ್ಲಿ ಕ್ರಾಂತಿಯ ಬಿರುಗಾಳಿಯನ್ನೇ ಎಬ್ಬಿಸಿತು. ಅದುವರೆಗೆ ಅಲಕ್ಷ್ಯಕ್ಕೆ ಒಳಗಾಗಿದ್ದ ಓಲೆಗರಿ, ಕಾಗದದ ಪತ್ರಗಳು, ಶಾಸನಗಳು, ಕಡತಗಳು ಮುಂತಾದವುಗಳು ಧೂಳಿನಿಂದ ಹೊರಬಂದು ತಮ್ಮ ಅಂತರ್ಯದಲ್ಲಿ ಅಡಗಿದ್ದ ಜ್ಞಾನ ಸುಧೆಯನ್ನು, ಸಾಹಿತ್ಯದ ರಸವಂತಿಕೆಯನ್ನು ಮೈವೆತ್ತು ಜನಸಮುದಾಯಗಳಿಗೆ ದಕ್ಕುವಂತಾಯಿತು. ಇದರಿಂದ ನಮ್ಮ ಪ್ರಾಚೀನ ಭಾಷೆ, ಸಾಹಿತ್ಯ, ಸಂಸ್ಕೃತಿ, ಆಡಳಿತ, ವೈದ್ಯಕೀಯ, ಆಚಾರ-ವಿಚಾರ, ನಂಬಿಕೆ, ಧರ್ಮ, ರಾಜಕೀಯವನ್ನು ಒಳಗೊಂಡ ಜನಜೀವನದ ಬದುಕಿನ ಸರ್ವಾಂಗ ಸಂಗತಿಗಳನ್ನು ಅರಿಯಲು ಸಾಧ್ಯವಾಯಿತು. ನಮ್ಮ ಪ್ರಾಚೀನರ ಬದುಕು, ವಿದ್ವತ್ತು ಮತ್ತು ಬುದ್ಧಿಮತ್ತೆಯ ಮೇಲೆ ಗೌರವ ಮೂಡುವಂತಾಯಿತು. ಅದುವರೆಗೆ 'ಹಿತ್ತಲ ಗಿಡ ಮದ್ದಲ್ಲ' ಎಂಬಂತೆ ಅವುಗಳ ಮಹತ್ವವನ್ನರಿಯದೆ ನಾವೇ ಅವುಗಳನ್ನು ಹಾಳು ಮಾಡುತ್ತಿದ್ದೆವು. ಪಾಶ್ಚಿಮಾತ್ಯ ವಿದ್ವಾಂಸರು, ಅಧಿಕಾರಿಗಳು, ಧರ್ಮಗುರುಗಳು, ಕ್ರೈಸ್ತ ಮಿಷನರಿಗಳು ಮಠಮಾನ್ಯಗಳು ನಾವು ಅದುವರೆಗೆ ಏನನ್ನು ಉಪೇಕ್ಷೆ ಮಾಡುತ್ತಿದ್ದೆವೋ ಅವುಗಳನ್ನು ಕುತೂಹಲದಿಂದ ನೋಡಿ, ಕಲೆಹಾಕಿ, ಬಹಳ ಅಮೂಲ್ಯವೆಂಬುದನ್ನು ತೋರಿಸಿಕೊಟ್ಟರು. ಅಷ್ಟೇ ಅಲ್ಲ ಜೊತೆ ಜೊತೆಯಲ್ಲಿಯೇ ದೇಸೀ ವಿದ್ವಾಂಸರನ್ನು ಕರೆದೊಯ್ದು ಆಸಕ್ತಿ ಹುಟ್ಟಿಸಿದರು. ನಮ್ಮ ಸಂಪದ್ಭರಿತ ಪ್ರಾಚೀನ, ಇತಿಹಾಸ, ಸಾಹಿತ್ಯ ಸಂಸ್ಕೃತಿಯ ಹಿರಿಮೆ ಗರಿಮೆಗಳನ್ನು ನಮಗೆ ಪರಿಚಯ ಮಾಡಿಕೊಟ್ಟರು. ಆ ಮೂಲಕ ಹೊಸದೊಂದು ಜ್ಞಾನಮಾರ್ಗ ತೋರಿದರು ಎಂದರೆ ತಪ್ಪಲ್ಲ.

ಇದಕ್ಕೆಲ್ಲ ಪ್ರಮುಖ ಕಾರಣ ೧೮೧೭ ರಲ್ಲಿ ಕರ್ನಾಟಕವನ್ನು ಪ್ರವೇಶಿಸಿದ

ಮುದ್ರಣಯಂತ್ರ " ಸಾಹಿತ್ಯಕವಾಗಿ ಆರಂಭದಲ್ಲಿ ಕ್ರೈಸ್ತ ಮಿಷನರಿಗಳು ತಮ್ಮ ಧರ್ಮಪ್ರಸಾರಕ್ಕಾಗಿ ಧಾರ್ಮಿಕ ಸಾಹಿತ್ಯವನ್ನು ಪುಸ್ತಕ, ಪತ್ರಿಕೆಗಳ ಮೂಲಕ ಪ್ರಚಾರಕ್ಕೆ ತಂದರೂ ಈ ಸೌಲಭ್ಯವನ್ನು ಅಷ್ಟಕ್ಕೆ ಸೀಮಿತಗೊಳಿಸದೆ, ಈ ನೆಲದ ಸಾಹಿತ್ಯ-ಸಂಸ್ಕೃತಿಯ ಪ್ರಕಾಶನಕ್ಕೂ ಬಳಸುವುದರ ಮೂಲಕ ಕ್ರೈಸ್ತ ಮಿಷನರಿಗಳು ಅಧಿಕಾರಿಗಳು ಕರ್ನಾಟಕದಲ್ಲಿ ಗ್ರಂಥ ಸಂಪಾದನಾ ಇತಿಹಾಸವನ್ನು ಆರಂಭಿಸಿದರು. ಮೊದಲಿಗೆ ಮೊಗ್ಲಿಂಗ್ ಎಂಬ ಅಧಿಕಾರಿ "ಬಿಬ್ಲಿಯಾಥಿಕಾ ಕರ್ನಾಟಿಕಾ" ಎಂಬ ಮಾಲಿಕೆಯನ್ನು ಆರಂಭಿಸಿ ಅದರಲ್ಲಿ ತಾನು ಪತ್ತೆಹಚ್ಚಿದ ಪ್ರಾಚೀನ ಹಸ್ತಪ್ರತಿಗಳಲ್ಲಿದ್ದ ಹಲವು ಕನ್ನಡ ಕೃತಿಗಳನ್ನು ಪ್ರಕಟಿಸುತ್ತಾ ಬಂದನು. ಆ ಮೂಲಕ ಹಲವಾರು ಪ್ರಾಚೀನ ಕನ್ನಡ ಕೃತಿಗಳು ಬೆಳಕಿಗೆ ಬಂದಂತಾಯಿತು. ಇದೇ ವೇಳೆಗೆ ಮಂಗಳೂರಿನ ಬಾಸೆಲ್ ಮಿಷನ್ ಮೂಲಕ ಜಾನ್ ಗ್ಯಾರೆಟ್, ಜಿ.ವರ್ತ, ಬಿ.ಎಲ್.ರೈಸ್, ಕಿಟೆಲ್ ಮುಂತಾದವರು ಹಲವಾರು ಪ್ರಾಚೀನ ಕನ್ನಡ ಕೃತಿಗಳನ್ನು ಹೊರತಂದರು. ಅದರಂತೆ ಕರ್ನಾಟಕದ ಬೆಂಗಳೂರು, ಮೈಸೂರು, ಧಾರವಾಡ, ಬಳ್ಳಾರಿ ಕರ್ನಾಟಕದ ಹೊರಗಿನ ಮದರಾಸು ಮುಂತಾದ ಕಡೆ ವಿದೇಶಿಯ ಮತ್ತು ದೇಶೀಯ ವಿದ್ವಾಂಸರಿಂದ ಪ್ರಾಚೀನ ಹಸ್ತಪ್ರತಿಗಳಲ್ಲಿದ್ದ ಕನ್ನಡ ಕೃತಿಗಳು ಪ್ರಕಟಗೊಂಡು ಹೊರಬರಲಾರಂಭಿಸಿದವು.

ಕನ್ನಡ ಕೃತಿಗಳು ಮೊದಲು ಮುದ್ರಣ ಕಂಡಿದ್ದು ಕರ್ನಾಟಕ ಪ್ರದೇಶಗಳಲ್ಲಿ ಅಲ್ಲ " ಕನ್ನಡ ಮುದ್ರಣದ ಮೊದಲ ಚಿಂತನೆಯು ಕರ್ನಾಟಕದಲ್ಲಿ ಆಗದೆ ಭಾರತದ ಇತರ ಪ್ರದೇಶಗಳಲ್ಲಿ ನಡೆದಿದ್ದು ವಿಚಿತ್ರ ಸನ್ನಿವೇಶವಾಗಿದೆ. ಭಾರತದಲ್ಲಿ ಮುದ್ರಣದ ಮಹತ್ವವನ್ನು ಮೊದಲು ಪರಿಚಯಿಸಿದವರು ಕೆಥಲಿಕ್ ಮಿಷನರಿಗಳು. ಅವರು ಮೊದಲಿಗೆ ಈ ಯಂತ್ರವನ್ನು ಗೋವೆಯಲ್ಲಿ ಸ್ಥಾಪಿಸಿ ೧೫೫೬ರಲ್ಲಿ ಭಾರತದಲ್ಲಿಯೇ ಮೊದಲಿಗರಾದರು. ಆದರೂ ೧೭, ೧೮ನೇ ಶತಮಾನದವರೆಗೆ ಕನ್ನಡದಲ್ಲಿ ಮುದ್ರಿಸಿದ ಉದಾಹರಣೆಗಳು ಸಿಗುತ್ತಿಲ್ಲ. ಹೊಸಕಾಲದ ಮೊಟ್ಟಮೊದಲ ಕನ್ನಡ ಪುಸ್ತಕ ಮುದ್ರಣಗೊಂಡಿದ್ದು ಕ್ರಿ ಶ ೧೮೧೭ ರಲ್ಲಿ ಬಂಗಾಳದ ಕೋಲ್ಕತ್ತಾ ಸಮೀಪದ ಶ್ರೀರಾಮ್ (ಸರಾಂ) ಪುರದಲ್ಲಿ ಮಿಷನರಿಯಾಗಿದ್ದ ವಿಲಿಯಂ ಕ್ಯಾರಿ ಬರೆದ 'ಎ ಗ್ರಾಮರ್ ಆಫ್ ದಿ ಕರ್ನಾಟಕ ಲಾಂಗ್ವೇಜ್' ಇದು ಕನ್ನಡ ಅಕ್ಷರಗಳನ್ನೊಳಗೊಂಡ ಮೊತ್ತಮೊದಲಿನ ಮುದ್ರಿತ ಪುಸ್ತಕ. ನಂತರ ೧೮೨೦ರಲ್ಲಿ ಮೆಕ್ಕೆರೆಲ್‌ನ A Grammer Of The Carnataca Language ಎಂಬ ಇನ್ನೊಂದು ಕನ್ನಡ ಪುಸ್ತಕವು ಮದರಾಸಿನ ಫೋರ್ಟ್ ಸೇಂಟ್ ಜಾರ್ಜ್ ಕಾಲೇಜು ಎಂಬ ಸರ್ಕಾರಿ ಮುದ್ರಣಾಲಯದಲ್ಲಿ ಮುದ್ರಣಗೊಂಡಿದೆ. ಮೊದಲ ಎರಡು ವ್ಯಾಕರಣ ಪುಸ್ತಕಗಳು ಇಂಗ್ಲಿಷ್ನಲ್ಲಿ ಬರೆಯಲ್ಪಟ್ಟಿದ್ದು ಅವುಗಳಲ್ಲಿಯ ಉದಾಹರಣೆಗಳಷ್ಟನ್ನೇ ಕನ್ನಡದಲ್ಲಿ

ಕೊಡಲಾಗಿದೆ."[೨] ಇದಕ್ಕೂ ಮುಂಚೆ ಕರ್ನಾಟಕದಲ್ಲಿ ಟಿಪ್ಪುವಿನ ಮರಣಾನಂತರ ಬುಕನಾನ್ ನೀಡಿದ ವರದಿಯ ಪುಸ್ತಕವೂ ಮರದ ಪಡಿಯಚ್ಚು ಬಳಸಿ ೧೮೦೭ ರಲ್ಲಿಯೇ ಪ್ರಕಟವಾಗಿರುವುದನ್ನು ಕಾಣಬಹುದು. ಇದರ ಆಸುಪಾಸಿನಲ್ಲಿಯೇ ಅಂದರೆ ಸುಮಾರು ಕ್ರಿ ಶ ೧೮೧೦ ರಲ್ಲಿ ಬಳ್ಳಾರಿಗೆ ಬಂದ ಜಾನ್ ಹ್ಯಾಂಡ್ಸ್ ಮುದ್ರಣ ಲೋಕದಲ್ಲಿ ಅದ್ಭುತ ಕೆಲಸಗಳನ್ನು ಮಾಡಿದ. ಇವನು ಕನ್ನಡ ವ್ಯಾಕರಣ, ಶಬ್ದಕೋಶ, ಬೈಬಲ್ಲಿನ ಅನುವಾದಗಳನ್ನು ಕನ್ನಡ ಹಾಗೂ ತೆಲುಗು ಭಾಷೆಗಳಲ್ಲಿ ಪ್ರಕಟಿಸುತ್ತಾನೆ. ಬಳ್ಳಾರಿಯಲ್ಲಿ ಮುದ್ರಣಯಂತ್ರ ಸ್ಥಾಪಿಸಲು ಇವನು ಪಟ್ಟ ಶ್ರಮ ಅಷ್ಟಿಷ್ಟಲ್ಲ. ಮದ್ರಾಸು ಹಾಗೂ ಕಲ್ಕತ್ತೆಯ ಬೈಬಲ್ ಸೊಸೈಟಿ ಹಾಗೂ ಲಂಡನಿನ ಈಸ್ಟ್ ಇಂಡಿಯಾ ಕಂಪನಿಯ ಕೇಂದ್ರ ಕಚೇರಿಗಳ ಮಧ್ಯೆ ಸಂಪರ್ಕ ಸಾಧಿಸುವ ಮೂಲಕ ಬಳ್ಳಾರಿಯಲ್ಲಿ ಮುದ್ರಣ ಯಂತ್ರ ಸ್ಥಾಪಿಸಿ ಕನ್ನಡ-ತೆಲುಗು ಗ್ರಂಥಗಳ ಪ್ರಕಟಣೆಗೆ ಅವಕಾಶ ಮಾಡಿಕೊಟ್ಟರು ಆ ಕಾರಣದಿಂದ ಅವರನ್ನು "ಕನ್ನಡದ ಮುದ್ರಣದ ಪಿತಾಮಹ" ಎಂದು ಕರೆಯುತ್ತಾರೆ. ಇದರ ವಿಸ್ತೃತ ವಿವರಣೆಗಳನ್ನು 'ಉತ್ತರ ಕರ್ನಾಟಕ ಪರಿಸರದ ಪ್ರಾಚೀನ ಕನ್ನಡ ಸಾಹಿತ್ಯ ಪ್ರಕಟಣೆ ಸಂಸ್ಥೆಗಳು' ಎನ್ನುವ ಪ್ರತ್ಯೇಕ ಪ್ರಬಂಧದಲ್ಲಿ ನೋಡಬಹುದು.

ಮದ್ರಾಸ್ ನಗರದಲ್ಲಿನ ಪ್ರಾಚೀನ ಕನ್ನಡ ಸಾಹಿತ್ಯ ಪ್ರಕಟಣಾ ಸಂಸ್ಥೆಗಳು

ಸ್ವತಂತ್ರ ಪೂರ್ವದಲ್ಲಿ ಭಾರತವನ್ನು ಪ್ರವೇಶಿಸಿದ ಅನೇಕ ವಸಾಹತುಶಾಹಿಗಳು ತಮ್ಮ ತಮ್ಮ ಮಿತಿಯಲ್ಲಿ ಭಾರತದಲ್ಲಿ ಅನೇಕ ಬದಲಾವಣೆಗಳಿಗೆ ಕಾರಣವಾಗಿವೆ. ಭಾರತವನ್ನು ಆಡಳಿತಾತ್ಮಕವಾಗಿ ತನ್ನ ವಶಪಡಿಸಿಕೊಳ್ಳಬೇಕೆಂಬ ಮಹದುದ್ದೇಶವನ್ನು ಹೊರತುಪಡಿಸಿದರೆ ಭಾರತದ ಬೆಳವಣಿಗೆಗೆ ಶೈಕ್ಷಣಿಕವಾಗಿ, ಆಡಳಿತಾತ್ಮಕವಾಗಿ, ಸಾಮಾಜಿಕವಾಗಿ ಬಹಳಷ್ಟು ಕೊಡುಗೆ ನೀಡಿರುವುದನ್ನು ಮರೆಯುವಂತಿಲ್ಲ. ಅದರಲ್ಲಿ ಧರ್ಮಪ್ರಚಾರವನ್ನು ಮುಖ್ಯವಾದ ಉದ್ದೇಶವಾಗಿ ಇಟ್ಟುಕೊಂಡು ಬಂದ ಕ್ರೈಸ್ತ ಮಿಷನರಿಗಳು ನಮ್ಮ ಸಾಹಿತ್ಯ, ಸಂಸ್ಕೃತಿ, ಶಿಕ್ಷಣ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಅದರ ಭಾಗವಾಗಿ ಶಾಸನ, ಸಾಹಿತ್ಯ, ಹಸ್ತಪ್ರತಿ ಪ್ರಕಟನೆಗೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ಈ ಕ್ಷೇತ್ರದಲ್ಲಾದ ಕ್ಷಿಪ್ರ ಕ್ರಾಂತಿಗೆ ಮುಖ್ಯ ಕಾರಣ 'ಮುದ್ರಣ ಯಂತ್ರ' ಇದರ ಉಪಯೋಗದಿಂದ ನಮ್ಮ ಪ್ರಾಚೀನ ಓಲೆಗರಿ, ತಾಳೆಗರಿ, ಕಾಗದ, ಶಿಲಾಲೇಖ, ಕಡತ ಮುಂತಾದವುಗಳಲ್ಲಿದ್ದ ಸಾಹಿತ್ಯ ಪ್ರಕಟವಾಗಲು ಸಾಧ್ಯವಾಯಿತು. ಈ ಮೂಲಕ ನಮ್ಮ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ಆಡಳಿತ, ರಾಜಕೀಯ, ದೇಸಿ ಚಿಂತನೆಗಳು, ಜ್ಞಾನಪರಂಪರೆಗಳು ಇನ್ನು ಹತ್ತು ಹಲವು ವೈವಿಧ್ಯಗಳು ಬೆಳಕಿಗೆ ಬಂದು ಜನರಿಗೆ

ತಲುಪುವಂತಾಯಿತು. ಅದಕ್ಕೆ ಕಾರಣವಾದ ಮದ್ರಾಸು ಪರಿಸರದ ಕೆಲವು ಪ್ರಾಚೀನ ಮುದ್ರಣ ಸಂಸ್ಥೆಗಳನ್ನು ಈ ಕೆಳಗಿನಂತೆ ನೋಡಬಹುದು. ಅದರಲ್ಲಿ ಕನ್ನಡ ಭಾಷೆ ಮತ್ತು ಪ್ರಾಚೀನ ಕೃತಿಗಳನ್ನು ಪ್ರಕಟಿಸಿದ ಸಂಸ್ಥೆಗಳೆಂದರೆ ೧.ಫೋರ್ಟ್ ಸೇಂಟ್ ಜಾರ್ಜ್ ಕಾಲೇಜಿನ ಮುದ್ರಣಾಲಯ, ೨.ಮದ್ರಾಸಿನ ಗೌರ್ನಮೆಂಟ್ (ಗೆಜೆಟ್) ಪ್ರೆಸ್ ಮತ್ತು ಮಿಲಿಟರಿ ಮೇಲ್ ಆರ್ಫನ್ಸ್ ಆಸ್ವೆಲಮ್ ಪ್ರೆಸ್, ೩.ಪೀಪಲ್ ಪ್ರಿಂಟಿಂಗ್ ಹೌಸ್, ೪.ಓರಿಯೆಂಟಲ್ ಮ್ಯಾನ್‌ಸ್ಕ್ರಿಪ್ಟ್ ಇನ್ಸಿಟ್ಯೂಟ್ ಅಥವಾ ಮದರಾಸಿನ ಗೌರ್ಮೆಂಟ್ ಓರಿಯೆಂಟಲ್ ಮ್ಯಾನ್‌ಸ್ಕ್ರಿಪ್ಟ್ ಲೈಬ್ರೆರಿ, ೫.ಮದರಾಸು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗ.

೧.ಫೋರ್ಟ್ ಸೇಂಟ್ ಜಾರ್ಜ್ ಕಾಲೇಜಿನ ಮುದ್ರಣಾಲಯ :-

ಮದರಾಸು ಪರಿಸರದಲ್ಲಿದ್ದ ಈ ಮುದ್ರಣಾಲಯವು ಸರ್ಕಾರಿ ಸಂಸ್ಥೆಯಾಗಿದ್ದು. ಸರ್ಕಾರದ ಅಧೀನದ ಕಾಲೇಜಿನ ಭಾಗವಾಗಿರುತ್ತದೆ. ೧೮೦೪ರಲ್ಲಿ ಮುದ್ರಣಾಲಯ ಸ್ಥಾಪನೆಯಾದಾಗ ಪ್ರಾರಂಭದಲ್ಲಿ ತಮಿಳು ಮತ್ತು ತೆಲುಗು ಭಾಷೆಗಳ ಪುಸ್ತಕಗಳು ಮಾತ್ರ ಮುದ್ರಿತವಾಗುತ್ತಿದ್ದವು. ತದನಂತರ ಇದೇ ಯಂತ್ರಕ್ಕೆ ಕನ್ನಡದ ಮೊಳೆಗಳನ್ನು ಅಣಿಗೊಳಿಸಲಾಯಿತು. ಆಗ ೧೮೧೭ ರಿಂದ ೧೮೨೦ ರವರೆಗೆ ಮದರಾಸು ಸರ್ಕಾರದ ವಿದ್ಯಾ ಇಲಾಖೆಯಲ್ಲಿ ಸೇವೆಸಲ್ಲಿಸುತ್ತಿದ್ದ ಮೆಕೆರಲ್ ಸಂಸ್ಕೃತ,ಪರ್ಷಿಯನ್, ತಮಿಳು, ಕನ್ನಡ ಭಾಷೆಗಳಲ್ಲಿ ನಿಸ್ಸೀಮ ಪಂಡಿತನಾಗಿದ್ದನು. ೧೮೧೬ರಲ್ಲಿ ಇವನು ಇಂಗ್ಲಿಷ್‌ನಲ್ಲಿ ವಿವರಣೆಯೊಂದಿಗೆ ಕನ್ನಡ ವ್ಯಾಕರಣವನ್ನು ಬರೆದನು. ೨೧೧ ಪುಟಗಳ ಈ ಕೃತಿ ಸುಂದರವಾಗಿ ೧೮೨೦ರಲ್ಲಿ ಪ್ರಕಟವಾಯಿತು. 'ಮೆಕ್ಕೆರಲ್' ಬರೆದ ಈ 'ವ್ಯಾಕರಣ ಗ್ರಂಥ' ಎ ಗ್ರಾಮರ್ ಆಫ್ ದಿ ಕರ್ನಾಟಿಕಾ ಲಾಂಗ್ವೇಜ್ ಎನ್ನುವ ಹೆಸರಿನಲ್ಲಿ (೧೮೨೦) ಮುದ್ರಿತವಾದದ್ದು ಇಲ್ಲಿಯೇ. ಅಂದಿನ ಮಿಷನರಿಗಳ ಹಾಗೂ ಅಧಿಕಾರಿಗಳ ಉಪಯೋಗಕ್ಕಾಗಿ 'ಮೆಕ್ಕೆರೆಲ್' ಬರೆದ ಈ ಪುಸ್ತಕ ಇಂಗ್ಲಿಷ್ ಮಾಧ್ಯಮದ ಕನ್ನಡ ವ್ಯಾಕರಣವಾಗಿದ್ದಿತು. ಈ ವ್ಯಾಕರಣ ಗ್ರಂಥವು ಕೇಶಿರಾಜನ ಶಬ್ದಮಣಿದರ್ಪಣ, ನಾಗವರ್ಮನ ಶಬ್ದಾನುಶಾಸನ ಗ್ರಂಥಕ್ಕೆ ಋಣಿ ಎಂದು ಹೇಳಿಕೊಂಡಿದ್ದಾರೆ. ಇದು ಕನ್ನಡ ವ್ಯಾಕರಣದ ಎಲ್ಲಾ ಅಂಗಗಳನ್ನು ಒಳಗೊಂಡಿದ್ದರೂ ನಿರೂಪಣೆ ವ್ಯವಸ್ಥಿತವಾಗಿರಲಿಲ್ಲ. ಮುಂದೆ ಹಡ್ಸನ್ ಇದನ್ನು ಪರಿಷ್ಕರಿಸಿ "ಎಲಿಮೆಂಟರಿ ಗ್ರಾಮರ್ ಆಫ್ ದಿ ಕನ್ನಡ ಲಾಗ್ವೇಜ್" ಎನ್ನುವ ಹೆಸರಿನಲ್ಲಿ ಇದೇ ಸಂಸ್ಥೆಯಿಂದ ಪ್ರಕಟಿಸುತ್ತಾನೆ. ಇದರಿಂದ ವಿದೇಶಿಯರ ಕನ್ನಡ ಅಭ್ಯಾಸವು ಹೆಚ್ಚು ಸುಖಕರವಾಗುತ್ತದೆ.

ತದನಂತರ ಸರ್ಕಾರದ ಆದೇಶದ ಮೇರೆಗೆ 'ವಿಲಿಯಂ ರೀವ್' (ಹ್ಯಾಂಡ್ಸನ ಜೊತೆಗಾರ) ಇವನು ೧೮೨೭ ರಲ್ಲಿ ಇದೇ ಕಾಲೇಜಿನ ಕಛೇರಿಯಲ್ಲಿ ಹಾಗೂ ಭಾಷಾ ಶಾಲೆಯಲ್ಲಿ ಭಾಷಾ ಪಂಡಿತನಾಗಿ ಸೇವೆಸಲ್ಲಿಸುತ್ತಿದ್ದನು. ಅಲ್ಲದೇ ಕನ್ನಡ, ತಮಿಳು, ಒರಿಯಾ, ಸಂಸ್ಕೃತ ಭಾಷೆಗಳಲ್ಲಿ ಪರಿಣಿತನಾಗಿದ್ದನು. ಇವನು ಸಿದ್ಧಪಡಿಸಿದ 'ಕನ್ನಡ–ಇಂಗ್ಲಿಷ್' ಮತ್ತು 'ಇಂಗ್ಲೀಷ್–ಕನ್ನಡ' ಶಬ್ದಕೋಶಗಳು ಸುಮಾರು ೮೫೦ ಪುಟ ೨೫೦೦೦ ಶಬ್ದಗಳನ್ನು ಒಳಗೊಂಡಿರುತ್ತದೆ. ಈ ಶಬ್ದಕೋಶಗಳು ಇದೇ ಮುದ್ರಣಾಲಯದಿಂದ ಪ್ರಥಮ ಮುದ್ರಣ ೧೮೨೪ ಮತ್ತು ಪರಿಷ್ಕೃತ ಎರಡನೇ ಮುದ್ರಣವಾಗಿ ೧೮೩೨ರಲ್ಲಿ ಪ್ರಕಟವಾದವು. ಸುಮಾರು ಮೂರು ಸಾವಿರ ಪುಟಗಳ ಈ ಶಬ್ದಕೋಶಕ್ಕೆ ಕನ್ನಡದ ಮೊಳೆಗಳನ್ನು ಜೋಡಿಸಿದ್ದೆ ಒಂದು ದೊಡ್ಡ ಸಾಹಸ. ಈ ಮೂಲಕ ಕ್ರೈಸ್ತ ಮತ ಪ್ರಚಾರಕ್ಕೆ ಹಾಗೂ ಬೈಬಲ್ ಅನುವಾದಕ್ಕೆ ವಿದೇಶಿಯರಿಗೆ ತೀರಾ ಅಗತ್ಯವಾಗಿದ್ದ ವ್ಯಾಕರಣದ ಕೊರತೆಯನ್ನು ನೀಗಿದನು. ಇಂಗ್ಲಿಷ್ ಕೋಶದಿಂದ ಅವಶ್ಯಕ ಪದಗಳನ್ನು ಬರೆದುಕೊಂಡು ಅದಕ್ಕೆ ಸಮಾನವಾದ ಕನ್ನಡ ಪದಗಳನ್ನು ಕೊಟ್ಟಿರುವುದು ಇದರ ವಿಶೇಷ. ಬ್ರಿಟೀಷ್ ಆಡಳಿತಗಾರರಿಗೆ ಇದರ ಅವಶ್ಯಕತೆ ವಿಶೇಷವಾಗಿರುವುದನ್ನು ಮನಗಂಡು ಮದ್ರಾಸಿನ ಗವರ್ನರ್ ಮನ್ರೋ ಕಂಪನಿ ಸರ್ಕಾರವೇ ಇದನ್ನು ಮುದ್ರಿಸಲು ಈ ಸಂಸ್ಥೆಗೆ ಆದೇಶಿಸುತ್ತದೆ. ಮತ್ತೊಮ್ಮೆ ೧೮೩೫ರಲ್ಲಿ ಈ ವ್ಯಾಕರಣ ಗ್ರಂಥ ಪರಿಷ್ಕಾರಗೊಂಡು ಪ್ರಕಟಗೊಳ್ಳುತ್ತದೆ. ಇದಕ್ಕಾಗಿ ಏಳು ಮಂದಿ ದೇಶೀಯ ವಿದ್ವಾಂಸರನ್ನು ತನ್ನ ಸಹಾಯಕ್ಕಾಗಿ 'ರೀವ್' ನೇಮಿಸಿಕೊಳ್ಳುತ್ತಾನೆ. ರೀವ್ ಈ ಗ್ರಂಥ ರಚನೆಗಾಗಿ ಹಳಗನ್ನಡ ಕೋಶಗಳಾದ 'ಕರ್ನಾಟಕ ಶಬ್ದಮಂಜರಿ, ಚತುರಾಸ್ಯ ನಿಘಂಟು, ಕಬ್ಬಿಗರ ಕೈಪಿಡಿ ಹಾಗೂ ಕೆಲವು ಹಸ್ತಪ್ರತಿಗಳನ್ನೂ ಪರಿಶೀಲಿಸಿದಂತೆ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾನೆ. ರೀವ್‌ನ ಈ ಶಬ್ದಕೋಶಗಳು ಮುಂದೆ ಸಾಂಡರ್ಸನ್ ಹಾಗೂ ಕಿಟೆಲ್ ಅವರಿಗೆ ಶಬ್ಧಕೋಶಗಳನ್ನು ರಚನೆ ಮಾಡಲು ದಾರಿದೀಪವಾದವು.

೨.ಮದ್ರಾಸಿನ ಗೌರ್ನಮೆಂಟ್ (ಗೆಜೆಟ್) ಪ್ರೆಸ್ ಮತ್ತು ಮಿಲಿಟರಿ ಮೇಲ್ ಆರ್ಫನ್ಸ್ ಆಸ್ವೆಲಮ್ ಪ್ರೆಸ್ :–

ಫೋರ್ಟ್ ಸೇಂಟ್ ಜಾರ್ಜ್ ಕಾಲೇಜಿನ ಮುದ್ರಣಾಲಯ ಸ್ಥಾಪನೆಯಾದ ತುಸು ಕಾಲದ ನಂತರ ಮದ್ರಾಸಿನಲ್ಲಿಯೇ ಈ ಮುದ್ರಣಾಲಯಗಳು ಸ್ಥಾಪನೆಯಾಗುತ್ತವೆ. ಆದರೂ ಈ ಮುದ್ರಣಾಲಯಗಳಲ್ಲಿ ಹೇಳಿಕೊಳ್ಳುವಷ್ಟು ಕನ್ನಡದ ಕೆಲಸ ಆಗಿಲ್ಲವೆಂದೇ ಹೇಳಬೇಕು. ಕಡಿಮೆ ಆದರೂ ಅದರಲ್ಲಿ ಪ್ರಮುಖವಾಗಿ ಐತಿಹಾಸಿಕ ಮಹತ್ವವುಳ್ಳ

ಎಸ್. ಕೃಷ್ಣಮಾಚಾರಿ ಬರೆದಿರುವ 'ಹೊಸಗನ್ನಡ ವ್ಯಾಕರಣ' ಮಹತ್ವದ್ದು. ಒಂದು ವೇಳೆ ಮುದ್ರಣದ ಅನುಕೂಲತೆ ಇಲ್ಲದಿದ್ದರೆ ಈತ ಈ ವ್ಯಾಕರಣವನ್ನು ಬರೆಯುವ ಯೋಚನೆ ಮಾಡುತ್ತಿರಲಿಲ್ಲವೇನೋ ಎನ್ನಬಹುದು. ಕನ್ನಡ ಪುಸ್ತಕಗಳು ಇಲ್ಲಿ ಮುದ್ರಣವಾದವು ಎನ್ನುವ ಮಾತು ಇದೆಯಾದರೂ ಅವುಗಳ ನಿರ್ದಿಷ್ಟ ಮಾಹಿತಿ ಲಭ್ಯವಿಲ್ಲದಿರುವುದು ಬೇಸರದ ಸಂಗತಿ. ರೀವ್ ಸಂಕಲಿಸಿದ ಕನ್ನಡ್ಷ ಇಂಗ್ಲಿಷ್ ಬೃಹತ್ ನಿಘಂಟು ಸುಮಾರು ೧೧೩೦ ಪುಟಗಳ ಕೃತಿ ಇಲ್ಲಿಯೇ ಪ್ರಕಟಣೆಯಾದಂತೆ ತಿಳಿಯುತ್ತದೆ.

೩.ಪೀಪಲ್ ಪ್ರಿಂಟಿಂಗ್ ಹೌಸ್ :-

ಇದು ೧೮೫೮ ಕ್ಕಿಂತ ಮುಂಚಿತವಾಗಿಯೇ ಮದರಾಸಿನಲ್ಲಿ ಪ್ರಾರಂಭವಾದ ಒಂದು ಪ್ರಕಟಣಾ ಸಂಸ್ಥೆ. ಈ ಸಂಸ್ಥೆಯಲ್ಲಿಯೂ ಅರೇಬಿಕ್, ತಮಿಳು, ಒರಿಯಾ, ಸಂಸ್ಕೃತ ಮುಂತಾದ ಭಾಷಿಕ ಹಸ್ತಪ್ರತಿಗಳು ಸಂರಕ್ಷಿತಗೊಂಡಿದ್ದವು. ಹಲವಾರು ಪ್ರಕಟಣೆಯನ್ನು ಮಾಡಿದ್ದರೂ ಈ ಸಂಸ್ಥೆಯವರು ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಒಂದಾದ ಕನ್ನಡ ರತ್ನತ್ರಯರಲ್ಲಿ ಒಬ್ಬರಾದ 'ಪೊನ್ನ' ಕವಿಯ 'ಶಾಂತಿನಾಥ ಪುರಾಣ' ವನ್ನು ಪ್ರಕಟಿಸಿದ್ದಾರೆ. ತದನಂತರ ಮತ್ತೆ ಯಾವುದೇ ಕಾವ್ಯವನ್ನು ಪ್ರಕಟಿಸಿದಂತೆ ಕಂಡುಬರುವುದಿಲ್ಲ ಎಂಬುದು ಪ್ರಶ್ನಾರ್ಥಕವಾಗಿಯೇ ಉಳಿದಿದೆ. ಇನ್ನಷ್ಟು ಆಳವಾದ ಶೋಧದಲ್ಲಿ ತೊಡಗಿದರೆ ಹೆಚ್ಚಿನ ಮಾಹಿತಿಗಳು ಲಭ್ಯವಾಗಬಹುದು.

೪.ಓರಿಯೆಂಟಲ್ ಮ್ಯಾನ್‌ಸ್ಕ್ರಿಪ್ಟ್ ಇನ್ಸಿಟ್ಯೂಟ್ ಅಥವಾ ಮದರಾಸಿನ ಗೌರ್ಮೆಂಟ್ ಓರಿಯೆಂಟಲ್ ಮ್ಯಾನ್‌ಸ್ಕ್ರೀಪ್ಟ್ ಲೈಬ್ರರಿ :

ಈ ಸಂಸ್ಥೆಯನ್ನು ೧೮೫೮ ರಲ್ಲಿ ಮದರಾಸಿನಲಿದ್ದ ಬ್ರಿಟಿಷ್ ಸರ್ಕಾರ ಸ್ಥಾಪಿಸುತ್ತದೆ. ಕನ್ನಡ ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ ಮತ್ತು ಹಸ್ತಪ್ರತಿ ಸೂಚಿಗಳ ಪ್ರಕಟಣೆಯಲ್ಲಿ ಮದ್ರಾಸಿನ ಈ ಸಂಸ್ಥೆಯೇ 'ಪ್ರಥಮ' ದಾಖಲೆಯಾಗುತ್ತದೆ. ಇದಕ್ಕೆ ಕಾರಣವೆಂದರೆ ಇಂಗ್ಲಿಷ್ ಭಾಷೆಯ ಜೊತೆಗೆ ಕನ್ನಡವನ್ನು ಅಭ್ಯಸಿಸಿಕೊಂಡು ಬಂದ ಆ ಕಾಲದ ವಿದ್ಯಾವಂತರಿಗೆ ಕನ್ನಡ ಭಾಷೆ ಮತ್ತು ಸಾಹಿತ್ಯದ ಸೊಗಡು ಇಂಗ್ಲಿಷ್ ಭಾಷೆಗಿಂತ ಕಡಿಮೆ ಏನೂ ಇಲ್ಲ ಎಂಬ ವಿಶ್ವಾಸ, ನಂಬಿಕೆ, ಅಭಿಮಾನವೇ ಆಗಿದೆ. ಅದಲ್ಲದೆ ಆ ಕಾಲಕ್ಕೆ ವಿವಿಧ ಕಡೆಗಳಲ್ಲಿ ಪ್ರಾಚೀನ ಕನ್ನಡ ಸಾಹಿತ್ಯ ವಿಪುಲವಾಗಿ ಪ್ರಕಟವಾಗುತ್ತಿತ್ತು ಮತ್ತು ತರಗತಿಗಳಲ್ಲಿ ಪ್ರಾಚೀನ ಕನ್ನಡ ಕೃತಿಗಳನ್ನು ಪಠ್ಯವಾಗಿ ಬೋಧಿಸಲಾಗುತ್ತಿತ್ತು. ಈ ಎಲ್ಲಾ ಕಾಳಜಿ, ಪ್ರೀತಿ, ಅಭಿಮಾನಗಳಿಂದ ಪ್ರಾಚೀನ

ಕೃತಿಗಳು ಶಾಸ್ತ್ರಬದ್ಧವಾದ ರೀತಿಯಲ್ಲಿ ಸಮರ್ಪಕವಾಗಿ, ದೋಷವಿಲ್ಲದಂತೆ ಪ್ರಕಟವಾಗಿ ಓದುಗರಿಗೆ ತಲುಪಬೇಕು ಎಂಬ ಆಸೆ ಮುದ್ರಕರಲ್ಲಿ ಹೆಚ್ಚಾಯಿತು. ಓದುಗರ, ವಿದ್ವಾಂಸರ ಈ ಮನಸ್ಥಿತಿಗೆ ಗ್ರಂಥಸಂಪಾದನೆ ಕ್ಷೇತ್ರದಲ್ಲಿ ಹೊಸತನ ಮೂಡಲು ಕಾರಣವಾಯಿತು. ಹಾಗಾಗಿಯೇ ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ, ಸಂಪಾದನೆಗೆಂದೇ 'ಮೈಸೂರಿನಲ್ಲಿ ಓರಿಯಂಟಲ್ ರಿಸರ್ಚ್ ಇನ್ಸ್ಟಿಟ್ಯೂಟ್', ಮದ್ರಾಸಿನಲ್ಲಿ 'ಓರಿಯೆಂಟಲ್ ಮ್ಯಾನ್‌ಸ್ಕ್ರಿಪ್ಟ್ ಇನ್ಸ್ಟಿಟ್ಯೂಟ್' ಮತ್ತು ಧಾರವಾಡದಲ್ಲಿ 'ಕನ್ನಡ ಸಂಶೋಧನಾ ಸಂಸ್ಥೆಗಳು' ಹುಟ್ಟಿಕೊಂಡವು. ಈ ವಿಭಾಗದಲ್ಲಿ ಅಧಿಕಾರಿಗಳಾಗಿ ನೇಮಕಗೊಂಡ ವಿದ್ವಾಂಸರು ತಮ್ಮಲ್ಲಿದ್ದ ಅಪರೂಪದ ಅಪ್ರಕಟಿತ ಹಸ್ತಪ್ರತಿಗಳನ್ನು ಪರಿಷ್ಕರಿಸಿ ಶಾಸ್ತ್ರೀಯ ರೀತಿಯಲ್ಲಿ ಸಂಪಾದಿಸಿ ಪ್ರಕಟಿಸಿದರು. ಜೊತೆ ಜೊತೆಗೆ ಇತರೇ ವಿದ್ವಾಂಸರನ್ನೂ ಈ ಕಾರ್ಯದಲ್ಲಿ ತೊಡಗುವಂತೆ ಪ್ರೇರೇಪಿಸಿದರು. ಅದರ ಭಾಗವಾಗಿ ರೂಪುತಳೆದಿದ್ದೇ ಮದರಾಸಿನ ಈ 'ಓರಿಯೆಂಟಲ್ ಮ್ಯಾನ್‌ಸ್ಕ್ರಿಪ್ಟ್ ಇನ್ಸ್ಟಿಟ್ಯೂಟ್' ಎಂದು ಹೇಳಬಹುದು.

ಸ್ವಾತಂತ್ರ್ಯ ಪೂರ್ವದಲ್ಲೇ ಕರ್ನಾಟಕದ ಹೊರಗೆ ಮದ್ರಾಸಿನಲ್ಲಿ ಪ್ರಾರಂಭವಾದ ಈ ಪ್ರಕಟಣಾ ಸಂಸ್ಥೆ "ಪ್ರಾಚೀನ ಕನ್ನಡ ಕಾವ್ಯ ಪ್ರಕಟಣೆಯಲ್ಲಿ ಒಂದು ಮೈಲುಗಲ್ಲನ್ನೇ ಸ್ಥಾಪಿಸಿತು ಎಂದೇ ಹೇಳಬೇಕು". ಇದು ಕನ್ನಡ ಹಸ್ತಪ್ರತಿಗಳ ಸಂಪಾದನೆ, ಪ್ರಕಟಣೆಯ ಇತಿಹಾಸದಲ್ಲಿ ಪ್ರಥಮ ಅಧ್ಯಾಯವನ್ನು ಪ್ರಾರಂಭಿಸಿತು. ಇದರ ಮತ್ತೊಂದು ಮುಖ್ಯ ಉದ್ದೇಶವೆಂದರೆ 'ಮೆಕೆಂಜಿ' ಸಂಗ್ರಹದ ಹಸ್ತಪ್ರತಿಗಳ ಸಂರಕ್ಷಣೆಯಾಗಿದ್ದಿತು. ಕರ್ನಲ್ ಮೆಕೆಂಜಿಯ ಸಂಗ್ರಹದಲ್ಲಿ ಎಂತೆಂತಹ ಅಮೂಲ್ಯ ಹಸ್ತಪ್ರತಿಗಳಿದ್ದುವು, ಸಾಂಸ್ಕೃತಿಕ ಮೌಲ್ಯವುಳ್ಳ ಪ್ರಾಚ್ಯವಸ್ತುಗಳಿದ್ದುವು ಎಂಬುದನ್ನು ಕುರಿತು ನಾಲ್ಕಾರು ಬೃಹತ್ ಗ್ರಂಥಗಳನ್ನೇ ಬರೆಯಬಹುದು. ದಕ್ಷಿಣ ಭಾರತದ ಶಾಸನಗಳ ನಕಲುಗಳ ಸಂಖ್ಯೆ ೮೦೭೬; ಬರ್ಮೀ ಮತ್ತು ಜಾವನೀಸ್ ಭಾಷೆಗಳೂ ಸೇರಿ ೧೩ ಭಾಷೆಗಳ ೧೫೬೮ ಹಸ್ತಪ್ರತಿಗಳು; 'Local Tracts' ಎಂಬ ಸ್ಥಳ ಪುರಾಣ, ಕೈಫಿಯತ್, ಬಖೈರು, ರಾಜರ ವಂಶಾವಳಿ ಮುಂತಾದವುಗಳನ್ನು ಒಳಗೊಂಡ ೨೬೪ ಬೃಹತ್ ಸಂಪುಟಗಳು (ಒಟ್ಟು ೨೦೭೦ ವೃತ್ತಾಂತಗಳು); ಅವುಗಳ ಅನುವಾದಗಳನ್ನೊಳಗೊಂಡ ೭೫ ಸಂಪುಟಗಳು; ನಕ್ಷೆಗಳು (Plans)೭೫; ಚಿತ್ರಗಳು(Drawings) ೨೬೩೦; ಬೇರೆ ಬೇರೆ ಕಾಲದ, ದೇಶೀಯ ಮತ್ತು ವಿದೇಶೀಯ, ಚಿನ್ನದ ಬೆಳ್ಳಿಯ ತಾಮ್ರದ ನಾಣ್ಯಗಳು ೬೨೧೮; ಬೆಳ್ಳಿ, ಕಂಚು, ಹಿತ್ತಾಳೆ, ತಾಮ್ರದ ೧೦೬ ಮೂರ್ತಿಗಳು, ಅನೇಕ ಶಿಲಾಮೂರ್ತಿಗಳು, ಅಮರಾವತಿಯಲ್ಲಿದ್ದ ಒಂದು ಹಳಗನ್ನಡ ಶಿಲಾಶಾಸನ, ತಾಮ್ರ ಶಾಸನಗಳು, ಹಳೆಯ ಕಾಲದ ತೂಕದ ಬಟ್ಟುಗಳು, ಮಣಿ, ಉಂಗುರ, ಉಂಡಿಗೆ ಮುಂತಾದುವು. ಇವೆಲ್ಲವೂ

ಬಹಳ ಅಪರೂಪದ ಬೆಲೆಬಾಳುವ ಸಾಹಿತ್ಯ, ಸಂಸ್ಕೃತಿಗೆ ಕಾರಣವಾಗುವಂತಹವುಗಳೇ ಆಗಿದ್ದವು.

ಏಷಿಯಾ ಮತ್ತು ಯೂರೋಪುಗಳಲ್ಲಿ ಭಾರತೀಯ ಪ್ರಾಚ್ಯ ವಸ್ತು ಸಂಗ್ರಹಕಾರರು ಅನೇಕರು ಇದ್ದರು. ಆದರೆ ಅವರಾರೂ ಇಷ್ಟು ಬೆಲೆಬಾಳುವ ಅತ್ಯುಪಯುಕ್ತ ವಸ್ತುಗಳನ್ನು ಸಂಗ್ರಹಿಸಲಿಲ್ಲ. ಈ ಸಂಗ್ರಹದ ಇನ್ನೊಂದು ಹೆಚ್ಚುಗಾರಿಕೆಯೇನೆಂದರೆ ಕರ್ನಲ್ ಮೆಕೆಂಜಿಯೇ ಕೃಷ್ಣಾನದಿಯಿಂದ ಕನ್ಯಾಕುಮಾರಿಯವರೆಗೆ ಮೋಜಣಿ ಕಾರ್ಯನಿಮಿತ್ತವಾಗಿ ಸಂಚಾರ ಮಾಡುತ್ತಿದ್ದಾಗ ಪ್ರತಿಯೊಂದು ಸುಪ್ರಸಿದ್ಧ ಕ್ಷೇತ್ರಕ್ಕೂ ಪ್ರಾಚೀನ ವಿದ್ಯಾ ಕೇಂದ್ರಕ್ಕೂ ತಾನೇ ಹೋಗಿ ಈ ವಸ್ತುಗಳನ್ನೂ ಹಸ್ತಪ್ರತಿಗಳನ್ನೂ ಸಂಚಯಿಸಿದ. ಈತನು ಮನಸ್ಸು ಮಾಡದೆ ಇದ್ದಿದ್ದರೆ ಆ ವಸ್ತುಗಳೆಲ್ಲ ನಾಶವಾಗಿ ಹೋಗುತ್ತಿದ್ದುವೋ ಏನೋ. ಕರ್ನಲ್ ಮೆಕೆಂಜಿಯ ಮರಣದ ತರುವಾಯ ಈಸ್ಟ್ ಇಂಡಿಯಾ ಕಂಪೆನಿಯವರು ಆತನ ಸಂಗ್ರಹವನ್ನು ೧೦ ಸಾವಿರ ಪೌಂಡುಗಳಿಗೆ ಕೊಂಡುಕೊಂಡರು. ೧೮೨೩ ರಿಂದ ೧೮೨೫ರವರೆಗೆ ಮೂರು ಕಂತುಗಳಲ್ಲಿ ಸಂಸ್ಕೃತ, ಪರ್ಷಿಯನ್, ಅರೇಬಿಕ್, ಜಾವನೀಸ್ ಮತ್ತು ಬರ್ಮೀಯ ಹಸ್ತಪ್ರತಿಗಳನ್ನೂ ಇತರ ಬೆಲೆ ಬಾಳುವ ವಸ್ತುಗಳನ್ನೂ (ನಾಣ್ಯಗಳು, ಮೂರ್ತಿಗಳು, ನಕ್ಷೆಗಳು ಇತ್ಯಾದಿ) ಲಂಡನ್ನಿಗೆ ರವಾನಿಸಿದರು. ದಕ್ಷಿಣ ಭಾರತದ ಭಾಷೆಗಳಲ್ಲಿದ್ದ ಹಸ್ತಪ್ರತಿಗಳು, ಶಾಸನಗಳ ನಕಲುಗಳು, ಕೈಫಿಯತ್ತು, ಬಖೈರು, ಪೂರ್ವೋತ್ತರ, ವಂಶಾವಳಿ ವೃತ್ತಾಂತಗಳು ಎಲ್ಲೆಲ್ಲಿಯೋ ಬಿದ್ದಿದ್ದು ಎಲ್ಲರ ಅನಾದರ ಔದಾಸೀನಕ್ಕೆ ಪಕ್ಕಾಗಿದ್ದು ಕಡೆಗೆ, ೧೮೫೮ ರಂದು ಸ್ಥಾಪನೆಗೊಂಡ ಗವರ್ನಮೆಂಟ್ ಓರಿಯಂಟಲ್ ಮ್ಯಾನ್ ಸ್ಕ್ರಿಪ್ಟ್ಸ್ ಲೈಬ್ರರಿ (ಮದರಾಸು ಸರ್ಕಾರದ ಪ್ರಾಚೀನ ಹಸ್ತಪ್ರತಿ ಭಂಡಾರ)ಯನ್ನು ಸೇರಿದವು. ಅಂತೂ ಕನ್ನಡದ ಹಸ್ತಪ್ರತಿಗಳನ್ನೂ,ಶಾಸನಗಳ ನಕಲುಗಳನ್ನೂ, ಇತರ ಪ್ರಾಚ್ಯ ವಸ್ತುಗಳನ್ನೂ ಸಂಗ್ರಹಿಸುವುದರಲ್ಲಿ ಕರ್ನಲ್ ಮೆಕೆಂಜಿಯೇ ಮೊದಲಿಗ; ೧೮೫೮ರಲ್ಲಿ ಮದ್ರಾಸಿನಲ್ಲಿ ಸ್ಥಾಪಿತವಾದ ಸರ್ಕಾರಿ ಹಸ್ತಪ್ರತಿ ಭಂಡಾರಕ್ಕೆ ಸೇರ್ಪಡೆಯಾದ ಮೆಕೆಂಜಿ ಸಂಗ್ರಹವೇ ಪ್ರಪ್ರಥಮ ಸಾರ್ವಜನಿಕ ಕನ್ನಡ ಭಂಡಾರ ಎನ್ನಬಹುದು.

ಈ ಸಂಗ್ರಹದಲ್ಲಿದ್ದ ಕರ್ನಾಟಕದ ಇತಿಹಾಸ ಸಂಸ್ಕೃತಿಗಳಿಗೆ ನೇರವಾಗಿ ಸಂಬಂಧಪಟ್ಟ ವಿಷಯಗಳು:

೧. ಹಳೆಯ ಮೈಸೂರಿನ ಸ್ಥಳಪುರಾಣ, ಚರಿತ್ರೆ ಮುಂತಾದವು ೨೦ ಸಂಪುಟಗಳಲ್ಲಿ ೧೪೬.

೨. ಪಶ್ಚಿಮ ತೀರ (ಘಫಣಜಡಿಟ ಅಂಭಣ)ಕ್ಕೆ ಸಂಬಂಧಿಸಿದ ೯ ಸಂಪುಟಗಳಲ್ಲಿ ೯೩.

೩. ಕನ್ನಡ ಶಾಸನಗಳ ನಕಲುಗಳು, ೨೮ ಬೃಹತ್ ಸಂಪುಟಗಳಲ್ಲಿ ೪೦೦೦.
೪. ಸ್ಥಳಪುರಾಣ, ಚರಿತ್ರೆ ಮುಂತಾದವುಗಳ ಆಂಗ್ಲಾನುವಾದಗಳಿರುವ ೭೪ ಸಂಪುಟಗಳು ಇಂಡಿಯಾ ಆಫೀಸ್ ಲೈಬ್ರರಿ (ಈಗ ಕಾಮನ್ ವೆಲ್ತ್ ಲೈಬ್ರರಿ)ಯಲ್ಲಿವೆ.

ಭಾರತದಲ್ಲಿ ಕೆಲಕಾಲವಿದ್ದ (೧೮೦೩-೧೮೧೧) ಡಾ. ಲೇಡನ್ ಮತ್ತು ಸಿ.ಪಿ ಬ್ರೌನ್ ಎನ್ನುವ ಅಧಿಕಾರಿಗಳು ಸ್ವತಃ ವಿದ್ವಾಂಸರೂ ಆಗಿದ್ದರು. ಇವರುಗಳು ಕನ್ನಡ ಹಾಗೂ ಇನ್ನಿತರ ಭಾರತೀಯ ಭಾಷೆಗಳ ಮೇಲೆ ಇಲ್ಲಿನ ದೇಸೀಜ್ಞಾನ ಭಂಡಾರಗಳ ಮೇಲೆ ವಿಶೇಷ ಆಸಕ್ತಿ ಹೊಂದಿದವರಾಗಿದ್ದರು ಹಾಗಾಗಿ ಅವರು ತಮ್ಮ ವೈಯಕ್ತಿಕ ಆಸಕ್ತಿಯಿಂದ ಬಹಳಷ್ಟು ಹಸ್ತಪ್ರತಿಗಳನ್ನು ಸಂಗ್ರಹಿಸಿದರು. ಅವೆಲ್ಲವುಗಳನ್ನು ಈ ಗ್ರಂಥಾಲಯದಲ್ಲಿ ಸಂರಕ್ಷಿಸಲಾಗಿರುವುದು ಒಂದು ವಿಶೇಷ. ಅವುಗಳನ್ನು ಸಂರಕ್ಷಿಸುವುದರ ಜೊತೆಗೆ ಎಲ್ಲಾ ಹಸ್ತಪ್ರತಿಗಳನ್ನು ಅಧ್ಯಯನ ಮಾಡಿ ವ್ಯವಸ್ಥಿತವಾದ 'ಸೂಚಿ' ಸಿದ್ಧಪಡಿಸಿ ಪ್ರಕಟಿಸಲಾಗಿದೆ. ಈ ಕಾರಣದಿಂದ "ಕನ್ನಡ ಹಸ್ತಪ್ರತಿಗಳ ಪ್ರಥಮ ವರ್ಣನಾತ್ಮಕ ಸೂಚಿ"ಯ ಪ್ರಕಟಣೆಯನ್ನು ನೀಡಿದ 'ಪ್ರಥಮ ಸಂಸ್ಥೆ' ಎಂಬ ಹೆಗ್ಗಳಿಕೆಯೂ ಈ ಸಂಸ್ಥೆಗೆ ಸಲ್ಲುತ್ತದೆ. ಈ ಸಂಸ್ಥೆಯಲ್ಲಿ ಸಂಗ್ರಹವಾಗಿದ್ದ ಹಸ್ತಪ್ರತಿಗಳಲ್ಲಿ 'ಕನ್ನಡದ ಮೊದಲ ಕೃತಿ ಕವಿರಾಜಮಾರ್ಗ', ಲಿಂಗಣಾರಾಧ್ಯ ವೃತ್ತಿಯ 'ಶಬ್ದಮಣಿದರ್ಪಣ' ಹಾಗೂ ರನ್ನನ 'ಸಾಹಸಭೀಮವಿಜಯ' ಮುಂತಾದ ಮುಖ್ಯಕೃತಿಗಳಿವೆ ಎಂಬ ಹೆಗ್ಗಳಿಕೆಯೂ ಉಂಟು.

ಹಸ್ತಪ್ರತಿ ಸೂಚಿಗಳ ಪ್ರಕಟಣೆ

ಹಸ್ತಪ್ರತಿ ಸಂಗ್ರಹದಂತೆ ಹಸ್ತಪ್ರತಿ ಸೂಚಿಯ ರಚನೆಯಲ್ಲಿಯೂ ಈ ಸಂಸ್ಥೆ ಹೊಸ ಹೆಜ್ಜೆ ಇಟ್ಟಿತು. ಈ ಸಂಸ್ಥೆ ಪ್ರಕಟಿಸಿದ ಸೂಚಿಗಳನ್ನು ಡಾ.ಎಂ.ಎಂ ಕಲಬುರ್ಗಿ ಹೇಳುವಂತೆ ಈ ರೀತಿ ಪಟ್ಟಿ ಮಾಡಬಹುದು.

೧. ಮೆಕೆಂಜಿ ಕಲೆಕ್ಷನ್ : ಎ ಡಿಸ್ಕ್ರಿಪ್ಟಿವ್ ಕೆಟಲಾಗ್ ಆಫ್ ದಿ ಮ್ಯಾನ್ಯುಸ್ಕ್ರಿಪ್ಟ್ಸ್ ಹೆಸರಿನ ಸೂಚಿ (೧೮೨೮) ,ಹೆಸರೇ ಸೂಚಿಸುವಂತೆ ವಿವರಣಾತ್ಮಕವಾಗಿದ್ದು, ಕನ್ನಡ ಹಸ್ತಪ್ರತಿ ಸೂಚಿ ಪರಂಪರೆಯ ಪ್ರಥಮ ಕೃತಿಯಾಗಿದೆ. ಈ ಬಳಿಕ

೨. ಅಲ್ಫಾಬೆಟಿಕಲ್ ಇಂಡೆಕ್ಸ್ ಆಫ್ ಮ್ಯಾನ್ಯುಸ್ಕ್ರಿಪ್ಟ್ಸ್ ಇನ್ ದಿ ಗವರ್ನಮೆಂಟ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿ ಮದ್ರಾಸ್ (೧೮೮೩)

೩.ಆನ್ಯ್ ಅಲ್ಫಾಬೆಟಿಕಲ್ ಇಂಡೆಕ್ಸ್ ಆಫ್ ಕೆನರೀಸ್ ಮ್ಯಾನ್ಯುಸ್ಕ್ರಿಪ್ಟ್ಸ್ ಇನ್ ದಿ ಗವರ್ನಮೆಂಟ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿ ಮದ್ರಾಸ್(೧೯೨೯)

೪.ಆನ್ಯ್ ಅಲ್ಫಾಬೆಟಿಕಲ್ ಇಂಡೆಕ್ಸ್ ಆಫ್ ಕನ್ನಡ ಮ್ಯಾನ್ಯುಸ್ಕ್ರಿಪ್ಟ್ಸ್ ಇನ್ ದಿ ಗವರ್ನಮೆಂಟ ಓರಿಯಂಟಲ್ ಮ್ಯಾನ್ಯುಸ್ಕ್ರಿಪ್ಟ್ಸ್ ಲೈಬ್ರರಿ ಮದ್ರಾಸ್ (೧೯೫೨) ಈ ಹೆಸರಿನ ಸೂಚಿಗಳನ್ನು ಈ ಸಂಸ್ಥೆ ಪ್ರಕಟಿಸಿತು.

ಈ ಮೇಲೆ ತಿಳಿಸಿದ ಸೂಚಿಸಿಗಳಿಗಿಂತ ಮಿಗಿಲಾದ ಕೆಲಸವೆಂದರೆ ಕನ್ನಡ ಸಾಹಿತ್ಯ, ಸಂಸ್ಕೃತಿ, ಇತಿಹಾಸ, ಪುರಾಣ, ಶಾಸ್ತ್ರಗ್ರಂಥಗಳು, ಕಾವ್ಯ, ಯಕ್ಷಗಾನ, ಹಾಗೂ ವಿವಿಧ ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿದ ಹಸ್ತಪ್ರತಿಗಳನ್ನು ಏಳು ವಿಭಾಗವಾಗಿ ಮಾಡಿಕೊಂಡು ಈ ಕೆಳಗಿನಂತೆ ಪ್ರಕಟಿಸಿದೆ.

೧. ಮೊದಲನೆ ಸಂಪುಟ : ವ್ಯಾಕರಣ ೧-೧೨, ನಿಘಂಟು ೧೩-೨೧, ಛಂದಸ್ಸು೨೩-೨೭,ಇತಿಹಾಸ ಮತ್ತು ಪುರಾಣ ೨೮-೧೩೮.

೨. ಎರಡನೆ ಸಂಪುಟ ಪುರಾಣ ೧೩೯-೨೭೮, ಅರ್ಥಶಾಸ್ತ್ರ ೨೭೯-೨೯೦, ಕಾಮಶಾಸ್ತ್ರ ೨೯೧-೨೯೭, ಯೋಗ ೨೯೮-೩೦೧, ವೇದಾಂತ ೩೦೨ ೩೧೭

೩. ಮೂರನೇ ಸಂಪುಟ : ಜೈನ ಆಗಮ ೩೧೮-೪೩೪,ವೀರಶೈವ ಆಗಮ ೪೩೫-೪೭೬

೪. ನಾಲ್ಕನೇ ಸಂಪುಟ : ವೀರಶೈವ ಆಗಮ ೪೭೭-೬೧೦, ಕ್ರೈಸ್ತ ಕೃತಿ ೬೧೧ ೬೧೪, ಸ್ತೋತ್ರ ಮತ್ತು ವೀರಶೈವಕೃತಿ ೬೧೫-೮೨೫

೫. ಐದನೇ ಸಂಪುಟ : ಶ್ರೀ ವೈಷ್ಣವ ಮತ ೮೨೬-೮೩೧, ಸ್ತೋತ್ರಗಳು ೮೩೨-೮೬೭, ಕಾವ್ಯ(ಪದ್ಯಕಾವ್ಯ) ೮೬೮-೧೦೩೮

೬. ಆರನೇ ಸಂಪುಟ : ಪದ್ಯಕಾವ್ಯ ೧೦೩೯-೧೧೨೧, ಚಂಪೂ ೧೧೨೨ ೧೧೬೭, ಯಕ್ಷಗಾನ ೧೧೬೮-೧೨೨೦, ಗದ್ಯಕಾವ್ಯ ೧೨೨೧-೧೨೩೮, ಕಥೆಗಳು ೧೨೩೯-೧೨೪೮, ಅಲಂಕಾರ ೧೨೪೯-೧೨೬೧

೭. ಏಳನೇ ಸಂಪುಟ : ಸಂಗೀತ ೧೨೬೨-೧೩೩೪, ಶಿಲ್ಪಶಾಸ್ತ್ರ ೧೩೪೫, ಪಾಕಶಾಸ್ತ್ರ ೧೩೩೬-೧೩೪೨, ವೈದ್ಯ ೧೩೪೩-೧೪೦೫

ಹೀಗೆ ಇಷ್ಟು ಪ್ರತಿಗಳ ವಿವರವಾದ ಪರಿಚಯ ಮಾಡಿಕೊಡುತ್ತವೆ. ಈ ಏಳು ಸಂಪುಟಗಳಲ್ಲಿ ಅಡಕವಾದ ಪ್ರತಿಗಳಿಗೆ ಉದ್ದಕ್ಕೂ ನಂಬರ್ ಕೊಡಲಾಗಿದ್ದು, ಒಟ್ಟು ೧೪೦೫ ಪ್ರತಿಗಳ ಪರಿಚಯ ಇಲ್ಲಿದೆ. ಕನ್ನಡ ಹಸ್ತಪ್ರತಿ ಸೂಚಿ ಗ್ರಂಥಗಳಲ್ಲಿಯೇ ವಿವರಣೆ ದೃಷ್ಟಿಯಿಂದ ತುಂಬಾ ಉಪಯುಕ್ತ ಸಂಪುಟಗಳಿವು. ಇವು ತದನಂತರ ಪ್ರಕಟಣೆಯಾದ ಹಸ್ತಪ್ರತಿ ಸೂಚಿಗಳಿಗೆ ದಾರಿದೀಪವಾದವು.

ಪ್ರಾಚೀನ ಕನ್ನಡ ಸಾಹಿತ್ಯ ಕೃತಿಗಳ ಪ್ರಕಟಣೆ :

ಮದರಾಸಿನ 'ಓರಿಯೆಂಟಲ್ ಮ್ಯಾನ್‌ಸ್ಕ್ರಿಪ್ಟ್ ಇನ್ಸ್ಟಿಟ್ಯೂಟ್' ಸಂಸ್ಥೆಯು ಹಸ್ತಪ್ರತಿಗಳ ಸಂಗ್ರಹ ಸಂರಕ್ಷಣೆ ಮತ್ತು ಸೂಚಿಗಳನ್ನು ಸಿದ್ಧಪಡಿಸಿ ಪ್ರಕಟಣೆ ಮಾಡುವುದರ ಜೊತೆಗೆ ಪ್ರಾಚೀನ ಕನ್ನಡ ಕಾವ್ಯ ಪ್ರಕಟಣೆಗಳಿಗೂ ಮುಂದಾಗುತ್ತದೆ. ಅದಕ್ಕಾಗಿ "ಓರಿಯೆಂಟಲ್ ಮ್ಯಾನ್‌ಸ್ಕ್ರಿಪ್ಟ್ ಸೀರೀಸ್" ಎನ್ನುವ ಒಂದು ಮಾಲಿಕೆಯನ್ನು ಈ ಸಂಸ್ಥೆ ಪ್ರಾರಂಭಿಸುತ್ತದೆ. ಈ ಮಾಲಿಕೆಯ ಅಡಿಯಲ್ಲಿ ಪ್ರಾಚೀನ ಕನ್ನಡ ಸಾಹಿತ್ಯದ ಮಹತ್ವಪೂರ್ಣವಾದ ಕಾವ್ಯಗಳನ್ನು ಸಂಪಾದಿಸಿ ಪ್ರಕಟಿಸುತ್ತದೆ. ಅವುಗಳಲ್ಲಿ ಚಾವುಂಡರಾಂಯನ ಲೋಕೋಪಕಾರ(೧೯೫೦), ಮಂಗರಾಜನ ನಿಘಂಟು(೧೯೫೧), ಮನ್ಮಥವಿಜಯ(೧೯೫೪), ರಟ್ಟಕವಿಯ ರಟ್ಟಮತಂ, ಅಭಿನವಚಂದ್ರನ ಅಶ್ವಶಾಸ್ತ್ರ, ವಿವಿಧ ವೈದ್ಯವಿಷಯಗಳು, ಸೂಪಶಾಸ್ತ್ರ, ವ್ಯವಹಾರಗಣಿತಂ ಮೊದಲಾದ ಲೋಕ ಕಲ್ಯಾಣಶಾಸ್ತ್ರಗಳನ್ನೂ, ಅಭಿಧಾನರತ್ನಮಾಲಾ, ಸಾಳ್ವಕವಿಯ ಸಂಗೀತ ರತ್ನಾಕರ ಮೊದಲಾದ ಶಾಸ್ತ್ರ ಕೃತಿಗಳನ್ನೂ ಪರಿಷ್ಕರಿಸಿ ಪ್ರಕಟಿಸಿದೆ. ಅಲ್ಲದೆ ಷ ಜೀವಸಂಭೋಧನ(೧೯೫೫), ಸದ್ಗುರು ರಹಸ್ಯ ಶ್ರೀಮದ್ರಾಮಾಯಣದ ಕೆಲವು ಕಾಂಡಗಳು ಮುಂತಾದ ಕನ್ನಡ ಕಾವ್ಯಗಳು ಪ್ರಮುಖವಾದವುಗಳು ಎಂದು ಹೇಳಬಹುದು.

೫.ಮದರಾಸು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗ :

ಹಾಗೆ ನೋಡಿದರೆ "ಪ್ರಾಚೀನ ಕನ್ನಡ ಕಾವ್ಯಗಳನ್ನು" ಮೊದಲಿಗೆ ಶಿಸ್ತುಬದ್ಧವಾಗಿ ಸಂಪಾದಿಸಿ ಪ್ರಕಟಿಸಿದ ಕೀರ್ತಿ ಮದರಾಸು ವಿಶ್ವವಿದ್ಯಾಲಯದ ಪ್ರಸಾರಾಂಗಕ್ಕೆ ಸಲ್ಲಬೇಕು. ಕರ್ನಾಟಕದ ಮೈಸೂರು,ಬೆಂಗಳೂರು,ಮಂಗಳೂರು, ಧಾರವಾಡ ಗಳಲ್ಲಿದ್ದ ಪ್ರಕಟಣ ಸಂಸ್ಥೆಗಳಿಗಿಂತಲೂ ಪೂರ್ವದಲ್ಲಿ ಮದ್ರಾಸಿನಲ್ಲಿದ್ದ ಅನೇಕ ಸಂಸ್ಥೆಗಳು ಪ್ರಾಚೀನ ಕನ್ನಡ ಕಾವ್ಯಗಳು, ನಿಘಂಟು, ಶಬ್ದಕೋಶ, ಬೈಬಲ್ಲಿನ ಕನ್ನಡ ಅವತರಣಿಕೆಗಳನ್ನು ಮುದ್ರಿಸುವುದುರಲ್ಲಿ ಮುಂಚೂಣಿಯಲ್ಲಿದ್ದವು. ಅಂತಹ ಪ್ರಾಥಃಸ್ಮರಣೀಯ ಸಂಸ್ಥೆಯಲ್ಲಿ " ಮದ್ರಾಸು ವಿಶ್ವವಿದ್ಯಾಲಯವು" ಒಂದು. ವಿಶ್ವವಿದ್ಯಾಲಯ ಪ್ರಾರಂಭವಾದ ತಕ್ಷಣ ಅದರ ಭಾಗವಾಗಿ ಪ್ರಸಾರಾಂಗ ಮತ್ತು ಗ್ರಂಥಾಲಯವನ್ನು ಪ್ರಾರಂಭ ಮಾಡುತ್ತದೆ. ಆಗ ಅದುವರೆಗೂ "ಮದ್ರಾಸಿನ ಗೌರ್ನಮೆಂಟ್ ಓರಿಯೆಂಟಲ್ ಮ್ಯಾನ್‌ಸ್ಕ್ರಿಪ್ಟ್ ಲೈಬ್ರೆರಿ"ಯಲ್ಲಿ ಅಪಾರ ಸಂಖ್ಯೆಯಲ್ಲಿ ಇದ್ದ ಹಸ್ತಪ್ರತಿಗಳ ಜೊತೆಗೆ ಮೆಕೆಂಜಿ ಸಂಗ್ರಹದ ಹಸ್ತಪ್ರತಿಗಳು, ನಕಾಶೆಗಳು, ನಾಣ್ಯಗಳು, ಕಾಗದ ಪತ್ರಗಳು, ಶಾಸನದ ನಕಲುಗಳು, ತಾಮ್ರಶಾಸನಗಳು

ಮುಂತಾದವುಗಳು ವಿಶ್ವವಿದ್ಯಾಲಯದ ಗ್ರಂಥಾಲಯಕ್ಕೆ ವರ್ಗಾವಣೆ ಗೊಳ್ಳುತ್ತವೆ. ಇದೇ ರೀತಿ ಕೆಲವು ಹಸ್ತಪ್ರತಿಗಳು ಮೈಸೂರು ಮತ್ತು ಧಾರವಾಡ ವಿಶ್ವವಿದ್ಯಾಲಯಗಳಿಗೂ ಹಂಚಿಹೋಗುತ್ತವೆ ಎಂಬುದನ್ನು ವಿದ್ವಾಂಸರು ಹೇಳಿದ್ದಾರೆ.

ಮದ್ರಾಸ್ ವಿಶ್ವವಿದ್ಯಾಲಯವು ಈ ರೀತಿಯಾಗಿ ಸಂಗ್ರಹವಾದ ಹಸ್ತಪ್ರತಿಗಳನ್ನು ಸಂರಕ್ಷಣೆ ಮಾಡಿಕೊಂಡು ಬರುವುದರ ಜೊತೆಗೆ ಅವುಗಳಲ್ಲಿ ಪ್ರಮುಖವಾದವುಗಳನ್ನು ಸಂಪಾದಿಸಿ ಪ್ರಕಟಿಸುವ ಪ್ರಯತ್ನಕ್ಕೆ ಮುಂದಾಗುತ್ತದೆ. ಆ ಕಾಲಕ್ಕೆ ಇದು ಒಂದು ದೊಡ್ಡ ಸಾಧನೆಯೇ ಸರಿ. ವಿಶ್ವವಿದ್ಯಾಲಯವು ಕನ್ನಡ ಹಸ್ತಪ್ರತಿಗಳ ಸಂಪಾದನೆ ಮತ್ತು ಪ್ರಕಟನೆಗಾಗಿ ೧೯೩೦ ರಲ್ಲಿ 'ಕನ್ನಡ ಗ್ರಂಥಮಾಲೆ' ಎನ್ನುವ ಯೋಜನೆಯನ್ನು ಪ್ರಾರಂಭಿಸುವ ಮೂಲಕ ಪ್ರಾಚೀನ ಕನ್ನಡ ಕಾವ್ಯ ಪ್ರಕಟಣೆಗೆ ಒಂದು ಹೊಸ ದಿಕ್ಕನ್ನೇ ತೆರೆಯುತ್ತದೆ. ಈ ಮಾಲಿಕೆಯ ಪ್ರಥಮ ಪ್ರಕಟಣೆ 'ಕವಿರಾಜಮಾರ್ಗ'(೧೯೩೦) ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಕಾಣಿಕೆಯಾಗಿದೆ. ಈ ಮಾಲೆಗಾಗಿ ದುಡಿದ ಶ್ರೀ ಎ.ವೆಂಕಟರಾವ್,ಎಚ್. ಶೇಷ ಅಯ್ಯಂಗಾರ್, ಎಂ. ಮರಿಯಪ್ಪ ಭಟ್ಟ, ಎಂ. ಗೋವಿಂದರಾವ್ ಅವರುಗಳ ಸೇವೆ ಅವಿಸ್ಮರಣೀಯ ಹಾಗೂ ಅನನ್ಯವಾದದ್ದು. ನಂತರ ಈ ಮಾಲೆಯಲ್ಲಿ ಪ್ರಕಟವಾದ ಬಹಳ ಮುಖ್ಯವಾದ ಪ್ರಾಚೀನ ಕನ್ನಡ ಕೃತಿಗಳೆಂದರೆ ಕವಿರಾಜಮಾರ್ಗ–೧೯೩೦, ಲಿಂಗಣಾರಾಧ್ಯ ವೃತ್ತಿಯು ಶಬ್ದಮಣಿದರ್ಪಣಂ–೧೯೪೦, ಪುಷ್ಪದಂತ ಪುರಾಣ –೧೯೩೩, ಔಷಧಿ ಕೋಶ –೧೯೪೦, ಕರ್ಣಪಾರ್ಯನ ನೇಮಿನಾಥಪುರಾಣಂ–೧೯೪೦, ಮಂಗರಾಜನ ಅಭಿನವಾಭಿನಂದನ–೧೯೫೨, ಅಚ್ಚಣನ ವರ್ಧಮಾನ ಪುರಾಣ–೧೯೫೩, ಜಾತಕತಿಲಕ –೧೯೫೫, ಪಾರ್ಶ್ವಪಂಡಿತನ ಪಾರ್ಶ್ವನಾಥ ಪುರಾಣಂ, ಶ್ರೀವಿಷ್ಣುಪುರಾಣ –೧೯೫೭ ಹೀಗೆ ಇನ್ನೂ ಹಲವಾರು ಪ್ರಾಚೀನ ಕನ್ನಡ ಕೃತಿಗಳನ್ನು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮೂಲಕ ಬೆಳಕಿಗೆ ತಂದಿದೆ. ಈ ಕೀರ್ತಿ ಅಂದಿನ ಕಾಲಕ್ಕೆ ಕನ್ನಡ ವಿಭಾಗದ ಮುಖ್ಯಸ್ಥರಾದ ಎಂ ಮರಿಯಪ್ಪ ಭಟ್ಟರಿಗೆ ಸಲ್ಲಬೇಕು ಸ್ವತಹ ತಾನೇ ಕೃತಿಗಳನ್ನು ಸಂಪಾದಿಸಿ ಪ್ರಕಟಿಸುವುದರ ಜೊತೆಗೆ ಇತರ ವಿದ್ವಾಂಸರಿಂದಲೂ ಆ ಕಾರ್ಯವನ್ನು ಮಾಡಿಸುವುದರ ಮೂಲಕ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅನನ್ಯ ಕೊಡುಗೆ ನೀಡಿದ್ದಾರೆ. ಈ ರೀತಿಯ ಪ್ರಾಚೀನ ಗ್ರಂಥಗಳ ಪ್ರಕಟನೆಯೂ ಜೊತೆಗೆ ಕಿಟಲ್ ಕನ್ನಡ ಕೋಶವನ್ನು ಪರಿಷ್ಕರಿಸಿ ಪ್ರಕಟಿಸಿದ್ದು ಇವರ ಇನ್ನೊಂದು ಸಾಧನೆ ಎಂದೇ ಹೇಳಬೇಕು.

ಇದಲ್ಲದೆ ಡಾ ಕೆ ಕುಶಾಲಪ್ಪ ಗೌಡ ಹಾಗೂ ಡಾ ಎಂ ಮರಿಯಪ್ಪ ಭಟ್ಟರು ಮದ್ರಾಸ್ ವಿವಿಯ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದ ಕಾಲಕ್ಕೆ ಈ ಕೆಳಕಂಡ

ಕೃತಿಗಳನ್ನು 'ಮದರಾಸು ವಿಶ್ವವಿದ್ಯಾಲಯ'ದಿಂದ ಸಂಪಾದಿಸಿ ಪ್ರಕಟಿಸಿದ್ದಾರೆ ಅವುಗಳೆಂದರೆ

೧. ಸಾಳ್ವ ಕವಿಯ ರಸರತ್ನಾಕರ – ಡಾ ಎ.ವೆಂಕಟರಾವ್ ಮತ್ತು ಪಂಡಿತ ಹೆಚ್.ಶೇಷ ಅಯ್ಯಂಗಾರ್ -೧೯೩೨

೨. ಕರ್ನಾಟಕ ಕವಿರಾಜಮಾರ್ಗಂ – ಡಾ ಎ ಶಂಕರ್ ಕೆದಿಲಾಯ 1ssst edi 1930 2nd Edi -1973.

೩. ಪೆರಿಯ ಪುರಾಣಂ vo-೧,ಕನ್ನಡ ಅನುವಾದ, ಡಾ ಎ ಶಂಕರ್ ಕೆದಿಲಾಯ ೧೯೭೪

೪. ಪೆರಿಯ ಪುರಾಣಂ vo-2, ಕನ್ನಡ ಅನುವಾದ, ಡಾ ಎ ಶಂಕರ್ ಕೆದಿಲಾಯ ೧೯೭೩

೫. ಶಬ್ದಮಣಿದರ್ಪಣಂ, ಡಾ. ಎ. ಶಂಕರ್ ಕೆದಿಲಾಯ ೧೯೭೩

೬. ನಾಗವರ್ಮ ವಿರಚಿತ ಅಭಿದಾನ ರತ್ನಮಾಲ ನಾಟಕ ಟೀಕಾ – ಡಾ. ಎ. ವೆಂಕಟರಾವ್ ಮತ್ತು ಪಂಡಿತ್ ಎಚ್ ಶೇಷ ಅಯ್ಯಂಗಾರ ೧೯೭೯

೭. ಸಾಹಿತ್ಯ ಸಂಪಾದನೆ ಡಾ. ಎಂ.ಎಂ.ಕಲಬುರ್ಗಿ ೧೯೭೯

೮. ಕನ್ನಡ ಭಾಷಾವಲೋಕನ ಪ್ರೊ. ಕೆ ಕುಶಾಲಪ್ಪ ಗೌಡ ೧೯೮೪ ಇನ್ನೂ ಹಲವು ಮುಂತಾದ ಕನ್ನಡ ಕಾವ್ಯಗಳು ಮದ್ರಾಸು ವಿಶ್ವವಿದ್ಯಾಲಯದ ಪ್ರಕಟಣೆಗಳಾಗಿವೆ. ಹಾಗಾಗಿ ಕರ್ನಾಟಕದ ಹೊರಗಿದ್ದು ಸಹ ಮದರಾಸು ವಿಶ್ವವಿದ್ಯಾಲಯದ ಕನ್ನಡ ವಿಭಾಗವು ಪ್ರಾಚೀನ ಕನ್ನಡ ಗ್ರಂಥಗಳ ಪ್ರಕಟನೆಯ ಕಾರ್ಯವನ್ನು ಅತ್ಯಂತ ಶ್ಲಾಘನೀಯವಾಗಿ ಮಾಡಿದೆ ಎಂದು ಹೇಳುವಲ್ಲಿ ಹೆಮ್ಮೆಯೆನಿಸುತ್ತದೆ. ಇದಲ್ಲದೆ ಪುಂಗನೂರು ಹಾಗೂ ಕುಂಭಕೋಣಂಗಳಲ್ಲಿಯೂ ಕನ್ನಡ ಪುಸ್ತಕಗಳು ಮುದ್ರಣವಾಗಿದ್ದವು ಎನ್ನುವ ಮಾಹಿತಿ ಇದ್ದರೂ ಯಾವ ಕೃತಿಗಳು, ಅದರ ಸಂಪಾದಕರಾರು ಎನ್ನುವ ನಿಖರವಾದ ಸಾಕ್ಷಾಧಾರಗಳು ಸದ್ಯಕ್ಕೆ ಲಭ್ಯವಾಗುತ್ತಿಲ್ಲದಿರುವುದು ವಿಷಾದನೀಯ ಸಂಗತಿ.

ಹೀಗೆ ಕರ್ನಾಟಕದ ಹೊರಗಿದ್ದು ಪ್ರಾಚೀನ ಕನ್ನಡ ಭಾಷೆ ಮತ್ತು ಸಾಹಿತ್ಯದ ಕೃತಿಗಳನ್ನು ಸಂಪಾದಿಸಿ, ಪ್ರಕಟಿಸಿದ ಕೀರ್ತಿ ಈ ಮೇಲಿನ ಸಂಸ್ಥೆಗಳಿಗೆ ಸಲ್ಲುತ್ತದೆ. ಈ ವಿಚಾರವನ್ನು ಕುರಿತಂತೆ ಇನ್ನುಷ್ಟು ದೀರ್ಘವಾದ ಅಧ್ಯಯನ ನಡೆಸಲು ಬಹಳಷ್ಟು ಅವಕಾಶಗಳಿವೆ. ಆಸಕ್ತರು ಈ ಕ್ಷೇತ್ರವನ್ನು ಕುರಿತು ಸಂಶೋಧನೆ, ಚಿಂತನೆ, ಬರಹಗಳ ಮೂಲಕ ಒಂದು ಸಮಗ್ರವಾದ 'ಅರಿವನ್ನು' ಸೃಷ್ಟಿ ಮಾಡುವ ಮೂಲಕ ಕನ್ನಡ

ಪ್ರಾಚೀನ ಸಾಹಿತ್ಯ ಕೃತಿಗಳ ಪ್ರಕಟಣಾ ಸಂಸ್ಥೆಗಳ ಮಹತ್ವವನ್ನು ಮುಂದಿನ ಪೀಳಿಗೆಗೆ ತಿಳಿಸಬೇಕಾಗಿದೆ.

ಅಡಿಟಿಪ್ಪಣಿ

೧. ಹಸ್ತಪ್ರತಿ ಅಧ್ಯಯನ ಶಾಸ್ತ್ರ- ಡಾ.ನಾ.ಗೀತಾಚಾರ್ಯ, ಪುಟ ೫೫
೨. ಮುದ್ರಣ ಲೋಕದಲ್ಲೊಂದು ವಿಸ್ಮಯದ ಪಯಣ ಭಾಗ-೩ – ಸ್ಯಾನ್ ಕೃಷ್ಣಮೂರ್ತಿ
೩. ಆರಂಭದ ಸಾಹಿತ್ಯ ನಿರ್ಮಿತಿಯಲ್ಲಿ ಮುದ್ರಣದ ಪಾತ್ರ ಪುಟ ೪೧ – ಶ್ರೀನಿವಾಸ ಹಾವನೂರು
೪. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಪರಿಷ್ಕೃತ ಆವೃತ್ತಿ ಸಂಪುಟ ೬ ಭಾಗ-೧, ಬೆಂಗಳೂರು ವಿಶ್ವವಿದ್ಯಾಲಯ
೫. ಕನ್ನಡ ಹಸ್ತಪ್ರತಿಗಳ ಇತಿಹಾಸ- ಎಚ್. ದೇವೀರಪ್ಪ, ಪುಟ- ೬೭,೬೮
೬. ಕನ್ನಡ ಹಸ್ತಪ್ರತಿಶಾಸ್ತ್ರ – ಡಾ. ಎಂ.ಎಂ. ಕಲಬುರ್ಗಿ, ಪುಟ –೭೮,೭೯

ಆಧಾರ ಗ್ರಂಥಗಳು :
೧. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ(ಪರಿಷ್ಕೃತ ಆವೃತ್ತಿ) ಸಂಪುಟ ೬ ಭಾಗ-೧ ಪ್ರಸಾರಂಗ, ಬೆಗಳೂರು ವಿಶ್ವವಿದ್ಯಾಲಯ-೨೦೧೪
೨. ಹಸ್ತಪ್ರತಿ ಅಧ್ಯಯನ ಶಾಸ್ತ್ರ- ಡಾ. ನಾ. ಗೀತಾಚಾರ್ಯ, ಬಿಎಂಶ್ರೀ ಪ್ರತಿಷ್ಠಾನ ಬೆಂಗಳೂರು ೨೦೦೯
೩. ಹೊಸಗನ್ನಡ ಅರುಣೋದಯ- ಶ್ರೀನಿವಾಸ ಹಾವನೂರು
೪. ಹೊಸಗನ್ನಡ ಸಾಹಿತ್ಯದ ಉದಯದ ಕಾಲ – ರಾ.ಯ.ಧಾರವಾಡಕರ
೫. ಸಿರಿಕಂಟ, ಎನ್.ಬಸವರಾಧ್ಯ, ಡಾ.ನಾ.ಗೀತಾಚಾರ್ಯ, ಬಿಎಂಶ್ರೀ ಪ್ರತಿಷ್ಠಾನ ಬೆಂಗಳೂರು-೨೦೧೩.
೬. ಕನ್ನಡ ಹಸ್ತಪ್ರತಿಶಾಸ್ತ್ರ – ಡಾ. ಎಂ.ಎಂ. ಕಲಬುರ್ಗಿ, ಸ್ನೇಹಪ್ರಕಾಶನ ಬೆಂಗಳೂರು –೧೯೯೩
೭. ಕನ್ನಡ ಹಸ್ತಪ್ರತಿಗಳ ಇತಿಹಾಸ – ಎಚ್. ದೇವೀರಪ್ಪ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು. ದ್ವಿತೀಯ ಮುದ್ರಣ ೧೯೯೯

ಮಲಯಾಳಂನ ಮೊದಲ ಕಾದಂಬರಿ 'ಕುಂದಲತ' : ವಸ್ತು ಮತ್ತು ಆಶಯ ವಿಶ್ಲೇಷಣೆ

ಡಾ. ಮೋಹನ ಕುಂಟಾರ್

ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದ ದಶಕಗಳಲ್ಲಿ ಭಾರತೀಯ ಭಾಷಾ ಸಾಹಿತ್ಯ ವಲಯದಲ್ಲಿ ವಿನೂತನ ಸಂಚಲನಗಳು ಕಾಣಿಸಿಕೊಂಡುವು. ವಸಾಹತು ಆಡಳಿತಕ್ಕೆ ರಾಜಕೀಯ ಪ್ರತಿರೋಧವನ್ನು ಒಡ್ಡುತ್ತಲೆ ಬೌದ್ಧಿಕವಾಗಿ ವಸಾಹತು ಪ್ರಣೀತ ವಿಚಾರಧಾರೆಗಳಿಗೆ ತೆರೆದುಕೊಳ್ಳುತ್ತ ಸಾಗಿರುವುದು ವಿಶೇಷ. ವಸಾಹತು ಆಡಳಿತದ ಪರಿಣಾಮದಿಂದ ದೇಶೀಯರು ಇಂಗ್ಲಿಷ್‌ನಂತಹ ಪಾಶ್ಚಾತ್ಯ ಭಾಷೆಯನ್ನು ಕಲಿತರು. ಒಂದು ಕಡೆ ದೇಶದ ಪವಿತ್ರ ಭಾಷೆಯಾದ ಸಂಸ್ಕೃತವನ್ನು ಮೇಲು ಜಾತಿಯವರು ತಮ್ಮ ಖಾಸಗಿ ಆಸ್ತಿಯಂತೆ ಕಾಪಾಡಿಕೊಳ್ಳುತ್ತಲೇ ಬಂದರು. ಶೂದ್ರಾತಿಶೂದ್ರರನ್ನು ಸಂಸ್ಕೃತದಿಂದ ದೂರವೇ ಉಳಿಯುವಂತೆ ಮಾಡಿದರೂ ವಿದೇಶಿ ವಿದ್ವಾಂಸರು ಆ ಭಾಷೆಯನ್ನು ಕಲಿತರು. ಇದರಿಂದ ಭಾರತೀಯವೆನಿಸಿದ ಬೌದ್ಧಿಕತೆ ಹೊರ ಜಗತ್ತಿಗೆ ತಲುಪುವಂತಾಯಿತು. ಹೊರಜಗತ್ತಿನ ಬೌದ್ಧಿಕತೆ ಭಾರತೀಯ ಭಾಷೆಗಳಲ್ಲಿಯೂ ವ್ಯಾಪಿಸಿತು. ಇದಕ್ಕೆಲ್ಲ ಮುಖ್ಯ ಕಾರಣವಾದುದು ವಸಾಹತುಶಾಹಿ ಆಡಳಿತಕ್ಕೆ ದೇಶದ ಜನರ ಅಂತರ್ಯವನ್ನು ತಿಳಿಯುವ ಕುತೂಹಲ. ಹಾಗೆಯೇ ಜನರ ಜೊತೆ ಸಂವಹನ ಸಾಧ್ಯವಾಗಿಸುವುದಕ್ಕೆ ದೇಶೀಯ ವಿದ್ವಾಂಸರಿಗೂ ಇಂಗ್ಲಿಷ್ ಕಲಿಸಬೇಕೆಂಬ ಅಪೇಕ್ಷೆ. ಇವೆರಡೂ ಆಡಳಿತವನ್ನು ದೇಶದಲ್ಲಿ ಬಿಗಿಗೊಳಿಸುವುದಕ್ಕೆ ವಸಾಹತು ಆಡಳಿತಗಾರರು ರೂಪಿಸಿದ ರಾಜಕೀಯ ಕಾರ್ಯತಂತ್ರವೇ ಆಗಿದ್ದುವು. ಆದರೆ ಇವು ಪರಿಣಾಮದಲ್ಲಿ ಭಾರತದ ಸಾಂಸ್ಕೃತಿಕ ವಲಯದಲ್ಲಿ ಹೊಸ ಬಗೆಯ ವಿವೇಕ ಮೂಡುವುದಕ್ಕೆ ಕಾರಣವಾಯಿತು.

ಭಾರತೀಯ ಭಾಷೆಗಳು ಸಂಸ್ಕೃತ ಭಾಷೆ ಸಾಹಿತ್ಯಗಳಿಗೆ ಉನ್ನತ ಸ್ಥಾನ, ಗೌರವಗಳನ್ನು ನೀಡಿದುವು. ಅಲ್ಲದೆ ಅವುಗಳನ್ನೆ ಭಾರತದ ಆದರ್ಶದ ರಚನೆಗಳೆಂದು ತಿಳಿದು ವ್ಯವಹರಿಸಿದುವು. ವೇದ, ಶಾಸ್ತ್ರ, ಕಾವ್ಯ, ಮೀಮಾಂಸೆ ಇತ್ಯಾದಿ ಎಲ್ಲಾ ವಿಚಾರಗಳನ್ನು ಸಂಸ್ಕೃತದ ಪಡಿಯಚ್ಚಿನಲ್ಲಿಯೇ ಮರುರೂಪಿಸುವ ಪ್ರಯತ್ನಗಳೂ ನಡೆದವು. ಸಂಸ್ಕೃತದ ಬಗೆಗಿನ ಶ್ರೇಷ್ಠತೆಯ ವ್ಯಸನವು ಪ್ರಾಕೃತ ಭಾಷೆಗಳ ಅಸ್ತಿತ್ವವೇ ಮರೆಯಾಗುವಲ್ಲಿಯವರೆಗೂ ಬೆಳೆದಿತ್ತು. ಇದು ಸ್ವಲ್ಪಮಟ್ಟಿಗೆ ತಮಿಳನ್ನು ಹೊರತುಪಡಿಸಿ

ಉಳಿದೆಲ್ಲಾ ಭಾರತೀಯ ಭಾಷೆಗಳ ಸಂದರ್ಭದಲ್ಲಿಯೂ ನಿಜವಾಗಿತ್ತು. ಪಾಶ್ಚಾತ್ಯರ ಪ್ರಭಾವ, ಇಂಗ್ಲಿಷ್ ಕಲಿಕೆ ಇತ್ಯಾದಿಗಳ ಕಾರಣಗಳಿಂದ ಬೌದ್ಧಿಕತೆಗಾಗಿ ಸಂಸ್ಕೃತದತ್ತ ನೋಡುತ್ತಿದ್ದ ಭಾರತೀಯ ಭಾಷಾ ಬರಹಗಾರರು ಪಾಶ್ಚಾತ್ಯರತ್ತ ನೋಡಲಾರಂಭಿಸಿದರು. ಪಾಶ್ಚಾತ್ಯರ ಸಾಹಿತ್ಯ ಚಿಂತನೆಗಳನ್ನು, ದೇಶಭಾಷೆಗಳಲ್ಲಿಯೂ ಅಳವಡಿಸುವ ಬಗೆಗೆ ಯೋಚನೆ ಮಾಡಿದರು. ಸಾಂಪ್ರದಾಯಕವಾದ ಸಾಹಿತ್ಯ ಪರಂಪರೆ, ಪ್ರಕಾರ, ವಸ್ತು, ಆಶಯಗಳೆಲ್ಲವನ್ನು ಹೊಸ ಬಗೆಯಲ್ಲಿ ರೂಪಿಸಬೇಕಾದ ಅಗತ್ಯವನ್ನು ಕಂಡುಕೊಂಡರು. ಅಮೂರ್ತ ನೆಲೆಯಲ್ಲಿ ರೂಪುಗೊಳ್ಳುತ್ತಿದ್ದ ಸಾಹಿತ್ಯ ಕೃತಿಗಳಲ್ಲಿ ಸಮಕಾಲೀನ ವಾಸ್ತವದ ಜನ ಜೀವನದ ಸಹಸ್ಪಂದಿಯಾಗಿ ಕಾಣುವ ಅಗತ್ಯವನ್ನು ಕಂಡುಕೊಂಡವು. ಇದರ ಫಲಿತವೋ ಎಂಬಂತೆ ಭಾರತೀಯ ಭಾಷೆಗಳಲ್ಲಿ ಕಾದಂಬರಿ, ಸಣ್ಣಕತೆ, ಮೊದಲಾದ ಸಾಹಿತ್ಯ ಪ್ರಕಾರಗಳು ಎಲ್ಲಾ ದೇಶಭಾಷೆಗಳಲ್ಲಿಯೂ ಕಾಣಿಸಿಕೊಂಡವು. ಪಾಶ್ಚಾತ್ಯರ ಪ್ರಭಾವದಿಂದ ರೂಪಿಸಿಕೊಂಡ ಕಾದಂಬರಿಯಂತಹ ಜನಪ್ರಿಯ ಸಾಹಿತ್ಯ ಪ್ರಕಾರ ಭಾರತೀಯ ಸಂದರ್ಭದಲ್ಲಿ ರೂಪುಪಡೆಯಿತು. ಅದು ಸಾಹಿತ್ಯ ಪ್ರಕಾರವಾಗಿ ಸಾಮಾನ್ಯ ಓದುಗರನ್ನು ಬಹುಬೇಗನೆ ಸೆಳೆಯಲಾರಂಭಿಸಿತು. ಎಲ್ಲಾ ಭಾರತೀಯ ಭಾಷೆಗಳಲ್ಲಿ ಬಹುತೇಕ ೧೯ನೆಯ ಶತಮಾನದ ಕೊನೆಯ ನಾಲ್ಕು ದಶಕಗಳಲ್ಲಿ ಕಾದಂಬರಿ ಪ್ರಕಾರಕ್ಕೆ ಖಚಿತವಾದ ಸ್ವರೂಪವೊಂದು ಸಿದ್ಧಿಸಿತು. ಅವು ಸ್ವತಂತ್ರ ಸ್ವರೂಪವನ್ನು ಕಂಡುಕೊಳ್ಳುವಲ್ಲಿ ಪಾಶ್ಚಾತ್ಯ ನಾವೆಲ್‌ಗಳ ಅನುವಾದಗಳು ಮಾದರಿಗಳಾಗಿ ಒದಗಿದವು.

ಅನುವಾದಗಳ ಮೂಲಕ ಹಸನುಗೊಂಡ ನೆಲದಲ್ಲಿ ಕಾದಂಬರಿಯೆಂಬ ಹೊಸ ಫಸಲು ಸಮೃದ್ಧವಾಗಿಯೇ ಬೆಳೆದುಬಂತು. ಬಾಬಾ ಪದಮುಂಜಿಯವರು ಮರಾಠಿಯಲ್ಲಿ ಬರೆದ 'ಯಮುನಾ ಪರ್ಯಟನ' ೧೮೫೭ರಲ್ಲಿ ಪ್ರಕಟವಾಯಿತು. ಇದುವೇ ಭಾರತೀಯ ಭಾಷೆಗಳ ಮೊದಲ ಕಾದಂಬರಿಯಾಗಿದೆ. ನಂತರ ೧೮೬೫ರಲ್ಲಿ ಬಂಗಾಳಿ ಭಾಷೆಯಲ್ಲಿ ಬಂಕಿಮಚಂದ್ರರು ಬರೆದ 'ದುರ್ಗೇಶ ನಂದಿನಿ' ಪ್ರಕಟವಾಯಿತು. ಮುಂದೆ ತಮಿಳಿನಲ್ಲಿ 'ಪ್ರತಾಪ ಮುದಲಿ'(೧೮೭೫), ತೆಲುಗಿನಲ್ಲಿ ವೀರೇಶಲಿಂಗಂ ಪಂತುಲು ಅವರ 'ರಾಜಶೇಖರ ಚರಿತಮು'(೧೮೭೮), ಮಲಯಾಳಂನಲ್ಲಿ ಅಪ್ಪು ನೆಡುಜಾಡಿಯವರ 'ಕುಂದಲತ'(೧೮೮೭), ಒಡಿಯಾ ಭಾಷೆಯಲ್ಲಿ ಉಮೇಶ್ ಚಂದ್ರ ಸರ್ಕಾರ್ ಅವರು ಬರೆದ 'ಪದ್ಮಮಲಿ'(೧೮೮೮), ಆಸ್ಸಾಮಿ ಭಾಷೆಯಲ್ಲಿ ಪದ್ಮನಾಥ ಗೊಹೈನ್ ಬರಾ ಅವರ 'ಭಾನುಮೊತಿ ಅಥವಾ ಭಾನುಮತಿ'(೧೮೯೦), ಕನ್ನಡದಲ್ಲಿ ಗುಲ್ವಾಡಿ ವೆಂಕಟರಾಯರ 'ಇಂದಿರಾಬಾಯಿ ಅಥವಾ ಸದ್ಧರ್ಮ ವಿಜಯ'(೧೮೯೯) ಹೀಗೆ ಭಾರತೀಯ ಭಾಷೆಗಳಲ್ಲಿ ಸ್ವತಂತ್ರ ಕಾದಂಬರಿಗಳು

ರಚನೆಯಾದುವು.

ಈ ಮೇಲೆ ಹೆಸರಿಸಿದ ಎಲ್ಲಾ ಕಾದಂಬರಿಗಳು ಸಾಮಾಜಿಕ ವಸ್ತುವನ್ನೊಳಗೊಂಡಿವೆ. ಮಲಯಾಳಂನ ಕುಂದಲತ ಮಾತ್ರ ಒಂದು ರೀತಿಯಲ್ಲಿ ಕಾಲ್ಪನಿಕ ಇತಿಹಾಸದ ವಸ್ತುವನ್ನು ನಿರೂಪಿಸುತ್ತದೆ. ಆದರೆ ಆಧುನಿಕ ಕಾದಂಬರಿಯ ಲಕ್ಷಣಗಳನ್ನು ಒಳಗೊಂಡ ಮೊದಲ ಕಾದಂಬರಿಯೆಂಬ ಖ್ಯಾತಿ ಈ ಕೃತಿಗಿದೆ. ಈ ಕೃತಿಯ ವಸ್ತುವಿನ ನಿರ್ವಹಣೆಯು ಸಮಕಾಲೀನ ರಾಜಕೀಯಕ್ಕೆ ಪ್ರತಿಕ್ರಿಯಿಸುವಂತೆಯೇ ಇದೆ ಎಂಬುದನ್ನು ಕಾದಂಬರಿಯ ಒಟ್ಟು ಆಶಯದಿಂದ ತಿಳಿದುಕೊಳ್ಳಬಹುದು. ಬ್ರಿಟಿಷ್ ಆಡಳಿತದ ವಿರುದ್ಧ ಬರೆಯುವ ಸ್ವಾತಂತ್ರ್ಯ ಇಲ್ಲದ ದಿನಗಳಲ್ಲಿ ಈ ಕಾದಂಬರಿ ರೂಪುಗೊಂಡಿದೆ ಎಂಬುದನ್ನು ನೆನಪಿಸಿ ಕೊಂಡರೆ ಇದರ ಮಹತ್ವ ಅರಿವಾದೀತು.

ಕುಂದಲತ

ಮಲಯಾಳಂ ಭಾಷೆಯಲ್ಲಿ ಕಾದಂಬರಿ ಲಕ್ಷಣಗಳನ್ನು ಒಳಗೊಂಡ ಮೊದಲ ಸ್ವತಂತ್ರ ಕೃತಿ 'ಕುಂದಲತ'(೧೮೮೭). ಮಲಯಾಳಂನಲ್ಲಿ ಮೊದಲ ಕಾದಂಬರಿಯೆಂದು ಸಾಹಿತ್ಯ ಚರಿತ್ರೆಕಾರರು ಇದಕ್ಕೆ ಮಹತ್ವವನ್ನು ನೀಡಿದ್ದಾರೆ. ಇದಷ್ಟೆ ಅಲ್ಲದೆ ಮಲಯಾಳಂನ ಮೊದಲ ಸಾಮಾಜಿಕ ಕಾದಂಬರಿ ಚಂದು ಮೇನೋನ್ ಅವರ 'ಇಂದುಲೇಖ'(೧೮೮೯) ಎಂದು ಹೇಳಲಾಗಿದೆ.

ತಿರುವಿದಾಂಕೂರಿನ ಆಯಿಲ್ಯಂ ತಿರುನಾಳ್ ಮಹಾರಾಜನ ಕಾಲದಲ್ಲಿ ಅರಮನೆಯ ಕಾರ್ಯ ಚಟುವಟಿಕೆಗಳ ಉಸ್ತುವಾರಿಯ ಹೊಣೆ ಹೊತ್ತಿದ್ದ ಪಿ.ಗೋವಿಂದ ಪಿಳ್ಳೆ ಬರೆದ 'ಮಲಯಾಳ ಭಾಷಾಚರಿತ್ರೆ'ಯೇ ಮಲಯಾಳಂನ ಮೊದಲ ಸಾಹಿತ್ಯ ಚರಿತ್ರೆಯೆಂದು ಪ್ರಸಿದ್ಧವಾಗಿದೆ. ಇದು ಮೊದಲು ಪ್ರಕಟವಾದುದು ೧೮೮೧ರಲ್ಲಿ. ಇದರ ಪರಿಷ್ಕೃತ ಆವೃತ್ತಿ ಎಂಟು ವರ್ಷಗಳ ನಂತರ ಪ್ರಕಟವಾಯಿತು. ಅದರ ಎರಡನೆಯ ಸಂಪುಟದಲ್ಲಿ ಸೇರಿದ ಕಂಡಿಕೆಯೊಂದು ಹೀಗಿದೆ.

"ಕೊಟಿಕೋಡ್ ತಲಕೊಡಿ ಮಠತ್ತಿಲ್ ಅಪ್ಪು ನೆಡುಜಾಡಿ ಈಗ ಡಿಸ್ಟ್ರಿಕ್ಟ್ ಕೋರ್ಟ್‌ನ ನ್ಯಾಯಾಧೀಶರಾಗಿದ್ದಾರೆ. ಮೊದಲು ಮಲಯಾಳಂ ಭಾಷೆಯಲ್ಲಿ ಓಂತಜಟ ಎಂದು ಇಂಗ್ಲಿಷಿನಲ್ಲಿ ಹೇಳುವ ಮಾದರಿಯ ಒಂದು ಪುಸ್ತಕವನ್ನು ರಚಿಸಿದ್ದು ಇದೇ ವಿದ್ವಾಂಸರು. ಪುಸ್ತಕದ ಹೆಸರು 'ಕುಂದಲತ'. ಅದು ವಿನೋದ ಪ್ರಜ್ಞೆಯಿಂದ ವರ್ಣಿಸುವ ೨೦ ಅಧ್ಯಾಯ ಗಳಿರುವ ಕೃತಿ."

ಈ ಭಾಷಾ ಚರಿತ್ರೆಯ ಪರಿಷ್ಕೃತ ಆವೃತ್ತಿ ಪ್ರಕಟವಾಗುವುದಕ್ಕೂ ಎರಡು ವರ್ಷ ಮೊದಲೇ ೧೮೮೭ ಅಕ್ಟೋಬರ್‌ನಲ್ಲಿ ಅಪ್ಪು ನೆಡುಜಾಡಿಯವರು 'ಕುಂದಲತ'

ಪ್ರಕಟಿಸಿದರು. ಹಾಗಾಗಿ ಇಂಗ್ಲಿಷಿನ ನಾವೆಲ್ ಮಾದರಿಯ ಮೊದಲ ರಚನೆಯೆಂದು 'ಕುಂದಲತ'ವನ್ನು ಒಪ್ಪಿಕೊಳ್ಳುವ ಸಾಹಿತ್ಯ ಅಧ್ಯಯನಕಾರರು ಪ್ರಸ್ತುತ ಮೇಲೆ ಹೇಳಿದ ಭಾಷಾ ಚರಿತ್ರೆಯ ಮಾತುಗಳನ್ನು ಉಲ್ಲೇಖಿಸುವುದಿದೆ. ಮುಂದಿನ ದಿನಗಳಲ್ಲಿ ಮಲಯಾಳಂನ ಮೊದಲ ಕಾದಂಬರಿ ಎಂಬ ಖ್ಯಾತಿ 'ಕುಂದಲತ' ಕೃತಿಗೆ ಸರ್ವತ್ರ ಪ್ರಾಪ್ತವಾಯಿತು. ೧೯೩೦ರಲ್ಲಿ ಕಾದಂಬರಿ ಸಾಹಿತ್ಯದ ರೂಪಲಕ್ಷಣವನ್ನು ತಿಳಿಸುವ ಗ್ರಂಥರಚನೆ ಮಾಡಿದ ಪ್ರೊ. ಎಂ.ಪಿ.ಪೌಲ್‌ಗೂ ಈ ಬಗೆಗೆ ಸಂದೇಹವಿರಲಿಲ್ಲ. 'ಟಿ.ಎಂ. ಅಪ್ಪು ನೆಡುಜಾಡಿಯವರ ಕುಂದಲತ ಎಂಬ ಕೃತಿಯೇ ಕಾದಂಬರಿ ಸಾಹಿತ್ಯದ ಸಾಮಾನ್ಯ ಸ್ವರೂಪವನ್ನು ಆಂಗ್ಲ ಭಾಷೆಯರಿಯದ ಕೇರಳೀಯರಿಗೆ ಮೊದಲು ತಿಳಿಸಿಕೊಟ್ಟಿತು. ಅಲ್ಲದೆ ಕಾದಂಬರಿಯ ಲಕ್ಷಣಗಳನ್ನು ಒಳಗೊಂಡ ಯಾವೊಂದು ಕೃತಿಯೂ ಕೇರಳದಲ್ಲಿ ಅದಕ್ಕೂ ಪೂರ್ವದಲ್ಲಿ ರಚನೆಯಾಗಲಿಲ್ಲ' ಎಂದು ಅವರು ಹೇಳಿದ್ದಾರೆ. ಸಾಹಿತ್ಯಾಸಕ್ತರ ನಡುವೆ ಇಂದಿಗೂ ಇದರಲ್ಲಿ ಅಭಿಪ್ರಾಯ ಭೇದವಿಲ್ಲ.

ಆದರೂ ಮಲಯಾಳಂನ ಮೊದಲ ಕಾದಂಬರಿ 'ಕುಂದಲತ' ಅಲ್ಲ. ಅದು ಬೇರೆಯೇ ಆದ ಇನ್ನೊಂದು ಕೃತಿಗೆ ಸಲ್ಲಬೇಕು ಎಂಬ ವಾದವೂ ಅಲ್ಲಲ್ಲಿ ಕೇಳಿ ಬಂದುದಿದೆ. ವಿಲ್ಲಿಯಂ ಷೇಕ್ಸ್‌ಪಿಯರನ ನಾಟಕವನ್ನಾಧರಿಸಿ ಕಲ್ಲೂರು ಉಮ್ಮನ್ ಪಿಲಿಪ್ಪೋಸ್ ೧೮೬೬ರಲ್ಲಿ ಪ್ರಕಟಿಸಿದ 'ಆಳ್ ಮಾರಾಟ್ಟಂ ಅಥವಾ ಒರು ನಲ್ಲ ಕೇಳಿ ಸಲ್ಲಾಪಂ'(ವ್ಯಕ್ತಿ ಬದಲಾವಣೆ ಅಥವಾ ಒಂದು ಒಳ್ಳೆಯ ಕೇಳಿ ಸಲ್ಲಾಪ) ಎಂಬ ಕೃತಿಯ ಕುರಿತು ಹೇಳುವುದಿದೆ. ಇದನ್ನು ಮಲಯಾಳಂನ ಮೊದಲ ಕಾದಂಬರಿ ಎಂದು ಹೇಳಬೇಕು ಎಂದು ಉಳ್ಳೂರು ತನ್ನ ಕೇರಳ ಸಾಹಿತ್ಯ ಚರಿತ್ರೆಯಲ್ಲಿ ಹೇಳಿದ್ದಾರೆ. ೧೮೮೭ರಲ್ಲಿ ಪುಸ್ತಕ ರೂಪದಲ್ಲಿ ಪ್ರಕಟವಾದ ಆರ್ಚ್‌ಡಿಕನ್ ಕೋಶಿಯ 'ಪುಲ್ಲೇಲಿ ಕುಂಜು'ವಿಗೆ ಮಲಯಾಳಂನ ಮೊದಲ ಕಾದಂಬರಿಯಾಗುವ ಎಲ್ಲಾ ಲಕ್ಷಣಗಳೂ ಇವೆಯೆಂದು ಪ್ರೊ. ಸಿ.ಡಿ.ರಾಮನ್ ನಾಯರ್ ಒಮ್ಮೆ ಅಭಿಪ್ರಾಯವೊಂದನ್ನು ಪ್ರಕಟಿಸಿದ್ದರು. ಕೋಲಿನ್ಸ್ ಮ್ಯಾಡಮ್‌ನ 'ಘಾತಕವಧಂ' ಎಂಬ ಕೃತಿಯು ಮೊದಲ ಮಲಯಾಳಂ ಕಾದಂಬರಿ ಎಂಬೊಂದು ವಾದವೂ ಕೇಳಿ ಬಂದುದಿದೆ.

ಷೇಕ್ಸ್‌ಪಿಯರನ 'ಕಾಮಿಡಿ ಆಫ್ ಎರರ್ಸ್' ನಾಟಕವನ್ನಾಧರಿಸಿದ ಕಲ್ಲೂರು ಉಮ್ಮನ್ ಪಿಲಿಪ್ಪೋಸ್ ಅವರ 'ಆಳ್‌ಮಾರಾಟ್ಟಂ ಅಥವಾ ಒರು ನಲ್ಲ ಕೇಳಿಸಲ್ಲಾಪಂ' ಎಂಬುದು ಒಂದು ರೂಪಾಂತರ ಕೃತಿಯೇ ಹೊರತು ಸ್ವತಂತ್ರ ರಚನೆಯಲ್ಲ. ಕನ್ನಡದಲ್ಲಿಯೂ ಈ ಬಗೆಯ ಚರ್ಚೆಗಳಿವೆಯೆಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಕನ್ನಡದ ಮೊದಲ ಸಾಮಾಜಿಕ ಕಾದಂಬರಿಯೆಂದು ೧೮೯೯ರಲ್ಲಿ ಪ್ರಕಟವಾದ 'ಇಂದಿರಾಬಾಯಿ'ಗೂ ಮೊದಲೇ 'ಭ್ರಾಂತಿ ವಿಲಾಸ' ಎಂಬೊಂದು ಕೃತಿ ೧೮೭೬ರಲ್ಲಿ ಪ್ರಕಟವಾಗಿದೆ. ಇದು ವಿಲ್ಲಿಯಂ ಷೇಕ್ಸ್‌ಪಿಯರ್‌ನ 'ಕಾಮಿಡಿ ಆಫ್ ಎರರ್ಸ್' ನಾಟಕವನ್ನಾಧರಿಸಿದ ಈಶ್ವರಚಂದ್ರ ವಿದ್ಯಾಸಾಗರ ಅವರ ಕೃತಿಯ ಕನ್ನಡಾನುವಾದ. ಬಿ.ವೆಂಕಟಾರ್ಯ ಅವರು ಕಾದಂಬರಿಯೆಂಬ ಹೊಸ ಪ್ರಕಾರದ ಆರಂಭವನ್ನು ಈ ಕೃತಿಯ ಮೂಲಕ ಕನ್ನಡದಲ್ಲಿ ಸಾಧ್ಯವಾಗಿಸಿದ್ದಾರೆ. ಈ ಕೃತಿಯು ಕನ್ನಡದಲ್ಲಿ ಕಾದಂಬರಿ ಪ್ರಕಾರದ ಆರಂಭಕ್ಕೆ ನಾಂದಿ ಹಾಡಿದ ಕೃತಿಯೆಂದೂ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ಪುಲ್ಲೇಲಿ ಕುಂಜು ಪಿಳ್ಳೆ, ರಾಮಪಣಿಕ್ಕರ್, ಉಪದೇಶಿಯಾದ ಕೊಲ್ ಪೋರ್ಟರ್, ಒಬ್ಬ ನಂಬೂದಿರಿ ಇವಿಷ್ಟೇ ಕಥಾಪಾತ್ರಗಳು. ಸಂಭಾಷಣೆ ರೂಪದಲ್ಲಿ ಮಂಡಿಸುವ ಧರ್ಮ ಸಂಬಂಧಿ ಚರ್ಚೆಗಳಿರುವ ಕೃತಿ 'ಪುಲ್ಲೇಲಿ ಕುಂಜು'. ಸಂಭಾಷಣೆಗಳಲ್ಲಿನ ಹಾಸ್ಯ, ನಾಸ್ತಿಕ ವಿಚಾರ ಇತ್ಯಾದಿಗಳಿದ್ದರೂ ಸಂವಾದ ರೂಪದ ಈ ಕೃತಿಯನ್ನು ಕಾದಂಬರಿಯೆಂದು ಸಮ್ಮತಿಸಲಾಗದು' ಎಂಬಿತ್ಯಾದಿ ಅಭಿಪ್ರಾಯಗಳೂ ಪ್ರಕಟವಾಗಿವೆ.

'ಘಾತಕ ವಧಂ' ಮೊದಲ ಕಾದಂಬರಿಯೆನ್ನಲು ಕೆಲವೊಂದು ಪ್ರಬಲವಾದ ಕಾರಣಗಳಿವೆ. ಅದು ಕಾದಂಬರಿ ಪ್ರಕಾರಗಳ ಸತ್ವ, ಸ್ವರೂಪ, ಲಕ್ಷಣಗಳನ್ನು ಹೊಂದಿದ ಕೃತಿಯೆಂಬುದರಲ್ಲಿ ಸಂದೇಹವಿಲ್ಲ. ಅದರ ವಸ್ತು ಕೂಡಾ ಕೇರಳದ ಹಿನ್ನೆಲೆಯಿಂದಲೇ ವಿಸ್ತರಿಸಿದೆ. ಮಿಷನರಿಗಳಾಗಿ ಕೇರಳಕ್ಕೆ ಬಂದ ಕೋಲಿನ್ಸ್ ದಂಪತಿಗಳು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡ ಹೊಲೆಯ ಸಮುದಾಯದ ವ್ಯಕ್ತಿಯೊಬ್ಬನನ್ನು ಕೇಂದ್ರ ಪಾತ್ರವಾಗಿಸಿ 'ಘಾತಕ ವಧಂ' ಕೃತಿಯನ್ನು ರಚಿಸಿದ್ದಾರೆ. ಹೊಸದಾಗಿ ಕ್ರಿಶ್ಚಿಯನ್ ಧರ್ಮವನ್ನು ಸ್ವೀಕರಿಸಿದ ಅವರ್ಣೀಯ ಸಮುದಾಯದವರಲ್ಲಿ ಸುರಿಯಾನಿ ಕ್ರಿಶ್ಚಿಯನ್ ಸಮುದಾಯದ ಅಸಹನೆ, ಅನೀತಿಗಳನ್ನು ತೆರೆದು ತೋರುತ್ತಲೇ, ಹಾಗೆ ಮಾಡದೆ ಪ್ರೀತಿ, ಅನುಕಂಪಗಳನ್ನು ತೋರಬೇಕಾದ ಅಗತ್ಯವನ್ನು ಸಾರಿ ಹೇಳುವ ಕೃತಿಯಿದು. 'ತಿರುವಿದಾಂಕೂರಿನ ಯುವಕರಿಗ ಒಂದು ಉತ್ತಮ ಮಾರ್ಗದರ್ಶಿಯಾಗಿ ಒದಗಬೇಕು ಎಂಬ ಉದ್ದೇಶದೊಡನೆ ಈ ಕೃತಿಯನ್ನು ರಚಿಸಲಾಗಿದೆ ಎಂದು ಕೋಲಿನ್ ಸಾಹೇಬರೂ ಬರೆದಿದ್ದಾರೆ. ಇದೇನೆ ಆದರೂ ಮ್ಯಾಡಮ್ ಬರೆದಿದ್ದು ಅವರ ಮರಣಾ ನಂತರ ಕಾಲಿನ್ಸ್ ಸಾಹೇಬರು ಪ್ರಕಟಿಸಿದ ಕೃತಿ 'ಘಾತಕ ವಧಂ' ಅಲ್ಲ ಅದು The Slayer Slain ಎಂಬ ಇಂಗ್ಲಿಷ್ ಕೃತಿ. ಅದನ್ನು ಅನಾಮಧೇಯರಾದ ಯಾರೋ ಒಬ್ಬರು 'ಘಾತಕ ವಧಂ' ಎಂಬ ಹೆಸರಿನಲ್ಲಿ ಮಲಯಾಳಂಗೆ

ಅನುವಾದಿಸಿದರು. 'ಘಾತಕ ವಧಂ' ಮಲಯಾಳಂನಲ್ಲಿಯೇ ರಚನೆಯಾಗಿ ಪ್ರಕಟವಾಗಿದ್ದರೆ ಅದು ಮೊದಲ ಕಾದಂಬರಿಯೆಂಬ ಹೆಗ್ಗಳಿಕೆಗೆ ಪಾತ್ರವಾಗುತ್ತಿತ್ತು (ಎಂ.ಎಸ್.ಚಂದ್ರಶೇಖರ್ ವಾರಿಯರ್ ಮೊದಲ ಆವೃತ್ತಿಗೆ ಬರೆದ ಪ್ರಸ್ತಾವನೆಯಲ್ಲಿ, ಕುಂದಲತ, ಪು. ೧೩೩).

ಏನೇ ಅಭಿಪ್ರಾಯಗಳು ಬಂದರೂ 'ಕುಂದಲತ' ಕೃತಿಗೆ ಮಲಯಾಳಂ ಮೊದಲ ಕಾದಂಬರಿ ಎಂಬ ಸ್ಥಾನಕ್ಕೆ ಚ್ಯುತಿಯಾಗಲಿಲ್ಲ. 'ಆದ್ಯಕಾಲ ಮಲಯಾಳಂ ನಾವೆಲ್' (ಆರಂಭ ಕಾಲದ ಮಲಯಾಳಂ ಕಾದಂಬರಿ) ಎಂಬ ಕೃತಿಯಲ್ಲಿ ಜಾರ್ಜ್ ಇರುಂಬಯಂ 'ಕುಂದಲತ ಕಾದಂಬರಿ ಲಕ್ಷಣಗಳನ್ನೊಳಗೊಂಡ ಕೃತಿಯೆಂದು ಮುಖಪುಟದಲ್ಲಿ ಕೊಟ್ಟಿರುವ -A Romance in Malayalam - ಎಂಬ ಉಪಶೀರ್ಷಿಕೆಯಿಂದ ಕುಂದಲತವನ್ನು 'ಗದ್ಯ ರೊಮಾನ್ಸ್' ಎಂದು ಹೇಳುವುದು ಉಚಿತ ಎಂಬೊಂದು ವಾದವನ್ನು ಮಂಡಿಸಿದ್ದಿದೆ. ಬಂಗಾಳಿ ಭಾಷೆಯ ಮೊದಲ ಕಾದಂಬರಿ ದುರ್ಗೇಶ ನಂದಿನಿಗೂ ಸಹ ರೊಮಾನ್ಸ್ ಎಂದೇ ಉಪಶೀರ್ಷಿಕೆ ನೀಡಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಇಟಾಲಿಯನ್, ಫ್ರೆಂಚ್, ಸ್ಪಾನಿಷ್, ಪೋರ್ಚುಗೀಸ್ ಭಾಷೆಗಳಲ್ಲಿ ಪದ್ಯರೂಪದಲ್ಲಿ ರಚಿಸಲಾದ ಬೃಹತ್, ಅದ್ಭುತ, ಸಾಹಸಗಾಥೆಯೆಂಬ ವಿವರಣೆಯನ್ನು ನೀಡಲಾಗಿದೆ. ಈ ವಿವರಣೆ ರೊಮಾನ್ಸ್‌ನ ಹಳೆಯ ಅರ್ಥವನ್ನು ತಿಳಿಸುತ್ತದೆ. ಆಧುನಿಕಾರ್ಥದಲ್ಲಿ ಸಮಯ ಕಳೆಯುವ ಓದಿಗೆ ಒದಗುವ ಗದ್ಯ ಪ್ರೇಮಕತೆಗಳನ್ನು ರೊಮಾನ್ಸ್ ಎಂದು ಹೇಳಲಾಗುತ್ತದೆ. ಇದೇ ಅರ್ಥದಲ್ಲಿ ಇಂಗ್ಲಿಷಿನಲ್ಲಿಯೂ ಬಳಸಲಾಗುತ್ತವೆ. ಹಾಗಾಗಿ ರೊಮಾನ್ಸ್ ಎಂಬ ಪದಕ್ಕೆ ಇಂಗ್ಲಿಷ್ ಭಾಷೆಯಲ್ಲಿ Romantic fiction as a literary genre, love story ಇತ್ಯಾದಿ ಅರ್ಥಗಳನ್ನು ನೀಡಲಾಗಿದೆ.

ಆದರೆ ಭಾರತೀಯ ಭಾಷೆಗಳಲ್ಲಿ ರೊಮಾನ್ಸ್ ಮತ್ತು ಕಾದಂಬರಿಯನ್ನು ಎರಡು ಪ್ರತ್ಯೇಕ ಸಾಹಿತ್ಯ ಪ್ರಕಾರಗಳಾಗಿ ನೋಡುವ ಸಂಪ್ರದಾಯವಿಲ್ಲ. ವಸ್ತು, ಪ್ರತಿಪಾದನಾ ವಿಧಾನ ಇತ್ಯಾದಿಗಳಲ್ಲೆಲ್ಲ ಎಷ್ಟೇ ವೈವಿಧ್ಯಗಳಿರಲಿ ಅವೆಲ್ಲವೂ ಕಾದಂಬರಿಗಳೆಂದೇ ಗುರುತಿಸಲಾಗುತ್ತದೆ ಎಂಬುದನ್ನು ಪ್ರೊ. ಎಂ.ಪಿ.ಪೌಲ್ 'ನಾವೆಲ್ ಸಾಹಿತ್ಯ' ಪುಸ್ತಕದಲ್ಲಿ ಪ್ರತಿಪಾದಿಸಿದ್ದಾರೆ. ಇದೇ ಸಂದರ್ಭದಲ್ಲಿ ಕೆ.ಎಂ.ತರಗನ್ ಅವರು ಪ್ರಸ್ತಾಪಿಸಿದ ವಿಷಯವೂ ಗಮನಾರ್ಹವಾಗಿದೆ. ಮಲಯಾಳಂ ಆರಂಭ ಕಾಲದ ಕಾದಂಬರಿಗಳನ್ನು ಸಾಮಾಜಿಕ ಕಾದಂಬರಿ, ರೊಮಾನ್ಸ್‌ಗಳನ್ನು ಒಳಗೊಂಡ ಚಾರಿತ್ರಿಕ ಕಾದಂಬರಿಗಳು, ಪತ್ತೆದಾರಿ ಕಾದಂಬರಿಗಳು, ರಾಜಕೀಯ ಕಾದಂಬರಿಗಳು ಎಂಬಿತ್ಯಾದಿ ನಾಲ್ಕು ವಿಧವಾಗಿ ವರ್ಗೀಕರಿಸಿದ್ದಾರೆ. ವಾಸ್ತವವನ್ನು ಆಧರಿಸಿ ಸಾಮಾಜಿಕ

ಕಾದಂಬರಿಗಳನ್ನು ರೂಪಿಸುವಾಗಲೂ ಶುದ್ಧ ರೊಮಾನ್ಸ್‌ಗಳು ಚರಿತ್ರೆಯ ಕತೆಗಳನ್ನು ಒಳಗೊಂಡಿರುತ್ತವೆ. ಕಾದಂಬರಿ ಪ್ರಕಾರದಲ್ಲಿ ರೊಮಾನ್ಸ್‌ಗಳೂ ಸೇರಿಕೊಂಡಿರುತ್ತವೆ ಎಂಬುದರಿಂದ 'ಕುಂದಲತ'ವನ್ನು ಕಾದಂಬರಿ ಪ್ರಕಾರದಲ್ಲಿ ಸೇರಿಸಲಾಗಿದೆ.

'ಕುಂದಲತ' ಕಾದಂಬರಿಗೆ ಐತಿಹಾಸಿಕವಾಗಿ ಮಲಯಾಳಂನಲ್ಲಿ ಮೊದಲ ಕಾದಂಬರಿ ಎಂಬ ಒಂದು ಮಹತ್ವದ ಸ್ಥಾನವಿದೆ. ಆ ಕಾರಣಕ್ಕಾಗಿ ಸಾಹಿತ್ಯ ಕ್ಷೇತ್ರದಲ್ಲಿ ಲೇಖಕ ಅಪ್ಪು ನೆಡುಜಾಡಿಯೂ ಪ್ರಮುಖರಾದರು. ಅಲ್ಲದೆ ಶಾಲಾ ಪಠ್ಯ ಪುಸ್ತಕವಾಗಿ ಶೈಕ್ಷಣಿಕ ಕ್ಷೇತ್ರವು ಅಂಗೀಕರಿಸಿರುವುದರಿಂದ ಕೇರಳದಾದ್ಯಂತ ಕೃತಿಗೆ ಪ್ರಚಾರವೂ ತನ್ಮೂಲಕ ಪ್ರಸಿದ್ಧಿಯೂ ದೊರೆಯಿತು. ಇದಲ್ಲದೆ ಅಪ್ಪು ನೆಡುಜಾಡಿ ಕಾದಂಬರಿ ರಚನೆಯ ಉದ್ದೇಶವನ್ನು ಸ್ಪಷ್ಟಪಡಿಸಿದ್ದಾರೆ. 'ತಿರುವಿದಾಂಕೂರಿನ ಯುವಕರಿಗೆ ಒಂದು ಮಾದರಿ ಕೃತಿಯನ್ನು ಕೊಡುವುದಕ್ಕೆ ಕೋಲಿನ್ಸ್ ಮ್ಯಾಡಮ್ ಗ್ರಂಥರಚನೆಗೆ ಮುಂದಾದರು. ಅಲ್ಲದೆ ಅವರ ಉದ್ದೇಶ ಒಂದು ಕಾದಂಬರಿ ಮಾದರಿಯನ್ನು ರಚಿಸುವುದಲ್ಲ. 'ಕುಂದಲತ'ದ ಕರ್ತೃವಿಗೆ ಸಾಹಿತ್ಯಕವಾದ ಏಕಮಾತ್ರ ಉದ್ದೇಶವಿದ್ದು ಅದನ್ನು ಹೀಗೆ ಸಂಕ್ಷೇಪಿಸಬಹುದು. 'ಒಂದು ಹೊಸ ಸಾಹಿತ್ಯ ಪ್ರಕಾರಕ್ಕೆ ಬೀಜಾಂಕುರ ಮಾಡುವುದು' ಇದುವೇ 'ಕುಂದಲತ'ಕ್ಕೆ ಸಾಹಿತ್ಯ ಕ್ಷೇತ್ರದಲ್ಲಿ ಅವಿಸ್ಮರಣೀಯವಾದ ಸ್ಥಾನವನ್ನು ದೊರಕಿಸಿ ಕೊಟ್ಟಿದೆ.

ಕುಂದಲತ ಮಲಯಾಳಂನಲ್ಲಿ ಬರೆದ ಕಾದಂಬರಿಯಾದರೂ ಅದರಲ್ಲಿನ ಸ್ಥಳನಾಮಗಳಾಗಲಿ, ವ್ಯಕ್ತಿ ನಾಮಗಳಾಗಲಿ ಯಾವುದೂ ಕೇರಳೀಯವಲ್ಲ. ದಂಡಕಾರಣ್ಯ, ವಿಲ್ವಾದಿಮಲ, ಧರ್ಮಪುರಿ ಗ್ರಾಮ, ಚಂದನೋದ್ಯಾನ, ಕಳಿಂಗ, ಕುಂತಳ ಎಂಬಿತ್ಯಾದಿ ಸ್ಥಳನಾಮಗಳು ಕೇರಳದ ಹೊರಗಿನವುಗಳು. ಪಾತ್ರಗಳಲ್ಲಿ ಕಳಿಂಗರಾಜ ಚಿತ್ರರಥ, ಮಂತ್ರಿಗಳಾದ ಕಪಿಲನಾಥ, ಅಘೋರನಾಥ, ಮಗನಾದ ಪ್ರತಾಪಚಂದ್ರ, ಮಗಳು ಕುಂದಲತ, ಕಪಿಲನಾಥನ ಮಗ ತಾರಾನಾಥ(ರಾಮಕಿಶೋರ) ಮಗಳು ಸ್ವರ್ಣಮಯೀದೇವಿ, ಕುಂತಳರಾಜ ಕೃತವೀರ್ಯ ಹೀಗೆ ಕೇರಳೀಯವಲ್ಲದ ಹೆಸರುಗಳೇ ಪ್ರಮುಖವಾಗಿವೆ.

ಕಳಿಂಗ ಮತ್ತು ಕುಂತಳ ರಾಜ್ಯಗಳ ಪರಸ್ಪರ ಸಂಘರ್ಷವೇ ಕತೆಯ ಮುಖ್ಯ ಎಳೆ. ಸ್ವತಂತ್ರ ರಾಜ್ಯವಾಗುವುದಕ್ಕೆ ಹಂಬಲಿಸುವ ಕುಂತಳ ರಾಜ ಕಳಿಂಗ ರಾಜ್ಯಕ್ಕೆ ಕಪ್ಪ ಕೊಡುವುದನ್ನು ನಿಲ್ಲಿಸಲು ನಿರ್ಣಯಿಸಿದ. ಯಾವುದೇ ರಾಜ್ಯಾಧಿಕಾರಿಯೂ ಬಯಸುವ ಸ್ವಾಭಾವಿಕ ಆಶಯವಿದು. ವೈಯಕ್ತಿಕವಾಗಿ ಕೆಲವೊಂದು ದುಷ್ಟ ಸ್ವಭಾವಗಳಿವೆಯಾದರೂ ಒಬ್ಬ ಆಡಳಿತಾಧಿಕಾರಿಯಾಗಿ ಕೃತವೀರ್ಯ ಸಮರ್ಥನು, ಪ್ರಜಾಪ್ರಿಯನೂ ಆದ ಒಬ್ಬ ಉತ್ತಮ ರಾಜ.

ಸ್ವಯಂ ತನ್ನ ನಾಡಿನ ಪ್ರಜೆಗಳ ಬಗೆಗಷ್ಟೇ ಅಲ್ಲ; ಇತರೇ ರಾಜ್ಯದ ಆಡಳಿತದ ಬಗೆಗೆ ಗೌರವವುಳ್ಳವನು. ಕಳಿಂಗ ರಾಜ್ಯದ ಮಂತ್ರಿ ಅಘೋರನಾಥನ ಮಾತುಗಳಲ್ಲಿ ಈ ವಿಷಯ ಸ್ಪಷ್ಟವಾಗುತ್ತದೆ. ಕುಂತಳೇಶನಲ್ಲಿಗೆ ಕಪ್ಪ ಕೊಡದೆ ಇರುವ ಕಾರಣಕ್ಕೆ ಪತ್ರಸಹಿತ ದೂತನನ್ನು ಕಳಿಂಗ ರಾಜಕುಮಾರ ಅಟ್ಟಿದಾಗ ಮಂತ್ರಿ ಅಘೋರನಾಥ ಆತಂಕಕ್ಕೆ ಒಳಗಾಗುತ್ತಾನೆ. ಯಾಕೆಂದರೆ ಕೃತವೀರ್ಯ ಸಾಮಾನ್ಯನಲ್ಲ. ಆತ ಅತೀ ಪರಾಕ್ರಮಿಯು ಸಮರ್ಥ ಯೋಧನೂ ಸಶಕ್ತನೂ ಆಗಿದ್ದಾನೆ. ಕಡಿಮೆ ಅವಧಿಯಲ್ಲಿಯೇ ಕುಂತಳದ ಪ್ರಗತಿಯನ್ನು ಸಾಧಿಸಿದ ಸಮರ್ಥ ಎಂಬುದು ಅಘೋರನಾಥನಿಗೂ ಗೊತ್ತಿದೆ.

ನೆರೆಯ ರಾಜ್ಯಗಳೊಡನಿರುವ ಕುಂತಳ ರಾಜನ ಸಂಬಂಧವೂ ಚೆನ್ನಾಗಿಯೇ ವರ್ಧಿಸಿದೆ. ಇದು ಕುಂತಳ ರಾಜ್ಯದ ಅಭಿವೃದ್ಧಿ ಸಾಧಿಸಿದ್ದನ್ನು ಮಾತ್ರ ತೋರಿಸುತ್ತಿಲ್ಲ; ಬದಲಾಗಿ ಶತ್ರು ರಾಜ್ಯವೊಂದು ಪ್ರಬಲವಾಗುತ್ತಿರುವುದನ್ನು ಕಳಿಂಗ ರಾಜ್ಯ ಸೂಕ್ಷ್ಮವಾಗಿ ಗ್ರಹಿಸುತ್ತಿವೆಯೆಂಬುದನ್ನು ಸೂಚಿಸುತ್ತಿದೆ. ಕಾದಂಬರಿಯ ಕತೆಯಲ್ಲಿ ಪ್ರತಿನಾಯಕನಾಗಿ ಕಾಣಿಸಿಕೊಳ್ಳುತ್ತಾನಾದರೂ ಕೃತವೀರ್ಯನು ಪ್ರಜಾ ಕ್ಷೇಮದಲ್ಲಿ ತತ್ಪರನಾದ ರಾಜ. ಹಾಗೆಯೇ ಕಳಿಂಗ ರಾಜನ ಶಕ್ತಿಯೆಂದರೆ ಅವನ ಮಂತ್ರಿಗಳು. ರಾಜನೊಬ್ಬನ ಶಕ್ತಿಯೆಂದರೆ ಅವನ ಸೇವಕರು.

"ಪುರುಷ ಶಿರೋಮಣಿಗಳಾದ ಈ ಇಬ್ಬರು ಸೋದರರು ಸಚಿವರಾಗಲು ಸಾಧ್ಯವಾದುದೇ ನಮ್ಮ ಭಾಗ್ಯ. ನಮ್ಮ ದೇಶ ಹೀಗೆ ಐಶ್ವರ್ಯವತಿಯಾಗಿರುವುದರಿಂದ ಪ್ರಬಲರಾದ ಶತ್ರುಗಳ ದುರ್ಮೋಹಗಳು ಫಲಿಸದಿರಲು ನಮ್ಮ ಕುಲಮಹಿಮೆಯೂ ಪ್ರಜ್ವಲಿಸುತ್ತಿರುವುದು ಇಬ್ಬರು ಸೋದರರ ಬುದ್ಧಿ ಕೌಶಲ್ಯದಿಂದ....."(ಪು. ೧೧೪). ಕಳಿಂಗರಾಜ್ಯದ ಅಭಿವೃದ್ಧಿಗೆ ಮಾತ್ರವಲ್ಲ ಅದರ ಅಸ್ತಿತ್ವವೇ ಸುಭದ್ರವಾಗಿರಲು ಮುಖ್ಯ ಕಾರಣ. ಕಪಿಲನಾಥ ಮತ್ತು ಅಘೋರನಾಥರ ಮುಂದಾಲೋಚನೆಯ ಸೂತ್ರಬದ್ಧ ಆಡಳಿತ ವಿಚಾರಗಳು ಎಂಬುದನ್ನು ಸ್ವತಃ ರಾಜನೇ ಸಮ್ಮತಿಸಿದ್ದಾನೆ. ರಾಜ್ಯದ ಪ್ರಗತಿ ಸಾಧಿಸಬೇಕಾದರೆ ಪ್ರಾಮಾಣಿಕವಾದ ಸಹಭಾಗಿತ್ವ, ಜಾಣ್ಮೆ, ಧೈರ್ಯ. ಶೌರ್ಯಗಳಿರುವ ನಂಬಿಕೆಯ ಸೇವಕರು ಯಾವುದೇ ಆಡಳಿತಾಧಿಕಾರಿಗೆ ಅಗತ್ಯ. ಕುಂತಳರಾಜ ತನ್ನ ಮಂತ್ರಿಗಳಿಗಿಂತಲೂ ಶಕ್ತನೂ ಬುದ್ಧಿವಂತನೂ ಹೌದು. ಆದರೆ ಕಳಿಂಗರಾಜ್ಯದ ಪರಿಸ್ಥಿತಿ ಇದಕ್ಕೆ ವ್ಯತಿರಿಕ್ತವಾದುದು. ಇಲ್ಲಿ ರಾಜನಿಗಿಂತಲೂ ಮಂತ್ರಿಗಳು ಬುದ್ಧಿವಂತರು, ಶಕ್ತರು. ಕಳಿಂಗ ಕುಂತಳ ರಾಜ್ಯಗಳ ನಡುವಿನ ಯುದ್ಧದಲ್ಲಿ ಗೆಲುವು ಕಳಿಂಗರಾಜ್ಯದ್ದೇ ಎಂಬುದರಿಂದ ಆಡಳಿತದ ಆಂತರ್ಯದ ವ್ಯತ್ಯಾಸ ಗಮನಾರ್ಹವಾಗುತ್ತದೆ.

ರಾಜ್ಯ ಆಡಳಿತದಲ್ಲಿ ಆಳುವವರು ಮತ್ತು ಪ್ರಜೆಗಳ ನಡುವಿನ ಸೌಹಾರ್ದ ಸಂಬಂಧವೂ ಅಷ್ಟೇ ಮುಖ್ಯವಾಗುತ್ತದೆ. ಕಳಿಂಗ ಪ್ರತಾಪಚಂದ್ರ, ಬೇಡರ ಕರಚ ಮತ್ತು ಅವನ ಪರಿವಾರ ದವರ ಜೊತೆಗಿನ ಮಾತುಕತೆಗಳು, ಸ್ನೇಹ ಸಂಬಂಧಗಳು ರಾಜಕೀಯದ ತಂತ್ರಗಾರಿಕೆಯ ಭಾಗವೇ ಆಗಿದೆ.

'ಅಡಿಯಾಳುಗಳಾದ ನಾವು ಆಕಾಶದಲ್ಲಿರುವ ಚಂದ್ರನನ್ನು ಹಿಡಿದು ತರಬೇಕೆಂದು ಹೇಳಿದರೂ ತರಲು ಸಿದ್ಧರಿದ್ದೇವೆ' ಎಂಬ ಬೇಡ ರಾಜನ ಮಾತುಗಳು ರಾಜ್ಯದ ಹಾಗೂ ರಾಜನ ಸುಭದ್ರತೆಯನ್ನು ಬಿಗಿಗೊಳಿಸುತ್ತವೆ. ಬೇಡ ಸಮುದಾಯದವರು ತಮ್ಮಿಂದಲೂ ಪೂರ್ವನಿವಾಸಿಗಳು ಎಂಬ ನಿಲುವು ರಾಜನದು, ನಾಡಿನ ಪ್ರಜೆಗಳದು. ಆದರೂ ಬೇಡರ ಭೇಟಿಯ ಸಂದರ್ಭದಲ್ಲಿ ಪರಸ್ಪರ ಕೊಡುಗೆಗಳನ್ನು ಕೊಡುವ ಪಡೆಯುವ ವಿದ್ಯಮಾನಗಳು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಗಮನಾರ್ಹವೆನಿಸುತ್ತದೆ. ನಾಡನ್ನಾಳುವ ದೊರೆಗಳಿಗೂ ಪ್ರಜೆಗಳಿಗೂ ಹಾಗೆಯೇ ನೆರೆಯ ರಾಜರುಗಳೊಡನೆ ಸೌಹಾರ್ದ ಸಂಬಂಧ ಆರೋಗ್ಯಕರವಾಗಿರ ಬೇಕೆಂಬುದನ್ನು ಕಾದಂಬರಿ ತಿಳಿಸುತ್ತದೆ. ಕುಂತಳ ಮತ್ತು ಮಗಧ ರಾಜ್ಯಗಳ ಸ್ನೇಹ, ಕಳಿಂಗ, ಚೇದಿ, ಆವಂತಿ ರಾಜ್ಯಗಳ ನಡುವಿನ ಬಾಂಧವ್ಯ ಎಂಬಿವು ಇಲ್ಲಿ ಯುದ್ಧದ ನಿರ್ಣಾಯಕ ಶಕ್ತಿಗಳಾಗಿವೆ. ನೆರೆರಾಜ್ಯಗಳು ಪರಸ್ಪರ ಸಂಬಂಧದ ಸೂಕ್ಷ್ಮವನ್ನು ತಿಳಿಯಲು ಸಮರ್ಥರಾದ ಗೂಢಚಾರರನ್ನು ನಿಯೋಜಿಸಿದ್ದವು ಎಂಬುದೂ ತಿಳಿಯುತ್ತದೆ.' ಮಗಧೇಶ್ವರ ಮತ್ತು ಯವನರು ತಮ್ಮೊಳಗೆ ಆಂತರಂಗಿಕವಾಗಿ ಪರಸ್ಪರ ಮೇಲುಗೈಗಾಗಿ ಸ್ಪರ್ಧೆಯಲ್ಲಿ ದ್ದಾರೆಂಬುದನ್ನು ಗೂಢಚಾರರ ಮೂಲಕ ತಿಳಿದಿದೆ ಎಂಬ ಕುಂತಳೇಶನ ಮಾತುಗಳಿಂದ ರಾಷ್ಟ್ರ ರಕ್ಷಣೆಯಲ್ಲಿ ಗೂಢಚಾರರ ಪಾತ್ರವೇನೆಂಬುದು ತಿಳಿಯುತ್ತದೆ.

ಯುದ್ಧಾನಂತರ ಕಳಿಂಗ ಮಂತ್ರಿ ಕುಂತಳರಾಜನೊಡನೆ ಶರಣಾಗತಿಗೆ ಹೇಳುವ ಯುಕ್ತಿಯ ಮಾತು ಹೀಗಿದೆ: "ಧೈರ್ಯಶಾಲಿಗಳೂ ಸ್ವಾಮಿ ಭಕ್ತಿಯುಳ್ಳವರಾದ ಈ ಕಾಣುವ ಜನರು ತಮ್ಮ ಅಮೂಲ್ಯ ಪ್ರಾಣವನ್ನು ಅನಗತ್ಯವಾಗಿ ದುರಭಿಮಾನದಿಂದ ಅಪಮೃತ್ಯುವಿಗೊಳಪಡಿಸಿ ನಾಶಪಡಿಸಲು ಮುಂದಾಗುವುದಕ್ಕಿಂತ ಹೆಚ್ಚಿನದಾದ ಅವಮಾನ ಬೇರೆ ಏನಿದೆ?" ಸ್ವಯಂ ತನ್ನ ರಾಜನ ಮಾನ ಕಾಯುವ ಕಳಿಂಗ ಮಂತ್ರಿ ಶತ್ರುರಾಜನ ಹಾಗೂ ಅವನ ಪ್ರಜೆಗಳನ್ನು ಕಾಪಾಡುತ್ತಾನೆ. ಯುದ್ಧದ ಆತ್ಯಂತಿಕ ಪರಿಣಾಮ ಪ್ರಾಣಹಾನಿ. ಶತ್ರು ಮಿತ್ರರೆಂಬ ಭೇದವಿಲ್ಲದೆ ಮನುಷ್ಯರ ಪ್ರಾಣವನ್ನು ನಾಡಿನ ಸಂಪತ್ತನ್ನು ಸಂರಕ್ಷಿಸಬೇಕೆಂಬ ವಿಶಾಲವಾದ ದೃಷ್ಟಿಕೋನವೊಂದು ಇಲ್ಲಿ ಇದೆ. ರಾಜನ, ರಾಜಸೇವಕರ ಸಂಯಮ, ಅವರಲ್ಲಿ ಪರಸ್ಪರ ಇರುವ

ಗಾಢವಾದ ಸಂಬಂಧ, ಪ್ರಜಾಕ್ಷೇಮ ತತ್ಪರತೆ, ಧೈರ್ಯ, ದೃಢ ನಿಲುವು. ಐಕ್ಯತೆ ಮುಂದಾಲೋಚನೆ ಎಂಬಿತ್ಯಾದಿಗಳು ಒಂದು ರಾಷ್ಟ್ರ ಸ್ಥಿರವಾಗುಳಿಯುವುದಲ್ಲದೆ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ. ಅದರ ಜೊತೆಗೆ ಸ್ವತಃ ನಾಡಿನ ಮಾತ್ರವಲ್ಲದೆ ಶತ್ರುರಾಜ್ಯಗಳ ಮಾನವರ ಪ್ರಾಣವೂ ಅಮೂಲ್ಯವಾದುದೆಂಬುದನ್ನು ಅಂಗೀಕರಿಸಲು ಸನ್ನದ್ಧವಾಗುವ ರಾಷ್ಟ್ರದ ನೇತಾರರು. ರಾಷ್ಟ್ರದ ಸೇವಕರಿಗೂ ಅದುವೇ ಬೇಕಾಗಿದೆ. ಆಗ ಮಾತ್ರ ಶಕ್ತವಾದ ಒಬ್ಬ ರಾಜ್ಯಾಧಿಕಾರಿ ಒಳ್ಳೆಯವನಾಗುವುದು, ಶಕ್ತವಾದ ಒಂದು ರಾಷ್ಟ್ರ ಮಹತ್ವದ್ದಾಗುವುದು. ಬ್ರಿಟಿಷ್ ಆಡಳಿತಾವಧಿಯಲ್ಲಿ ಪರಸ್ಪರ ಯುದ್ಧ ಮಾಡಿ ಸಾವು ನೋವುಗಳಿಂದ ಚದುರಿಹೋದ ಪ್ರಜಾ ಜನರು, ರಾಜರುಗಳು, ನಾಡದೊರೆಗಳು ಇದ್ದ ಸ್ವಾತಂತ್ರ್ಯಪೂರ್ವ ಕಾಲಘಟ್ಟದಲ್ಲಿ ಬರೆದ ಕುಂದಲತದ ವಿವರಗಳು ಆಡಳಿತದಲ್ಲಿ ರಾಷ್ಟ್ರಾಭಿಮಾನವನ್ನು ಪ್ರೇರಿಸುವಂತಿದೆ.

ಮಹಿಳೆಯರಿಗಾಗಿ ಕಾದಂಬರಿ

ಕಾದಂಬರಿಗಳು ಹೆಚ್ಚಾಗಿ ಗೃಹಕೃತ್ಯಗಳನ್ನು ಮುಗಿಸಿ ಬಿಡುವಿನ ಸಮಯದಲ್ಲಿ ಆರಾಮವಾಗಿ ಮನೆಯಲ್ಲಿ ಕಾಲಹರಣ ಮಾಡುವ ಮಹಿಳೆಯರಿಗಾಗಿ ಬರೆದುದೆಂದು ಆರಂಭ ಕಾಲದ ಕಾದಂಬರಿಕಾರರು ಹೇಳಿಕೊಂಡಿದ್ದಾರೆ. ಹಾಗೆ ನೋಡಿದರೆ ಕಾದಂಬರಿಯ ಓದುಗರಲ್ಲಿ ಹೆಚ್ಚಿನವರೂ ಮಹಿಳೆಯರೇ. ಈ ಪ್ರಕಾರಕ್ಕೆ ಜನಪ್ರಿಯ ಎಂಬ ವಿಶೇಷಣ ಸೇರಿಸುವಲ್ಲಿ ಮಹಿಳಾ ಓದುಗರ ಕೊಡುಗೆ ಅಪಾರವಿದೆ. ಅಪ್ಪು ನೆಡುಜಾಡಿಯವರು ಕಾನೂನು ಪರೀಕ್ಷೆಯಲ್ಲಿ ಅನುತ್ತೀರ್ಣರಾದಾಗ ದುಃಖ ನಿವಾರಣೆಯ ನೆಪದಲ್ಲಿ ಕುಂದಲತವನ್ನು ಬರೆದರೆಂದು ಅವರ ಮಗಳು ಹೇಳಿದರೆಂದು ವಿದ್ವಾಂಸರೊಬ್ಬರು ಬರೆದಿದ್ದಾರೆ(ಗೀತಾ, ಪು. ೧೧). ಆದರೆ ಕಾದಂಬರಿಕಾರರು ಹೇಳುವುದು ಹೀಗೆ. ಈ ಪುಸ್ತಕ ಇಂಗ್ಲಿಷ್ ತಿಳುವಳಿಕೆಯಿಲ್ಲದ ಬಹು ಜನರಿಗೆ ವಿಶೇಷವಾಗಿ ಸಮಯ ಕಳೆಯಲು ಕಷ್ಟಪಡುವ ಮಹಿಳೆಯರಿಗೆ ಹಿಡಿಸಬಹುದಾದ ದೋಷರಹಿತವಾದ ಮನರಂಜನೆಗೆ ಕಾರಣವಾಗಿದೆ ಎಂದು ನಾನು ಭಾವಿಸುತ್ತೇನೆ. ಆದರೆ ಮಲಯಾಳಿಗರಲ್ಲಿ ಹೆಚ್ಚಿನ ಜನರು ಮೇಲೆ ಹೇಳಿದ ಕಷ್ಟದ ಸ್ಥಿತಿಯನ್ನು ಹೋಗಲಾಡಿಸಿದರೆ ಒಳ್ಳೆಯದೆಂಬುದರಲ್ಲಿ ನನಗೆ ಮೋಹವಿದೆಯಾದರೂ ಆ ರೀತಿ ಬದಲಾವಣೆ ಮಾಡುವ ಅರ್ಹತೆ ಇದಕ್ಕೆ ಇದೆಯೆಂದು ನಾನು ಭಾವಿಸಿಲ್ಲ. ನಂತರ ಬಂದ 'ಇಂದುಲೇಖ'ದಲ್ಲಿ ಚಂದು ಮೇನೋನ್ ಮುನ್ನುಡಿಯಲ್ಲಿ ಹೇಳಿದ ವಿಷಯಗಳು ಕುಂದಲತದ ಮುನ್ನುಡಿಯ ಮಾತುಗಳಿಗೂ ಸಂಬಂಧವಿರುವುದು ಸ್ಪಷ್ಟ.

'ಹೇಳಿಕೊಳ್ಳುವ ಕೆಲಸವಿಲ್ಲದ ಮಹಿಳೆಯರು ಮಧ್ಯಮ ವರ್ಗದವರಲ್ಲಿ

ಹೆಚ್ಚಾಗಿದ್ದಾರೆ. ಈ ರೀತಿಯಲ್ಲಿ ಮಹಿಳೆಯರನ್ನು ಲಕ್ಷ್ಯವಾಗಿರಿಸಿಕೊಂಡು ಕುಂದಲತ ಬರೆದುದೆಂಬ ಕೃತಿಕಾರರ ಪ್ರಸ್ತಾವನೆಯನ್ನು ತಳ್ಳಿ ಹಾಕುವಂತಿಲ್ಲ. ಹೆಣ್ಣುಮಕ್ಕಳಿಗೆ ಅಕ್ಷರವನ್ನೆ ನಿಷೇಧಿಸಿದ ಪರಂಪರೆಯೊಂದನ್ನು ಒಡೆಯುವುದೇ ಓದುಗರನ್ನು ಕುರಿತ ಈ ಸಂಕಲ್ಪ. ಅಕ್ಷರವಿಲ್ಲವಾದರೆ ಬರೆಹಗಾರ್ತಿಯೆಂದೇಕೆ, ಓದುಗರೂ ಸೃಷ್ಟಿಯಾಗಲಾರರು. ಓದು, ಬರವಣಿಗೆಯನ್ನು ಕಲಿಯಲಾರಂಭಿಸಿದ ಹೆಣ್ಣುಮಕ್ಕಳಿಗಾಗಿ ಬರೆದುದೆಂದು ಬಹಿರಂಗವಾಗಿ ಪ್ರಸ್ತಾವನೆಯೊಡನೆ ಬರುವ ಈ ಕೃತಿಯಲ್ಲಿ ಹೆಣ್ಣಿನ ಪಾತ್ರವೇನೆಂಬುದನ್ನು ಸಹ ಗುರುತಿಸುವ ಅಗತ್ಯವಿದೆ.'

ಸ್ತ್ರೀ ಕಥಾ ಪಾತ್ರಗಳು: ಪ್ರಮುಖವಾಗಿ ಐದು ಸ್ತ್ರೀ ಕಥಾ ಪಾತ್ರಗಳು ಈ ಕಾದಂಬರಿಯಲ್ಲಿವೆ. ಕುಂದಲತ, ಸ್ವರ್ಣಮಯೀದೇವಿ, ಪಾರ್ವತಿ, ಅಘೋರನಾಥನ ಹೆಂಡತಿ, ಬೇಡರ ಮಹಿಳೆ ಕುಂದಲತ. ಕಳಿಂಗ ರಾಜನ ಮಗಳು ಹದಿನೆಂಟರ ಹರೆಯದ ಕಥಾ ನಾಯಕಿಯಾದ ಕುಂದಲತ. ಯೋಗೀಶ್ವರನಾದ ಕಪಿಲನಾಥನ ವಾತ್ಸಲ್ಯಕ್ಕೆ ಭಾಜನನಾದವಳು. ಅತ್ಯಂತ ಸುಂದರಿ, ಆರೋಗ್ಯವತಿಯೂ ಆದ ಆಕೆಯಲ್ಲಿ ಪರಂಪರಾಗತವಾದ ಹೆಣ್ಣಿನ ಭಾವ, ಸದ್ಗುಣಗಳೆಲ್ಲವೂ ಇವೆ. ಸಾಧು ಸ್ವಭಾವ, ದಯೆ, ಪ್ರೀತಿ, ಅಧರ್ಮದ ಬಗೆಗಿನ ಭಯ, ವಿನಯ, ಲಜ್ಜೆ ಹೀಗೆ ಎಲ್ಲಾ ಸದ್ಗುಣಗಳು ಮೇಳೈಸಿದ ಆದರ್ಶ ಹೆಣ್ಣು. 'ಸಾಮಾನ್ಯವಾಗಿ ಸ್ತ್ರೀಯರಲ್ಲಿರುವ ದುಷ್ಟ ಸ್ವಭಾವಗಳು, ವಕ್ರಬುದ್ಧಿಗಳು, ಚಪಲತೆಗಳು' ಕುಂದಲತಳಿಗಿಲ್ಲ ಎಂಬುದನ್ನು ಪ್ರತ್ಯೇಕವಾಗಿ ಹೇಳಲಾಗಿದೆ. ಅಂದರೆ ಸಾಮಾನ್ಯರಾದವರಿಗೊಂದು ಉತ್ತಮ ಆದರ್ಶವಾಗುವ ರೀತಿಯಲ್ಲಿ ಒಳ್ಳೆಯವಳಾದ ಕುಂದಲತಳನ್ನು ಕಾದಂಬರಿ ಲಕ್ಷ್ಯವಾಗಿಸಿದೆ. ಆದರೆ ರೂಪಲಾವಣ್ಯಗಳು ಗುಣ ಸ್ವಭಾವಗಳು ಮಾತ್ರವೇ ಅಲ್ಲ, ಬುದ್ಧಿ ಸಾಮರ್ಥ್ಯವೂ ಇದೆಯೆಂದಾಗ ಅವಳು ಅನನ್ಯಳೇ ಆಗುತ್ತಾಳೆ.

ಹನ್ನೆರಡರ ಪ್ರಾಯದಲ್ಲಿ ಅವಳು ಅಕ್ಷರ ಕಲಿಯಲಾರಂಭಿಸಿದಳು. ಯೋಗೀಶ್ವರ ಆಕೆಗೆ ಕೊಡುವ ಶಿಕ್ಷಣವು ವಿಶಿಷ್ಟವಾದುದು. ಕಾವ್ಯ, ನಾಟಕ, ಅಲಂಕಾರ, ಸಂಗೀತಗಳನ್ನೊ ಅವಳಿಗೆ ಕಲಿಸುವುದಿಲ್ಲ. ಅದಕ್ಕೆ ಯೋಗೀಶ್ವರನದ್ದೇ ಆದ ಕಾರಣವೂ ಇದೆ. 'ಆ ಬಗೆಯ ಕಲಿಕೆಗಳು' ವ್ಯರ್ಥ. 'ಕಾಂಚೀಕಂಕಣಾದಿಗಳಿಂದ ಕುರೂಪಿಗಳು ಶೋಭಿಸುತ್ತಾರೆಯೇ?' ಸಂಗೀತ ಸಾಹಿತ್ಯಾದಿಗಳು ಇದ್ದರೂ ದುರ್ಬುದ್ಧಿಯುಳ್ಳವರು ವಂದನೀಯರಾಗುತ್ತಾರೆಯೇ?' ಮನಸ್ಸನ್ನು ನಿರ್ಮಲಗೊಳಿಸುವುದು ಸುಜ್ಞಾನವನ್ನಾಗಿಸುವುದು ಶಿಕ್ಷಣದ ಧರ್ಮ.

ಹಾಗಾಗಿ ತನ್ನ ಸುತ್ತಮುತ್ತಲಿನ ಪ್ರಕೃತಿ ಪರಿಸರಗಳಿಂದ ನೇರವಾಗಿ ಕಲಿತುಕೊಳ್ಳುವುದನ್ನು ಯೋಗೀಶ್ವರ ಆಕೆಗೆ ಕಲಿಸಿದ್ದಾನೆ. ರಾಜಕುಮಾರಿಯೇ

ಆಗಿದ್ದರೂ ಕುಂದಲತಳನ್ನು ಮನೆಯ ಹೊರಗಡೆ ಜೊತೆಗೂಡಿಕೊಂಡೇ ನಡೆದ. ಕಲಿಸುವ ಸಂಪ್ರದಾಯವಿಲ್ಲದ ಕಾಲವಾಗಿದ್ದರೂ ಅಂದಿನ ಶಿಕ್ಷಣ ವ್ಯವಸ್ಥೆಯಿಂದ ವಿಭಿನ್ನವಾಗಿ ಪರಿಸರಕ್ಕೆ ಹೊಂದುವಂತಹ ವಿಷಯಗಳನ್ನು ಕಲಿಯಲು ಕುಂದಲತಳಿಗೆ ಅವಕಾಶ ದೊರೆಯಿತು. ಹೂ ಗಿಡಗಳ ಜೊತೆ ಹಲವು ಮರಗಳನ್ನು ಅವಳು ನೆಟ್ಟು ನೀರೆರೆದು ಪೋಷಿಸಿದಳು. ಸಂಶಯಗಳನ್ನು ಕೇಳಿ ಅರ್ಥೈಸಿಕೊಳ್ಳಲು ಸ್ವತಹ ದೃಷ್ಟಾಂತಗಳನ್ನು ಹುಡುಕಿ ಕಂಡುಕೊಳ್ಳುವುದರಲ್ಲಿಯೂ ಅವಳಿಗೆ ಆಸಕ್ತಿಯಿತ್ತು. ಲೋಕದ ವಿಷಯಗಳನ್ನು ಮಾತನಾಡುವ ಪ್ರೀತಿಸುವ ಅವಳಲ್ಲಿ ಮನೆಯ ಹೊರಗಿಳಿದು ನಡೆದಾಡುವ ಒಬ್ಬಾಕೆ ಹೆಣ್ಣು ಮಗಳನ್ನು ಕಾಣಬಹುದು. ರಾಷ್ಟ್ರೀಯತೆಯ ಸಾಮಾಜಿಕ ಧ್ವನಿಗಳನ್ನು ಈ ರೀತಿಯಲ್ಲಿ ದಾಖಲಿಸಲಾಗಿದೆ.

ಸ್ವರ್ಣಮಯೀದೇವಿ ಅಘೋರನಾಥನ ಆಶ್ರಯದಲ್ಲಿ ಕಳೆಯುವ ಕಪಿಲನಾಥನ ಮಗಳು. ಹದಿನೇಳರ ಹರೆಯದ ಈಕೆ ಸಹೋದರನಾದ ತಾರಾನಾಥ ಹಾಗೂ ರಾಜಕುಮಾರನಾದ ಪ್ರತಾಪಚಂದ್ರರ ಒಡನಾಟದಲ್ಲಿ ಬೆಳೆದವಳು. ಹೆಣ್ಣಾದರೂ ಈಕೆಯ ಮೇಲೆ ಯಾರೂ ಯಾವುದೇ ಬಗೆಯ ನಿಯಂತ್ರಣಗಳನ್ನು ಹೇರಿದಂತೆ ಕಾದಂಬರಿಯಲ್ಲಿ ಕಾಣಿಸುವುದಿಲ್ಲ. ಸಹೋದರ ಮತ್ತು ರಾಜಕುಮಾರ ಈ ಇಬ್ಬರು ಯುವಕರ ಜೊತೆಗೆ ಸ್ವತಂತ್ರವಾಗಿ ವ್ಯವಹರಿಸಲು, ಸಲ್ಲಾಪ ನಡೆಸಲು ಸಾಧ್ಯವಾಗುತ್ತದೆ. ಯಾರೂ ಅಡ್ಡಿಪಡಿಸುವವರಿಲ್ಲ. ಇವಳೂ ಬುದ್ಧಿ ಸಾಮರ್ಥ್ಯವಿರುವವಳೆಂದೇ ಕಾದಂಬರಿಯಿಂದ ತಿಳಿಯುತ್ತದೆ. ಪುರುಷರಂತೆ ಬುದ್ಧಿ ಸಾಮರ್ಥ್ಯವೂ ಸನ್ಮಾರ್ಗ ನಿಷ್ಠೆ, ಅಷ್ಟೇ ಅಲ್ಲ; ತನಗೆ ತಾನು ಸ್ವಾಭಿಮಾನವುಳ್ಳವಳೂ ಹೌದು. ಪ್ರಣಯದಲ್ಲಿಯೂ ದಾಂಪತ್ಯದಲ್ಲೂ ಸ್ವರ್ಣಮಯಿಯಿಂದ ಈ ಕೆಚ್ಚು ಪ್ರಕಟವಾಗುತ್ತದೆ. ರಾಣಿಯಾದ ಬಳಿಕ ತನ್ನ ಗಂಡನ ಧರ್ಮಸಂಕಟಕ್ಕೆ ಪರಿಹಾರ ಕಂಡುಕೊಳ್ಳಲು ಮಂತ್ರಿಯನ್ನು ಕರೆಯಲು ಈಕೆಯೇ ಯಾವುದೇ 'ಆಡಂಬರಗಳಿಲ್ಲದೆ' ಹೋಗುತ್ತಾಳೆ. ಮದುವೆಗೂ ಮೊದಲು 'ಈ ರೀತಿಯ ವದಂತಿಗಳನ್ನು ತಿಳಿದುಕೊಳ್ಳಲು ಹೆಣ್ಣುಮಕ್ಕಳಿಗೆ ತುಂಬಾ ಸಾಮರ್ಥ್ಯವಿದೆ' ಎಂದು ಪ್ರಿಯತಮ ತಮಾಷೆ ಮಾಡಿದಾಗ 'ಪುರುಷರು ಏನೂ ಕಡಿಮೆಯಿಲ್ಲ' ಎಂಬ ತಕ್ಷಣದ ಪ್ರತಿಕ್ರಿಯೆಯನ್ನು ಕೊಡಬಲ್ಲ ಚತುರೆ.

ಇತರ ಸ್ತ್ರೀ ಪಾತ್ರಗಳು: ಅಘೋರನಾಥನ ಹೆಂಡತಿ ಹೆರದೆ ಇದ್ದರೂ ಕಪಿಲನಾಥನ ಮಕ್ಕಳಾದ ತಾರಾನಾಥ ಮತ್ತು ಸ್ವರ್ಣಮಯಿಯನ್ನು ಮಾತೃವಾತ್ಸಲ್ಯದಿಂದ ಪೋಷಿಸಿದವಳು. ರಾಜನ ಓಲಗ ಭಾವಡಿಗೆ ಪ್ರವೇಶಾವಕಾಶವಿರುವವಳು. ಬೇಡರ ಮಹಿಳೆ ರಾಮದಾಸನ ತಾಯಿಯಾದ ಶೂದ್ರ ಮಹಿಳೆ ಮತ್ತು ಆಕೆಯ ಮಗಳು ಯುದ್ಧದ ಒಂದು ಸಂದರ್ಭದಲ್ಲಿ ನೆರವಾಗುತ್ತಾರೆ. ಇವರೆಲ್ಲರೂ ಕಾದಂಬರಿಯಲ್ಲಿ

ಬರುವ ಪಾತ್ರಗಳೇ ಆದರೂ ಮೌನಿಗಳು. ಕುಂದಲತಳ ಸಾಕುತಾಯಿಯಾಗಿ ಪಾರ್ವತಿ ಎಂಬೊಬ್ಬ ಮಹಿಳೆಯಿದ್ದಾಳೆ. ಈಕೆ ಊಟದ ಮತ್ತು ಮಲಗುವ ಸಮಯವಾಯಿತೆಂಬುದನ್ನು ತಿಳಿಸುವಷ್ಟು ಮಾತ್ರ ಮಾತನಾಡುವವಳು.

ಮಲಯಾಳಂ ಸಾಹಿತ್ಯದ ಮಣಿಪ್ರವಾಳ ಪರಂಪರೆಗಿಂತ ತೀರಾ ವ್ಯತ್ಯಸ್ಥವಾದ ಸ್ತ್ರೀ ಪಾತ್ರ ಚಿತ್ರಣಗಳು 'ಕುಂದಲತ'ದ ಮೂಲಕ ದೊರೆಯುತ್ತದೆ ಎಂಬುದನ್ನು ವಿಮರ್ಶಕರು ಗುರುತಿಸಿದ್ದಾರೆ. ಹೆಣ್ಣು ಕೇವಲ ಭೋಗ ವಸ್ತುವಲ್ಲ. ಸ್ತ್ರೀಯ ಅಂಗೋಪಾಂಗಗಳನ್ನು ವರ್ಣಿಸುವಲ್ಲಿಯೂ ಕಾದಂಬರಿ ಹಿಂಜರಿಯುವುದಿಲ್ಲ. ಅವಳಿಗೆ ಮಾತನಾಡುವುದಕ್ಕೂ ಮಾತನಾಡದೆ ಇರುವುದಕ್ಕೂ ತಿಳಿದಿದೆ. ಒಳಗೂ ಹೊರಗೂ ಈಕೆ ಸಂಚರಿಸುತ್ತಾಳೆ. ಬುದ್ಧಿ, ತಂತ್ರಕೌಶಲ್ಯಗಳ ಮಹಿಳೆಯರಿವರೆಂದು ಕಾದಂಬರಿ ತಿಳಿಸುತ್ತದೆ. ಇಂದಿನ ದಿನಗಳಲ್ಲಿ ಮೌಲ್ಯಮಾಪನ ಮಾಡುವಾಗ ಈ ಎಲ್ಲಾ ಸ್ತ್ರೀ ಪಾತ್ರಗಳು ಸುಂದರಿಯರೂ ಸದಾಚಾರ ಸಂಪನ್ನರೂ ಆದ ಪರಂಪರಾಗತ ಸ್ತ್ರೀ ಪಾತ್ರಗಳೇ ಆಗಿವೆ. ಅಂದರೆ ಶತಮಾನಗಳಿಗೂ ಹಿಂದೆ ಪ್ರಣಯಿನಿಯಾಗಿ ಚಿತ್ರಿಸುವುದು ಕಾಮಸ್ವರೂಪಿಣಿಯಾಗಿ ಚಿತ್ರಿಸುವಷ್ಟು ಸುಲಭವಾಗಿರಲಿಲ್ಲ. ಶಿಕ್ಷಿತಳಾಗಿ ಬುದ್ಧಿಶಾಲಿಯಾಗಿ ಚಿತ್ರಿಸುವುದು ಸುಂದರಿಯೂ ಸುಶೀಲೆಯೂ ಆಗಿ ಚಿತ್ರಿಸುವಷ್ಟು ಸುಲಭವಿರಲಿಲ್ಲ. ಅಂದು ಒಬ್ಬಾಕೆ ಹೆಣ್ಣಿಗೆ ವ್ಯಕ್ತಿತ್ವವಿದೆಯೆಂದು ಚಿತ್ರಿಸುವುದು ಅಷ್ಟೇ ಕಷ್ಟಕರವಾದ ಕೆಲಸವಾಗಿತ್ತು. ರಾಷ್ಟ್ರೀಯ ನವೋತ್ಥಾನ ಮತ್ತೆ ನವೋದಯ ರೂಪಿಸಿದ ಆಧುನಿಕ ಸ್ತ್ರೀಯರು ಮಲಯಾಳ ಸಾಹಿತ್ಯಕ್ಕೆ ಬಂದುದು ಕಾದಂಬರಿಗಳ ಮೂಲಕ. ಅದರಲ್ಲಿ ಕುಂದಲತ ಮೊದಲನೆಯದು.

ಗಂಡು ಹೆಣ್ಣಿನ ಸಂಬಂಧಗಳು: ದೈನಂದಿನ ಬದುಕಿನಲ್ಲಿ ಗಂಡು ಹೆಣ್ಣುಗಳು ಒಳಗೊಳ್ಳು ವುದರಿಂದಲೇ ಮಾನವ ಸಂಸ್ಕಾರಗಳು ಬೆಳೆದುಬಂದಿವೆ. ಪುರುಷರಾದ ಮಾತ್ರಕ್ಕೆ ಅವರಿಗೆ ವಿಧೇಯರಾದ ಹೆಣ್ಣುಗಳನ್ನಷ್ಟೇ ಕುಂದಲತ ಮುಂದಿಡುವುದಲ್ಲ. ಪುರುಷ ವಿಚಾರಗಳಲ್ಲಿ ವಾದ, ಸಂವಾದಗಳಲ್ಲೂ ಪಾಲ್ಗೊಳ್ಳುವ ಹೆಣ್ಣಿನ ಬೌದ್ಧಿಕತೆಯನ್ನು ಕುಂದಲತ ಮುಂಗಾಣಿಸಿದೆ: ಯೋಗೀಶ್ವರ ಮತ್ತು ಕುಂದಲತ, ಸ್ವರ್ಣಮಯಿ ಮತ್ತು ಪ್ರತಾಪಚಂದ್ರ, ಸ್ವರ್ಣಮಯಿ ಮತ್ತು ಅಘೋರನಾಥ, ಸ್ವರ್ಣಮಯಿ ಮತ್ತು ತಾರಾನಾಥ ಇವರ ನಡುವೆ ಪರಸ್ಪರ ನಡೆಯುವ ವಾದ ಸಂವಾದಗಳು ಗಂಡು ಹೆಣ್ಣಿನ ನಡುವಿನ ಸೌಹಾರ್ದದ ಪ್ರತೀಕಗಳೇ ಆಗಿವೆ. ಪುರುಷರಾದರೂ ಹೆಣ್ಣುಮಕ್ಕಳಲ್ಲಿ ಅಧಿಕಾರದ ಭಾಷೆಯಲ್ಲಿ ಮಾತನಾಡುವುದಿಲ್ಲ. ಸಹೋದರ, ತಂದೆ, ಗಂಡ ಇವರ್‍ಯಾರೂ ಪುರುಷಾಧಿಕಾರದ ಭಾಷೆಯನ್ನು ಬಳಸುವುದೂ ಇಲ್ಲ. ಮಕ್ಕಳನ್ನು ಕಳೆದುಕೊಂಡುದರಿಂದ ದುಃಖಿಸುವ ರಾಜ,

ಮಗಳಿಗೆ ಕೈತುತ್ತನ್ನು ನೀಡುವ ಸಾಕುತಂದೆ, ಪಿತೃತ್ವದ ಪರಂಪರಾಗತ ನಂಬಿಕೆಯನ್ನು ಮೀರಿ ಬೆಳೆದವರು. ಹೆಣ್ಣುಮಕ್ಕಳ ಪ್ರಣಯ ವಿಚಾರದಲ್ಲಿಯೋ ಮದುವೆಯ ವಿಷಯದಲ್ಲಿಯೋ ತಂದೆಯಂದಿರಾಗಲಿ, ಸಹೋದರರಾಗಲಿ ಅಡ್ಡಿಪಡಿಸುವುದಿಲ್ಲ. ಯುವ ಹೃದಯಗಳ ಸ್ವಾಂತ್ರ್ಯಾಪೇಕ್ಷೆಯನ್ನು ಅರಿತ ಪೋಷಕ ಹೃದಯಿಗಳಿವರು. ಇದನ್ನು ಕುಂದಲತ ಕಾದಂಬರಿಯಲ್ಲಿ ಗಂಡುಹೆಣ್ಣಿನ ಅರೋಗ್ಯಪೂರ್ಣ ಸಂಬಂಧಗಳನ್ನು ಪ್ರಜಾಸತ್ತೆಯ ನೆಲೆಯಲ್ಲಿ ಪ್ರತಿಮಿಸಿದ ರೀತಿಯೆಂದೇ ಭಾವಿಸಬಹುದು. ವಾತ್ಸಲ್ಯ ಪೂರ್ಣವಾದ ಪಿತೃತ್ವ, ಸೌಹಾರ್ದದ ಭರ್ತೃತ್ವ ಎಂಬೀ ಮೌಲ್ಯಗಳು ಕೂಡುಕುಟುಂಬದ ಮತ್ತು ಮರುಮಕ್ಕತ್ತಾಯ(ಮಾತೃ ಮೂಲೀಯ ವ್ಯವಸ್ಥೆ) ಚಾಲ್ತಿಯಲ್ಲಿದ್ದ ಕಾಲದಲ್ಲಿ ರಚನೆಯಾದ ಕೃತಿಯೊಂದರಲ್ಲಿ ಕಾಣಿಸುತ್ತಿವೆ. ಮೌಲ್ಯಗಳ ಬದಲಾವಣೆ.

ಕೈಗಾರಿಕೀಕರಣ, ಆಧುನಿಕತೆಗಳ ಪರಿಣಾಮಗಳಿಂದ ಬದುಕಿನ ಮೌಲ್ಯಗಳ ಜೊತೆಗೆ ಸಾಹಿತ್ಯಕ ಮೌಲ್ಯಗಳು ಬದಲಾದುವು. ಹತ್ತೊಂಬತ್ತನೆಯ ಶತಮಾನದಲ್ಲಿ ಮಲಯಾಳಂ ಗದ್ಯವು ಐತಿಹಾಸಿಕ ಪ್ರಾಧಾನ್ಯ ಪಡೆಯುತ್ತಿರುವುದು ಇದರ ಪರಿಣಾಮವೇ ಆಗಿರಬಹುದು. ಬದುಕಿನಿಂದ ಸಾಹಿತ್ಯವು ಸಾಹಿತ್ಯದಿಂದ ಬದುಕು ಪರಸ್ಪರ ಮುಖಾಮುಖಿಯಾಗಿ ಮುನ್ನಡೆಯುತ್ತಿದೆ. ಮೇಲು ವರ್ಗದವರಿಂದ ಜನ ಸಾಮಾನ್ಯರೆಡೆಗೆ ಸಾಹಿತ್ಯ ಪ್ರವಹಿಸುತ್ತಿರುವುದರ ಅತ್ಯಂತ ಸ್ಪಷ್ಟವಾದ ದಾರಿಯೇ ಕಾದಂಬರಿ. ಮಾನವೀಯತೆ ಒಂದು ಮೌಲ್ಯವಾಗಿ ವಿಕಾಸವಾದುದರ ಕೆಲವು ಹೆಜ್ಜೆಗುರುತುಗಳು ಕುಂದಲತದಲ್ಲಿವೆ.

ಪ್ರಣಯ

ಎಲ್ಲಾ ಕಾಲಗಳಲ್ಲಿಯೂ ಎಲ್ಲೆಡೆಯೂ ಇರುವ ಮನುಷ್ಯರಿಗೆ ಪ್ರಣಯ ಸಾಧ್ಯವಾಗಿದೆ. ನಮ್ಮ ಪುರಾಣಗಳಷ್ಟೇ ಅಲ್ಲ, ಜಾಗತಿಕ ಸಾಹಿತ್ಯದಲ್ಲಿಯೂ ಪ್ರಣಯ ವಿಚಾರಗಳೇ ಆಸಕ್ತಿಯ ಕೇಂದ್ರಗಳಾಗಿವೆ. ಅರ್ಧನಾರೀಶ್ವರ, ರಾಧಾಕೃಷ್ಣ, ಲೈಲಾ ಮಜ್ನೂ ಹೀಗೆ ಪ್ರಣಯಕೇಳಿಗಳ ಕತೆಯಿದೆ. ಮೌಖಿಕದಿಂದ ಲಿಖಿತ ಸಾಹಿತ್ಯದ ವರೆಗಿನ ಮಲಯಾಳಂ ಸಾಹಿತ್ಯದ ಆರಂಭ ಕಾಲದಲ್ಲಿ ಸ್ತ್ರೀ ಪುರುಷ ಪ್ರಣಯ ಇಲ್ಲವೇ ಇಲ್ಲ ಎಂಬುದನ್ನು ವಿದ್ವಾಂಸರು ಈಗಾಗಲೇ ಹೇಳಿದ್ದಾರೆ. ವಿನೋದಕ್ಕೆ ಆಹಾರವಾಗಿ ವಂಚನೆಯ ಭೋಗ ವಸ್ತುವಾಗಿ ಸ್ತ್ರೀ ದೇಹವನ್ನು ಹಾಡಿಹೊಗಳಲಾಗಿದೆ. ಸಂದೇಶ ಕಾವ್ಯಗಳು, ಆಚ್ಚಿ ಚರಿತೆಗಳು– ಉಣ್ಣಿಯಚ್ಚಿ ಚರಿತಂ, ಉಣ್ಣಿ ಚಿರುದೇವಿ ಚರಿತಂ, ಉಣ್ಣಿಯಾಡಿ ಚರಿತಂ, ಚೆರಿಯಚ್ಚಿ ವರ್ಣನಂ ಇತ್ಯಾದಿಗಳು– ಬಂದು

ಹೋದುವು. ಮಲಯಾಳಂ ಭಾಷೆಯಲ್ಲಿಯೂ ಪ್ರಜ್ಞೆಯಲ್ಲೂ ಬದಲಾವಣೆಗಳನ್ನು ತಂದ ಎಳುತ್ತಚ್ಚನ್ ಕಾಲವೂ ನಂಬ್ಯಾರ್ ಕಾಲವೂ ಸರಿದು ಹೋದುವು.

ಹೆಣ್ಣೊಬ್ಬಳು ಪ್ರೇಮಿಸುವವನ ಜೊತೆ ಮದುವೆಯಾಗುವ ಧೈರ್ಯ ಪ್ರಕಟಿಸುವ ಮೂಲಕ ಕುಂದಲತ ಕಾಲಧರ್ಮದೊಡನೆ ಸಂಘರ್ಷಕ್ಕೆ ಇಳಿದಿರುವುದನ್ನು ಕಾಣಬಹುದು. ಹಾಗೆಯೇ ಸಮಕಾಲೀನ ಸಮಾಜವನ್ನು ಹೊಸ ಬಗೆಯಲ್ಲಿ ಮುನ್ನಡೆಸುವ ಛಾತಿಯುಳ್ಳವಳಾಗಿ ಗೋಚರಿಸುತ್ತಾಳೆ. ಹೀಗೆ ಬರೆಯಲು ಮಲಯಾಳಂ ಲೇಖಕರೊಬ್ಬರಿಗೆ ಪ್ರೇರಣೆ ಯಾದುದು ಇಂಗ್ಲಿಷ್ ಕಾದಂಬರಿಗಳ ಚಿಂತನಾಗತಿಯೇ ಆಗಿರಬಹುದು.

ರಾಜಕುಮಾರನಿಗೂ ಮಂತ್ರಿಮಗಳಿಗೂ ಪ್ರಣಯ. ಮಂತ್ರಿಯ ಮಗನಿಗೂ ರಾಜಕುಮಾರಿಗೂ ಪರಸ್ಪರ ಪ್ರೇಮ. ಮಂತ್ರಿ ಮಗಳು ಸ್ವರ್ಣಮಯಿ ಮತ್ತು ರಾಜಕುಮಾರ ಪ್ರತಾಪಚಂದ್ರರು ಜೊತೆಗೂಡಿ ಆಟವಾಡಿ ಬೆಳೆದವರು. ಬಾಲ್ಯದ ಸ್ನೇಹ ತಾರುಣ್ಯದಲ್ಲಿ ಪ್ರಣಯವಾಗಿ ಉದ್ಭವಿಸಿ ಮದುವೆಯವರೆಗೂ ತಲುಪುತ್ತದೆ. ಕಳಿಂಗ ರಾಜ ಮತ್ತು ಅಘೋರನಾಥನೊಡನೆ ರಾಜಕುಮಾರ ತನ್ನ ಪ್ರಣಯ ವಿವರಗಳನ್ನು ನೇರವಾಗಿ ತಿಳಿಸುತ್ತಾನೆ. ರಾಜಕುಮಾರ ಮದುವೆಯಾಗಬೇಕಾದುದು ರಾಜಕುಮಾರಿಯನ್ನು. ಮಂತ್ರಿಯ ಮಗಳನ್ನು ರಾಜಕುಮಾರನಿಗೆ ಬೇಕೆಂದಾದರೆ ಕೂಡಿಕೆ ಸಂಬಂಧವಾಗಿಯೋ, ದಾಸಿಯಾಗಿಯೋ ಇರಿಸಿಕೊಂಡು ಭೋಗಿಸಲು ಅವಕಾಶವಿರುವ ಸನ್ನಿವೇಶದಲ್ಲಿ ಈ ಬಗೆಯ ಪ್ರಣಯ. ಅಘೋರನಾಥನು ಕರೆದು ಕೇಳುವಾಗ ಸ್ವರ್ಣಮಯಿ ತನ್ನ ಪ್ರಣಯವನ್ನು ಹೀಗೆ ಪ್ರಕಟಿಸುತ್ತಾಳೆ.

"ನನಗೆ ತಿಳಿದಂತೆ ರಾಜಕುಮಾರನ ಸ್ವಭಾವ ಚೆನ್ನಾಗಿ ಮನವರಿಕೆಯಾಗಿದೆ. ಆತನಿಗೆ ನನ್ನ ಮೇಲೆ ದೃಢವಾದ ಅನುರಾಗ ಇದೆಯೆಂಬುದು ನನಗೆ ಖಚಿತವಿದೆ. ಅದು ನೆಲೆ ನಿಲ್ಲದೆ ಇರಲು ಯಾವುದೇ ಕಾರಣಗಳು ಕಾಣಿಸುತ್ತಿಲ್ಲ. ಹಾಗಾಗಿ ಈ ಸಂಬಂಧ ನಮ್ಮಿಬ್ಬರಿಗೂ ಶುಭವಾಗಿ ಪರಿಣಮಿಸುತ್ತದೆ ಎಂದು ನಾನು ಪೂರ್ಣವಾಗಿ ನಂಬಿದ್ದೇನೆ"(ಪು. ೩೨).

ಪ್ರೇಮ ಸಂಬಂಧಿ ವಿಚಾರದಲ್ಲಿ ಪರಸ್ಪರರಲ್ಲಿ ಇರಬೇಕಾದ ಆತ್ಮವಿಶ್ವಾಸವೇ ಈ ಮಾತುಗಳ ಮೂಲಕ ಪ್ರಣಯಿನಿಯಿಂದ ಪ್ರಕಟವಾಗಿದೆ.

ನಾಯಕಿಯಾದ ರಾಜಕುಮಾರಿ ಕುಂದಲತ ಮತ್ತು ಮಂತ್ರಿ ಮಗನಾದ ರಾಮಕಿಶೋರನ ಪರಸ್ಪರ ಪರಿಚಯ ಪ್ರಣಯವಾಗಿ ಪರಿಣಮಿಸುತ್ತದೆ. ರಾಮಕಿಶೋರ ಕುದುರೆಯಿಂದ ಬಿದ್ದು ಗಾಯಗೊಂಡಾಗ ಆರೈಕೆ ಮಾಡುವವಳೂ ಕುಂದಲತಳೇ. ಕರುಣೆಯೇ ಅವಳ ಪ್ರೀತಿಯನ್ನು ಹೆಚ್ಚು ಮಾಡಿದೆಯೆಂಬುದನ್ನು ಕಾದಂಬರಿ

ತಿಳಿಸುತ್ತದೆ. ಅವಳನ್ನು ಕಂಡಾಗಿನಿಂದ ರಾಮಕಿಶೋರನಲ್ಲಿ ಪ್ರೀತಿ, ಗೌರವಗಳು ದೃಢಗೊಳ್ಳುತ್ತಲೇ ಬಂದುವು. ದೇಹ ದೇಹಗಳು ಬೇರಾಗುವವರೆಗೆ ತುಂಡಾಗದ ಪ್ರೀತಿ ಅವಳದು. ಪ್ರಾಯ ಪ್ರಬುದ್ಧರಾದವರನ್ನು ಅದುವರೆಗೂ ಕುಂದಲತ ಕಂಡುದೇ ಇಲ್ಲ. ಹಲವೆಡೆ ತಿರುಗಾಡಿಯೂ ಹಲವರನ್ನು ಕಂಡರೂ ಆತನಿಗೆ ತನ್ನೊಡನೆ ಆಕರ್ಷಣೆ ತೋರುವುದು ಕುಂದಲತಾಳಿಗೆ ಆಶ್ಚರ್ಯವೆನಿಸಿದೆ. 'ಬೇರೆ ಜನರನ್ನು ನೋಡಿದ್ದರೂ ನಾನು ಕುಂದಲತಳನ್ನು ಮಾತ್ರ ಕಂಡುದು' ಎಂಬ ಪ್ರತಿಕ್ರಿಯೆಯಲ್ಲಿ ಪ್ರಣಯದ ಏಕನಿಷ್ಠೆ ವ್ಯಕ್ತವಾಗುತ್ತದೆ. ರಾಮಕಿಶೋರನಿಗೆ ಪ್ರಣಾಯ ಕಾಲ್ಪನಿಕ. ಮಾತ್ರವಲ್ಲ; 'ದರ್ಶನ ಮಾಡಬೇಕೆಂದು ತುಂಬಾ ಕಾಲದಿಂದ ಆಸೆಪಡುತ್ತಿದ್ದ ಒಂದು ಪುಣ್ಯಸ್ಥಳಕ್ಕೆ ಅತ್ಯಂತ ಕಷ್ಟಪಟ್ಟು ತಲುಪುವ ತೀರ್ಥಾಟಕನಿಗೆ ಅನ್ನಿಸುವ ಹಾಗೆ' ಆತ್ಮೀಯಾನುಭವವೇ ಅನುರಾಗವಾಗಿ ಪರಿಣಮಿಸಿದೆ. ಬೇರೆ ಪುರುಷರಾರನ್ನೂ ಕಾಣದೇ ಇರುವುದರಿಂದಾಗಿ ರಬಹುದೇ ಇವಳಿಗೆ ತನ್ನೊಡನೆ ಇಷ್ಟು ಆಸಕ್ತಿ ಎಂದು ರಾಮಕಿಶೋರ ಸಂಶಯಿಸುತ್ತಾನೆ.

ಆಗಾಗ ಬದಲಿಸುವ ಅಥವಾ ಒಂದೆಡೆ ನೆಟ್ಟು ಅಲ್ಲಿಂದ ಕಿತ್ತು ಇನ್ನೊಂದೆಡೆ ನೆಟ್ಟು ಬೆಳೆಸುವ ಗಿಡದಂಥಲ್ಲ ಪ್ರಣಯ ಎಂಬುದನ್ನು ಕುಂದಲತ ಖಚಿತ ಪಡಿಸಿದ್ದಾಳೆ. ಪ್ರಣಯವನ್ನು ಪರಸ್ಪರ ಜೊತೆಸೇರಿ ಬಿಗಿಗೊಳಿಸುವುದನ್ನು ಕುಂದಲತ ಮತ್ತು ರಾಮಕಿಶೋರ ಮಾಡುತ್ತಾರೆ. ಮುಂದೆ ಕುಂದಲತ ರಾಜಕುಮಾರಿಯೆಂದು ರಾಮಕಿಶೋರ ಮಂತ್ರಿಕುಮಾರನೆಂದರಿತಾಗಲೂ ಅವರ ಪ್ರೇಮದಲ್ಲಿ ಯಾವುದೇ ರೀತಿಯಲ್ಲಿ ಕುಂದೆನಿಸುವುದಿಲ್ಲ. ಸ್ವತಹ ರಾಜಕುಮಾರಿಯಾದ ಕುಂದಲತಳೇ ಮದುವೆಯ ಬಗೆಗೆ ಹೆಚ್ಚಿನ ಮುತುವರ್ಜಿವಹಿಸುತ್ತಾಳೆ.

ಕುಂದಲತಳ ಪ್ರಣಯ ಪ್ರಥಮ ದರ್ಶನದ ಆಕರ್ಷಣೆಯಲ್ಲ. ಪರಸ್ಪರ ಕಂಡು ಒಡನಾಡಿದ ಬಳಿಕವೇ ಇಲ್ಲಿನ ಜೋಡಿಗಳು ಪ್ರಣಯದಲ್ಲಿ ತೊಡಗುತ್ತಾರೆ. ಪರಸ್ಪರ ಅರಿತು ಒಳಗೊಳ್ಳುವ ಪ್ರಕ್ರಿಯೆಯೇ ಪ್ರಣಯ ಎಂಬುದನ್ನು ಕಾದಂಬರಿ ಪ್ರತಿಪಾದಿಸುವಂತಿದೆ. ಅದು ಎಂದಿಗೂ ಕ್ಷಣಿಕವಾದ ಒಂದು ಅನುಭೂತಿಯಲ್ಲ. ಪ್ರಣಯದ ಅನ್ಯೋನ್ಯ ಸಮರ್ಪಣೆಯೆಂಬುದು ಪರಸ್ಪರರ ಜವಾಬ್ದಾರಿಯಾಗಿದೆ. ಕಾಲ್ಪನಿಕವೆನಿಸಿದರೂ ಏಕನಿಷ್ಠೆಯ ಪ್ರಣಯಕ್ಕೆ ಮಲಯಾಳಂ ಸಾಹಿತ್ಯದಲ್ಲಿ ದೊರೆಯುವ ಆರಂಭದ ದಾಖಲೆ ಇದು. ಸ್ವತಂತ್ರವಾಗಿ ಪ್ರೀತಿಸುವುದಕ್ಕೆ ಸ್ವಾತಂತ್ರ್ಯವಿಲ್ಲದ ಸಮಾಜದ ನಡುವೆ ಲೇಖಕರೊಬ್ಬರ ದೂರದೃಷ್ಟಿ ಕಾದಂಬರಿಯ ಮೂಲಕ ದಾಖಲಾಗಿದೆ. ದೈವಕೇಂದ್ರಿತವಾದ ಚಿಂತನೆಗಳು ವ್ಯಕ್ತಿಕೇಂದ್ರಿತವಾಗಿ ಬದಲಾದುದು ವಿಜ್ಞಾನದ ಪ್ರಗತಿಯ ಪರಿಣಾಮವೆಂಬುದು ವಾಸ್ತವ. ಆದರೆ ಅದನ್ನು ತಿಳಿಯಲಾಗದಷ್ಟು

ಡಾರ್ವಿನ್, ಮಾರ್ಕ್ಸ್, ಫ್ರಾಯ್ಡ್ ಮೊದಲಾದವರು ಜಗತ್ತಿನ ವಿಚಾರವಾದಗಳ ಜೊತೆ ಸಂವಾದ ನಡೆಸುತ್ತ ಅದನ್ನು ವಿಕಾಸಗೊಳಿಸುವ ಪ್ರಯತ್ನ ಮಾಡಿದರು. ಯೋಗೀಶ್ವರನು ಕುಂದಲತಳಿಗೆ ಕೊಡುವ ಶಿಕ್ಷಣವೂ ವಿಚಾರವಾದದ ತಳಹದಿಯಲ್ಲಿಯೇ ಇದೆ ಎಂಬುದನ್ನು ಈಗಾಗಲೇ ಅನೇಕರ ಬರವಣಿಗೆಗಳು ದೃಢಪಡಿಸಿವೆ. ಪ್ರಪಂಚದ Mythical Phenomenon ಮತ್ತು ಕೃತಿ ತತ್ವಗಳ ಕಾರ್ಯ ಕಾರಣ ಸಂಬಂಧಗಳನ್ನು ವಿವೇಕಯುತವಾಗಿ ಅರಿತುಕೊಳ್ಳಲು ಆತ ಅವಳನ್ನು ತರಬೇತಿಗೊಳಿಸುತ್ತಾನೆ. ನಕ್ಷತ್ರಗಳು ಮನುಷ್ಯರ ಸುಖದುಃಖಗಳ ನಿರ್ಣಯದಲ್ಲಿ ಎಷ್ಟರಮಟ್ಟಿಗೆ ಕಾರಣವಾಗುತ್ತವೆ ಎಂಬ ರಾಮಕಿಶೋರನ ಸಂಶಯವನ್ನು ಯೋಗೀಶ್ವರ ಹೀಗೆ ಪರಿಹರಿಸುತ್ತಾನೆ:

"ಆ ನಂಬಿಕೆಗಿಂತ ಹೆಚ್ಚಿನ ಒಂದು ಪೊಳ್ಳುತನ ಬೇರೆ ಇದೆ ಎಂದು ನನಗೆ ಅನ್ನಿಸುವುದಿಲ್ಲ. ಅಜ್ಞಾನ ತಿಮಿರಾಂಧರಾದ ಅನೇಕ ಜನರು ನಿತ್ಯವೂ ಹೇಳುತ್ತಾ ಬರುವ ಹಲವು ಅರ್ಥವಿಲ್ಲದ ಇಂತಹ ಮಾತುಗಳು ನಡೆಸಿಕೊಂಡು ಬರುತ್ತಿರುವ ಅನೇಕ ಕ್ರಿಯಾಕರ್ಮಗಳೂ ಪ್ರಾಯಶಃ ಅಬದ್ಧವಾದ ನಂಬಿಕೆಯಿಂದ ಬಿಡುಗಡೆಯಾಗದಿರುವುದರಿಂದ ಎಂಬುದು ಮಾತ್ರ ನಿರ್ವಿವಾದ. ಈ ತೇಜಪುಂಜಗಳು ಎಷ್ಟೋ ದೊಡ್ಡ ಗೋಳಗಳು. ನಮ್ಮ ಈ ಭೂಮಿ ಆ ಕೆಲವು ಗೋಳಗಳ ನೂರರಲ್ಲಿ ಒಂದರಷ್ಟು ಕೂಡಾ ಗಾತ್ರವಿಲ್ಲ. ಹಾಗಿರುವ ಆ ಗೋಳಗಳ ಮಹಿಮೆಯನ್ನು ಯೋಚಿಸಿ ನೋಡಿದರೆ ಎಷ್ಟೋ ಕ್ಷುಲ್ಲಕವಾಗಿ ಕಾಣುವ ಆ ಭೂಮಿಯಲ್ಲಿ ಅತ್ಯಂತ ಕ್ಷುಲ್ಲಕರಾಗಿರುವ ಈ ಮನುಷ್ಯರ ಇಚ್ಛೆಗಳಾದ ಸುಖದುಃಖಗಳನ್ನು ಕ್ರಮಾನುಗತ ವಾಗಿಸುವುದಕ್ಕಾಗಿ ಆ ಪ್ರಬಲವಾದ ತೇಜಪುಂಜಗಳು ಸಂಚರಿಸುತ್ತವೆ ಎಂದು ಕೆಲವು ಮೂಢಾತ್ಮರು ನಂಬುವುದಕ್ಕೆ ಕಾರಣಗಳು; ಮೊದಲನೆಯದು ಎಷ್ಟೋ ದೂರದಲ್ಲಿರುವ ಆ ಗೋಳಗಳ ಸೂಕ್ಷ್ಮವಾದ ಗಾತ್ರವು ತಿಳಿಯದೆ ಇರುವುದರಿಂದಾದ ತುಚ್ಛ ಭ್ರಮೆ; ಎರಡನೆಯದು ಪ್ರಪಂಚದಲ್ಲಿ ಕಾಣುವುದೆಲ್ಲವೂ ಮನುಷ್ಯರಾದ ನಮ್ಮ ಸುಖಕ್ಕಾಗಿಯೂ, ಪ್ರಯೋಜನಕ್ಕಾಗಿಯೂ ಸೃಷ್ಟಿಯಾದ್ದೆಂಬ ಭಾವನೆಯಿಂದ ನಿಂದನಾರ್ಹವಾದ ಅನಿಷ್ಟಾಚಾರ ಗಳಾಗಿವೆ. ಅದಕ್ಕೊಂದು ದೃಷ್ಟಾಂತವನ್ನು ಕೊಡಬಹುದು. ಸಮುದ್ರದಲ್ಲಿ ಅತ್ತ ಇತ್ತ ಸಂಚರಿಸುವ ಅನೇಕ ದೊಡ್ಡ ಹಡಗುಗಳ ಗತಿಭೇದಗಳು, ಕೆಳಗೆ ಆಟವಾಡುವ ಮೀನುಗಳ ಸುಖ ದುಃಖಾವಸ್ಥೆಯನ್ನು ನಿಯಂತ್ರಿಸುತ್ತವೆಯೆಂದು ಕ್ಷುದ್ರಜೀವಿಗಳು ಯೋಚಿಸುತ್ತವೆ ಯೆಂದಾದರೆ ಎಷ್ಟು ಅಬದ್ಧ ಅವುಗಳ ವಿಚಾರ ಎಂದು ನಮಗೆ ತಕ್ಷಣಕ್ಕೆ ಅನ್ನಿಸುತ್ತಿದೆ ಯಲ್ಲವೇ? ದೇಹಿಗಳ ಸುಖದುಃಖಗಳು ಯಾವಾಗಲೂ ಅವರವರ ಪ್ರವೃತ್ತಿಯಲ್ಲಿಯೇ

ಉದ್ಭವಿಸುತ್ತವೆಯೆಂದು ನಮಗೆ ಅನುಭವವಲ್ಲವೇ. ಹಾಗಿರುವಾಗ ಮರ್ತ್ಯರು ದ್ಯೂತ, ಮದ್ಯಪಾನ, ಅಪಹರಣ, ಮಾರಣ ಎಂಬಿತ್ಯಾದಿ ಒಂದೊಂದು ದುಷ್ಕರ್ಮಗಳಲ್ಲಿ ನಿರತರಾಗಿ ಅದರಿಂದ ಜನಿಸಿದ ಕಷ್ಟಗಳನ್ನೊ, ತತ್‌ಫಲವಾಗಿ ದಂಡನೆಗಳನ್ನೊ ಅನುಭವಿಸುತ್ತಿರುವಾಗ ಸಮೀಪದಲ್ಲಿರುವ ಅವುಗಳ ಪ್ರತ್ಯಕ್ಷವಾದ ಕಾರಣಗಳನ್ನು ಗಣನೆಗೆ ತೆಗೆದುಕೊಳ್ಳದೆ ಆ ಫಲಿತಗಳಿಗೆ ಯಾವುದೇ ರೀತಿಯಲ್ಲೂ ಸಂಬಂಧವಿಲ್ಲದ ದೂರದಲ್ಲೆಲ್ಲೊ ಇರುವ ಗ್ರಹಗಳ ಗತಿಭೇದಗಳೆಂದು ಅವುಗಳೇ ಕಾರಣಗಳೆಂದು ಭ್ರಮಿಸಿ ನಿರಪರಾಧಿಗಳಾದ ಆ ಗ್ರಹಗಳ ಮೇಲೆ ದೋಷಾರೋಪಣ ಮಾಡುವುದು, ಪರಿಣಾಮಗಳಿಗೆ ತಮಗಿರುವ ಸಂಬಂಧದ ಸೂಕ್ಷ್ಮಗಳನ್ನು ಹುಡುಕುವ ಬುದ್ಧಿ ಶಕ್ತಿಯಿಲ್ಲದ ಅವ್ಯುತ್ಪನ್ನಮತಿಗಳಾದ ಬಹುಜನರ ಸ್ವಭಾವವಾಗಿದೆ."

ಸಮೀಪವಿರುವ ಪ್ರತ್ಯಕ್ಷ ಕಾರಣಗಳನ್ನು ನಿರ್ಲಕ್ಷಿಸಿ ನಿರಪರಾಧಿಗಳಾದ ಗ್ರಹಗಳನ್ನು ಕಾರಣವಾಗಿಸುವುದು ದೋಷಕರವೆಂಬುದು ಯೋಗೀಶ್ವರನ ಅಭಿಪ್ರಾಯ ಭವಿಷ್ಯವನ್ನು ಕುರಿತು ಪ್ರವಚಿಸುವ ಸನ್ಯಾಸಿಯನ್ನು ನಂಬದೆ ಸ್ವರ್ಣಮಯಿ ಹೇಳುತ್ತಾಳೆ. ಹೀಗೆ ಹೇಳುತ್ತ ಬರುವವರು ಸಾಮಾನ್ಯವಾಗಿ ವಂಚಕರು ಹಾಗೂ ದುಷ್ಟರೇ ಆಗಿರುತ್ತಾರೆ. ವಿಚಾರವಾದದ ವ್ಯಾಪ್ತಿಯಲ್ಲಿ ಸ್ತ್ರೀಯರೂ ಒಳಗೊಂಡಿದ್ದಾರೆನ್ನುವುದು ಕುಂದಲತಳ ಅಭಿಮತ. ಸಾಮಾನ್ಯವಾಗಿ ಸ್ತ್ರೀಯರು ಮೂಢನಂಬಿಕೆಯವರೆಂದು ಚಿತ್ರಿಸಲಾಗುತ್ತದೆ. ಅದಕ್ಕಿಂತಲೂ ವ್ಯತಿರಿಕ್ತವಾದ ಪಾತ್ರ ಚಿತ್ರಣ ಕುಂದಲತಳದು. ವಾಸ್ತವವನ್ನು ಮತ್ತು ಅನುಭವಗಳನ್ನು ವಿಚಾರ ಅವಿಚಾರಗಳ ನೆಲೆಯಲ್ಲಿ ಕಾರ್ಯಕಾರಣಗಳ ಸಂಬಂಧಗಳ ಸ್ವರೂಪವನ್ನು ಕಂಡುಕೊಳ್ಳುವಲ್ಲಿ ಸ್ತ್ರೀ-ಪುರುಷರಿಬ್ಬರೂ ಸಮಾನವಾಗಿ ಒದಗುತ್ತಾರೆ.

ಭಾಷೆ

ಇದನ್ನು ಮಣಿಪ್ರವಾಳ ಶೈಲಿಯ ಕಾದಂಬರಿ ಎಂದು ಹೇಳುವವರೂ ಇದ್ದಾರೆ. ಕಾದಂಬರಿಯ ಭಾಷೆ ಸಂಸ್ಕೃತಾಧಿಕ್ಯದಿಂದ ಕೂಡಿದೆಯಾದರೂ ಅನೇಕ ಮಲಯಾಳಂನ ಪದಗಳನ್ನು ಬಳಸಿದ್ದು ವಿಶೇಷ. ಚಿಕ್ಕ ವಾಕ್ಯಗಳ ಜೊತೆಗೆ ಸುದೀರ್ಘ ವಾಕ್ಯಗಳೂ ಇವೆ. ಮಲಯಾಳಂನಲ್ಲಿ ಇನ್ನು ಗದ್ಯ ಬರವಣಿಗೆ ರೂಪುಗೊಳ್ಳುತ್ತಿದ್ದ ಹಂತದಲ್ಲಿ ರಚನೆಯಾದ ಕಾದಂಬರಿ ಎಂಬುದರಿಂದ ಇದು ಸ್ವಾಭಾವಿಕ. ಎಲ್ಲವನ್ನು ಋಣಾತ್ಮಕವಾಗಿ ಸುತ್ತು ಬಳಸಿ ಬರೆಯುವ ವಿಧಾನವನ್ನು ಇದರಲ್ಲಿ ಕಾಣಬಹುದು. ಉದಾ: 'ತನಗೆ ವಾರ್ಧಕ್ಯ ಕಾರಣದಿಂದ ಬುದ್ಧಿಗೆ ಮಂದತ್ವವೂ ಕೆಲಸಗಳಲ್ಲಿ ಉದಾಸೀನವೂ ಇರುವ ವಿಚಾರ ಆತನಿಗೂ ಅರಿಯದುದೇನೂ ಅಲ್ಲ'(ಪು. ೩೭).

'ಆತನಿಗೂ ಅರಿವಿದೆ' ಎಂದು ನೇರವಾಗಿ ಹೇಳುವುದನ್ನು ಹೀಗೆ ಹೇಳಲಾಗಿದೆ. 'ರಾಮಕಿಶೋರನ ಅಸೌಖ್ಯ ಗುಣವಾಗಿ ದೇಹವು ಮೊದಲಿನ ಸ್ಥಿತಿಗೆ ಬರುತ್ತಾದರೂ ಯೋಗೀಶ್ವರನು ಹೊರಗಡೆಗೆ ಹೋಗುವಾಗೆಲ್ಲ ರಾಮಕಿಶೋರನನ್ನು ಜೊತೆಗೆ ಕರೆದುಕೊಂಡು ಹೋಗುವುದನ್ನು ಬದಲಾಯಿಸಿದ'(ಪು. ೭೯). ಈಗ ರಾಮಕಿಶೋರ ನನ್ನು ಜೊತೆಗೆ ಕರೆದುಕೊಂಡು ಹೋಗುತ್ತಿರಲಿಲ್ಲ ಎಂದು ಹೇಳುವುದನ್ನು ಈ ರೀತಿ ಹೇಳಲಾಗಿದೆ.

ಹೀಗೆ ಅನೇಕ ವಿಶಿಷ್ಟ ಬಳಕೆಗಳು ಕಾದಂಬರಿಯಲ್ಲಿ ಕಾಣಿಸಿಕೊಂಡಿವೆ.

ತಂತ್ರ: ಕಾದಂಬರಿಯು ನೇರ ನಿರೂಪಣೆಯ ಧಾಟಿಯಲ್ಲಿದೆ. ನಿರೂಪಕ ನಡುವೆ ಪ್ರವೇಶಿಸಿ ಕತೆಯನ್ನು ಮುಂದುವರಿಸುವಾಗ ಓದುಗರೊಡನೆ ಸಂವಹನ ಸಾಧಿಸುವ ವಿಧಾನವಿದೆ.

ಉದಾ: 'ಇನ್ನು ಈ ಯೋಗಿಯ ವನವಾಸದ ಕುರಿತು ಸ್ವಲ್ಪ ಹೇಳಬೇಕಾಗಿದೆ. ಆತನ ಜೊತೆಗಿರುವ ಎಲ್ಲರ ಬಗೆಗೂ ನಾವೀಗ ಹೇಳಿಯಾಯಿತು(ಪು. ೭). ಧರ್ಮಪುರಿಗೆ ಸಮೀಪ ಒಂದು ಸಂತೆ ಸೇರುವ ಸ್ಥಳವಿದೆಯೆಂದು ಈ ಹಿಂದೆಯೇ ಪ್ರಸ್ತಾಪಿಸಿದೆಯಲ್ಲವೇ(ಪು. ೨೭).

'ಇನ್ನು ನಮ್ಮ ಕತೆ ಇದುವರೆಗೆ ಪ್ರಸ್ತಾಪಿಸದ ಒಂದು ಸ್ಥಳದಿಂದ ಆರಂಭಿಸಬೇಕಾಗಿದೆ'(ಪು. ೬೨).

'ಹೀಗೆ ಕಳಿಂಗರಾಜನ ಸೈನ್ಯವು ಶತ್ರುಸೈನ್ಯವನ್ನು ಎದುರಿಸಲು ಸಿದ್ಧತೆ ನಡೆಸುತ್ತಿರಲು, ಅದೇ ಸಮಯದಲ್ಲಿ ಚಂದನೋದ್ಯಾನದ ಸಮೀಪವಿರುವ ಸೈಕತಪುರದಲ್ಲಿ ಶೂದ್ರನೊಬ್ಬನ ಮನೆಯಲ್ಲಿ ಅನಿರೀಕ್ಷಿತವಾದ ಸಂತೋಷವೊಂದು ಸಂಭವಿಸಿದ್ದು ನಮ್ಮ ಕತೆಗೆ ತುಂಬಾ ಸಂಬಂಧಿಸಿದ್ದಾದ್ದರಿಂದ ಆ ಸಣ್ಣ ಸಂಗತಿಯನ್ನು ಇಲ್ಲಿಯೇ ಹೇಳಬೇಕಾಗಿದೆ'(ಪು. ೮೮).

ಹಿಂದಿನ ಅಧ್ಯಾಯದಲ್ಲಿ ವಿವರಿಸಿದಂತೆ ಮಲಗಿ ನಿದ್ರಿಸಿರುವ ಸೈನ್ಯದಲ್ಲಿ ಯುವರಾಜನ ಪಾಳಯದಿಂದ ಬೆಳಗಿನ ಜಾವ ಕಹಳೆ ಶಬ್ದ ಭೇರಿ ನಾದಗಳ ಕೋಲಾಹಲವುಂಟಾದುದು ಕುಂತಳೇಶನ ಸೈನ್ಯ ದೂರದಿಂದ ಬರುತ್ತಿರುವುದನ್ನು ಕಂಡ ಬಳಿಕವೇ(ಪು. ೯೦).

ಹೀಗೆ ನಿರೂಪಕನ ಮಧ್ಯ ಪ್ರವೇಶದ ಮೂಲಕ ಓದುಗರನ್ನು ಜೊತೆಗೆ ಕರೆದೊಯ್ಯುವ ಧಾಟಿಯಲ್ಲಿದೆ. ಇದರಿಂದ ಕಾದಂಬರಿ ಆತ್ಮೀಯವಾಗಿ ಮುನ್ನಡೆಯುವಂತಾಗಿದೆ. ಅಲ್ಲದೆ ಸಂಭಾಷಣೆಯ ರೂಪದಲ್ಲಿ ಸನ್ನಿವೇಶಗಳನ್ನು ಕಟ್ಟಿಕೊಡುವ ನಾಟಕೀಯ ಗುಣ ಕಾದಂಬರಿ ಯಲ್ಲಿದೆ.

ಭಾಷಾ ಬಳಕೆಯಲ್ಲಿ ಅನೇಕ ಪದಗಳ ಪುನರಾವರ್ತನೆ, ವಾಕ್ಯದಲ್ಲಿ ಒಂದು ಪದವನ್ನು ಒಂದಕ್ಕಿಂತ ಹೆಚ್ಚು ಬಾರಿ ಬಳಸಿದ್ದು ಹೊಸ ಗದ್ಯ ರೂಪಗೊಳ್ಳುವ ಸಿದ್ಧತೆಯ ಭಾಗವಾಗಿರ ಬಹುದು.

ಸಂಸ್ಕೃತ ಭೂಯಿಷ್ಠವಾದ ಮಣಿಪ್ರವಾಳದಿಂದ ಮುಂದುವರಿದು ಮಲಯಾಳಂ ಸಾಹಿತ್ಯ ಕುಂದಲತಕ್ಕೆ ಬಂದಾಗ ಅಚ್ಚ ಮಲಯಾಳಂ ಭಾಷೆಯ ಬರವಣಿಗೆಯನ್ನು ರೂಢಿಸಿಕೊಳ್ಳಲು ಪ್ರಯತ್ನಿಸಲಾಗಿದೆ. ವಳ್ಳುವನಾಡು ಪ್ರದೇಶ –ಮಲಬಾರು ತೀರ ಪ್ರದೇಶ– ಮಲಯಾಳಂ ಆಡುನುಡಿಯ ಅನೇಕ ಪದಪ್ರಯೋಗಗಳು ಕುಂದಲತದಲ್ಲಿ ಯಥಾವತ್ತಾಗಿ ಬಳಕೆಯಾಗಿರುವುದನ್ನು ವಿದ್ವಾಂಸರು ಗುರುತಿಸಿದ್ದಿದೆ. ಹಾಗೆಯೇ ಇಲ್ಲಿ ಬರುವ ಕಳಿಂಗ, ಬೇಡರ ಕರಚರು ಭೇಟಿ ಇತ್ಯಾದಿ ಸಂದರ್ಭಗಳೆಲ್ಲ ವಳ್ಳುವನಾಡು ಮತ್ತು ಮಲಯ ರಾಜರ ಪರಸ್ಪರ ಭೇಟಿಯನ್ನು ನೆನಪಿಸುತ್ತವೆಯೆಂದು, ಕಳಿಂಗ ಕುಂತಳರ ಸಂಘರ್ಷವೆಂಬುದು ವಳ್ಳುವನಾಡು ಮತ್ತು ಸಾಮೂದಿರಿ ರಾಜರ ನಡುವಿನ ಜಗಳವೆಂದೇ ಭಾವಿಸಿದ ವಿಶ್ಲೇಷಣೆಗಳು ಬಂದಿವೆ. ಹೀಗೆ ವಸ್ತು ಭೌಗೋಳಿಕವಾಗಿ ಕೇರಳದ ಹೊರಗುಳಿದರೂ ಕೇರಳದ ಸ್ಥಳೀಯ ಸಂಸ್ಕೃತಿ, ರಾಜಕೀಯವನ್ನು ಆಧರಿಸಿ ಭಾಷೆಯ ಪ್ರಯೋಗವಿದೆ.

ಕುಂದಲತಕ್ಕೆ ಷೇಕ್ಸ್‌ಪಿಯರನ 'ಸಿಂಬಲೀನ್' ನಾಟಕದ ಪ್ರಭಾವ ಇರುವುದನ್ನು ಗುರುತಿಸಲಾಗಿದೆ. ಕುಂದಲತದ ಅನೇಕ ಸನ್ನಿವೇಶಗಳು ಸಿಂಬಲೀನ್‌ನನ್ನು ನೆನಪಿಸುತ್ತದೆ. 'ಐವಾನೋ' ಎಂಬ ಕೃತಿಯು ಪ್ರಭಾವವಿರುವುದನ್ನೂ ಕಂಡುಕೊಳ್ಳಲಾಗಿದೆ. ಕುಂದಲತ ಕಾದಂಬರಿಗೆ ಷೇಕ್ಸ್‌ಪಿಯರ್‌ನ ಸಿಂಬಲೀನ್ ಮತ್ತು ಸ್ಕಾಟ್‌ನ ಐವಾನೊ ಕೃತಿಗಳ ಪ್ರಭಾವವಿದ್ದರೂ ಇದು ಅನುವಾದವೋ, ಅನುಕರಣ ಕೃತಿಯೋ ಅಲ್ಲ. ಇದೊಂದು ಸ್ವತಂತ್ರ ರಚನೆಯೆಂಬುದನ್ನು ವಿದ್ವಾಂಸರು ಸ್ಪಷ್ಟಪಡಿಸಿದ್ದಾರೆ. ಕಲ್ಪನೆಯನ್ನಾಧರಿಸಿದ ಇದರ ಕಥಾವಸ್ತು, ಅನುಭವಾತೀತವಾಗುವ ಪಾತ್ರಗಳು, ಸನ್ನಿವೇಶಗಳಿಂದಾಗಿ ಕುಂದಲತವೊಂದು ವಿಲಕ್ಷಣ ಕೃತಿಯೆನಿಸಿದೆ. ಕುತೂಹಲಕರವಾದ ಕತೆ, ಕೇರಳದಾದ್ಯಂತ ಓದುಗರು ಸುಲಭವಾಗಿ ಅರ್ಥೈಸುವ ಸರಳ ಭಾಷೆ, ಸ್ವಾರಸ್ಯಕರವಾದ ಪದಬಳಕೆ ಇತ್ಯಾದಿಗಳ ಕಾರಣದಿಂದ ಕುಂದಲತ ಗಮನ ಸೆಳೆಯುತ್ತದೆ ಎಂಬುದನ್ನು ವಿದ್ವಾಂಸರು ಗುರುತಿಸಿದ್ದಾರೆ. ಅಷ್ಟೇ ಅಲ್ಲದೆ ಭಾರತೀಯ ಕೃತಿಗಳ ಸಾಂದರ್ಭಿಕ ಪ್ರಭಾವವನ್ನು ಗುರುತಿಸುವ ಪ್ರಯತ್ನಗಳೂ ನಡೆದಿವೆ. ಯೋಗೀಶ್ವರನ ವನಭವನಕ್ಕೂ ಕಾಳಿದಾಸನ ಕಣ್ವ ತಪೋವನಕ್ಕೂ ಸಾಮ್ಯವಿದೆ. ಶಾಕುಂತಲೆಯಂತೆ ಗಿಡನೆಟ್ಟು ಬೆಳೆಸುವ ಕುಂದಲತೆ, ಸಾಕುಮಗಳಾಗಿ ಕುಂದಲತ ಮತ್ತು ಯೋಗೀಶ್ವರನ ಚಿತ್ರಣದಲ್ಲಿ ಕಣ್ವ ಶಾಕುಂತಲೆಯರ ಸಾದೃಶ್ಯವಿದೆ.

ಬೇಟೆಯ ವಿವರಗಳು ದುಷ್ಯಂತನ ಬೇಟೆಯನ್ನು ನೆನಪಿಸುವಂತಿದೆ. ಕುಂದಲತರ ಪ್ರಕೃತಿ ಸೌಂದರ್ಯ ವರ್ಣನೆಯಲ್ಲಿ ಕಾಳಿದಾಸನ ಪ್ರಕೃತಿ ವರ್ಣನೆಯನ್ನು ಕಾಣಬಹುದು. ಇಷ್ಟೇ ಅಲ್ಲದೆ ಆಧುನಿಕಪೂರ್ವ ಮಲಯಾಳಂ ಸಾಹಿತ್ಯ ಪರಂಪರೆಯ ಅನೇಕ ದೃಶ್ಯಗಳ ಕವಿಪ್ರಯೋಗಗಳು ಕುಂದಲತೆಯ ಘಟನೆಗಳನ್ನು ಭಾಷಾಬಳಕೆಯನ್ನು ಪ್ರಭಾವಿಸಿವೆಯೆಂಬುದನ್ನು ವಿದ್ವಾಂಸರು ಗುರುತಿಸಿದ್ದಾರೆ. ಹಾಗೆನ್ನುವಾಗ ಇದೊಂದು ಅನುಕರಣ ಕೃತಿಯಲ್ಲ. ಸಂಸ್ಕೃತಿಯ ಹಿಂದಣ ಹೆಜ್ಜೆಗುರುತುಗಳಿಗೆ ಕುಂದಲತ ಪ್ರತಿಸ್ಪಂದಿಸಿರುವುದನ್ನು ಗುರುತಿಸುವ ಪ್ರಯತ್ನದ ಭಾಗವಿದು ಎಂದು ತಿಳಿಯಬಹುದು. ಕುಂದಲತವನ್ನು ಸಾಮಾಜಿಕ ಕಾದಂಬರಿಯೆಂದಾಗಲಿ ಅಥವಾ ಚಾರಿತ್ರಿಕ ಕಾದಂಬರಿಯೆಂದಾಗಲಿ ಯಾರೂ ಗುರುತಿಸಲಿಲ್ಲ. ಕೆಲವೊಮ್ಮೆ ಕಾದಂಬರಿ ಪ್ರಕಾರದ ಮೊದಲ ಕೃತಿಯಾಗಿ ಮುಂದಿನ ಕಾದಂಬರಿ ಸಾಹಿತ್ಯ ರಚನೆಗೆ ದಾರಿತೋರಿದ ಬಗೆಗೂ ಅಷ್ಟಾಗಿ ಅಧ್ಯಯನಗಳು ನಡೆದಿಲ್ಲ.

ಕುಂದಲತ ಬರೆದುದು ಇಂಗ್ಲಿಷ್ ತಿಳುವಳಿಕೆಯಿಲ್ಲದ ಗೃಹಿಣಿಯರ ಓದಿಗಾಗಿ. ಇಂದುಲೇಖ ರಚಿಸಿದುದು ಲೇಖಕ ತನ್ನ ಹೆಂಡತಿಯ ಓದಿಗಾಗಿ. ಹೀಗೆ ಅಕ್ಷರಜ್ಞಾನ ಲಭಿಸಿದ ಮಧ್ಯಮ ವರ್ಗದ ಮಹಿಳೆಯರನ್ನು ಲಕ್ಷ್ಯವಾಗಿರಿಸಿದ ರಚನೆಗಳಿವು. ಪ್ರಸ್ತುತ ಕೃತಿಯನ್ನು ವಿಶ್ಲೇಷಿಸುವಾಗ ಒಂದು ಶತಮಾನಕ್ಕೂ ಹಿಂದೆ- ನೂರ ಮೂವತ್ತೂರಕ್ಕೂ ಹೆಚ್ಚು ವರ್ಷಗಳ ಹಿಂದೆ- ಪ್ರಕಟವಾದ ಕೃತಿ ಎಂಬುದನ್ನು ಮರೆಯಬಾರದು. ಕೆಲವೊಂದು ಘಟನೆಗಳನ್ನು, ಪಾತ್ರಗಳನ್ನು ಜೊತೆಗೂಡಿಸಿ ಪಾಶ್ಚಾತ್ಯ ಸಂಪ್ರದಾಯದ ಕೃತಿಯೊಂದನ್ನು ರಚಿಸುವುದೇ ಕರ್ತೃವಿಗಿದ್ದ ಏಕೈಕ ಉದ್ದೇಶ. ಅದುವರೆಗೂ ಇಲ್ಲದ ಒಂದು ಮಾದರಿಯನ್ನು ಹೊಸದಾಗಿ ರೂಪಿಸುವುದು ಸುಲಭ ಸಾಧ್ಯವಾದ ಕೆಲಸವಲ್ಲ ಎಂಬುದನ್ನು ನೆನಪಿಸಿಕೊಂಡರೆ ಇಲ್ಲಿನ ದೋಷಗಳಿಗೆ ಲೇಖಕ ನೆಡುಜಾಡಿ ಟೀಕೆಗೊಳಗಾಗದೆ ಓದುಗರ ಗೌರವಾದರಗಳಿಗೆ ಅರ್ಹರಾಗುತ್ತಾರೆ.

ಕಳೆದ ಒಂದು ಶತಮಾನದ ಸುದೀರ್ಘ ಅವಧಿಯಲ್ಲಿ ಕಾದಂಬರಿ ಪ್ರಕಾರದಲ್ಲಿ ಮಲಯಾಳಂ ಭಾಷೆಯನ್ನೂ ಒಳಗೊಂಡಂತೆ ಜಗತ್ತಿನ ಹಲವು ಭಾಷೆಗಳಲ್ಲಿಯೂ ವೈವಿಧ್ಯಮಯ ರಚನೆಗಳಾಗಿವೆ. ವಿಸ್ಮಯವೆನಿಸುವಷ್ಟು ವಿಕಾಸವನ್ನು ಈ ಸಾಹಿತ್ಯ ಪ್ರಕಾರ ಕಂಡಿದೆಯೆಂಬುದರಲ್ಲಿ ಆಶ್ಚರ್ಯವಿಲ್ಲ. ಕಾದಂಬರಿ ಪ್ರಕಾರದ ಖಚಿತವಾದ ಲಕ್ಷಣಗಳನ್ನು ಗುರುತಿಸಿ ಹೇಳುವುದು ಅಸಾಧ್ಯ ಎನ್ನುವ ಮಟ್ಟದ ವಿಭಿನ್ನ ಬಗೆಯ ಪ್ರಯೋಗಗಳನ್ನು ಈ ಪ್ರಕಾರ ಕಂಡಿದೆ.

ಪರಾಮರ್ಶನ ಕೃತಿಗಳು

೧. ಅಯ್ಯಪ್ಪ ಪಣಿಕರ್ (೧೯೯೩), ಮುನ್ನುಡಿ, ಇಂದುಲೇಖಾ, ೧೯೯೫ ಕನ್ನಡ ಅನುವಾದ: ಸಿ.ರಾಘವನ್, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ
೨. ಕಯ್ಯಾರ ಕಿಞ್ಞಣ್ಣ ರೈ (ಅನು) (೧೯೭೬), ಮಲಯಾಳ ಸಾಹಿತ್ಯ ಚರಿತ್ರೆ, ಪಿ.ಕೆ.ಪರಮೇಶ್ವರನ್ ನಾಯರ್, ಸಾಹಿತ್ಯ ಅಕಾದಮಿ, ನವದೆಹಲಿ
೩. ಗೀತಾ ಪಿ., (೨೦೦೪), ಕುಂದವಲ್ಲಿ ವನಭೂವಿಲ್ ನಿಲ್‌ಕಿಲುಂ(ಲೇಖನ), ಕುಂದಲತ, ಅಪ್ಪು ನೆಡುಜಾಡಿ, ಡಿ.ಸಿ.ಬುಕ್ಸ್, ಕೋಟ್ಟಯಂ
೪. ಚಂದ್ರಶೇಖರ ವಾರಿಯರ್ (೨೦೦೪), ಡಿ.ಸಿ.ಬುಕ್ಸ್‌ನ ಮೊದಲ ಆವೃತ್ತಿಗೆ ಬರೆದ ಪ್ರಸ್ತಾವನೆ, ಕುಂದಲತ, ಅಪ್ಪು ನೆಡುಜಾಡಿ, ಡಿ.ಸಿ.ಬುಕ್ಸ್, ಕೋಟ್ಟಯಂ
೫. ಚಂದು ಮೇನೋನ್ (೨೦೦೪), ಇಂದುಲೇಖಾ, ಕೇರಳ ಸಾಹಿತ್ಯ ಅಕಾಡೆಮಿ, ತೃಶ್ಶೂರ್
೬ ಜಾರ್ಜ್ ಇರುಂಬಯಂ(ಡಾ.) (೧೯೭೭), ಮಲಯಾಳ ನೋವಲ್ ಪತ್ತೊಂಬದಾ ನೊಟ್ಟಾಂಡಿಲ್(ಅಧ್ಯಯನ) ಸಾಂಸ್ಕಾರಿಕ ಪ್ರಸಿದ್ಧೀಕರಣ ವಗುಪ್ಪ್, ಕೇರಳ ಸರ್ಕಾರ
೭. ಮೋಹನ ಕುಂಟಾರ್ (೨೦೦೪), ಕೈರಳಿ, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು
೮. ಮೋಹನ ಕುಂಟಾರ್ (೨೦೨೦)ಕುಂದಲತ(ಅನು.), ಯಾಜಿ ಪ್ರಕಾಶನ, ಹೊಸಪೇಟೆ
೯. ಹರಿಕೃಷ್ಣ ಭರಣ್ಯ, ಹೊಸಗನ್ನಡ ಸಾಹಿತ್ಯದ ಉಗಮ ಮತ್ತು ವಿಕಾಸ (೧೯೯೦), ಎರಡನೆಯ ಮುದ್ರಣ (೨೦೧೬) ಸಪ್ನ ಬುಕ್ ಹೌಸ್, ಬೆಂಗಳೂರು

ಎಪ್ಪತ್ತು ತಿರುಗಾಟಗಳು: ಒಡಲುಗೊಂಡವನ ಕಥನ

ಡಾ.ನಿತ್ಯಾನಂದ ಬಿ.ಶೆಟ್ಟಿ

ತೆಂಕುತಿಟ್ಟು ಯಕ್ಷಗಾನದಲ್ಲಿ ಅ-ಪೂರ್ವ ಸಿದ್ಧಿಯನ್ನು ಮತ್ತು ಅ-ಪಾರ ಪ್ರಸಿದ್ಧಿಯನ್ನು ಪಡೆದ ಕಲಾವಿದ ಸೂರಿಕುಮೇರು ಕೆ ಗೋವಿಂದ ಭಟ್ ಅವರ ಆತ್ಮಕಥೆಯ ಮೊದಲ ಭಾಗ ಡಾ. ಪ್ರಭಾಕರ ಶಿಶಿಲ ಅವರ ನಿರೂಪಣೆಯಲ್ಲಿ ಯಕ್ಷೋಪಾಸನೆ ಎಂಬ ಹೆಸರಿನಲ್ಲಿ ಈಗಾಗಲೇ ಪ್ರಕಟಗೊಂಡಿದೆ. ಇವತ್ತು ಬಿಡುಗಡೆಯಾಗುತ್ತಿರುವ ಎಪ್ಪತ್ತು ತಿರುಗಾಟಗಳು ಸ್ವತಃ ಗೋವಿಂದ ಭಟ್ಟರೇ ಬರೆದಿರುವ ಅವರ ಆತ್ಮಕಥೆಯ ಎರಡನೇ ಭಾಗ. ಈ ಪುಸ್ತಕದ ಲೋಕಾರ್ಪಣೆಯ ಸಮಾರಂಭದಲ್ಲಿ ಉಪಸ್ಥಿತರಿರುವ ಎಲ್ಲರಿಗೂ ಪ್ರೀತಿಯ ನಮಸ್ಕಾರಗಳು.

ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ನನಗೆ. ಸಂಭ್ರಮಿಸುವುದಕ್ಕೆ ನೂರು ಕಾರಣಗಳು. ಮೊದಲನೆಯದಾಗಿ ಎಳವೆಯಿಂದಲೇ ನಾನು ಬಹಳ ಇಷ್ಟಪಟ್ಟ ಕಲೆ ಯಕ್ಷಗಾನ. ನಾನು ಮೆಚ್ಚಿಕೊಂಡ ಕೆಲವೇ ಕೆಲವು ಯಕ್ಷಗಾನ ವೇಷಧಾರಿಗಳಲ್ಲಿ ಗೋವಿಂದ ಭಟ್ಟರು ಮೊದಲಿಗರು. ಗೋವಿಂದ ಭಟ್ಟರು ನನ್ನ ಅಜ್ಜ ದಿ. ಚಿನ್ನಪ್ಪ ನಾಯ್ಗರ ಬಳಿಗೆ ಅರ್ಥಗಾರಿಕೆಯ ಪಾಠಗಳನ್ನು ಅಭ್ಯಾಸ ಮಾಡುವುದಕ್ಕೆ ಬರುತ್ತಿದ್ದರು ಎಂದು ನನ್ನ ಅಮ್ಮ ಹೇಳುತ್ತಿದ್ದುದು ನನಗೆ ಈಗ ನೆನಪಾಗುತ್ತಿದೆ. ಇವೆಲ್ಲಕ್ಕಿಂತಲೂ ಮಿಗಿಲಾಗಿ ನನಗೆ ಮತ್ತೆಮತ್ತೆ ಸಂತೋಷ ಕೊಡುವುದು ನನಗೆ ಕಲಿಸಿದ ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜು ಮತ್ತು ಅದರ ನೆನಪು. ಈ ಕಾಲೇಜು ನನ್ನ ವೈಯಕ್ತಿಕ ಬದುಕಿನಲ್ಲಿ ತಂದಿರುವ ಬದಲಾವಣೆಗಳು ಅಸಾಮಾನ್ಯವಾದವು.

ಅಂತಹ ಒಂದು ಘಟನೆಯನ್ನು ನೆನಪಿಸಿಕೊಳ್ಳುತ್ತ ನನ್ನ ಮಾತುಗಳನ್ನು ಶುರು ಮಾಡುತ್ತೇನೆ.

ಇದು ಸರಿಸುಮಾರು ೩೦ ವರ್ಷಗಳ ಹಿಂದೆ ನಾನು ಇಲ್ಲಿ ಪದವಿ ಓದುತ್ತಿದ್ದ ಮೊದಲ ವರ್ಷ ನಡೆದ ಘಟನೆ. ಫಾದರ್ ಪ್ರಶಾಂತ್ ಮಾಡ್ತಾ ಅವರು ನಮಗೆ ಕನ್ನಡ ಪಾಠ ಮಾಡುತ್ತಿದ್ದರು. ಫಾ. ಮಾಡ್ತಾ ತಮ್ಮ ಪದನಿಧಿಕೋಶ (ಥೆಸಾರಸ್)ದ ಮೂಲಕ ಕನ್ನಡಕ್ಕೆ ಬಹಳ ವಿಶಿಷ್ಟವಾದ ಕೊಡುಗೆಯನ್ನು ಕೊಟ್ಟವರೂ ಹೌದು. ಸಾಮಾನ್ಯವಾಗಿ ಮಧ್ಯಾಹ್ನದ ಊಟದ ಅವಧಿಯ ನಂತರದ ಮೊದಲ

ತರಗತಿ ಇದ್ದ ದಿನ ಚಾಕಲೇಟ್‌ಗಳನ್ನು ತಂದು ನಮಗೆ ಹಂಚುತ್ತಿದ್ದ ಫಾದರ್ ತರಗತಿ ಶುರುವಾಗುವ ಮೊದಲೇ ತಿನ್ನಲು ಹೇಳುತ್ತಿದ್ದರು. ನಾವು ಚಾಕಲೇಟ್ ಅನ್ನು ಸುತ್ತಿಡುವ ತೆಳು ಪ್ಲಾಸ್ಟಿಕ್ ಹಾಳೆಗಳನ್ನು ತರಗತಿಗಳಲ್ಲಿ ಎಲ್ಲೆಂದರಲ್ಲಿ ಎಸೆಯಲು ಬಿಡದೆ ಅವನ್ನು ಅವರೇ ಸಂಗ್ರಹಿಸಿ ತಮ್ಮ ಬಿಳಿ ಗೌನ್‌ನ ಎರಡು ದೊಡ್ಡ ಜೇಬುಗಳಲ್ಲಿ ತುಂಬಿಸಿಕೊಂಡು, ತರಗತಿ ಮುಗಿದ ಬಳಿಕ ಕಾರಿಡಾರ್‌ನಲ್ಲಿರುತ್ತಿದ್ದ ಕಸದ ಡಬ್ಬಕ್ಕೆ ಹಾಕುತ್ತಿದ್ದುದನ್ನು ನೋಡಿ ನಾವು ಅ-ವಾಕ್ ಆಗಿದ್ದೆವು.

ಯಾವತ್ತೂ ಮಂದಸ್ಮಿತರಾಗಿಯೇ ಇರುತ್ತಿದ್ದ ಅವರು, ಕೆಲವು ಕುಶಾಲು ತೋಪುಗಳನ್ನು ಸಿಡಿಸಿ ನಮ್ಮನ್ನು ನಗಿಸದೆ ತರಗತಿ ಮುಗಿಸಿದ ದಿನವೇ ಇಲ್ಲ. ಅಂತಹ ಒಂದು ದಿನ ಅವರು ನನ್ನನ್ನು ಕರೆದು, "ಫಾದರ್ಸ್ ರೆಸಿಡೆನ್ಸಿಯ ನನ್ನ ಕೋಣೆಯಲ್ಲಿ ಕೆಲವು ಪುಸ್ತಕಗಳನ್ನು ಎತ್ತಿಟ್ಟಿದ್ದೀನಿ. ಅವನ್ನು ತಂದು ಡಿಪಾರ್ಟ್‌ಮೆಂಟ್ ಲೈಬ್ರರಿಯಲ್ಲಿ ಇಡಬಹುದೇ?" ಅಂದರು. ನಾನು ಮತ್ತು ಇನ್ನಿಬ್ಬರು ಗೆಳೆಯರು ಫಾದರ್ ಅವರ ಕೋಣೆಗೆ ಹೋದೆವು. ನೂರಾರು ಪುಸ್ತಕಗಳು ಅಲ್ಲಿದ್ದವು. ನಾವು ಒಂದೊಂದು ಪುಸ್ತಕವನ್ನೂ ಎತ್ತಿಎತ್ತಿ ನೋಡಿದೆವು. ಸಾಹಿತ್ಯವನ್ನು ಇಷ್ಟಪಟ್ಟು ಓದುವ ಯಾರ ಮನೆಯಲ್ಲಾದರೂ ಇರಲೇಬೇಕಾದ ಪುಸ್ತಕಗಳು ಅವು. ನಮಗೋ ಸ್ವಂತಕ್ಕೆ ಪುಸ್ತಕ ಖರೀದಿಸಲು ಕಿಸೆಯಲ್ಲಿ ದುಡ್ಡಿರುತ್ತಿರಲಿಲ್ಲ. ಹಾಗಂತ ನಮ್ಮದ್ದೇ ಆದ ಪುಸ್ತಕಗಳನ್ನು ಹೊಂದಬೇಕೆಂಬ ಕನಸಿಗೆ ಕೊರತೆಯೂ ಇರಲಿಲ್ಲ. ಒಂದೆರಡು ಪುಸ್ತಕ ಎತ್ತಿ ಬಿಡೋಣ ಅಂತ ಅನ್ನಿಸಿತು.

'ಎರಡೆರಡು ಪುಸ್ತಕ ಒಳಗೆ ಹಾಕೋಣ' ಅಂತ ಗೆಳೆಯರಿಗೆ ಹೇಳಿದ ನಾನು ಮೂರು ಪುಸ್ತಕ ಎತ್ತಿಕೊಂಡೆ. (ಮೋಸದೊಳಗೊಂದು ಮೋಸ.) ನಾನು ಕದ್ದ ಪುಸ್ತಕಗಳೆಂದರೆ ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ, ಶಿವರಾಮ ಕಾರಂತರ ಔದಾರ್ಯದ ಉರುಳಿನಲ್ಲಿ ಮತ್ತು ಗೌರೀಶ್ ಕಾಯ್ಕಿಣಿಯವರ ವಾಲ್ಮೀಕಿ ತೂಕಡಿಸಿದಾಗ. ನನ್ನ ಗೆಳೆಯರು ಏನೇನು ತಗೊಂಡರು ಅಂತ ನಾನು ನೋಡ ಹೋಗಲಿಲ್ಲ. ಮಿಕ್ಕ ಎಲ್ಲ ಪುಸ್ತಕಗಳನ್ನು ತಂದು ಕನ್ನಡ ವಿಭಾಗದಲ್ಲಿ ಇಟ್ಟೆವು.

ಪುಸ್ತಕಗಳನ್ನು ಕದ್ದು ಮನೆಗೆ ತೆಗೆದುಕೊಂಡು ಹೋದ ಬಳಿಕ ಶೇಕ್ಸ್‌ಪಿಯರ್‌ನ ಮ್ಯಾಕ್ಬೆತ್ ತರಹ ಆಗೋಯ್ತು ನನ್ನ ಕಥೆ. ಆ ಮೂರೂ ಪುಸ್ತಕಗಳು ದೆವ್ವಗಳಂತೆ ನನಗೆ ಗೋಚರಿಸ ತೊಡಗಿದವು. ಏನೋ ಒಂದು ಬಗೆಯ ಪಾಪಪ್ರಜ್ಞೆ, ಹೆದರಿಕೆಯಿಂದ ಅವುಗಳ ಒಂದು ಪುಟವನ್ನೂ ತೆರೆಯಲಿಲ್ಲ ನಾನು. ಅದಾಗಿ ವಾರ ಕಳೆದ ಬಳಿಕ ಒಂದು ಸಂಜೆ ನಾನು ಕಾಲೇಜ್‌ನ ಲೈಬ್ರರಿಗೆ ಹೋದೆ. ಆಗಿನ ಲೈಬ್ರೇರಿಯನ್ ಡಾ. ಜಾರ್ಜ್ ರಾಡ್ರಿಗಸ್ ಅವರು ಅಲ್ಲಿ ಕುಳಿತಿದ್ದರು. ಅವರ ಜೊತೆ ಮಾತಾಡ್ತಾ ಏನೋ ಮಾತಿಗೆ ಮಾತು ಬಂದು ಅವರು "ಜ್ಞಾನವನ್ನು

ಕದಿಯುವುದು ಅಪರಾಧ ಅಲ್ಲ, ಆದರೆ ಪುಸ್ತಕಗಳನ್ನು ಕದಿಯುವುದು ಅಪರಾಧ" ಅಂದರು. ನನಗೆ ಕಪಾಳಮೋಕ್ಷ ಮಾಡಿದಂತೆ ಆಯಿತು. ಮನೆಗೆ ಹೋದವನೇ ಕುವೆಂಪು ಮತ್ತು ಕಾರಂತರ ಪುಸ್ತಕಗಳನ್ನು ತಂದು ವಿಭಾಗದಲ್ಲಿಟ್ಟು ಕೈ ಮುಗಿದೆ. ವಾಲ್ಮೀಕಿ ತೂಕಡಿಸಿದಾಗ ಪುಸ್ತಕವನ್ನು ನಾನು ಅಂದು ಮರಳಿಸಲಿಲ್ಲ. ಆದರೆ ಅದನ್ನು ನಾನು ಇವತ್ತು ತಂದಿದ್ದೇನೆ. ದಯವಿಟ್ಟು ತಪ್ಪು ತಿಳಿಯಬೇಡಿ. ಈ ಪುಸ್ತಕವನ್ನು ನಾನು ಇವತ್ತು ತಂದಿರುವುದು ಕಾಲೇಜ್‌ಗೆ ಹಿಂತಿರುಗಿಸುವ ಉದ್ದೇಶದಿಂದಂತೂ ಖಂಡಿತಾ ಅಲ್ಲ. ನನ್ನ ಹುಡುಗಾಟದ ದಿನಗಳಲ್ಲಿನ ಕಳ್ಳತನದ ನೆನಪಾಗಿ ಈ ಪುಸ್ತಕ ಯಾವತ್ತೂ ನನ್ನ ಜೊತೆ ಇರಬೇಕು. ಯಾಕೆಂದರೆ ಅಂದಿನಿಂದ ಇಂದಿನವರೆಗೆ ನಾನು ನೈತಿಕವಾಗಿ ಕುಸಿಯದಂತೆ ಈ ಪುಸ್ತಕ ನನ್ನನ್ನು ತಡೆದಿದೆ. ತಡೆಯುತ್ತಿದೆ. ಬೌದ್ಧಿಕ ಹಸಿವಿನಲ್ಲಿ ಪುಸ್ತಕ ಕಳ್ಳತನದಂತಹ ಹುಡುಗಾಟದ ಕೆಲಸ ಮಾಡಿದ ನನ್ನನ್ನು ಅಧ್ಯಾಪಕನನ್ನಾಗಿ ಪರಿವರ್ತಿಸಿದ, ಪುಸ್ತಕ ಲಪಟಾಯಿಸಿದವನನ್ನೇ ಪುಸ್ತಕ ಬಿಡುಗಡೆಗೆ ಕರೆಯಿಸಿದ ತಾಯಿ ಪ್ರೀತಿಯ ಈ ನನ್ನ ಕಾಲೇಜ್‌ಗೆ ಮತ್ತೊಮ್ಮೆ ದೀರ್ಘದಂಡ ಪ್ರಣಾಮಗಳು.

* * *

ಯಕ್ಷಗಾನವನ್ನು ಸೇವೆ–ಆರಾಧನೆ ಎಂದು ಹೇಳುವವರು, ಯಕ್ಷಗಾನವನ್ನು ನಮ್ಮ ಹೆಮ್ಮೆಯ ಸಂಸ್ಕೃತಿ ಎಂದು ಹೇಳುವವರು, ಯಕ್ಷಗಾನದ ಕಾರಣಕ್ಕಾಗಿ ಕಲೆ–ಸಂಸ್ಕೃತಿ ಕ್ಷೇತ್ರದಲ್ಲಿ ಗುರುತಿಸಿಕೊಳ್ಳಬಯಸುವ ಶಿಕ್ಷಣಸಂಸ್ಥೆಗಳವರು ಅಚ್ಚರಿ ಪಡುವಂತೆ ಕ್ರಿಶ್ಚಿಯನ್ ಧಾರ್ಮಿಕ ಸಂಸ್ಥೆಯ ಆಡಳಿತಕ್ಕೊಳಪಟ್ಟ ಈ ಕಾಲೇಜು ಗೋವಿಂದ ಭಟ್ಟರ ಆತ್ಮಕಥೆಯನ್ನು ಪ್ರಕಟಿಸಿರುವುದು ನನಗೆ ಈ ಕಾಲದಲ್ಲಿ ಬಹಳ ಮಹತ್ವದ ಸಂಗತಿಯಾಗಿ ಕಂಡಿದೆ. ಅದರ ಜೊತೆಗೆ ಪುಸ್ತಕ ಬಿಡುಗಡೆ, ತಾಳಮದ್ದಲೆಯಂತಹ ಅರ್ಥಪೂರ್ಣ ಕಾರ್ಯಕ್ರಮವನ್ನೂ ಆಯೋಜಿಸಿರುವುದಕ್ಕಾಗಿ ನಾನು ಮೊತ್ತಮೊದಲಿಗೆ ಸಂತ ಅಲೋಶಿಯಸ್ ಕಾಲೇಜಿನ ರೆಕ್ಟರ್ ಆದ ರೆ. ಫಾ. ಮೆಲ್ವಿನ್ ಜೋಸೆಫ್ ಪಿಂಟೋ ಅವರನ್ನು, ಪ್ರಾಂಶುಪಾಲರಾದ ರೆ. ಫಾ. ಡಾ. ಪ್ರವೀಣ್ ಮಾರ್ಟಿಸ್ ಅವರನ್ನು ವಿಶೇಷವಾಗಿ ಅಭಿನಂದಿಸುವುದಕ್ಕೆ ಬಯಸುತ್ತೇನೆ. ಈ ಸಂಸ್ಥೆಯ ಬಗ್ಗೆ ವಿನಾ ಕಾರಣ ಇಲ್ಲ–ಸಲ್ಲದ ಕೆಟ್ಟ ಮಾತುಗಳನ್ನು ಆಡುತ್ತಿರುವ ಮತೀಯ ಭಾವನೆಗಳಿಂದ ಉನ್ಮತ್ತಗೊಂಡ ಸಂಘಟನೆಗಳಿಗೆ ಇಂದಿನ ಈ ಕಾರ್ಯಕ್ರಮವನ್ನು ತೋರು ಬೆರಳೆತ್ತಿ ತೋರಿಸಬೇಕೆನಿಸುತ್ತದೆ.

ಕೆ. ಗೋವಿಂದ ಭಟ್ಟರು ಬರೆದಿರುವ ಎಪ್ಪತ್ತು ತಿರುಗಾಟಗಳು ಎಂಬ ಈ ಪುಸ್ತಕದ ಮೊದಲ ಒಳಪುಟದಲ್ಲಿ ದಾಸಿಮಯ್ಯನ ಈ ವಚನವನ್ನು ಛಾಪಿಸಲಾಗಿದೆ.

ಒಡಲುಗೊಂಡವ ಹಸಿವ
ಒಡಲುಗೊಂಡವ ಹುಸಿವ
ಒಡಲಗೊಂಡವನೆಂದು ನೀನೊಮ್ಮೆ ಜಡಿದು ನುಡಿಯದಿರಾ
ನೀನೆನ್ನಂತೊಮ್ಮೆ ಒಡಲುಗೊಂಡು ನೋಡಾ ರಾಮನಾಥ

ಉಪ್ಪು-ಹುಳಿ-ಖಾರ ತಿನ್ನುವ ಎಲ್ಲ ಮನುಷ್ಯರ ಆತ್ಮಕಥೆಯ ಮುನ್ನುಡಿಯಂತಿರುವ ಈ ವಚನವನ್ನು ವಿವರಿಸುವುದು, ಗೋವಿಂದ ಭಟ್ಟರ ಆತ್ಮಕಥೆಯಾಗಿರುವ ಎಪ್ಪತ್ತು ತಿರುಗಾಟಗಳು ಎಂಬ ಪುಸ್ತಕವನ್ನು ಅವಲೋಕಿಸುವುದು ಎರಡೂ ಬೇರೆಬೇರೆ ಅಲ್ಲ ಎಂದು ನಾನು ಭಾವಿಸಿದ್ದೇನೆ.

ಒಡಲುಗೊಂಡವ ಹಸಿವ. ದಾಸಿಮಯ್ಯ ಸ್ವತಃ ದೇವರಿಗೇ ಏನು ಹೇಳ್ತಿದ್ದಾನೆ ಅಂದರೆ, ಹೌದಯ್ಯ ನನಗೆ ಹಸಿವಿದೆ. ಹಸಿವು ಅಂದರೆ ಅದು ಕೇವಲ ಹೊಟ್ಟೆಯ ಹಸಿವು ಮಾತ್ರ ಅಲ್ಲ, ಪಂಚೇಂದ್ರಿಯಗಳ ಹಸಿವೆಯೂ ಕೂಡ. ಈ ಬಗೆಯ ದೈಹಿಕ ಹಸಿವು ಮಾತ್ರವಲ್ಲದೆ ಮನುಷ್ಯ ಮಾತ್ರರಾದವರಿಗೆ ಅಧಿಕಾರದ ಹಸಿವಿರುತ್ತದೆ, ಕೀರ್ತಿಯ ಹಸಿವಿರುತ್ತದೆ. ಹಸಿವಷ್ಟೇ ಅಲ್ಲದೆ ಎಂದೆಂದಿಗೂ ಮುಗಿಯದ ಲಾಲಸೆ-ಲೋಲುಪತೆಯೂ ಇರುತ್ತದೆ.

ಒಡಲುಗೊಂಡವ ಹುಸಿವ. ಹೌದಪ್ಪ ದೇವರೇ ನಾನು ಸುಳ್ಳು ಹೇಳ್ತೇನೆ. ಬದುಕುವುದಕ್ಕಾಗಿ ಸುಳ್ಳು ಹೇಳ್ತೇನೆ. ನನಗೆ ಬೇಕಾದವರನ್ನು ಬದುಕಿಸುವುದಕ್ಕೆ ಸುಳ್ಳು ಹೇಳ್ತೇನೆ. ನನ್ನ ವಿರೋಧಿಗಳನ್ನು ಬಲಿ ಹಾಕುವುದಕ್ಕೂ ಸುಳ್ಳು ಹೇಳ್ತೇನೆ. ನಾನು ಹೇಳುತ್ತಿರುವುದು ಸುಳ್ಳು ಎಂಬ ಸತ್ಯ ಗೊತ್ತಿದ್ದರೂ ಮತ್ತೆಮತ್ತೆ ಸುಳ್ಳು ಹೇಳ್ತೇನೆ. ಸುಳ್ಳುಗಳನ್ನು ಹೊರಹಾಕುವುದರ ಮೂಲಕವೇ ನಾನು ನನ್ನ ಈ ದೇಹವನ್ನು ತಣಿಸಬೇಕಾಗಿದೆ, ತುಂಬಿಸಬೇಕಾಗಿದೆ.

ಒಡಲುಗೊಂಡವನು ಎಂದು ನೀನು ಎನ್ನ ಜಡಿದು ಒಮ್ಮೆ ನುಡಿಯದಿರ್. ಹಸಿವನ್ನು ತಣಿಸಲು ಈ ಮನುಷ್ಯ ಎಷ್ಟೆಲ್ಲ ಕಸರತ್ತು ಮಾಡುತ್ತಾ ಇದ್ದಾನೆ ಎಂದು ನನ್ನನ್ನು ಆಡ್ಕೊಂಡು ನಗಬೇಡಪ್ಪ ನೀನು ಪುಣ್ಯಾತ್ಮ. ಛೇಡಿಸಿ, ಛೇಡಿಸಿ ನನ್ನನ್ನು ಝಾಡಿಸಬೇಡ. ನಿನಗೆ ನನ್ನ ಬದುಕಿನ ಲೇವಾದೇವಿ ಅರ್ಥ ಆಗುತ್ತಿಲ್ಲ, ಅದರ ಸಂಕೀರ್ಣತೆಗಳೂ ತಿಳಿಯುತ್ತಿಲ್ಲ. ಅರ್ಥ ಆಗಿರುತ್ತಿದ್ದರೆ ನೀನು ಹೀಗೆ ನಗುತ್ತಿರಲಿಲ್ಲ. ನನ್ನಂತಹ ಒಡಲುಗೊಂಡವರ ಕಷ್ಟ ನಿನಗೂ ತಿಳಿಯಬೇಕಿದ್ದರೆ ನೀನೂ ಒಮ್ಮೆ ಈ ಮನುಷ್ಯ ದೇಹವನ್ನು ಧರಿಸಿ ನೋಡು.

ನೀನೂ ಎನ್ನಂತೆ ಒಮ್ಮೆ ಒಡಲುಗೊಂಡು ನೋಡಾ ರಾಮನಾಥ. ನನ್ನಂತೆ ದೇಹಧಾರಿಯಾದ ಬಳಿಕವೂ ನಿಷ್ಕಳಂಕವಾಗಿರುವುದಕ್ಕೆ ಸಾಧ್ಯವೇ ಎಂಬುದನ್ನು

ಜನರ ನಡುವೆ ಬದುಕಿ ತೋರಿಸು. ದೇಹಧರ್ಮಕ್ಕಿಂತ ಮಿಗಿಲಾದ ಇನ್ನೊಂದು ಧರ್ಮವುಂಟೇ?- ಇದು ದಾಸಿಮಯ್ಯ ತಾನು ನಂಬಿದ ದೇವರಿಗೆ ಹಾಕುತ್ತಿರುವ ಸವಾಲು ಅಥವಾ ದೇಹಬಾಧೆಗೊಳಗಾಗಿ, ಪೂರ್ಣ ಪ್ರಮಾಣದ ಭಕ್ತನಾಗುವ ಪ್ರಕ್ರಿಯೆಯಲ್ಲಿ ಒದ್ದಾಡುತ್ತ ವಿಹ್ವಲಗೊಂಡು ಕೇಳುತ್ತಿರುವ ಪ್ರಶ್ನೆ.

ದೇಹಧಾರಿಗಳಾದ ನಮ್ಮಂತಹ ಹುಲು ಮನುಷ್ಯರ ಕಷ್ಟ-ಕಾರ್ಪಣ್ಯದ ಕಥೆಯನ್ನು ಹೇಳುವ, ನಮ್ಮ ಅಹಂ ಪ್ರತಿಷ್ಠಾಪನೆಯ ಮತ್ತು ನಮ್ಮ ಅಹಂ ವಿಸರ್ಜನೆಯ ಕಥೆಯನ್ನು ಮರುನಿರೂಪಿಸುವ ಗೋವಿಂದ ಭಟ್ಟರ ಈ ಪುಸ್ತಕವನ್ನು ಓದಿ ಮಾತಾಡುವ ಯಾರೇ ಆಗಲಿ ತನ್ನನ್ನು ತಾನು ಶೋಧಿಸದೆ, ತನ್ನನ್ನು ತಾನು ಸೋಸದೆ ಮಾತಾಡಲು ಸಾಧ್ಯವಾಗದು.

ಗೋವಿಂದ ಭಟ್ಟರು ತಮ್ಮ ಈ ಆತ್ಮಕಥೆಯಲ್ಲಿ ತಮ್ಮ ಸಾಂಸಾರಿಕ ಬದುಕಿನ ಮತ್ತು ಬಣ್ಣದ ಬದುಕಿನ ಎಲ್ಲ ಬಗೆಯ ವೇಷಗಳನ್ನೂ ಕಳಚಿ ಸಂಪೂರ್ಣ ಬೆತ್ತಲಾಗಿ ನಿಂತಿದ್ದಾರೆ. ನಗ್ನ ಸ್ಥಿತಿ ಮಾತ್ರವಲ್ಲ ಸ್ಥಿತಪ್ರಜ್ಞತೆಯೂ ಅವರ ಸ್ಥಾಯೀ ಗುಣ. ಈ ಸ್ಥಾಯೀ ಗುಣದೊಂದಿಗೆ ಅನುಸಂಧಾನ ಮಾಡಬೇಕಿದ್ದರೆ ಓದುಗರಾದ ನಾವೂ ಬೆತ್ತಲಾಗಬೇಕು. ನಾವು ಬೆತ್ತಲಾಗದೆ ಇದ್ದರೆ ಇನ್ನೊಬ್ಬರ ಬೆತ್ತಲು ನಮಗೆ ಅರ್ಥವಾಗದು.

೨೭೦ ಪುಟಗಳಿರುವ ಈ ಪುಸ್ತಕವನ್ನು ಓದಿದ ಬಳಿಕ ನನಗೆ ಎದುರಾದ ಮೊದಲ ಮತ್ತು ಕೊನೆಯ ಪ್ರಶ್ನೆ ಮನುಷ್ಯ ಬದುಕಿನ ಅರ್ಥ ಏನು ಎಂಬುದೇ ಆಗಿದೆ. ಇದು ಬಹಳ ದೊಡ್ಡ ತಾತ್ತ್ವಿಕ ಪ್ರಶ್ನೆ. ದಾಸಿಮಯ್ಯ ತನ್ನ ವಚನದಲ್ಲಿ ಹೇಳಿದಂತೆ ಈ ದೇಹವನ್ನು ಹೊತ್ತಿರುವ ನಾವು ಇದರಿಂದಲೇ ಸುಖವನ್ನೂ ಮತ್ತು ಕಷ್ಟವನ್ನೂ ಅನುಭವಿಸುವ ಹುಲು ಮಾನವರು. ಕಷ್ಟ-ಸುಖಗಳ ವ್ಯಾಖ್ಯಾನವನ್ನು ಸರಿಯಾಗಿ ನಿರ್ವಚಿಸಲಾಗದೆ, ದೇಹಧರ್ಮದ ಜೊತೆಗೆ ಏಗುವವರು ನಾವು. ದೇಹ ಇದೆ ಎಂಬ ಕಾರಣಕ್ಕಾಗಿ ಬೀಗುವವರೂ ಹೌದು. ಒಂದು ದೇಹವನ್ನು ಧರಿಸಿಕೊಂಡೇ ಪಡಬಾರದ ಪಾಡು ಅನುಭವಿಸುವವರನ್ನು ದಾಸಿಮಯ್ಯ ವಿವರಿಸುತ್ತಾನೆ. ಆದರೆ ಯಕ್ಷಗಾನದ ಕಲಾವಿದರು ಹಗಲಿನ ವಾಸ್ತವಿಕ ಜಗತ್ತಿನಲ್ಲಿ ಒಂದು ದೇಹವನ್ನು ಹೊತ್ತು, ರಾತ್ರಿಯ ಮಾಂತ್ರಿಕ ಲೋಕದಲ್ಲಿ ಇನ್ನೊಂದು ದೇಹವನ್ನು ಹೊಕ್ಕು ಬದುಕುವವರು. ಅಥವಾ ಇದನ್ನು ಹೀಗೂ ಹೇಳಬಹುದು. ಹಗಲಿನ ದೇಹದ ಹಸಿವನ್ನು ಈಡೇರಿಸುವುದಕ್ಕಾಗಿ ರಾತ್ರಿಯ ಹೊತ್ತು ಮಾಯಾಲೋಕದ ಕಲ್ಪಿತ ದೇಹದ ಪರಕಾಯ ಪ್ರವೇಶ ಮಾಡುವವರು.

ಒಂದು ದೇಹ ಹೊತ್ತವನ ಕಥೆಯನ್ನೇ ದಾಸಿಮಯ್ಯ ನಮ್ಮ ಮುಂದೆ ಉಸ್ಸಪ್ಪಾ ಎಂದು ಸುಸ್ತಾಗುವಂತೆ ಉಸುರಿದ್ದಾನೆ. ಹಾಗಿದ್ದರೆ ಎರಡೆರಡು ದೇಹಗಳನ್ನು

ಹೊತ್ತವರ ಕಥೆ ಹೇಗಿರಬಹುದು ಎಂಬ ಕುತೂಹಲ ಇರುವವರು ಅಗತ್ಯವಾಗಿ ಈ ಪುಸ್ತಕ ಓದಬೇಕು. ಇದನ್ನು ಓದುವಾಗ ನನಗೆ ಶಿವರಾಮ ಕಾರಂತರ ಬೆಟ್ಟದ ಜೀವ ಕಾದಂಬರಿಯನ್ನು ಮತ್ತೊಮ್ಮೆ ಓದಿದ ಅನುಭವವಾಯಿತು. ಅದು ಬೆಟ್ಟದ ಜೀವ, ಇದು 'ಆಟದ ಜೀವ'. ಬೆಟ್ಟದ ಜೀವವೂ ಮನುಷ್ಯ ಸಾಹಸದ, ಅಪರಿಮಿತ ದೈಹಿಕ ಶ್ರಮದ ಮತ್ತು ಮಾನಸಿಕ ದಣಿವಿನ ಕಥೆ. ಗೋವಿಂದ ಭಟ್ಟರ ಎಪ್ಪತ್ತು ತಿರುಗಾಟವೂ ಕೂಡ ಹೀಗೆಯೇ ಇದೆ.

ಶ್ರೀ ಕ್ಷೇತ್ರ ಧರ್ಮಸ್ಥಳದ ಯಕ್ಷಗಾನ ಮೇಳದಿಂದ ನಿವೃತ್ತರಾಗುವ ಸನ್ನಿವೇಶವನ್ನು ಗೋವಿಂದ ಭಟ್ಟರು ವಿವರಿಸುವುದು ಹೀಗೆ:

"ಖಾವಂದರಲ್ಲಿ ಇನ್ನು ತಿರುಗಾಟಕ್ಕೆ ಬರುವುದಿಲ್ಲ ಎಂದು ತಿಳಿಸಿದೆ. ಬೊಗಸೆಯಲ್ಲಿ ಗೆಜ್ಜೆಗಳನ್ನು ಹಿಡಿದು ಪೂಜ್ಯ ಮಂಜಯ್ಯ ಹೆಗ್ಗಡೆಯವರಿಂದ ಪಡೆದುದನ್ನು ನಿಮಗೆ ಒಪ್ಪಿಸುತ್ತಿದ್ದೇನೆ. ಈಗ ನನಗೆ ಬಣ್ಣ ಹಚ್ಚಿಕೊಳ್ಳಲು ಆಗುತ್ತಿಲ್ಲ. ಬೆಳಕು ನೋಡಿದರೆ ಮತ್ತೇನೂ ಕಾಣಿಸುವುದಿಲ್ಲ. ನಿರಂತರವಾಗಿ ಎಪ್ಪತ್ತು ತಿರುಗಾಟಗಳನ್ನು ಮಾಡಿದ್ದೇನೆ. ನಾನಿನ್ನು ಬಣ್ಣ ಹಚ್ಚುವುದಿಲ್ಲ, ಗೆಜ್ಜೆ ಕಟ್ಟುವುದಿಲ್ಲ".

ಲೋಕದಲ್ಲಿ ಎಲ್ಲರಿಗೂ ಬೆಳಕು ಬಿದ್ದರೆ ಕಾಣುತ್ತದೆ. ಗೋವಿಂದ ಭಟ್ಟರು ಹೇಳುತ್ತಾರೆ. ಬೆಳಕು ನೋಡಿದರೆ ನನಗೇನೂ ಕಾಣಿಸುವುದಿಲ್ಲ. ಇದು ದಣಿವಿನ ಮಾತೂ ಹೌದು. ಹಾಗೆಯೇ ಮನುಷ್ಯ ಜೀವವೊಂದರ ಕಷ್ಟ-ಕಾರ್ಪಣ್ಯವನ್ನು ರೂಪಕವಾಗಿ ಪರಿವರ್ತಿಸಿರುವ ಮಾತೂ ಹೌದು. ಈ ಪುಸ್ತಕವನ್ನು ನಾನು ತಡೆದೂ ತಡೆದೂ ಓದಿದೆ. ಯಾಕೆಂದರೆ ಅಷ್ಟು ದಣಿವು, ಅಷ್ಟು ನಿಟ್ಟುಸಿರು ಈ ಪುಸ್ತಕದ ಪ್ರತಿ ಸಾಲು-ಸಾಲುಗಳಲ್ಲಿ ಇದೆ.

ಗೋವಿಂದ ಭಟ್ಟರು ಸ್ವಭಾವತಃ ಭಾವಾವೇಶಕ್ಕೆ ಒಳಗಾಗುವವರಲ್ಲ. ಅವರ ಈ ಸ್ವಭಾವ ಕಲೆಯ ಕುರಿತಾದ ಅವರ ಚಿಂತನೆಯಲ್ಲೂ ಒಡಮೂಡಿದೆ. ಪಾತ್ರ ತನ್ಮಯತೆ ಅಥವಾ ಭಾವಪರವಶತೆ ತನಗೆ ಒಪ್ಪಿಗೆ ಇಲ್ಲ ಎಂಬುದನ್ನು ಅವರು ಉದ್ದಕ್ಕೂ ಪ್ರತಿಪಾದಿಸುತ್ತಲೇ ಬಂದಿದ್ದಾರೆ. ಕಲಾಮೀಮಾಂಸೆಯ ಹಿನ್ನೆಲೆಯಲ್ಲಿ ಹೇಳುವುದಾದರೆ 'ಮಾನಸಿಕ ದೂರ' ಎಂಬ ಚಿಂತನೆಯ ಪ್ರತಿಪಾದಕರು ಅವರು. ಈ ಚಿಂತನೆಯನ್ನು ಅವರು ತಮ್ಮ ಬದುಕಿನ ದಟ್ಟ ಜೀವನಾನುಭವದ ಹಿನ್ನೆಲೆಯಲ್ಲಿ ಕಟ್ಟುತ್ತಾರೆ ಎಂಬುದು ಇಲ್ಲಿ ಗಮನಾರ್ಹ. ನಾನು ಕಲೆಯ ಕರೆಗೆ ಓಗೊಟ್ಟು ಬಂದವನಲ್ಲ. ಯಕ್ಷೋಪಾಸನೆ ನನ್ನ ಗುರಿಯಲ್ಲ. ಹೊಟ್ಟೆಪಾಡು ನನ್ನ ಗುರಿ. ಇದು ಗೋವಿಂದ ಭಟ್ಟರ ಸ್ಪಷ್ಟ ಮಾತು. ಕಲೋಪಾಸನೆಯನ್ನು ನಿರಾಕರಿಸುವ ಗೋವಿಂದ ಭಟ್ಟರು ಕಲಾಮೀಮಾಂಸೆಯನ್ನು ನಿರಾಕರಿಸುವುದಿಲ್ಲ. ತಾನು ಯಾರಿಂದ ಏನೇನನ್ನು ಕಲಿತೆ, ಕಥಕ್-ಭರತನಾಟ್ಯಗಳ ತಿಳಿವು ನನ್ನ ನಡೆಗಳಲ್ಲಿ ಹೇಗೆ ಪ್ರತಿಫಲಿಸಿತು.

ಒಂದು ಪಾತ್ರವನ್ನು ರಂಗದಲ್ಲಿ ಚಿತ್ರಿಸುವಾಗ ಆ ಕುರಿತು ತಾನು ಯಾವ ಬಗೆಯ ಚಿಂತನೆ ನಡೆಸುತ್ತಿದ್ದೆ ಎಂಬಿತ್ಯಾದಿ ಅಂಶಗಳು ಇಲ್ಲಿ ಬಹಳ ಸೊಗಸಾಗಿ ಮೂಡಿ ಬಂದಿವೆ. ತಾನು ಏನು ಮಾಡಬೇಕು ಮತ್ತು ಅದನ್ನು ಹೇಗೆ ಮಾಡಬೇಕು ಎಂಬುದರ ಕುರಿತು ಆಳವಾಗಿ ಯೋಚನೆ ಮಾಡುತ್ತಿದ್ದೆ ಎಂದು ಓರ್ವ ಕಲಾವಿದನಾಗಿ ಗೋವಿಂದ ಭಟ್ಟರು ಇಲ್ಲಿ ಹೇಳಿರುವುದು ನನಗೆ ಬಹಳ ಬಹಳ ಮುಖ್ಯವಾದ ಮಾತಾಗಿ ಕಂಡಿದೆ. ಆದರೆ ಅವರ ಆ ಯೋಚನೆಯ ಕುರಿತು ಇನ್ನೂ ಸ್ವಲ್ಪ ಹೆಚ್ಚಿನ ವಿವರಣೆ ಬೇಕಿತ್ತು ಅಂತಲೂ ನನಗೆ ಅನ್ನಿಸಿದೆ.

ಪುಸ್ತಕದ ಶೀರ್ಷಿಕೆಯೇ ತಿರುಗಾಟಕ್ಕೆ ಒತ್ತು ಕೊಡುವುದರಿಂದ ಸಹಜವಾಗಿ ಲೌಕಿಕದ ವಿವರಗಳಿಗೆ ಲೇಖಕರು ಹೆಚ್ಚಿನ ಪ್ರಾಶಸ್ತ್ಯವನ್ನು ಇಲ್ಲಿ ಕೊಟ್ಟಿದ್ದಾರೆ. ಆಟ ಅಲ್ಲ ತಿರುಗಾಟ. ಆಟದ ಸಿದ್ಧ, ನಿಶ್ಚಿತ ಪ್ರಸಂಗಗಳಿಗಿಂತಲೂ, ತಿರುಗಾಟದಲ್ಲಿ ಸಂಭವಿಸುವ ಅನಿಶ್ಚಿತತೆ ಮತ್ತು ಆಕಸ್ಮಿಕ ಪ್ರಸಂಗಗಳು ಇಲ್ಲಿ ಹತ್ತು-ಹಲವು ಸೂಕ್ಷ್ಮಗಳೊಂದಿಗೆ ಮೈದಳೆದಿವೆ. ಇಲ್ಲಿ ಬರುವ ಮೇಳದ ಮತ್ತು ಸಂಸಾರದ ನೂರಾರು ಕೋಳಿಜಗಳಗಳಲ್ಲಿ ಗೋವಿಂದ ಭಟ್ಟರಿಗೆ ಎಂತಹ ಸ್ಥಿತಪ್ರಜ್ಞತೆ ಇದೆ ಎಂದರೆ ಒಬ್ಬ ಮನುಷ್ಯ ಹೀಗೂ ಬದುಕಲು ಸಾಧ್ಯವೇ ಎಂದು ಬೆರಗಾಗುತ್ತದೆ. ಬದುಕಿನಲ್ಲಿ ಮತ್ತು ಕಲೆಯಲ್ಲಿ ಅವಧೂತನಂತೆ ಅಂಟಿಯೂ ಅಂಟದಂತೆ ಬದುಕುವುದು ಹೇಗೆ ಎಂಬುದಕ್ಕೆ ಈ ಪುಸ್ತಕದಲ್ಲಿ ಬಂದಿರುವ ಅನೇಕಾನೇಕ ಘಟನೆಗಳು ಸಾಕ್ಷಿ ಒದಗಿಸುತ್ತವೆ.

ಪುಸ್ತಕ ಆರಂಭವಾಗುವುದೇ ಅನ್ನವನ್ನರಸುತ್ತಾ ಎಂಬ ಮೊದಲ ಅಧ್ಯಾಯದಿಂದ. ಈ ಮಾತುಗಳನ್ನು ಗಮನಿಸಿ:

"ಹೊಟ್ಟೆ ತುಂಬುವಲ್ಲಿಯವರೆಗೆ ಮನುಷ್ಯ ಪಶು. ಶುದ್ಧ ಪಶು. ಹೊಟ್ಟೆ ತುಂಬಿದ ಬಳಿಕವೇ ಅವನಿಗೆ ಎಲ್ಲದರ ಅರಿವಾಗುತ್ತದೆ. ಅಲ್ಲಿಂದ ಅವನು ಧಾರ್ಮಿಕನಾಗಲು, ನಾಗರಿಕನಾಗಲು, ಧರ್ಮಿಷ್ಟನಾಗಲು, ಒಟ್ಟಿನಲ್ಲಿ ಸುಭಗನಾಗಲು ತೊಡಗುತ್ತಾನೆ. ಜನ ನನ್ನನ್ನು ಯಕ್ಷಗಾನದ ಕಲಾವಿದನೆಂದು ಗುರುತಿಸುತ್ತಾರೆ. ಆದರೆ ಕಲೆಯ ಬಗ್ಗೆ ನನಗೆ ಅರಿವು ಮೂಡಿದ್ದೇ ಬಹಳ ತಡವಾಗಿ. ಊಟಕ್ಕಿಲ್ಲದೆ ಅಲೆದಾಡುತ್ತಿದ್ದೆ. ಯಾರ ಕೈ ಒಳ್ಳೆಯದು, ಯಾರ ಬಾಯಿ ಒಳ್ಳೆಯದು ಎಂದು ನೋಡುತ್ತಿದ್ದೆ. ಕೊನೆಗೆ ಹೊಟೇಲ್‌ನಲ್ಲಿ ಪ್ಲೇಟ್ ತೊಳೆಯುವ ಕೆಲಸಕ್ಕೆ ಸೇರಿದೆ. ಆಗ ಭೇಟಿಯಾದ ಹೊಸಹಿತ್ಲು ಮಹಾಲಿಂಗ ಭಟ್ಟರು ಯಕ್ಷಗಾನ ಮೇಳಕ್ಕೆ ಸೇರಿದರೆ ವರ್ಷಕ್ಕೆ ೫೦೦ ರೂಪಾಯಿ ಕೊಡುತ್ತಾರೆ ಎಂದಿದ್ದರು. ಅದಕ್ಕಾಗಿ ನಾನು ಯಕ್ಷಗಾನ ಕಲಿಯಲು ತೊಡಗಿದೆ".

–ಹೀಗೆ ಸಾಗುತ್ತದೆ ವಿವರಣೆ.

ಧರ್ಮಸ್ಥಳದ ಯಕ್ಷಗಾನ ಮೇಳ ಸೇರಲೆಂದು ಬಂದ ಗೋವಿಂದ ಮಾಣಿ, ನೇತ್ರಾವತಿ ನದೀ ದಂಡೆಯಲ್ಲಿ ಭಕ್ತಾದಿಗಳು ಮಿಂದು ಬಳಸಿ ಬಿಟ್ಟು ಹೋದ ಸಾಬೂನಿನ ಚೂರುಗಳನ್ನು ಹೆಕ್ಕುತ್ತ ಅದರಲ್ಲಿ ಮೈ ತೊಳೆಯುವ, ಬಟ್ಟೆ ತೊಳೆಯುವ ವಿವರಗಳ ನಿರ್ಭಾವುಕ ವಿವರಣೆಯಿಂದ ತೊಡಗುವ ಈ ಕಥನ

"ಕೊನೆಯ ತಿರುಗಾಟದಲ್ಲಿ ಮೂರು ಪ್ರಸಂಗಗಳಲ್ಲಿ ವೇಷ ಮಾಡಿದೆ. ಕೊನೆಯ ಆ ಮೂರೂ ವೇಷಗಳೂ ಮುಖಕ್ಕೆ ಬಣ್ಣವಿಲ್ಲದ, ಕಾಲಿಗೆ ಗೆಜ್ಜೆ ಇಲ್ಲದ ವೇಷಗಳು"

–ಎಂಬಲ್ಲಿ ಬಹುತೇಕ ಮುಕ್ತಾಯ ಆಗುತ್ತದೆ. ಮೇಳದ ಸುದೀರ್ಘ ತಿರುಗಾಟದಲ್ಲಿ ಮುಖದ ಬಣ್ಣವನ್ನೇನೋ ತೊಳೆಯಬಹುದು. ಆದರೆ ಬದುಕಿನ ಬವಣೆಗಳನ್ನು, ಅಪವಾದ–ಆರೋಪಗಳ ಕೊಳೆಯನ್ನು ತೊಳೆಯುವ ಸಾಬೂನು ಎಲ್ಲಿದೆ ಎಂಬುದರ ಹುಡುಕಾಟದಂತಿದೆ ಗೋವಿಂದ ಭಟ್ಟರ ಈ ಕಥನ.

ಈ ಪುಸ್ತಕದ ಕೆಲವು ಕಡೆ ವಾಕ್ಯಗಳು ಮುಕ್ಕಾಗಿವೆ, ನಿರೂಪಣೆಯಲ್ಲಿ ಒಂದು ಬಗೆಯ ಉಗ್ಗು ಬಂದಿದೆ. ಆದರೆ ಎಲ್ಲೂ ಅದು ಒಂದು ಸಮಸ್ಯೆ ಅಂತ ಅನ್ನಿಸುವುದೇ ಇಲ್ಲ. ಕೆಲವು ಕಡೆ ಅಂತೂ ಈ ತುಂಡು ವಾಕ್ಯಗಳು ಎಷ್ಟು ಅರ್ಥಗರ್ಭಿತವಾಗಿವೆಯೆಂದರೆ ಮತ್ತು ನಮ್ಮ ಕಾಲದ ಸಾಮಾಜಿಕ ಸೂಕ್ಷ್ಮಗಳನ್ನು ಹೇಗೆ ಕಟೆದು ನಿಲ್ಲಿಸಿವೆ ಎಂಬುದಕ್ಕೆ ಈ ಮಾತುಗಳನ್ನು ಗಮನಿಸಿ.

"ಉಡುಪಿಯ ಪೇಜಾವರ ಶ್ರೀಗಳು ಯತಿದೀಕ್ಷೆ ಪಡೆದು ಬಂದ ಬಳಿಕ ಕುರಿಯ ವಿಠಲ ಶಾಸ್ತ್ರಿಗಳ ಕೋರಿಕೆಯ ಮೇರೆಗೆ ನಾವು ಉಡುಪಿಯ ಮಠದ ಆವರಣದಲ್ಲಿ ಬಯಲಾಟ ಪ್ರದರ್ಶನ ನೀಡಿದೆವು. ಸ್ವಾಮೀಜಿಗಳು ಆಟ ನೋಡಿ ಖುಷಿ ಪಡುವರು ಎಂಬ ಕಾರಣದಿಂದ ಮಡಿವಂತರೂ ಬಂದು ಕುಳಿತಿದ್ದರು. ಒಂದು ಆಟ ನೋಡಿದರೆ ಏಳು ರಂಗಪೂಜೆ ನೋಡಬೇಕೆನ್ನುವ ವೈದಿಕ ವಿದ್ವಾಂಸರೂ ಅಲ್ಲಿದ್ದರು. ಮಠದ ಆವರಣದಲ್ಲಿ ಆಟ ಇದ್ದುದರಿಂದ ಸಾರ್ವಜನಿಕರಿಗೆ ಯಾರಿಗೂ ಪ್ರವೇಶ ಇರಲಿಲ್ಲ. ಆ ದಿನದ ಪ್ರಸಂಗದಲ್ಲಿ ಬಣ್ಣದ ವೇಷಧಾರಿಗಳಿಗೆ ಅವಕಾಶವೂ ಇರಲಿಲ್ಲ."

ಇಂತಹ ಸಾಲುಗಳನ್ನು ಓದಿಯೂ ಓದುಗ ನಿರಾಳವಾಗಿ ಮುಂದಕ್ಕೆ ದಾಟಿದರೆ ಆತ ಈ ಪುಸ್ತಕವನ್ನು ಸರಿಯಾಗಿ ಓದುತ್ತಿಲ್ಲ ಎಂದೇ ಅರ್ಥ. ಇಲ್ಲಿಯ ಸಾಲು–ಸಾಲುಗಳಲ್ಲಿ ನಿಂತು–ನಿಂತು ಓದಿದಾಗ ಇವು ಹೊರಸೂಸುವ ದಕ್ಷಿಣಕನ್ನಡದ ಸಾಮಾಜಿಕತೆ ನಮ್ಮ ಮುಂದೆ ಪ್ರತಿಫಲನಗೊಳ್ಳುತ್ತದೆ. ಯಾಕೆಂದರೆ ಇಂದಿಗೂ

ಕೂಡ ಕೆಲವೊಂದು ಅಪವಾದಗಳನ್ನು ಹೊರತುಪಡಿಸಿ, ಬಣ್ಣದ ವೇಷವನ್ನು ನಿರ್ವಹಿಸುವವರು ಶೂದ್ರ ಸಮುದಾಯದ ಕಲಾವಿದರೇ. ಎಪ್ಪತ್ತು ವರ್ಷಗಳ ಹಿಂದೆಯಂತೂ ಶೂದ್ರರಲ್ಲದೆ ಬೇರಾರೂ ಬಣ್ಣದ ವೇಷ ಮಾಡುತ್ತಿರಲಿಲ್ಲ. ಉಡುಪಿಯ ಮಠದ ಆವರಣಕ್ಕೆ ಆ ದಿನಗಳಲ್ಲಿ ಶೂದ್ರರಿಗೆ ಪ್ರವೇಶ ಇಲ್ಲವಾದುದರಿಂದ ಅಂದಿನ ದಿನ, ಬಣ್ಣದ ವೇಷ ಇಲ್ಲದ ಪ್ರಸಂಗವನ್ನೇ 'ಆಯ್ಕೆ' ಮಾಡಿಕೊಳ್ಳಲಾಯಿತು ಎಂಬುದನ್ನು ಗೋವಿಂದ ಭಟ್ಟರು ಸೂಕ್ಷ್ಮವಾಗಿ ನಿರೂಪಿಸುವುದರ ಮೂಲಕ ನಮ್ಮ ಯಾವ ಆಯ್ಕೆಯೂ ರಾಜಕೀಯ-ಮುಕ್ತ ಅಲ್ಲ ಎಂಬುದನ್ನೂ ಸೂಚಿಸುತ್ತಾರೆ.

ಇಂಥದ್ದೇ ಇನ್ನೊಂದು ಪ್ರಸಂಗ ಗಮನಿಸಿ. ಮೇಳದ ತಿರುಗಾಟದ ಮೊದಲ ವರ್ಷವನ್ನು ಮುಗಿಸಿದ ಗೋವಿಂದ ಮಾಣಿಗೆ ಮನೆಯ ಹಿರಿಯರು ಉಪನಯನ ಮಾಡುತ್ತಾರೆ. ಉಡುಪಿಯ ಮಠಗಳಲ್ಲಿ ಆಶ್ರಯ ಇತ್ತು ವೇದಾಭ್ಯಾಸ ಮಾಡಿಸುತ್ತಾರೆ ಎಂದು ಸಂಬಂಧಿಕರು ಹೇಳಿದ್ದರಿಂದ ಗೋವಿಂದ ಮಾಣಿ ಪೇಜಾವರ ಮಠ ಸೇರಿಕೊಳ್ಳುತ್ತಾರೆ.

"ಬೆಳಿಗ್ಗೆ ಮಧ್ವ ಸರೋವರದಲ್ಲಿ ಸ್ನಾನ, ಬಳಿಕ ಗಂಜಿ ಊಟ, ಆಮೇಲೆ ವೇದ ಪಾಠ. ಒಂದು ತಿಂಗಳ ಒಳಗೆ ನಾನು ಹವ್ಯಕನೆಂದು ಅಲ್ಲಿಯ ಮಕ್ಕಳಿಗೆಲ್ಲ ತಿಳಿಯಿತು. ಅನ್ಯಗ್ರಹದಿಂದ ಬಂದ ಜೀವಿಯಂತೆ ನನ್ನನ್ನು ನೋಡಲಾರಂಭಿಸಿದರು. ಶಿವಳ್ಳಿ ಬ್ರಾಹ್ಮಣರನ್ನು ಹೊರತುಪಡಿಸಿ ಉಳಿದ ವರ್ಗದವರು ಬ್ರಾಹ್ಮಣರೇ ಅಲ್ಲ ಎಂಬ ಭಾವನೆ ಅವರದ್ದಾಗಿತ್ತು. ಶಿವಳ್ಳಿ ಬಾಲಕರು ನನ್ನನ್ನು ಊಟಕ್ಕೂ ಸೇರಿಸಿಕೊಳ್ಳುತ್ತಿರಲಿಲ್ಲ. ಅವರು ಉಂಡು ಆದ ಬಳಿಕ ಅಡುಗೆಯವರು ನನಗೆ ಬೇರೆಯಾಗಿಯೇ ಉಣ್ಣಲು ಕೊಡುತ್ತಿದ್ದರು. ಹಿರಿಯ ವಿದ್ಯಾರ್ಥಿಗಳು ನಾನು ಇದ್ದರೆ ಪಾಠಕ್ಕೆ ಬಂದು ಕುಳಿತುಕೊಳ್ಳುತ್ತಿರಲಿಲ್ಲ. ನನಗೆ ಮಾತ್ರ ಪ್ರತ್ಯೇಕ ಪಾಠ ಹೇಳಿ ಕೊಡಲು ಗುರುಗಳಿಗೆ ಆಗುತ್ತಿರಲಿಲ್ಲ. ಗುರುಗಳು ಅನಿವಾರ್ಯವಾಗಿ ಹವ್ಯಕನಿಗೆ ಪಾಠ ಹೇಳಲಾರೆ ಎಂದರು. ನಿರ್ವಾಹವಿಲ್ಲದೆ ನಾನು ಅಲ್ಲಿಂದ ಹೊರಟೆ. ಅವರು ಯಾಕೆ ಹಾಗೆ ಮಾಡಿದರು ಎಂಬುದು ನನಗೆ ಅರ್ಥ ಆಗಲಿಲ್ಲ. ನನಗೆ ಇದ್ದದ್ದು ಊಟದ ಚಿಂತೆ ಮತ್ತು ದಿನದೂಡುವ ತವಕ ಅಷ್ಟೇ. ಪೇಜಾವರ ಶ್ರೀಗಳಲ್ಲಿ ನಾನು ಬೇಡಿಕೊಳ್ಳುತ್ತಿದ್ದರೆ ನನಗೆ ಬೇರೆ ವ್ಯವಸ್ಥೆ ಮಾಡುತ್ತಿದ್ದರೋ ಏನೋ. ಆದರೆ ಅದಕ್ಕೂ ನನ್ನ ತಲೆ ಓಡಲಿಲ್ಲ."

ಇಂತಹ ನೂರಾರು ಪ್ರಸಂಗಗಳು ಇಲ್ಲಿ ಕಿಕ್ಕಿರಿದಿವೆ. ಈ ಪುಸ್ತಕದಲ್ಲಿ ಓದುಗರು ಎಲ್ಲೂ ರಿಲಾಕ್ಸ್ ಆಗಲು ಸಾಧ್ಯವಿಲ್ಲ. ಹಸಿವಿನ ಪ್ರಶ್ನೆ ಜೀವಂತ ಇರುತ್ತಾ ಮನುಷ್ಯ ರಿಲಾಕ್ಸ್ ಆಗುವುದು ಹೇಗೆ ಎಂಬುದೇ ಗೋವಿಂದ ಭಟ್ಟರ

ಆದಿಮ ಪ್ರಶ್ನೆ ಇದ್ದಿರಬೇಕು. ಇನ್ನು ದೈಹಿಕ ಹಸಿವು ಮತ್ತು ಸಾಮಾಜಿಕ ಅವಮಾನ ಎರಡನ್ನೂ ಎದುರಿಸುವವರ ಕಥೆಯನ್ನು ವಿವರಿಸುವುದಾದರೂ ಹೇಗೆ? ಹಾಗೆಂದು ಮನುಷ್ಯ ಬದುಕಿನ ನಿಗೂಢ ಲೋಕವೊಂದು ಇಲ್ಲಿ ಬಿಚ್ಚಿಕೊಳ್ಳುವುದೂ ಇಲ್ಲ. ಅದು ಇನ್ನಷ್ಟು ನಿಗೂಢವಾಗುತ್ತಲೇ ಹೋಗುತ್ತದೆ.

ಈ ಪುಸ್ತಕದಲ್ಲಿ ನಾವು ಬಹಳವಾಗಿ ಮಿಸ್ ಮಾಡಿಕೊಳ್ಳುವುದು ಗೋವಿಂದ ಭಟ್ಟರ ಹೆಂಡತಿಯ ಕಥೆಯನ್ನು. ಕೆಲವೇ ಕೆಲವು ಸಾಲುಗಳಲ್ಲಿ ತಮ್ಮ ಹೆಂಡತಿಯನ್ನು ಗೋವಿಂದ ಭಟ್ಟರು ಚಿತ್ರಿಸುತ್ತಾರೆ. ಎರಡು ಪ್ರಕರಣಗಳನ್ನು ನಾನಿಲ್ಲಿ ಉಲ್ಲೇಖಿಸುತ್ತೇನೆ. ಮೊದಲನೆಯದು ಭಾರತ ಸರಕಾರದ ಸಂಗೀತ ಮತ್ತು ನಾಟಕ ಅಕಾಡೆಮಿಯ ಪ್ರಶಸ್ತಿಯನ್ನು ಸ್ವೀಕರಿಸುವ ಪ್ರಸಂಗ. ಪಂಚತಾರಾ ಹೊಟೇಲ್‌ನಲ್ಲಿ ಸರಕಾರ ಗೋವಿಂದ ಭಟ್ ದಂಪತಿಗಳಿಗೆ ವಸತಿ ವ್ಯವಸ್ಥೆ ಮಾಡಿದಾಗ ಭಟ್ಟರ ಹೆಂಡತಿ ಆ ಹೊಟೇಲ್ ನೋಡಿ "ಇಲ್ಲಿ ಮಲಗಿದರೆ ನನಗೆ ನಿದ್ದೆ ಬರಲಿಕ್ಕಿಲ್ಲ" ಎಂದು ಹೇಳ್ತಾರೆ. ಕೊನೆಗೆ ದಂಪತಿಗಳು ಕರ್ನಾಟಕ ಭವನಕ್ಕೆ ಬಂದು ಮಲಗುತ್ತಾರೆ. ಎರಡನೆಯದು ಗೋವಿಂದ ಭಟ್ಟರು ತಾಳಮದ್ದಲೆಯೊಂದರಲ್ಲಿ ಅರ್ಥ ಹೇಳುತ್ತಿರುವಾಗ ಅವರ ಹೆಂಡತಿಯೂ ಪ್ರೇಕ್ಷಕರಾಗಿ ಕುಳಿತಿರುತ್ತಾರೆ. ಅವರ ಪಕ್ಕದಲ್ಲಿ ಕುಳಿತ ಹೆಂಗಸರು "ಈಗ ಅರ್ಥ ಹೇಳುತ್ತಿರುವವನು ನಿನ್ನ ಮಗನಾ?" ಎಂದು ಕೇಳುತ್ತಾರೆ. ಅದೇ ಕೊನೆಯಾಗಿ ಮತ್ತೆಂದೂ ಭಟ್ಟರ ಹೆಂಡತಿ ಸಾರ್ವಜನಿಕವಾಗಿ ಕಾಣಿಸಿಕೊಳ್ಳುವುದಿಲ್ಲ. ಪಕ್ಕದ ಹೆಂಗಸರ ಈ ಪ್ರಶ್ನೆಯಿಂದ ಗೋವಿಂದ ಭಟ್ಟರ ಹೆಂಡತಿ ಎಷ್ಟು ಜರಾಜೀರ್ಣವಾಗಿರುವ ದೇಹವನ್ನು ಹೊತ್ತಿದ್ದಿರಬಹುದು ಎಂಬುದನ್ನು ನಾವು ಊಹಿಸಬಹುದು. ಗೋವಿಂದ ಭಟ್ಟರ ಹೆಂಡತಿಯೂ ಆರು ತಿಂಗಳಿಗೊಮ್ಮೆ ಮಾತ್ರ ಪ್ರತ್ಯಕ್ಷವಾಗುವ ಗಂಡನ ಬಗ್ಗೆ, ಗಂಡನಿಲ್ಲದ ದಿನಗಳಲ್ಲಿನ ತಮ್ಮ ಸಂಕಷ್ಟಗಳ ಬಗ್ಗೆ ತಮ್ಮ ಅನುಭವವನ್ನೂ ಇಲ್ಲಿ ಜೋಡಿಸಿರುತ್ತಿದ್ದರೆ ಎಪ್ಪತ್ತು ತಿರುಗಾಟಕ್ಕೆ ಒಂದು ಬಗೆಯ ಸಮಗ್ರತೆ ಬರುತ್ತಿತ್ತೋ ಏನೋ? ಆ ಭಾಗ ಇಲ್ಲದೆ ಈ ಪುಸ್ತಕ ತನ್ನ ತಿರುಗುವಿಕೆಯನ್ನು ಸಂಪೂರ್ಣ ಮಾಡಿಲ್ಲ. ಹಾಗೆಯೇ ಬಿ ವಿ ಕಾರಂತರ ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ ಆತ್ಮಕಥನಕ್ಕೆ ವೈದೇಹಿಯವರು ಒದಗಿಬಂದಂತೆ ಗೋವಿಂದ ಭಟ್ಟರಿಗೂ ವೈದೇಹಿಯಂತಹ ಓರ್ವ ಪ್ರತಿಭಾಶಾಲಿ ನಿರೂಪಕರು ಸಿಕ್ಕಿರುತ್ತಿದ್ದರೆ ಈ ಪುಸ್ತಕಕ್ಕೆ ಇನ್ನಷ್ಟು ಆಳ ಮತ್ತು ಅಗಲ ಪ್ರಾಪ್ತವಾಗುತ್ತಿತ್ತು ಎಂದೂ ಇದನ್ನು ಓದಿದಾಗ ನನಗೆ ಮತ್ತೆಮತ್ತೆ ಅನ್ನಿಸಿದ್ದು ಸುಳ್ಳಲ್ಲ.

ಪುಸ್ತಕದ ಪರಿಚಯವನ್ನು ಮುಗಿಸುವ ಮುನ್ನ ತಾತ್ತ್ವಿಕವಾಗಿ ನನಗೆ ಬಹಳ ಮುಖ್ಯ ಎಂದು ಅನ್ನಿಸಿದ ಒಂದು ಮಾತು ಇಲ್ಲಿ ಹೇಳಬೇಕು.

ನಮ್ಮ ಬದುಕಿಗೆ ಯಾವುದು ಮುಖ್ಯ ಮತ್ತು ಯಾವುದು ಅ-ಮುಖ್ಯ

ಎನ್ನುವುದು 'ಆಯ್ಕೆ'ಗಳ ಪ್ರಶ್ನೆಯಾಗಬಾರದು. ಬದಲಿಗೆ ಅದು ನಮ್ಮ 'ನಿರ್ಧಾರ'ಗಳ ಪ್ರಶ್ನೆ ಆಗಬೇಕು. ನಮ್ಮ ಬದುಕಿನ ಗತಿಯನ್ನು ನಿರ್ಧರಿಸಬೇಕಾಗಿರುವುದು ನಮ್ಮ ಬುದ್ಧಿಪೂರ್ವಕ ನಿರ್ಧಾರಗಳೇ ಹೊರತು ನಮ್ಮ ಅನಿವಾರ್ಯ ಆಯ್ಕೆಗಳಲ್ಲ. Decession cannot be reduced to the level of choice. ಇರುವ ಹತ್ತಾರು ಅವಕಾಶಗಳಲ್ಲಿ ಒಂದನ್ನು ಬುದ್ಧಿಪೂರ್ವಕವಾಗಿ ನಿರ್ಧರಿಸಿ ಆಯ್ಕೆ ಮಾಡುವ ಅವಕಾಶ ಇರದೆ, ಅನಿವಾರ್ಯವಾಗಿ ಯಾವುದೋ ಒಂದನ್ನು ಆಯ್ಕೆ ಮಾಡುವಂತಹ ಸನ್ನಿವೇಶ ನಮ್ಮ ಬಾಳ್ವೆಯ ಮುಂದೆ ಇದ್ದರೆ ಅದು ಹತಭಾಗ್ಯ ಬಾಳು. ಅಂತಹ ವಾತಾವರಣವನ್ನು ಹೊಂದಿರುವಂತಹ ಸಮಾಜ ಒಂದು ಸ್ವಸ್ಥ, ಆರೋಗ್ಯಪೂರ್ಣ ಸಮಾಜ ಅಲ್ಲ. ಕೊಟ್ಟಿರುವುದನ್ನು ಆಯ್ದುಕೊಂಡು ಬದುಕುವುದು ಬದುಕೋ ಅಥವಾ ಯಾವುದನ್ನು ಕೊಡಬೇಕು, ಯಾವುದನ್ನು ಕೊಡಬಾರದು ಎಂಬುದನ್ನು ನಿರ್ಧರಿಸುವಂತಹ ಒಂದು ಯೋಗ್ಯ ವಾತಾವರಣ ಇರುವುದೋ ಸಾರ್ಥಕ ಬದುಕೋ ಎಂಬುದರ ಕುರಿತು ನಾವು ಚಿಂತನೆ ನಡೆಸಬೇಕಿದೆ. ಗೋವಿಂದ ಭಟ್ಟರದ್ದು ನಿರ್ಧಾರದ ಬದುಕು ಅಲ್ಲ. ಆಯ್ಕೆಯ ಬದುಕು. ನಮ್ಮ ಸಮಾಜದ ಎಲ್ಲರ ಬದುಕನ್ನೂ ಅನಿವಾರ್ಯ ಆಯ್ಕೆಯ ಬದುಕಿನಿಂದ ದೃಢ ನಿರ್ಧಾರದ ಬದುಕಿನ ಕಡೆಗೆ ಚಲಿಸುವಂತೆ ಮಾಡುವುದೇ ಸಾಮಾಜಿಕ ಚಲನೆ.

(ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜು ಪ್ರಕಟಿಸಿದ ಯಕ್ಷಗಾನ ಕಲಾವಿದ ಸೂರಿಕುಮೇರು ಕೆ ಗೋವಿಂದ ಭಟ್ಟರ "ಎಪ್ಪತ್ತು ತಿರುಗಾಟಗಳು" ಕೃತಿಯನ್ನು ನವೆಂಬರ್ ೨೫, ೨೦೨೧ರಂದು ಬಿಡುಗಡೆ ಮಾಡುತ್ತ ಮಾತಾಡಿದ ಮಾತುಗಳ ಪರಿಷ್ಕೃತ ರೂಪ.)

ಕಾವ್ಯಕಾರಣ
(ವಾಸುದೇವ ನಾಡಿಗರ ಈವರೆಗಿನ ಕವಿತೆಗಳ ಕುರಿತು)

ಡಾ ಎಚ್. ಎಸ್. ಸತ್ಯನಾರಾಯಣ

ಕಳೆದ ಎರಡು ತಿಂಗಳಿಂದ ಹೋದಲ್ಲಿ ಬಂದಲ್ಲಿ ವಾಸುದೇವ ನಾಡಿಗರ ಕವಿತೆಗಳದ್ದೇ ಧ್ಯಾನ, ಅದರದ್ದೇ ಗುಂಗಿನಲ್ಲಿದ್ದೆ. ಮೊದಲಿಂದಲೂ ಅವರ ಕವಿತೆಗಳನ್ನು ಗಮನಿಸುತ್ತಾ ಬಂದಿದ್ದರೂ, 'ಅವನ ಕರವಸ್ತ್ರ'ವೂ ಸೇರಿದಂತೆ 'ಅನುಕ್ತ' ದ ಈವರೆಗಿನ ಅವರ ಎಲ್ಲ ಕವಿತೆಗಳನ್ನೂ ಮತ್ತೆ ಮತ್ತೆ ಓದತೊಡಗಿದೆ. ಅದುಎಷ್ಟರಮಟ್ಟಿಗೆ ಆವರಿಸಿಕೊಂಡು ಬಿಟ್ಟಿತೆಂದರೆ ದಿನಕ್ಕೊಮ್ಮೆಯಾದರೂ ನ್ಯೂಸ್‌ಅಪ್‌ಡೇಟ್ ಮಾಡಿಕೊಳ್ಳೋಣವೆಂದು ಟಿ.ವಿ. ನ್ಯೂಸ್‌ಚಾನೆಲ್ ನೋಡುವಾಗಲೂ ನನಗೆ ಅವರ 'ವಾರ್ತಾ ಸಮಯ' ಕವಿತೆಯ ನೆನಪು ಥಟ್ಟನೇ ಬಂದುಬಿಡುತ್ತಿತ್ತು. ಈ ಕವಿತೆ ನಾಡಿಗರ 'ಭವದ ಹಕ್ಕಿ' (೨೦೦೭) ಎಂಬ ಸಂಕಲನದಲ್ಲಿದೆ.

ನಿರ್ದಯೀ
ವಾರ್ತಾಕೋಣೆ ಥೇಟ್ ಆಸ್ಪತ್ರೆಯ ತರಹ

ರೋಗಿಗಳು ಉಲ್ಬಣಿಸಲೆಂಬ
ಹರಕೆಗೆ ಹೆಗಲು ಕೊಡುವ ಹೊಟ್ಟೆ
ಸರ್ವಜನೋ ಸುಖಿನೋಭವತುವಾದರೆ
ಅರ್ಜಿ ಗುಜರಾಯಿಸುವವರಾರಯ್ಯ!
ಬಂದು ಬೀಳುತ್ತಿರಲಿ
ಸುದ್ದಿಗಳು ಹಾಗೆಂಬ ರಕ್ತ ಕಥೆಗಳು
ಒಬ್ಬರ ಕಣ್ಣೀರ ಕಡಲ ಮಧ್ಯೆಯೇ
ಮತ್ತೊಬ್ಬ ನೆಲೆನಿಂತ ಅವಾಸ

ನಿರ್ದಾಕ್ಷಿಣ್ಯ
ಪತ್ರಿಕೆಯಕ್ಷರಗಳು ಥೇಟ್ ಬಾಯ್ಬಿಟ್ಟ
ಬಿಂದ ಬೇಸಿಗೆಯ ಕೆರೆಯಂಗಳ

(ವಾರ್ತಾ ಸಮಯ)

ಎಂಬುದಾಗಿ ನಮ್ಮ ಸುದ್ದಿ ಮಾಧ್ಯಮಗಳ ಅನೈತಿಕ ಹೊಣೆಗೇಡಿತನವನ್ನು ನಾಡಿಗರು ಹದಿಮೂರು ವರ್ಷಗಳ ಹಿಂದೆಯೇ ಕಾವ್ಯಾತ್ಮಕವಾಗಿ ಚಾಡಿಸಿದ್ದರೂ ಅಂದಿಗೂ ಇಂದಿಗೂ ನಮ್ಮ ವಾರ್ತೆಗಳಲ್ಲಿ ನಾರುವ ಹಸಿರಕ್ತದ ವಾಸನೆಯ ಕಮಟು ಕಡಿಮೆಯಾಗಿಲ್ಲ. ನ್ಯೂಸ್‌ರೂಮನ್ನು ಆಸ್ಪತ್ರೆಗೆ ಸಮೀಕರಿಸುವ, ಪತ್ರಿಕೆಯ ನಿರ್ದಾಕ್ಷಿಣ್ಯ ಅಕ್ಷರಗಳನ್ನು ಬಾಯ್ಬಿಟ್ಟ ಬಿಂದ ಬೇಸಿಗೆಯ ಕೆರೆಯಂಗಳಕ್ಕೆ ಹೋಲಿಸುವ ನಾಡಿಗರ ಪ್ರತಿಭೆ ಮಾತ್ರ ಸಂಕಲನದಿಂದ ಸಂಕಲನಕ್ಕೆ ವಿಕಸನ ಗೊಂಡಿದೆಯೆಂಬುದು ಅವರ ಕಾಳಜಿ ಮತ್ತು ಕಾವ್ಯ ಪ್ರೀತಿಯನ್ನು ಬಲ್ಲವರಿಗೆಲ್ಲಾ ಸಂತಸದ ಸಂಗತಿ.

ಹೆಚ್ಚೂ ಕಡಿಮೆ ಹದಿನೇಳನೇ ವಯೋಮಾನದಲ್ಲಿ ನಾಡಿಗರ ಕವಿತಾ ರಚನೆಯ ಆಸಕ್ತಿಗೆ ತೆರೆದುಕೊಂಡವರು. ಅವರ 'ವೃಷಭಾಚಲದ ಕನಸು' ಎಂಬ ಚೊಚ್ಚಲ ಕವನ ಸಂಕಲನ ಪ್ರಕಟವಾಗುವ ಹೊತ್ತಿಗೆ (೧೯೬೪) ನಾಡಿಗರು ನಮ್ಮ ನಡುವಿನ ಗಂಭೀರಕವಿಯೆಂದು ಸ್ಥಾಪಿತಗೊಂಡು, ಕಾವ್ಯಸಕ್ತರು ಕುತೂಹಲದ ಕಣ್ಣಿನಿಂದ ಇವರತ್ತ ನೋಡುವಂತೆ ಮಾಡಿದ್ದರು. ೧೯೬೦-೬೧ ರಲ್ಲಿ ಮೈಸೂರಿನಲ್ಲಿ ನಡೆದ ಅಖಿಲ ಭಾರತಕನ್ನಡ ಸಾಹಿತ್ಯ ಸಮ್ಮೇಳನದ ಪ್ರಮುಖ ಆಕರ್ಷಣೆಯಾಗಿದ್ದ ಕವಿಗೋಷ್ಠಿಯಲ್ಲಿ ವಾಸುದೇವ ನಾಡಿಗರೂ ಕವಿತಾ ವಾಚನ ಮಾಡಿದ್ದರು. ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದ ಒಲವಿನ ಕವಿ ಕೆ. ಎಸ್. ನರಸಿಂಹಸ್ವಾಮಿಯವರೂ ಅಂದು ಕವಿತಾ ವಾಚನಾ ಮಾಡಿದ್ದರು. ಹಲವು ಪ್ರತಿಭಾವಂತರಿಂದ ಇಡಿಕಿರಿದಿದ್ದ ಆ ಕವಿಗೋಷ್ಠಿಯ ಅತ್ಯಂತ ಕಿರಿಯ ವಯಸ್ಸಿನ ಕವಿ ವಾಸುದೇವ ನಾಡಿಗರು. ಈಗೆಲ್ಲಾ ಸಮ್ಮೇಳನಗಳ ಕವಿಗೋಷ್ಠಿಗಳ ಪಾಡನ್ನು ನಾವೆಲ್ಲ ಬಲ್ಲವರೇ. ಸಮ್ಮೇಳನದ ಕವಿಗೋಷ್ಠಿಗೆ ಆಯುವಾಗ ಆಯಾ ಕವಿಗಳು ಹೊರತಂದಿರುವ ಕವನ ಸಂಕಲನಗಳ ಸಂಖ್ಯೆ-ಗುಣಮಟ್ಟವನ್ನೂ ಆಗ ಗಣಿಸಲಾಗುತ್ತಿತ್ತು. ಅಂತಹ ವಾತಾವರಣದಲ್ಲಿ ಒಂದೂ ಸಂಕಲವನ್ನು ಹೊರತರದಿದ್ದ ನಾಡಿಗರು ಪ್ರತಿಷ್ಠಿತ ಕವಿಗೋಷ್ಠಿಯಲ್ಲಿ ಕವಿತಾ ವಾಚನ ಮಾಡಿದ್ದು ತಮ್ಮ ಕಾವ್ಯ ಪ್ರತಿಭೆಯಿಂದಲೇ ಹೊರತು, ಶಿಫಾರಸ್ಸಿನ ರಾಜಕಾರಣದಿಂದಲ್ಲ! ವಿದ್ಯಾರ್ಥಿದೆಸೆಯಲ್ಲೇ ನಾಡಿಗರ ಕಾವ್ಯ ಪ್ರತಿಭೆ ನಾಡಿನ ವಿದ್ವಾಂಸರ ಮೆಚ್ಚುಗೆಗೆ ಪಾತ್ರವಾಗಿತ್ತೆಂಬುದನ್ನು ಇಂದಿನವರಿಗೆ ನೆನಪಿಸಲೋಸುಗ ಈ ವಿಚಾರವನ್ನು ಇಷ್ಟು ಲಂಬಿಸಬೇಕಾಯ್ತು, ಕೆಲವೊಮ್ಮೆಇಂಥವು ಅನಿವಾರ್ಯಕೂಡ.

೧

'ವೃಷಭಾಚಲದ ಕನಸು' ಸಂಕಲನವು ಈ ಕವಿಯ ಮೊದಲ ಸಂಕಲನವಾದರೂ ಯಾವ ವಿನಾಯ್ತಿಯನ್ನೂ ಬಯಸದ ಪ್ರಬುದ್ಧತೆಯನ್ನುತೋರಿತು. ಆ ಸಂಕಲನದಲ್ಲಿನ 'ರೇಡಿಯೋ ರಿಪೇರಿ' ಎಂಬ ಸೊಗಸಾದ ಕವಿತೆಯೊಂದು

ಸುದೀರ್ಘ ಕಾಲ ಮನದಲ್ಲಿ ನಿಂತುಬಿಟ್ಟಿತ್ತು. ರೇಡಿಯೋ ಹಾಳಾಗಿ ಹಾಡುಅರ್ಧಕ್ಕೆ ನಿಂತಾಗ ಅದರ ತೆರೆ ಮೇಲೆಕುಟ್ಟಿ ಹಾಡುವಂತೆ ಮಾಡುತ್ತಿದ್ದೆವು. ಅಂಥದ್ದೇ ಚಿತ್ರದೊಂದಿಗೆ ಆರಂಭವಾಗುವ ನಾಡಿಗರ ಆ ಕವಿತೆ 'ತಲೆಕುಟ್ಟಿದರೆ ತುಟಿ ಬಿಚ್ಚುವ' ಸಾಲಿನಿಂದಆರಂಭಗೊಂಡು ಅಜ್ಜ, ಅಜ್ಜಿ, ಅಪ್ಪ, ಅಮ್ಮ, ಅಕ್ಕ, ತಮ್ಮರ ವಿವಿಧ ವಯೋಮಾನದ ಪ್ರತಿಮೆಗಳನ್ನು ಅನಾವರಣಗೊಳಿಸುತ್ತಾ ಆಟ ಮುಗಿದ ನಂತರ ಬಟಾ ಬಯಲಾಗುವ ಸಂಸಾರ ಗೀತವನ್ನು ತಾರ್ಕಿಕ ವಿನ್ಯಾಸದಲ್ಲಿ ಕಟ್ಟಿಕೊಡುತ್ತದೆ. ಇಂದಿನವರಿಗೆ ಹಿಂದಿನ ರೇಡಿಯೋ ಹಾಡು ಕೇಳುವ, ತಲೆ ಮೇಲೆ ಮೊಟಕಿ ಹಾಡಿಸುವ ಅನುಭವವೂ ಇಲ್ಲ, ಕೌಟುಂಬಿಕ ಮೌಲ್ಯವಂತೂ ಇಲ್ಲವೇಇಲ್ಲ! ರೇಡಿಯೋ ತಲೆ ಮೇಲೆ ಮೊಟಕಿದಂತೆ, ಕುಟುಂಬ ಮರೆತ ಕೆಡುಕಿಗಾಗಿ ನಮ್ಮತಲೆಗೂ ಮೊಟಕುವ ಕವಿತೆ ಇದು.

ಶ್ರೀಮತಿ ಪ್ರತಿಭಾ ನಂದಕುಮಾರ್‌ಅವರ 'ನಾವು ಹುಡುಗಿಯರೇ ಹೀಗೆ' ಎಂಬ ಕವಿತಾ ಸಂಕಲನದಲ್ಲಿ ಅದೇ ಶೀರ್ಷಿಕೆಯ ಕವಿತೆಯೊಂದಿದೆ. ನಾಡಿಗರು ಅದಕ್ಕೆ ಪ್ರತಿಕ್ರಿಯಿಸುತ್ತಾ 'ನಾವು, ಹುಡುಗರೂ ಹೀಗೆ' ಎಂಬ ಕವಿತೆಯ ಟಾಂಗ್ ಕೊಟ್ಟಿದ್ದರು. ಹೀಗೆ ಟಾಂಗ್‌ಕೊಡುವ ಮೂಲಕ ಹುಡುಗಿಯರು ಮಾತ್ರವಲ್ಲ, ಹದಿಹರೆಯದ ನೋವು, ಹತಾಶೆ, ಭ್ರಮೆ, ನಿರಾಸೆ, ಹಗಲುಗನಸುಗಳೆಲ್ಲವೂ ಹುಡುಗ-ಹುಡುಗಿ ಎಂಬ ಭೇದವಿಲ್ಲದೆ ಕಾಡುವ ವಾಸ್ತವವನ್ನು ಸಂಚಲನ ಮೂಡಿಸಿದೆನೆಂಬ ಭ್ರಮೆಯಲ್ಲಿದ್ದ ಹಿರಿಯ ಕವಿಯತ್ರಿಯ ಬಿಗುಮಾನದ ಬಲೂನಿಗೆ ಸೂಜಿಯಂತೆ ಚುಚ್ಚಿದರು. ತನ್ನ ಸಮಕಾಲೀನರೊಂದಿಗೆ ಎಳೆಯ ವಯಸ್ಸಿನ ನಾಡಿಗರು ನಡೆಸಿದ ಕಾವ್ಯ ಸಂವಾದ ತುಂಬ ಮುಖ್ಯವೆಂದು ಈಗ ಅನ್ನಿಸುತ್ತಿದೆ.

ನಾವು ಹುಡುಗರು ಹೀಗೆ
ಮನಸ್ಸು ಬಿಚ್ಚಿಟ್ಟು ಕೊಚ್ಚಿ ಹೋಗುತ್ತೇವೆ
ಅವರು ಹುಡಿಗಿಯರೇ ಹಾಗೆ?
ಅವರು ಮುಚ್ಚಿಟ್ಟು ಕರಗಿ ಹೋಗುತ್ತಾರೆ.

(ನಾವು, ಹುಡುಗರು ಹೀಗೆ)

ಅಜ್ಜನ ಸ್ವಗತ, ಕೊಳಲು ಮತ್ತು ಪ್ರೇಮ, ಬಂದ್, ಮುಖವಾಡಗಳು ಬೇಕೇ ಬೇಕೇ? ದಾರಿ ಮರೆಯದಿರಿ ಹಕ್ಕಿಗಳೇ, ವೃಷಭಾಚಲದ ಕವಿತೆ, ಈ ಇಂಥ ಕವಿತೆ ಮುಂತಾದ ಹತ್ತು ಹಲವು ಚರ್ಚಾರ್ಹ ಕವಿತೆಗಳು ನಾಡಿಗರ ಮೊದಲ ಸಂಕಲನದಲ್ಲಿದೆ. ಆರಂಭದಲ್ಲಿಯೇ ಕವನ ಕಟ್ಟುವ ಪ್ರಕ್ರಿಯೆಯಲ್ಲಿ ಇವರು ತೋರಿದ ಕೌಶಲ ಮತ್ತು ಗಾಂಭೀರ್ಯ ಮೆಚ್ಚುವಂಥದ್ದು. ವಸ್ತು ವೈವಿಧ್ಯತೆ ಕೂಡ ವಿಪುಲವಾದುದು.

ಭಾರತದಂತಹ ದೇಶ ಕವಿಗೆ ಒದಗಿಸುವ 'ವಸ್ತು' ವಿನ್ಯಾಸ ಅಗಾಧವಾದುದು. ಬರೆದರೆ ಮಹಾಕಾವ್ಯವೇ ಆಗಿಬಿಡಬಹುದು:

ಬಾ ಕವಿ ಗೆಳೆಯಾ
ಬರೆ ದಾಖಲಿಸಿ ಬಿಡು
ಕಾವ್ಯಕ್ಕೆ ವಸ್ತು ಸಮೃದ್ಧವಿಲ್ಲಿ!
ಒಬ್ಬೊಬರ ತುಟಿ ಬಿಚ್ಚಿಕೊಂಡಂತೆಲ್ಲಾ
ಮಹಾಕಾವ್ಯಗಳ ಮಹಾಪೂರ!

ಒಬ್ಬೊಬ್ಬರಲ್ಲಿಯೂ ಒಂದೊಂದು
ಕಾಶ್ಮೀರ ಪಂಜಾಬುಅಯೋಧ್ಯೆ ಹೈದರಾಬಾದು
ಒಂದೊಂದುಎದೆ ಬಡಿತದಲ್ಲಯೂ
ಗಡಿಗಳಂಚಿನ ಗುಂಡಿ ಸದ್ದು
ಒಬ್ಬೊಬ್ಬರ ಒಡಲೂ
ಒಂದೊಂದು ಹಸಿದ ಭಾರತ

(ಕವಿ ಗೆಳೆಯನಿಗೆ)

ಇಲ್ಲಿನಗಾಢ ವಿಷಾದವನ್ನುಓದಿದವರು ಮರೆಯುವುದುಂಟೆ?

ಮುಂದೆ ಸುದೀರ್ಘಅಂತರದ ನಂತರ ನಾಡಿಗರೆರಡನೆಯ ಸಂಕಲನ 'ಹೊಸ್ತಿಲು ಹಿಮಾಲಯದ ಮಧ್ಯೆ' (೨೦೦೩) ಹೊರಬಂತು. ಬದಲಾದ ಕಾಲಮಾನದಲ್ಲೂ ಮುಂದುವರೆದ ಬದುಕಿನಅಸಂಗತಗತಿಯನ್ನುಚಿಂತಿಸುತ್ತಾ 'ಕೂತುಕೂತಲ್ಲೇಕವಿತೆ' ಇರುವುದನ್ನು ಗ್ರಹಿಸಿದ ಕವಿಯು ವೈರುಧ್ಯಗಳ ಮಧ್ಯೆಯೇ ಅರಳುತ್ತದೆ ಜೀವಬಂಧ ಎಂಬ ನಿಲುವಿಗೆ ತಲುಪಿದರು. ಇದು ಬರಿಯ ನಿಲುವು ಮಾತ್ರವಲ್ಲದೆತಾತ್ತ್ವಿಕ ಸ್ವರೂಪವನ್ನೂಕಾಣಿಸುತ್ತದೆಂಬುದನ್ನು ನೆನೆಯಬೇಕು. ಸುತ್ತಲಿನ ಬದುಕನ್ನುಎಚ್ಚರದಕಣ್ಣಿನಲ್ಲಿನೋಡುತ್ತಾಎಲ್ಲವನ್ನೂ ಬರೆದಿಡುವ ಮೂಲಕ ನೆಮ್ಮದಿಹೊಂದುವುದುಕವಿಯಜೀವಎಂಬುದಾಗಿ ನಾಡಿಗರೇಒಂದುಕವಿತೆಯಲ್ಲಿ ಹೇಳುತ್ತಲೇ 'ಬರೆಯುವುದಾದರೂ ಏನೂ ಕಣ್ಣೀರಲದ್ದಿದಕವಿತೆ' ಎಂದು ಪ್ರಶ್ನಿಸಿದ್ದರು. 'ಆಯಾಸವು ಬರೆದಿಟ್ಟು ಹೋದದಣಿವರಿಯದ ಪುಟಗಳು' ಎಂಬ ಸೊಗಸಾದ ಮಾತುಕೂಡ ನಾಡಿಗರ ಹಂಬಲವನ್ನುಕಾವ್ಯಾತ್ಮಕವಾಗಿ ಧ್ವನಿಸಿದೆ.

'ಕೊಲೆ' ಮಾಡಲು ಕೊಡಲಿ, ಮಚ್ಚುಗಳು ಬೇಕಿಲ್ಲ. ಸಹ ಜೀವಿಗಳ ವಿಚಾರದಲ್ಲಿ ನಾವು ಅಸಮಾಧಾನದ ಕಿಡಿ ಹಾರಿಸಿದರೆ, ಸಂಶಯದ ಹುಡಿ ಪೇರಿಸಿದರೆ, ತಿರಸ್ಕಾರದ

ನಗೆ ಬೀರಿದರೆ, ಮಾತಿನಲಿ ಹಂಗಿಸಿದರೆ, ಮೌನ ತಾಳಿ ನಿಂದಿಸಿದರೆ ಆಗಬಹುದಾದ ಪರಿಣಾಮವನ್ನು ವಿವರಿಸುತ್ತಲೇ 'ಕೊಲ್ಲುವುದು' ಎಂಬುದಕ್ಕೆ ಒಂದೇ ಅರ್ಥವಿಲ್ಲ ಎನ್ನುವ ನಾಡಿಗರ ಕವಿತೆ "ಒಲಿದವರ ಕೊಲುವಡೆ ಮಸೆದ ಕೂರಲಗೇಕೆ? ಅವರನೊಲ್ಲೆನೆಂದಡೆ ಸಾಲವೇ?" ಎಂಬ ಮಾತಿಗೆ ಈಗಿನ ಶಿಥಿಲ ಮಾನವೀಯ ಸಂಬಂಧದ ಆಯಾಮವನ್ನು ಜೋಡಿಸುತ್ತಾರೆ. ಕವಿಯ ಇಲ್ಲಿನ ವಿಷಾದದ ಭಾವದ ಹಿಂದೆ ಪಾರಂಪರಿಕ ವಿಷಾದದ ಛಾಯೆ ಇದೆ. ನಮ್ಮ ಜಿ.ಕೆ. ರವೀಂದ್ರಕುಮಾರ್ ಅವರು ಸರಿಯಾಗಿಯೇ ವಿವರಿಸಿರುವಂತೆ ನಾಡಿಗರು "ಒಂದು ವಿಷಾದ ಪರ್ವದಲ್ಲಿಯೇ ತೃಪ್ತಿಯ ಕವಲುಗಳನ್ನು ಮುಟ್ಟುವಯತ್ನದಲ್ಲಿರುವ ಕವಿ."

೨೦೧೨ ರಲ್ಲಿ 'ವಿರಕ್ತರ ಬಟ್ಟೆಗಳು' ಎಂಬ ಸಂಕಲನ ಪ್ರಕಟವಾಗುವ ಹೊತ್ತಿಗೆ ವಾಸುದೇವ ನಾಡಿಗರು ತಮ್ಮದೇಆದ ಕಾವ್ಯಶಿಲ್ಪವೊಂದನ್ನು ಕಡೆದಿರಿಸಿದ್ದರು. ಆರಂಭದಲ್ಲಿನ ಲಯ, ಅಸ್ಮಿತೆಯ ಹುಡುಕಾಟದ ಒಂಟಿ ಪಯಣವನ್ನು ಹಾದು ಬಂದು ಕಾವ್ಯದ ಆತ್ಮದತ್ತ ಹೊರಳಿದ ಸಂಧಿಕಾಲವಿದಾಗಿತ್ತು. ನಾಡಿಗರ ಕಾವ್ಯಯಾನದ ಅತಿ ಮುಖ್ಯಘಟ್ಟವಿದೆಂದು ಹಿರಿಯರಾದ ಜಿ. ಎಸ್‌ರಂಗನಾಥರಾವ್ ಅವರು ಗುರುತಿಸುತ್ತಾ "ಬುದ್ಧಿ-ಭವಗಳನ್ನೆಲ್ಲ ಶೋಧಿಸಿ, ಸೋಸಿ ಬದುಕಿನ ಕನಸು-ಕಾಣ್ಕೆಗಳನ್ನು ಹೃದ್ಯ ಅನುಭವವಾಗಿಸುವ ಕಾವ್ಯತತ್ಪರತೆಯನ್ನು, ತೆಕ್ಕೆಗೊಗ್ಗಿದನ್ನು ಪ್ರಬುದ್ಧತೆಯ ನಿಕಷವೊಡ್ಡಿ ನೋಡುವ ಪ್ರಜ್ಞಾವಂತಿಕೆಯನ್ನು, ಕಾವ್ಯ ಶರೀರ ರೂಪಿಸುವಲ್ಲಿ ಭಾಷೆಯ ಸೃಜನಶೀಲತೆಯನ್ನು 'ವಿರಕ್ತರ ಬಟ್ಟೆ' ಯಲ್ಲಿ ಢಾಳಾಗಿ ಕಾಣುತ್ತೇವೆ"ಎಂದು ಹೇಳಿರುವ ಮಾತುಗಳು ವಾಸುದೇವ ನಾಡಿಗರ ಕಾವ್ಯಾಭ್ಯಾಸಿಗಳಿಗೆ ಮಾರ್ಗದರ್ಶಕವಾಗಿವೆ.

> ಬೃಹನ್ನಳೆ
> ಪುರುಷತ್ವ ಅವಿತಿಟ್ಟ ವೇಷ
> ಬೃಹನ್ನಳೆ ಎಂದು ಮುಖ ತೋರಿಸಿದರೇನು?
> ಕ್ಷಣಕ್ಷಣಕ್ಕೆ ಬೃಹನ್ನಳೆಯಾಗಿಸುವುದೇ
> ಬದುಕಿನ ಗೀಳು
> ಒಳಗೆ ಪಾರ್ಥ ಕೂತಿದಾನೆ!
> ಹೊರಬಂದನೆಂದರೆ ಕುರುಕ್ಷೇತ್ರಕ್ಕೆ ತಾಲೀಮು
>
> (ಬೃಹನ್ನಳೆಯ ಮುಂದೆ)

ಎಂಬ ಸಾಲುಗಳು ನಮ್ಮತನವನ್ನು ಕೊಂದುಕೊಂಡು ಮುಖವಾಡ ಧರಿಸಿ ಬಾಳಬೇಕಾದ ಉಸಿರುಗಟ್ಟಿಸುವ ಹೀನಾಯ ಸ್ಥಿತಿಯನ್ನು ನೆನಪಿಸುತ್ತದೆ. "ಕುರುಕ್ಷೇತ್ರ

ಮೈ ಚಾಚತ್ತಲಿದೆ ದೇಶದುದ್ದಕ್ಕೂ....ಶಕುನಿಯ ವೇಷ ಶ್ರೀಕೃಷ್ಣನಿಗೆ" ಎಂಬ ಗೋಪಾಲಕೃಷ್ಣ ಅಡಿಗರ 'ಬತ್ತಲಾದ ಗಂಗೆ' ಕವಿತೆ ನೆನಪಾದರೆ ಅಚ್ಚರಿಯೇನಿಲ್ಲ. ಆದರೆ ಇದಕ್ಕೆ 'ಬೆಟ್ಟ ಹತ್ತುವವರಕಥೆ' ಯಲ್ಲಿ ಪರ್ಯಾಯ ದಾರಿಯ ಸೂಚನೆಯನ್ನೂ ಕವಿ ಕಾಣಿಸಲು ಮರೆತಿಲ್ಲ.

ಕೊಡು ಪ್ರಭುವೇ
ತೊಡೆ ನಡು ನಡಿಗೆಗೆ ಬಲ
ರಕ್ಕಸದಟ್ಟ ಹಾಸಗಳ ದಾಟಲು
ಜರ್ಜರಿತ ಎದೆಯ
ಗಾಯಗಳಿಗೆ ವಿಶ್ವಾಸದ ಮುಲಾಮು
ಸವರು
ಮೂಲೆ ಹಿಡಿದು ಕೂತ ಕುದುರೆ
ಈ ಮನಸು,
ಬಾಲ ತಿರುಚಿ ಓಡಿಸಬೇಕು

(ಬೆಟ್ಟ ಹತ್ತುವವರಕಥೆ)

ಎಂದು ಕವಿತೆಯ ಮೂಲಕ ಕವಿ ಸವರುವ ಮುಲಾಮು ಕೂಡ 'ಗಾಯಗೊಂಡವರಿಗೆ ಸಾಂತ್ವನದ ಪರ್ಯಾಯವಾಗಿರುವುದನ್ನು ನೋಡಬೇಕು. ಈ ಸಂಕಲನದಲ್ಲಿ 'ಕವಿತೆಗೆ' ಎಂಬ ಪದ್ಯವೊಂದಿದ್ದು ಅದು ನಾಡಿಗರ ಕಾವ್ಯ ಪ್ರಣಾಳಿಕೆಯನ್ನು ಸಮರ್ಥವಾಗಿ ಮನಗಾಣಿಸುವಲ್ಲಿ ಯಶಸ್ವಿಯಾಗಿದೆ.

ಮುಚ್ಚಲಾರದ ರೆಪ್ಪೆಗಳು
ನಡುವೆ
ಅಸೀಮ ಕಡಲು
ದಕ್ಕಿದ ಭವದಲೆಗಳು
ಪರಕೀಯವಾಗಿ ಕಾಡಲು
ನಿನ್ನನೇ
ನೆಚ್ಚಿಕೊಂಡು ಕೂತಿದ್ದೇನೆ
ಪ್ರಾಣಧಾರಣೆ ಮಾಡಲಾಗದ
ಕವಿತೆಯೇ

ಹಾಗೆ ನೋಡಿದರೆ ವಾಸುದೇವ ನಾಡಿಗರ ಪ್ರತಿಸಂಕಲನದಲ್ಲಿಯೂ 'ಕವಿತೆ'ಯನ್ನು ಕುರಿತ ಒಂದೆರಡು ಕವಿತೆಗಳಾದರೂ ಇವೆ. ಕಾವ್ಯದ ಆಕೃತಿಯನ್ನು

ಸ್ಪಷ್ಟಗೊಳಿಸಿಕೊಳ್ಳುವ ಆತ್ಮಾವಲೋಕನದ ಮಾದರಿಯಾಗಿ ಈ ಎಲ್ಲ ಕವಿತೆಗಳನ್ನೂ ಜೊತೆಗಿಟ್ಟು ಅಭ್ಯಾಸ ಮಾಡಲೂ ಅವಕಾಶವಿದೆ. 'ಕವಿತೆ' ಎಂದರೇನೆಂಬುದಕ್ಕೆ ನಮ್ಮಲ್ಲಿ ಬೇಕಾದಷ್ಟು ಉತ್ತರಗಳಿವೆಯಾದರೂ ನಾಡಿಗರು ಕವಿತೆಗಳೊಂದಿಗೆ ನಡೆಸಿರುವ ಸಂವಾದ ಜೀವಸಂವಾದವಂತೆ ಭಾಸವಾಗುತ್ತಿದೆ.

'ಕವಿತೆ' ಎಂಬುದು ವಾಸುದೇವ ನಾಡಿಗರ ಪಾಲಿಗೆ ಬಹುದೊಡ್ಡ ಬಿಡುಗಡೆ ಮಾತ್ರವಲ್ಲ, ಬದುಕಿನ ಸುಖ-ದುಃಖಗಳನ್ನು ಆಲಿಸುವ ಮಡಿಲು, ಗಂತವ್ಯದಕಡೆ ಸೆಳೆಯುವ ಸೂಜಿಕಾಂತ. ಬಾಳಿನ ಜೊತೆ ಅನುಸಂಧಾನ ಮಾಡಲು ಕಟ್ಟಿಕೊಂಡ ಸೋಪಾನ. ಮಾತ್ರವಲ್ಲ, ಹಚ್ಚಿಕೊಂಡಹಣತೆ, ಬಿಚ್ಚಿಎದುರಿನ ಬಯಲು, ಕತ್ತಲಲ್ಲಿ ಕಾಪಾಡುವ ತಾರೆ. ಅಗ್ನಿ ದಿವ್ಯ ಮತ್ತು ನಂದನವನ ಎರಡನ್ನೂತೋರಿದ ಕಾವ್ಯ, ಮಳೆ ಇರದಿದ್ದರೂ ಕೊಡೆ ಬಿಡಿಸಿ ಕೂರುವಂತೆ ಮಾಡುವ ಮತ್ತು ನದಿ ಇರದೇಇದ್ದರೂ ನಾವೆಯ ನಿರೀಕ್ಷೆಯನ್ನು ಕಾಪಾಡುವ ಚೈತನ್ಯ ಕೊಟ್ಟ ಕಾವ್ಯ. ಬದುಕಿನ ಕಾಳೋರಗ ಸಮಯಗಳು ಮತ್ತು ಮಲಯ ಮಾರುತದ ಹಾಡು ಎರಡನ್ನೂ ಸಮಚಿತ್ತದಿಂದ ಸ್ವೀಕರಿಸಲು ಕಲಿಸಿಕೊಟ್ಟ ಕಾವ್ಯ. ಭವ ಸಾಗರವನ್ನುದಾಟಿಸುವ ಪ್ರೀತಿಯಕಾವ್ಯ ನಾವೆ ಈ ಎಲ್ಲ ಮಾತುಗಳೂ ಕೂಡ ವಾಸುದೇವ ನಾಡಿಗರು ಕಾವ್ಯವನ್ನು ಒಪ್ಪಿಅಪ್ಪಿಕೊಂಡ ವಿವರಗಳನ್ನೇ ಮನದಟ್ಟು ಮಾಡಿಕೊಡುತ್ತವೆ.

"ಪ್ರೀತಿ ಪ್ರೇಮ ಆದರ್ಶ ಹತಾಶೆ ನೋವು ಸಂತಸಎಲ್ಲವನು ಪದಗಳಲ್ಲಿ ಕಟ್ಟಿ ಮುಡಿಸಿದರೆ ಮಾತ್ರ ನನ್ನಕಾವ್ಯಕೆ ಸಮಾಧಾನ. ನನಗೆ ಮಾತು ಮೌನ ಕಟುವಾಸ್ತವ ಸಹಜತೆ, ಭಾವುಕತೆ, ಭ್ರಾಮಕತೆ ಮತ್ತು ಮುಗ್ಧತೆ ಎಲ್ಲವನು ಕರುಳಲ್ಲಿ ಬೆಸೆದ ಬೆರಳು ಕಾವ್ಯದ್ದೇ" ಎಂಬುದಾಗಿ ಕವಿಯೇ ಒಂದೆಡೆ ನಿವೇದಿಸಿಕೊಂಡಿರುವುದನ್ನೂ ಇಲ್ಲಿ ನೆನೆಯ ಬಹುದು. ಇಷ್ಟು ನಿರ್ಮಲವಾಗಿ ಕಾವ್ಯವನ್ನು ಉಸಿರಾಡುವ ಸಹಜ ಕವಿ ಇವರಾಗಿರುವುದರಿಂದಲೇ ಓದುಗರನ್ನು ನಿರಾಸೆಗೊಳಿಸದಂತೆ ಎದೆತಾಕುವ ಸಾಲುಗಳನ್ನು ಈ ಕವಿ ನೀಡಬಲ್ಲರು.

ಪ್ರೀತಿಯಲಿ ಕಾಯುವ ಜೀವಗಳಿಗೆ
ಜನನವೂಇಲ್ಲ ಮೋಕ್ಷವೂಇಲ್ಲ

(ಅವನ ಕರವಸ್ತ್ರ)

ಚಿಗುರಿಸಲೆಂದೇ ಮೊಳೆತ ನೋವಿಗೆ
ಶಮನದ ಹೊರತು ನಿಲುವಿಲ್ಲ

(ಅಲೆ ತಾಕಿದರೆದೆಡ)

ಕಾಡ ಮರದಲೆಗಳು ಜರಡಿ ಹಿಡಿದ ತಿಳಿ ಬೆಳಕು
ಕಪ್ಪು ಬಿಳುಪಿನ ಚಿತ್ರಚಿತ್ತಾರ ಈ ಮಾಯಾವಿ ಬದುಕು
(ವಿರಕ್ತರ ಬಟ್ಟೆಗಳು)

ಬೇರಿಳಿಸಿಕೊಳ್ಳುವುದೆಂದರೆ ಸಲೀಸಿನ ಮಾತಲ್ಲ
ಭಾವದಾಳದ ಪದರ ಸೀಳು ಯುದ್ಧ ಸನ್ನದ್ಧದ ಬಯಲು
(ಭವದ ಹಕ್ಕಿ)

ತೊಟ್ಟಿಲೊಳಗೇ ಜೀವ
ಮಗ್ಗುಲಲ್ಲಿ ಸಾವಿನ ಪಿಸುನುಡಿ
ಸಾವಿನೊಂದಿಗೆ ಜನನ
ಬದುಕಿನ ಕೊನೆ ಮಾತು ಸಾವು
(ಹೊಸ್ತಿಲು ಹಿಮಾಲಯದ ಮಧ್ಯೆ)

ಮುಂತಾದ ಮನ ಮುಟ್ಟುವ ಸಾಲುಗಳನ್ನು ಮೇಲಿನ ಮಾತಿಗೆ ಉದಾಹರಣೆಯಾಗಿ ನೆನೆಯಬಹುದು. ಎಲ್ಲಿಯೂ ನಾಡಿಗರು ಜಾಣಮಾತುಗಳನ್ನು ಬುದ್ಧಿಪೂರ್ವಕವಾಗಿ ಜೋಡಿಸಲು ಹೆಣಗಾಡುವುದಿಲ್ಲ. ನಲ್ಲಿ ತಿರುಗಿಸಿದಾಗ ನೀರು ಸುರಿದಂತೆ ಇವರ ಸಹಜ ಪದ ಬಳಕೆ. ಕವಿತೆಯ ಮೂಲಕ ಬೋಧನ ಮಾಡಿಜಗವನುದ್ಧರಿಸುವೆನೆಂಬ ಧೋರಣೆಯನ್ನು ನಿರಾಕರಿಸುವ ನಾಡಿಗರ ಬಹುಪಾಲು ರಚನೆಗಳು ತನಗೆತಾನೇ ಹೇಳಿಕೊಂಡ ಅಂತರ್ಮುಖಿಯೊಬ್ಬನ ಸ್ವಗತದಂತೆ ತೋರುತ್ತವೆ. ಈ ಸ್ವಗತದ ದನಿ ಚಲನಶೀಲತೆ ಪಡೆದು ಸಮುದಾಯದ ದನಿಯಾಗುತ್ತದೆ ಈ ಅರ್ಥದಲ್ಲಿ ನಾಡಿಗರ ಕವಿತೆಗಳು ವ್ಯಷ್ಟಿಯಿಂದ ಸಮಷ್ಟಿಯಕಡೆಗೆ ಮೈಚಾಚಿದ ರಚನೆಗಳೆನಿಸುತ್ತವೆ.

ಏಕಾಂತಗಳಲಿ ಹುಟ್ಟುವ ನನ್ನ
ಕವಿತೆಗಳು ಸಂತೆಗಳಲಿ ಜೀವ ಪಡೆಯುತ್ತಿವೆ
ಜನದಟ್ಟಣೆಯ ಜೀವಿಗಳಲಿ ಚಲಿಸುತ್ತಿವೆ
ನಿಶ್ಶಬ್ದಗಳಲಿ ಏಳುವ ಶಬ್ದಗಳು
ಗದ್ದಲಗಳ ನಡುವೆ ಮಾತಾಡುತ್ತಿವೆ
ತಕರಾರುಗಳ ಜೊತೆ ಹರಟೆಗೆ ಕೂತಿವೆ

ಮತ್ತೆ ಮತ್ತೆ ಇಂತಹಆತ್ಮಗತ ಲೋಕ ಸಂವಾದದ ಮೂಲಕ ವಾಸುದೇವ ನಾಡಿಗರು ಶೋಧಿಸಹೊರಡುವ ಅರ್ಥ ವಿಸ್ತಾರ ಕನ್ನಡಕಾವ್ಯಕ್ಕೆ ಹೊಸ ಆಯಾಮವನ್ನು ಜೋಡಿಸುತ್ತವಾದ್ದರಿಂದ ಅವರು ನಮ್ಮ ಮುಖ್ಯ ಕವಿಗಳಲ್ಲೊಬ್ಬರಾಗಿದ್ದಾರೆ.

೨

ಬೇಂದ್ರೆ, ಅಡಿಗರ ಬಹುತೇಕ ರಚನೆಗಳಂತೆಯೇ ವಾಸುದೇವ ನಾಡಿಗರ ಬಹುಪಾಲು ರಚನೆಗಳು ಕೂಡ ಸದಾ ಬದುಕಿನ ಅರ್ಥವನ್ನು, ಸಾರ್ಥಕ್ಯವನ್ನು, ಬದುಕು–ಸಾವುಗಳ ನಡುವಿನ ಹೊಯ್ದಾಟಗಳನ್ನು, ಶಿಥಿಲಗೊಂಡ ಮಾನವೀಯ ಸಂಬಂಧಗಳ ಶೋಧದಲ್ಲಿ ಆಸಕ್ತವಾಗುತ್ತವೆ. ಬದುಕಾಗಲಿ, ಕಾವ್ಯವಾಗಲಿ, ಸಾವಾಗಲಿ–ನೋವಾಗಲಿ ಎಲ್ಲವನ್ನೂ ಅತ್ಯಂತ ಗಂಭೀರತಲ್ಲೀನತೆಯಿಂದ ಅನುಸಂಧಾನ ಮಾಡುವ ತುಡಿತವುಳ್ಳ ಅಪರೂಪದ ಕಾವ್ಯಕಲೆಯನ್ನು ಸಾಧಿಸಿಕೊಂಡಿರುವ ಕವಿ ಇವರು.

ನಮ್ಮ ಸಮಕಾಲೀನ ಬದುಕುತಂದೊಡ್ಡಿರುವ ಸಂಕೀರ್ಣತೆಗೆ, ಸಮಕಾಲೀನ ಬಿಕ್ಕಟ್ಟುಗಳಿಗೆ ವಾಸುದೇವ ನಾಡಿಗರು ಮತ್ತೆ ಮತ್ತೆ ಮುಖಾಮುಖಿಯಾಗುತ್ತಾರೆ. ಆ ಕುರಿತ ತಮ್ಮ ಒಳತುಡಿತ ತುಮುಲಗಳನ್ನು ಕಾವ್ಯಕೇಂದ್ರಿತ ಪ್ರತಿಕ್ರಿಯೆಗಳಾಗಿ ಮಾರ್ಪಡಿಸಿ ದಾಖಲುಗೊಳಿಸುವುದರೊಂದಿಗೆ ಅವರ ಕಾವ್ಯದ ಓದುಗರೂ ಆ ಬಗೆಗಿನ ತಮ್ಮ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸುವ ಹಂಬಲ ಮೂಡುವಂತೆ ಮಾಡಿಬಿಡುತ್ತಾರೆ. ಇದು ನಾಡಿಗರ ಕವಿತೆಗಳ ಶಕ್ತಿ ಮಾತ್ರವಲ್ಲ, ಯಾವುದೇ ಉತ್ತಮ ಕವಿತೆಯ ಮೂಲ ಲಕ್ಷಣವೂ ಹೌದು. ಕಾವ್ಯಕ್ಕೂ ಬದುಕಿಗೂಇದೊಂದು ಬಗೆಯಆತಂಕದ ಕಾಲ. ನಿರೀಕ್ಷೆಯ ಕಾಲ. ಕನಸುಗಳಿಲ್ಲದ, ಬೆರಗಿಲ್ಲದ, ಮಹತ್ವಾಕಾಂಕ್ಷೆಗಳಿಲ್ಲದ ಕಾಲ. ವಾಣಿಜ್ಯ ಸಂಸ್ಕೃತಿಯ ಆಕ್ರಮಣದ ಎದುರು ನಮ್ಮ ಸೃಜನಶೀಲತೆ ಹಾಗೂ ವೈಚಾರಿಕತೆಗಳು ಮಸುಕಾಗಿರುವ ಸಂಧಿಕಾಲದಲ್ಲಿ ವಾಸುದೇವ ನಾಡಿಗರ ಕಾವ್ಯವು ಬದುಕನ್ನು ಬೆದಕುವ, ಸಂಘರ್ಷ–ಸಂಕೀರ್ಣತೆಗಳ ಬೆನ್ನು ಹತ್ತುವ ಸಾಹಸಕ್ಕೆ ತುಡಿಯುತ್ತದೆ. ಬದುಕನ್ನು ಅದರ ವಿಸ್ತಾರ ಹಗೂ ಸಮಗ್ರತೆಯೊಳಗೆ ಗ್ರಹಿಸುವ ಪ್ರಯತ್ನವನ್ನು ಕವಿತೆಗಳ ಮುಖೇನ ಮಾಡುವ ನಾಡಿಗರು ಈ ನಿಲುವಿನಲ್ಲೇ ನಿಸರ್ಗಕ್ಕೆ, ಸಾಮಾಜಿಕ ವಾಸ್ತವದ ಸುಡು ಸತ್ಯಗಳಿಗೆ, ಚರಿತ್ರೆಗೆ, ಪರಂಪರೆಗೆ ಆರೋಗ್ಯ ಪೂರ್ಣವಾಗಿ ಸ್ಪಂದಿಸುತ್ತಾರೆ.

ಬೀಜ, ಮಣ್ಣು, ಮೊಳಕೆ, ನದಿ ಮುಂತಾದವು ವಾಸುದೇವ ನಾಡಿಗರ ಕವಿತೆಗಳಲ್ಲಿ ಮತ್ತೆ ಮತ್ತೆ ರೂಪಕಗಳಾಗಿ ಬಳಕೆಯಾಗುವುದು ಆಕಸ್ಮಿಕವಲ್ಲ. ಈ ಮುಖೇನ ಮನುಷ್ಯ ಮತ್ತು ನಿಸರ್ಗಗಳ ನಡುವಣ ಆಂತರಿಕ ಸಂಬಂಧಗಳನ್ನು

ಗ್ರಹಿಸುವ ಪ್ರಯತ್ನಕ್ಕೆ ಇವು ವಾಹಕಗಳಾಗಿ ಇಡಿಯಾಗಿ ಬದುಕನ್ನು ಅರಿಯುವ ಪ್ರಯತ್ನಕ್ಕೆ ಪೂರಕವಾಗಿವೆ.

೩

ಇಲ್ಲಿನ ಕವಿತೆಗಳು ತೆರೆದಿಡುವ ಅನುಭವ ಪ್ರಪಂಚ ಸಮ್ಮಿಶ್ರವಾದುದು. ಅದು ಈ ಕವಿಯ ಆಸಕ್ತಿಯ ಹರಡು ಕೂಡ ಹೌದು. ಬದುಕಿನ ವಿಸ್ಮಯಗಳನ್ನು ಬೆರಗಿನಿಂದ ನೋಡದೆತಮ್ಮಅನುಮಾನದ, ಭಯದ ಕುತೂಹಲದ ಮುಖಾಮುಖಿಯಲ್ಲಿ ಕಾಣಬಲ್ಲರು. ಶಿಥಿಲಗೊಂಡಿರುವ ಮಾನವೀಯ ಸಂಬಂಧಗಳ ಬಗೆಗಿನ ನಿರಾಸೆ, ನೋವು, ತಲ್ಲಣ ಮುಂತಾದ ಭಾವ ಸಂಕರಗಳ ಒಟ್ಟಲೇ ಈ ಕವಿತೆಗಳಲ್ಲಿದೆ. ಮನುಷ್ಯನೆಂಬ ಜೀವಿಯ ಅಪ್ರಮಾಣಿಕತೆ, ಇಬ್ಬಂದಿತನ ಮುಂತಾದವುಗಳನ್ನು ಕಾವ್ಯದ ಅಗ್ನಿ ದಿವ್ಯದಲ್ಲಿಟ್ಟು ಪರೀಕ್ಷಿಸುವ ನಮ್ಮ ನಡುವಿನ ಅಪೂರ್ವ ಪ್ರತಿಭೆಯಾದ ನಾಡಿಗರು ಒಮ್ಮೊಮ್ಮೆ ಆತ್ಮದೊಡನೆ, ಕಾವ್ಯಾತ್ಮದೊಡನೆ ನಡೆಸುವ ಸಂವಾದವಿದೇನೋ ಎಂಬ ಭಾವ ಸ್ಫುರಿಸುವಂತೆ ಕವಿತೆ ಬರೆದುಬಿಡುತ್ತಾರೆ. ಆಧುನಿಕ ಕನ್ನಡ ಕಾವ್ಯ ಪರಂಪರೆಯಲ್ಲಿ ಅಡಿಗ, ಗಂಗಾಧರ ಚಿತ್ತಾಲ, ಎ. ಕೆ. ರಾಮಾನುಜನ್ ಮುಂತಾದವರು ಹಾಕಿಕೊಟ್ಟ ಮೇಲ್ಪಂಕ್ತಿ ಇದು. ಈ ಅರಿವಿನಿಂದ ಹೊಡುವ ನಾಡಿಗರು ಮತ್ತಷ್ಟು ಆಳಕ್ಕಿಳಿದು ಕಾವ್ಯಸಾರವನ್ನು ಮೊಗೆಮೊಗೆದು ಕಾವ್ಯರಸಿಕರಿಗೆ ಉಣಬಡಿಸುವ ಅಭಿಜಾತಿ ಕಾವ್ಯ ಪರಂಪರೆಯ ಸಮರ್ಥ ಪ್ರತಿನಿಧಿಯಂತೆ ಗೋಚರಿಸುತ್ತಾರೆ. ಈ.ಎನ್.ರಂಗನಾಥರು ಸರಿಯಾಗಿ ಗುರುತಿಸಿರುವಂತೆ, "ಕವನ ಕಟ್ಟುವುದು ನಾಡಿಗರಿಗೆ ಕೇವಲ ಒಂದು ಗೀಳಾಗಿದೆ. ಸತ್ಯ ಶೋಧಿಸುವ, ಬದುಕನ್ನು ಪರಿಭಾವಿಸುವ, ಕಾಣ್ಕೆಯಾಗಿಸುವ 'ಜೀವನಾನುಭವವಾಗಿಸುವ ಸಹಜ ಕಾವ್ಯ ಪ್ರವೃತ್ತಿಯೇ ಆಗಿದೆ." ಪರಂಪರೆಯೊಂದಿಗೆ ಹೆಜ್ಜೆ ಹಾಕುತ್ತಲೇ, ಸೆಣಸಾಡುತ್ತಲೇ ತನ್ನ ಅಸ್ಮಿತೆಯನ್ನು ಸ್ವೋಪಜ್ಞತೆಯನ್ನು ಕಂಡುಕೊಂಡಿರುವ ಅಪರೂಪದ ಕವಿ ಇವರು.

ಗಿಡ ಹೂ ಬಿಡುವುದು ಎಷ್ಟು ಸಹಜವೋ ಅಷ್ಟೇ ಸಹಜವಾಗಿ ನಾಡಿಗರು ಕವಿತೆ ಬರೆಯಬಲ್ಲರು ಎಂಬ ಕ್ಲೀಷ ಮಾತನ್ನು ಸುಲಭವಾಗಿ ಆಡಿಬಿಡಬಹುದು. ಗಿಡಕ್ಕೇ ಗೊತ್ತು ಪ್ರತಿಯೊಂದು ಹೂವಿಗೂ ಆ ಗಿಡ ಅನುಭವಿಸುವ ಪ್ರಸವ ವೇದನೆ. ತಮ್ಮ ಪ್ರತಿಯೊಂದು ಕವಿತೆಯನ್ನು ಕಟ್ಟಲು ಭಾಷೆ, ರೂಪಕ, ಅಭಿವ್ಯಕ್ತಿಗಳೆಂಬ ರಕ್ತಮಾಂಸಗಳನ್ನು ಬಸಿದು ಕಸುವು ತುಂಬುತ್ತಾರೇನೋ ಎಂಬಂತೆ ಇವರ ರಚನೆಗಳಿರುತ್ತವೆ. ಇವರು ಹೊಸ ಪ್ರತಿಮೆಗಳನ್ನು ಹೊಸ ರೂಪಕಗಳನ್ನು ಸೃಷ್ಟಿಸಿಕೊಳ್ಳುವ ಪರಿಯೂ ಅದ್ಭುತ. ಈ ಪ್ರಕ್ರಿಯೆಯಲ್ಲಿ ಅವರು ಸತತವಾಗಿ

ಕಾಯ್ದುಕೊಂಡಿರುವ ತೀವ್ರತೆಯ ಕಾವು ಎಂದಿಗೂ ಬಿಸಿ ಕಳೆದುಕೊಂಡಿದ್ದಿಲ್ಲ. ಇವರ ಓರಗೆಯ ಅನೇಕರು ಮೊದ ಮೊದಲಲ್ಲಿ ತೋರಿದ ಭರವಸೆ ಹುಟ್ಟಿಸಿ, ಏದುಸಿರು ಬಿಟ್ಟುತಣ್ಣಗಾಗಿದ್ದನ್ನು ನಾನು ನೋಡಿದ್ದೇನೆ. ನಿರಂತರ ಪ್ರಯೋಗಶೀಲತೆಯನ್ನೂ ಅನುಭವದ ಸಮೃದ್ಧಿಯನ್ನೂ, ವೈವಿಧ್ಯತೆಯನ್ನೂ ನಾಡಿಗರಂತೆ ಹರಿಗಡಿಯದೆ ಕಾಯ್ದುಕೊಂಡವರು ಮಾತ್ರ ಬೆರಳಣಿಕೆಯಷ್ಟು ಮಂದಿ. ನಾಡಿಗರು ಮಾತ್ರ ಸಂಕಲನದಿಂದ ಸಂಕಲನಕ್ಕೆ ಊರ್ಧ್ವಮುಖಿಯಾಗಿ ಬೆಳೆದಿರುವುದು ಅಭಿಮಾನದ ಸಂಗತಿ.

೪

ನಾಡಿಗರ ಸಮಗ್ರಕಾವ್ಯವನ್ನು ಅವಲೋಕಿಸುವಾಗ ನಾವು ಅನುಭವಿಸುವ ಬಿಡಿ ಬಿಡಿ ಸಂಗತಿಗಳನ್ನು ನೆನೆಯಬಹುದಾದರೆ;

೧. ನಾಡಿಗರಶಬ್ದ–ನಿಶ್ಯಬ್ದಗಳ ಬೆಡಗು, ಶಬ್ದಗಳ ಸಂಕರದಿಂದ ಗಳಿಸುವ 'ಆತ್ಮಭಾತಿ' ಮುಂತಾದವುಗಳ ಅನುಲಕ್ಷ್ಯದಿಂದ ಈ ಕವಿಯೊಬ್ಬ 'ಶಬ್ದವಿದ' ಸಾಧಕ ಎಂಬ ಅಭಿಪ್ರಾಯ ಸಾಧಿತವಾಗುವುದು ಗಮನಿಸಬೇಕಾದ ಬಹು ಮುಖ್ಯ ಅಂಶಗಳಲ್ಲೊಂದು.

೨. ವಿಸ್ತಾರವಾದ ಶಬ್ದ ಸಂಪತ್ತು ಈ ಕವಿಯ ಎದೆ ಕಣಜದಲ್ಲಿ ಅಡಗಿರುವ ಕಾರಣದಿಂದ ಇವರ ಅಭಿವ್ಯಕ್ತಿಯ ಸಾಧ್ಯತೆಗಳು ಸಂಕಲನದಿಂದ ಸಂಕಲನಕ್ಕೆ ವಿಸ್ತರಿಸುತ್ತಾ ಹೋಗಿರುವುದು ಅರಿವಿಗೆ ಬರುತ್ತದೆ. ವಾಸುದೇವ ನಾಡಿಗರ ಕಾವ್ಯ ಭಾಷೆ ಮತ್ತು ಪದ ಸಂಪತ್ತಿನ ಪ್ರತ್ಯೇಕ ಅಧ್ಯಯನಕ್ಕೆ ವಿಪುಲ ಅವಕಾಶಗಳನ್ನು ಅವರ ಕಾವ್ಯ ಒದಗಿಸುತ್ತದೆಂಬುದರಲ್ಲಿ ಸಂಶಯವಿಲ್ಲ.

೩. ಇವರ ಕಾವ್ಯವು 'ನಿವೇದನೆ'ಯ ದಾರಿಯನ್ನು ಬಿಟ್ಟುಕೊಟ್ಟು 'ಆತ್ಮಕರ್ಷಣೆ'ಯ ಜಾಡನ್ನು ಹುಡುಕಿಕೊಂಡಿರುವುದು ಈ ಕವಿಯ ಸ್ವಭಾವಕ್ಕೂ ಸಾಮಾಜಿಕ ಬದ್ಧತೆಗೂ ಸಹಜವಾಗಿದ್ದು, ಮೊಗ್ಗು ಹೂವಾಗಿ ಅರಳುವ ಪ್ರಕ್ರಿಯೆಯಷ್ಟೇ ಸರಳ ಸಹಜವಾಗಿದೆ.

೪. ಇವರ ಕಾವ್ಯವನ್ನು ಅಭ್ಯಾಸ ಮಾಡುವಾಗ ವೇದ್ಯವಾಗುವ ಮತ್ತೊಂದು ಗಮನಾರ್ಹ ಸಂಗತಿಯೆಂದರೆ, ಕಾವ್ಯರಚನೆ ಎಂಬುದು ಇವರಿಗೆ ದ್ಯುತಿ ಸಂಶ್ಲೇಷಣೆಯ ಪರಿಭಾಷೆಯಂತೆ ಗೋಚರವಾಗುವುದು. ಅನುಭವ ಮತ್ತು ಪ್ರತಿಕ್ರಿಯೆಗಳ ಸಮ್ಮಿಳಿತ ರವಿಕಿರಣವನ್ನು ಎದೆಗೂಡಿನ ಮಣ್ಣೊಳಕ್ಕೆ ಸೆಳೆದು, ಸಾರವನ್ನು ಹೀರಿ, ಶಬ್ದ ಅಭಿವ್ಯಕ್ತಿಗಳೆಂಬ ಸಾಧನಗಳ ಹಾಯಿದೋಣಿ ಹಿಡಿದು ಅರಳಿದ ಕವಿತೆಗಳೆಂಬ ಹೂಗಳಿವು. ತುಂಬ ಸಫಲವಾದ ರಚನೆಗಳಿವು ಎಂಬುದು

ಓದುಗರ ಅನುಭವಕ್ಕೆ ಬರುವ ಸಂಗತಿ.

೫. ಸಂಕಲನದಿಂದ ಸಂಕಲನಕ್ಕೆ ಹನುಮದ್ವಿಕಾಸಕಂಡ ವಾಸುದೇವ ನಾಡಿಗರ ಕಾವ್ಯ ಪರಿಕ್ರಮಣದ ಯಶಸ್ಸಿಗೆ ಕಾರಣಗಳನ್ನು ಅರಸುವಾಗ ಗಮನಿಸಲೇಬೇಕಾದ ಮತ್ತೊಂದು ಸಂಗತಿಯೆಂದರೆ; ಈ ಕವಿ ತಮ್ಮ ಕಾವ್ಯರೂಢಿಗ್ರಸ್ಥವಾಗದ ಹಾಗೆ ಪ್ರಯೋಗಗಳ ಮುಖೇನ ಕಾಯ್ದುಕೊಂಡಿರುವ ಎಚ್ಚರ. ನಾಡಿಗರ ಕಾವ್ಯ ತನ್ನ ಹರಿತವನ್ನು ಕಾಯ್ದುಕೊಂಡಿರುವುದಕ್ಕೆ ಮತ್ತು ಅವರು ಕನ್ನಡದ ಕಾವ್ಯಜೀವಂತಿಕೆಂಯುನ್ನು ಪೋಷಿಸುತ್ತಿರುವ ಮುಖ್ಯ ಕವಿವರ್ಯರಲ್ಲೊಬ್ಬರೆನಿಸಿರುವುದಕ್ಕೆ ಈ ಎಚ್ಚರದ ಪ್ರಜ್ಞೆಯು ಮುಖ್ಯ ವಾಹಕವಾಗಿರುವಂತಿದೆ.

೬. ಇವರ ಕಾವ್ಯ ಬದುಕಿನ ಅರ್ಥಶೋಧನೆಯಲ್ಲಿ ತೊಡಗುತ್ತಲೇ ಬದುಕಿನ ಬಗೆಗೆ ತಕ್ಕ ಪ್ರೀತಿ, ಔಚಿತ್ಯಪೂರ್ಣ ವಿನಯ, ಶ್ರದ್ಧೆಗಳನ್ನು ಒಂದು ಹದದಲ್ಲಿ ತೋರುತ್ತದೆಯೇ ಹೊರತು, ತಾನೊಬ್ಬ ಸಂತನಂತೆ ಹೇಳಿಕೆಗಳನ್ನು ಜಾಣ ಮಾತುಗಳಲ್ಲಿ ಕಾಣಿಸುವ ಸೋಗಲಾಡಿತನದಿಂದ ಬಳಲುವುದಿಲ್ಲ. ಸುಧಾರಕತನದ ಭ್ರಮಿತ ಧೀರೋದಾತ್ತ ಸೋಗಿಲ್ಲದ, ಬದುಕಿನ ಅಸಾಂಗತ್ಯಗಳ ಕುರಿತು ಏರುದನಿಯ ಆಕ್ರೋಶಗಳಿಲ್ಲದ, ಜೀವ ಪರಧೋರಣಿಯ ಪಿಸುಗುದುವ ಮಾದರಿಯದು ಎಂಬುದನ್ನು ಮೆಚ್ಚದಿರಲಾಗದು.

ನಾವು ನಾಡಿಗರ ಈ ತನಕದ ಕಾವ್ಯವನ್ನು ಮಾತ್ರ ಸವಿದಿದ್ದೇವೆ. ಇದು 'ಸಮಗ್ರ' ವಲ್ಲ. ಕಾವ್ಯ ಇವರ ಪ್ರಾಣವಾಯುವಾಗಿರುವುದರಿಂದ ಬರೆಯದೆ ಬದುಕುವುದು ಇವರಿಗೆ ಸಾಧ್ಯವಾಗದು. ಕಸುವು ತುಂಬಿದ ಮತ್ತಷ್ಟು ಕವಿತೆಗಳನ್ನು ನಾಡಿಗರು ಬರೆಯಲಿ, ಅದು ನಿಮ್ಮೆಲ್ಲರ ದನಿಯನ್ನು ಇನ್ನಷ್ಟು ಆರ್ದ್ರಗೊಳಿಸಲಿ

ಸಂದೇಹರೂಪಿ ಬದುಕಿಗೊಂದು ಉತ್ತರವಾಗಿ 'ಮೂಕಜ್ಜಿಯ ಕನಸುಗಳು'

ಡಾ.ಎ.ರಘುರಾಂ

ಕನ್ನಡದ ಪ್ರತಿಭಾವಂತ ಲೇಖಕರಲ್ಲಿ ಕಾರಂತರೂ ಒಬ್ಬರು. ಕಾರಂತರು ಮನುಷ್ಯನ ಪ್ರವೃತ್ತಿಗಳನ್ನು ನೋಡುತ್ತ, ಆ ಪ್ರವೃತ್ತಿಗಳಿಗೆ ಕಾರಣಗಳನ್ನು ಹುಡುಕುವ ಪ್ರಯತ್ನವನ್ನು ಮಾಡುತ್ತಾರೆ. ಕಾರಂತರನ್ನು ನಾವು ಕಾದಂಬರಿಕಾರರೆಂದೇ ಗುರುತಿಸುತ್ತ ಬಂದಿದ್ದೇವೆ. ಬಹುಶ: ಆಶಯಗಳನ್ನು ಸಮರ್ಥವಾಗಿ ಹೇಳಬಲ್ಲ ಮಾಧ್ಯಮ ಕಾದಂಬರಿ ಎಂದು ಭಾವಿಸಿದ ಕಾರಣವೋ ಏನೋ ಎನ್ನುವುದು ಒಂದು ಕಾರಣವಾದರೆ, ಅದೇ ಪ್ರಕಾರವನ್ನು ಹೆಚ್ಚು ನೆಚ್ಚಿಕೊಂಡಿದ್ದರು ಎನ್ನುವುದು ಮತ್ತೊಂದು ಕಾರಣವಾಗಿದೆ. 'ಮೂಕಜ್ಜಿಯ ಕನಸುಗಳು' (೧೯೬೮) ಕಾದಂಬರಿ ಕನ್ನಡ ಸಾಹಿತ್ಯಲೋಕಕ್ಕೆ ಬಂದು ಐವತ್ತು ವಸಂತಗಳನ್ನು ದಾಟಿದೆ. ಕನ್ನಡದ ಜ್ಞಾನಪೀಠ ಪ್ರಶಸ್ತಿ ವಿಜೇತ ಕೃತಿ ಎನ್ನುವುದು ಮುಖ್ಯವಾದಂತೆ ಇಂತಹ ಸಂಕೀರ್ಣ ಕಥಾ ವಿನ್ಯಾಸ ಹೊಂದಿದ ಕೃತಿಯನ್ನು ಕನ್ನಡದ ಸೃಜನಶೀಲ ನಿರ್ದೇಶಕ ಪಿ.ಶೇಷಾದ್ರಿ ಸಿನಿಮಾ ಮಾಡಿದ್ದಾರೆ ಎನ್ನುವುದೂ ಕೂಡ ಮುಖ್ಯ ಸಂಗತಿಗಳಲ್ಲೊಂದು. ೧೯೬೮ರಿಂದ ಇಲ್ಲಿಯವರೆಗೂ ಇದು ಮೂವತ್ತಾರು ಮುದ್ರಣಗಳನ್ನು ಕಂಡಿದೆ. ಒಂದು ಕಾದಂಬರಿ ಇಷ್ಟೊಂದು ಮುದ್ರಣ ಕಾಣುವುದು ಸುಲಭವೇನೂ ಅಲ್ಲ. ಕಾರಂತರು ಕಾದಂಬರಿಗಳ ಮೂಲಕ ಕನ್ನಡಿಗರ ಮನದಲ್ಲಿ ನೆಲೆ ನಿಂತಿದ್ದಾರೆ ಎನ್ನುವುದು ಇದರಿಂದ ತಿಳಿಯುತ್ತದೆ. ಕಾರಂತರ ಈ ಕೃತಿಯನ್ನು ಓದುವ ಮುನ್ನ ಮುನ್ನುಡಿಯಲ್ಲಿ ಅವರೇ ಹೇಳಿರುವ ಕೆಲವು ಮಾತುಗಳನ್ನು ಅಗತ್ಯವಾಗಿ ನೋಡಬೇಕು. 'ಈ ಕಾದಂಬರಿಗೆ ಕಥಾ ನಾಯಕನಿಲ್ಲ; ನಾಯಕಿಯಿಲ್ಲ. ಮೂಕಜ್ಜಿಯೂ ಇಲ್ಲಿ ಕಥಾನಾಯಕಿಯಲ್ಲ. ಸಾಂಪ್ರದಾಯಿಕತೆಯಿಂದ ಹೊರೆಗಟ್ಟಿದ ಮನಸ್ಸುಗಳನ್ನು ತುಸು ತುಸುವಾಗಿ ಕಾಯಿಸಿ, ಕರಗಿಸುವ ಕೆಲಸ ಅವಳದ್ದು. ಅಂಥ ಅಜ್ಜಿಯೊಬ್ಬಳು ಇದ್ದಾಳೆಯೇ ಎಂಬ ಸಂಶಯ ಬಂದರೆ, ನಮ್ಮ ಸಂಸ್ಕೃತಿಯ ನಂಬಿಕೆಗಳ ಕುರಿತಾದ ಸಂಶಯ ಪಿಶಾಚಿಯ ರೂಪವೇ ಅವಳೆಂದು ತಿಳಿದರಾಯಿತು. ಆದರೂ ಅವಳು ನಮ್ಮಲ್ಲನೇಕರಲ್ಲಿ ಪಿಶಾಚಿಯಂತಲ್ಲ, ಪ್ರಾಮಾಣಿಕ ಸಂದೇಹಗಳ ರೂಪದಲ್ಲಿ ಬದುಕಿಕೊಂಡೇ ಇದ್ದಾಳೆ' ಎಂದು ಹೇಳುತ್ತಾರೆ. ಆಂದರೆ ಕಾರಂತರ ಆಶಯ

ಸ್ಪಷ್ಟವಾಗಿ ತಿಳಿಯುತ್ತದೆ. ಕಾರಂತರು ಈ ಕಾದಂಬರಿಯ ಮೂಲಕ ನಾಯಕ ಅಥವಾ ನಾಯಕಿಯನ್ನು ಸೃಷ್ಟಿಸುವ ಯಾವ ಇರಾದೆಯನ್ನೂ ಇಟ್ಟುಕೊಂಡಿಲ್ಲ. ಬಹುಶ: ಅವರ ಕಾದಂಬರಿಗಳು ನಾಯಕ ಅಥವಾ ನಾಯಕಿ ಪ್ರಧಾನ ಎಂದು ನೋಡುವುದೇ ತಪ್ಪಾಗಿಬಿಡುವ ಸಾಧ್ಯತೆಯಿದೆ. ಕಾದಂಬರಿಯ ಕತೆ ಹೀಗಿರಬಹುದೇ ಎನ್ನುವ ಕಲ್ಪನೆಯೇ ನಮ್ಮನ್ನು ದಾರಿ ತಪ್ಪಿಸಿಬಿಡುತ್ತದೆ ಎನ್ನುವುದರೊಟ್ಟಿಗೇ ಸತ್ಯದ ಮುಖದರ್ಶನ ಮಾಡುವುದು ಇಲ್ಲಿನ ಮೂಲ ಆಶಯದಂತೆ ಕಂಡುಬಂದರೆ ಆಶ್ಚರ್ಯವೇನಿಲ್ಲ.

ಕಾರಂತರು ಕಾದಂಬರಿ ಎಂದರೆ ಬರೀ ಕಥೆ ಹೇಳುವುದು, ನಾಯಕ ಅಥವಾ ನಾಯಕಿಯ ಸುತ್ತ ಏನೋ ಒಂದು ಹೇಳುತ್ತ ಹೊಗುವುದು ಎಂದು ನಂಬಿದವರಲ್ಲ. ಕನ್ನಡ ವಿಮರ್ಶೆ ಇದುವರೆಗೆ ವಸ್ತು, ಭಾಷೆ, ತಂತ್ರ ಎಂದು ಪಾರಂಪರಿಕ ನೆಲೆಯಲ್ಲಿ ಕೃತಿ ವಿಮರ್ಶೆ ಮಾಡುತ್ತ ತನಗೆ ತಾನೇ ಒಂದು ಮಿತಿಯನ್ನು ಕಟ್ಟಿಕೊಳ್ಳುತ್ತಾ ಬಂದಿರುವುದು ಗಂಭೀರ ಓದುಗರಿಗೆ ಗೊತ್ತಿರುವ ವಿಚಾರವೇ ಆಗಿದೆ. ಕಾರಂತರು ಸಿದ್ಧ ಮಾದರಿಗಳನ್ನು ಅಭಿನ್ನಗೊಳಿಸುತ್ತ ನಮ್ಮಲ್ಲಿರುವ ಲೋಕರೂಢಿಯ ವಿಚಾರಗಳನ್ನು ತರ್ಕಕ್ಕೆ ಒಳಪಡಿಸುತ್ತಾ ವೈಚಾರಿಕತೆಯ ಹಿನ್ನೆಲೆಯಲ್ಲಿ ಹೊಸ ವಿನ್ಯಾಸವೊಂದನ್ನು ಕಟ್ಟತೋರುವುದು ಅವರ ಉದ್ದೇಶವಾದಂತಿದೆ.

ಕಾದಂಬರಿಯ ಮೊದಲ ಅಧ್ಯಾಯದಲ್ಲಿ ಸರಿಸುಮಾರು ಎಂಟು ಪ್ರಶ್ನೆಗಳಿವೆ. ಈ ಪ್ರಶ್ನೆಗಳನ್ನು ಕಾರಂತರು ತಮ್ಮ ಬರವಣಿಗೆಯ ಕಥನಕ್ರಮದ ಮಾದರಿಯ ಸ್ವರೂಪದ ಅನ್ವೇಷಣೆಗಾಗಿ ಮುಖಾಮುಖಿ ಮಾಡಿಕೊಂಡ ಪ್ರಶ್ನೆಗಳೇ ವಿನ: ಬೇರೇನಲ್ಲ ಎನ್ನುವುದನ್ನು ಒಂದು ದೃಷ್ಟಿಯಿಂದ ಪರಿಭಾವಿಸಿದರೂ ಮನುಷ್ಯ ಪ್ರವೃತ್ತಿಗಳ ಒಡಲಿನ ಸೂಕ್ಷ್ಮ ವ್ಯಾಪಾರಗಳನ್ನು ಕಟ್ಟಿಕೊಳ್ಳುವ ದಿಸೆಯಲ್ಲಿ ನಾವೇನು ಮಾಡಬೇಕು ಎನ್ನುವ ಪ್ರಶ್ನೆಗಳೂ ಇಲ್ಲಿವೆ. ಮೂಕಜ್ಜಿಯ ವ್ಯಕ್ತಿತ್ವ ಹಾಗೂ ಆಕೆಯ ಒಳಮುಖೀ ಆಲೋಚನೆಗಳಿಗೆ ಕಾರಣಗಳೇನು? ಎನ್ನುವುದು ಕಾದಂಬರಿಯ ಸಂದರ್ಭದಲ್ಲಿ ಎಲ್ಲ ಓದುಗರಿಗೂ ಕಾಡುವ ಪ್ರಶ್ನೆ. ಏಕೆಂದರೆ ಕಾದಂಬರಿಯ ತಂತ್ರದ ಎಳೆಗಳು ಈ ಪ್ರಶ್ನೆಗಳಲ್ಲಿಯೇ ಹುದುಗಿವೆ ಎನ್ನುವುದನ್ನು ಗಮನಿಸಬೇಕು. ಕಾರಂತರಿಗೆ ನಮ್ಮ ನಡುವೆ ಹರಿದಾಡುವ ಕಥೆಗಳು ಮುಖ್ಯವೇ ಅಥವಾ ಕಥೆಗಳ ನಂತರ ಎದುರಾಗುವ ಪ್ರಶ್ನೆಗಳು ಮುಖ್ಯವೆ ಎನ್ನುವುದನ್ನು ಗಮನಿಸಿದರೆ ಅವರಿಗೆ ಕಥೆಗಳ ನಂತರ ಹುಟ್ಟುವ ಪ್ರಶ್ನೆಗಳೇ ಮುಖ್ಯವಾಗಿವೆ. ಕಾದಂಬರಿಯಲ್ಲಿ ತುಂಬ ಮುಖ್ಯ ಸಂಗತಿಗಳಿವು ಎನ್ನಿಸುತ್ತದೆ. ನಾಗಿಯ ಕತೆ, ನಾಗನಕಾಲಿನ ಸುತ್ತಾಟ, ಚೆನ್ನಿಯ ಗೆಳೆತನ, ಮೂಕಜ್ಜಿ ಕಣ್ಣುಮುಚ್ಚಿ ಧ್ಯಾನಸ್ಥಳಾಗುವ ಕ್ರಮ. ಬಹುಶ: ಈ ಕೃತಿಯ ಶಿಲ್ಪ

ವಿನ್ಯಾಸಕ್ಕೆ ಕಾರಂತರು ಬಹಳವಾಗಿ ಆಲೋಚಿಸಿದಂತಿದೆ. ಇದೊಂದು ಕಾದಂಬರಿ ಎಂದರೂ ಅದರೊಟ್ಟಿಗೆ ಕಾಂದಂಬರಿಯ ತಂತ್ರ, ಅದರ ಉದ್ದೇಶ, ಓದುಗನ ದೃಷ್ಟಿಕೋನ ಇವುಗಳನ್ನೆಲ್ಲ ತಮ್ಮ ಮುಂದಿರಿಸಿಕೊಂಡಿರುವ ಕಾರಣ ಅದಕ್ಕೆಲ್ಲ ಉತ್ತರಿಸಿ ಮುಂದುವರೆಯಬೇಕು ಎನ್ನಿಸಿದೆ. ಮೊದಲ ಅಧ್ಯಾಯದಲ್ಲಿ ಕೆಲವು ಪ್ರಶ್ನೆಗಳನ್ನು ಮುಖಾಮುಖಿ ಮಾಡಿಕೊಂಡಿದ್ದಾರೆ. ಕನ್ನಡ ಕಾದಂಬರಿಯಲ್ಲಿ ಈ ರೀತಿಯ ತಂತ್ರ ವಿಧಾನ ಮುದ್ದಣನ 'ರಾಮಾಶ್ವಮೇಧ', ಶಾಂತಿನಾಥ ದೇಸಾಯಿ ಅವರ 'ಸೃಷ್ಟಿ' ಕಾದಂಬರಿಯಲ್ಲಿ ಕಾಣಬಹುದು. ಅವರೇ ಹೇಳುವ ಮಾತುಗಳು ಇಲ್ಲಿ ಮುಖ್ಯವೆನ್ನಿಸುತ್ತವೆ. 'ಮುಂದೆ ನಾನು ಒಂದಿಷ್ಟು ಹೆಚ್ಚಿಗೆ ಓದಿಕೊಂಡೆ. ಆಚೆ, ಈಚೆ ನಡೆಯುತ್ತಿರುವುದನ್ನು ಕಂಡೆ. ಕಂಡದ್ದು ಹೆಚ್ಚಾದಂತೆ – ಇಂಥ ಕತೆಗಳನ್ನು ನಂಬಿದರೆ ನಷ್ಟವಿಲ್ಲ – ಎಂದು ಕಾಣಿಸಿತು. ಅವಕ್ಕಿಂತ ಹೆಚ್ಚಿನ ಚಮತ್ಕಾರ ನಮ್ಮ ಊರು, ಮನೆಗಳಲ್ಲೇ ನಡೆಯುತ್ತದೆ.' (ಮೂಕಜ್ಜಿಯ ಕನಸುಗಳು : ಪುಟ ೨) ಕಥೆಗಳನ್ನು ನಂಬುವುದಕ್ಕಿಂತ ನಮ್ಮ ನಡುವಿನ ವ್ಯಕ್ತಿತ್ವಗಳಲ್ಲಿ ಅಡಗಿದ ವಿಭಿನ್ನ ವ್ಯಕ್ತಿತ್ವಗಳನ್ನು ಒಂದು ಸೈದ್ಧಾಂತಿಕತೆಗೆ ಒಳಪಡಿಸುವುದು, ವಿಶ್ಲೇಷಿಸುವುದು ಅದರೊಟ್ಟಿನ ಸಂಬಂಧಗಳ ಮೂಲಕ ಅಲ್ಲಿನ ಹುನ್ನಾರಗಳನ್ನು ವಾಸ್ತವತಾವಾದದೊಟ್ಟಿಗೆ ನೋಡುವ ಕ್ರಮವೇ ಕಾರಂತರ ಕಾದಂಬರಿಯ ತಂತ್ರ ವಿಧಾನವಾಗಿದೆ. ಮೂಕಜ್ಜಿ ಒಂದು ಪಾತ್ರವಲ್ಲ ಹಲವು ಪಾತ್ರಗಳ ಒಂದು ಪ್ರತಿಮೆ. ಆ ಪ್ರತಿಮೆಯೊಳಗೆ ಅನೇಕ ಪ್ರಮೇಯಗಳಿವೆ ಎನ್ನುವುದು ಇಲ್ಲಿ ನಡೆಯುವ ಅನೇಕ ಸನ್ನಿವೇಶಗಳಿಂದ ತಿಳಿಯುತ್ತದೆ. ಸನ್ನಿವೇಶಗಳು ಬರೀ ಪ್ರಶ್ನೆಗಳಾಗದೆ ಅದರ ಪೂರ್ವಾಪರ ಚರ್ಚೆಗಳೇ ನಡೆಯುತ್ತವೆ. ಅದರಲ್ಲಿ ಉತ್ತರಗಳನ್ನೋ, ಪ್ರಶ್ನೆಗಳನ್ನೋ ಇಟ್ಟುಕೊಂಡು ನಮ್ಮ ಬದುಕನ್ನು ಕಟ್ಟಿಕೊಳ್ಳಬಹುದು. ಈ ಕಾರಣದಿಂದಲೇ ಮೇಲೆ ಹೇಳಿದ ಊರು, ಮನೆಗಳಲ್ಲಿನ ಚಮತ್ಕಾರವೇ ಅವರಿಗೆ ಮುಖ್ಯವೆನ್ನುವುದನ್ನು ತುಂಬ ಸ್ಪಷ್ಟವಾಗಿ ಹೇಳಿದ್ದಾರೆ. 'ನನಗೆ ವಾಸ್ತವಿಕ ಜೀವನ ಅವಾಸ್ತವಿಕವಾಗಿ ಕಾಣಿಸುತ್ತದೆ. ಅವಾಸ್ತವಿಕತೆ ವಾಸ್ತವಿಕವಾಗಿಯೂ ಕಾಣಿಸುತ್ತದೆ. ಇವೆರಡರೊಳಗಣ ಮೇರೆ, ಅಂತರ, ಬಹಳ ಕಡಿಮೆ– ಎನಿಸುತ್ತದೆ. ಸತ್ಯ, ಅಸತ್ಯಗಳ ಮೇರೆಯಷ್ಟೇ ಕಡಿಮೆ ಅಂತರ ಅವುಗಳಲ್ಲಿ. ಒಂದು ಇನ್ನೊಂದರ ಹಾಗೆಯೇ ಇರುತ್ತದೆ. ಇದು ಇನ್ನೊಂದಕ್ಕೆ ಸಮೀಪವಾಗಿರುತ್ತದೆ. ಈ ಸಮೀಪಸ್ಥ ವಸ್ತುಗಳ ನಡುವೆ ಎಷ್ಟೊಂದು ದೂರವಿದೆಯಲ್ಲ ಎಂಬ ಬೆರಗು ಉಂಟಾಗುತ್ತದೆ. ನನ್ನಲ್ಲಿ ಅನೇಕ ಸಮಸ್ಯೆಗಳನ್ನು ಕುರಿತಾದ ಬೆರಗು, ಅಂದಿನಿಂದ ಇಂದಿನ ತನಕ ಚೆನ್ನಾಗಿ ಬಲಿತು ಬಂದಿದೆಯಾದರೆ, ಅದಕ್ಕೆ ಕಾರಣಗಳು ನನ್ನ ಅಜ್ಜಿ, ಅವರ ಹಲವಾರು ಕನಸುಗಳು. ಅವಾವೂ ರಾತ್ರಿಯ ಕನಸುಗಳಲ್ಲ, ಯಾವುದೇ

ಅಪೇಕ್ಷೆಯಿಂದ ಬೆಳೆಯಿಸಿಕೊಂಡ ಹಗಲುಗನಸುಗಳೂ ಅಲ್ಲ. ನನಗೂ ನಿಮಗೂ ಕಾಣಿಸದಿರುವ, ಅವರಿಗಷ್ಟೇ ಕಾಣಿಸುತ್ತಿರುವ ವಿಚಿತ್ರ ತೆರನ ಕನಸುಗಳು' (ಮೂಕಜ್ಜಿಯ ಕನಸುಗಳು : ಪುಟ ೧೨ & ೧೩) ಎಂದು ತಾವು ಹೇಳುವ ಕತೆಯನ್ನು ಅಜ್ಜಿಯ ದೃಷ್ಟಿಕೋನದ ಮೂಲಕ ಹೇಳುವ ತಂತ್ರ ವಿಧಾನವೊಂದನ್ನು ಕಾಣುತ್ತೇವೆ. ಇದಕ್ಕೆ ಮೊದಲ ಅಧ್ಯಾಯದ ಈ ಒಂದು ಸನ್ನಿವೇಶ ಸಾಕ್ಷಿಯಾಗುತ್ತದೆ.

ಮೊದಲ ಅಧ್ಯಾಯದಲ್ಲಿ ಬರುವ ಅಜ್ಜಿ ಹಾಗೂ ನಿರೂಪಕರ ನಡುವಿನ ಸಂವಾದವನ್ನು ತುಂಬ ಗಂಭೀರವಾಗಿ ಪರಿಶೀಲಿಸಿದರೆ ಇದು ಸ್ಪಷ್ಟವಾಗಿಬಿಡುತ್ತದೆ. ರಾಮಣ್ಣ ಸಾಮಾನ್ಯವಾಗಿ ಎಣ್ಣೆ ಮಾರಿ ಜೀವಿಸುವವನು. ಅವನು ಲಕ್ಷಣವಾದ ಹುಡುಗಿ ನಾಗಿಯನ್ನು ಹಾರಿಸಿಕೊಂಡು ಬಂದು ತನ್ನ ಮನೆಯಲ್ಲಿರಿಸಿಕೊಂಡಿದ್ದನು. ನಂತರ ಅವಳನ್ನು ತವರಿನವರು ಚಿನ್ನ, ಬೆಳ್ಳಿ ಎಂದು ಪುಸಲಾಯಿಸಿ ಆಕೆಯನ್ನು ತವರಿಗೆ ಕರೆಸಿಕೊಂಡರು. ಮೇಲ್ಪದರಕ್ಕೆ ಇದಿಷ್ಟೇ ಕತೆ ಎಂದು ಗೊತ್ತಾಗುತ್ತದೆ. ಆದರೆ ಅಜ್ಜಿಯನ್ನು ನಿರೂಪಕರು 'ಯಾರು ಅಷ್ಟಕ್ಕೆಲ್ಲ ಕಾರಣ' ಎಂದು ಹೇಳಿದಾಗ 'ರಾಮಣ್ಣನಂತೂ ಅಲ್ಲ, ಇವಳೂ ಅಲ್ಲ ಅನ್ನುತ್ತಾರೆ' (ಪುಟ.೩) ಆದರೆ ನಿರೂಪಕರಿಗೆ ಒಂದು ಬದುಕು ಹಾಳಾದ ಬಗ್ಗೆ ಕನಿಕರವಿದೆ, ಅಷ್ಟೇ ಅಲ್ಲ ಅದನ್ನು ಸರಿಪಡಿಸಲಾಗದ ನೋವೂ ಇದೆ. ಇಂತಹ ಅನೇಕ ಬರ್ಬರ ಸಂಗತಿಗಳು ನಮ್ಮ ನಡುವೆ ಇರುತ್ತವೆ. ಅವುಗಳನ್ನು ಸುಮ್ಮನೆ ನೋಡುತ್ತೇವೆ, ಆದರೆ ಅದರ ಹಿಂದೊಂದು ಕ್ರೌರ್ಯ ಇರುತ್ತದೆ. ಆ ಕ್ರೌರ್ಯ ಅವರ ಬದುಕನ್ನು ಹೇಗೆಲ್ಲ ನಾಶಮಾಡುತ್ತಿರುತ್ತದೆ ಎನ್ನುವುದು ಗೊತ್ತಾದಾಗಲೇ ಮನುಷ್ಯತ್ವದ ಬೆಲೆ ಗೊತ್ತಾಗುತ್ತದೆ ಎನ್ನುವುದಂತೂ ಇಲ್ಲಿ ತೀರಾ ಸೂಕ್ಷ್ಮವಾಗಿ ಬೆಸೆಯಲ್ಪಟ್ಟಿದೆ. ಸ್ನೇಹಿತನೂ ಕೂಡ ಅದಕ್ಕೆ ಸಂಬಂಧಪಟ್ಟ ವ್ಯಕ್ತಿಯ ಹೆಸರನ್ನು ಹೇಳದೆ ಹೋದಾಗ ಅದೇ ತಲೆಯಲ್ಲಿ ನಿಂತುಬಿಟ್ಟಾಗ ಅಜ್ಜಿಯ ಬಳಿ ಉತ್ತರ ಕಾಣಲು ಪ್ರಯತ್ನ ನಡೆಯುತ್ತದೆ. 'ಸತ್ಯವಂತಳಾದುದರಿಂದಲೇ ಹೋಗಲಿಲ್ಲ. ಆದರೆ ಮಗು, ಸತ್ಯ ಯಾರಿಗೆ ಬೇಕು ಈಗಿನ ಕಾಲದಲ್ಲಿ? ಅದೆಲ್ಲ ಹಿಂದಕ್ಕಾಯಿತು. ಅಲ್ಲ, ಹಿಂದೆಯೂ ಹೀಗೆಯೇ ಇತ್ತೋ? ಏನೋ, ಯಾರು ಬಲ್ಲ? ನಾಳೆ ಅವಳೂ ಬದುಕಿ, ಆ ಮಕ್ಕಳೂ ಧೊಡ್ಡವರಾದರೆ, ನಿನ್ನ ಮಾವನೂ ಬದುಕಿ ಉಳಿದರೆ, ಹೋಗಿ, ಅವನ ಮುಂದೆ ನಿಲ್ಲಿಸಿ 'ನೀವು ಕೈಬಿಟ್ಟು ನನ್ನನ್ನು ದಾರಿಯಲ್ಲಿ ಕೆಡೆದರೇನಾಯಿತಂತೆ? ಅವುಗಳ ಅಪ್ಪ ನೀವೇ ಅಂತ ಹತ್ತುಮಂದಿ ಹೇಳದೆ ಇರುತ್ತಾರೆಯೇ? ಎಂದು ಅವನನ್ನು ಕೇಳಿಯೂ ಕೇಳಿಯಾಳು' (ಪುಟ ೮) ಎನ್ನುವ ಮಾತುಗಳ ಮೂಲಕ ನಿರೂಪಕನಲ್ಲಿದ್ದ ಗೊಂದಲಗಳಿಗೆ ಉತ್ತರ ನೀಡುತ್ತಾಳೆ. ಹೊರಗಿನ ಬದುಕೇ ಬೇರೆ, ಅಲ್ಲಿನ ಆಂತರಿಕ ಬದುಕೇ ಬೇರೆ. ನಿಜದಾರಿಯ

ಅರ್ಥ ಕಾಣುವುದು, ದಾಳಗಳಲ್ಲಿ ಸಿಲುಕದಂತೆ ನೋಡುವುದೇ ನಿಜ ಬದುಕು ಎನ್ನುವ ಅಜ್ಜಿಯ ವಿವೇಕದ ಮಾತುಗಳು ಇಲ್ಲಿ ಮುಖ್ಯವಾಗಿವೆ. ಇದೇ ಅಧ್ಯಾಯದಲ್ಲಿ ರಾಮಾಯಣದ ಸೀತೆಯ ಪಾವಿತ್ರ್ಯದ ಸಂದರ್ಭವನ್ನು ಕೂಡ ವಿವೇಚನೆಗೆ ಒಳಪಡಿಸುತ್ತಾರೆ. ರಾಮ ಸೀತೆಯನ್ನು "ನೀನು ಪರರ ಮನೆಯಲ್ಲಿ ಇದ್ದವಳು. ನಿನ್ನ ಶುಚಿಯನ್ನು ಉಳಿಸಿಕೊಂಡಿದ್ದೀಯೆಂದು ಹೇಗೆ ತಿಳಿಯಲಿ?' ಎಂದಂದು ಅಗ್ನಿಪರೀಕ್ಷೆಗೆ ಹೊರಟ. ಕತೆ ಆ ಹಂತಕ್ಕೆ ಬಂದಾಗ ಯಾರಿಗೂ ಸಂಕಟವಾಗುತ್ತದೆ. ಅಸಹ್ಯ ಹುಟ್ಟೀತು ರಾಮನ ವಿಚಾರದಲ್ಲಿ. 'ಅಗ್ನಿಪರೀಕ್ಷೆ ನಡೆಯಿತು. ಸೀತೆ ಪಾರಾಗಿ ಬಂದಳು' ಎಂದೊಡನೆಯೇ ನಮಗೆಲ್ಲವೂ ಮರೆತು ಹೋಗುತ್ತದೆ. ರಾಮನ ಮೂರ್ಖತನ ಮರೆವೆಯಾಗುತ್ತದೆ. ಸೀತೆ ಉಳಿಯಬೇಕಾಗಿದೆ. ನಮ್ಮ ಮನಸ್ಸು ಬೇಡುವುದು ಅದನ್ನು. ಕತೆ ಬರೆದವನು ಹಾಗೆ ಉಳಿಸಿಕೊಟ್ಟ. ಬೆಂಕಿಯಲ್ಲಿ ಅವಳನ್ನು ಕಾಯಿಸಿ, ಅವಳು ಶುಚಿವಂತಳು ಎಂದು ಜಾಹೀರುಪಡಿಸಿ, ನಮ್ಮ ಕಣ್ಣಿಗೆ ಒಂದಷ್ಟು ಮಣ್ಣು ಹಾಕಿಬಿಟ್ಟ" (ಪುಟ೧೨) ಎಂದು ಪ್ರಸಂಗವನ್ನು ತಮ್ಮ ಕಾದಂಬರಿಯಲ್ಲಿ ಮರು ವಿವೇಚನೆಗೆ ಒಳಪಡಿಸುವ ಔಚಿತ್ಯ ಕಾರಂತರು ಕತೆಯ ಜೊತೆ ಜೊತೆಗೇ ಅಲ್ಲಿರುವ ವೈಚಾರಿಕತೆಯನ್ನು ಪ್ರಶ್ನಿಸುತ್ತಿದ್ದಾರೆ. ಇಲ್ಲಿ ನಿರೂಪಕರಿಗೆ ಗೊತ್ತಿಲ್ಲದ ಅನೇಕ ಸಂಗತಿಗಳನ್ನು ಅಜ್ಜಿಯ ದೃಷ್ಟಿಕೋನದ ಮೂಲಕ ವಿವೇಚಿಸುವ ಹೊಸ ತಾಂತ್ರಿಕವಿಧಾನವನ್ನು ಈ ಕಾದಂಬರಿಯು ಹೇಳುತ್ತಿದೆ. ಕಾರಂತರು ತಾವು ಹೊಸದೇ ಕತೆ ಬರೆಯುತ್ತಿದ್ದರೂ ಈಗಾಗಲೇ ನಮ್ಮ ನಡುವೆ ಆಗಿ ಹೋದ ಕತೆಗಳ ವೈಚಾರಿಕತೆಯನ್ನು ಪ್ರಶ್ನಿಸದೇ ಬಿಟ್ಟಿಲ್ಲ. ಮೊದಲ ಅಧ್ಯಾಯದ ಕೊನೆಯಲ್ಲಿ ಮತ್ತೊಂದು ಪ್ರಸಂಗವಿದೆ. ನಮಗೆಲ್ಲರಿಗೂ ಪುಣ್ಯಕೋಟಿಯ ಕತೆ ಗೊತ್ತಿದೆ. ಅಜ್ಜಿ ಹಾಗೂ ನಿರೂಪಕರ ನಡುವೆ ನಡೆಯುವ ಚರ್ಚೆಯ ಈ ಭಾಗ ಗಮನಾರ್ಹ.

" 'ಅಜ್ಜಿ, ಅದು ನಿಜವೇ? ನಿಜಕ್ಕೂ ಹಾಗಾಯಿತೇ?' ಎಂದು ದೀನ ಮುಖದಿಂದ ಕೇಳಿದರೆ,

'ಮಗು, ಕತೆ ಕತೆಯೇ' ಅನ್ನುತ್ತಿದ್ದರು.

'ನಿಜ ಅಲ್ಲ ಅನ್ನುತ್ತೀರಾ?' ಎಂದು ನಿರಾಶೆಯಿಂದ ಪ್ರಶ್ನಿಸಿದರೆ,

'ನಿನಗೆ ಏನಾಗಬೇಕೀಗ? ಪುಣ್ಯಕೋಟಿ ದನ ಹುಲಿಯ ಬಾಯಿಗೆ ಬೀಳಬೇಕೆಂದಿದೆಯೋ?'

'ಇಲ್ಲ'

'ಹಾಗಿದ್ದ ಮೇಲೆ! ಒಂದನ್ನು ಒಂದು ತಿಂದು ಬದುಕಬೇಕು ಈ ಜಗತ್ತಿನಲ್ಲಿ. ಹುಲಿಯಿದ್ದರೆ ದನವಿಲ್ಲ, ದನವಿದ್ದರೆ ಹುಲಿಯಿಲ್ಲ.'

'ಎರಡೂ ಬದುಕಲಿ' ಎಂದೆ ನಾನು.

'ಮತ್ತೆ? ಹುಲಿ ಏನು ತಿನ್ನಬೇಕು, ಹುಲ್ಲನ್ನೇ? ಹುಲ್ಲಿಗೂ ಜೀವ ಇದೆಯಲ್ಲ. ಹಾಗೆ ಕತೆ ತಿರುಗಿಸಿದರೆ ಹುಲ್ಲನ್ನು ತಿನ್ನಲು ಬಂದ ದನವನ್ನು ಕಂಡು, ಹುಲ್ಲು ಹೆದರಿ ತನ್ನ ಮರಿಯ ಹತ್ತಿರ ಹೋಗಿ ಬರುತ್ತೇನೆ ಎನ್ನಬೇಕಾದೀತು" (ಪುಟ ೧೬) ಎಂದು ಇಡೀ ಕತೆಯ ಚರ್ಚೆಯನ್ನು ಬೇರೆಯದೇ ದಿಕ್ಕಿಗೆ ಕೊಂಡೊಯ್ಯುತ್ತಾರೆ. ಈ ಕತೆ ಕರ್ನಾಟಕದ ಸಂದರ್ಭದಲ್ಲಿ ಎಷ್ಟೆಲ್ಲ ವಿಮರ್ಶೆಯಾಗಿದೆ ಎನ್ನುವುದನ್ನು ನೋಡಿದಾಗ ಕಾರಂತರ ಈ ದೃಷ್ಟಿಕೋನದ ಹೊಸ ಸಾಧ್ಯತೆ ಅವರ ಆಲೋಚನಾ ಕ್ರಮವನ್ನು ನಮ್ಮ ಮುಂದಿರಿಸಿದೆ. ಹೀಗೆ ಮೊದಲ ಅಧ್ಯಾಯದಲ್ಲಿಯೇ ಬರುವ ಅಜ್ಜಿ ಕವಿರಾಜಮಾರ್ಗಕಾರ ಹೇಳುವಂತೆ 'ಕನ್ನಡಿಗರ್ ವಿವೇಕಿಗಳ್' ಎನ್ನುವ ಮಾತಿಗೆ ಸಾಕ್ಷಿಯಂತಿದೆ. ಕೆ.ವಿ.ಸುಬ್ಬಣ್ಣ ಅವರು ಕೂಡ ಗೋವಿನಹಾಡನ್ನು ಕುರಿತು ಮಾಡಿದ ವಿಮರ್ಶೆಗೆ ಅವರು ಕೊಡುವ ಶೀರ್ಷಿಕೆ 'ಕನ್ನಡವು ದಕ್ಕಿಸಿಕೊಂಡ ಅರಿವು ಮತ್ತು ಎಚ್ಚರ' ಎನ್ನುತ್ತಾರೆ. ಇಂತಹ ಅನೇಕ ಸೂಕ್ಷ್ಮ ಓದುಗಳು ಕನ್ನಡದಲ್ಲಿವೆ.

ಕನ್ನಡ ಸಾಹಿತ್ಯದಲ್ಲಿ ಅನೇಕ ಕಾಲ್ಪನಿಕ ಊರುಗಳಿವೆ. ತೇಜಸ್ವಿಯವರ 'ಕೆಸರೂರು', ಅನಂತಮೂರ್ತಿಯವರ 'ಭಾರತೀಪುರ', ಕಂಬಾರರ 'ಶಿವಾಪುರ', ಹಾಗೆಯೇ ಇಲ್ಲೂ ಕೂಡ ಕಾರಂತರ ಕಾಲ್ಪನಿಕ ಊರು 'ಮೂಡೂರು' ಕಾಣಸಿಗುತ್ತದೆ. ಈ ಊರಿನಲ್ಲಿಯೇ ಕತೆ ಪ್ರಾರಂಭವಾಗುತ್ತದೆ. ಅನೇಕ ಜಾತಿ ಜನಾಂಗಗಳ ನಡುವೆ ಅಶ್ವತ್ಥದ ಕಟ್ಟೆ ಹಾಗೂ ಅಜ್ಜಿ ಮುಖ್ಯ ಕೇಂದ್ರವಾಗುತ್ತಾರೆ. ಅಶ್ವತ್ಥದ ಕಟ್ಟೆಗೆ ತುಂಬ ಪ್ರಾಚೀನತೆ ಇದೆ. ಆ ಪ್ರಾಚೀನತೆ ಅದರದೇ ಬದುಕಿನ, ಸಂಸ್ಕೃತಿಯ ಚಹರೆಗಳಿವೆ ಎನ್ನುವುದನ್ನು ಇಲ್ಲಿನ ಚರ್ಚೆಗಳು ತಿಳಿಸುತ್ತವೆ. ಅನಾದಿ ಕಾಲದಲ್ಲಿ ಅದೊಂದು ದೊಡ್ಡ ಪಟ್ಟಣವಾಗಿತ್ತು ಈಗ ಅದರ ಅಸ್ತಿತ್ವ ಇದೆ ಎಂದರೆ ಇದೆ ಎನ್ನುವ ಹಾಗಿದೆ ಎನ್ನುತ್ತಾರೆ ಅಜ್ಜಿ. ಇಲ್ಲಿ ಅನೇಕ ಪಾತ್ರಗಳಿವೆ. ಆದರೆ ಎಲ್ಲ ಪಾತ್ರಗಳೂ ಬೇರೆ ಕಾದಂಬರಿಗಳಲ್ಲಿ ಬರುವಂತೆ ಬರೀ ಪಾತ್ರಗಳೇ ಆಗಿವೆ. ಈ ಕಾದಂಬರಿಯ ಮೂಕಜ್ಜಿ ಹಾಗೂ ಸುಬ್ರಾಯ ಎರಡು ಪಾತ್ರಗಳು ಮಾತ್ರ ವಿಭಿನ್ನವಾಗಿವೆ. ಇಡೀ ಸಮುದಾಯದ ಜೀವ ಪ್ರಜ್ಞೆಯಾಗಿ ಮೂಕಜ್ಜಿ ಕಾಣಿಸಿದರೆ ಆ ಜೀವಪ್ರಜ್ಞೆಯ ತರ್ಕಾತರ್ಕದ ಪ್ರತಿನಿಧಿಯಂತೆ ಇಲ್ಲಿನ ನಿರೂಪಕ ಅಥವಾ ಸುಬ್ರಾಯ ಕಾಣಿಸಿದರೆ ಆಶ್ಚರ್ಯವಿಲ್ಲ. ಕಾರಂತರು ಮೂಕಜ್ಜಿಯ ಮೂಲಕ ಹೇಳುವ ಕಥನವೇ ಬೇರೆ. ಅದನ್ನು ಸುಬ್ರಾಯ ತನ್ನ ಮನಸ್ಸಿನ ಕನ್ನಡಿಯ ಮೂಲಕ ತರ್ಕಕ್ಕೆ ಒಳಪಡಿಸುವ, ಸಮುದಾಯದ ಸಂದರ್ಭದಲ್ಲಿ ಪರಿಶೀಲಿಸಿ ನೋಡುವ ಕ್ರಮವೇ ಬೇರೆ. ಈ ಎರಡು ದಾರಿಗಳೂ ಭಿನ್ನವೇ. ಒಂದು ಆಂತರಿಕ ಪ್ರಜ್ಞೆ, ಮತ್ತೊಂದು ಬಾಹ್ಯ

ಪ್ರಜ್ಞೆಯಾಗಿ ಒಂದಕ್ಕೊಂದು ಸಂಬಂಧವಿಲ್ಲ ಎನ್ನಿಸಿದರೂ ಇಲ್ಲಿನ ಅನೇಕ ಪ್ರಶ್ನೆಗಳಿಗೆ ತಕ್ಷಣ ಉತ್ತರವೂ ದೊರೆಯಲಾರದು. ಆದರೆ ಅಲ್ಲಿನ ಜೋಡಣೆಗೆ ಓದುಗ ಒಂದು ಅರ್ಥವನ್ನಂತೂ ಹುಡುಕಿಯೇ ತೀರುತ್ತಾನೆ ಎನ್ನುವ ಅಚಲವಾದ ನಂಬಿಕೆ ಕಾರಂತರಿಗಿದೆ. ಇದಕ್ಕೆ ನಾಗಿಯ ಪ್ರಸಂಗ, ತಿಪ್ಪಿಯ ಪ್ರಸಂಗ, ಅನಂತರಾಯರು ತಮ್ಮ ಸಲಿಂಗತನಕ್ಕೆ ತನ್ನ ಶಿಷ್ಯನನ್ನು ಬಳಸಿಕೊಳ್ಳುವುದಕ್ಕೆ ಮೂಕಜ್ಜಿ ಹೇಳುವ ಸೂಕ್ಷ್ಮತೆಯ ಮಾತುಗಳು ಹೀಗೆ ಅನೇಕ ಪ್ರಸಂಗಗಳನ್ನು ಇಲ್ಲಿ ಪಟ್ಟಿ ಮಾಡಬಹುದಾದರೂ ಇವು ಜೀವನ ಪಾಠಗಳಾಗಿ ಮುಖ್ಯ ಎನ್ನಿಸಿ ಹೇಳುತ್ತಿದ್ದೇನೆ. ಕಾರಂತರ ಮೂಕಜ್ಜಿಯನ್ನು ಓದುವಾಗ ಎಂ.ಕೆ.ಇಂದಿರಾ ಅವರ ಫಣಿಯಮ್ಮ ಎಂಬ ಮುದುಕಿ ನೆನಪಾದರೆ ಆಶ್ಚರ್ಯವಿಲ್ಲ. ಫಣಿಯಮ್ಮನೂ ಬಾಲ್ಯದಲ್ಲೇ ಗಂಡನನ್ನು ಕಳೆದುಕೊಂಡು ವಿಧವೆಯಾಗಿ ಈ ಸಮುದಾಯದ ಸಂಕಟಗಳನ್ನು ಎದುರಿಸುವಲ್ಲಿ ದಿಟ್ಟ ಹೆಣ್ಣಾಗಿ ಕಾಣುತ್ತಾಳೆ. ಅಲ್ಲಿನ ನಿರ್ವಹಣಾ ತಂತ್ರಕ್ಕೂ ಇಲ್ಲಿನ ನಿರ್ವಹಣಾ ತಂತ್ರಕ್ಕೂ ಸ್ವಲ್ಪವೇ ಅಂತರವಿದ್ದರೂ ಎರಡೂ ಕಾದಂಬರಿಗಳು ಮಲೆನಾಡಿನ ಪ್ರದೇಶದಲ್ಲಿ ನಡೆಯುವ ಕಥನಗಳೇ ಆದುದರಿಂದ ಸಾಮ್ಯಗಳೂ ಇಲ್ಲ ಎನ್ನಲಾಗದು. ಎಂ.ಕೆ.ಇಂದಿರಾ ಅವರಿಗೆ ವೈದಿಕ ಪದ್ಧತಿಯ ಅತಿ ಕ್ರೂರತೆಗಳೇ ಗಮನಾರ್ಹವೆನ್ನಿಸುವ ಕಾರಣ ಹೆಣ್ಣಿನ ಗೋಳಿನ ಕಥನದ ಹಿಂದೆ ಎಷ್ಟೊಂದು ಕ್ರೌರ್ಯಗಳಿರುತ್ತವೆ, ಅವುಗಳನ್ನು ಹೆಣ್ಣಾಗಿ ಆ ಕಾಲಘಟ್ಟದಲ್ಲಿ ಫಣಿಯಮ್ಮ ಎದುರಿಸುವ ಸಂದರ್ಭಗಳು ಯಾರನ್ನೂ ನೋಯಿಸುತ್ತವೆ. ಈ ಕಥನ ಸ್ತ್ರೀವಾದಿ ದೃಷ್ಟಿಕೋನಕ್ಕೆ ಹೆಚ್ಚು ಪುಷ್ಟಿ ನೀಡಬಲ್ಲದು. ಆದರೆ ಇಲ್ಲಿ ಇರುವ ಮೂಕಜ್ಜಿ ಹಾಗೂ ಆಕೆಯ ಪರಿಧಿಯ ಕೇಂದ್ರದ ಸುತ್ತ ನಡೆಯುವ ಕಥನ ಒಂದು ಸ್ತ್ರೀವಾದವನ್ನು ಎತ್ತಿದರೂ ಅಲ್ಲಿ ಒಂದು ಅನೂಹ್ಯವಾದ ವಿಸ್ಮಯವಾದವಿದೆ. ಅರವತ್ತರ ದಶಕದಲ್ಲಿ ಬಹುಶ: ರಾಜಾರಾಂ ಮೋಹನರಾಯ್ ಅವರ ಚಿಂತನ ಕ್ರಮಗಳೇ ಫಣಿಯಮ್ಮನ ಪಾತ್ರದ ಹಿಂದೆ ಕೆಲಸಮಾಡಿವೆಯೋ ಎನ್ನುವುದನ್ನು ಕೂಡ ಯೋಚಿಸಬೇಕಾಗುತ್ತದೆ. ಫಣಿಯಮ್ಮ ಗಟ್ಟಿಗಿತ್ತಿಯಾಗಿ ಕಂಡರೆ ಇಲ್ಲಿನ ಮೂಕಜ್ಜಿ ಮಾಗಿದ ಅನುಭವಲೋಕದ ವಿಸ್ಮಯವಾಗಿದ್ದಾಳೆ. ಆ ಮಾಗಿದ ಫಲ ತಿನ್ನಲೂ ಆಗದೆ, ಬಿಡಲೂ ಆಗದೆ ಒದ್ದಾಡುವ ನಿರೂಪಕ ಹೇಗೆಲ್ಲ ಸ್ವೀಕರಿಸಬೇಕೆಂಬ ಗೊಂದಲಕ್ಕೆ ಬೀಳುವುದನ್ನು ಕಾದಂಬರಿಯಲ್ಲಿ ನೋಡಬಹುದು. ನಿರೂಪಕನ ಮೂಲಕ ಮೂಕಜ್ಜಿಯ ವ್ಯಕ್ತಿತ್ವ ಅನಾವರಣಗೊಳ್ಳುವುದು ಹೀಗಿದೆ. 'ಮನೆಯಲ್ಲಿ ಕುಳಿತಿರುವಾಗ ಇವರು ಸದಾ ಕಣ್ಮುಚ್ಚಿ ಏನನ್ನಾದರೂ ನಡೆಯುತ್ತಿದ್ದರೂ ಅದೇನೆಂದು ನಮ್ಮ ತಾಯಿ ತಿಳಿದುಕೊಳ್ಳುವಷ್ಟು ಶಕ್ತರಾಗಲಿಲ್ಲ. ಅಜ್ಜಿಯ ಕೈಯಲ್ಲಿ ಜಪಸರ ಕಂಡವರಿಲ್ಲ. ಅವರು ತುಟಿ ಅಲುಗಿಸಿ "ಓಂ ನಮ:

ಶಿವಾಯ" ಎಂದವರಲ್ಲ. ಇದರಿಂದಾಗಿ, ನನ್ನ ತಾಯಿಗೆ ಅವರ ವಿಷಯದಲ್ಲಿ ಒಂದು ರೀತಿಯ ಕನಿಕರ ಬಂದು 'ಇವರು ತಮಗಾದ ಅನ್ಯಾಯವನ್ನು ನೆನೆದು, ದೇವರ ಮೇಲಿನ ವಿಶ್ವಾಸವನ್ನೇ ಕಳೆದುಕೊಂಡಿದ್ದಾರೆ' ಎಂದು ಅರ್ಥ ಮಾಡಿಕೊಂಡದ್ದುಂಟು. ಅಂಥ ಸಂಶಯದ ಬಿತ್ತನ್ನು ನನ್ನ ತಾಯಿ ನನ್ನ ತಲೆಯಲ್ಲಿಯೂ ಬಿತ್ತಿ ಹೋಗಿದ್ದಳು-ಎಂದರೆ ತಪ್ಪಾಗದು. ನಾನು ಕಾಲೇಜಿನಲ್ಲಿ ಕಲಿಯುತ್ತಾ ಬುದ್ಧಿವಂತನೆನಿಸಿದ ಕಾಲದಲ್ಲಿ, ಇಂತಹ ಒಂದು ನೆನಪಿನಿಂದ ಅಜ್ಜಿಯನ್ನು ಕೇಳಿಯೇ ಬಿಡುತ್ತೇನೆ ಎಂದು ಹೊರಟದ್ದುಂಟು. ಅವರು ಆಗ ಅಶ್ವತ್ಥಕಟ್ಟೆಗೆ ಸುತ್ತು ಬರುತ್ತಿದ್ದರು. ಹಾಗೆ ಸುತ್ತು ಬರಬೇಕಾದರೆ ದೇವರ ಮೇಲಿನ ನಂಬಿಕೆಯಿಂದಲೇ ಬರುತ್ತಿರಬೇಕು-ಎಂಬ ಭಾವನೆ ನನಗೆ ಬಂದಿತು. ಅವರು ಪ್ರದಕ್ಷಿಣೆ ಮುಗಿಸಿದರು. ಮೈ ಬಗ್ಗಿಸಲಿಲ್ಲ, ಹಣೆ ತಗ್ಗಿಸಲಿಲ್ಲ. ಮೊಣಕಾಲನ್ನು ಊರಲಿಲ್ಲ. ಎರಡೂ ಕೈಗಳನ್ನು ಜೋಡಿಸಲಿಲ್ಲ. ಈಚೆಗೆ ಬಂದು ಕುಳಿತರು. ನಾನು ಹೋಗಿ ಅವರ ಮಗ್ಗುಲಲ್ಲಿ ಕುಳಿತೆ. ಅವರಾಗಿ 'ಏನು ಯೋಚನೆ' ಎಂದು ಕೇಳಿದರು'. (ಮೂಕಜ್ಜಿಯ ಕನಸುಗಳು : ಪುಟ ೨೬ : ಮೂವತ್ತಾರನೆಯ ಮುದ್ರಣ)

ಇದಲ್ಲದೆ ಎರಡನೇ ಅಧ್ಯಾಯ ಕೊನೆಯಲ್ಲಿ ಬರುವ ಈ ಮಾತುಗಳು ಕೂಡ ಮುಖ್ಯ ಎನ್ನಿಸುತ್ತವೆ. 'ನಾನು ಊಟ ಮುಗಿಸಿ ಮಲಗಿಕೊಂಡರೆ, ನನ್ನ ಯೋಚನೆಗಳು ಅಂಕೆ, ಅಂಕುಶಗಳಿಲ್ಲದೆ ಓಡಾಡತೊಡಗಿದವು. ಅಜ್ಜಿ ಸಂಚಿಪೆಟ್ಟಿಗೆಯನ್ನು ಹಿಡಿದು ಅಷ್ಟೆಲ್ಲ ಹೇಗೆ ಕಂಡರು? ರಾಮಣ್ಣ ಹಿತ್ತಿಲಿನ ಬಾಗಿಲಿನಿಂದ ಬಂದದ್ದು ಅವರಿಗೆ ಹೇಗೆ ತಿಳಿಯಿತು? ಅವರ ಮೂಗಿಗೆ ಮನುಷ್ಯರ ವಾಸನೆ ಬಡಿಯುತ್ತದೆಯೋ? ಸಂಚಿಪೆಟ್ಟಿಗೆಯನ್ನು ಮೂಸಿಯೇ ಅದರ ಒಡೆಯನ ಸ್ವಭಾವ ಗುರುತಿಸುವುದು ಸಾಧ್ಯವೇ? ಹೇಗೆ, ಏನು-ಎಂಬ ವಿಚಾರಗಳೇ ನನ್ನಲ್ಲಿ ಸುಳಿದಾಡತೊಡಗಿದವು. ಇನ್ನೊಂದು ದಿವಸ ಅವರು ಪ್ರಸನ್ನರಾಗಿರುವ ಹೊತ್ತನ್ನು ಹುಡುಕಿ, ಅದನ್ನೆಲ್ಲ ಕೇಳಿ ತಿಳಿಯಬೇಕು-ಎಂದು ಅನಿಸಿತು' (ಮೂಕಜ್ಜಿಯ ಕನಸುಗಳು : ಪುಟ.೪೦ : ಮೂವತ್ತಾರನೆಯ ಮುದ್ರಣ)ಎಂದು ಹೇಳುವ ಮಾತುಗಳನ್ನು ನೋಡಿದರೆ ಕಾರಂತರು ಒಂದು ಅತೀಂದ್ರಿಯ ಚೇತನದ ರೀತಿಯಲ್ಲಿ ಚಿತ್ರಿಸಿರುವುದು ಕಂಡುಬರುತ್ತದೆ. ಮೂಕಜ್ಜಿಯ ಎಲ್ಲ ಕನಸುಗಳನ್ನು, ಮುಂಗಾಣ್ಕೆಗಳನ್ನು ಸುಬ್ರಾಯನ ದೃಷ್ಟಿಕೋನದ ಮೂಲಕ ನಿರ್ವಚಿಸುವ ವಿಧಾನ ಕಾದಂಬರಿಯ ತಂತ್ರವೂ ಅಲ್ಲದೆ, ಅದೇ ಕಾದಂಬರಿಯ ಯಶಸ್ಸನ್ನು ನಿರ್ಧರಿಸುವ ಅಂಶವೂ ಆಗಿದೆ. ಕಾರಂತರ ಜೀವನದೃಷ್ಟಿಯ ಆಲೋಚನೆಗಳು ಕೃತಿಯ ಆಂತರಂಗಿಕ ಸ್ವರೂಪದ ವೈಚಾರಿಕತೆಯಾಗಿ ಹೊರಹೊಮ್ಮಿರುವುದನ್ನು ನೋಡಿದರೆ ಕಾದಂಬರಿಗೆ ಒಂದು

ಸ್ಪಷ್ಟ ದೃಷ್ಟಿಕೋನವಿರುವುದೂ ಕಾಣುತ್ತದೆ. ಕಾರಂತರ ಇನ್ನೊಂದು ಕಾದಂಬರಿ 'ಸರಸಮ್ಮನ ಸಮಾಧಿ' ಕಾದಂಬರಿಯಲ್ಲಿ ಅಡಾವುಡಿ ಚಂದ್ರಯ್ಯ ಎಂಬ ಪಾತ್ರವಿರುವುದನ್ನು ನೋಡುತ್ತೇವೆ. ಅಲ್ಲಿ ಅವನು ದೆವ್ವಗಳಿವೆಯೇ? ಯಾರಾದರೂ ನೋಡಿದ್ದೀರಾ? ನನಗೆ ತೋರಿಸಲು ನನ್ನ ಜೊತೆ ಬನ್ನಿ ಎಂದು ಹೇಳುವ ಬಗೆಯನ್ನು ಕಾಣುತ್ತೇವೆ. ದೆವ್ವಗಳು ಇದ್ದಾವೆಯೋ? ಇಲ್ಲವೋ? ಎನ್ನುವ ವೈಜ್ಞಾನಿಕ ತರ್ಕವೊಂದು ಇಲ್ಲಿ ಪ್ರಶ್ನಿಸುವುದನ್ನು ಕಾಣುತ್ತೇವೆ. ಊರಿನ ಜನ ಅವನನ್ನು ಹುಚ್ಚ ಎಂದು ಕರೆದರೆ ಕಾದಂಬರಿಯ ಸಂದರ್ಭದಲ್ಲಿ ವಿಜ್ಞಾನದ ದೃಷ್ಟಿಕೋನದ ಮೂಲಕ ಸತ್ಯವೊಂದರ ಹುಡುಕಾಟವೇ ಇಲ್ಲಿ ಮುಖ್ಯ ಎಂದು ಕಾದಂಬರಿ ಓದಿದ ಯಾರಿಗೂ ತಿಳಿಯುತ್ತದೆ. ಮೂಕಜ್ಜಿಯ ಕನಸುಗಳು ಕಾದಂಬರಿಯಲ್ಲಿ ಜನಾರ್ಧನನನ್ನು ಕರೆದುಕೊಂಡು ಕುಡುಬಿಯರ ಮನೆಗಳ ಕಡೆಗೆ ಹೋಗಿ ಅಣ್ಣುನಾಯ್ಕನನ್ನು ಕರೆದುಕೊಂಡು ಮೂಡೂರಿನ ಸೆರಗಿಗೇ ಅಂಟಿಕೊಂಡಿರುವ 'ನಾಗನಕಾಲು' ಸಮೀಪದ ಕಾಡನ್ನು ಪ್ರವೇಶಿಸುತ್ತಾರೆ. ಅಲ್ಲಿನ ದೊಡ್ಡ ಗುಹೆಯೊಂದನ್ನು ಪ್ರವೇಶಿಸುತ್ತಾರೆ. ಕಾರಂತರು ನಿರೂಪಕನು ಅಲ್ಲೊಂದು ನಾಗರಿಕತೆ ಇದ್ದಿತ್ತೇ? ಕಾಡು ಜನರ ಜೀವನ ವಿಧಾನಗಳೇನು? ಎಂಬೆಲ್ಲ ಪ್ರಶ್ನೆಗಳನ್ನಿರಿಸಿಕೊಂಡು ಅಲ್ಲಿ ಸಂಶೋಧನೆಗಾಗಿಯೇ ಬಂದಂತೆ ಹುಡುಕಾಟ ನಡೆಸುತ್ತಾನೆ. 'ಏನೆಲ್ಲ ಸುಟ್ಟು ತಿಂದಿದ್ದರೋ ಇಲ್ಲಿ' ಎಂದು ನನ್ನ ಕೈಯಿಂದ ಕತ್ತಿ ತೆಗೆದುಕೊಂಡು ಆತ ಪಟಪಟನೆ ನೆಲವನ್ನಗೆದು ಅದರ ಹೆಂಟೆಗಳನ್ನು ಹರವಿದ. ಆಗ ದೊಡ್ಡ ಎಲುಬಿನ ತುಂಡೊಂದು ಕಾಣಿಸಿತು. 'ಇದಾದರೆ ಅಯ್ಯ, ಕೆಮ್ಮದ ತೊಡೆಯ ಎಲುಬು'ಎಂದ. ಅವನಿಗಿಂತ ನಾನು ದೊಡ್ಡ ಪಂಡಿತನೇ? ಅವನನ್ನು ನಂಬಿದೆ. 'ಕೊಡು, ನನಗೆ ಅದನ್ನು' ಎಂದೆ ಕೊಟ್ಟ."(ಪುಟ.೫೧) ಈ ಮಾತುಗಳನ್ನು ಗಮನಿಸಿ ಇಡೀ ಕಾದಂಬರಿಯ ಕತೆಗೆ ಹೋದರೆ ಅಜ್ಜಿಯ ಜೊತೆ ಮತ್ತೆ ಮತ್ತೆ ಸಂಶೋಧಕನಂತೆ ವಿಚಾರಗಳನ್ನು ಕೆಣಕುತ್ತ, ಅದಕ್ಕೆ ಹೊಸ ಹೊಸ ಹೊಳಹುಗಳನ್ನು ಕೊಡುತ್ತ ಒಂದು ವೈಜ್ಞಾನಿಕ ತರ್ಕಕ್ಕೆ ಒಳಪಡಿಸುವುದನ್ನು ನೋಡಿದರೆ ಎರಡೂ ಕಾದಂಬರಿಗಳು ವಿಜ್ಞಾನದ ಹಿನ್ನೆಲೆಯಲ್ಲಿ ಒಂದು ಸನ್ನಿವೇಶವನ್ನು ತರ್ಕಕ್ಕೆ ಒಳಪಡಿಸುವುದು ಕುತೂಹಲವನ್ನಷ್ಟೇ ಹೇಳದೆ ಕಾರಂತರ ವೈಜ್ಞಾನಿಕ ದೃಷ್ಟಿಕೋನದ ಆಲೋಚನಾ ಕ್ರಮಗಳನ್ನು ಈ ಕಾದಂಬರಿಗಳು ಮಂಡಿಸುತ್ತಿವೆ. ನಿರೂಪಕನು ತಾನು ಸಂಗ್ರಹಿಸಿ ತಂದ ವಸ್ತುಗಳನ್ನು ಅಜ್ಜಿಗೆ ತೋರಿಸಿ ಮತ್ತೆ ಮತ್ತೆ ಅದಕ್ಕಿರುವ ಹೊಸ ಹೊಸ ಸಾಧ್ಯತೆಗಳನ್ನು ಜೋಡಿಸುತ್ತಾನೆ. ಅವನ ತರ್ಕಕ್ಕೂ ಮಿಗಿಲಾಗಿ ಅಜ್ಜಿ ಉತ್ತರಿಸುವುದನ್ನು ನೋಡಿ ನಿರೂಪಕ ಗಾಬರಿಗೊಳ್ಳುತ್ತಾನೆ. ಇದಕ್ಕೆ ಕಾದಂಬರಿಯ ಈ ಮಾತುಗಳು ಪೂರಕವೆನಿಸುತ್ತವೆ. 'ಇದರಿಂದ ನನ್ನಲ್ಲಿ

ಹುಟ್ಟಿಕೊಂಡ ಒಂದು ಹೊಸ ಅನುಮಾನವೆಂದರೆ ನಮ್ಮ ಅಜ್ಜಿಯಲ್ಲಿ ಏನೋ ಒಂದು ಹೆಚ್ಚಿನ ಶಕ್ತಿಯಿದೆ. ಯಾವುದೋ ಒಂದು ಬಗೆಯ ಒಳ ತಿಳಿವಿದೆ. ಅದನ್ನು ಅಂತರ್ ದೃಷ್ಟಿಯೋ, ದೂರ ದೃಷ್ಟಿಯೋ ಏನೆಂದು ಹೇಳಲಾರೆ. ಅದರಿಂದಾಗಿಯೇ ಹೊರಗಣ ವಸ್ತುಗಳನ್ನು ಮುಟ್ಟಿದಾಗ ಮಾತ್ರವಲ್ಲ ಅವು ಸಮೀಪ ಬಂದರೂ ಅವರ ಮೈ ಜುಮ್ಮಾಗುತ್ತವೆ. ಅವರಿಗೆ ಏನೇನು ಕಾಣಿಸತೊಡಗುತ್ತದೆ ಎನಿಸಿತು. ಹಾಗಿದ್ದರೆ, ಅವರಿಗೆ ಕಾಣಿಸುವ ಕನಸುಗಳಿಗೂ ಆ ವಸ್ತುಗಳಿಗೂ ಸ್ವಲ್ಪವಲ್ಲ ಸ್ವಲ್ಪ ಸಂಬಂಧ ಇದ್ದೇ ಇರಬೇಕು' (ಪುಟ.೭೧) ಎನ್ನುವ ಮಾತುಗಳನ್ನು ಗಮನಿಸಿದರೆ ಇಲ್ಲಿರುವ ಅಜ್ಜಿಯ ಪಾತ್ರ ನಮ್ಮ ಸಮಾಜದೊಳಗಿನ ಸಾಮಾನ್ಯ ಅಜ್ಜಿಯ ಪಾತ್ರಕ್ಕಿಂತ ವಿಶಿಷ್ಟ ಅನುಭೂತಿಯ, ಅರಿವಿನ ವಿಸ್ತರಣೆಯಮಾರ್ಗದಂತೆ ಒಪ್ಪಲು ವಿಶೇಷ ಕಾರಣಗಳಿವೆ. ಕಾರಂತರ ಈ ದೃಷ್ಟಿಕೋನವೇ ಕಾದಂಬರಿಯ ಔನ್ನತ್ಯಕ್ಕೆ ಕಾರಣವೂ ಆಗಿದೆಯೆಂದು ಈಗಾಗಲೇ ಹೇಳಿದ್ದೇನೆ. ಒಂದು ಜೀವನ ವಿಧಾನ ಅಥವಾ ಒಂದು ಅನುಭವದ ಕಥನವನ್ನೇ ಕಾದಂಬರಿಯ ರೂಪದಲ್ಲಿ ಅದೂ ಒಂದು ಅಜ್ಜಿಯನ್ನು ರೂಪಕವನ್ನಾಗಿ ಹೇಳುವ ವಿಧಾನ ಗಮನಾರ್ಹವಾದುದು. ಇಲ್ಲಿನ 'ಅಜ್ಜಿ'ಯು ಮಾಗಿದ ಅನುಭವದ ರೂಪಕವಲ್ಲದೆ ಮತ್ತೇನೂ ಅಲ್ಲ. ಭೌತಿಕ ಪರಿಸರದ ಅನೇಕ ಸಂಗತಿಗಳನ್ನು ಅರಿಯಲು ಅಜ್ಜಿಯ ಬೌದ್ಧಿಕತೆಯ ಸಹಾಯ ಸುಬ್ರಾಯನಿಗೆ ಅಗತ್ಯ. ಸುಬ್ರಾಯನಿಗೆ ಅಜ್ಜಿ ಹೀಗೆಲ್ಲ ಹೇಗೆ ಅರ್ಥೈಸುತ್ತಾರೆ ಎನ್ನುವುದು ತೀವ್ರ ಕುತೂಹಲಕ್ಕೆ ಕಾರಣವಾಗುತ್ತದೆ. ಕಾದಂಬರಿಯ ಓದುಗರಿಗೂ ಇದೇ ಪ್ರಶ್ನೆ ಎದುರಾಗುತ್ತದೆ. ಅಜ್ಜಿಯ ಮಾತುಗಳು ಎರಡಲಗಿನ ಕತ್ತಿಯೂ ಆಗಿ ಕೆಲವೊಮ್ಮೆ ಅರ್ಥವಾಗದಿದ್ದರೆ ಅದಕ್ಕೆ ನಾವು ವ್ಯಥೆಪಡಬೇಕಿಲ್ಲ. ಏಕೆಂದರೆ ಅದಕ್ಕೆ ನಮ್ಮಲ್ಲಿ ಸರಳ ಉತ್ತರ ಸಿದ್ಧವಿದೆ. ಅದೆಂದರೆ ಅನುಭಾವ. ಹೀಗೆ ಸಂತಳನ್ನಾಗಿ ಮಾಡಿಬಿಡುವ ಅಪಾಯವೂ ಇದೆ. ಇಂತಹ ಅಪಾಯಗಳನ್ನು ಮೀರಿದಾಗ ಮಾತ್ರವೇ ಕೃತಿ ಹಾಗೂ ಅಲ್ಲಿನ ಪಾತ್ರಗಳು ಅರ್ಥವಾಗಲು ಸಾಧ್ಯ.

ಮಲಿನಗೊಂಡ ಮನಸ್ಸುಗಳು ಮಡಿಯಾಗಲು ನೆರವಾಗುವ ಕೃತಿ 'ಮೈಲಾರ ಮಹಾದೇವ'

ಡಾ.ನೆಲ್ಲಿಕಟ್ಟೆ ಎಸ್.ಸಿದ್ದೇಶ್

ನಮ್ಮ ದೇಶದ ಚರಿತ್ರೆಯು ಹೋರಾಟದ ಚರಿತ್ರೆಯಾಗಿದೆ. ಕ್ರಿ.ಪೂ.ದಿಂದ ಇಂದಿನ ತನಕ ಭಾರತ ದೇಶಕ್ಕೆ ಹೋರಾಟವೆಂಬುದು ಅವಿಭಾಜ್ಯವಾಗಿದೆ. ವಿದೇಶಿಗರ ಆಗಮನದಿಂದಾದ ಏರುಪೇರುಗಳು, ಅದಕ್ಕಾಗಿ ಹೋರಾಟಗಳು ನಿರಂತವಾಗಿ ನಡೆಯುತ್ತಲೇ ಬಂದಿವೆ. ಈ ದೇಶದ ಸ್ವಾತಂತ್ರ್ಯಕ್ಕಾಗಿ ಹಲವಾರು ಮಹನೀಯರು ಹೋರಾಟ ಮಾಡಿದ್ದಾರೆ. ಅಲ್ಲದೆ ತಮ್ಮ ಬದುಕನ್ನೇ ಮುಡುಪಾಗಿಟ್ಟಿದ್ದಾರೆ. ಈ ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವನವನ್ನೇ ಪಣವಾಗಿಟ್ಟು ಹೋರಾಡಿದ ಹುತ್ಮಾತ್ಮರಲ್ಲಿ ಮೈಲಾರ ಮಹದೇವರು ಒಬ್ಬರು. ಇಂದು ಸ್ವಾರ್ಥವೇ ತುಂಬಿ ತುಳುಕುತ್ತಿದೆ. ಪುಗಸಟ್ಟೆದು ನನಗಿರಲಿ, ನನ್ನ ಮಕ್ಕಳಿಗಿರಲಿ, ನನ್ನ ಮೊಮ್ಮಕ್ಕಳಿಗಿರಲಿ ಎಂಬೆಲ್ಲ ದುರಾಸೆಗಳಿಂದ ಬದುಕುತ್ತಿರುವ ಕಾಲ ಇದಾಗಿದೆ. ಇಂಥ ಸಂಕೀರ್ಣ ಕಾಲದಲ್ಲಿ ಮೈಲಾರ ಮಹದೇವರಂಥವರ ಸಾಮಾಜಿಕ ಕಾಳಜಿಯನ್ನು ಅರಿಯುವ ಮೂಲಕ, ಅವರ ಹೋರಾಟದ ಸ್ವರೂಪವನ್ನು ತಿಳಿಯುವ ಮೂಲಕ ಮಾಲಿನ್ಯಗೊಂಡ ಮನಸ್ಸುಗಳು ತಿಳಿಯಾಗುತ್ತವೆ. ಸಾಮಾಜಿಕ ಸೇವೆಯ ಮನೋಧರ್ಮ, ದೇಶ ಸೇವೆಯ ಮನೋಧರ್ಮಗಳು ಹೃದಯಸ್ಥವಾಗಿಸಿಕೊಳ್ಳಲು ಸಾಧ್ಯವಾಗುತ್ತದೆಂಬುದಕ್ಕೆ ಕೈದೀವಿಗೆಯಾಗುವ ಕೃತಿ ಮನು ಬಳಿಗಾರ್ ಅವರು ರಚಿಸಿರುವ "ಮೈಲಾರ ಮಹಾದೇವ" ನಾಟಕ. ಹತ್ತು ದೃಶ್ಯಗಳಲ್ಲಿ ಮೈಲಾರ ಮಹಾದೇವರ ಜೀವನ ಮತ್ತು ಸಾಧನೆಗಳನ್ನು ರಸವತ್ತಾಗಿ ವಿವರಿಸಲಾಗಿದೆ.

ಹಿಮ್ಮೇಳನ ಮೂಲಕ "ಕಾಂತನ ಕಳಕೊಂಡ ಕಾಮಿನಿಯಂತೆ ಭಾರತ ಹಾಕ್ವದು ಕಣ್ಣೀರು ಶಾಂತಿ ಸಮರದೊಳು ಗುಂಡೇಟಿನೊಳು ಮಡಿದ ಮಹಾದೇವಪ್ಪ ಮೈಲಾರ॥" ಎಂಬ ಲಾವಣಿಯಿಂದ ಮೈಲಾರ ಮಹದೇವರನ್ನು ಪರಿಚಯಿಸುವುದರಿಂದ ಆರಂಭವಾಗುವ ನಾಟಕವು "ಮಹಾದೇವ ನನ್ನ ಅಂತರಂಗದ ಶಿಷ್ಯ. ಮಾಡಿ ಮಡಿದ ಮಹಾ ಸತ್ಯಾಗ್ರಹಿ" ಎಂಬ ಗಾಂಧೀಜಿಯವರ ಧ್ವನಿಯ ನುಡಿಯಗಳಿಂದ ಮುಕ್ತಾಯವಾಗುವುದು. ಗಾಂಧೀಜಿಯವರ ಪ್ರಭಾವಕ್ಕೊಳಗಾಗಿ ಸ್ವಾತಂತ್ರ್ಯ

ಹೋರಾಟದ ಮಹಾ ಸಾಗರದೊಳಗೆ ದುಮುಕ್ಕಿದ ಮೈಲಾರ ಮಹದೇವಪ್ಪನವರು ಉಪ್ಪಿನ ಸತ್ಯಾಗ್ರಹದ ಹೋರಾಟದಲ್ಲಿ ಹೋರಾಡಿದ ಧೀರ. ಮಹಾತ್ಮ ಗಾಂಧೀಜಿಯವರಿಗೆ ತುಂಬಾ ಆಪ್ತವಾಗಿದ್ದವರು. ದೇಶವನ್ನು ವಿದೇಶಿಯವರ ಆಳ್ವಿಕೆಯಿಂದ ಬಿಡುಗಡೆಗೊಳಿಸಬೇಕೆಂಬ ಅಪಾರ ಹಂಬಲದಿಂದ ಹಾವೇರಿ, ಶಿರಹಟ್ಟಿ, ಹುಬ್ಬಳಿ, ಧಾರವಾಡ ಮೊದಲಾದ ಪ್ರದೇಶಗಳ ಸುತ್ತಮುತ್ತ ಭೂಗತ ಚಳುವಳಿ ಮಾಡಿದವರು. ಬ್ರಿಟಿಶರ ವಿರುದ್ಧ ಹೋರಾಡುತ್ತಾ, ಬ್ರಿಟಿಶ್ ಪೋಲೀಸರು ಹಾರಿಸಿದ ಗುಂಡಿಗೆ ಬಲಿಯಾದ ಮಹದೇವಪ್ಪನವರು 'ಅಹಿಂಸೆ ನಮ್ಮ ಧರ್ಮ'ವೆಂದು ತಮ್ಮ ಸಂಗಾತಿಗಳಿಗೆ ಹೇಳುತ್ತಾ ಪ್ರಾಣವನ್ನು ಬಿಟ್ಟವರು. ಇಂಥ ರಾಷ್ಟ್ರಪ್ರೇಮಿಯನ್ನು ಇತಿಹಾಸದಲ್ಲಿ ಸರಿಯಾಗಿ ದಾಖಲಿಸಿರಾದ ಸಂಗತಿಯನ್ನು ನಾಟಕಕರಾರು ದೃಶ್ಯ ಎರಡರಲ್ಲಿ ಮೂರು ಮಂದಿ ಇತಿಹಾಸ ವಿದ್ಯಾರ್ಥಿಗಳ ಸಂವಾದ ಮೂಲಕ ಇತಿಹಾಸಕಾರರಿಗೆ ವಾಸ್ತವ ಚರಿತ್ರೆಯ ಅರಿವನ್ನು ಮೂಡಿಸಿದ್ದಾರೆ. "ಅಕ್ಷರವಿಲ್ಲದವರ ಚರಿತ್ರೆ, ಅದೇ ನಡೆ. ಕುಂಟತ್ತಲೇ ಚಲಿಸಬೇಕಗುತ್ತದೆ. ತನ್ನ ಸುದೀರ್ಘ ಪಯಾಣದಲ್ಲಿ ಭಾರತದ ಇತಿಹಾಸಕ್ಕೆ ಆಗಿರುವುದೂ ಇದೇ ಗತಿ. ಅಕ್ಷರ ಜ್ಞಾನವಿಲ್ಲದವರ ಚರಿತ್ರೆಯೆಂದರೆ ಒಚಿಟ ಕಾಲಿನವರ ಓಟವಿದ್ದಂತೆ. ಸಾವಿರ ಸಾವಿರ ವರ್ಷಗಳ ಇತಿಹಾಸದಲ್ಲಿನ ಓಟದ ಸ್ಪರ್ಧೆಯಲ್ಲಿ ಅವರು ಹಿಂದುಳಿಯುತ್ತ ಎಲ್ಲೋ ಅಗೋಚರರಾಗಿದ್ದಾರೆ ಅಷ್ಟೆ" ಎಂಬ ಮಾತುಗಳ ಮೂಲಕ ಮೌಖಿಕ ಪರಂಪರೆಯ ಮಹತ್ತನ್ನು ಎತ್ತಿ ಹಿಡಿದಿದ್ದಾರೆ. ಈ ದೇಶ, ಈ ನಾಡು, ಈ ಭೂಮಿಗಾಗಿ ತಮ್ಮ ಜೀವನದ ಹಂಗನ್ನೇ ತೊರೆದು ಹೋರಾಡಿದವರ ಕಳೆದುಹೋಗಿದ್ದಾರೆ. ಅವರ ಸ್ಮರಣೆಗೆ ಅವಕಾಶವಿಲ್ಲದಂತೆ ಇತಿಹಾಸವನ್ನು ತಿರುಚಿರುವ ಇತಿಹಾಸ ದ್ರೋಹಿಗಳಿಗೆ ಸರಿಯಾದ ತಿಳುವಳಿಕೆ ನೀಡುವುದರೊಂದಿಗೆ, ಇತಿಹಾಸವನ್ನು ಪುನರ್ ರಚಿಸಬೇಕೆಂಬ ಸೂಚನೆಯನ್ನು ನೀಡಿದ್ದಾರೆ. ಅನೇಕ ಮಹನೀಯರು ಅನ್ನ ನೀರು ಇಲ್ಲದೆ ನಾಡು-ನುಡಿಗಾಗಿ ಹೋರಾಡಿದ್ದಾರೆ. ಅವರುಗಳನ್ನು ನಾಶವಿಲ್ಲದ ಅಕ್ಷರದ ಅಕ್ಕರೆಯೊಳಗೆ ದಾಖಲಿಸುವ ಮೂಲಕ ಮುಂದಿನ ತಲೆಮಾರಿಗೆ ತಲುಪಿಸಬೇಕೆಂಬ ಅರಿವನ್ನು ಬಿತ್ತಿರುವರು. ನಿಜ ಇತಿಹಾಸ ನಿರ್ಮಿಸಬೇಕೆಂಬ ಕಳಕಳಿಯು ಇಲ್ಲಿ ವ್ಯಕ್ತವಾಗಿದೆ. ಅಷ್ಟೆ ಅಲ್ಲದೆ ನಿಮ್ಮ ವಾಸದ ಸುತ್ತಮುತ್ತಲಿನ ಇತಿಹಾಸವನ್ನು ಅರಿಯುವಂತಾಗಬೇಕು. ಅದನ್ನು ಅಕ್ಷರ ಸಂಸ್ಕೃತಿಯೊಳಗೆ ದಾಖಲಿಸಬೇಕೆಂಬ ಮಾರ್ಗದರ್ಶನ ಇಲ್ಲಿದೆ.

ದೃಶ್ಯ ಮೂರರಲ್ಲಿ ಮೈಲಾರ ಮಹದೇವ, ಹಳ್ಳಿಕೇರಿ ಗುದ್ಲೆಪ್ಪ, ವೆಂಕಟೇಶ್ ಮಾಗಡಿ ಮತ್ತು ಪರಮಣ್ಣ ಹೊಸಮನಿ ಅವರುಗಳು ಸ್ವಾತಂತ್ರ್ಯ ಸಂಗ್ರಾಮಕ್ಕೆ

ಯುವಕರನ್ನು ಸಜ್ಜುಗೊಳಿಸುವ ಬಗ್ಗೆ, ಅಹಿಂಸೆಯ ಹಿರಿಮೆಯ ಬಗ್ಗೆ, ಉಪ್ಪಿನ ಸತ್ಯಾಗ್ರಹದಲ್ಲಿ ಸಕ್ರಿಯವಾಗಿ ಮಹದೇವ ಅವರು ಪಾಲ್ಗೊಳ್ಳುವ ಸಿದ್ಧತೆಯನ್ನು ಇಲ್ಲಿ ಅನಾವರಣಗೊಂಡಿದೆ. ದೃಶ್ಯ ನಾಲ್ಕರಲ್ಲಿ ಮಹದೇವ ಮತ್ತು ಗಾಂಧೀಜಿಯ ಸಂವಾದವನ್ನು ದಾಖಲಿಸಿದೆ. "ಮೈಯೊಳಗಿನ ನರನಾಡಿಗಳು ಹುರಿಗೊಂಡು ಮನಸ್ಸು ತವಕದ ಬೆನ್ನೇರಿ, ರಕ್ತ ದಮನಿಗಳಲ್ಲಿ ವೇಗ ಹೆಚ್ಚಿಸಿಕೊಂಡು ಹರಿದು ಹೊರ ಧುಮ್ಮಿಕ್ಕಿದಂತಾಗುತ್ತಿದೆ. ಕನಸಿನಲ್ಲಿ ದೇವರು ಅರೆಬಟ್ಟೆ ತೊಟ್ಟುಕೊಂಡು ಕೈಲೊಂದು ಕೋಲು ಹಿಡಿದುಕೊಂಡು ಬಾ ಮಗು, ಬಾ ಮಗು ಎಂದು ಕರೆದಂತಾಗುತ್ತಿದೆ. ... ಬ್ರಿಟಿಶರ ದಬ್ಬಾಳಿಕೆ ಸದೆಬಡೆಯು ನನ್ನ ಪ್ರತಿಜ್ಞೆ ಇಂದು ಹೊಸ ಹುಟ್ಟನ್ನರಸಿ ಸಾಬರಮತಿಯತ್ತ ಸಾಗಿದೆ ಯಾವ ಸದ್ದುಗದ್ದಲವಿಲ್ಲದೆ" ಎಂಬ ಮಹದೇವರ ಮಾತುಗಳು ಅವರ ರಾಷ್ಟ್ರಭಕ್ತಿಗೆ ಹಿಡಿದ ರನ್ನಗನ್ನಡಿಯಾಗಿವೆ. ದೃಶ್ಯ ಐದರಲ್ಲಿ ಮಹದೇವರ ಪತ್ರದ ಮೂಲಕ ತಂದೆ ತಾಯಿ ಆತನ ಸ್ಥಿತಿಯನ್ನು ತಿಳಿಯುವುದು. ಆ ಮೂಲಕವೇ ಗಾಂಧೀಜಿಯೊಡನೆ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿರುವುದನ್ನು ಪತ್ರಧ್ವನಿಯ ಮೂಲಕ ಅನಾವರಣಗೊಳಿಸಿರುವ ನಾಟಕ ವಿನ್ಯಾಸಕ್ಕೆ ಹೊಸತನವನ್ನು ತಂದಂತೆಯಿದೆ. ದೃಶ್ಯ ಆರರಲ್ಲಿ ಜೈಲಿನಿಂದ ಬಿಡುಗಡೆಯಾದ ಮಹದೇವರು ಧಾರವಾಡಕ್ಕೆ ಬಂದುದು, ಅಲ್ಲಿನ ಜನ ಸ್ವಾಗತಿಸಿದ್ದು, ತನ್ನೂರು ಮೋಟೆಬೆನ್ನೂರು ತಲುಪಿದ್ದು, ಅಲ್ಲಿ ತನ್ನವರನ್ನೆಲ್ಲ ಉದ್ದೇಶಿಸಿ ಮಾತನಾಡಿದ ಮಹದೇವರ ದೇಶಾಭಿಮಾನದ ಮಾತುಗಳು ರಾಷ್ಟ್ರಭಕ್ತಿಗೆ ದ್ಯೋತಕವಾಗಿವೆ. ಲಾವಣಿಕಾರರ ಮೂಲಕ ದೇಶದ ವಾಸ್ತವಚಿತ್ರಣವನ್ನು ಕಟ್ಟಿಕೊಡುವ ನಾಟಕಕರಾರು" ಅಸ್ಪೃಶ್ಯತೆಯು ಹಿಂದೂಧರ್ಮಕ್ಕೆ ಅಂಟಿದ ಹೀನ ಕಳಂಕ,ಅಂತೆಯೇ ಇದರ ಆಚರಣೆಯು ಮಹಾಪಾಪ. ನಾವು ಇದರ ಮೂಲವನ್ನು ಹುಡುಕಿದರೆ ಅಲ್ಲಿ ಸಿಗುವುದು ಆರ್ಥಿಕ ದುರ್ಬಲತೆ, ಶಿಕ್ಷಣದ ಕೊರತೆ, ಸಾಮಾಜಿ ಜಡತ್ವ... ಎಲ್ಲಿ ನಾವೆಲ್ಲ ಒಂದು ಎಂಬ ಭಾವನೆ ನಮ್ಮನ್ನು ಬೆಸೆಯುವುದಿಲ್ಲವೋ, ಇಡೀ ದೇಶದ ಎಲ್ಲ ಹಿಂದೂಗಳು ತಮ್ಮ ತಮ್ಮಲ್ಲಿ ತಡೆಗೋಡೆಯಾಗಿರುವ ಜಾತಿಗಳನ್ನು ನಿರ್ಮೂಲನೆ ಮಾಡುವುದಿಲ್ಲವೋ, ಅದರಂತೆಯೇ ಇತರ ಕೋಮಿನವರಾದ ಮುಸ್ಲಿಂ, ಸಿಖ್ ಕ್ರೈಸ್ತರೊಡನೆ ನಮ್ಮ ಸಂಬಂಧ ಕರುಳ ಸಂಬಂಧವಾಗಿರುವುದಿಲ್ಲವೋ ಅಲ್ಲಿಯವರೆಗೆ ಭಾರತಕ್ಕೆ ಉಜ್ವಲ ಭವಿಷ್ಯವೇ ಇಲ್ಲ" ಎಂದು ಗಾಂಧೀಜಿಯ ಮೂಲಕ ಹೇಳಿಸುವ ಮಾತುಗಳು ಭದ್ರಭಾರತದ ನಿರ್ಮಾಣಕ್ಕೆ ನಿಜದಾರಿಯನ್ನು ತೋರಿಸುತ್ತಿವೆ. ಈವೊತ್ತಿನ ತನಕ ಜಾತಿ ಎಂಬ ರಕ್ಕಸ ಈ ದೇಶ, ಈ ಸಮಾಜವನ್ನು ಮುಕ್ಕುತ್ತಿದೆ. ಇದರಿಂದ ಮುಕ್ತರಾಗುವ ಮನೋಧರ್ಮ ಸರ್ವರೂ ಬೆಳೆಸಿಕೊಳ್ಳುವ ಅಗತ್ಯವನ್ನು ಬಿತ್ತುವಲ್ಲಿ ನಾಟಕ ಯಶಸ್ವಿಯಾಗಿದೆ. ಜಾತಿ-ಧರ್ಮಗಳ ಹೆಸರಿನಲ್ಲಿ ಒಗ್ಗಟ್ಟು

ನುಚ್ಚುನೂರಾಗುತ್ತಿರುವುದನ್ನು, ಸಾಮಾಜಿಕ ಅಶಾಂತಿಯಿಂದ ಸಂವರ್ಧನೆಯು ಬಹು ದೂರ ಉಳಿಯುತ್ತಿರುವುದನ್ನು ತಿಳಿಸುವ ಈ ನಾಟಕವು ಸಮಸಮಾಜದ ಕನಸನ್ನು ನನಸ್ಸಾಗಿಸು ಜಾಗೃತಿಯನ್ನು ಮೂಡಿಸುವುದು. ಬಿದಿರು ಬೊಂಬನ್ನು ಕುಟ್ಟೆ ಹುಳುವು ಕೊರೆದು, ಅದರ ಗಟ್ಟಿಯನ್ನು ಪೊಳ್ಳಾಗಿಸುವಂತೆ ಭಾರತೀಯ ಸಾಮಾಜಿಕ ವ್ಯವಸ್ಥೆಯನ್ನು ಜಾತಿ ಎಂಬ ಕುಟ್ಟೆಹುಳು ಕೊರೆ ಕೊರೆದು ಸಮಾಜದ ಭದ್ರತೆಗೆ ದಕ್ಕೆಯನ್ನುಂಟು ಮಾಡುತ್ತಿರುವುದು. ಮಾನವ ಬದುಕಿನ ಮಹತ್ತನ್ನು ತಿಳಿಸುವ ಮೂಲಕ ಜಾತಿ–ಧರ್ಮ ಬೇಧಗಳನ್ನು ದೂರ ಮಾಡಿ, ನಮ್ಮೊಳಗೆ ಉನ್ನತ, ಉದಾತ್ತಾ ಗುಣಗಳನ್ನು ಹೃದಯಸ್ಥವಾಗಿಸಿಕೊಳ್ಳಲು ಉತ್ತೇಜಿಸುವುದು. ಸ್ವಾತಂತ್ರ್ಯ ಹೋರಾಟಗಾರ ಮೈಲಾರ ಮಹದೇವಪ್ಪನವರ ರಾಷ್ಟ್ರಭಕ್ತಿ, ವೀರತ್ವ, ಅಹಿಂಸಾ ಮನೋಧರ್ಮ, ಗಾಂಧೀಜಿಯವರನ್ನೇ ದೇವರಂತೆ ಕಾಣುವಂತಹದ್ದು, ಅವರು ತೋರಿದ ದಾರಿಯಲ್ಲಿ ಸಾಗಿ ಸ್ವಾತಂತ್ರ್ಯ ಪಡೆಯಬೇಕೆಂಬ ಹಂಬಲವನ್ನು ಸಾಕಾರಗೊಳಿಸಿಕೊಳ್ಳುವ ಪ್ರಯತ್ನದಲ್ಲಿರುವಾಗಲೇ ಬ್ರಿಟಿಶ್ ಪೋಲೀಸರ ಗುಂಡಿಗೆ ಬಲಿಯಾಗಿ ಹುತ್ತಾತ್ಮರಾದ ಬಗೆಯನ್ನು ಕಣ್ಣಿಗೆ ಕಟ್ಟುವಂತೆ ನಾಟಕವನ್ನು ರಚಿಸುವಲ್ಲಿ ನಾಟಕಕಾರರು ಯಶಸ್ವಿಯಾಗಿರುವರು. ವಸ್ತು ವಿನ್ಯಾಸ, ಭಾಷೆಯು ಯುಕ್ತವೂ ಸೂಕ್ತವು ಆಗಿದೆ. ಈ ನಾಟಕವು ರಂಗಪ್ರಯೋಗವಾಗುವ ಅಗತ್ಯವಿದೆ. ಈವೊತ್ತಿನ ಮಲಿನಗೊಂಡ ಮನಸ್ಸುಗಳು ಮಡಿಯಾಗಲು ನೆರವಾಗುವ ಕೃತಿಯಿದು. ಸಾಮಾಜಿಕ ಸಮಸ್ಯೆಗಳ ಮುಕ್ತಿಗೆ ಪ್ರೇರಕವಾಗುವಂತಹ ವಿಚಾರಗಳು ಸರಳವಾಗಿ ಸಹೃದಯರಲ್ಲಿ ನೆಲೆಯಾಗಲು ಈ ಕೃತಿಯು ಪ್ರೇರಕವಾಗಿದೆ.

ಕುವೆಂಪು ಕವಿತೆಗಳಲ್ಲಿ ‘ವ್ಯಕ್ತಿ ಚಿತ್ರಣ’

ಡಾ. ಗಿರೀಶ್ ಮೂಗ್ತಿಹಳ್ಳಿ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ‘ವ್ಯಕ್ತಿ ಚಿತ್ರಗಳು’ ಒಂದು ಭಾಗವಾಗಿ ಮಿಳಿತಗೊಂಡಿವೆ. ಶಾಸನ ಸಾಹಿತ್ಯದಿಂದ ಇಪ್ಪತ್ತೊಂದನೇ ಶತಮಾನದ ಸಾಹಿತ್ಯದವರೆಗೂ ಇದರ ಹರವು ಇದೆ. ಕನ್ನಡ ಶಾಸನ ಸಾಹಿತ್ಯ ಮತ್ತು ಪ್ರಾಚೀನ ಸಾಹಿತ್ಯ ಸಂದರ್ಭದಲ್ಲಿ ಕವಿಯೊಬ್ಬನು ರಾಜನನ್ನೋ,[೧] ಆಶ್ರಯದಾತನನ್ನೋ,[೨] ಪುರಾಣ ಪಾತ್ರಗಳನ್ನೋ,[೩] ತನ್ನನ್ನೋ ಅಥವಾ ತನ್ನ ಕುಟುಂಬವನ್ನು ಪರಿಚಯಿಸುವಾಗ ಕಾವ್ಯಾತ್ಮಕವಾಗಿ ಪರಿಚಯಿಸಿದ ಬಗೆ ತುಂಬ ವಿಶಿಷ್ಟವೂ ಆಗಿದೆ. ಆದರೆ ಹೊಸಗನ್ನಡ ಸಾಹಿತ್ಯ ಸಂದರ್ಭದಲ್ಲಿ ‘ವ್ಯಕ್ತಿ ಚಿತ್ರಗಳು’ ಒಂದು ಪ್ರಕಾರವಾಗಿ ಕಂಡುಬಂದಿದೆ. ಇದು ಗದ್ಯರೂಪ ಮತ್ತು ಪದ್ಯರೂಪ ಎರಡರಲ್ಲೂ ತನ್ನ ಸ್ಥಾನವನ್ನು ಖಚಿತಪಡಿಸಿಕೊಂಡಿದೆ.[೪] ಆದರೆ ಇದಕ್ಕೆ ಗದ್ಯರೂಪದಲ್ಲಿ ಹೆಚ್ಚು ಸ್ಥಾನವಿದೆ. ಒಂದು ರೀತಿಯಲ್ಲಿ ಈ ಪ್ರಕಾರ ಸ್ಮರಣೀಯಾರ್ಥವಾಗಿ ಬಂದಿರುವಂತಹುದು. ಅಂದರೆ ಸಾಹಿತ್ಯ ಸೇರಿದಂತೆ ವಿವಿಧ ಕ್ಷೇತ್ರದಲ್ಲಿ ಗುರುತಿಸಿಕೊಂಡ ಮಹನೀಯರು ಮರಣ ಹೊಂದಿದರೆ, ಅವರನ್ನು ನೆನೆಯುವ ಸಂದರ್ಭ, ಸಾಧಕರನ್ನು ಅಭಿನಂದನಾ ಗ್ರಂಥಗಳ ಮೂಲಕ ಗೌರವಿಸುವ ಸಂದರ್ಭವೂ ಇದೆ. ಇದರ ಮಿತಿ ಎಂದರೆ ಮಹನೀಯರನ್ನು, ಸಾಧಕರನ್ನು ಈ ಲೋಕಕ್ಕೆ ಪರಿಚಯಿಸುವ ಭರದಲ್ಲಿ ಸಾಮಾನ್ಯ ಪ್ರಜೆಗಳಿಗೆ ಇಲ್ಲಿ ಸ್ಥಾನವಿಲ್ಲ! ಈ ಕೊರತೆಯನ್ನು ಕವಿ ಕುವೆಂಪು ತಮ್ಮ ಕವಿತೆಗಳಲ್ಲಿ ಸ್ವಲ್ಪಮಟ್ಟಿಗೆ ನೀಗಿಸಿರುವುದು ಸಂತಸದ ವಿಷಯ.

ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ‘ವ್ಯಕ್ತಿ ಚಿತ್ರಗಳು’ ಸಂಕಲನ ಮಹನೀಯರ ಸಾಧನೆಯ ಪರಿಚಯಾತ್ಮಕ ಗುಣಗಾನ ಆಗಿದೆ. ಅವರ ವ್ಯಕ್ತಿತ್ವದ ಬಿಗಿ ಸೆಳೆತವೂ ಆಗಿದೆ. ಜೊತೆಗೆ ಜೀವನ ಚರಿತ್ರೆಯ ಒಂದು ಭಾಗವೇ ಆಗಿದೆ. ಉದಾಹರಣೆಗೆ, ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರ ‘ಸಾಹಿತ್ಯ ರತ್ನ ಸಂಪುಟ’, ಅ.ನ.ಕೃ. ಅವರ ‘ಕನ್ನಡ ಕುಲ ರಸಿಕರು’, ಬೆಳಗೆರೆ ಕೃಷ್ಣಶಾಸ್ತ್ರಿ ಅವರ ‘ಸಾಹಿತಿಗಳ ಸ್ಮೃತಿ’, ‘ಗಾಂಧಿ ವಿರಚಿತ ವ್ಯಕ್ತಿ ಚಿತ್ರಗಳು ಮತ್ತು ಶ್ರದ್ಧಾಂಜಲಿಗಳು’ ಹೀಗೆ ಪಟ್ಟಿ ಮುಂದುವರಿಯುತ್ತದೆ. ಇಂತಹ ಕೃತಿಗಳಲ್ಲಿ ಸಜ್ಜನಿಕೆಯ ಬಾಳು ಬಾಳಿದ ಮಹನೀಯರಿದ್ದಾರೆ. ಇವರ ಸ್ಮರಣೆಯೇ ವ್ಯಕ್ತಿಚಿತ್ರಗಳಾಗಿ ನಮ್ಮ ಕಣ್ಮುಂದೆ ಇದೆ.

ವ್ಯಕ್ತಿ ಚಿತ್ರಗಳಿಗೆ ಜೀವ ತುಂಬುವವರು ಒಡನಾಡಿಗಳು, ಆತ್ಮೀಯರು, ಸಂಬಂಧಿಕರು ಮಾತ್ರವಲ್ಲ, ಘನವ್ಯಕ್ತಿತ್ವಕ್ಕೆ ಮಾರು ಹೋದವರು, ಆರಾಧಿಸುವವರು ಕೂಡ ಜೀವ ತುಂಬ ತುಂಬಬಹುದು. ಮಹಾತ್ಮ ಗಾಂಧೀಜಿಯವರು ಈ ಎರಡು ಅಂಶಗಳನ್ನು ಮೀರಿ ವ್ಯಕ್ತಿಚಿತ್ರಗಳನ್ನು ಬರೆದಿದ್ದಾರೆ. ಇಲ್ಲಿ 'ಗಣ್ಯರು ಕಾರ್ಯೋನ್ಮುಖರಾಗಲು ಅವರುಗಳಿಗಿದ್ದ ಸಮಯ ಸ್ಫೂರ್ತಿ ಮತ್ತು ಪರಿಸ್ಥಿತಿಗಳ ಒತ್ತಡಗಳನ್ನು ಚೆನ್ನಾಗಿ ಅರಿತುಕೊಂಡು, ಅವರುಗಳ ಸದ್ಗುಣಗಳನ್ನು ಈ ಲೇಖನಗಳಲ್ಲಿ ಓದುಗರ ನೆರವಿಗಾಗಿ ಸ್ಮರಿಸಿದ್ದಾರೆ".[೫] ಇದೊಂದು ನೆನಪಿಟ್ಟುಕೊಂಡು, ಅಭಿಮಾನ ಪೂರಕವಾಗಿ ವ್ಯಕ್ತಿಯೊಬ್ಬನ ಇಡಿ ವ್ಯಕ್ತಿತ್ವದ ಪುನರ್‌ನಿರ್ಮಾಣ ಮಾಡುವ ಕಾರ್ಯ. ಗತಕಾಲದ ಸಂಗತಿಯುಳ್ಳ ಸಚ್ಚಾರಿತ್ರ್ಯ ವ್ಯಕ್ತಿತ್ವದ ನಿರ್ಮಾಣವೂ ಕೂಡ ಆಗಿದೆ. ಈ ಮೂಲಕ ಈ ನೆಲದ ಸಾಂಸ್ಕೃತಿಕ ಇತಿಹಾಸದಲ್ಲಿ ತುಂಬಾ ಬೆಲೆಯುಳ್ಳ ಅನರ್ಘ್ಯ ವ್ಯಕ್ತಿತ್ವವನ್ನು ಮುಂದಿನ ತಲೆಮಾರಿಗೆ ಮಾಡಿಟ್ಟ ಮೌಲಿಕ ಆಸ್ತಿಯೂ ಹೌದು. ಇಂತಹವರ ಬಗೆಗಿನ ಮನೋಮುದ್ರಿಕೆಗಳು ದೊಡ್ಡತನ ತಾಳಿ ವ್ಯಕ್ತಿಚಿತ್ರದ ರೂಪುಗಳಾಗಿ ನಮ್ಮ ಮುಂದೆ ನಿಲ್ಲುತ್ತವೆ. ಇದೊಂದು ಸಾಂಸ್ಕೃತಿಕ, ಸಾಮಾಜಿಕ ಜವಾಬ್ದಾರಿಯುಳ್ಳ ಬಹು ಸವಾಲಿನ, ಸಾಹಸದ ಕೆಲಸವೂ ಹೌದು. ವ್ಯಕ್ತಿತ್ವದ ಜೀವನ ದರ್ಶನದ ನಿರೂಪಣೆಯೂ ಹೌದು. ಅವರು ಬದುಕಿದ್ದ ಕಾಲದ ಮುಖ್ಯವ್ಯವಸ್ಥೆ, ನಂಬಿಕೆ, ಮನುಷ್ಯ ಸಂಬಂಧ, ಜೀವನಕ್ರಮ, ಜೀವಿಸಿದ್ದ ಕ್ರಮ, ಇವುಗಳ ಕುರಿತ ವಿಶ್ಲೇಷಣೆಯೂ ಹೌದು. ಆದ್ದರಿಂದ ಇಲ್ಲಿರುವ ವಿಷಯಗಳು ಮಹೋನ್ನತವೂ, ಸಾರ್ವಕಾಲಿಕ ಮೌಲ್ಯವುಳ್ಳದ್ದೂ ಆಗಿದೆ.

ಕುವೆಂಪು ಮತ್ತು ವ್ಯಕ್ತಿಚಿತ್ರಗಳ ನಡುವಿನ ಸಂಬಂಧದ ಬಗ್ಗೆ ಹೇಳುವುದಾದರೆ, ಕುವೆಂಪು ವಿರಚಿತ ವ್ಯಕ್ತಿಚಿತ್ರಗಳು ಕಾವ್ಯಮಯವಾಗಿವೆ.

"ಕವಿತೆ ಬರೆಯುವುದು ಕಷ್ಟ; ಅದಕ್ಕಿಂತಲೂ ಕಷ್ಟ
ಬಾಳನ್ನೆ ಕವಿತೆ ಮಾಡುವುದು, ಬರೆಯುವುದಕ್ಕೆ
ಬೇಕು ಚತುರತೆ ಪ್ರತಿಭೆ. ಬಾಳಕವಿತೆಗೆ ಬೇಕು
ಹೃದಯದಾಳದ ಒಲುಮೆ"[೬]

ಈ ಎಲ್ಲಾ ಹಂತ ಮತ್ತು ಅರ್ಹತೆಯನ್ನು ತಮ್ಮೊಳಗೆ ಕಾಪಿಟ್ಟುಕೊಂಡು, ತಮ್ಮ ಬಾಳಿನ ಜತೆಗೆ ಮಹನೀಯರ ವ್ಯಕ್ತಿತ್ವವನ್ನು ಕವಿತೆಯಾಗಿಸಿದ್ದಾರೆ. ಕುವೆಂಪು ಅವರು ವ್ಯಕ್ತಿಚಿತ್ರಗಳಲ್ಲಿ ಮೂರು ರೀತಿಯಲ್ಲಿ ಒಳಗೊಳ್ಳುತ್ತಾರೆ. ಒಂದನೆಯದು ; ಕುವೆಂಪು ಅವರು ಮಹನೀಯರ ವ್ಯಕ್ತಿತ್ವದ ಬಗ್ಗೆ ಬರೆದ ವ್ಯಕ್ತಿಚಿತ್ರಗಳು. ಉದಾಹರಣೆಗೆ, ಐಸಡೋರ, ಅನ್ನರತ್ನಾಕರಗೆ, ಶ್ರೀ ಬಸವೇಶ್ವರರಿಗೆ ಇತ್ಯಾದಿ. ಎರಡನೆಯದು; ತನ್ನ

ಬಗೆಗೆ ತಾನೆ ಕವಿಯಾಗಿ ತನ್ನ ವ್ಯಕ್ತಿತ್ವವನ್ನು ತಾನೆ ನಿರೂಪಿಸಿಕೊಳ್ಳುವ ವ್ಯಕ್ತಿಚಿತ್ರ ಉದಾಹರಣೆಗೆ 'ಕುವೆಂಪು'[೭] ಕವಿತೆ. ಮೂರನೆಯದು; ಇತರರು ಕುವೆಂಪು ವ್ಯಕ್ತಿತ್ವದ ಬಗ್ಗೆ ಬರೆದ ವ್ಯಕ್ತಿಚಿತ್ರ. ಉದಾಹರಣೆಗೆ ದ.ರಾ. ಬೇಂದ್ರೆ ಅವರ 'ಯುಗದ ಕವಿಗೆ ಜಗದ ಕವಿಗೆ', ಜಿ.ಎಸ್.ಎಸ್. ಅವರು ಬರೆದ 'ಶ್ರೀ ಕುವೆಂಪು ಅವರಿಗೆ'[೮] ಕವಿತೆಗಳಲ್ಲಿ ಮತ್ತು ಅನಕೃ ಅವರ 'ಕನ್ನಡ ಕುಲರಸಿಕರು' ಗದ್ಯಕೃತಿಯಲ್ಲಿ (ಪು.ಸಂ. ೫೪ ರಿಂದ ೫೭) ಹೀಗೆ ಅಲ್ಲಲ್ಲಿ ಕಂಡುಬರುತ್ತಾರೆ.

'ಕುವೆಂಪು ಕವಿತೆಗಳಲ್ಲಿ ವ್ಯಕ್ತಿಚಿತ್ರಣ ಲೇಖನವು ಮೊದಲೆರಡರ ರೀತಿಯ ಮೇಲೆ ಕೇಂದ್ರೀಕೃತಗೊಂಡಿದೆ. ಇಂಥ ವ್ಯಕ್ತಿಚಿತ್ರಗಳ ಕವಿತೆಗಳಲ್ಲಿ ಶ್ರೀಸಾಮಾನ್ಯರು, ಕವಿಗಳು, ಸ್ವಾತಂತ್ರ್ಯ ಹೋರಾಟಗಾರರು, ದಾರ್ಶನಿಕರು, ಕ್ಷಾತ್ರಗುಣದವರು, ಪುರಾಣ ಪಾತ್ರಗಳು ಹೀಗೆ ವಿವಿಧ ವಲಯದ ಮಹನೀಯರು 'ಅಚ್ಚರಿಗಳ ನಡುವೆ ಹರಿವ ಬದುಕು ಅಚ್ಚರಿ!'[೯] ಎಂಬಂತೆ ಕಂಡುಬರುತ್ತಾರೆ.

ಕುವೆಂಪು ಅವರಿಗೆ ಶ್ರೀಸಾಮಾನ್ಯರಾದ ಗೆಳೆಯ ತಿಮ್ಮು, ಅಪರಿಚಿತ ಕಿಟ್ಟಯ್ಯ, ದೇ.ರಾ. ರತ್ನಾಕರ ಇವರನ್ನು ಬಿಟ್ಟರೆ ಇನ್ನುಳಿದವರ ಜತೆ ವ್ಯಕ್ತಿಗತ ಒಡನಾಟವಿಲ್ಲ. ಉಳಿದವರೆಲ್ಲರೂ ಕುವೆಂಪುವಿನ ಪ್ರೀತಿಗೆ, ಮೆಚ್ಚುಗೆಗೆ, ಅಭಿಮಾನಕ್ಕೆ, ಗೌರವಕ್ಕೆ, ಭಕ್ತಿಗೆ ಒಳಪಟ್ಟು ಪ್ರಭಾವಿತ ವ್ಯಕ್ತಿಗಳಾಗಿದ್ದಾರೆ. ಇಂಥವರೆಲ್ಲ ವ್ಯಕ್ತಿತ್ವದ ಕುರಿತು ಕುವೆಂಪು ಹೇಗೆ ನಿರೂಪಿಸಿದ್ದಾರೆ ಎಂಬುದು ಬಹಳ ಮುಖ್ಯ. ಶ್ರೀಸಾಮಾನ್ಯರಲ್ಲಿ ಗೆಳೆಯ, ರೈತರು ಮತ್ತು ಕಲಾವಿದೆಯ ವ್ಯಕ್ತಿತ್ವವನ್ನು ತೆರೆದಿಟ್ಟಿದ್ದಾರೆ. ಬಾಲ್ಯದ ಗೆಳೆಯ ತಿಮ್ಮುವಿನ ಅಗಲಿಕೆಯ ನಂತರದ ಸಂದರ್ಭದಲ್ಲಿ ಪ್ರಕೃತಿಯೇ ಮೈವೆತ್ತಿ ಕವಿಯ ಕಣ್ಮುಂದೆ ನಿಂತರೂ ತಿಮ್ಮನಿಲ್ಲದ ಪ್ರಕೃತಿ ಏನೇನೂ ಇಲ್ಲ ಎಂಬ ಅಭಿಪ್ರಾಯವನ್ನು 'ಏನಿದ್ದರೇನಂತೆ ತಿಮ್ಮು ಇಲ್ಲ!'[೧೦] ಕವಿತೆಯಲ್ಲಿ ವ್ಯಕ್ತಪಡಿಸಿದ್ದಾರೆ.

'ಎಲ್ಲಿ ನೋಡಿದರಲ್ಲಿ
ಅಂದೆ ಇಂದಾಗಿಹುದು
ಕಾಂಬ ಕಾಣಿಕೆಗೆಲ್ಲ
ಕಂಡೊಂದು ಕಣ್ಣಿಲ್ಲ
ಹಿಂದಿನಂತಿಹುದೆಲ್ಲ,
ಇರುವುದೆಲ್ಲ
ಏನಿದ್ದರೇನಂತೆ ?
ತಿಮ್ಮು ಇಲ್ಲ !

ಇದು ಕುವೆಂಪು ತನ್ನ ಬಾಲ್ಯದ ಗೆಳೆಯನಿಗೆ ಕೊಟ್ಟ ಬಹುದೊಡ್ಡ ಕಾಣಿಕೆ.

ಜೊತೆಗೆ ತಿಮ್ಮುವಿನ ಶಾಶ್ವತ ಗೈರುಹಾಜರಿ ಕುವೆಂಪುವಿಗೆ ತುಂಬಲಾರದ ನಷ್ಟವಾಗಿ ಕಂಡುಬರುತ್ತದೆ.

ಅನ್ನರತ್ನಾಕರಗೆ[೧೧] ಪದ್ಯವನ್ನು ಶ್ರೀ ದೇ.ರಾ. ರತ್ನಾಕರ ಅವರ ಕೃಷಿ ಕ್ಷೇತ್ರಕ್ಕೆ ಸಂದರ್ಶನವಿತ್ತ ಸಂದರ್ಭದಲ್ಲಿ[೧೨] ಬರೆದದ್ದು. ಇಲ್ಲಿ ರತ್ನಾಕರ ವ್ಯಕ್ತಿತ್ವವನ್ನು ಕೊಂಡಾಡುತ್ತಲೇ ದೇಶಾಭಿಮುಖವಾಗಿ ನಿಲ್ಲುವ ನಿಲುವು ಕುವೆಂಪು ಅವರ ಗ್ರಹಿಕೆಯ ವ್ಯಾಪ್ತಿಯನ್ನು ಪ್ರತಿನಿಧಿಸುತ್ತದೆ. ಈ ನೆಲದ ಮಣ್ಣಿನ ಮಕ್ಕಳ ಸಮಸ್ಯೆಯ ಜೊತೆಗೆ ರಾಜಕಾರಣಿಗಳ ಅಧಿಕಾರದ ಲಾಲಸೆಯ ಅತಿರೇಕದ ಕಾರಣ ರೈತರು ಸಮಸ್ಯೆಯನ್ನು ಎದುರಿಸುತ್ತಿರುವ ಪರಿಯನ್ನು ಈ ದೇಶ ಅನುಭವಿಸುತ್ತಿರುವ ಘನಘೋರ ಸ್ಥಿತಿಯನ್ನು ಪರಿಚಯಿಸುತ್ತಾರೆ.

"ನಿನ್ನಂತೆವೋಲ್
ಬೆಳೆವರಿದ್ದರೆ ಅಮ್ಮ ಭಾರತಿಗೆ ಇಂದಿರುತಿತ್ತೆ
ಅನ್ನ ಭಿಕ್ಷಾಟನೆಯ ಗೋಳ್?

ಎಂದು ಪ್ರಶ್ನಿಸುವ ಮೂಲಕ ರೈತರ ಶ್ರಮ ಜೀವನದ ಪರಿಣಾಮ ಈ ನೆಲದ ಸುಖದ ಸಾಧ್ಯತೆಯನ್ನು ಹೇಳಿದ್ದಾರೆ. ಪ್ರತಿ ರೈತನಿಗೂ ವಾಣಿಜ್ಯಾತ್ಮಕ ಸಂಬಂಧ ಬಹಳ ಮುಖ್ಯ. ರೈತ ಬೆಳೆಯುವ ಪ್ರತಿಯೊಂದು ಬೆಳೆಯುವ ಈ ದೇಶದ ದಾರಿದ್ರ್ಯದ ಎದೆಗೆ ಜಡಿಯುವ ಮೊಳೆ. "ಒಂದೊಂದು ಅಡಕೆಯೂ ದಾರಿದ್ರ್ಯದೆದೆಗೆ ಗುರಿಯಿಟ್ಟ ಗುಂಡು" ಎಂದು ಅಡಕೆ ಫಸಲು ಈ ದೇಶದ ದಾರಿದ್ರ್ಯವನ್ನು ತಣಿಸುವ ಸಾಮರ್ಥ್ಯವನ್ನು ಹೊಂದಿದೆ ಎಂದು ಹೇಳುವ ಮೂಲಕ ರತ್ನಾಕರ ಅವರ ಕೃಷಿ ಚಟುವಟಿಕೆಯ ಘನತೆಯನ್ನು, ಅವರ ಶ್ರಮದಾಯಕ ವ್ಯಕ್ತಿತ್ವವನ್ನು ಅರ್ಥಗರ್ಭಿತವಾಗಿ ಬಿಂಬಿಸಿದ್ದಾರೆ.

ಕಿಟ್ಟಯ್ಯ[೧೩] – ಒಬ್ಬ ಸಾಮಾನ್ಯ ರೈತ. ಕವಿಗೆ ಆಕಸ್ಮಿಕವಾಗಿ ಸಿಕ್ಕ ಕಿಟ್ಟಯ್ಯನ ಕುಶಲೋಪರಿಯೊಂದಿಗೆ ಕಿಟ್ಟಯ್ಯನ (ರೈತನ) ವ್ಯಕ್ತಿತ್ವ ಅನಾವರಣಗೊಳ್ಳುತ್ತದೆ. ಕಿಟ್ಟಯ್ಯನ ಬದುಕಿನ ಕಷ್ಟದ ಸಂದರ್ಭಗಳನ್ನು ಪರಿಚಯಿಸುವ ಈ ಕವಿತೆಗೆ ಪ್ರತಿ ಸಣ್ಣ ರೈತರ ಕಷ್ಟಗಳನ್ನು ಪರಿಚಯಿಸುವಲ್ಲಿ ಪ್ರತಿನಿಧಿಸುತ್ತದೆ. ಕಿಟ್ಟಯ್ಯನ ತಂದೆ ಕೊಂಡು ಕೊಂಡ ಮೂರು ಎಕರೆ ಭೂಮಿ ಕಿಟ್ಟಯ್ಯನಿಗೆ ಪಿತ್ರಾರ್ಜಿತ ಸ್ವತ್ತು. ಆದರೆ ಇದೇನು ಫಲಭರಿತ ಭೂಮಿಯಲ್ಲ. ಈ ಭೂಮಿಯೋ ಬರಿಕಲ್ಲು! ಪಾಪಾಸುಕಳ್ಳಿಯಲ್ಲದೆ ಬೇರೆ ಪೈರುಗಳು ಹುಲುಸಾಗಿ ಬೆಳೆಯಲಾರವು ಅಲ್ಲಿ! ಆದರೆ ನಲವತ್ತು ವರುಷಗಳು ದುಡಿದಾತನಿಗೆ ಆ ಹೊಲವು ಇಂದ್ರವನಕೆ ಎರಡು ಮಡಿ ರಮಣೀಯವಾಗಿತ್ತು! ಏಕೆಂದರೆ ಅವನ ಕಷ್ಟದ ಫಲದಿಂದ ಹೊಮ್ಮಿದ

ಹಸಿರು ಹುರುಳಿ, ಜೋಳ, ರಾಗಿ, ಹುಚ್ಚೆಳ್ಳು ಮೊದಲಾದ ಧಾನ್ಯಗಳು ರೂಪದಲ್ಲಿ ಕಂಗೊಳಿಸಿತ್ತು. ಇದೆಲ್ಲವೂ ಮಳೆಯಾಶ್ರಿತ ಬೆಳೆಗಳು, ಮಳೆ ಇದ್ದರೆ ಬೆಳೆ, ಇಲ್ಲದಿದ್ದರೆ ಇಲ್ಲ. ಆದರೂ ಕಂದಾಯ ಕೊಡಬೇಕು. ಪಿತ್ರಾರ್ಜಿತವಾಗಿ ಬಂದ ಆಸ್ತಿಯನ್ನು ತೆರಿಗೆ ವಂಚನೆಯಿಂದ ಕಳೆದುಕೊಳ್ಳಬಾರದು ಎಂದು ಬಹಳ ಶ್ರಮಪಟ್ಟು ಮಾಡಿದ ರೂ. ೨೦೦ ಸಾಲವನ್ನು ನೂರಕ್ಕೆ ಹದಿನೆಂಟು ಬಡ್ಡಿ ಕಟ್ಟುತ್ತಲೇ ಜಮೀನನ್ನು ಉಳಿಸಿಕೊಂಡಿರುವನು. ಆದರೂ ಕೂಡ ಉಲ್ಲಾಸವನ್ನೇ ತೋರಿ ನಗುವಂತೆ ನಟಿಸಿ ಬದುಕುತ್ತಿರುವನು. ಇಂಥ ಬದುಕನ್ನು ಕೇಳಿದ ಕುವೆಂಪುವಿಗೆ 'ಕತ್ತಲಲಿ ರೈತನಾಕೃತಿಯೊಂದು ಕನಸಿನ ತೆರದಿ ಕಾಣಿಸಿತು; ಅವನೊಂದು ವಿಶ್ವದ ಮಹಾಸ್ವಪ್ನ! ಎಂದು ಕರೆದು, ಒಂದು ಗಂಟೆಯ ನುಡಿಗೆ ಅವನದೆಂತಹ ಮೈತ್ರಿ! ಎಂದು ಆಶ್ಚರ್ಯಪಟ್ಟ ಅವನ ಕಷ್ಟದ ಬದುಕನ್ನು ಸಮಾಜದ ಮುಂದೆ ಇಟ್ಟಿರುವರು.

ಒಂದು ಆತ್ಮಕಥೆಯನ್ನು ಓದಿ ಆ ವ್ಯಕ್ತಿಯ ವ್ಯಕ್ತಿತ್ವದ ಬಗ್ಗೆ ಕಾವ್ಯಾತ್ಮಕವಾಗಿ ಬರೆಯುವ ಸಾಮರ್ಥ್ಯ ಕುವೆಂಪುವಿಗೆ ಇದೆ.ಗಳ ಇದಕ್ಕೆ 'ಐಸಾಡೋರಾ' ಕವಿತೆ ಸಮರ್ಥಿಸುತ್ತದೆ. ಐಸಡೋರಾ ಡಂಕನ್ ಅಮೆರಿಕನ್ ನಾಟ್ಯ ಕಲಾವಿದೆ. ತನ್ನ ವೃತ್ತಿಪರ ಮತ್ತು ಖಾಸಗಿ ಜೀವನದಲ್ಲಿ ಸಾಂಪ್ರದಾಯಿಕ ಪ್ರಾಮುಖ್ಯತೆಯನ್ನು, ನೈತಿಕತೆಯನ್ನು ಮೀರಿದವಳು ಹಾಗೂ ಬ್ಯಾಲೆಯನ್ನು ಸಂಪ್ರದಾಯವಾದಿ ನಿರ್ಬಂಧಗಳಿಂದ ಮುಕ್ತಗೊಳಿಸಿದವಳು. ಐಸಡೋರ ೧೯೨೨-೨೩ ರಲ್ಲಿ ತನ್ನ ಕೊನೆಯ ಯುನೈಟೆಡ್ ಸ್ಟೇಟ್ಸ್ ಪ್ರವಾಸದ ಸಮಯದಲ್ಲಿ ತನ್ನ ಕಮ್ಯುನಿಸಂ ಪ್ರಸ್ತುಪಿಸಿದಳು. ಕೆಂಪು ಸ್ಕಾರ್ಫ್ ಅನ್ನು ಧರಿಸಿ ಬೋಸ್ಟನ್ ವೇದಿಕೆಯ ಮೇಲೆ ಬಂದ ಇವಳು ತನ್ನ ಸ್ತನವನ್ನು ಬೇರ್ಪಡಿಸಿ "ಇದು ಕೆಂಪು! ಹಾಗಾಗಿ ನಾನು!" ಹೀಗೆ ಹೇಳಿ ಉಂಟಾದ ಸಂದರ್ಭವನ್ನು ಕವಿ ಕುವೆಂಪು,

"ತನ್ನ ಕಿರುದರ್ಶನಕೆ ದಿವ್ಯಾ
ದರ್ಶವನು ಕತ್ತರಿಸುತ
ಬಾಳ ಬಯಲೊಳಗೆಡವಿ ನಡೆದಳೊ
ಕುಣಿವವೊಲು ತತ್ತರಿಸುತ !"

ಎಂದು ಬಿಂಬಿಸುತ್ತಾರೆ. ಒಬ್ಬರು ಇನ್ನೊಬ್ಬರ ಬದುಕಿಗೆ ಗೌರವ ಸಮರ್ಪಿಸುವುದು. ಆ ಬದುಕು ತನ್ನ ಗ್ರಹಿಕೆಯ ನೆಲೆಗೆ ಬಂದ ಮೇಲೆಯೇ. ಅಂತೆಯೇ ಕುವೆಂಪು ಕವಿತೆ ಬರೆಯುವ ಮೂಲಕ ಗೌರವ ಸಮರ್ಪಿಸುವುದಷ್ಟೇ ಅಲ್ಲ, ಕವಿತೆಯ ಒಳಗೂ ಮಿಡಿಯುತ್ತಾರೆ.

ಒಬ್ಬ ಕವಿಯ ಬಗ್ಗೆ ಮತ್ತೊಬ್ಬ ಕವಿ ಬರೆಯುವುದು ಕಾವ್ಯಮಾರ್ಗದ

ಶ್ರೀಮಂತಿಕೆಯ ಲಕ್ಷಣ ಎನ್ನಬಹುದು. ತನ್ನೊಳಗಿನ ಗೌರವಭಾವವನ್ನು, ಮತ್ತೊಬ್ಬ ಕವಿಗೆ ಕಾವ್ಯದ ಮೂಲಕವೇ ಸಮರ್ಪಿಸುವುದು ಉತ್ತಮ ಕವಿಯ ಉತ್ತಮ ಲಕ್ಷಣ. ಇಲ್ಲಿ ಕುವೆಂಪು ಅವರು ಹೋಮರ್, ಟಾಲ್‌ಸ್ಟಾಯ್, ವರ್ಡ್ಸ್‌ವರ್ತ್, ಕೇಶಿರಾಜ, ಕುಮಾರವ್ಯಾಸ, ಪಂಜೆಮಂಗೇಶರಾಯ ಇವರ ವ್ಯಕ್ತಿತ್ವವನ್ನು ತಮ್ಮ ಕವಿತೆಗಳಲ್ಲಿ ಹಿಡಿದಿಟ್ಟಿದ್ದಾರೆ.

ಗ್ರೀಕ್ ಸಾಹಿತ್ಯದ ಆದ್ಯ ಪುರುಷ, ಮಹಾಕವಿ ಹೋಮರ್‌ಗಿನ ಕುರಿತು ಕುವೆಂಪುವಿನ ದೃಷ್ಟಿಕೋನವು ಅವನ ಮಹಾಕಾವ್ಯ ಈಲಿಯಡ್‌ನ ಮೇಲೆ ನಿಂತಿದೆ. ಇಲ್ಲಿ, ಭಾರತದ ಮಹಾಕಾವ್ಯ ರಾಮಾಯಣ ಮತ್ತು ಗ್ರೀಕ್ ಮಹಾಕಾವ್ಯ ಈಲಿಯಡ್ ಇವುಗಳ ವಸ್ತು ವಿಷಯವನ್ನು ತುಲನೆ ಮಾಡಿ ಕವಿ ಸಾಮರ್ಥ್ಯವನ್ನು ಅಳೆದಿದ್ದಾರೆ.

'ಹೋಮರ್ ನಿನ್ನ ಕಲೆ ಪಿರಿದಾದೊಡಂ ನಿನ್ನ
ಕಥೆ ಪಿರಿದಲ್ತು".

ಎಂದು ಹೇಳುವ ಮೂಲಕ ಕವಿತೆಯನ್ನು ಪ್ರಾರಂಭಿಸುವ ಕುವೆಂಪು ಈ ಒಂದೂವರೆ ಸಾಲಿನಲ್ಲಿ ಹೋಮರ್‌ನ ವ್ಯಕ್ತಿತ್ವಕ್ಕೆ ಮುನ್ನುಡಿ ಬರೆಯುತ್ತಾರೆ. ಈಲಿಯಡ್‌ನ 'ಹೆಲೆನ್' ಮತ್ತು ರಾಮಾಯಣದ 'ಸೀತೆ' ಈ ಇಬ್ಬರೂ ಮಹಾಕಾವ್ಯದ ಒತ್ತೆಯಾಳುಗಳು. ಆದರೆ ಈ ಇಬ್ಬರ ವ್ಯಕ್ತಿತ್ವವೂ ಭಿನ್ನವೆ.

"ಲೋಕಸುಂದರಿ ನಿನ್ನ ಹೆಲೆನ್ ಚೆಲುವೆ ದಲ್ : ಮತ್ತೇನುಮಲ್ತು" ಎಂದು ಹೆಲೆನ್‌ಳನ್ನು ಮನಸ್ಸಿನ ಅಂಚಿಗೆ ತಳ್ಳಿ, "ಈಲಿಯಡ್‌ನ ಮಹಾಕಲೆಯ ನೆತ್ತರ್‌ಗಣ್ಣೆ ಬೆಲೆವಣ್ಣೆ ಗುರಿಯಾಯ್ತೆ? – ಕ್ಷಮಿಸು" ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಆದರೆ, "ಸೀತೆಯ ಶುಚಿಗೆ ರಾಮಾಯಣವನೊರೆದನಾದಿಕವಿ ವಾಲ್ಮೀಕಿ" ಎಂದು ಹೇಳುವ ಮೂಲಕ ರಾಮಾಯಣ ."ಸೀತೆಯ ಕಾರಣಕ್ಕೆ ಸೃಜಿಸಲ್ಪಟ್ಟಿದೆ ಎಂಬ ಗೌರವಾಭಿಮಾನದ ನುಡಿಗಳನ್ನು ಹೇಳುವ ಮೂಲಕ ರಾಮಾಯಣದ 'ಶುಚಿಯ ಗಂಗೆಯೊಳ್ ಮಿಂದೆನಗೆ ಸಹಿಸದಯ್ ಕೆಸರಿನೋಕುಳಿಯ ನಿನ್ನದ್ಭುತ ರಣಕ್ರೀಡೆ'! ಎಂದು ಈಲಿಯಡ್ ಮಹಾಕಾವ್ಯದ ಜೊತೆಗೆ ಕವಿ ಹೋಮರ್‌ನ ವ್ಯಕ್ತಿತ್ವವನ್ನು ಸಹಿಸಲಾಗದು ಎಂಬ ಅಭಿಪ್ರಾಯವನ್ನು ಕಾವ್ಯದ ಮೂಲಕ ವ್ಯಕ್ತಪಡಿಸುತ್ತಾರೆ.

ರಷ್ಯಾದ ಪ್ರಮುಖ ಕಾದಂಬರಿಕಾರ ಮತ್ತು ವಿಶ್ವದ ಪ್ರಸಿದ್ಧ ಸಾಹಿತಿಗಳಲ್ಲಿ ಟಾಲ್‌ಸ್ಟಾಯ್‌ಗೂ ಒಬ್ಬ. ಕುವೆಂಪು ತಮ್ಮದೇ ವಿಭಿನ್ನ ಶೈಲಿಯಲ್ಲಿ ಇವನನ್ನು ನಿರಂಕುಶಮತಿ, ಕ್ರಾಂತಿಕಾರಿ, ಕಾವ್ಯರಸನಂದನ ಕೃಷಿಕ, ಸಾಧಕವರೇಣ್ಯ, ರಸಋಷಿ. ಹೀಗೆ ಕರೆದು ಅವನ ವ್ಯಕ್ತಿತ್ವವನ್ನು ಕೊಂಡಾಡಿದ್ದಾರೆ. ಇವು ಕೇವಲ ವ್ಯಕ್ತಿತ್ವಕ್ಕೆ

ಪೂರಕ ಪದಗಳ ಜೋಡಣೆ ಅಲ್ಲ. ಅವರ ಬದುಕಿನ ಕೆಲಘಟನೆಗಳ ವಿಶೇಷ ಸಂದರ್ಭಗಳನ್ನು ಇಲ್ಲಿ ನೆನೆದಿದ್ದಾರೆ.

"ಕ್ರಾಂತಿಕಾರನೆ ಮಾತ್ರ ನೀನಲ್ತು; ಕಾವ್ಯರಸನಂದನ ಕೃಷಿಕನಾದೆ" ಎಂದು ಹೇಳುವ ಮೂಲಕ ಒಬ್ಬ ವ್ಯಕ್ತಿಯ ನಿಜವಾದ ವ್ಯಕ್ತಿತ್ವ ಮಾದರಿಯಾಗುವುದು ಅವನು ತನ್ನ ಜೀವಿತಾವಧಿಯಲ್ಲಿ ಸಾಧ್ಯವಾದಷ್ಟು ಹಲವಾರು ಕ್ಷೇತ್ರಗಳಲ್ಲಿ ತೊಡಗಿಸಿಕೊಳ್ಳುವುದರಿಂದ ಅನುಭವದ ಅಮೃತ ಸಿಕ್ಕಂತಾಗುತ್ತದೆ ಎಂಬುದನ್ನು ಅರ್ಥೈಸಿದ್ದಾರೆ.

ಇಂಗ್ಲಿಷ್‌ನ ರೊಮ್ಯಾಂಟಿಕ್ ಕವಿ ವರ್ಡ್ಸ್‌ವರ್ತ್‌ಗ೭ನ ಬಗ್ಗೆ ಬರೆದ ಸಾಲುಗಳು ವೇದಿಕೆ ಮೇಲೆ ಸನ್ಮಾನಿಸಿದ ಮುತ್ತಿನ ಹಾರಕ್ಕಿಂತಲೂ ಘನತೆಯನ್ನು ಹೊಂದಿವೆ. 'ನೀನೊಂದು ಪರ್ಣಕುಟಿ' ಎಂದು ಹೇಳುವ ಮೂಲಕ ತಂಪು-ತಂಗಾಳಿ-ನೆಮ್ಮದಿ-ಶಾಂತಿ ಮುಂತಾದ ಭಾವರಸ ಮಂಜರಿಯ ಸಾಧ್ಯತೆಯನ್ನು ವರ್ಡ್ಸ್‌ವರ್ತ್ ಕವಿಯಲ್ಲಿ ಕಂಡಿದ್ದಾರೆ. ಜೊತೆಗೆ ಇವನನ್ನು 'ಕಾವ್ಯಾರ್ಷಿ' ಎಂದು ಕರೆದು, ಕವಿಯ ವ್ಯಕ್ತಿತ್ವಕ್ಕೆ ನಿರ್ಮಲನೀತಿ, ಜನರೊಲ್ಮೆ, ಶಾಂತಿ, ಕನಿಕರ, ದಯೆ ಎಂಬ ಮೌಲ್ಯಗಳನ್ನು ಸೇರಿಸಿ ವರ್ಡ್ಸ್‌ವರ್ತ್‌ನನ್ನು ಉನ್ನತೀಕರಿಸಿದ್ದಾರೆ.

ಕನ್ನಡದ ಪ್ರಸಿದ್ಧ ವೈಯ್ಯಾಕರಣಿ ಕೇಶಿರಾಜ. ಇವನ ಬಗ್ಗೆ ಕಾವ್ಯಾತ್ಮಕ ಸನ್ನಿವೇಶಗಳು ಹುಟ್ಟಿಲ್ಲ ಎಂಬ ಕೊರತೆಯನ್ನು ಕವಿ ಕುವೆಂಪು ದೂರ ಮಾಡಿದ್ದಾರೆ. 'ಕೇಶಿರಾಜ'ಗ೮ ಪದ್ಯ ಏಕಕಾಲಕ್ಕೆ ಕೇಶಿರಾಜನ ವ್ಯಕ್ತಿತ್ವವನ್ನು, ಅವನ ಕೃತಿಯ ಮಹತ್ತನ್ನು, ವ್ಯಾಕರಣದೊಂದಿಗೆ ಕವಿಗಳ ಅನುಸಂಧಾನದ ಪರಿಪಾಟಲನ್ನು ಅನಾವರಣ ಮಾಡುತ್ತದೆ. 'ಕೇಶಿರಾಜ' ಕವಿತೆ ಕುವೆಂಪು ಕನಸಿನಲಿ ಬಂದು ಹೋಗುವ ಮನೋಜ್ಞ ಕಾವ್ಯಕಲೆ. ಹೊಸತನವನ್ನು ಪ್ರತಿಕ್ಷಣವೂ ತೆರೆದಿಡುವ ಈ ಪದ್ಯ, ವೈಯ್ಯಾಕರಣಿ ಕೇಶಿರಾಜನನ್ನು, ಅವನ ವ್ಯಾಕರಣ ಶಕ್ತಿಯನ್ನು ಎತ್ತಿಹಿಡಿಯುತ್ತಲೆ ಅವನನ್ನು 'ವ್ಯಾಕರಣ ಋಷಿ'ಯನ್ನಾಗಿ ಕಂಡುಕೊಳ್ಳುತ್ತಾರೆ.

ಜತೆಗೆ 'ಪಂಡಿತನ ಕರುಣೆಯನು ಬೇಡುತಿಹಳು ಎಂಬಂತೆ, ವಾಗ್ದೇವಿಯೇ ಅವನೆದುರು ಕೈಕಟ್ಟಿ ನಿಂತಿಹಳು' ಎಂಬ ಸೋಜಿಗದ ದೃಶ್ಯವೊಂದನ್ನು ಕವಿ ಕಟ್ಟಿ ಕೊಡುವಾಗ ಕೇಶಿರಾಜನ ವ್ಯಕ್ತಿತ್ವಕ್ಕೆ ಮನಸೋಲದ ಕವಿಗಳೇ ಇಲ್ಲವೆಂಬ ಸ್ವಾದಿಷ್ಟ ಅಭಿಪ್ರಾಯವನ್ನು ಕುವೆಂಪು ವ್ಯಕ್ತಪಡಿಸಿದ್ದಾರೆ.

ಕುಮಾರವ್ಯಾಸನ ಕಾವ್ಯಶಕ್ತಿಯನ್ನು ಕುಮಾರವ್ಯಾಸಗ೯ ಕವಿತೆಯಲ್ಲಿ ಸಮರ್ಥವಾಗಿ ನಿರೂಪಿಸಿರುವ ಕುವೆಂಪು ಅವರು 'ಕರ್ಣಾಟ ಭಾರತ ಕಥಾಮಂಜರಿ'ಯನ್ನು ಸಹೃದಯನ ನೆಲೆಯಲ್ಲಿ ನಿಂತು ಹಾಡಿಹೊಗಳಿದ್ದಾರೆ.

"ಕುಮಾರವ್ಯಾಸನು ಹಾಡಿದನೆಂದರೆ
ಕಲಿಯುಗ ದ್ವಾಪರವಾಗುವುದು !
ಭಾರತ ಕಣ್ಣಲಿ ಕುಣಿವುದು ; ಮೆಯ್ಯಲಿ
ಮಿಂಚಿನ ಹೊಳೆ ತುಳುಕಾಡುವುದು"

ಎಂದು ಹೇಳುವಾಗ ಸಹೃದಯನೊಬ್ಬನ ಸಾಮರ್ಥ್ಯವನ್ನು ಕವಿಯೊಬ್ಬನ ಸಾಮರ್ಥ್ಯದೊಂದಿಗೆ ತುಲನೆ ಮಾಡಿ ಕಾವ್ಯಶಕ್ತಿಯನ್ನು ನಿರೂಪಿಸಿದ್ದಾರೆ. ಸಹೃದಯನ ಓದುವಿಕೆಯ ಗ್ರಹಿಕೆಯ ಸಾಮರ್ಥ್ಯದ ಮೇಲೆ ಕಾವ್ಯದ ಅರ್ಥಶಕ್ತಿ ಒಂದು ಯುಗವನ್ನೆ (ಕಲಿಯುಗ ದ್ವಾಪರವಾಗುವುದು) ಬದಲಾಯಿಸುವ ಭಾವಶಕ್ತಿಯನ್ನು ಹೊಂದಿರುತ್ತದೆ ಎಂದು ಹೇಳುವ ಮೂಲಕ ಕುಮಾರವ್ಯಾಸನ ಕಾವ್ಯಶಕ್ತಿಯೊಂದಿಗೆ ಅವನ ವ್ಯಕ್ತಿತ್ವವನ್ನು ಅನಾವರಣ ಮಾಡಿದ್ದಾರೆ. ಕವಿಯೊಬ್ಬನು ಕಾವ್ಯ ರಚಿಸುವ ಸಂದರ್ಭದಲ್ಲಿ ಪ್ರಸ್ತುತತೆಗೆ ಮಹತ್ವಕೊಟ್ಟರೂ ಅದು ಭೂತ ಮತ್ತು ಭವಿಷ್ಯಕ್ಕೂ ತನ್ನ ಜೀವಂತಿಕೆಯನ್ನು ಕಾಪಿಟ್ಟುಕೊಳ್ಳಬೇಕಾದ ಸಾಮರ್ಥ್ಯವನ್ನು ಹೊಂದಿರಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ 'ಕುಮಾರವ್ಯಾಸ' ಕೇವಲ ಪದ್ಯವೊಂದರ ಶೀರ್ಷಿಕೆಯಾಗದೆ, ಮಹಾಭಾರತವನ್ನು ರಸವತ್ತಾಗಿ ಕಟ್ಟಿಕೊಡುವ ಕಾವ್ಯವೂ ಹೌದು, ಅಂಥ ಕಾವ್ಯವನ್ನು ರಚಿಸಿದ ಮಹಾಕವಿಯ ಹೆಸರೂ ಹೌದು.

ಪಂಜೆಮಂಗೇಶರಾಯರು ಕನ್ನಡ ಸಾಹಿತ್ಯದ ಆಚಾರ್ಯ, ಒಬ್ಬ ಕತೆಗಾರ, ಮಕ್ಕಳ ಸಾಹಿತಿ ಹೀಗೆ ಗುರುತಿಸಿಕೊಂಡಿದ್ದಾರೆ. ಕವಿ ಕುವೆಂಪು 'ಪಂಜೆಯವರಿಗೆ'೨೦ ಕವಿತೆಯ ಮೂಲಕ ಗೌರವಪೂರ್ವಕವಾಗಿ ಅವರ ಘನವ್ಯಕ್ತಿತ್ವವನ್ನು ಪರಿಚಯಿಸಿದ್ದಾರೆ.

"ಹಾಲು ಸಕ್ಕರೆ ಸೇರಿ ನೀವಾದಿರಾಚಾರ್ಯ
ನಡೆಯ ಮಡಿಯಲಿ, ನುಡಿಯ ಸವಿಯಲ್ಲಿ"

ಹೀಗೆ ಕಟ್ಟಿಕೊಡುವಾಗ ಸಹೃದಯನ ಮನಸ್ಸು ಪ್ರಫುಲ್ಲವಾಗುವುದರಲ್ಲಿ ಎರಡು ಮಾತಿಲ್ಲ. ಸಾತ್ವಿಕಭಾವದ ಒಲುಮೆಯಿಂದ ಪಂಜೆಯವರ ವ್ಯಕ್ತಿತ್ವವನ್ನು ಗುಣಿಸುವ ಕವಿಭಾವಕ್ಕೆ ಮಣಿಯದೆ ಬೇರೆ ದಾರಿಯಿಲ್ಲ. "ನಿಮ್ಮ ಬಗೆ ಹಸುಳೆ ನಗೆ" ಎನ್ನುವಾಗಲೂ ನಿಷ್ಕಲ್ಮಶ ಭಾವಾಭಿನಯದ ಸ್ಮರಣೀಯ ಸಂದರ್ಭವನ್ನು ನೆನೆಯುವ ಬಗೆಯೂ ಹೀಗೆ. ಒಬ್ಬ ವ್ಯಕ್ತಿಯ ಉತ್ತಮಿಕೆ ಎನ್ನುವುದು ಸಮಯ, ಸಂದರ್ಭ, ಸ್ವಾರ್ಥದ ಮೇಲೆ ನಿಂತಿರುತ್ತದೆ. ಆದರೆ ಕುವೆಂಪು ಕಂಡ ಪಂಜೆಯವರು 'ಕಚ್ಚಿದರೆ ಕಬ್ಬಾಗಿ, ಹಿಂಡಿದರೆ ಜೇನಾಗಿ' ಮೆರೆಯುತ್ತಾರೆ.

ನವೋದಯ ಸಾಹಿತ್ಯ ಕಾಲಘಟ್ಟದಲ್ಲಿ ರಾಷ್ಟ್ರಾಭಿಮಾನ ಪ್ರಧಾನವಾಗಿತ್ತು. ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದ ಹಲವಾರು ಸಂಗತಿಗಳು ಘಟಿಸಿದ್ದವು.

ಇದರ ಪ್ರಭಾವ ಕುವೆಂಪು ಮೇಲೂ ಆಗಿದೆ. ಈ ಕಾರಣದಿಂದಾಗಿ ಗಾಂಧೀಜಿ ಮತ್ತು ಮೋತಿಲಾಲ್ ನೆಹರೂ ಕುರಿತ ವ್ಯಕ್ತಿಚಿತ್ರ ಕವಿತೆಗಳನ್ನು ಸೃಜಿಸಿದ್ದಾರೆ. ದೇಶದಲ್ಲಿ ಗಾಂಧಿಯುಗ ಪ್ರಾರಂಭವಾಗಿ ಹದಿನೈದು ವರ್ಷ ಕಳೆದಿದ್ದವು. ಆಗ ಕುವೆಂಪು ಬರೆದ ಮಹಾತ್ಮಗಾಂಧಿ[೨೧] ಪದ್ಯ ಗಾಂಧೀಜಿಯ ಸಾರಥ್ಯದಲ್ಲಿ ದೇಶದ ಭವಿಷ್ಯವನ್ನು ಸಾರಿ ಹೇಳುತ್ತದೆ. ಈ ನಿಮಿತ್ತ ಕುವೆಂಪು ಅವರ ಇಂಥ ದೃಷ್ಟಿಕೋನ ಮತ್ತು ಮನೋಭಾವ ಎರಡೂ ಕೂಡ ದೂರಗಾಮಿತ್ವವನ್ನು ಹೊಂದಿದ್ದವು ಎಂದು ಸ್ಪಷ್ಟವಾಗಿ ಹೇಳಬಹುದು. ಗುರುದೇವ ರವೀಂದ್ರನಾಥ ಠಾಕೂರ್ ಅವರು ಎಂ.ಕೆ. ಗಾಂಧಿಯನ್ನು 'ಮಹಾತ್ಮ' ಎಂದು ಕರೆದಿದ್ದು ಗಾಂಧೀಜಿ ಸ್ವಾತಂತ್ರ್ಯ ಚಳವಳಿಗೆ ಪಾದಾರ್ಪಣೆ ಮಾಡಿದ ಸಂದರ್ಭದಲ್ಲಿ. ಠಾಕೂರ್ ಅವರ ಈ ದೂರದೃಷ್ಟಿ ಜಗದ ಅಂತ್ಯದವರೆಗೂ ನಿಂತಿದೆ.

"ಬಾಳು ಪಾವನಮಾದುದೀತನಂ ಭೂಮಿಯಲಿ !
ಓ ಮಹಾತ್ಮನೇ, ನಿನ್ನ ಸಾನ್ನಿಧ್ಯ ತೀರ್ಥದಲಿ
ಮಾನವನ ಮೋಹಮದ ಮಾತ್ಸರ್ಯಗಳು ಮಿಂದು
ಪ್ರೇಮದಿ ಪುನೀತವಾಗಿಹವು!"

ಹೀಗೆ ಮಹಾತ್ಮನ ಪ್ರಭಾವದಿಂದ ಈ ಭಾರತವೆಂಬ ಪುಣ್ಯಭೂಮಿಯಲಿ ಮಾನವ ಪ್ರೇಮವು ಉದಯಿಸಿದೆ. ಕುವೆಂಪು ಅವರು ಮಹಾತ್ಮ ಗಾಂಧೀಜಿಯನ್ನು "ಪ್ರಚ್ಛನ್ನ ಕಲ್ಕಿಯೇ"[೨೨] ಎಂದು ಕರೆಯುವ ಮೂಲಕ ಸ್ವಾತಂತ್ರ್ಯದ ಭವಿಷ್ಯವನ್ನು ಇಲ್ಲಿಂದಲೇ ಕಂಡುಕೊಂಡಿದ್ದರು ಎಂಬುದು ಸೂಕ್ಷ್ಮವಾಗಿ ಗ್ರಹಿಸಬೇಕಾದ ವಿಷಯ.

ಸಾಮಾಜಿಕ ಸಖ್ಯ ಹೊಂದಿರುವ ಗಾಂಧಿ, ಸಮಾಜದಲ್ಲಿನ ಸಾಮರಸ್ಯಕ್ಕಾಗಿ ಹೋರಾಡುವುದು ರಾಮನಾಮ ಸ್ಮರಣೆಯಿಂದ. ಈ ಮೂಲಕ ರಾಮನ ಗುಣಗಾನದ ಜತೆಗೆ ಗಾಂಧೀಜಿಯ ಸಾಮಾಜಿಕ ಕಳಕಳಿ "ಶ್ರೀರಾಮಪುರದಲ್ಲಿ ಗಾಂಧೀಜಿ"[೨೨] ಕವಿತೆಯಲ್ಲಿ ಮಡುಗಟ್ಟಿದೆ. "ಗಾಂಧೀಜಿ ಒಬ್ಬರೆ ನೌಕಾಲಿಯ ಬಳಿಯ ಶ್ರೀರಾಂಪುರವೆಂಬ ಹಳ್ಳಿಯಲ್ಲಿ ವಾಸ ಮಾಡುತ್ತಾ ಮುಸ್ಲಿಮರ ಸಂಪರ್ಕ ಬೆಳೆಸಿ ಸಖ್ಯ ಸಾಧನೆಗೆ ತೊಡಗಿದ್ದಾರೆ. ಈ ಇಳಿ ವಯಸ್ಸಿನಲ್ಲಿ ಆ ಕಾಡು ನೀರಿನ ಭೀಷಣ ಪ್ರಕೃತಿಯಲ್ಲಿ, ಅದಕ್ಕಿಂತಲೂ ಹೆಚ್ಚಾಗಿ ಭೀಷಣತರವಾಗಿ ತೋರುತ್ತಿರುವ ಮನುಷ್ಯ ಪ್ರಕೃತಿಯ ಮಧ್ಯೆ, ಹಾಲಾಹಲದಲ್ಲಿ ಅಮೃತ ಮಂಥನಕ್ಕಾಗಿ ದೀಕ್ಷೆ ತೊಟ್ಟಿದ್ದಾರೆ"[೨೩] ಎಂದು ಕವಿ ಬರೆಯುತ್ತಾರೆ.

'ಮತಿಲಾಲ ನೆಹರು'[೨೪] ಸ್ಮರಣೀಯ ಕವಿತೆ. ಮೋತಿಲಾಲ ನೆಹರೂ ಅವರು ದೇಶಕ್ಕೋಸ್ಕರ ಹೋರಾಡಿದ ಕ್ರಮದ ಹಿನ್ನೆಲೆಯಲ್ಲಿ ರೂಪಿತಗೊಂಡಿವೆ.

ದೇಶ–ದೇಶಾಭಿಮಾನದ ಜತೆಗೆ ಸ್ವಾತಂತ್ರ್ಯ ಹೋರಾಟಗಾರನ ವ್ಯಕ್ತಿತ್ವವೂ ಮಿಳಿತವಾಗಿದೆ.

"ಓ ಕಲಿಯೆ? ಭರತ ಖಂಡವೆ ಮರುಗುತಿದೆ ನಿನಗೆ
ನೋಡು ಅದೊ, ನಮ್ಮ ತಾಯಿಯ ಮೊಗದ ಮೂಡುನಗೆ
ಬಾಡುತಿದೆ ದುಗುಡದಲಿ!"

ಇದು ಮೇರು ವ್ಯಕ್ತಿತ್ವದ ಮೋತಿಲಾಲ್ ನೆಹರೂ ಅವರನ್ನು ಕಳೆದುಕೊಂಡ ಭಾರತಾಂಬೆಯ ಸ್ಥಿತಿಯನ್ನು ಕವಿ ಗ್ರಹಿಸಿರುವ ರೀತಿ.

ಇಲ್ಲಿ 'ಸ್ವಾತಂತ್ರ್ಯ ಹೋರಾಟ'ವನ್ನು 'ಯಜ್ಞ'ವೆಂದು ಕರೆದು ಅದಕ್ಕೊಂದು ಮಹತ್ತರ ಸ್ಥಾನ ಕೊಟ್ಟಿರುವುದು ವಿಶೇಷ. ವ್ಯಕ್ತಿಯೊಬ್ಬ ಭೂಮಿಯೊಳಗೆ ಅಜ್ಞಾತವಾಗಿದ್ದರೂ 'ಸ್ವಾತಂತ್ರ್ಯ ಹೋರಾಟ'ದ ಕಾವು ಕಡಿಮೆಯಾಗುತ್ತಿರಲಿಲ್ಲ. ಅಂತಹದರಲ್ಲಿ

"ಪಂಜರದೊಳಿದ್ದರೂ ಸಿಂಹದಂತೆಯೆ ಬಾಳಿ
ಗರ್ಜಿಸುತೆ ತೆರಳಿದ್ಯೆ ? ನಿನ್ನ ಆ ಬಲ್ಮೆಯುಲಿ
ನಮ್ಮನೂ ಕಲಿಮಾಡಿಹುದು".

ಹೀಗೆ ಮೋತಿಲಾಲರು ಬದುಕಿದ್ದ ಸಂದರ್ಭವನ್ನು ಕಟ್ಟಿಕೊಡುವುದರ ಮೂಲಕ ಒಬ್ಬ ವ್ಯಕ್ತಿಯ ಹೋರಾಟದ ಹಿರಿಮೆಯು ಎಲ್ಲರನ್ನು ಕವಿಯನ್ನಾಗಿಸಿರುವುದು ವಿಶೇಷವಾಗಿದೆ.

ಈ ಸಮಾಜದ ದುಃಸ್ಥಿತಿಯನ್ನು ಕಂಡು ಹಲವಾರು ಸುಧಾರಕರು ತತ್ವ ಸಿದ್ಧಾಂತದ ಕೆಲಸಗಳನ್ನು ಪರಿಣಾಮಕಾರಿಯಾಗಿ ಮಾಡಿದ್ದಾರೆ. ಅಂಥವರಲ್ಲಿ ಬುದ್ಧ, ಬಸವಣ್ಣ, ಶಂಕರಾಚಾರ್ಯ, ಶ್ರೀ ಅರವಿಂದರು, ಸ್ವಾಮಿ ವಿವೇಕಾನಂದರು ಕುವೆಂಪು ಕಾವ್ಯಗಳಲ್ಲಿ ವ್ಯಕ್ತಿಚಿತ್ರಗಳಾಗಿದ್ದಾರೆ. ಉತ್ತಮ ಸಮಾಜದ ನಿರ್ಮಾಣಕ್ಕಾಗಿ ಹಲವು ಸಂಗತಿಗಳು ಗತಿಸಿವೆ. ಪ್ರಸ್ತುತ ಸಂದರ್ಭದ ದುಃಸ್ಥಿತಿಗಳನ್ನು ಎದುರಿಸಲು ಆಗಿಹೋದ ಮಹನೀಯರನ್ನು ನೆನೆಯಿಸಿಕೊಳ್ಳುವ ಪರಿ ಸಹಜವಾದರೂ ಕುವೆಂಪು ಮಾತ್ರ ಎಲ್ಲರನ್ನು ವಿಶೇಷವಾಗಿ ನೆನಪಿಸಿಕೊಂಡು ನಮಸ್ಕರಿಸುತ್ತಾರೆ, ಆಹ್ವಾನಿಸುತ್ತಾರೆ, ಸಮಾಜಮುಖಿಯಾದ ಬಹುಪೂಜ್ಯ ಬೇಡಿಕೆಯನ್ನು ಇಡುತ್ತಾರೆ.

ಭಾರತದಲ್ಲಿ ಬುದ್ಧನ ಅನಿವಾರ್ಯತೆಯ ಬಗ್ಗೆ ಕುವೆಂಪು 'ಬುದ್ಧದೇವ'೨೫ ಕವಿತೆಯನ್ನು ಕಟ್ಟಿಕೊಡುವ ಮೂಲಕ ಬುದ್ಧನ ವ್ಯಕ್ತಿತ್ವವನ್ನು ಅನಾವರಣ ಮಾಡಿದ್ದಾರೆ. ಕವಿ ಕುವೆಂಪು ಬುದ್ಧನನ್ನು 'ಧ್ಯಾನಸ್ತಿಮಿತ ಮೂರ್ತಿ', 'ಪುಣ್ಯಮತಿ ಮೂರ್ತಿ' ಎಂದು ಕರೆಯುವ ಮೂಲಕ ಅವನ ಘನತೆಯನ್ನು ಇಮ್ಮಡಿಗೊಳಿಸಿದ್ದಾರೆ. ಪದ್ಯದ ಕೊನೆಯಲ್ಲಿ "ನರನ ಸನ್ಮತಿಗಿಂತ ಬೇರೆಯ ಜಗದ್ಗುರುವೆ?" ಎಂದು ಪ್ರಶ್ನಿಸುವ ಮೂಲಕ

ಮತಧರ್ಮದ ಕುಟಿಲ ಜಗದ್ಗುರುಗಳನ್ನು ತಿರಸ್ಕರಿಸಿದ್ದಾರೆ. ನರನ ಸನ್ಮತಿಗಾಗಿ ಬುದ್ಧನ ವಿಚಾರಗಳು ಅನಿವಾರ್ಯ ಎಂಬುದನ್ನು ಸೂಚಿಸುವ ಕವಿಗೆ 'ಮಾನವನ ಮೂರ್ಖತೆಯ ದಹಿಸುವ ಮಹಾಜ್ವಾಲೆ'ಯಾಗಿ ಬುದ್ಧ ಕಂಡುಬರುತ್ತಾನೆ.

'ಶ್ರೀ ಬಸವೇಶ್ವರರಿಗೆ'[೨೬] ಕವಿತೆಯಲ್ಲಿ ಬಸವಣ್ಣನನ್ನು 'ಕಾರ್ತಿಕದ ಕತ್ತಲಿನ ಆಕಾಶದೀಪ', 'ದೊಂದಿದಿಕ್ಕ', 'ಅಧ್ಯಾತ್ಮ ಕ್ರಾಂತಿವೀರ', 'ಧೀರಾವತಾರ', 'ಮಹಾತ್ಮ' ಎಂದು ಕರೆದು ಅವರ ವ್ಯಕ್ತಿತ್ವವನ್ನು ಇಮ್ಮಡಿಗೊಳಿಸಿದ್ದಾರೆ. ಈ ಮೂಲಕ ಬಸವಣ್ಣನ ಪ್ರೇರಣೆ, ಪ್ರಭಾವ ಮತ್ತು ಸಾರ್ಥಕ ಜೀವನದ ಸಾಧ್ಯತೆಯಿಂದ ಅವರ ವ್ಯಕ್ತಿತ್ವವನ್ನು ಅನಾವರಣ ಮಾಡುತ್ತಾರೆ. ಜೊತೆಗೆ

> ಭಕ್ತಿಗಂಗೆಯನೆರೆದು
> ಭಾಗವತ ಶಕ್ತಿಯಂ ಕರೆದು
> ಮತ ಮೌಢ್ಯದ ಜ್ಞಾನ ಪಂಕವನು ತೊಳೆದು
> ಶುಚಿಗೊಳಿಸು ವಿಜ್ಞಾನ ವೇದಾಂತ ತೀರ್ಥದಿಂದೆ!

ಎಂದು ಪ್ರಾರ್ಥಿಸುತ್ತಾರೆ.

ಕುವೆಂಪು ಅವರು ತಮ್ಮ ಕನಸಿನಲ್ಲಿ ಶಂಕರಾಚಾರ್ಯರ[೨೭] ಬಗ್ಗೆ ಕಂಡ ದರ್ಶನವನ್ನು ಕವಿತೆಯಾಗಿಸಿದ್ದಾರೆ. ಅದ್ವೈತ ಪ್ರತಿಪಾದನೆಯ ಹಿನ್ನೆಲೆಯಲ್ಲಿ ಮೂಡಿಬಂದಿರುವ ಕವಿತೆಯಲ್ಲಿ ಶಂಕರಾಚಾರ್ಯರ ಒಂದು ಬಗೆಗಿನ ವ್ಯಕ್ತಿತ್ವವನ್ನು ಅನಾವರಣ ಮಾಡಿದ್ದಾರೆ. 'ಮರಿಗೆ ಮೊಲೆಯನೂಡುವ ಕುರಿ'ಯ ಸನ್ನಿವೇಶದೊಂದಿಗೆ ಶಂಕರಾಚಾರ್ಯರನ್ನು ಸಮೀಕರಣ ಮಾಡುವ ಕುವೆಂಪುವಿಗೆ ಭಾವಉದ್ದೀಪನಗೊಳಿಸುವ ವ್ಯಕ್ತಿಯಾಗಿ ಕಂಡುಬರುತ್ತಾರೆ. ಈ ಮೂಲಕ ಅವರ ಅಧ್ಯಾತ್ಮತನವನ್ನು ಅನಾವರಣ ಮಾಡುತ್ತಾ ಅವರ ವ್ಯಕ್ತಿತ್ವದ ಭಾಗವೊಂದನ್ನು ಕವಿಯಾಗಿ ನಿರೂಪಿಸಿದ್ದಾರೆ.

ಸಾರ್ಥಕವಾದ ಆಲೋಚನಾ ಸಾಧ್ಯತೆಯ ಸ್ವೀಕಾರ ಸಂದರ್ಭಗಳು ವ್ಯಕ್ತಿಯೊಬ್ಬನ ಆಲೋಚನಾ ಪರಿಯನ್ನು ಪಕ್ವ ಮಾಡುತ್ತದೆ ಮತ್ತು ವಿಸ್ತರಿಸುತ್ತದೆ. ತನ್ನೊಳಗಿರುವ ದಾರ್ಶನಿಕ ದಿಕ್ಕನ್ನು ಸರಿಯಾದ ಪ್ರಮಾಣದಲ್ಲಿ ಸೂಚಿಸಿದ್ದೇ ಆದರೆ ಕೃತಜ್ಞತಾಭಾವ ಸಹಜವಾಗಿ ಸ್ಫುರಿಸುತ್ತದೆ. ಇಂತಹ ಹಿನ್ನೆಲೆಯಲ್ಲಿ ಕವಿ ಕುವೆಂಪು ಶ್ರೀ ಅರವಿಂದ ಘೋಷರ 'ದಿ ಲೈಫ್ ಡಿವೈನ್' ಕೃತಿ ಓದಿದ ನಂತರ ತಾನು ಕಂಡ ದಾರ್ಶನಿಕ ನೋಟವನ್ನು, ತನ್ನೊಳಗಿನ ಅರಿವಿನ ಆಲಯವನ್ನು ಶ್ರೀಮಂತಗೊಳಿಸಿದ್ದರ ಹಿಂದೆ ಧನ್ಯತಾಭಾವವನ್ನು ಸಮರ್ಪಿಸಿದ ರೀತಿ ಶ್ರೀ ಅರವಿಂದರಿಗೆ[೨೮] ಕವಿತೆ.

ಇಲ್ಲಿ 'ದಿ ಲೈಫ್ ಡಿವೈನ್' ಕೃತಿ ಬಗೆಗಿನ ವೈಶಿಷ್ಟ್ಯದ ಜತೆಗೆ ಶ್ರೀ ಅರವಿಂದರನ್ನು 'ಪೂರ್ಣಯೋಗೀಂದ್ರ' ಎಂದು ಕರೆದು ಅವರ ಘನತೆಯನ್ನು ಉನ್ನತೀಕರಿಸಿದ್ದಾರೆ.

ಪ್ರಾಚ್ಯ ಪಾಶ್ಚಾತ್ಯ ತತ್ತ್ವಜ್ಞಾನ ಖನಿಗಳಲಿ
ತೊಳತೊಳಲಿ ಹುಡುಕಿ ಬಹುವಜ್ರಗಳನಾಯ್ದು ನಾಂ
ಶ್ರೀಮಂತನಾಗಿರ್ದೊಡಂ, ಹೇ ಪೂರ್ಣ ಯೋಗೀಂದ್ರ
ಕೊನೆಗೆ ನಿನ್ನೀ ಮೇರುಕೃತಿಯ ದರ್ಶನದ ಶಿರದ
ಮೇರುವುನ್ನತಮತಿಯ ಮಾನಸ ಸರೋವರದಿ
ಪೂರ್ಣ ತೃಪ್ತಿಯನೀಂಟೆ ಶಾಂತವಾದುದು ನನ್ನ
ಧೀತೃಷ್ಣೆ"

ಹೀಗೆ ಹೇಳುವ ಮೂಲಕ ತನ್ನೊಳಗಿನ ಮಾನಸ ಸರೋವರದ ಪೂರ್ಣತೃಪ್ತಿಯ ಸಾಧ್ಯತೆಯನ್ನು ಶಾಂತಚಿತ್ತದಿಂದ ಪರಿಚಯಿಸಿದ್ದಾರೆ.

'ಶ್ರೀ ರಾಮಕೃಷ್ಣ ಪರಮಹಂಸ'ರ ಜೀವನ ಚರಿತ್ರೆಗೆ ಬಿ.ಎಂ.ಶ್ರೀ ಅವರು ಮುನ್ನುಡಿ ಬರೆಯುವಾಗ, "ಪರಮಹಂಸರ ಮಹಾಪ್ರಭಾವದಿಂದಲೂ ದಿವ್ಯಚರಿತ್ರೆಯಿಂದಲೂ ಘನವಾದ ಉಪದೇಶ ಸಾರಾವಳಿಯಿಂದಲೂ ಕನ್ನಡಿಗರಲ್ಲಿ ಧರ್ಮಸಮನ್ವಯ ಬುದ್ಧಿಯೂ ವಿಶಾಲ ಹೃದಯವೂ ವೀರಚೈತನ್ಯವೂ ಉಂಟಾಗಬೇಕೆಂಬುದೇ ನಮ್ಮ ಆಶಯ"೨೯ ಎಂದು ಹೇಳುತ್ತಾರೆ. ಈ ವಿಚಾರ ಕುವೆಂಪು ಅವರ ಬದುಕಿನಲ್ಲಿ, ಅವರ ಆಲೋಚನೆಯಲ್ಲಿ ಸಾಬೀತಾಗಿದೆ. "ನಿನ್ನ ಪದಕಮಲದಲಿ ಮನೆ ಮಾಡಿರುವ ನನಗೆ ಆ ಸ್ಥಾನ ಈ ಸ್ಥಾನ ಎಲ್ಲವಾಸ್ಥಾನ!" ಎಂದು ಹೇಳುವ ಕುವೆಂಪು "ಗುರುದೇವನಿಗೆ"೩೦ ಎಂಬ ಕವಿತೆಯನ್ನು ಬರೆಯುವ ಮೂಲಕ ಪರಮಹಂಸರ ವ್ಯಕ್ತಿತ್ವಕ್ಕೆ ಶಿಷ್ಯ ಕಾಣಿಕೆಯನ್ನು ನೀಡಿದ್ದಾರೆ. ಜೊತೆಗೆ ಇವರನ್ನು 'ಸಮನ್ವಯಮೂರ್ತಿ' ಎಂದು ಕರೆದು 'ಗುರುವಿನೊಡನೆ ದೇವರಡಿಗೆ' ಹೋಗಲು ಆಧ್ಯಾತ್ಮಿಕ ವಿಭೂತಿ ಪುರುಷರ ವ್ಯಕ್ತಿತ್ವವನ್ನು ತನ್ನೊಳಗೆ ಒಂದಾಗಿಸಿಕೊಂಡಿದ್ದಾರೆ.

ಒಬ್ಬ ಮಹಾನುಭಾವನ ವ್ಯಕ್ತಿತ್ವವನ್ನು ನಿರೂಪಿಸುವಾಗ ಆ ಮಹಾನುಭಾವರ ಘನತೆ ಹೆಚ್ಚುತ್ತ ಹೊರತು ಎಂದಿಗೂ ಕಮ್ಮಿ ಆಗುವುದಿಲ್ಲ. ನಿರೂಪಿಸುವವರ ವ್ಯಕ್ತಿತ್ವವೂ ಕೂಡ. ಅಂತೆಯೇ 'ಸ್ವಾಮಿ ವಿವೇಕಾನಂದ'ರ ವ್ಯಕ್ತಿತ್ವವನ್ನು ಕುವೆಂಪು 'ಸ್ವಾಮಿ ವಿವೇಕಾನಂದ'೩೧ ಪದ್ಯದಲ್ಲಿ ಬಹಳ ಸಹಜವೆನ್ನುವ ರೀತಿಯಲ್ಲಿ ತೆರೆದಿಟ್ಟಿದ್ದಾರೆ. 'ಗುರುವರ', 'ನವಯುಗ ಆಚಾರ್ಯ', 'ವೀರ ವೇದಾಂತಿ', 'ಸಾದುಭೈರವ', 'ಸ್ಥೈರ್ಯದ ಅಚಲ', 'ಧೈರ್ಯದ ಅಂಬುಧಿ, 'ಮೇರು ಸನ್ಯಾಸಿ', 'ದಿವ್ಯಾತ್ಮ', 'ಬುದ್ಧಿಭೈರವ'

ಹೀಗೆ ಕುವೆಂಪು ಅವರು ಸ್ವಾಮಿ ವಿವೇಕಾನಂದರನ್ನು ಕೊಂಡಿದ್ದಾರೆ. "ರಾಮಕೃಷ್ಣರ ಭೀಮಶಿಷ್ಯನೆ, ಭಾರತಾಂಬೆಯ ಧೀರಪುತ್ರನೆ" ಎಂದು ಹೇಳುವಾಗ ತಾಯಿನೆಲ ಮತ್ತು ಜೀವನ ಮಾರ್ಗದ ಶ್ರೇಷ್ಠತೆಯನ್ನು ತಿಳಿಸಿದ್ದಾರೆ. "ಭರತಖಂಡದ ನಂದಿದಿದ್ದಲಿಗಿತ್ತೆ ತೇಜವನು" ಎಂದಾಗ, "ನಮ್ಮ ಹೊಸ ಪ್ರಪಂಚದ ಪ್ರಶ್ನೆಗಳಿಗೆ ಉತ್ತರಕೊಟ್ಟು ಬಾಳುವಷ್ಟು ಜೀವಾಳವು ಪುರಾತನವಾದ ಹಿಂದೂಮತದಲ್ಲಿರುವುದೇ?"೩೨ (ಮುನ್ನುಡಿ, ಡಿ.ವಿ.ಜಿ.) ಎಂಬ ಪ್ರಶ್ನೆಗೆ ಉತ್ತರವು ಸಿಕ್ಕುತ್ತದೆ.

ಇಪ್ಪತ್ತನೇ ಶತಮಾನದ ಶ್ರೇಷ್ಠ ಕ್ರಾಂತಿಕಾರರಲ್ಲಿ ಲೆನಿನ್ ಕೂಡ ಒಬ್ಬ. ಇವನು ಸೋವಿಯತ್ ಯೂನಿಯನ್‌ನ ಸ್ಥಾಪಕ. ರೈತರು ಮತ್ತು ಕಾರ್ಮಿಕರನ್ನು ಸಂಘಟಿಸಿದವನು. ಸಮತಾವಾದವನ್ನು ಪ್ರತಿಪಾದಿಸಿದವನು. ಇಂಥವನ ವ್ಯಕ್ತಿತ್ವವನ್ನು ಕುರಿತು ಕವಿ ಕುವೆಂಪು ಲೆನಿನ್೩೩ ಕವಿತೆಯಲ್ಲಿ ತಮ್ಮದೇ ಅಭಿಪ್ರಾಯವನ್ನು ಕಾವ್ಯಭಾಷೆಯಲ್ಲಿ ನುಡಿದಿದ್ದಾರೆ.

"ದಮನಿಯಲಿ ಬಿಸಿನೆತ್ತರುಕ್ಕದೆ ನೆನೆಯಲಾರೆ
ನಿನ್ನಂ, ಲೆನಿನ್!"

ಹೀಗೆ ನೆನಪಿಸಿಕೊಳ್ಳುವಾಗ ಆ ವ್ಯಕ್ತಿ ಮಾಡಿರುವ ಸಾಮಾಜಿಕ ಚಮತ್ಕಾರಗಳ ಪ್ರಭಾವದ ತೀವ್ರತೆ ಜಗತ್ತಿನಾದ್ಯಂತ ಹೇಗಿತ್ತು ಎಂಬುದು ತಿಳಿಯುತ್ತದೆ. ಸಾಮಾನ್ಯವಾಗಿ ಕ್ರಾಂತಿಕಾರರ ವ್ಯಕ್ತಿಗಳು ಈ ನೆಲದ ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವಕ್ಕೆ ಹೋರಾಡಿದ್ದಾರೆ. ಕೆಲವರು ಮಂದವಾಗಿಯಾದರೂ, ಇನ್ನೂ ಕೆಲವರು ತೀವ್ರಗಾಮಿಯಾದರೂ ಆಗಿರಬಹುದು. ಹೋರಾಟದ ಪ್ರಬಲ ಶಕ್ತಿಯು ಅವರು ಆಲೋಚಿಸುವ ಸಂಗತಿಗಳಲ್ಲಿದೆ. ಕುವೆಂಪು ಲೆನಿನ್‌ನನ್ನು ಕಲ್ಕಿ ಅವತಾರದೊಂದಿಗೆ "ಈ ತರತಮವನೆಲ್ಲ ಮುರಿಯೆ ಬಹನಲ್ಲಲ್ಲಿ ಕಲ್ಕಿ" ಎಂದು ಗುಣಗಾನ ಮಾಡುವಾಗ, ಲೆನಿನ್ ದುಡಿವ ದೀನರಿಗೆ ದೈವ, ಅನ್ಯರಿಗೆ ಯಮದಂಡನಾಗುತ್ತಾನೆ. ಈ ಮೂಲಕ ಸಾಮಾಜಿಕ ಕ್ರಾಂತಿಕಾರನ ಪ್ರತಿ ಸಂದರ್ಭದ ತೀವ್ರತೆಯನ್ನು ಕವಿ ಗಮನಿಸಿರುವುದು ಬಹಳ ಮುಖ್ಯ ಸಂಗತಿ.

ಕವಿ ಕುವೆಂಪು ಅಶೋಕ ಚಕ್ರವರ್ತಿ೩೪ಳಯನ್ನು ನೋಡಿರುವ ದೃಷ್ಟಿಕೋನ ವಿಶಿಷ್ಟವಾದದ್ದು. ಸಾಮಾನ್ಯವಾಗಿ ಒಬ್ಬ ರಾಜನೆಂದರೆ 'ಗರುಡಗಹಿ' ಇದ್ದಂತೆ ಇರುವನು. ಮೃದು ಸ್ವಭಾವದ ಮಾನವೀಯ ಗುಣಗಳು ಕ್ಷತ್ರಿಯರಲ್ಲಿ ಇರುವುದು ವಿರಳ. ಆದರೆ ರಾಜ ಅಶೋಕ ಇದನ್ನು ಮೀರಿದವನು. "ದಿವಿಜರ್ಗೆ ಪ್ರಿಯನೆ ಹೇ ಚಕ್ರವರ್ತಿ ಅಶೋಕ" ಅಂದರೆ ದೇವನಾಂಪ್ರಿಯನಾದ ಅಶೋಕನು ಶೋಕ ಸಾಗರದಿ

ಮುಳುಗುವನು. ಆದರೆ 'ಕಾಲನದಿ ಕೊಚ್ಚಿಬರೆ ಏನುಳಿಯುವುದು ಕೊನೆಗೆ?' ಎಂಬರ್ಥದಲ್ಲಿ ಅಶೋಕನ ಜತೆ ಅಲೆಕ್ಸಾಂಡರ್ ಕೂಡ ನೆನಪಾಗುತ್ತಾನೆ.

"ಜಯವಿದ್ದು, ಬಲವಿದ್ದು, ಜಯಿಸೆ ದೇಶಗಳಿದ್ದು,
ಮೈತ್ರಿಯಿಂ ಮೃದುವಾಯ್ತು ತವ ವಜ್ರಶಕ್ತಿಗದೆ !
ರಾಜನಾಗಿದ್ದರೇಂ ? ನೀಂ ದಿಟದ ರಾಜಋಷಿ !
ಯುದ್ಧರುಜೆಗೆಂದೆಂದಿಗೂ ನೀನರಸು ಮದ್ದು!"

ಎಲ್ಲವೂ ಇದ್ದು, ಏನೂ ಬೇಡ ಶಾಂತಿ ಬೇಕು ಎನ್ನುವಾಗ, ಯುದ್ಧವೆಂಬ ಘನಘೋರ ರೋಗಕ್ಕೆ ಅಶೋಕ ಚಕ್ರವರ್ತಿ ಮದ್ದಾಗಿರುವುದು ಶಾಂತಿಯ ಬಹುದೊಡ್ಡ ಸಂಕೇತವಾಗಿ ಕಂಡುಬರುತ್ತಾನೆ.

ಜಗತ್ತಿನ ಅದ್ಭುತಗಳಲ್ಲಿ ಗೋಮಟೇಶ್ವರನ ಏಕಶಿಲಾಮೂರ್ತಿಯು ಎಲ್ಲರ ಗಮನ ಸೆಳೆಯುವಂತಹುದು. ಇಂಥಹ ಸುಂದರ ಸಂರಚನೆಗೆ ಮನಸೂರೆಗೊಳ್ಳದಿರುವವರೇ ಇಲ್ಲ. ಕುವೆಂಪು ಗೋಮಟೇಶ್ವರ ವಿಗ್ರಹಕ್ಕೆ ಜೀವತುಂಬಿದ್ದಾರೆ. ಸುದೀರ್ಘವಾದ ವರ್ಣನೆಯುನ್ನು ಹೊಂದಿರುವ ಗೋಮಟೇಶ್ವರಃಗೆ ಕವಿತೆಯಲ್ಲಿ ಬಾಹುಬಲಿಯ ದೃಢಭಂಗಿಯನ್ನು ಕೊಂಡಾಡಿದ್ದಾರೆ. "ಯಾವ ಶಾಂತಿ ನಿನ್ನ ಹೃದಯವನೊಲಿದು ನಿತ್ಯತೆಯ ನೀಡಿತ್ತೆ ಕಾಲದಾ ಕೋಟಲೆಯ ಸಹಿಸುವಂತೆ?" ಎಂದು ಪ್ರಶ್ನಿಸುವ ಮೂಲಕ ಬಾಹುಬಲಿಯ ತಾಳ್ಮೆಯ ಪರಿಶ್ರಮವನ್ನು ಶಾಂತಿಯ ದ್ಯೋತಕವೆಂದೇ ಭಾವಿಸಿದ್ದಾರೆ. ಕೇವಲ ಗೋಮಟೇಶ್ವರನಿಗಷ್ಟೇ ಇಲ್ಲಿ ಸ್ಥಾನವಿಲ್ಲ. ಅದರ ಶಿಲ್ಪಿಗೂ ಧನ್ಯತಾ ಭಾವವನ್ನು ಸಮರ್ಪಿಸಿದ್ದಾರೆ.

"ಕೆತ್ತಿದೈ ತಾಳ್ಮೆಯಿಂ : ಸಾಧನೆಯದು;
ಶ್ರೀ ಗೋಮಟೇಶ್ವರನ ವಿಗ್ರಹವ ಪೂರೈಸೆ
ಬ್ರಹ್ಮಸಾಕ್ಷಾತ್ಕಾರಮಾಯ್ತು ನಿನಗೆ !"

ಎಂದು ಹೇಳುವುದರ ಜೊತೆಗೆ

"ನಿನ್ನ ಸಿದ್ಧಿಗೆ ಪಿರಿದಾದವುದೈ, ಶಿಲ್ಪಿಸಿದ್ಧ?
ನೀನೆ ಜೀವನ್ಮುಕ್ತ ! ನಿನ್ನದೈ ಬ್ರಹ್ಮಯೋಗಂ !"

ಎಂದು ಹಾಡಿ ಕೊಂಡಾಡಿದ್ದಾರೆ.

"ಟರ್ಕರ ಮೂಲಕ್ಕೆ ಸೇರಿದ ಅಲಪ್ತಗೀನ್ (೯೬೩-೯೭೭)ನ ಅಳಿಯನಾದ ಸಬಕ್ತಗೀನ್ (೯೭೭-೯೯೭) ಪ್ರಸಿದ್ಧ ಮಹಮ್ಮದ್ ಘಜ್ನಿಯ ತಂದೆ. ಇವನು ಯಾಮಿನಿ ಅಥವಾ ಘಜ್ನಿ ವಂಶಕ್ಕೆ ತಳಪಾಯ ಹಾಕಿದವನು. ಷಾಹಿಯಾ ದೊರೆ ಜಯಪಾಲನ ಪ್ರಾಂತ್ಯಗಳನ್ನು ಆಕ್ರಮಿಸಿದವನು. ತನ್ನ ವೈರಿಯ ನಾಡನ್ನು ಖಡ್ಗದ

ಪಾಲುಮಾಡಿ ಸಿಕ್ಕಿದ ಸ್ಥಳಗಳನ್ನು ಸುಟ್ಟುಹಾಕಿ ಲಂಘಾನದ ಸುತ್ತಮುತ್ತಣ ಜಿಲ್ಲೆಗಳನ್ನು ವಶಪಡಿಸಿಕೊಂಡನು".[೩೬] ಇಂಥ ವ್ಯಕ್ತಿತ್ವದ ರಾಜನ ಇನ್ನೊಂದು ವ್ಯಕ್ತಿತ್ವವನ್ನು ಕವಿ ಕುವೆಂಪು ಸಬಕ್ತಗೀನ್[೩೭] ಕವಿತೆಯ ಮೂಲಕ ಪರಿಚಯಿಸಿದ್ದಾರೆ. ಕರುಣೆಗೊಂದು ಕೋಡು, ಎದೆಯ ಒಲುಮೆಗೆ ಬೀಡು; ಕವಿಗಳಿಗೆ ಪಾಡು ಆದ ಸಬಕ್ತಗೀನ್‌ನ ವ್ಯಕ್ತಿತ್ವವನ್ನು ನವಿರು ಭಾವನೆಗಳೊಂದಿಗೆ ವ್ಯಕ್ತಪಡಿಸಿದ್ದಾರೆ.

ಸಬಕ್ತಗೀನ್ ಇಲ್ಲಿ ಒಬ್ಬ ಬೇಂಟೆಗಾರ. ತನ್ನ ಕುದುರೆಯೊಂದಿಗೆ ಬಳಲಿ ದಾಹ ತೀರಿಸಿಕೊಳ್ಳಲು ನೀರು ಕುಡಿದು, ಬೇಟೆಯ ನಿರೀಕ್ಷೆಯಲ್ಲಿದ್ದನು. ತಾಯಿ ಮತ್ತು ಮರಿ ಜಿಂಕೆ ಬೇಂಟೆಯ ಕಣ್ಣಿಗೆ ಬೀಳಲು ತಾಯಿ ಜಿಂಕೆ ಓಡಿಹೋಯಿತು. ಮರಿಜಿಂಕೆ ಸಿಕ್ಕಿತು. ಆದರೆ ಸಬಕ್ತಗೀನ್‌ನ ಮನಸ್ಸು, ಮರುಕಕ್ಕೆ ಒಳಗಾಯಿತು. 'ಕರುಣೆಯೇ ದೇವರು, ಕಣ್‌ಪನಿಯೇ ತೀರ್ಥವೆಂದು', ತನ್ನ ಎದೆಯೊಳಗೆ ಬೇಂಟೆಯನ್ನು 'ಬೇಡ'ವೆಂದು ತೀರ್ಮಾನಿಸಿ ಕರುಣೆಯೊಳಗೆ ನೆಲೆಸಿದನು. ಮರಿಯನ್ನು ತಬ್ಬಿ ಮುತ್ತುಕೊಟ್ಟು, ಹಣೆಗೆ ಹಣೆಯನಿಟ್ಟು

'ಬಾರ ತಾಯೆ, ನಿನ್ನ ಬೇಡಿ
ದಿದೋ ಮರಿಯ ಕೊಟ್ಟಪೆನ್ !
ಇಗೋ ಮಗುವ ಬಿಟ್ಟಪೆನ್ !

ಎಂದು ಮರಿಜಿಂಕೆಯನ್ನು ಬಿಟ್ಟನು. ತಾಯಿ ಜಿಂಕೆ 'ತಿರೆಯನಾಳ್ವನಕ್ಕೆ' ಎಂದು ಪರಕೆಗೈದು ಹೋಯಿತು. ಇಂಥ ಬದಲಾವಣೆ ಹೃದಯದಲ್ಲಿ ಸಂಭವಿಸಿದರೆ ಮಾತ್ರ ಸಾಧ್ಯ. ಇಂಥ ವ್ಯಕ್ತಿತ್ವದ ಸಬಕ್ತಗೀನ್‌ನ್ನು ಕುವೆಂಪು ಪರಿಚಯಿಸುವ ರೀತಿಯು ವ್ಯಕ್ತಿಯೊಬ್ಬನು ಇನ್ನೊಬ್ಬ ವ್ಯಕ್ತಿಯ ಮೇಲೆ ಇಟ್ಟಿರುವ ಗ್ರಹಿಕೆಯ ಸ್ವಭಾವವನ್ನು ಬದಲಾಯಿಸುವುದಂತು ಖಂಡಿತ.

ರಾಮಾಯಣದ ಅದೆಷ್ಟೋ ಪಾತ್ರಗಳು ಮುನ್ನೆಲೆಗೆ ಬಾರದೆ ಸತ್ವಪೂರ್ಣ ವ್ಯಕ್ತಿತ್ವದೊಂದಿಗೆ ಒಳಗೆ ಅಡಗಿ ಕುಳಿತಿವೆ. ಅಂತಹ ಪಾತ್ರಗಳಲ್ಲಿ ಊರ್ಮಿಳಾ ದೇವಿಯೂ ಒಬ್ಬಳು. ಕುವೆಂಪು 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯದ 'ಅಯೋಧ್ಯಾ ಸಂಪುಟಂ'ದಲ್ಲಿ 'ಊರ್ಮಿಳಾ' ಎಂದು ಒಂದು ಸಂಚಿಕೆಯನ್ನೇ ಬರೆದಿದ್ದಾರೆ. ಆದರೆ ಈ ಮಹಾಕಾವ್ಯಕ್ಕೂ ಮುನ್ನ (೧೩.೯.೧೯೩೯) 'ಊರ್ಮಿಳಾ ದೇವಿ'[೩೮] ಕವಿತೆ ಬರೆದು ಊರ್ಮಿಳೆಯ ವ್ಯಕ್ತಿತ್ವಕ್ಕೆ ಪ್ರತ್ಯೇಕ ಸ್ಥಾನ ಕೊಟ್ಟಿದ್ದಾರೆ. ಇಲ್ಲಿ ಇವಳನ್ನು 'ಅಮೃತ ಶಿಲ್ಪಕೃತಿ', 'ಪೂರ್ಣಸತಿ', 'ತಪಶ್ಶೀಲೆ', 'ಗೋಚರಾತೀತೆ' – ಹೀಗೆ ವಿಭಿನ್ನವಾಗಿ ಕರೆದು ಅವಳ ವ್ಯಕ್ತಿತ್ವಕ್ಕೆ ಘನತೆಯನ್ನು ತಂದಿದ್ದಾರೆ.

"ರಾಮಾಯಣದ ಮಹಾರತ್ನವೇದಿಯ ಮೇಲೆ,

ಮೂಲೆಯಲಿ, ನಿಂತಿರುವುದೊಂದಮೃತ ಶಿಲ್ಪಕೃತಿ"
– ಎಂದು ಹೇಳುತ್ತಲೆ, ಮಹಾಕಾವ್ಯದಲ್ಲಿ ಒಂದು ಸಂಚಿಕೆಯಾಗಿ ರೂಪಿಸಿ ಮೂಲೆಯಲ್ಲಿದ್ದ ಅಮೃತಶಿಲ್ಪ ಕೃತಿಯೊಂದನ್ನು ಕೇಂದ್ರಕ್ಕೆ ತಂದು ಮೇಳೈಸಿರುವುದು ವಿಶೇಷ.

ಮಹಾಭಾರತದ ಕಲಿ ಭೀಮನನ್ನು 'ಹಂಪೆಯ ಭೀಮ'೩೯ ಪದ್ಯದಲ್ಲಿ ಕೊಂಡಾಡಿರುವ ಕವಿ ಕುವೆಂಪು ಅವರ ಕಾವ್ಯಶಕ್ತಿಯು ಧೀಮಂತ ದೃಷ್ಟಿಯಾಗಿದೆ. ನಮ್ಮ ನಾಡಿನ ಕಲಾಕೃತಿಗಳನ್ನು ನೋಡಿ ಸವಿಯುವ ಸೂಕ್ಷ್ಮಪ್ರಜ್ಞೆ ಕುವೆಂಪು ಅವರಿಂದ ಕಲಿಯಬೇಕಿದೆ. ಹಾಳು ಹಂಪೆಯೆಂದು ಹೆಸರಾಗಿರುವ ಹಂಪೆಯನ್ನೂ ಅಲ್ಲಿನ ಕಲಾಕೃತಿಗಳನ್ನೂ ಕಾವ್ಯವಾಗಿಸುವ ಜಾಣ್ಮೆ ಕವಿಗಳ ಜವಾಬ್ದಾರಿ. 'ಹಂಪೆಯ ಭೀಮ' ಕವಿತೆಯು ಏಕಕಾಲಕ್ಕೆ ಭೀಮನ ಎರಡು ಗುಣಶೀಲ ಶಕ್ತಿಗಳನ್ನು ಅನಾವರಣ ಮಾಡುತ್ತಲೇ, ವೀರತ್ವವಿರುವ ಭೀಮನನ್ನು ಕವಿ ಮನಸ್ಸು ಬಯಸುತ್ತದೆ. ಇಲ್ಲಿ ಭೀಮನ ವ್ಯಕ್ತಿತ್ವವೊಂದು ಕಲಾಕೃತಿಯಲ್ಲಿ ಸ್ಥಗಿತವಾಗಿರುವುದು ರಸಾಭಿಜ್ಞನಿಗೆ ಸಹಿಸಲಾರದ ಸಂಗತಿಯಾಗಿದೆ. ಒಪ್ಪಿಕೊಂಡಿರುವ ಗುಣಕ್ಕಿಂತ ಬೇರೆ ತರನಾದ ಗುಣವೊಂದರ ಅನಾವರಣವನ್ನು ಒಪ್ಪಿಕೊಳ್ಳದಿರುವುದು ಸಹೃದಯನೊಬ್ಬನ ಅನಂಗ ಸಾಂಗತ್ಯವಾಗಿದೆ. ಹಂಪೆಯ ಭೀಮನು ಕೋಟೆಯ ಹೆಬ್ಬಾಗಿಲಲಿ ಬಿಸುಸುಯ್ಯುತ್ತಿರುವವನು. ಕಂಬನಿಯ ಕರೆಯುತ್ತ ಮೂಕನಾಗಿರುವನು. ಧರಣಿಪರು, ಮಂತ್ರಿಗಳು, ಸೈನಿಕರು, ಕಬ್ಬಿಗರು ಬಿಟ್ಟು ಅಳಿದ ಪಾಳ್ ನೆಲವನ್ನು ಕಲ್ಲಾಗಿ ನಿಂತು ಕಾಯುತ್ತಿರುವವನು. ಇದರಿಂದ ಗ್ರಹಿತ ಮನಸ್ಸಿನ ಒಪ್ಪುಗಾರಿಕೆ ಇಲ್ಲಿ ಶೂನ್ಯ. ಆದರೆ ಭೀಮನೆಂದರೆ ಕಂಬನಿಯ ಕರೆವ ಭೀಮನಲ್ಲ! ಜಯಮತ್ತ ರುದ್ರ ಮಾರುತಿ ಅವನು. ಇಂಥವನ ಬದಲಾವಣೆಗೆ ಕವಿ ಮನಸ್ಸು ; ಹೇ ವೀರ ಮೂರ್ತಿಯೇ .... ಯಾತ್ರಿಕರ ಹೃದಯದಲಿ ಕೆಚ್ಚೂರಿ, ನೆಚ್ಚೂರಿ, ಹೆಂಬೇಡಿಗಳನೆಲ್ಲ ನಿನ್ನೆಡೆಗೆ ಗೆಲ್ಲು !" ಎಂದು ಹುರಿದುಂಬಿಸುತ್ತದೆ.

ತನ್ನ ಬಗೆಗೆ ತಾನೇ ಕವಿತೆ ಬರೆದುಕೊಳ್ಳುವುದು ಕಾವ್ಯಾತ್ಮಕಥೆಯ ಭಾವಸ್ವರೂಪ. ಆಧುನಿಕ ಕನ್ನಡ ಸಾಹಿತ್ಯ ವಲಯದಲ್ಲಿ ಇಂತಹ ಧೈರ್ಯ ಮಾಡಿರುವುದು ಕುವೆಂಪು ಒಬ್ಬರೇ. ಗದ್ಯಾತ್ಮಕ ಬರೆವಣಿಗೆಯೊಂದಿಗೆ ತನ್ನ ಬದುಕನ್ನು ನಿರೂಪಿಸುವ ಹಲವಾರು ಸಾಹಿತಿಗಳ ನಡುವೆ ಕುವೆಂಪು ಕಾವ್ಯಾತ್ಮಕ ಸನ್ನಿವೇಶವನ್ನು ನಿರ್ಮಾಣ ಮಾಡಿದ್ದಾರೆ. 'ಕುವೆಂಪು' ಎಂಬ ತಮ್ಮದೇ ಕಾವ್ಯನಾಮದಲ್ಲಿ ಕುವೆಂಪು೪೦ ಎಂಬ ಕವಿತೆಯನ್ನು ಬರೆದಿರುವ ಪುಟ್ಟಪ್ಪನವರು, ತಮ್ಮ ವ್ಯಕ್ತಿತ್ವವನ್ನು ಪ್ರಕೃತಿಯೊಂದಿಗೆ ವಿಲೀನಗೊಳಿಸಿ ಭಾವೈಕ್ಯ ಮೆರೆದಿದ್ದಾರೆ.

"ಎಲ್ಲವೊಂದುಗೂಡಲೆಂದು
ವಿಧಿಯ ಮನಸು ಕಡೆದ ಕನಸು
ಕಾಣ್ಬ ಕಣಸೆ, ಕಾಣ್ : ಕುವೆಂಪು!"

ಇಲ್ಲಿ ಕುವೆಂಪು ಎಂಬ ಅಪರೂಪದ ವ್ಯಕ್ತಿತ್ವವು ಭಾವೈಕ್ಯ ಸಂಬಂಧಿ ದರ್ಶನವನ್ನು ಒಳಗೊಂಡಿದೆ. ಜತೆಗೆ

ಭಕ್ತಿಯಡಿಯ ಹುಡಿ – ಕುವೆಂಪು !
ಗುರುಹಸ್ತದ ಕಿಡಿ – ಕುವೆಂಪು !
ನುಡಿರಾಣಿಯ ಗುಡಿ – ಕುವೆಂಪು !
ಸಿರಿಗನ್ನಡ ಮುಡಿ – ಕುವೆಂಪು !
ಇರ್ದುಮಿಲ್ಲದೀ ಕುವೆಂಪು !

ಹೀಗೆ ಹೇಳುವ ಮೂಲಕ ಪುಟ್ಟಪ್ಪನವರು ತನ್ನತನದ ಅರಿವಿನ ಮಿತಿಯನ್ನು ಕಾವ್ಯಾತ್ಮಕವಾಗಿ ಅನಾವರಣ ಮಾಡಿದ್ದಾರೆ. 'ನಿನ್ನ ನೀ ತಿಳಿ' ಎನ್ನುವ ಮಾತಿನ ಹಿನ್ನೆಲೆಯಲ್ಲಿ ಕುವೆಂಪು ತನ್ನ ವ್ಯಕ್ತಿತ್ವವನ್ನು 'ಹಲವು ವ್ಯಕ್ತಿತ್ವಗಳ ಒಂದು ರೂಪು' ಎಂದು ಹೇಳುತ್ತಲೆ ಅಂತಹ ವ್ಯಕ್ತಿತ್ವ ಇಲ್ಲದ ಕುವೆಂಪು, ಕುವೆಂಪುವೇ ಅಲ್ಲ ಎಂಬ ಬದುಕಿನ ಘನಪ್ರಸಾದವನ್ನು ನೆನೆದಿದ್ದಾರೆ.

ಹೀಗೆ ಕುವೆಂಪು ಅವರು ಕವಿ ಸಹಜವಾದ ವಾಣಿಯಿಂದ ಮಹಾನುಭಾವರಾದ ಮಹನೀಯರ ವ್ಯಕ್ತಿತ್ವವನ್ನ ಕವಿತೆಗಳ ಮೂಲಕ ತೆರೆದಿಟ್ಟಿದ್ದಾರೆ. ಇಲ್ಲಿರುವ ಪ್ರತಿ ವ್ಯಕ್ತಿ ಚಿತ್ರಕಾವ್ಯಗಳಲ್ಲಿ ಯಾವುದೇ ಅತಿರೇಕದ ರಂಜನೀಯ ಸಾಲುಗಳಿಲ್ಲ. ವ್ಯಕ್ತಿಯ ವ್ಯಕ್ತಿತ್ವಕ್ಕೆ ತಕ್ಕಂತಹ ಆಣಿಮುತ್ತುಗಳನ್ನು ಜೋಡಿಸಿ, ಸಾಮಾನ್ಯ ಮತ್ತು ಅಸಾಮಾನ್ಯ ಮಹನೀಯರನ್ನು ಪರಿಪಕ್ವ ರೀತಿಯಲ್ಲಿ ಸಹೃದಯನಿಗಾಗಿ ವ್ಯಕ್ತಿಚಿತ್ರ ಕವಿತೆಗಳನ್ನು ಸಂರಚಿಸಿದ್ದಾರೆ. ಒಟ್ಟಿನಲ್ಲಿ ಮಹನೀಯರ ಬಗೆಗಿನ ಇವರ ಭಾವಪ್ರಪಂಚದಲ್ಲಿನ ಭಕ್ತಿ, ಪ್ರೀತಿ, ಸ್ನೇಹ, ಸೆಳೆತಗಳ ಗೋಪುರವು ಕವಿತೆಗಳಲ್ಲಿ ಮೂರ್ತಿಭವಿಸಿದೆ.

* * * *

ಕೊನೆಟಿಪ್ಪಣಿಗಳು

೧. ಉದಾಹರಣೆಗೆ, ಹಲ್ಮಿಡಿ ಶಾಸನದ ಎರಡನೇ ಸಾಲು
ನಮಃ ಶ್ರೀಮತ್ಕದಂಬಪನ್ತ್ಯಾಗಸಂಪನ್ನನ್ಕಲಭೋರ (ನಾ) ಅರಿಕ ಕುಸ್ಥಭಟ್ಟೋರನಾಳೆ
ಅರ್ಥ : ನಮಸ್ಕಾರ, ಕದಂಬರ ಒಡೆಯನೂ ತ್ಯಾಗಗುಣ ಸಂಪನ್ನನೂ,

ಕಲಭೋರನ ಶತ್ರುವೂ ಆದ ಶ್ರೀಮತ್ ಕುಕಸ್ಥ ಭಟ್ಟೋರನು ರಾಜ್ಯಭಾರ ಮಾಡುತ್ತಿರಲು (ಹಲ್ಮಿಡಿ ಶಾಸನ ಒಂದು ಪರಿಚಯ, ಡಾ. ಶ್ರೀವತ್ಸ ಎಸ್.ವಟಿ. ಪುಟ ಸಂ. ೪೬)

೨. ಅರ್ಜುನನು ಪಂಪಭಾರತದ ಕಥಾ ನಾಯಕ. ಆದುದರಿಂದಲೇ ಅದಕ್ಕೆ 'ವಿಕ್ರಮಾರ್ಜುನ ವಿಜಯ' ಎಂದು ಕವಿ ನಾಮಕರಣ ಮಾಡಿದ್ದಾನೆ. ಅವನ ಅಪರಾವತಾರನೆಂದು ಭಾವಿಸಿದ ಅರಿಕೇಸರಿಯ ವೀರ್ಯ, ಶೌರ್ಯ, ಔದಾರ್ಯಗಳನ್ನು ಅದ್ಧೂರಿಯಿಂದ ಚಿತ್ರಿಸಿರುವುದಕ್ಕಾಗಿಯೇ ಪಂಪನು ಈ ಕಾವ್ಯವನ್ನು ರಚಿಸಿದುದು. ಆದುದರಿಂದ ಅವನ ಪಾತ್ರ ರಚನೆಯಲ್ಲಿ ಕವಿತಾಗುಣಾರ್ಣವನು ತನ್ನ ಸರ್ವಶಕ್ತಿಯನ್ನು ವ್ಯಯ ಮಾಡಿದ್ದಾನೆ (ಪಂಪಭಾರತಂ, ಉಪೋದ್ಘಾತ, ಪುಟ ೪೬).

ಉದಾಹರಣೆಗೆ,

ಪ್ರಥಮಾಶ್ವಾಸಂ ೨೧ ನೇ ಪದ್ಯ

ಕ್ಷತ್ರಂ ತೇಜೋಗುಣಮಾ
ಕ್ಷತ್ರಿಯರೊಳ್ ನೆಲಸಿ ನಿಂದುದಾ ನೆಗಟ್ಟೂದಿ
ಕ್ಷತ್ರಿಯರೊಳಮಿಲ್ಲೆನಿಸಿದು
ದೀ ತ್ರಿಜಗದೊಳೆಸಗಿದೆಸಕಮರಿಕೇಸರಿಯಾ॥

(ಕ್ಷತ್ರಿಯೋಚಿತವಾದ ಶೌರ್ಯ ಪ್ರತಾಪಾದಿ ತೇಜೋಗುಣಗಳು ಆ ಕ್ಷತ್ರಿಯರ ವಂಶದಲ್ಲಿ ಸ್ಥಿರವಾಗಿ ನಿಂತುದು ಈ ಅರಿಕೇಸರಿಯ ಮಹಾತ್ಕಾರ್ಯಗಳಿಂದ. ಇವನ ಕಾರ್ಯಗಳು ಮೂರು ಲೋಕಗಳಲ್ಲಿ ಪ್ರಸಿದ್ಧರಾದ ಪ್ರಾಚೀನ ರಾಜರುಗಳಲ್ಲಿಯೂ ಇಲ್ಲವೆಂದೆನಿಸಿತು).

೩. ಉದಾಹರಣೆಗೆ

ಶ್ರೀ ನೀಹಾರಾಚಳಾಧೀಶ್ವರಮುಹಿತೃಮುಖಾಂಭೋಜಸೂರ್ಯಂ ಮಹಾಸು
ಜ್ಞಾನಾನಂದಸ್ವರೂಪಂ ನಿಗಮತತಿನುತಂ ಚಂದ್ರಲೇಖಾವತಂಸಂ
ಭಾನುಗ್ಲೌವಹ್ನಿನೇತ್ರಂ ತ್ರಿಪುಟವಿರಹಿತಂ ನಿರ್ವಿಕಲ್ಪಂ ಶಿವಂ ಸ
ನ್ಮಾನಂಬೆತ್ತೋವುಗೆನ್ನಂ ಪರಮಗುರುವಿರುಪಾಕ್ಷಲಿಂಗಂ ಸಿತಾಂಗಂ
(ಸೋಮರಾಜನ ಉದ್ಭಟ ಕಾವ್ಯ, ಪ್ರಥಮಾಶ್ವಾಸಂ, ೧ ನೇ ಪದ್ಯ)

ಅರ್ಥ : ಹಿಮಾಚಲದ ಒಡೆಯನ ಮಗಳಾದ ಗಿರಿಜೆಯ ಮುಖವೆಂಬ ಕಮಲಕ್ಕೆ ಸೂರ್ಯನೂ ಅತಿಶಯವಾದ ಸುಜ್ಞಾನ–ಆನಂದ ಸ್ವರೂಪನೂ ವೇದಗಳಿಂದ ನುತಿಸಲ್ಪಟ್ಟವನೂ ಚಂದ್ರನನ್ನು ಜಡೆಯಲ್ಲಿ ಧರಿಸಿದವನೂ ಸೂರ್ಯ–ಚಂದ್ರ–ಅಗ್ನಿಗಳೆಂಬ ನೇತ್ರಗಳುಳ್ಳವನೂ ತ್ರಿಪುಟಿರಹಿತನೂ ಸವಿಕಲ್ಪಕ ಜ್ಞಾನಕ್ಕೆ ವಿಷಯನಲ್ಲದವನೂ

ಶುಭ್ರವಾದ ದೇಹವುಳ್ಳವನೂ ನನ್ನ ಪರಮ ಗುರುವೂ ಆದ ಶಿವನು – ಪಂಪಾವಿರೂಪಾಕ್ಷನು ನನ್ನನ್ನು ಆದರ ಪೂರ್ವಕವಾಗಿ ಕಾಪಾಡಲಿ.

೪. ಉದಾಹರಣೆಗೆ, ಡಾ.ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಸಾಹಿತ್ಯ ರತ್ನ ಸಂಪುಟ

೫. ಬೆನ್ನುಡಿ, ಗಾಂಧೀಜಿ ವಿರಚಿತ ವ್ಯಕ್ತಿಚಿತ್ರಗಳು ಮತ್ತು ಶ್ರದ್ಧಾಂಜಲಿಗಳು

೬. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಶಾಮರಾಯರ ಲೆಕ್ಕ, ಸಾಹಿತ್ಯ ರತ್ನ ಸಂಪುಟ, ಪುಟ. ೨೦೦

೭. ಕುವೆಂಪು ಸಮಗ್ರ ಕಾವ್ಯ ಸಂಪುಟ – ೨, ಕದರಡಕೆ, ಪುಟ ೩೭೮.

೮. ಜಿ.ಎಸ್. ಶಿವರುದ್ರಪ್ಪ, ಸಮಗ್ರ ಕಾವ್ಯ, ಪುಟ. ೩೪೩–೩೪೪.

೯. ಇಂದುಕಲಾ, ಚಂದ್ರಮಂಚಕೆ ಬಾ ಚಕೋರಿ, ಪುಟ. ೬೧.

೧೦. ಕುವೆಂಪು ಸಮಗ್ರ ಕಾವ್ಯ ಸಂಪುಟ – ೨, ಕದರಡಕೆ, ಪುಟ ೩೩೨.

೧೧. ಅದೇ, ಕೊನೆಯ ತೆನೆ ಮತ್ತು ವಿಶ್ವಮಾನವಗೀತೆ, ಪುಟ ೮೮೧.

೧೨. ೨೩.೧೦.೧೯೬೭, ಸೋಮವಾರ.

೧೩. ಕುವೆಂಪು ಸಮಗ್ರ ಕಾವ್ಯ ಸಂಪುಟ – ೧, ನವಿಲು, ಪುಟ ೩೧೩.

೧೪. 'ಐಸಡೋರಾ ಡಂಕನ್' ಎಂಬ ಪ್ರಸಿದ್ಧ ನಟರಾಣಿಯ ಆತ್ಮಕಥೆಯನ್ನು ಓದಿದ ಮೇಲೆ ಬರೆದುದು (ಕುವೆಂಪು ಸಮಗ್ರ ಕಾವ್ಯ, ಸಂಪುಟ – ೭, ಪು. ೩೯೪).

೧೫. ಕುವೆಂಪು ಸಮಗ್ರ ಕಾವ್ಯ ಸಂಪುಟ – ೧, ಕೃತ್ತಿಕೆ, ಪುಟ ೪೮೫.

೧೬. ಅದೇ, ಕೃತ್ತಿಕೆ, ಪುಟ ೫೦೧.

೧೭. ಅದೇ, ಪುಟ ೪೮೭.

೧೮. ಅದೇ, ನವಿಲು, ಪುಟ ೩೩೦.

೧೯. ಅದೇ, ಪಾಂಚಜನ್ಯ, ಪುಟ ೧೧೮.

೨೦. ಅದೇ, ಕೃತ್ತಿಕೆ, ಪುಟ ೪೮೮.

೨೧. ಅದೇ, ಪುಟ ೫೧೦.

೨೨. ಕುವೆಂಪು ಸಮಗ್ರ ಕಾವ್ಯ, ಸಂಪುಟ – ೨, ಇಕ್ಷುಗಂಗೋತ್ರಿ, ಪುಟ ೧೦೨.

೨೩. ಅದೇ, ಪುಟ ೧೦೨

೨೪. ಕುವೆಂಪು ಸಮಗ್ರ ಕಾವ್ಯ, ಸಂಪುಟ – ೧, ಕೃತ್ತಿಕೆ, ಪುಟ ೫೧೧.

೨೫. ಅದೇ, ಪುಟ ೫೧೩.

೨೬. ಕುವೆಂಪು ಸಮಗ್ರ ಕಾವ್ಯ, ಸಂಪುಟ – ೨, ಕೊನೆಯ ತೆನೆ ಮತ್ತು ವಿಶ್ವಮಾನವ

ಗೀತೆ, ಪುಟ ೮೮೩.
೨೭. ಕುವೆಂಪು ಸಮಗ್ರ ಕಾವ್ಯ, ಸಂಪುಟ – ೧, ಕಲಾಸುಂದರಿ, ಪುಟ ೨೦೧.
೨೮. ಅದೇ, ಅಗ್ನಿಹಂಸ, ಪುಟ ೬೧೪.
೨೯. ಕುವೆಂಪು ಸಮಗ್ರ ಗದ್ಯ, ಸಂಪುಟ ೭, ಪುಟ. ೩.
೩೦. ಕುವೆಂಪು ಸಮಗ್ರ ಕಾವ್ಯ, ಸಂಪುಟ – ೧, ಅಗ್ನಿಹಂಸ, ಪುಟ ೫೪೬.
೩೧. ಅದೇ, ಪುಟ ೫೪೮.
೩೨. ಕುವೆಂಪು ಸಮಗ್ರ ಗದ್ಯ ಸಂಪುಟ – ೭, ಪುಟ ೨೦೭.
೩೩. ಕುವೆಂಪು ಸಮಗ್ರ ಕಾವ್ಯ ಸಂಪುಟ – ೧, ಕೃತ್ತಿಕೆ, ಪುಟ ೪೯೯.
೩೪. ಅದೇ, ಪುಟ ೪೯೩.
೩೫. ಕುವೆಂಪು ಸಮಗ್ರ ಕಾವ್ಯ, ಸಂಪುಟ – ೧, ಕೊಳಲು, ಪುಟ ೩೭.
೩೬. ಭಾರತದ ಪ್ರೌಢ ಇತಿಹಾಸ, ಮೂಲ : ಆರ್.ಸಿ. ಮಜುಮ್‌ದಾರ್, ಎಚ್.ಸಿ. ರಾಯ್‌ಚೌಧರಿ, ಕಾಲೀಕಿಂಕರ ದತ್ತ (ಅನು.) ಎನ್.ಎಸ್. ಶಾರದಾ ಪ್ರಸಾದ್, ಪುಟ. ೧೫೦–೧೫೧.
೩೭. ಕುವೆಂಪು ಸಮಗ್ರ ಕಾವ್ಯ, ಸಂಪುಟ – ೧, ನವಿಲು, ಪುಟ ೨೮೬.
೩೮. ಅದೇ, ಕೃತ್ತಿಕೆ, ಪುಟ ೪೮೪.
೩೯. ಅದೇ, ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಪುಟ ೩೮೩.
೪೦. ಕುವೆಂಪು ಸಮಗ್ರ ಕಾವ್ಯ, ಸಂಪುಟ – ೨, ಕದರಡಕೆ, ಪುಟ ೩೭೮.

ಆಕರ ಗ್ರಂಥಗಳು

೧. ಕುವೆಂಪು ಸಮಗ್ರ ಕಾವ್ಯ ಸಂಪುಟ–೧, ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ (ರಿ.), ಕುಪ್ಪಳಿ, ೨೦೧೩
೨. ಕುವೆಂಪು ಸಮಗ್ರ ಕಾವ್ಯ ಸಂಪುಟ–೨, ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ (ರಿ.), ಕುಪ್ಪಳಿ, ೨೦೧೩

ಪರಾಮರ್ಶನ ಗ್ರಂಥಗಳು

೧. ಅನಂತರಂಗಾಚಾರ್ ಎನ್. (ಗ.ಅ.), ಪಂಪ ಮಹಾಕವಿ ವಿರಚಿತ ಪಂಪಭಾರತಂ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೧
೨. ಕುವೆಂಪು, ಶ್ರೀ ರಾಮಾಯಣ ದರ್ಶನಂ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ೧೯೯೦.
೩. ಕುವೆಂಪು ಸಮಗ್ರ ಗದ್ಯ, ಸಂಪುಟ – ೫, ನೆನಪಿನ ದೋಣಿಯಲ್ಲಿ, ರಾಷ್ಟ್ರಕವಿ

ಕುವೆಂಪು ಪ್ರತಿಷ್ಠಾನ (ರಿ.), ಕುಪ್ಪಳಿ, ೨೦೧೩.
೪. ಕುವೆಂಪು ಸಮಗ್ರ ಗದ್ಯ ಸಂಪುಟ – ೭, ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ (ರಿ.), ಕುಪ್ಪಳಿ, ೨೦೧೩
೫. ಕೃಷ್ಣರಾಯ ಅ.ನ., ಕನ್ನಡ ಕುಲರಸಿಕರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೪.
೬. ಬೆಳಗೆರೆ ಕೃಷ್ಣಶಾಸ್ತ್ರಿ, ಸಾಹಿತಿಗಳ ಸ್ಮೃತಿ, ಅಭಿನವ ಪ್ರಕಾಶನ, ಬೆಂಗಳೂರು, ೨೦೧೧.
೭. ಮಜುಮ್‌ದಾರ್ ಆರ್.ಸಿ., ಹೆಚ್.ಸಿ. ರಾಯ್ ಚೌಧುರಿ, ಕಾಲೀಕಿಂಕರದತ್ತ, ಭಾರತದ ಪ್ರೌಢ ಇತಿಹಾಸ, ಎನ್.ಎಸ್. ಶಾರದಾಪ್ರಸಾದ್ (ಅನು.), ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, ೨೦೧೨.
೮. ಮುಳಿಯ ತಿಮ್ಮಪ್ಪಯ್ಯ, ನಾಡೋಜ ಪಂಪ, (ಸಂ.) ಎಂ. ಕೇಶವ ಭಟ್ಟ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೨೦೦೬.
೯. ರಾಮಸ್ವಾಮಿ ಎಸ್.ಆರ್., ದೀವಟಿಗೆಗಳು, ಸಾಹಿತ್ಯ ಸಿಂಧು ಪ್ರಕಾಶನ, ಬೆಂಗಳೂರು, ೨೦೧೨.
೧೦. ಲಕ್ಷ್ಮೀನಾರಾಯಣ ಭಟ್ಟ ಎನ್.ಎಸ್., ಸಾಹಿತ್ಯರತ್ನ ಸಂಪುಟ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೧೦.
೧೧. ವಿದ್ಯಾಶಂಕರ್ ಎಸ್ (ಗ.ಅ.), ಸೋಮರಾಜನ ಉದ್ಭಟ ಕಾವ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೧.
೧೨. ಶ್ರೀವತ್ಸ ಎಸ್. ವಟಿ, ಹಲ್ಮಿಡಿ ಶಾಸನ ಒಂದು ಪರಿಚಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೧.
೧೩. ಸದಾಶಿವ ಕೆ., ಭಾರತದ ಸ್ವಾತಂತ್ರ್ಯ ಹೋರಾಟ, ಪ್ರಿಯದರ್ಶಿನಿ ಪ್ರಕಾಶನ, ಮೈಸೂರು, ೨೦೧೧.
೧೪. ಸೇತುರಾವ್ ಎನ್. (ಅನು.), ಗಾಂಧೀಜಿ ವಿರಚಿತ ವ್ಯಕ್ತಿಚಿತ್ರಗಳು ಮತ್ತು ಶ್ರದ್ಧಾಂಜಲಿಗಳು, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ನವದೆಹಲಿ, ೧೯೯೪.
೧೫. Ajay kumar Kothari, World Famous 101 Great Lives – Vol. 1, Family Books Pvt. Ltd., New Delhi, 1994.
೧೬. ಪ್ರಬುದ್ಧ ಕರ್ಣಾಟಕ, ಸಂಪುಟ – ೫೩, ಸಂಚಿಕೆ ೩, ಮೈಸೂರು ವಿಶ್ವವಿದ್ಯಾನಿಲಯ, ೧೯೭೧.

ಡಾ.ರಾಜಶೇಖರ ನೀರಮಾನ್ವಿ ಕಥಾ ಸಾಹಿತ್ಯ

ಡಾ.ಬಸವರಾಜ ನಾಯಕ

ಕನ್ನಡದಲ್ಲಿ ಸಣ್ಣಕಥೆಯ ಪ್ರಕಾರವನ್ನು ಶ್ರೀಮಂತಗೊಳಿಸಿ ದವರಲ್ಲಿ ಡಾ.ರಾಜಶೇಖರ ನೀರಮಾನ್ವಿ ಅವರು ಒಬ್ಬರು. ರಾಜಶೇಖರ ಅವರು ಪ್ರಾಥಮಿಕ ವಿದ್ಯಾಭ್ಯಾಸ ನೀರಮಾನ್ವಿ, ಮಾಧ್ಯಮಿಕ ಮತ್ತು ಪ್ರೌಢಶಾಲೆ ಮಾನ್ವಿಯಲ್ಲಿ, ಹತ್ತನೇ ತರಗತಿಯನ್ನು ರಾಯಚೂರಿನ ಹಮದರ್ದ್ ಪ್ರೌಢಶಾಲೆಯಲ್ಲಿ ತೇರ್ಗಡೆಯಾದರು. ಎಲ್.ವಿ.ಡಿ.ಕಾಲೇಜಿನಲ್ಲಿ ಪಿಯುಸಿ ಮುಗಿಸಿ,ಅಪ್ಪ ವೀರನಗೌಡರ ಇಚ್ಚೆಯಂತೆ ೧೯೬೦ರಲ್ಲಿ ಧಾರವಾಡದ ಮುರುಘಾಮಠದಲ್ಲಿ ಇದ್ದು ಕರ್ನಾಟಕ ಕಾಲೇಜಿನಲ್ಲಿ ಬಿಎಸ್ಸಿ ಪೂರೈಸುತ್ತಾರೆ. ಬಿಎಸ್ಸಿ ಎರಡನೇ ವರ್ಷ ಓದುತ್ತಿರುವಾಗ ಸಾಹಿತ್ಯ ಮತ್ತು ಲಲಿತ ಕಲೆಗಳ ಪ್ರೋತ್ಸಾಹಕ್ಕಾಗಿ ನಡೆಯುತ್ತಿದ್ದ ಅಧ್ಯಾಪಕ, ವಿದ್ಯಾರ್ಥಿಗಳ ಕ್ರಿಯಾಶೀಲ ಚಟುವಟಿಕೆಗಳೆ ಸಾಹಿತ್ಯದ ಪಾದಾರ್ಪಣೆಗೆ ಪ್ರೇರಣೆ ನೀಡಿದವು. ವಿಜ್ಞಾನ ವಿಷಯದ ವಿದ್ಯಾರ್ಥಿಗಳಿಗೆ ಸಮಾಜಶಾಸ್ತ್ರ ಅಥವಾ ಮಾನವಶಾಸ್ತ್ರ ವಿಷಯವನ್ನು ಆಯ್ಕೆ ಮಾಡಿಕೊಳ್ಳಬೇಕಾದಾಗ ಮಾನವಶಾಸ್ತ್ರವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಈ ಅಧ್ಯಯನದಿಂದ ಅವರಿಗೆ ಪ್ರಜ್ಞಾಪ್ರವಾಹ, ಬುದ್ಧಿಯ ಜಾಗೃತತೆಯ ವಿಷಯಗಳು ಮನದಟ್ಟಾಗಿ ಸಾಹಿತ್ಯ ರಚನೆಗೆ ಮಾರ್ಗದರ್ಶಿಯಾದವು. ಆಗಿನ ತರುಣರಲ್ಲಿ ನವ್ಯದ ಹುಚ್ಚು, ಕವಿತ್ವ ತೀವ್ರ ರೀತಿಯಲ್ಲಿ ಇತ್ತು.ವಿಜ್ಞಾನ ಪ್ರಾಧ್ಯಾಪಕರಾದ ರಾಜಶೇಖರ ಅವರು ೧೯೬೬ ರಲ್ಲಿ ವೃತ್ತ ಎಂಬ ಮೊದಲ ಕಥೆ ಬರೆಯುವುದರ ಮೂಲಕ ಕಥಾಸಾಹಿತ್ಯದಲ್ಲಿ ವಿಶೇಷ ಛಾಪು ಮೂಡಿಸಿದರು.

ಈ ಕಾಲಘಟ್ಟದಲ್ಲಿ ಸಣ್ಣ ಕಥೆಯ ಅಭಿವ್ಯಕ್ತಿ ಮಾಧ್ಯಮವು ವಿಶಾಲವಾದ ವಸ್ತು ಹರಹು, ಭಾಷೆ, ಶಿಲ್ಪಗಳ ಪ್ರಯೋಗಶೀಲ ಕಲಾತ್ಮಕತೆ ಸಾಧಿಸಿದ, ಅನುಭವ ಲೋಕಗಳ ಶೋಧನೆಗೆ ತೊಡಗಿಕೊಂಡ ಕಾಲವಾಗಿತ್ತು ಎಂದು ವಿಮರ್ಶಕ ಜಿ ಎಚ್ ನಾಯಕ ಅವರ ಮುನ್ನುಡಿ ಮಹತ್ವಪೂರ್ಣವಾದದ್ದು. ಜಿ ಎಚ್ ನಾಯಕ ಅವರು ಕನ್ನಡ ನವ್ಯ ಕಥಾಸಾಹಿತ್ಯದಲ್ಲಿ ನೀರಮಾನ್ವಿಯವರ ಅನನ್ಯತೆಯನ್ನು ಮತ್ತು ೧೯೯೦ರ ನಂತರ ನಿಲುಗಡೆಯಾದದ್ದನ್ನು ಗುರುತಿಸಿದ್ದು ಮೌಲಿಕ. ಅನಂತಮೂರ್ತಿ, ಪೂರ್ಣಚಂದ್ರ ತೇಜಸ್ವಿ, ಕೆ ಸದಾಶಿವ, ಚಿತ್ತಾಲ, ಲಂಕೇಶ, ದೇವನೂರು ಮಹಾದೇವರ

ಪ್ರಭಾವ ಪರಂಪರೆಯ ಕಾಲಘಟ್ಟದಲ್ಲಿ ಭಿನ್ನ ನೆಲೆ ಮತ್ತು ಸ್ವಂತಿಕೆಯನ್ನು ದುಡಿಸಿಕೊಂಡ ಸಮರ್ಥ ಕಥೆಗಾರರು. ರಾಜಶೇಖರ ನೀರಮಾನ್ವಿಯವರು ೧೯೭೮ ರಲ್ಲಿ ಹಂಗಿನರಮನೆಯ ಹೊರಗೆ ಮತ್ತು ೧೯೯೦ರಲ್ಲಿ ಕರ್ಪೂರದ ಕಾಯದಲ್ಲಿ ಎಂಬ ಕಥಾ ಸಂಕಲನ ಪ್ರಕಟಿಸಿ ವಿಶಿಷ್ಟತೆ ಮೆರೆದಿದ್ದಾರೆ. ಇವರ ಎಲ್ಲಾ ಕಥೆಗಳಲ್ಲಿ ರಾಯಚೂರಿನ ಜವಾರಿ ಭಾಷೆಯ ಮೂಲಕ ಜಮೀನುದಾರಿಕೆ, ಗೌಡಿಕೆ, ಸೂಳೆಗಾರಿಕೆ, ಆತ್ಮ ವಿಮರ್ಶೆ, ಆದರ್ಶವಾದ, ವಾಸ್ತವಿಕತೆ, ವ್ಯಕ್ತಿಕೇಂದ್ರಿತ ಶೋಧನೆ, ತಾತ್ವಿಕತೆ, ವೈಚಾರಿಕತೆ, ಸಿಡಿದೇಳುವ ಬಂಡಾಯ ಗುಣ, ಮನುಷ್ಯರಲ್ಲಿ ಸಂಕೀರ್ಣ ಸಂಬಂಧಗಳು, ಗೊಂದಲಗಳು, ನಿರ್ಧಾರದ ಅಸ್ಪಷ್ಟತೆ, ಕಾಮ, ದಾಂಪತ್ಯ ಜೀವನದ ಸರಸ-ವಿರಸ, ಪ್ರೇಮ ನಿವೇದನೆ ನಿರಾಕರಣೆ ಎಲ್ಲವೂ ಮೈತಳೆದಿವೆ.

ವೃತ್ತ ಎಂಬ ಮೊದಲ ಕಥೆಯಲ್ಲಿ ಶಂಕ್ರಪ್ಪಗೌಡ ಚಿಕ್ಕ ವಯಸ್ಸಿನಲ್ಲಿ ತಂದೆ ತಾಯಿ ಕಳೆದುಕೊಂಡು, ಉಂಡಾಡಿ ಅಲೆದು ಬುದ್ಧಿ ಬಂದ ಮೇಲೆ ದುಡಿದು ಮನುಷ್ಯನಾಗಿರುತ್ತಾನೆ. ಹರವಿಗೌಡರ ಮಗಳಾದ ಪಾರ್ವತಿಯನ್ನು ಮದುವೆಯಾಗಿ ಸಂಸಾರ ಹಿಡಿತಕ್ಕೆ ಬಂದಮೇಲೆ ಅಂತರ್ಮುಖಿ ಆಗಿರುತ್ತಾನೆ.ಒಂದು ಕಡೆ ಗಾಂಧಿ ಚಳುವಳಿ, ಮತ್ತೊಂದು ಕಡೆ ನಿಜಾಮರ, ರಜಾಕಾರರ ಹಾವಳಿ ದಟ್ಟವಾಗಿರುತ್ತದೆ. ಚಳುವಳಿಯಲ್ಲಿ ಧುಮುಕಬೇಕು ಎಂಬ ಹುರುಪು ಇತ್ತಾದರೂ, ನೇರವಾಗಿ ಚಳುವಳಿಗೆ ಭಾಗಿಯಾಗದೆ ಕ್ರಾಂತಿಕಾರರಿಗೆ ತನ್ನ ಮನೆಯನ್ನು ಆಶ್ರಯವಾಗಿ ನೀಡುವುದು ದೇಶಪ್ರೇಮವಾಗಿ ಕಾಣುತ್ತದೆ. ಮಗ ರಾಮಲಿಂಗ ನಂತೂ ತಂದೆಯ ಆದರ್ಶ ಮತ್ತು ಕನಸುಗಳಿಗೆ ವಿರುದ್ಧವಾಗುತ್ತಾನೆ. ತಾನು ಸತ್ಯಾಗ್ರಹಿ ಆಗದಿದ್ದರೂ ಮಗ ಕ್ರಾಂತಿಕಾರನಾಗುತ್ತೇನೆ ಅಂದಾಗ, ತನ್ನಿಂದ ಆಗಲಾರದ್ದು ಮಗನು ಪೂರೈಸುತ್ತಾನೆ ಎಂದು ಪುಳಕಿತ ನಾಗುತ್ತಾನೆ. ರಜಾಕಾರರಿಗೆ ಜನರು ಭಯಪಟ್ಟಂತೆ, ಈ ಗೌಡನು ಕೂಡ ರಜಾಕಾರರ ನಾಯಕ ಹುಸೇನಿಗೆ ವಿನೀತ ನಾಗಿರುತ್ತಾನೆ. ಆದರೆ ಅಂತರ್ಯದಲ್ಲಿ ನಂಜುಂಡಪ್ಪ ಮತ್ತು ಶಿವರಾಜಪ್ಪ ಕ್ರಾಂತಿಕಾರಿಗೆ ತನ್ನ ಮನೆಯನ್ನು ಅವಿತುಕೊಳ್ಳಲು ನೀಡುವುದು ಹುಸೇನಿಯನ್ನು ಕೆರಳಿಸುತ್ತದೆ. ಒಂದು ತೊಲೆ ಬಂಗಾರದ ಬೆಲೆ ೨೦ ರೂಪಾಯಿ ಇದ್ದ ಕಾಲದಲ್ಲಿ ಕ್ರಾಂತಿಕಾರರನ್ನು ಒಪ್ಪಿಸಲು ಹುಸೇನಿಯು ಶಂಕರಪ್ಪ ಗೌಡರಿಗೆ ೫೦೦೦ ರೂಪಾಯಿಯ ಬಹುಮಾನ ಆಸೆ ತೋರಿಸುತ್ತಾನೆ. ಶಂಕ್ರಪ್ಪ ಗೌಡರು ಅಳೆದು-ತೂಗಿ ಗೊಂದಲದಿಂದ ಹೊರಬಂದು ಕ್ರಾಂತಿಕಾರರಿಗೆ ಸಹಾಯ ನೀಡಿ, ಅವರ ಜೀವ ಉಳಿಸುತ್ತಾನೆ. ತಾನು ಆತ್ಮವಿಮರ್ಶೆ ಮಾಡಿಕೊಳ್ಳುತ್ತಾ, ದೇಶದ್ರೋಹಿ ಕಾರ್ಯ ಎಸಗದೆ ಹುಸೇನಿಯ ಕುತಂತ್ರದಿಂದ ಆರು ತಿಂಗಳ ಜೈಲು ಸೇರುತ್ತಾನೆ. ಶಂಕ್ರಪ್ಪಗೌಡರು ಗೌಡ ಎಂಬ ಪದದಿಂದಲೆ ತನಗೆ ಎದುರುಗಡೆ

ಗೌರವ, ಬೆನ್ನ ಹಿಂದೆ ತೆಗಳಿಕೆ ಇದೆ ಎಂದು ತಿಳಿದು ವೈಯಕ್ತಿಕ ಮೌಲ್ಯಗಳನ್ನು ಬೆಳೆಸಿಕೊಳ್ಳುವುದು ಆದರ್ಶ ಲಕ್ಷಣ. ಜೈಲು ಸೇರಿದ ಮೇಲೆ ಹೆಂಡತಿ ಪಾರ್ವತಿ, ರಾಮಲಿಂಗನನ್ನು ಕರೆದುಕೊಂಡು ತವರು ಮನೆ ಸೇರುತ್ತಾಳೆ. ಆಕೆಯ ಸಹೋದರ ಪಂಪಣ್ಣನು, ಗೌಡನ ಮನೆ ರಕ್ಷಿಸುತ್ತಾನೆ. ಆದರೂ ರಜಾಕಾರರು ಗೌಡನ ಮನೆಯನ್ನು ಲೂಟಿ ಮಾಡಿ ಹೊರಡುವಾಗ, ಗೌಡ ಸಾಕಿಕೊಂಡ ನಾಯಿಯ ಗರ್ಜನೆಯಿಂದ ಬಿಟ್ಟು ಹೊರಡುತ್ತಾರೆ. ನಿಜ ಹೇಳಬೇಕೆಂದರೆ ನಾಯಿಯ ಸಾವಿನಿಂದಲೆ ಈ ಕಥೆ ಪ್ರಾರಂಭವಾಗಿದೆ.

ದೇಶಕ್ಕೆ ಸ್ವಾತಂತ್ರ್ಯ ಬಂದಿದ್ದರೂ, ಹೈದರಾಬಾದ್ ಕರ್ನಾಟಕ ಅಥವಾ ಈಗಿನ ಕಲ್ಯಾಣ ಕರ್ನಾಟಕಕ್ಕೆ ಭಾಗ್ಯ ಲಭಿಸಿದ್ದಿಲ್ಲ. ಸರದಾರ ಪಟೇಲರಿಂದ ಈ ಭಾಗಕ್ಕೆ ಮುಕ್ತಿ ದೊರೆತು ಆಕ್ರಮಣ ಅಂತ್ಯವಾಗುತ್ತದೆ. ಇಂತಹ ಸಂದರ್ಭದಲ್ಲಿ ರಜಾಕಾರರ ಗುಂಪಿನ ನಾಯಕ ಹುಸೇನಿ ಹಳ್ಳಿಗರಿಂದ ಪಾರಾಗಿ ಶಂಕ್ರಪ್ಪ ಗೌಡರ ಕಾಲಿಡಿಯುವ ಪ್ರಸಂಗ ಎದುರಾಗುತ್ತದೆ. ಮಕ್ಕಳು ಹಠ ಮಾಡಿದರೆ ಹುಸೇನಿಗೆ ಹಿಡಿದು ಕೊಡುತ್ತೇವೆ ಎಂದು ಹೇಳುವುದು ಪರಿಸ್ಥಿತಿಯ ವ್ಯಂಗ್ಯ ಸೂಚಕ. ಮಹಿಳೆಯರ ಮಾನಭಂಗ ಮಾಡಿದ, ಲೂಟಿಕೋರ, ತನ್ನನ್ನು ಜೈಲಿಗೆ ಹಾಕಿಸಿದವನಿಗೆ ರಕ್ಷಣೆ ನೀಡಲು ಗೌಡನು ನಿರಾಕರಿಸುತ್ತಾನೆ. ಗೌಡನ ಹೆಂಡತಿಯು ಪ್ರಾಣ ಭಿಕ್ಷೆ ಬೇಡಿದ ಹುಸೇನಿ ಕುಟುಂಬಕ್ಕೆ ರಕ್ಷಣೆ ನೀಡಿ ಮಾನವೀಯತೆ ಮೆರೆಯುತ್ತಾಳೆ. ಗೌಡನಿಗೆ ತನ್ನ ಬದುಕು ಮುಖ್ಯವಾಗಿದ್ದರೂ, ಬೇರೆಯವರ ಬಾಳಿಗೆ ಮುಳ್ಳಾಗದೆ, ಪಾರ್ವತಿಯ ಆದರ್ಶ ಗುಣಗಳಿಂದ ಪ್ರಭಾವಿತನಾಗುತ್ತಾನೆ. ಆಕೆಯಿಂದಲೇ ತನ್ನ ಬದುಕು ಹಸನುಗೊಂಡಿತು ಎಂದು ಅಭಿಮಾನ ಪಡುತ್ತಾನೆ. ಮಗ ರಾಮಲಿಂಗ ಮಾತ್ರ ಸತ್ಯಾಗ್ರಹ ಮುರಿದು, ೫೦೦೦ ರೂಪಾಯಿ ಲಂಚ ಇಲ್ಲವೇ ಮುಂದಿನ ಚುನಾವಣೆಯಲ್ಲಿ ಸೀಟು ಗಿಟ್ಟಿಸಿಕೊಂಡಿದ್ದಾನೆ ಎಂಬ ಸುದ್ದಿಗಳು ಗೌಡನ ಕಿವಿಗೆ ತಾಕುತ್ತವೆ. ಮಾನ್ವಿಯಲ್ಲಿ ಆಗಿರುವ ಒಬ್ಬ ಗೌಡನ ಕೊಲೆಯು ಈತನ ಸುತ್ತ ಗಿರಿಕಿ ಹೊಡೆಯುತ್ತದೆ. ಮಗನನ್ನು ಹೇಗಾದರೂ ಉಳಿಸಬೇಕೆಂಬ ಪ್ರಯತ್ನದಲ್ಲಿ ಗೌಡನು ವಿಫಲಗೊಂಡು ತಾನೆ ಸಾವಿಗೆ ಒಳಗಾಗುವುದುರೊಂದಿಗೆ ಕಥೆ ಸಮಾಪ್ತಿಯಾಗುತ್ತದೆ. ರಾಮಲಿಂಗನಿಗೆ ಸೌಕರ್ಯವಿದ್ದರೂ ಅಕ್ಷರ ಕಲಿಯಲಾರ, ಆದರೆ ನಂಜುಂಡಪ್ಪ, ಶಿವರಾಜಪ್ಪನ ಮಕ್ಕಳು ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಅಕ್ಷರ ಜ್ಞಾನ ಪಡೆಯುವಲ್ಲಿ ಸಫಲರಾಗುತ್ತಾರೆ. ಗೌಡನಿಗೆ ತಿಳಿ ಹೇಳುವವರು ಯಾರೂ ಇಲ್ಲದಿದ್ದರೂ ಅನುಭವ ದ್ರವ್ಯದಿಂದಲೇ ಪಾಠ ಕಲಿಯುವುದು ಆದರ್ಶವಾಗಿದೆ. ಲೂಟಿಕೋರನಾಗಿದ್ದ ಹುಸೇನಿಯಂತೂ ಪಾರ್ವತಿಯ ರಕ್ಷಣೆಯಿಂದ, ಆಕೆ ತೀರಿದಾಗ ಮಗನಂತೆ

ನೊಂದುಕೊಳ್ಳುವುದು ಮನಃಪರಿವರ್ತನೆಯ ಹೆಜ್ಜೆಯಾಗಿದೆ. ಹಾಗೆಯೇ ನಾಯಿಯಲ್ಲಿಯ ನಂಬಿಕೆ, ನಿಷ್ಠೆಗಳು ಮನುಷ್ಯನಲ್ಲಿ ಇಲ್ಲವೆಂಬ ಕೊರತೆಯನ್ನು ಪ್ರಚುರಪಡಿಸುತ್ತವೆ.

ಭೂತ ಕಥೆಯು ಪ್ರಜಾವಾಣಿ ದೀಪಾವಳಿ ಕಥಾ ಸ್ಪರ್ಧೆಗೆ ತೀರ್ಪುಗಾರರ ಮೆಚ್ಚುಗೆ ಪಡೆದ ಕಥೆ. ಇಲ್ಲಿಯ ಕಥಾನಾಯಕ ರಮೇಶ ಎಂ.ಎಸ್ .ಸಿ ಪದವೀಧರ. ತಂದೆ ಬದುಕಿದ್ದರೆ ವಿದೇಶಕ್ಕೆ ಹೋಗಬಹುದಿತ್ತು, ಅವರು ಇಲ್ಲದಿರುವುದರಿಂದ ತನಗೆ ಜಹಗೀರಿಯ ಭೂತ ಬಡಿದಿದೆ ಎಂದು ಸ್ವಗತ ಅಂದುಕೊಳ್ಳುತ್ತಾನೆ. ಇಲ್ಲಿಯ ಭೂತ ಎರಡು ರೀತಿಯ ಅರ್ಥ ಪಡೆದಿದೆ. ಒಂದು ಗತಕಾಲದ ಘಟನೆಗಳು, ಹಿಂದಿನ ಕಾಲದ ವರ್ತಮಾನವಾಗಿದ್ದ ಭೂತ ರಮೇಶನಿಗೆ ಬಡಿದುಕೊಂಡಿದೆ, ಮತ್ತೊಂದು ಹಳ್ಳಿಗರಲ್ಲಿ ಮಾತ್ರ ಮೈಯಲ್ಲಿ ಬರುವ ಭೂತವಾಗಿ ಕಾಣಿಸಿದೆ. ಹೆರವನ ಮೂಲಕವೇ ರಮೇಶನ ವಂಶಾವಳಿ, ವಂಶದ ಆರಂಭದ ವ್ಯಕ್ತಿಯಿಂದ ಮೊದಲುಗೊಂಡು ಕಥಾನಾಯಕ ರಮೇಶನವರೆಗೂ ಒಳಿತು–ಕೆಡುಕುಗಳ ಚಿತ್ರಣ ಸಾರವತ್ತಾಗಿ ದಾಖಲಾಗಿದೆ. ಇಲ್ಲಿಯ ನಾಯಕ ,ವಂಶದ ಇಪ್ಪತ್ತೊಂದನೆಯ ವ್ಯಕ್ತಿ. ವಿಜಯನಗರದ ಅರಸ–ಬಹುಮನಿ ಸುಲ್ತಾನರಿಗೂ ಮಾನವ ದುರ್ಗ ಅಥವಾ ಮಾನ್ವಿಯಲ್ಲಿ ಕಾಳಗ ನಡೆದಾಗ ಬಸಪ್ಪ ನಾಯಕನು ಸುಲ್ತಾನನನ್ನು ಹಿಮ್ಮೆಟ್ಟಿಸು ತ್ತಾನೆ. ವಿಜಯನಗರದ ಮಹಾರಾಜರಿಂದ ಪನ್ನೂರಿನ ೧೦೧ ಹಳ್ಳಿಗಳನ್ನು ಉಂಬಳಿಯಾಗಿ ಪಡೆದು ಸಾಮಂತನಾಗಿ ಗಡಿ ರಕ್ಷಣೆ ಮಾಡುವ ಮೂಲಕ ವೀರತನ ಮೌಲ್ಯ ಪ್ರಕಟಗೊಂಡಿದೆ. ಬಸ್ಸಪ್ಪ ನಾಯಕನು ಉಂಬಳಿ ಪಡೆದ ನೆನಪಿಗಾಗಿ ಊರು ಕಟ್ಟಿಸಿ ಹೊಸೂರು ಎಂದು ಕರೆಯುತ್ತಾನೆ. ಅಂದಿನಿಂದ ಅದು ಉಮಳಿ ಹೊಸೂರು ಎಂದು ಆಗಿದೆ. ರಮೇಶನ ತಾತ ವೆಂಕಟಪ್ಪನನ್ನು ಧರ್ಮಾತ್ಮ ಧರ್ಮಾತ್ಮ ಎಂಬ ಹೆರವನ ವ್ಯಂಗ್ಯ ಕಟೂಕ್ತಿ ಆತನ ದೌರ್ಜನ್ಯ ಸಂಕೇತಿಸುತ್ತದೆ. ವೆಂಕಟಪ್ಪ ತಾತ ಗುಡಿಗುಂಡಾರ ಕಟ್ಟಿಸಿ, ತಮ್ಮ ಧರ್ಮ ಸ್ಥಾಪಿಸಿ, ಮ್ಯಾಳೂರು ಗೌಡತಿಯನ್ನು ಗೆದ್ದು ತಂದಿರುವನು . ಆ ಗಾಳಿಯ ಕಾಟ ಕಾಡುತ್ತಿದೆ ಎಂದು ಚಿತ್ರಣ ನೀಡುತ್ತಾನೆ. ಅಲ್ಲದೆ ಪರಿಹಾರ ಸೂಚಿಸಿ ಆಯನೂರಿನ ಮುಲ್ಲಾರಿಂದ ಗಾಳಿ ಬಿಡಿಸಿಕೊಳ್ಳಿ ಎನ್ನುತ್ತಾನೆ.ರಮೇಶನಿಗೆ ಇದು ಒಪ್ಪಿಕೊಳ್ಳದ ಮತ್ತು ವಿರೋಧಿಸದ ಸಂದಿಗ್ಧ ನಿಲುವಿಗೊಳಗಾಗುವುದು ಆತನ ವಿಜ್ಞಾನ ಪದವಿಯನ್ನು ಅಣಕಿಸುವಂತಿದೆ.

ರಮೇಶನು ವಾಸಮಾಡುವ ದಿವಾನಖಾನೆಯಂತೂ ನರ್ತಕಿಯರು ನರ್ತಿಸುವ ವಿವಿಧ ಭಂಗಿಗಳ ಚಿತ್ರಪಟ ಆತನಿಗೆ ಅನೇಕ ಪ್ರಶ್ನೆಗಳನ್ನು ಕೆದಕಿ ಗತಕಾಲದ

ಘಟನೆಗಳ ಭೂತ ಹಿಡಿಸಿದೆ. ದಿವಾನಖಾನೆಯಲ್ಲಿ ಒಂದು ಮುಚ್ಚಿಕೊಂಡಿರುವ ಬಾಗಿಲಂತೂ ನಿಗೂಢ ಕಥೆಗಳನ್ನು ಹೆಣೆದಿದೆ.ಮ್ಯಾಳೂರು ಗೌಡತಿಯು ಅಲ್ಲಿಯೇ ಪ್ರಾಣ ಬಿಟ್ಟಿದ್ದಾಳೆ. ರಮೇಶನ ಹೆಂಡತಿ ಮೆದುಳು ರೋಗಕ್ಕೆ ಒಳಗಾಗಿ ಸತ್ತಿದ್ದರೂ, ಔಷಧಿ ಸೇವನೆ ಇಲ್ಲದೆ, ಊಟವಿಲ್ಲದೆ, ಔಷಧಿ ಕೊಡಲು ಹೋದವರನ್ನೇ ಒದ್ದು ಕಳುಹಿಸಿರುವ ಅನೇಕ ಸಂಗತಿಗಳು ,ಭೂತ ಬಡಿದಿದೆ ಎಂಬ ಸುದ್ದಿಯೆ ಹರಡುತ್ತದೆ. ತನ್ನ ಹೆಂಡತಿಯ ಕಾಯಿಲೆಯ ಅರಿವಿದ್ದರೂ ಆಳುಗಳ ,ಹಳ್ಳಿಗರ ಮುಂದೆ ಹೇಳಿಕೊಳ್ಳದಿರುವ ಹಿಂಜರಿಕೆ ಯಾಕೆ ಎಂಬುದು ಪ್ರಶ್ನೆಯಾಗಿ ಉಳಿಯುತ್ತದೆ. ದಿವಾನಖಾನೆಯ ಪ್ರತಿಯೊಂದು ಚಿತ್ರಪಟವೂ ನಮ್ಮ ಗುಂಪಿಗೆ ನಿಮ್ಮ ಕಾಣಿಕೆ ಏನು ಎಂಬ ಪ್ರಶ್ನೆ ಕೇಳಿದ ಹಾಗೆ ಆತನನ್ನು ದಂಗುಬಡಿಸಿದೆ. ಆತನ ಆಳಾದ ಸಿದ್ದಪ್ಪನಂತೂ ಗಾಳಿ ಕಾಟವಿದೆ, ಪೀರಲದೇವರಿಗೆ ಹೋಗೋಣ ಎಂದು ಒತ್ತಾಯಿಸುವಲ್ಲಿ ಮೂಢನಂಬಿಕೆ ಕಾಣುತ್ತೇವೆ. ಮನೆಯ ಶಾಂತಿಗಾಗಿ ಜಂಗಮನನ್ನು ಕರೆಸಿದರೆ ಬಾರದಿದ್ದಾಗ, ರಮೇಶನು ಅವರನ್ನು ಊರು ಬಿಟ್ಟು ಕಳುಹಿಸುವಷ್ಟು ಕ್ರೌರ್ಯ ಎಸಗಿದಾಗ ತನ್ನ ಬಗ್ಗೆ ತಾನೇ ಅಸಹ್ಯ ಪಟ್ಟುಕೊಳ್ಳುತ್ತಾನೆ. ತಾನು ಪರಿಸ್ಥಿತಿಗೆ ತಕ್ಕಂತೆ ಬದಲಾಗಬೇಕು, ಇಲ್ಲವೇ ಎಲ್ಲವನ್ನು ಅರಗಿಸಿಕೊಂಡು ತನ್ನದನ್ನಾಗಿ ಮಾಡಿಕೊಳ್ಳುವ ಭೂಗರ್ಭದಲ್ಲಿನ ಶಿಲಾರಸದಂತಹ ಅಗಾಧ ಶಕ್ತಿಯನ್ನು ಪಡೆದುಕೊಳ್ಳಬೇಕು ಎಂದು ಪೀರಲ ದೇವರಿಗೆ ಹೊರಡುತ್ತಾನೆ. ರಮೇಶನಿಗೆ ಹೋಗಲು ಇಷ್ಟವಿಲ್ಲದಿದ್ದರೂ ನಾಲ್ಕು ಜನ ಹೊತ್ತುಕೊಂಡು ಹೊರಡುತ್ತಾರೆ. ಚಾವಡಿಯಲ್ಲಿ ಯಂತೂ ಕಂಬಕ್ಕೆ ಬಿಗಿಸಿ ಕೊಂಡವರಿಗೆ ಬಾರುಕೋಲಿನ ಹೊಡೆತ, ಕೂದಲು ಕಿತ್ತುಕೊಳ್ಳುವ ದೃಶ್ಯಗಳು ಕಾಣಿಸುತ್ತವೆ. ಒಬ್ಬ ಹೆಣ್ಣು ಮಗಳಂತೂ ಎಳೆದುಕೊಂಡು ಹೋಗುವವನನ್ನ ಕಾಲಿನಿಂದ ಒದ್ದು, ಮುಂದೆ ಹೋಗಿ ರಮೇಶನಿಗೆ ಹೊಡೆಯುತ್ತಾಳೆ. ವಿಶಾಲವಾದ ಆಲಾಯಿ ಕುಣಿಯ ಸುತ್ತ ತಿರುಗುವಾಗ ತಾನು ಪಾರಾಗಬೇಕೆಂದರೂ ಆಗುವುದಿಲ್ಲ. ಓಡಿದರೂ ಜನರು ಕರೆತರುತ್ತಾರೆ. ಆ ಹೆಂಗಸಂತೂ ನಮ್ಮ ತಾಯಿಯನ್ನು ನಿಮ್ಮಪ್ಪ ಎಲ್ಲಿಟ್ಟಿದ್ದಾನೋ ಎಂದು ಕೂಗಿದಾಗ, ರಮೇಶನು ಸ್ಥಿತಪ್ರಜ್ಞತೆ ಕಳೆದುಕೊಂಡು, ಭೂತ ಬಿಡಿಸುವವರ ಕೈಯಲ್ಲಿರುವ ಬಾರು ಕೋಲನ್ನೆ ತೆಗೆದು, ಒಡೆಯುವುದು ನಾಚಿಕೆಗೇಡಿತನ ಕೃತ್ಯ.

ಹಂಗಿನರಮನೆಯ ಹೊರಗೆ – ಈ ಕಥೆಯನ್ನು ಸುಧಾ ಪತ್ರಿಕೆ ಪ್ರಕಟಿಸಲು ನಿರಾಕರಿಸಿದರೂ, ಗೋಪಾಲಕೃಷ್ಣ ಅಡಿಗರ ಸಂಪಾದಕತ್ವದ ಸಾಕ್ಷಿ ಸಾಹಿತ್ಯ ಪತ್ರಿಕೆಯಲ್ಲಿ ಬೆಳಕುಕಂಡಿತ್ತು. ಪ್ರೊ. ಜಿ ಎಚ್ ನಾಯಕರು ದೆಹಲಿಯ ನ್ಯಾಷನಲ್ ಬುಕ್ ಟ್ರಸ್ಟ್ ಗಾಗಿ ಅಂತರ್ ಭಾರತಿ ಪುಸ್ತಕ ಮಾಲೆಗಾಗಿ ಕನ್ನಡ ಸಣ್ಣ ಕಥೆಗಳು ಪುಸ್ತಕದ

ಸಂಪಾದಕರಾಗಿದ್ದ ಸಮಯದಲ್ಲಿ ಈ ಕಥೆಯು ಸೇರಿದೆ. ಕವಿ ಗೋಪಾಲಕೃಷ್ಣ ಅಡಿಗರು ಪಂಡಿತ ನೆಹರು ಕುಟುಂಬದ ಆಪ್ತವಲಯಕ್ಕೆ ಸೇರಿದ ಕನ್ನಡಿಗ ಎಚ್ ವೈ ಶಾರದಾಪ್ರಸಾದರಿಂದ ದೂರವಾಣಿ ಕರೆ ಮಾಡಿಸಿ ಈ ಕಥೆಯನ್ನು ಕೈಬಿಡಲು ಸೂಚಿಸಿದ್ದರಂತೆ ಎಂದು ಕಥೆಗಾರರೇ ಹೇಳಿಕೊಂಡಿದ್ದಾರೆ. ಆದರೆ ಜಿ ಎಚ್ ನಾಯಕರು ಕಿವಿಗೊಡದೆ ಜವಾಬ್ದಾರಿಯಿಂದ ಅದನ್ನು ಸೇರ್ಪಡೆ ಮಾಡಿದ್ದರು. ಇದು ದೇಶದ ಎಲ್ಲ ಭಾಷೆಗಳಿಗೆ ಅನುವಾದಗೊಂಡಿದೆ. ಈ ಶೀರ್ಷಿಕೆಯ ಹೆಸರಿನಲ್ಲಿಯೇ ಕಥಾಸಂಕಲನ ೧೯೭೭ರಲ್ಲಿ ಪ್ರಕಟವಾಗಿ ಅದೆ ವರ್ಷವೇ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದದ್ದು ವಿಶೇಷ. ೧೯೯೮ ನೆಯ ವರ್ಷದಲ್ಲಿ ಗುಲ್ಬರ್ಗ ವಿಶ್ವವಿದ್ಯಾಲಯವು ಕನ್ನಡ ಎಂ.ಎ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕವಾಗಿ ನಿಗದಿಪಡಿಸಿದ್ದು ಗಮನಾರ್ಹ. ಹಿಂದಿ ಚಿತ್ರರಂಗದ ಹೆಸರಾಂತ ನಿರ್ದೇಶಕ ಶ್ರೀ ಬಸು ಚಟರ್ಜಿಯವರು ೨೦೦೭ರಲ್ಲಿ ಭಾರತ ದೇಶದ ೨೭ ಭಾಷೆಗಳ ಕಥೆಗಳನ್ನು ಹಿಂದಿ ಭಾಷೆಯಲ್ಲಿ ದೂರದರ್ಶನಕ್ಕೆ ನಿರ್ಮಿಸಿಕೊಡಲು ಒಪ್ಪಂದ ಮಾಡಿಕೊಂಡಿದ್ದಂತೆ, ನಾಗತಿಹಳ್ಳಿ ಚಂದ್ರಶೇಖರ ಅವರ ಸಲಹೆ ಮೂಲಕ ಈ ಕಥೆಯು ಆಯ್ಕೆಯಾಗಿ, ಹಿಂದಿ ಭಾಷೆಯ ಕನ್ನಡ ಕಹಾನಿಯಾ ಸಂಕಲನದಲ್ಲಿದೆ. ಅದರ ಶೀರ್ಷಿಕೆ ಮೆಹರ್ ಬಾನೋಂಕೆ ಘರ್ ಕೆ ಬಾಹರ್ ಎಂದು ಅದೇ ಶೀರ್ಷಿಕೆಯಲ್ಲಿ ದೆಹಲಿಯ ರಾಷ್ಟ್ರೀಯ ದೂರದರ್ಶನದಿಂದ ಪ್ರಸಾರವಾದದ್ದು ವಿಶಿಷ್ಟವಾಗಿದೆ.

ಇಲ್ಲಿಯ ಕಥಾನಾಯಕ ಒಬ್ಬ ರೋಗಿ. ಕಥಾನಾಯಕನ ಪ್ರಜ್ಞೆಯಲ್ಲಿಯೆ ಕ್ರಿಯೆ ಮತ್ತು ಪ್ರತಿಕ್ರಿಯೆಗಳು, ಸಂಗತಿಗಳು ಜರಗುತ್ತವೆ. ಈ ಕಥೆಯಲ್ಲಿ ಪ್ರೇಮ, ಆಸೆ, ನಿರೀಕ್ಷೆ, ಹತಾಶೆ, ಆಶಾಭಾವನೆ ವ್ಯಕ್ತವಾಗಿವೆ. ರೋಗಿಯ ಸ್ನೇಹಿತ ರವಿಯು ಕಾಲೇಜಿನಲ್ಲಿ ಉಪನ್ಯಾಸಕ. ಅಂತರ್ಜಾತಿ ವಿವಾಹವಾಗಿ ತಂದೆಯಿಂದ ದೂರವಾಗಿ ಇದ್ದವನು. ರವಿಯ ತಂಗಿ ಕಿರಣಳು ಮದುವೆಯಾಗಿ ಮೂರು ವರ್ಷಕ್ಕೆ ಗಂಡನಿಂದ ದೂರವಾಗಿ, ಶಿಕ್ಷಕಿಯಾಗಿ ಕೆಲಸಕ್ಕೆ ಸೇರಿದವಳು . ಇತ್ತ ನಾಯಕ ಕಿರಣಳನ್ನು ಪ್ರೀತಿಸುತ್ತಿದ್ದರೂ, ಹೇಳುವುದಕ್ಕೆ ಧೈರ್ಯ ಸಾಲದೇ ಬೇರೊಂದು ಮದುವೆಯಾಗಿ, ಹಿಂದಿನ ಪ್ರೇಮ ಕಹಾನಿ ಹೇಳಿ ಹೆಂಡತಿಯೊಂದಿಗೆ ಬಿರುಕು ತಂದುಕೊಂಡಿರುತ್ತಾನೆ. ಕ್ಯಾನ್ಸರ್ ಕಾಯಿಲೆಗೆ ಒಳಗಾಗಿ ಸಕಾಲಕ್ಕೆ ಚಿಕಿತ್ಸೆ ಪಡೆಯದೆ ಆಸ್ಪತ್ರೆಯಲ್ಲಿ ದಾಖಲಾಗಿ ತನ್ನ ಹಿಂದಿನ ನೆನಪಿನ ಮೂಲಕ ವಿಮರ್ಶೆಗೆ ಒಳಪಡಿಸುತ್ತಾನೆ. ಯಾರ ಮೇಲೆಯೂ ನಂಬಿಕೆ ಇರದ ಮಾನಸಿಕ ಸ್ಥಿತಿಗೆ ಒಳಗಾಗಿ ವರ್ತಿಸುತ್ತಿರುತ್ತಾನೆ. ಹೆಂಡತಿಯು ಓಡೋಡಿ ಬಂದು ಕಣ್ಣೀರು ಸುರಿಸುತ್ತಾಳೆ ಹೊರತು ಗಂಡನ ಮನಸ್ಸು ಗೆಲ್ಲಲಾಗುವುದಿಲ್ಲ. ಆಕೆಯ ಕಣ್ಣೀರನ್ನು ನಾಟಕವೆಂದೇ ಭಾವಿಸುತ್ತಾನೆ. ಆ ಕಡೆ

ಕಿರಣಳು ಕಥಾನಾಯಕನ ಜೊತೆ ಮೊದಲಿರುವ ಪ್ರೇಮ ಸಂಬಂಧ ಗಂಡನಿಗೆ ತಿಳಿಯಲ್ಪಟ್ಟು ತಿರಸ್ಕೃತ ಆಗಿರುತ್ತಾಳೆ. ಗಂಡನಿಂದ ದೂರವಾಗಿ ಮನೋವ್ಯಥೆಗೆ ಒಳಗಾಗಿದ್ದರೂ , ಆಸ್ಪತ್ರೆಯಲ್ಲಿ ದಾಖಲಾದ ಕಥಾನಾಯಕನನ್ನು ಆರೈಕೆ ಮಾಡುವಲ್ಲಿ ಮುಂದೆ ಬರುತ್ತಾಳೆ. ರೋಗಿಯು ಕೂಡ ತನ್ನನ್ನು ಆತ್ಮವಿಮರ್ಶೆ ಮಾಡಿಕೊಳ್ಳುವುದು ಕಾಣುತ್ತದೆ. ಕಿರಣಳು ಗಂಡನಿಂದ ದೂರವಾಗಿರುವುದು ಮೊದಲೇ ತಿಳಿದಿದ್ದರೆ ಆಕೆಯ ಜೊತೆ ಬಾಳಬಹುದಿತ್ತು ಎಂದು ಒಳಗೊಳಗೆ ಆಸೆಯೆಂಬ ಚಿಗುರು ಪುಟಿಯುತ್ತಿರುತ್ತದೆ. ತನ್ನಿಂದಲೇ ಕಿರಣಳ ಬದುಕಿನ ನೆಮ್ಮದಿಗೆ ಬೆಂಕಿ ಇಟ್ಟಿದ್ದೇನೆ, ತನಗೆ ಪ್ರಾಯಶ್ಚಿತ್ತ ಇಲ್ಲವೇ ಎಂದು ಕೇಳಿಕೊಳ್ಳುವುದು ಆತ್ಮಶುದ್ಧಿಯ ಹಾದಿ ತೋರಿಸುತ್ತದೆ. ತನ್ನಗೆಳೆಯ ರವಿ ಹೇಳಿದಂತೆ ಬದುಕಿನಲ್ಲಿ ಪ್ರತಿಯೊಂದು ಗಳಿಗೆಯನ್ನು ಸವಿಯುವಲ್ಲಿ ವಿಫಲನಾದೆನು ಎಂದು ಚಡಪಡಿಸುತ್ತಾನೆ. ಕೈಹಿಡಿದ ಹೆಂಡತಿಯನ್ನು ಮನೆಗೆ ಕಳುಹಿಸಿಯಾದರೂ, ಕಿರಣಳ ಜೊತೆ ಬದುಕಬೇಕು ಎಂಬ ಪ್ರೇಮ ನಿವೇದನೆ ಬಡಿದೆಬ್ಬಿಸುತ್ತದೆ. ರೋಗಿಯು ಕೇವಲ ದೈಹಿಕವಾಗಿ ಶಸ್ತ್ರಚಿಕಿತ್ಸೆಗೆ ಮಾತ್ರ ಒಳಗಾಗುತ್ತಿಲ್ಲ, ಮಾನಸಿಕವಾಗಿಯೂ ಕೂಡ ಚಿಕಿತ್ಸೆಗೆ ಒಳಗಾಗುತ್ತಲೇ, ಭೂಮಿಯ ಮೇಲೆ ಹುಟ್ಟಿರುವ ಪ್ರತಿಯೊಬ್ಬ ವ್ಯಕ್ತಿಯೂ ಹಂಗಿನರಮನೆಗೆ ಒಳಗಾಗಬೇಕೆಂಬ ಭಾವ ಮೂಡುತ್ತದೆ.

ದುರಸ್ತಿ ಕಥೆಯು ಸೈಕಲ್ ರಿಪೇರಿ ಮತ್ತು ಮಾನವ ಸ್ವಭಾವಗಳ ದುರಸ್ತಿಯನ್ನು ಚಿತ್ರಿಸುತ್ತದೆ. ಇದೊಂದು ಹೃದಯ ತಟ್ಟುವ ಕಥೆಯಾಗಿದೆ. ಸೈಕಲ್ ರಿಕ್ಷಾ ಚಾಲಕನಾದ ತಿಮ್ಮನ ಬವಣೆ, ಮುಗ್ಧತೆ, ಪ್ರಾಮಾಣಿಕತೆ, ದಡ್ಡತನವನ್ನು ಚಿತ್ರಿಸುತ್ತದೆ. ಸಾರ್ವತ್ರಿಕ ಮೌಲ್ಯಗಳ ಕುಸಿತ, ನೈತಿಕ ಅಧಃಪತನ ಇಲ್ಲಿ ಕಾಣುತ್ತೇವೆ. ಗೌಡನ ಮಗಳಾದ ಯಮುನಕ್ಕ ಗಂಡನನ್ನು ಕಳೆದುಕೊಂಡು, ಕಾಮಾತುರಳಾಗಿ ತಿಮ್ಮನನ್ನು ಹಿಡಿಯಲು ಬಂದು, ವಿಫಲವಾಗಿ ಬಾವಿಗೆ ಬಿದ್ದು ಸಾಯುತ್ತಾಳೆ. ಗರ್ಭಿಣಿ ಯಮುನಕ್ಕ ತೀರಿಕೊಂಡ ಆಪಾದನೆ ತಿಮ್ಮನ ಮೇಲೆ ಬಂದು ಭೀಮಣ್ಣಗೌಡನಿಂದ ಬಾರುಕೋಲಿನ ಹೊಡೆತ ತಿಂದು ರಿಕ್ಷಾ ಚಾಲಕನಾಗಿ ಬದುಕು ದೂಡುತ್ತಾನೆ. ರಿಕ್ಷಾ ಚಾಲಕ ತಿಮ್ಮ ,ಗೌಡನ ಅಥವಾ ಅಯ್ಯನ ಕೆಲಸದಾಳಿನ ಮಗ, ಹಿರಿಯ ಮಗನಾಗಿದ್ದಾನೆ. ಗೌಡನ ಇನ್ನೋರ್ವ ಮಗನಾದ ತಿಮ್ಮನಗೌಡನು , ತಿಮ್ಮನ ಖಾಸಾ ತಂಗಿಯಾದ ನಾಗಮ್ಮನಿಗೆ, ತಂದೆಯಿಂದಲೇ ರಂಗಣ್ಣನ ಜೊತೆ ಮದುವೆ ಗೊತ್ತು ಮಾಡಿಸುತ್ತಾನೆ. ಅಣ್ಣನ ಸ್ಥಾನದಲ್ಲಿ ಇರಬೇಕಾಗಿರುವವನೆ ತಂಗಿಯ ಜೊತೆ ಸರಸ ಸಲ್ಲಾಪದಲ್ಲಿ ತೊಡಗುವುದು, ಅಷ್ಟಲ್ಲದೆ ಸ್ವತಃ ರಂಗಣ್ಣನೂ ಕೂಡ ಅದಕ್ಕೆ ಬೆಂಬಲಿಸುವುದು ನೀಚತನ ವಾಗಿದೆ. ತಿಮ್ಮನಿಗೆ ಇದನ್ನು ಕಣ್ಣಾರೆ ಕಂಡು ಏಕಕಾಲಕ್ಕೆ ತಂಗಿ, ವರನಾದ ರಂಗಣ್ಣ, ತಮ್ಮ

ತಿಮ್ಮನಗೌಡನ ಬಗ್ಗೆ ಆಕ್ರೋಶ ಭುಗಿಲೇಳುತ್ತದೆ. ತಂಗಿಯ ಜೊತೆ ತಾನು ಪ್ರೀತಿಸುತ್ತಿರುವ ಗಂಗಿಯ ಜೊತೆ ಮದುವೆಯಾಗಬೇಕೆಂಬ ಆಸೆ ಭಂಗಗೊಳ್ಳುತ್ತದೆ.ಬಾಲ್ಯದಿಂದಲೂ ಸಲಿಗೆಯಿಂದ ತನ್ನನ್ನು ಮಾವನಿಂದ ಕರೆಯುತ್ತಿರುವ ಗಂಗಿಗೆ, ಆಕೆ ಹೇಳಿದಂತೆ ಇಪ್ಪತ್ತೈದು ರೂಪಾಯಿ ಕೊಡಲು ದಿನನಿತ್ಯ ದುಡಿದು, ಸೈಕಲ್ ರಿಪೇರಿ ಮಾಡಿಸದೆ ಆಕೆಗೆ ಹಣ ಕೊಡುತ್ತಾನೆ. ಆದರೆ ಆಕೆ ಮಾತ್ರ ಕಂಡ ಕಂಡವರಿಗೆ ದೇಹ ಹಂಚಿಕೊಂಡು ಬದುಕುತ್ತಿರುತ್ತಾಳೆ. ರಾಮಣ್ಣ ಎಂಬ ರಿಕ್ಷಾ ಚಾಲಕ ಆಕೆಯ ದುರ್ನಡತೆಯ ಬಗ್ಗೆ ಎಷ್ಟೇ ಹೇಳಿದರೂ ಆಕೆಯನ್ನು ನಂಬಿ ಹಣಕೊಟ್ಟು ತಿಮ್ಮ ಮೋಸಹೋಗಿ ನೊಂದುಕೊಳ್ಳುತ್ತಾನೆ. ಹಣ ಪಡೆದ ಗಂಗಿ ವೇಶ್ಯಾವಾಟಿಕೆಗಾಗಿ ಮುಂಬಯಿಗೆ ತೆರಳುವ ದೃಶ್ಯವನ್ನು ಕಣ್ಣಾರೆ ಕಂಡು ತನ್ನನ್ನೇ ತಾನು ಶಪಿಸಿಕೊಳ್ಳುತ್ತಾನೆ. ತನ್ನಲ್ಲಿಯ ಮುಗ್ಧತೆ, ಹುಚ್ಚುತನ, ಬೆಳ್ಳಗಿರುವುದೆಲ್ಲ ಹಾಲು ಎಂಬ ಭಾವನೆಯನ್ನು ಹಳಿದುಕೊಳ್ಳುತ್ತಾನೆ. ಅಕ್ರಮ ಸಿಮೆಂಟ್ ಮಾರಾಟ, ಹಣಕ್ಕಾಗಿ ಹೆಣ್ಣುಮಕ್ಕಳನ್ನು ವೇಶ್ಯಾವಾಟಿಕೆಗೆ ತಳ್ಳುವ ನೀಚತನದ ಕೃತ್ಯಗಳು ಕಥೆಯುದ್ದಕ್ಕೂ ಅನೀತಿ, ಮೋಸ, ಭ್ರಷ್ಟತನಗಳು ಬಯಲುಗೊಂಡಿವೆ. ಗಂಗಿಯು ಈ ಹಿಂದೆ ಹೇಗಿದ್ದರೂ ಸರಿ, ಮದುವೆಯಾದ ಮೇಲೆ ತನ್ನ ಜೊತೆ ಸರಿಯಾಗಿದ್ದರೆ ಸಾಕು ಎಂಬ ಭ್ರಮೆಗೆ ತಿಮ್ಮ ಒಳಗಾಗಿರುತ್ತಾನೆ. ಗಂಗಿಯ ಮೋಸ ತಿಳಿದು, ಆಕೆಯ ಮೇಲಿನ ವ್ಯಾಮೋಹ ಕಳಚಿ, ಉಳಿದ ಹಣದಲ್ಲಿ ಸೈಕಲ್ ದುರಸ್ತಿ ಮಾಡಿಸಿಕೊಂಡು ವಾಸ್ತವತೆಯನ್ನು ಅರಿತು, ಸ್ವೀಕರಿಸಿ ಬದುಕಲು ನಿರ್ಧರಿಸುತ್ತಾನೆ.

ಬಿಸಿಲು ಕುದುರಿ ಕಥೆಯು ನೈತಿಕತೆ, ನೀತಿ, ಜವಾಬ್ದಾರಿ, ಪ್ರಾಮಾಣಿಕತೆಯ ಶೋಧದ ಕಡೆ ನಡೆಯುತ್ತದೆ. ಕಥಾ ನಾಯಕ ಸೋಮಶೇಖರ, ನಾಯಕಿ ವಿಮಲೆ, ರಜನಿ, ಚಂದ್ರು ಪಾತ್ರಗಳ ಮೂಲಕ ಮನುಷ್ಯ ಸ್ವಭಾವದ ವಾಸ್ತವತೆ, ಡಾಂಭಿಕತೆ, ಡೊಂಕುತನದ ವರ್ತನೆಗಳು, ಗೊಂದಲಗಳು, ಸ್ಪಷ್ಟತೆ ಇಲ್ಲದ ನಿರ್ಧಾರಗಳು ಬಯಲಾಗುತ್ತವೆ. ಹೆಣ್ಣು-ಗಂಡುಗಳು ಕೂಡಿಯೇ ಕುಡಿಯುವ, ನರ್ತಿಸುವ, ಮೋಜು ಮಸ್ತಿ ಮಾಡುವ ದೃಶ್ಯಗಳು ಅಪಾರವಾಗಿ ಚಿತ್ರಿತವಾಗಿವೆ. ವಿಮಲೆಯು ಸೋಶಿಯಲ್ ಆಗಿ ವರ್ತಿಸುವುದು, ಮದ್ಯಸೇವನೆ, ಗಡಿಬಿಡಿಯ ವರ್ತನೆ, ತಮಾಷೆ, ನೋಡುವವರಿಗೆ ಆಕೆಯ ವರ್ತನೆ ಅಸಮಾಧಾನವಾಗಿ [illegible]ತರೂ, ಬದುಕನ್ನು ಸರಳವಾಗಿ ಸ್ವೀಕರಿಸಿದವಳು. ರಜಿನಿಯು ತನಗೆ ಯಾವುದೇ ಕಟ್ಟುಪಾಡುಗಳು ಇಲ್ಲವೆಂದು, ಸೋಮಶೇಖರನ ಜೊತೆ ಕೂಡಿ ಕೊಳ್ಳುವಲ್ಲಿ ಆಕೆಗೆ ಪಾಪಪ್ರಜ್ಞೆ ಕಾಡುವುದಿಲ್ಲ. ಸೋಮಶೇಖರನಿಗೆ ಮಾತ್ರ ಅಂತರಂಗದಲ್ಲಿ ವಿಮಲೆಯು ಪ್ರಾಮಾಣಿಕಳು, ಬುದ್ಧಿವಂತೆ ಎಂಬ ಕಾರಣಕ್ಕಾಗಿ ಮದುವೆಯಾಗಬೇಕೆಂಬ ಇಂಗಿತ ಇರುತ್ತದೆ. ಅಪೇಕ್ಷೆಯು

ಸಹಜವಾದುದಾದರೂ ತನ್ನ ಅಪ್ರಾಮಾಣಿಕತೆಯ ಬಗ್ಗೆ ಆಲೋಚಿಸುವುದೇ ಇಲ್ಲ. ನಾಗರಿಕತೆಯ ಹೊದಿಕೆಯಲ್ಲಿಯೇ ಅನಾಗರಿಕತೆಯ, ಮಿತಿಮೀರಿದ ವರ್ತನೆ, ಕುಡಿತ, ಅನೇಕ ಹುಡುಗಿಯರ ಜೊತೆ ದೇಹ ಸಂಬಂಧ ಹಂಚಿಕೊಳ್ಳುವ ಸನ್ನಿವೇಶಗಳಲ್ಲಿ ಮನುಷ್ಯನ ಪಶುತ್ವ ಬೆತ್ತಲಾಗುತ್ತದೆ. ತಾನು ಸಂಸಾರಿಗ ಆಗಬೇಕೆಂದು ಸೋಮಶೇಖರನು, ಪ್ರಾಮಾಣಿಕಳೆಂದು ಭಾವಿಸಿದ ವಿಮಲೆಯನ್ನು ಮದುವೆಯಾಗುತ್ತಾನೆ. ಆದರೆ ಪಾರ್ಟಿಯಲ್ಲಿ ಆಕೆಯ ಜೊತೆ ತಾನು ಕೂಡಿಕೊಂಡಿದ್ದೇನೆ ಎಂದು ತಿಳಿದು ಆಘಾತವಾಗುತ್ತದೆ. ಆದರೆ ಸೋಮಶೇಖರನಿಗೆ ರಜನಿಯ ಗುಣಗಳು ಆಕರ್ಷಣೆಯಾಗದೆ, ದೈಹಿಕ ಆಕರ್ಷಣೆಯಾಗಿ ಸಂಬಂಧ ಹಂಚಿಕೊಂಡ ಬಗ್ಗೆ ಪಾಪ ಪ್ರಜ್ಞೆಯೆ ಕಾಡುವುದಿಲ್ಲ. ಆದರೂ ತನಗೆ ಸಮರ್ಪಣೆ ಮಾಡಿಕೊಂಡ ವಿಮಲೆಯ ಬಗ್ಗೆ ಅಸಮಾಧಾನದ ಹೊಗೆ ಬೆಳೆಸಿಕೊಳ್ಳುವುದು ಕಾಮುಕತನದ ಲಕ್ಷಣವಾಗಿ ಗೋಚರಿಸುತ್ತದೆ. ವಿಮಲೆಯು ಮಾತ್ರ ಒಳಿತು-ಕೆಡುಕು ಸುಖ-ದುಃಖ ಒಂದು ನಾಣ್ಯದ ಎರಡು ಮುಖಗಳು ಇದ್ದಂತೆ ಎಂದು ಭಾವಿಸಿ, ಸಮಾನವಾಗಿ ಸ್ವೀಕರಿಸಬೇಕೆಂಬ ಭಾವನೆ ಕಾಣುತ್ತೇವೆ. ತಾನು ಹೇಗಿದ್ದರೂ ಸಂಬಂಧ ಹಂಚಿಕೊಂಡವರ ಜೊತೆಯೇ ಮದುವೆ ಆಗಿರುವುದಕ್ಕೆ ವಿಮಲೆ ತೃಪ್ತಿ ಪಡುತ್ತಾಳೆ. ವಿಮಲೆಯ ವ್ಯಕ್ತಿತ್ವಕ್ಕೆ ರಜನಿಯಂಥವರು ದುಃಖಿಸಿ ಅಳುತ್ತಾರೆ. ರಜನಿ ಎಂಬಂತಹ ಗೊಂಡಾರಣ್ಯದಲ್ಲಿ ಸುಖಿಸಿದ ಸೋಮಶೇಖರನಿಗೆ ವಿಮಲೆ ತನಗೆ ಹೆಂಡತಿಯಾಗಿ ಬಂದಿರುವುದರ ಬಗ್ಗೆ ಹೆಮ್ಮೆಯಾದರೂ, ನೈತಿಕತೆ ಕೇವಲ ಹೆಣ್ಣಿಗೆ ಮಾತ್ರ ಸೀಮಿತವೇ ಎಂಬ ಪ್ರಶ್ನೆ ತೀವ್ರವಾಗಿ ಕಾಡದಿರದು.

ಕರ್ಪೂರದ ಕಾಯದಲ್ಲಿ ಕಥಾಸಂಕಲನದ ತಮಂಧ ಕಿರಿದೆನ್ನಬಹುದೆ ಅಯ್ಯಾ ಎಂಬ ಕಥೆಯು ಅರಿವಿನ ಬೆಳಕನ್ನು, ಪ್ರಜ್ವಲಿಸಬೇಕು ಎಂಬುದು ಕಥೆಯ ಸಂದೇಶವಾಗಿದೆ. ಪ್ರತಿಯೊಬ್ಬರೂ ಜೀವನದಲ್ಲಿ ಒದಗಿ ಬರುವ ಅರ್ಧದಿನದ ಕತ್ತಲೆಯನ್ನು ಶಮನ ಮಾಡಲು ನಿರಂತರ ಹೋರಾಡುತ್ತಾರೆ. ಹರಿದ್ವಾರ, ಹೃಷಿಕೇಶಗಳ ಧಾರ್ಮಿಕ ಪರಿಸರದ ಚಿತ್ರಣವಿದೆ. ಸರ್ವಧರ್ಮ ಸಮ್ಮೇಳನದ ಅಂತರಾಳದ ಸತ್ಯಗಳು ಇಲ್ಲಿ ಗೋಚರಿಸುತ್ತವೆ. ಅರ್ಜುನ್ ಮತ್ತು ಬಿಂದಿಯಾ ಪರಸ್ಪರ ಮಕ್ಕಳಾಗುವುದಿಲ್ಲವೆಂದು ಅರಿತಿದ್ದರೂ, ಅದಕ್ಕಾಗಿ ಹಂಬಲಿಸುವುದು ಮನುಷ್ಯನ ಸಹಜ ಅಪೇಕ್ಷೆ. ಬೆಳಕನ್ನು ಕಾಣುವ ಸ್ಥಳಗಳಲ್ಲಿ, ಕತ್ತಲೆಗೆ ದೂಡುವ ಸನ್ನಿವೇಶಗಳು ಎದುರಾಗಿವೆ ಈ ಕಥೆಯಲ್ಲಿ. ರಾಧಾಳು ಮದುವೆಯಾಗಿದ್ದರೂ ತನ್ನ ಪ್ರಿಯತಮ ಅನಿಲನಿಗಾಗಿ, ತಾಳಿ ಕಟ್ಟಿದ ಗಂಡ ಗೋಪಾಲನನ್ನೆ ಪ್ರವಾಹಕ್ಕೆ ಸಿಲುಕಿಸಿ ಬಲಿ ಕೊಡುತ್ತಾಳೆ. ತಾನೂ ಕೂಡ ನೀರಿನಲ್ಲಿ ಸಿಲುಕಿದಂತೆ ನಾಟಕವಾಡಿ ಪಾರಾಗುವುದು

ಮನಸ್ಸಿಗೆ ಅಂಟಿಕೊಂಡಿರುವ ತಮಂಥದ ಕೇಡು ಆಗಿದೆ. ಹೃಷಿಕೇಶದಲ್ಲಿ ಹಣ ಪಡೆದು ಪೂಜೆ ಮಾಡುವ ಪೂಜಾರಿಗಳ ಕಾಟ ಅತಿ ಹೆಚ್ಚು. ನಂಬಿಕೆಯ ಅಭಾವದಿಂದಲೇ ದೇಶಕ್ಕೆ ,ಧರ್ಮಕ್ಕೆ ಅಪಾಯ, ಅದಃಪತನ ಎಂಬ ಮಾತಿನ ಸೋಗಲಾಡಿತನದ ಪ್ರದರ್ಶನವೂ ಕಾಣಬಹುದು. ದೇವರು, ಕರ್ಮ, ಪುಣ್ಯಗಳು ಕೂಡ ಮಾರಾಟಕ್ಕೆ ಲಭ್ಯವಾಗುವ ವಸ್ತುಗಳಾಗಿವೆ. ಈ ಕತೆಯಲ್ಲಿಯ ಬಾಬೂಜಿಯನ್ನು ಅರ್ಜುನ ಮತ್ತು ಬಿಂದಿಯಾ ದೇವರೆಂದು ಭಾವಿಸಿದ್ದಾರೆ. ಒಳ್ಳೆಯತನವೇ ದೇವರು, ಬಾಬೂಜಿ ಇಲ್ಲದಿದ್ದರೆ ಗೋಪಾಲನ ಹೆಂಡತಿ ರಾಧಾ ನೀರು ಪಾಲಾಗಿ ದುರಂತವೇ ಸಂಭವಿಸುತ್ತಿತ್ತು. ರಾಧಾಳು ಗಂಡನನ್ನು ಪ್ರವಾಹಕ್ಕೆ ಬಲಿಕೊಟ್ಟು, ಪ್ರಿಯಕರ ಅನಿಲನಿಗಾಗಿ ತಾನು ಬದುಕುವ ಮೂಲಕ ನೀಚತನ, ಮೋಸ, ಕಾಮದಾಟ ಬಯಲು ಮಾಡಿಕೊಂಡಿದ್ದಾಳೆ. ಹೃಷಿಕೇಶ ಮಾತ್ರವಲ್ಲ ಪುಣ್ಯಕ್ಷೇತ್ರಗಳು ಎಂದು ಕರೆಸಿಕೊಳ್ಳುವ ಸ್ಥಳಗಳಲ್ಲಿ ತಪಸ್ವಿ, ವೈದ್ಯ, ಬಿಕ್ಷುಕರ, ಸನ್ಯಾಸಿಗಳ ವೇಷ ಹಾಕಿ, ಜನರ ದೌರ್ಬಲ್ಯ ಅರಿತು ಸುಲಿಗೆ ಮಾಡುವುದು ಎಗ್ಗಿಲ್ಲದೆ ನಡೆಯುತ್ತಿರುವುದಕ್ಕೆ ನಿದರ್ಶನ. ಸ್ವಜಾತಿ, ಸ್ವ ಧರ್ಮಗಳ ಅಸಮಾನತೆಯನ್ನು ಹೋಗಲಾಡಿಸದವರು, ಯಾವುದೇ ಧರ್ಮದ ಉನ್ನತಿಗಾಗಿ ಶ್ರಮ ಪಡುವ ರೀತಿಯಲ್ಲಿ ಕಾಣುವುದು ನಾಟಕೀಯ ಗುಣವಾಗಿದೆ. ಧರ್ಮಗಳ ಹೆಸರಿನಲ್ಲಿ ಆಶ್ರಮಗಳು ಕೂಡ ಸರಕಾರಿ ಸೌಲಭ್ಯ ಪಡೆಯಲು ಹೆಚ್ಚಿಸುವುದು ಸರಕಾರಿ ಉದ್ಯಮದಂತೆ ಸ್ಪಷ್ಟವಾಗಿ ಗೋಚರಿಸುತ್ತವೆ. ಸೇಠ್ ಧನರಾಮ್ ದಾಸನು ಸಾವಿರಾರು ಜನರಿಗೆ ಪುಕ್ಕಟೆ ಊಟ ವ್ಯವಸ್ಥೆ ಮಾಡಿದ ಸ್ಥಳದಲ್ಲಿ ಬಾಬೂಜಿ ಹೊರಡುತ್ತಾನೆ. ಕುಷ್ಟರೋಗಿಗಳಿಗೆ ಆರೈಕೆ ಮತ್ತು ಉಚಿತ ಊಟದ ವ್ಯವಸ್ಥೆ ಇರುವುದನ್ನು ಕಾಣುತ್ತಾನೆ. ದೇಹಕ್ಕೆ ಬರುವ ಕಾಯಿಲೆಗಳಿಗೆ ಔಷಧಿ ಎಲ್ಲಿಂಯಾದರೂ ಸಿಗುತ್ತದೆ,ಮನಸ್ಸಿಗೆ ಅಂಟಿಕೊಂಡಿರುವ ತಮಂಥ, ಮನುಷ್ಯತ್ವವೇ ಇಲ್ಲದಿರುವ ,ನುಂಗಿರುವ ಕಾಯಿಲೆಗಳಿಗೆ ಔಷಧಿ ಎಲ್ಲಿ ಎಂಬುದು ಮಾರ್ಮಿಕತೆಯಿಂದ ಕೂಡಿದೆ. ಮನುಷ್ಯನ ಕೊಳಕುತನ, ನೀಚತನ, ಲಜ್ಜೆಗೇಡಿತನ ಸರ್ವವ್ಯಾಪಿಯಾಗಿದೆ. ಅದು ಮಂದಿರ, ಮಸೀದಿ, ಚರ್ಚು, ದೇವರು, ಭಕ್ತಿ, ಶಿಕ್ಷಣ ಸಂಸ್ಥೆ, ಶಾಸಕರಲ್ಲಿ, ಶಾಸನಗಳಲ್ಲಿ, ಆಡಳಿತ ಯಂತ್ರಗಳಲ್ಲಿ, ಹರಡಿ, ಸಮಾಜ ಭ್ರಷ್ಟಗೊಳ್ಳುತ್ತಿದೆ ಎಂಬ ಆಂತರಿಕ ಸಂಗತಿಗಳನ್ನು ಬಯಲು ಮಾಡುತ್ತದೆ.

ಬೆತ್ತಲೆ ಸ್ವಾಮಿ ಕಥೆಯು ಹುಚ್ಚ ವ್ಯಕ್ತಿಯನ್ನು, ಬೆತ್ತಲೆ ಸ್ವಾಮಿಯನ್ನಾಗಿ ಮಾಡಿದ ಸ್ವಾರ್ಥಿಗಳ, ಮೈಗಳ್ಳರ, ಪುಂಡ ಪೋಕರಿಗಳ ರೋಚಕ ಕಥೆಯಾಗಿದೆ. ಕಬ್ಬೇರ ತಿಪ್ಪಣ್ಣ, ಗಿರಣಿ ಮಾಬಲ್ಲಿ, ಉಪ್ಪಾರ ಹುಸೇನಿ, ಬ್ಯಾಗಾರ ಎಲ್ಲಪ್ಪ, ಹೋಟೆಲ್

ಬೆನಕಪ್ಪನವರು ಚೇರ್ಮನ್ ಕುಬೇರಪ್ಪನ ವಿರುದ್ಧವೇ ಸಿಡಿದು ಷಡ್ಯಂತ್ರ ರೂಪಿಸಿ, ತಮ್ಮ ಹಿತಾಸಕ್ತಿ ಕಾಪಾಡುತ್ತಾರೆ. ಇವರೆಲ್ಲರೂ ಸೇರಿ ಬೆಟ್ಟದ ಮೇಲೆ ಮಲ್ಲೇಶ್ವರ ಪೂಜೆಯ ಜೊತೆಗೆ, ಬೆತ್ತಲೆ ವ್ಯಕ್ತಿ ವಾಸಮಾಡುವ ಗವಿಯೊಳಗೆ ವೇದಿಕೆ ಕಟ್ಟಿ, ಕಟ್ಟೆಗೆಯ ಪಾದುಕೆ ನಿರ್ಮಾಣ ಮಾಡಿ ಪೂಜೆ ಶುರು ಮಾಡುತ್ತಾರೆ. ಇವರೆಲ್ಲರೂ ಒಬ್ಬೊಬ್ಬರು ಒಂದೊಂದು ಜಾತಿಯ ಜನರ ಹಿತ ಕಾಯುತ್ತಾರೆ. ಅಷ್ಟಲ್ಲದೆ ಕಟ್ಟಿಕೊಂಡ ಗಂಡನನ್ನು ಬಿಟ್ಟು, ಪ್ರಿಯಕರನಿಂದ ವಂಚನೆಗೆ ಒಳಗಾದ ಯಮುನಕ್ಕಳು ಕೂಡ ಖಾನಾವಳಿ ತೆರೆದು ಅವರೆಲ್ಲರ ಅವ್ಯವಹಾರಕ್ಕೆ ಕುಮ್ಮಕ್ಕು ನೀಡುತ್ತಾಳೆ. ಮಡಿವಂತರು ಎನಿಸಿಕೊಂಡವರು ಈಕೆಗೆ ದಾಸರಾಗುತ್ತಾರೆ. ಬೆತ್ತಲೆ ಸ್ವಾಮಿಗೆ ನಡೆದುಕೊಂಡರೆ ಮಕ್ಕಳಾಗುತ್ತವೆ ಎಂದು ನಂಬುವ ಎಲ್ಲಮ್ಮ, ಶಿವಮ್ಮ, ಶಾಂತಮ್ಮ ಎಂಬ ಮುಗ್ಧ, ಮೂಢನಂಬಿಕೆಯ ಹೆಂಗಸರು ಇಲ್ಲಿ ಕಾಣುತ್ತಾರೆ. ಚೇರ್ಮನ್ ಕುಬೇರಪ್ಪನು ಚುನಾವಣೆಯಲ್ಲಿ ತಾನೇ ನಿಲ್ಲಬೇಕು, ಇಲ್ಲದಿದ್ದರೆ ಅಧಿಕಾರ ಪುಂಡ ಪೋಕರಿಗಳ ಕೈಗೆ ಸಿಕ್ಕು ಸಮಾಜದ ಸ್ವಾಸ್ಥ್ಯ ಹಾಳಾಗುತ್ತದೆ ಎಂದು ನಿರ್ಣಯಿಸುತ್ತಾನೆ. ಆದರೆ ಸೀನಪ್ಪನಂತಹ ಧನ ಪಿಶಾಚಿ ಗಳು ಯಮುನಕ್ಕನನ್ನು ಚುನಾವಣೆಯಲ್ಲಿ ನಿಲ್ಲಿಸಿ ಯಮುನಾದೇವಿಯನ್ನಾಗಿ ಮಾರ್ಪಾಟು ಮಾಡುವಲ್ಲಿ ಯಶಸ್ವಿಯಾಗುತ್ತಾರೆ. ನಂತರ ಆಕೆ ಚೇರ್ಮನ್ ಆಗುತ್ತಾಳೆ. ಬೆತ್ತಲೆ ಸ್ವಾಮಿಯ ಹತ್ತಿರ ಗಿರಣಿ ಮಾಬಲ್ಲಿ , ಕಬ್ಬೇರ ತಿಪ್ಪಣ್ಣ ಎಡ–ಬಲದಲ್ಲಿ ಸೇವೆ ಸಲ್ಲಿಸಿ ಆತನನ್ನು ಉತ್ಸವಮೂರ್ತಿ ಯನ್ನಾಗಿ ಮಾಡುತ್ತಾರೆ. ಹೋಟೆಲ್ ಬೆನಕಪ್ಪ ಸಹಚರರಿಗೆ ಎಲ್ಲವನ್ನು ಅನುಕೂಲ ಮಾಡಿಕೊಟ್ಟು ವಿಧಾನಸಭೆ ಪ್ರವೇಶಿಸಿದರೂ ಕೂಡ, ಬೆತ್ತಲೆ ಸ್ವಾಮಿ ಮಾತ್ರ ಬದಲಾಗುವುದಿಲ್ಲ. ಆತನು ಎಂದಿನಂತೆ ಊರಿನ ಕೇರಿಗಳಲ್ಲಿ ಬೆತ್ತಲೆಯಾಗಿ ಅನ್ನ, ನೀರು ಬೇಡಿ ಪಡೆಯುವುದು ಹಾಸ್ಯಾಸ್ಪದ ಮತ್ತು ದುರಂತ.

ಪ್ರಜಾಪ್ರಭುತ್ವದಲ್ಲಿ ಒಂದು ಸಾವು ಕಥೆಯು ಕಾನೂನಿನ ರಕ್ಷಣೆ ಕೇವಲ ಉಳ್ಳವರಿಗೆ ಮಾತ್ರ ಎಂಬುದನ್ನು ಬಹಿರಂಗ ಪಡಿಸುತ್ತದೆ. ಕಾಲೇಜಿನಲ್ಲಿ ಉಪನ್ಯಾಸಕನಾದ ಪ್ರಕಾಶ್ ವಿದೇಶಿ ಗೆಳೆಯನ ಮುಂದೆ, ನಮ್ಮದು ಪ್ರಜಾಪ್ರಭುತ್ವ ರಾಷ್ಟ್ರ ಸರ್ವರಿಗೂ ಕಾನೂನಿನ ರಕ್ಷಣೆ ಇದೆಯೆಂದು ಬೀಗಿದಂಥವನಿಗೆ ಅದುವೇ ಮುಳುವು ಆಗುತ್ತದೆ. ವಿಷ ಪ್ರಾಶನ ಮಾಡಿದ ಚಂದ್ರನನ್ನು ಉಳಿಸಲು ಪ್ರಕಾಶ್ ಮತ್ತು ಇನ್ನೊಬ್ಬ ವೈದ್ಯರು ಆತನನ್ನು ಆಸ್ಪತ್ರೆಗೆ ಸೇರಿಸಿದರೂ ಪ್ರಕಾಶನಿಗೆ ತೃಪ್ತಿಯಾಗುವುದಿಲ್ಲ. ಇತ್ತ ನಗರಸಭೆಯ ಅಧ್ಯಕ್ಷರ ಮಗನು ಅಪಘಾತದಲ್ಲಿ ಸಾವಿಗೀಡಾಗಿ, ಮೆರವಣಿಗೆಗಾಗಿ ಕಾಲೇಜಿಗೆ ರಜೆ ಘೋಷಿಸಲು ಒತ್ತಾಯ ಬರುತ್ತದೆ. ತನ್ನ ವೃತ್ತಿಧರ್ಮ ಬಿಡಲೊಪ್ಪದ , ಒತ್ತಾಯದಿಂದ ಹೊರಬಂದ ಪ್ರಕಾಶನು

ಪ್ರಾಂಶುಪಾಲರಿಗೂ ಆಕ್ಷೇಪಿಸಿ ಮುಖಭಂಗ ಅನುಭವಿಸುತ್ತಾನೆ. ಇತ್ತ ಚಂದ್ರನನ್ನು ಬೇರೆ ಕಡೆ ಚಿಕಿತ್ಸೆ ಕೊಡಿಸಬೇಕೆಂದರೆ ಆಸ್ಪತ್ರೆಯ ವೈದ್ಯರು ಹೆಂಡತಿ ಅಥವಾ ಬಂಧುಗಳು ಬೇಕು ಎಂದು ಅಲಕ್ಷಿಸುತ್ತಾರೆ. ಪ್ರಕಾಶನ ವಿರುದ್ಧ ನಗರ ಸಭೆಯ ಅಧ್ಯಕ್ಷರ ಕಡೆಯವರು, ಅನಾವಶ್ಯಕವಾಗಿ ಲೇಖನ ಬರೆಯಬೇಡ, ಅಧ್ಯಕ್ಷರ ಮಗಳನ್ನು ಮದುವೆ ಮಾಡಿಕೊಂಡು ಚೆನ್ನಾಗಿ ಇರು ಎಂದು ಹೇಳಿದರೂ ,ಕೇಳದೆ ಪ್ರತಿಭಟಿಸುತ್ತಾನೆ. ಚಂದ್ರುನನ್ನು ಪಾರುಮಾಡಬೇಕೆಂದು ಆತನ ಹೆಂಡತಿಯ ಹತ್ತಿರ ಹೇಳಿದರೂ, ಅವಳು ಒಪ್ಪದೇ ಮತ್ತಷ್ಟು ಸಂಕಷ್ಟಕ್ಕೆ ಸಿಲುಕುತ್ತಾನೆ. ತಾನು ವೇಶ್ಯೆಯಾಗಿ ಜೀವನ ನಡೆಸುತ್ತಿರುವುದರಿಂದ, ತನ್ನ ಗಂಡ ತೀರಿ ಹೋದರೆ ನರಕದಿಂದ ಪಾರಾಗುತ್ತೇನೆ ಎಂದು ಕಟುವಾಗಿ ಮಾತನಾಡುತ್ತಾಳೆ. ಇತ್ತ ಚಂದ್ರು ತನ್ನನ್ನು ಕೊಲ್ಲುತ್ತಾರೆ ಎಂದು ಭಯ ಭೀತನಾಗುತ್ತಾನೆ. ಪ್ರಕಾಶನು ಹೋಟೆಲ್ ಒಂದರಲ್ಲಿ ಚಹಾ ಕುಡಿಯುತ್ತಿರುವಾಗ ಒಂದು ಪತ್ರಿಕೆಯಲ್ಲಿ ಅಧ್ಯಕ್ಷರ ಮಗನ ಭವ್ಯ ಮೆರವಣಿಗೆ, ಸಾಂತ್ವನ, ಕಾಲೇಜಿನಲ್ಲಿ ಸ್ಮಶಾನಯಾತ್ರೆ, ಜೊತೆಗೆ ಪ್ರೊಫೆಸರ್ ಒಬ್ಬರು ಹೆಂಡತಿಯ ಪ್ರೇಮದ ಸೆರೆಯಲ್ಲಿ– ಸಚಿತ್ರ ವಿವರಗಳಿಗಾಗಿ ನೋಡಿ ದಂಗು ಬಡಿಯುತ್ತದೆ. ಆಸ್ಪತ್ರೆಯಿಂದ ಪ್ರಕಾಶನಿಗೆ ದೂರವಾಣಿ ಕರೆ ಬಂದು ,ಚಂದ್ರು ಮರಣ ಹೊಂದಿದ್ದಾನೆ ಎಂದು, ಆತನ ಅಂತ್ಯ ಸಂಸ್ಕಾರ ಪ್ರಕಾಶನೆ ಮಾಡಬೇಕೆಂಬ ಸೂಚನೆ ಮತ್ತಷ್ಟು ಸಂಕಟವು ಸೃಷ್ಟಿಯಾಗುವದರೊಂದಿಗೆ ಕಥೆಯು ಪೂರ್ಣಗೊಳ್ಳುತ್ತದೆ.

ಗುಡಿಯ ನೋಡಿರಣ್ಣ ಕಥೆಯ ನಾಯಕ ರವಿಯು ಬಹುಮುಖ ಪ್ರತಿಭೆಯ ಪ್ರಗತಿಪರ ಚಿಂತಕ. ಕಾಲೇಜು ಕಲಿಯುತ್ತಿರು ವಾಗಲೇ ತಾಯಿಯನ್ನು ಕಳೆದುಕೊಂಡರೂ, ತಂದೆಯಾದ ಶಿವನಗೌಡ ತಾಯಿಯ ಅಭಾವವನ್ನು ದೂರ ಮಾಡಿದ್ದನು. ಆರಂಭಿಕ ಹಂತದಲ್ಲಿ ರವಿಯ ತಂದೆ ಬೇರೊಂದು ಮದುವೆಯಾಗದೆ ಆತನ ಶಿಕ್ಷಣಕ್ಕೆ ಬೆನ್ನೆಲುಬು ಆಗಿ ನಿಂತಿರುತ್ತಾನೆ. ಕಾಲಕ್ರಮೇಣ ಯಾರೋ ಒಬ್ಬ ಹೆಂಗಸನ್ನು ಮನೆಯಲ್ಲಿ ತಂದು ಇಟ್ಟಿರುವುದನ್ನು ಚಿಕ್ಕಪ್ಪ ಹೇಳಿದರೂ ರವಿ ಲಕ್ಷ ವಹಿಸಿರುವುದಿಲ್ಲ. ತಂದೆಯ ಅಪೇಕ್ಷೆಯಂತೆ ಗಂಗತ್ತೆಯ ಮಗಳಾದ ಗೌರಿಯನ್ನು ರವಿಯು ಮದುವೆಯಾಗದೆ, ಸಹಪಾಠಿ ಅಂತರ್ಜಾತಿಯವಳಾದ ಸುಧಾಳನ್ನು ಮದುವೆಯಾಗಿ ಕೆಂಗಣ್ಣಿಗೆ ಗುರಿಯಾಗುತ್ತಾನೆ. ಗೌರಿಯ ರೂಪ ಗುಣಗಳೆಲ್ಲವೂ ತನಗೆ ತಕ್ಕ ಹೆಂಡತಿ ಎಂಬುದು ಅರಿವಿದ್ದರೂ ಕೂಡ. ಶಿಕ್ಷಣ. ತಿಳುವಳಿಕೆ, ಸಮಾನ ಅಭಿರುಚಿಗಳು ಸುಧಾಳ ಕಡೆಗೆ ವಾಲಿರುತ್ತವೆ. ಅತ್ತ ಗೌರಿಯ ಗಂಡ ಪರಮೇಶಿ ಅಳಿತನಕ್ಕೆ ಇದ್ದು, ಚಿರಾಸ್ತಿ ಎಲ್ಲವೂ ಮಾರಿ ಸಂಕಟ ಉಂಟುಮಾಡಿ. ಗಂಗಮ್ಮ ಮತ್ತು ಶಿವನ ಗೌಡರಿಗೆ ಆತಂಕ ನಿರ್ಮಿಸಿರುತ್ತಾನೆ. ಇದರ ಪರಿಣಾಮ ಹೆಂಡತಿಯ

ಮಾತು ಕೇಳಿದ್ದರಿಂದಲೇ ಗೌರಿಯ ಬದುಕಿನಲ್ಲಿ ಬಿರುಕು ಉಂಟಾಯಿತು ಎಂಬ ನೋವಿನಲ್ಲಿ ಗಂಗಮ್ಮಳ ಗಂಡ ಮರಣ ಹೊಂದುತ್ತಾನೆ. ಗೌರಿಗೆ ಮೊದಲನೆ ಹೆರಿಗೆಯಾದ ಸಂದರ್ಭದಲ್ಲಿ ಮತ್ತೊಂದು ಹೆರಿಗೆ ಬೇಡವೆಂದರೂ, ಗಂಡನ ಅವಿವೇಕತನದಿಂದ ಗರ್ಭಿಣಿಯಾಗಿ ತೊಂದರೆಗೆ ಸಿಲುಕಿರುತ್ತಾಳೆ. ರವಿಯು ತನ್ನನ್ನು ಮದುವೆಗೆ ನಿರಾಕರಿಸಿದರೂ ಕೂಡ ಸೋದರಮಾವನ ಮೇಲೆ ಬೆಟ್ಟದಷ್ಟು ಪ್ರೀತಿ ತೋರ್ಪಡಿಸುತ್ತಾಳೆ. ರವಿಯು ಕೂಡ ಗೌರಿಯನ್ನು ಮದುವೆಯಾಗಿ ಅಳಿಯತನಕ್ಕೆ ಇರಬೇಕೆಂಬ ವಿಚಾರಕ್ಕಾಗಿ ಅವಳಿಂದ ದೂರ ಸರಿದಿರುತ್ತಾನೆ. ಗೌರಿಯು ಕಾಲಕ್ರಮೇಣ ರವಿಯ ಹೆಂಡತಿ ಸುಧಾಳ ಜೊತೆಗೆ ಹೊಂದಾಣಿಕೆ ಯಾದಂತೆ, ರವಿಯ ಅತ್ತೆ ಗಂಗಮ್ಮಳು ಕೂಡ ಬೆರೆಯುತ್ತಾಳೆ.ಸುಧಾಳು ಶಿವನಗೌಡರಿಗೆ ಆರೈಕೆ ಮಾಡುತ್ತಿರುವಾಗ ಕಳ್ಳುಬಳ್ಳಿ ಮೀರಿದ ಸಂಬಂಧವಿದೆ ಎಂಬುದನ್ನು ನಿನ್ನಿಂದ ಕಲಿತೆನು ಎಂಬ ಗೌಡನ ಮಾತುಗಳು, ಅದಕ್ಕೆ ಪ್ರತಿಕ್ರಿಯಿಸುತ್ತಿರುವ ಸುಧಾಳು ಇಂತಹ ಪರಿಸ್ಥಿತಿಗೆ ನಾನು ಕಾರಣಳು ಎಂಬ ಹೇಳಿಕೆಗಳು ಮನುಷ್ಯತ್ವದ ಪರಿಸರವನ್ನು ನಿರ್ಮಿಸುತ್ತವೆ. ಅಲ್ಲದೆ ಸುಧಾಳು ಕೂಡ ಪ್ರೀತಿಯು,ಸಂಬಂಧ ಮೀರಿದ ಆರಾಧನೆ ಎಂದು, ಅದನ್ನು ಗೌರಿಯಿಂದ ನಾನು ಕಲಿತುಕೊಂಡೆನು ಎಂಬ ಅಭಿಪ್ರಾಯಗಳು ಕುಟುಂಬದ ಭದ್ರತೆಗೆ ಕಾರಣವಾಗುತ್ತವೆ. ಗೌರಿಯ ಹೆರಿಗೆಯ ಸಂದರ್ಭದಲ್ಲಿ ಸುಧಾಳು ಮತ್ತು ರವಿಯ ಚಿಕ್ಕಪ್ಪನ ಮಗಳಾದ ಶಶಿ ರಕ್ತ ಕೊಡುತ್ತಾರೆ. ಆದರೂ ಗೌರಿ ಉಳಿಯದೆ ಕುಟುಂಬದಲ್ಲಿ ದುಃಖ ಮಡುಗಟ್ಟುತ್ತದೆ.

ಎಂಥಾ ಮೋಜಿನ ಕುದುರಿ ಕತೆಯಲ್ಲಿಯ ನಾಯಕ ವಿಜಯನು ನೇರ ನುಡಿ, ಬಾಯಿ ಬಡುಕುತನ ಮತ್ತು ತಾನೇ ಶ್ರೇಷ್ಠ ಎನ್ನುವ ಅಹಂಮಿಕೆಯ ಸ್ವಭಾವದವನು. ವಿಜಯನು ಅನೇಕ ಹೆಣ್ಣುಗಳ ಜೊತೆ ದೇಹ ಸಂಬಂಧ ಹಂಚಿಕೊಂಡವನು. ರೇಖಾಳ ಜೊತೆ ಗೆಳೆತನ ವಿದ್ದಾಗಲೂ ಮೇರಿ, ಪ್ರಮೀಳಾ, ವಾಸಂತಿ, ಜಮೀಲಾರ ಜೊತೆ ಗೆಳೆತನವಿರುತ್ತದೆ. ರೇಖಾಳು ಚೆನ್ನಾಗಿ ನಿರ್ಧರಿಸಿ ತಾನು ಆದರ್ಶ ಗೃಹಿಣಿಯ ಸೋಗು ಹಾಕಿ, ದಿನಕ್ಕಿಷ್ಟು ಸಾಯುವುದು ಬೇಕಿಲ್ಲ. ಬದುಕಿನಲ್ಲಿ ತನಗೆ ಆಸಕ್ತಿ ಇದೆ ಎಂದು ಹೇಳಿ ದೂರಸರಿದು, ಬೇರೊಂದು ಹುಡುಗ ರಾಜೀವನನ್ನು ಮದುವೆಯಾಗಿರುತ್ತಾಳೆ. ವಿಜಯನ ಪುರುಷತ್ವವನ್ನು ಕೆಣಕಿರುವ ಈಶ್ವರನ ಮಾತಿಗೆ ಕ್ರೋಧಗೊಂಡು ರಾಧಾಳನ್ನು ಮದುವೆಯಾಗಿ ಗಂಡು ಮಗುವಿನ ತಂದೆಯಾಗುತ್ತಾನೆ. ಆದರೆ ಕಾಲ ಕ್ರಮೇಣ ವಿಜಯನಂತೂ ಲೈಂಗಿಕ ರೋಗದಿಂದ ಬಳಲಿ ಮರಣಿಸುತ್ತಾನೆ. ನಿಜವಾಗಿಯೂ ಮೋಜು–ಮಸ್ತಿಗೆ ಒಳಗಾಗಿ ಬದುಕಿನ ಸಂಭ್ರಮದಿಂದ ದೂರಸರಿದು

ಮಗುವನ್ನು ಅನಾಥ ಮಾಡಿ ,ಹೆಂಡತಿಯನ್ನು ವಿಧವೆ ಮಾಡುವ ದುರಂತ ಕಥೆಯಾಗಿದೆ.

ನೆಲೆ ಕಥೆಯಲ್ಲಿಯ ರಂಗಮ್ಮಳು ಮೌಲ್ಯಯುತವಾಗಿ ಬದುಕಬೇಕೆಂದರೂ ಅವಕಾಶ ಸಿಗದೆ, ದುರಸ್ತಿ ಕತೆಯ ತಿಮ್ಮನ ಹಾಗೆ ಕಾಣಿಸುತ್ತಾಳೆ. ರಂಗಮ್ಮಳು ತಾಯಿಯನ್ನು ಕಳೆದುಕೊಂಡಾಗ, ಜಾತಿಗೇರ ಮಾಬವ್ವಳು ಸಾಕಿರುತ್ತಾಳೆ. ರಂಗಮ್ಮನ ಅಪ್ಪನಾದ ಮಾನಿಷೆಯ್ಯನಂತೂ ಹೆಂಡತಿ ತೀರಿಕೊಂಡಾಗಲೂ ಕೂಡ ಒಂದು ಹಿಡಿ ಮಣ್ಣು ಕೊಡಲು ಬರುವುದಿಲ್ಲ. ಮಾಬವ್ವಳ ಗಂಡ ಖಾಜಾಹುಸೇನಿಯು ರಜಾಕಾರರ ಗುಂಪಿಗೆ ಸೇರಿ ಕೊಳ್ಳೆಹೊಡೆದು, ಕೊನೆಗೊಮ್ಮೆ ಕೊಲೆಯಾಗಿ ಬಿಡುತ್ತಾನೆ. ರಜಾಕಾರರ ಹಾವಳಿಯಿಂದ ಸ್ವತಂತ್ರವಾದಾಗ, ಜನರು ಸಹನೆ ಕಳೆದುಕೊಂಡು ರಜಾಕಾರರ ಗುಂಪಿನ ಮನೆಗಳಿಗೆ ನುಗ್ಗುವುದು ಸಾಮಾನ್ಯವಾದ ಸಂದರ್ಭದಲ್ಲಿ, ಮಾಬವ್ವಳನ್ನು ಹೊತ್ತುಕೊಂಡು ಹೋಗುತ್ತಾರೆ. ಪೋಲಿಸಗೌಡ ಲಿಂಗಣ್ಣನು ಆಕೆಯನ್ನು ಕಾಯಂ ಆಗಿ ಇರಿಸಿಕೊಂಡು, ರಂಗಮ್ಮಳಿಗೆ ಆಶ್ರಯ ನೀಡುತ್ತಾನೆ. ತಂದೆ ಮಾನಿಷೆಯ್ಯನು ಕೇವಲ ಸಾವಿರ ರೂಪಾಯಿಗೆ ರಂಗಮ್ಮಳನ್ನು ಮಾರಾಟಮಾಡುವುದು ದುಷ್ಕೃತ್ಯವೆ ಸರಿ. ಆ ಪರಿಸ್ಥಿತಿಗೆ ಹೊಂದಿಕೊಳ್ಳದ ರಂಗಮ್ಮ ಮತ್ತೆ ಮಾಬಮ್ಮಳ ಕಡೆ ಹೋಗಿ, ಲಿಂಗಣ್ಣನು ನೋಡಿರುವ ಸಾಯಬಣ್ಣನ ಜೊತೆ ದಾಂಪತ್ಯ ಪ್ರವೇಶಿಸುತ್ತಾಳೆ. ಆದರೆ ಬದುಕು ಸುಧಾರಿಸಿತು ಎನ್ನುವಾಗ ಸಾಯಬಣ್ಣನು ಬೇರೊಂದು ಹೆಣ್ಣನ್ನು ನೋಡಿಕೊಂಡು ಓಡಿಹೋಗುತ್ತಾನೆ. ರಂಗಮ್ಮಳು ನಂತರ ನಿಧಾನವಾಗಿ ಯಂಕಯ್ಯನಿಗೆ ವೇಶ್ಯೆಯಾಗಿ ಬಿಡುತ್ತಾಳೆ. ರಂಗಮ್ಮಳು ಹೊಟ್ಟೆ ಪಾಡಿಗಾಗಿ ಬೀದಿಯಲ್ಲಿ ಎಲೆ ಮಾರಿಕೊಂಡು ಜೀವಿಸುತ್ತಿರುವಾಗ ಕಂಡ ಕಂಡವರಿಗೆ ಪರಿಸ್ಥಿತಿ ಕಂಡು ರೋಸಿ ಹೋಗುತ್ತಾಳೆ. ರಂಗಮ್ಮ ಒಬ್ಬ ಗಟ್ಟಿಗಿತ್ತಿ, ತನ್ನನ್ನು ದುರುಪಯೋಗ ಮಾಡಿಕೊಂಡ ಪೋಲಿಸ್ ಅಧಿಕಾರಿಯನ್ನು ಜನರಿಂದ ಥಳಿಸಿ, ವರ್ಗಾವಣೆ ಮಾಡಿಸಿರುತ್ತಾಳೆ. ಸಾಕುತಾಯಿ ಮಾಬವ್ವಳು ತೀರಿದಾಗ ರಂಗಮ್ಮಳು ತೀವ್ರವಾಗಿ ನೊಂದುಕೊಳ್ಳುತ್ತಾಳೆ. ಅತ್ತ ಓಡಿಹೋದ ಸಾಯಬಣ್ಣನು ಕೇವಲ ಎರಡು ಸಾವಿರ ರೂಪಾಯಿಗೆ, ಸೀನಪ್ಪನಿಗೆ ಹೆಂಡತಿಯನ್ನು ಒಪ್ಪಿಸಲು ಭರವಸೆ ನೀಡುತ್ತಾನೆ. ಅದೇ ಹಣದಿಂದಲೇ ಮನೆಗೆ ಸಾಮಾನು ತಂದು ಹಾಕುವುದು ನಾಚಿಕೆಗೇಡಿತನವಾಗಿದೆ. ಸೀನಪ್ಪನು ರಂಗಮ್ಮನಿಗೆ ದೇಹ ಸಂಬಂಧ ಬೆಳೆಸಲು ಕರೆದಾಗ, ತೀವ್ರ ರೀತಿಯಲ್ಲಿ ಪ್ರತಿಭಟಿಸಿ, ಗಂಡನು ತೆಗೆದುಕೊಂಡ ಎರಡು ಸಾವಿರ ರೂಪಾಯಿಗಳನ್ನು ಮರಳಿ ಕೊಡಲು, ಕೊರಳಿನಲ್ಲಿಯ ತಾಳಿ ಮತ್ತು ಚೈನು ಒತ್ತೆಯಿಟ್ಟು ತಾನು ಯಂಕಯ್ಯನ ಸೂಳೆ ಎಂದು ಘೋಷಿಸಿಕೊಳ್ಳುವುದು ಆಕೆಯ ಬದ್ಧತೆಯಾಗಿದೆ. ತನ್ನ ತಂದೆಯು

ಸಾವಿರ ರೂಪಾಯಿಗೆ ಬೇರೊಬ್ಬರಿಗೆ ಒಪ್ಪಿಸಲು ಸಿದ್ಧವಾಗದ ತಾನು ಈಗ ಒಪ್ಪಿಕೊಳ್ಳಲು ಮಾರಾಟವಾಗಲು ಸಾಧ್ಯವಿಲ್ಲ ಎಂದು ನಿರ್ಧರಿಸುತ್ತಾಳೆ. ಅಲ್ಲದೆ ರಂಗಮ್ಮಳು ಸೀನಪ್ಪನ ಮನೆಯ ಹೆಣ್ಣು ಮಕ್ಕಳು ಕೂಡ, ರಿಕ್ಷಾದಲ್ಲಿ ಪರದೆ ಕಟ್ಟಿಕೊಂಡು ಶ್ರೀಮಂತರ ಮನೆಗೆ ಹೋಗುತ್ತಿರುವ ಕುರಿತು ಬಯಲು ಗೊಳಿಸುವುದು ವಾಸ್ತವಿಕತೆಯಿಂದ ಕೂಡಿದೆ. ಆದರೆ ಸೀನಪ್ಪನು ನಾಲ್ಕು ಮಂದಿಗೆ ಒಳ್ಳೆಯದಾಗಲಿ ಎಂಬ ಕಾರಣಕ್ಕಾಗಿ, ಗಂಡನಿಗೆ ೨೦೦೦ ರೂಪಾಯಿ ಕೊಟ್ಟು, ಆಕೆಯನ್ನು ಬಯಸುವ ಮಾರ್ಗ ಹಿಡಿಯುವುದು ಅವಿವೇಕದ ನಡೆಯಾಗಿದೆ.

ಕರ್ಪೂರದ ಕಾಯದಲ್ಲಿ ಬೆಂಕಿಯುಸಿರಾಟ ಕಥೆಯು ಸಮಕಾಲೀನ ರಾಜಕಾರಣ, ರೈತ ಚಳುವಳಿ, ಗಡಿ ಭಾಷಾ ಚಳುವಳಿ ಕುರಿತ ವಸ್ತುವನ್ನು ಹೊಂದಿದೆ. ಬೆಳಗಾವಿ ಗಡಿಭಾಗಗಳಲ್ಲಿ ನಡೆಯುವ ಭಾಷಾ ಚಳುವಳಿ ಮತ್ತು ಪತ್ರಿಕಾ ಧರ್ಮದ ಕೊರತೆಯನ್ನು ಈ ಕಥೆ ಚಿತ್ರಿಸುತ್ತದೆ. ಇಲ್ಲಿಯ ಕಥಾನಾಯಕ ಮಾರುತಿ ಜಾಧವ್ ಪದವೀಧರ ಮತ್ತು ಮರಾಠಿ ಭಾಷಿಕ. ಹಾಗೆಯೇ ಮಹಾರಾಷ್ಟ್ರದ ಪಾಟೀಲರ ಇಂಡಸ್ಟ್ರೀಸ್ ನಲ್ಲಿ ನೌಕರಿ ಬಿಟ್ಟು ಬಂದು ಚಳುವಳಿಯಲ್ಲಿ ತೊಡಗಿರುವ ಧೈರ್ಯವಂತ. ಈತನಿಗೆ ರೈತಮುಖಂಡ ಮಲ್ಲಾರಿ ಗೌಡನ ಬೆಂಬಲವಿದೆ. ಇಲ್ಲಿ ಬರುವ ವರದಿಗಾರ ಮೋಹನ ,ಪತ್ರಿಕೆಯ ಮಾಲೀಕ, ಸಂಪಾದಕರ ಅಭಿರುಚಿಗೆ ತಕ್ಕಂತೆಯೇ ನಡೆಯಬೇಕು ಎನ್ನುವ ಸಿದ್ಧಾಂತವಾದಿ. ಮಾರುತಿ ಜಾದವನು ಫ್ಯಾಕ್ಟರಿಯಲ್ಲಿ ಕೆಲಸ ಮಾಡುವಾಗ ವರ್ಚಸ್ಸು ಬೆಳೆಸಿಕೊಂಡ ಕಾರಣ, ಕರ್ನಾಟಕ ಮತ್ತು ಮಹಾರಾಷ್ಟ್ರ ಸಂಘಗಳ ಭಿನ್ನತೆಯಿಂದ ಹೊರದೂಡಲ್ಪಟ್ಟವನು. ಕನ್ನಡದ ರೈತ ಫಕೀರಪ್ಪನ ಮಗಳಾದ ಮಾದೇವಿಯನ್ನು ಪ್ರೀತಿಸುತ್ತ ಆಕೆಯನ್ನು ಮದುವೆ ಮಾಡಿಕೊಂಡವನು. ಅನ್ಯಾಯ ಕಂಡರೆ ಸಿಡಿದೇಳುವ ಮಾರುತಿ ಜಾದವ್. ಸರಕಾರಕ್ಕೆ ಮತ್ತು ಪೊಲೀಸರಿಗೆ ತಲೆನೋವಾಗಿ ಕಾಡುತ್ತಾನೆ. ರೈತರು ನ್ಯಾಯಬದ್ಧ ಹಕ್ಕುಗಳನ್ನು, ಸೂಕ್ತ ಬೆಂಬಲ ಬೆಲೆಯನ್ನು ಕೇಳಿದರೆ ಪತ್ರಕರ್ತರು ಸುದ್ದಿ ಮಾಡುವುದಿಲ್ಲ, ಆದರೆ ಮತೀಯ ಗಲಭೆ ನಡೆದರೆ ಸುದ್ದಿ ಮಾಡಿ ಅನಾರೋಗ್ಯ ಸೃಷ್ಟಿ ಮಾಡುತ್ತೀರಿ ಎಂಬ ಆಕ್ಷೇಪಣೆಯನ್ನು ಮೋಹನನ ಮುಂದೆ ಹೊರಹಾಕುತ್ತಾನೆ. ನೆಲ-ಜಲ ಸದುಪಯೋಗ ಮಾಡಿಕೊಂಡ ಜ್ಯೋತಿ ಇಂಡಸ್ಟ್ರೀಸ್ ನ ಪಾಟೀಲರು ಅದಕ್ಕೆ ನಿಷ್ಠರಾಗಿರದೆ ಹೊಸ ಯಂತ್ರ ಬಿಡುಗಡೆ ದಿನ ಪತ್ರಕರ್ತರಿಗೆ ಆಹ್ವಾನ ನೀಡಿ ಭೇದ ಎಸಗುತ್ತಾರೆ. ಗಡಿ ಭಾಷಾ ಚಳುವಳಿಯಲ್ಲಿ ಪತ್ರಕರ್ತರ ಬಲವನ್ನು ಮರಾಠಿಗರ ಪರ ವಾಲಿಸುವುದು ಪಾರ್ಟಿಯ ಉದ್ದೇಶವಾಗಿರುತ್ತದೆ. ಆ ಭೋಜನ ಕೂಟದಲ್ಲಿ ಮರಾಠಿ ಭಾಷೆಯ ಪತ್ರಕರ್ತರಿಗೆ ಮತ್ತು ಕನ್ನಡ ಭಾಷೆಯ ಪತ್ರಕರ್ತರಿಗೆ ಭಿನ್ನತೆ ಮಾಡುತ್ತಾರೆ. ಇದು

ಮೋಹನನಿಗೆ ಅಸಮಾಧಾನವಾಗುತ್ತದೆ . ಕನ್ನಡ ಪರ ಚಳುವಳಿ ಮಾಡದಂತೆ ಆಡಳಿತ ಪಕ್ಷದ ಸದಸ್ಯರ ಬೆಂಬಲ ಪಡೆಯಬೇಕು, ಮರಾಠಿಗರ ಬಗ್ಗೆ ಸಹಾನುಭೂತಿ ಉಂಟಾಗ ಬೇಕೆಂಬ ಲಾಬಿಗಳು ಅಲ್ಲಿ ನಡೆಯುತ್ತವೆ. ಬೆಳಗಾವಿಯಲ್ಲಿ ತಳವೂರಿದ ನಾಟಕ ಕಂಪನಿಗಳನ್ನು, ಅಲ್ಲಿಯ ನಗರ ಸಭೆ ರದ್ದು ಮಾಡಿದರೆ, ಇತ್ತ ಸರಕಾರವು ನಗರಸಭೆಯನ್ನು ರದ್ದುಗೊಳಿಸಲಾಗುವುದು ಎಂಬ ಬೆದರಿಕೆಯೂ ಅನಾರೋಗ್ಯಕರವಾಗಿದೆ. ಅಧಿಕಾರದಿಂದ ಕೆಳಗಿಳಿದ ತಕ್ಷಣವೇ ರಾಜಕಾರಣಿಗಳು ಚಳುವಳಿಯನ್ನು ಬಳಸಿಕೊಳ್ಳುತ್ತಾರೆ. ಆ ಪಾರ್ಟಿಯ ಒಳಗೆಯೇ ಮಾರುತಿ ಜಾಧವನ ಪ್ರಾಣಕ್ಕೆ ಕುತ್ತು ಬರಲಿದೆ ಎಂಬ ಮಾಹಿತಿ ಮೋಹನನಿಗೆ ದೊರೆತರೂ ಪ್ರಯೋಜನವಾಗುವುದಿಲ್ಲ. ಪೂನಾದ ಮೇಯರ್ ಅಧ್ಯಕ್ಷತೆಯಲ್ಲಿ ಖಾನಾಪುರದ ಆಸುಪಾಸಿನಲ್ಲಿ ಸತ್ಯಾಗ್ರಹ ನಡೆದಾಗ ಚಿನ್ನಾಲಿಯಲ್ಲಿಯೂ ಹಿಂಸಾಚಾರಗಳು ನಡೆದು ಅಲ್ಲಿಯೇ ಇರುವ ಮಾರುತಿ ಜಾದವ, ಪೊಲೀಸರ ಗುಂಡಿಗೆ ಬಲಿಯಾಗುವುದು ದುರಂತ. ಜೀವ ಉಳಿದ ಮಾರುತಿಗೆ ಪುಂಡ ಹುಡುಗರು ಬದುಕಿಸುವ ಪ್ರಯತ್ನ ಮಾಡದೆ ,ಕನ್ನಡದ ಹುಡುಗಿಯನ್ನು ಮದುವೆ ಆಗಿದ್ದೀಯಾ ಎಂದು ತಿವಿಯುವುದು ಅವಿವೇಕದ ನಡೆಯಾಗಿದೆ. ರೈತ ಚಳುವಳಿ, ಗಡಿ ಭಾಷಾ ಚಳುವಳಿಗಳು ವಸ್ತುವಿಷಯ ಹೊಂದಿದ್ದರೂ ಅಂತಿಮವಾಗಿ ಕಥೆಯು ಯಶಸ್ವಿಯಾಗುವಲ್ಲಿ ಹಿನ್ನಡೆಯಾಗಿದೆ ಎನಿಸುತ್ತದೆ. ಕೊನೆಯದಾಗಿ ಒಂದು ಮಾತು ಹೇಳಲೇಬೇಕಾದ ಅಗತ್ಯತೆ ಇದೆ. ನೀರಮಾನ್ವಿಯವರು ಮಾನವೀಯತೆಯನ್ನು ಕಡೆದ ಶಿಲ್ಪಿ. ಎರಡು ಕಥಾ ಸಂಕಲನಗಳು ಸಂಖ್ಯಾದೃಷ್ಟಿಯಿಂದ ವಿರಳವಾದರೂ, ಸತ್ವದ ದೃಷ್ಟಿಯಿಂದ ಅಪಾರ ಮತ್ತು ಪರಿಣಾಮಕಾರಿಯಾಗಿವೆ. ಇಂದಿನ ಅನೇಕ ಕಥೆಗಾರರಿಗೆ ಪರಂಪರೆಯ ವಕ್ತಾರರಾಗಿ ಛಾಪು ಮೂಡಿಸಿದ್ದಾರೆ. ಕಥಾ ಸಾಹಿತ್ಯಕ್ಕೆ ಸಲ್ಲಿಸಿದ ಅವರ ಕೊಡುಗೆ ಅನನ್ಯ ಮತ್ತು ಅವಿಸ್ಮರಣೀಯವಾಗಿದೆ.

ವಸಹಾತೋತ್ತರ ಸಮಾಜದಲ್ಲಿ ಶೋಷಣೆಯ ಸ್ವರೂಪ : ಕನ್ನಡ ಸಾಹಿತ್ಯ ಸಂಧರ್ಭ

ಡಾ.ಸತ್ಯಮಂಗಲ ಮಹಾದೇವ

ಯಾವುದೇ ಒಂದು ಜನಸಮುದಾಯ ವಸಹಾತುಶಾಹಿ ಆಕ್ರಮಣಕ್ಕೆ ಒಳಗಾದಾಗ ಸಾಂಸ್ಕೃತಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ, ಬೌದ್ಧಿಕವಾಗಿ ಆ ಸಮುದಾಯವು ವಸಹಾತುಶಾಹಿಯ ಹಿಡಿತಕ್ಕೆ ಒಳಪಡುತ್ತದೆ. ವಸಹಾತುಶಾಹಿಯ ಹಿಡಿತಕ್ಕೆ ಒಳಪಟ್ಟ ಸಮುದಾಯವು ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಬೌದ್ಧಿಕವಾಗಿ ಸದಾ ಸಂಘರ್ಷವನ್ನು ನಡೇಸುತ್ತಲೇ ಇರುತ್ತದೆ. ತಮ್ಮ ಮೇಲೆ ಆಗುತ್ತಿರುವ ಶೋಷಣೆಯ ವಿರುದ್ಧ ಸಮುದಾಯವು ತನ್ನ ತಲ್ಲಣಗಳನ್ನು, ಸಾಂಸ್ಕೃತಿಕ ಪಲ್ಲಟದ ನೆಲೆಗಳನ್ನು ಯಾಜಮಾನ್ಯ ಸಂಸ್ಕೃತಿಯ ವಿರುದ್ಧವಾಗಿ ಗಟ್ಟಿಗೊಳಿಸಿಕೊಳ್ಳುತ್ತಲೇ ತನ್ನ ಶೋಷಣೆಯನ್ನು ಸೃಜನಶೀಲ ಕಲೆಯಾಗಿ ಪ್ರಕಟಿಸುತ್ತದೆ. ತನ್ನ ಸೃಜನಶೀಲ ನೆಲೆಯಲ್ಲಿತನ್ನ ಸ್ಥಳೀಯ ಮಾದರಿಗಳನ್ನು ಒಟ್ಟುಗೂಡಿಸುವ ಕೆಲಸವನ್ನು ಮಾಡುತ್ತದೆ. ಪ್ರಭುತ್ವವನ್ನು ವಿರೋಧಿಸುತ್ತಲೇ ಸ್ಥಳೀಯ ಸಂಸ್ಕೃತಿಯ ಉಳಿವಿಗಾಗಿ ಹಂಬಲಿಸುತ್ತವೆ. ವಸಹಾತುಶಾಹಿಯ ಶೋಷಣೆಯಿಂದ ಬಿಡುಗಡೆಗಾಗಿ ಮಿಡಿಯುತ್ತಿರುತ್ತವೆ.

ಸ್ವಾತಂತ್ರ್ಯ ನಂತರದಲ್ಲಿ ಭಾರತೀಯ ಸಮಾಜವು ವಸಹಾತುಆಕ್ರಮಣದಿಂದ ಬಿಡಿಸಿಕೊಂಡಿತಾದರೂ ವಸಹಾತು ಸಂಸ್ಕೃತಿಗಳ ಪ್ರಭಾವದಿಂದ ತಪ್ಪಿಸಿಕೊಳ್ಳಲು ಆಗಲಿಲ್ಲ. ರಾಷ್ಟ್ರೀಯ ಚಳುವಳಿಗಳು ನಡೆದು ಸ್ವದೇಶಿ ಚಿಂತನೆಗಳು ಸ್ಥಳೀಯತೆಯನ್ನು ಗಟ್ಟಿಗೊಳಿಸುವ ಕೆಲಸವನ್ನು ಮಾಡಿದವು. ಏಕರಾಷ್ಟ್ರದ ಪರಿಕಲ್ಪನೆಗಳು ಭಾರತೀಯ ಸಮುದಾಯದಲ್ಲಿ ಗಟ್ಟಿಗೊಳ್ಳತೊಡಗಿದವು."ಈ ಹಿಂದೆ ಏಕರಾಷ್ಟ್ರವೆಂಬ ಕಲ್ಪನೆ ಇರಲಿಲ್ಲವೆಂದು ಅರ್ಥವಲ್ಲ. ಭಾರತ ಹಲವು ಭಾಷೆ ಹಲವು ಧರ್ಮಗಳ ತವರಾದರೂ ಪರೋಕ್ಷವಾಗಿ ಒಂದು ರಾಷ್ಟ್ರವೇ ಆಗಿತ್ತು. ಅದರೆ ವಸಹಾತು ಸಂದರ್ಭದಲ್ಲಿ ನಿರ್ಮಾಣವಾದ ಏಕರಾಷ್ಟ್ರದ ಕಲ್ಪನೆ ಭಿನ್ನ ನೆಲೆಯದು. ನಾವು ಒಂದೇ ರಾಷ್ಟ್ರವಾಗಿದ್ದುದರಿಂದಲೇ ಬ್ರಿಟೀಷರಿಗೆ ಇಲ್ಲಿಒಂದೇ ರಾಜ್ಯಕಟ್ಟಲು

ಅವಕಾಶವಾದದ್ದು” ಭಾರತದ ಈ ರಾಷ್ಟ್ರೀಯ ಪರಿಕಲ್ಪನೆಯು ವಸಹಾತುಶಾಹಿ ಆಕ್ರಮಣದಿಂದ ಬಿಡಿಸಿಕೊಳ್ಳಲು ನಡೆಸಿದ ಹೋರಾಟದ ಒಂದು ಭಾಗವಾಗಿತ್ತು. ನಂತರ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ತನ್ನನ್ನುತಾನು ಶೋಷಣೆಗಳಿಂದ ಮುಕ್ತಿಗೊಳಿಸಿಕೊಳ್ಳಲು ಭಾರತವು ಅಂತರಾಷ್ಟ್ರೀಯತೆಯ ಪರಿಕಲ್ಪನೆಗೆ ತನ್ನನ್ನು ಸಜ್ಜುಗೊಳಿಸಿಕೊಂಡಿತು. ಯಾವುದೇ ರಾಷ್ಟ್ರ ಮೊದಲು ತಮ್ಮ ಅಸ್ತಿತ್ವವನ್ನು ಗುರುತಿಸಿಕೊಳ್ಳುವ ಮೂಲಕ ನಮ್ಮನ್ನು ನಾವು ಅಂತರಾಷ್ಟ್ರೀಯತೆಗೆ ವಿಸ್ತರಿಸಿಕೊಳ್ಳುವ ವಾದವನ್ನು ಮುಂದಿಡುತ್ತೇವೆ. ಅಂತರಾಷ್ಟ್ರೀಯತೆಯ ಪರಿಕಲ್ಪನೆಯನ್ನು ನಾವು ಗಮನಿಸುವಾಗ ನಮ್ಮತನ ಎಂಬ ಮಾತನ್ನು ನಾವು ಸಾಕ್ಷೀಕರಿಸಿಕೊಳ್ಳುವುದಕ್ಕೆ ನಾವು ನಮ್ಮ ಸಾಹಿತ್ಯ, ಸಂಸ್ಕೃತಿಗಳ ಮೊರೆ ಹೋಗುತ್ತೇವೆ. ಯಾವುದೇ ದೇಶದ ಆತ್ಮ ಆ ದೇಶದ ಸಾಹಿತ್ಯ ಮತ್ತು ಸಂಸ್ಕೃತಿಗಳಲ್ಲಿ ಅಡಕವಾಗಿರುತ್ತದೆ. ಸಾಹಿತ್ಯ, ಸಂಗೀತ, ನಾಟಕ, ಶಿಲ್ಪಕಲೆ, ನೃತ್ಯ ಇತ್ಯಾದಿ ಎಲ್ಲಾ ಸಾಂಸ್ಕೃತಿಕ ಚಟುವಟಿಕೆಗಳು ಮನುಷ್ಯನ ಬದುಕನ್ನು ಗ್ರಹಿಸುವ ಒಂದು ಕ್ರಮವಾಗಿದೆ. ಮನುಷ್ಯನ ಬದುಕಿನ ಕ್ರಿಯಾಶೀಲತೆಯು ಸೃಜನಶೀಲ ಮಾಧ್ಯಮಗಳಲ್ಲಿ ದಟ್ಟವಾಗಿ ದಾಖಲಾಗಿರುತ್ತದೆ. ಒಂದು ಕ್ರಿಯಾಶೀಲ ಸಂಸ್ಕೃತಿಯು ತನ್ನ ಸ್ಥಳೀಯ ಆಚರಣೆಗೆ, ಅಭಿವ್ಯಕ್ತಿಗೆ ಆತಂಕಗಳು ಬಂದಾಗ ತನ್ನ ಸಾಹಿತ್ಯ ಚಿಂತನೆಗಳ ಮೂಲಕ ಜನತೆಯನ್ನು ಎಚ್ಚರಿಸುವ ಕೆಲಸವನ್ನು ಮಾಡುತ್ತಲೇ ಬಂದಿದೆ.

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಹತ್ತೊಂಬತ್ತು ಮತ್ತು ಇಪ್ಪತ್ತನೆಯ ಶತಮಾನ ವಶಾತುಶಾಹಿ ಚಿಂತನೆಗಳು ಕುಡಿವರಿದ ಕಾಲ. ಕನ್ನಡದ ನೆಲದ ಸಾಮಾಜಿಕ, ರಾಜಕೀಯ, ವೈಯುಕ್ತಿಕ, ತಾತ್ವಿಕ ಚಿಂತನೆಗಳ ಮೇಲೆ ಹೊಸ ಆಲೋಚನೆಗಳ ಗಾಳಿ ಬೀಸಲಾರಂಭಿಸಿದ ಕಾಲ. ಈ ಕಾಲಘಟ್ಟವನ್ನು ನಾವು ನವೋದಯ ಎಂದು ಗುರುತಿಸಿಕೊಂಡೆವು. ನವೋದಯ ಕಾಲಘಟ್ಟವು ವಸಹಾತುಶಾಹಿಯನ್ನು ಸ್ವಾಗತಿಸುತ್ತಲೇ ತನ್ನ ಅಭಿವ್ಯಕ್ತಿಯ ಮೂಲಕತನ್ನ ಮೇಲೆ ಆಗುತ್ತಿರುವ ಶೋಷಣೆಯನ್ನು ಪ್ರತಿಭಟಿಸಿದ್ದು ಚರಿತ್ರಾರ್ಹವಾದ ಅಂಶವಾಗಿದೆ. ನವೋದಯ ಕಾಲದ ಕವಿಗಳು, ಬರಹಗಾರರು ತಮ್ಮ ಭಾಷೆಮತ್ತು ಸಂಸ್ಕೃತಿಯ ಮೇಲೆ ಆದ ಶೊಷಣೆಯ ವಿರುದ್ದ ಸೃಜನ ಶೀಲ ನೆಲೆಗಳಲ್ಲಿ ಪ್ರತಿಭಟನೆಗಳು ಆರಂಭಿಸಿದರು. ಬೇಂದ್ರೆ, ಕುವೆಂಪು ಸೇರಿದಂತೆ ಅನೇಕರು ಹೊಸ ಚಿಂತನೆಗಳನ್ನು ಸ್ವೀಕರಿಸುತ್ತಲೇ ವಸಹಾತುಶಾಹಿಯ ಶೋಷಣೆಯ ನೆಲೆಗಳನ್ನು ಪ್ರಬಲವಾಗಿ ವಿರೋಧಿಸಿದ ಅಂಶಗಳನ್ನು ಅವರ ಬರಹಗಳಲ್ಲಿ ನಾವು ಕಾಣಬಹುದಾಗಿದೆ.

ನವೋದಯ ಕಾಲ ಘಟ್ಟಕ್ಕಿಂತ ಮೊದಲು ವಸಹಾತುಶಾಹಿಯ ಶೋಷಣೆಯ

ವಿರುದ್ಧ ಪ್ರತಿಭಟನೆಗಳು ವ್ಯಕ್ತವಾಗಿದ್ದವು" ಕನ್ನಡ ಸಾಹಿತ್ಯ-ಸಂಸ್ಕೃತಿಗಳಿಗೆ ವಸಹಾತುಶಾಹಿ ಅನುಭವ ಹೊಸದೇನು ಅಲ್ಲ. ಪ್ರಾರಂಭದಿಂದಲೂ ಕನ್ನಡ ಸಾಹಿತ್ಯ-ಸಂಸ್ಕೃತಿಗಳು ಸಂಸ್ಕೃತದ ಭಾಷಿಕ-ಸಾಹಿತ್ಯಿಕ-ಸಾಂಸ್ಕೃತಿಕ ಯಾಜಮಾನ್ಯದ ವಿರುದ್ಧ ಹೋರಾಟ ಮಾಡುತ್ತಲೇ ಬಂದಿವೆ. ತಮ್ಮ ಅನನ್ಯತೆಯನ್ನು ಉಳಿಸಿಕೊಳ್ಳಲು ಬಗೆಬಗೆಯಾಗಿ ಶ್ರಮಿಸಿವೆ ಪಂಪ-ರನ್ನರು ಸ್ಥಾಪಿಸಿದ ಮಾರ್ಗ-ದೇಸಿ ಸಮನ್ವಯದ ಚಂಪೂ ಪ್ರಬೇಧ; ಹರಿಹರ-ರಾಘವಾಂಕರು ಆಯ್ಕೆಮಾಡಿದ ರಗಳೆ-ಷಟ್ಪದಿಗಳು; ಸಂಪೂರ್ಣವಾಗಿ ಸಂಸ್ಕೃತವನ್ನು ನಿರಾಕರಿಸಿದ ಅಂಡಯ್ಯನ ಕನ್ನಡ; ಇನ್ನೂ ಮುಂದೆ ಹೋಗಿ ಶಿಷ್ಟಸಾಹಿತ್ಯದ ಅಭಿವ್ಯಕ್ತಿ ಮಾರ್ಗವಾಗಿದ್ದ ಷಟ್ಪದಿಯನ್ನು ನಿರಾಕರಿಸಿ, ರತ್ನಾಕರವರ್ಣಿ-ಸರ್ವಜ್ಞರು ವ್ಯಾಪಕವಾಗಿ ಬಳಸಿದ ಜಾನಪದ ಮಾರ್ಗಗಳಾದ ಸಾಂಗತ್ಯ ಮತ್ತು ತ್ರಿಪದಿ; ೧೨ನೇ ಶತಮಾನದ ವಚನಕಾರರು ಪ್ರಜ್ಞಾಪೂರ್ವಕವಾಗಿ ಆಯ್ಕೆಮಾಡಿದ ಆಡುಭಾಷೆ ಮತ್ತು ಗದ್ಯ-ಲಯಇವೆಲ್ಲವೂ ಸಂಸ್ಕೃತ ಕನ್ನಡ ನಡುವಿನ ಅಸ್ಮಾನ ಅಧಿಕಾರಾಧರಿತ ಸಂಬಂಧಗಳ ವಿವಿಧ ಘಟ್ಟಗಳನ್ನು ದಾಖಲಿಸುತ್ತವೆ ಹಾಗೆಯೇ ಧಾರ್ಮಿಕ ಕ್ಷೇತ್ರದಲ್ಲಿ ವೈದಿಕ ಕರ್ಮಕಾಂಡ ಮತ್ತು ವರ್ಣಾಶ್ರಮ ವ್ಯವಸ್ಥೆಗಳನ್ನು ವಿರೋಧಿಸಿದ ೧೨ ನೇಶತಮಾನದ ಶರಣ ಚಳುವಳಿ, ಜ್ಞಾನಮಾರ್ಗ-ಕರ್ಮಮಾರ್ಗಗಳಿಗೆ ಪ್ರತಿಯಾಗಿ ಭಕ್ತಿಮಾರ್ಗವನ್ನು ಪುರಸ್ಕರಿಸಿದ ದಾಸಪಂಥ, ಇತ್ಯಾದಿಗಳು ಇಂತಹವೇಅಸಮಾನ ಸಂಬಂಧಗಳ ಮತ್ತೊಂದು ಮುಖ" "ಕನ್ನಡದ ನೆಲದಲ್ಲಿ೧೨ನೇ ಶತಮಾನದ ನಂತರವೂ ಪಾರಂಪರಿಕವಾಗಿ ಬಂದ ಜೀವನ ವಿಧಾನಕ್ಕೂ ವಸಹಾತುಶಾಹಿಗಳ ಆಗಮನದಿಂದ ಉಂಟಾದ ವಾತಾವರಣಕ್ಕೂ ಘರ್ಷಣೆ ಏರ್ಪಟ್ಟಾಗ ಸ್ಥಳೀಯ ಶಿಷ್ಟ ಮತ್ತು ಮೌಖಿಕ ಪರಂಪರೆಯೂ ಸಹ ತಮ್ಮ ಅಭಿಜಾತ ನೆಲೆಗಳ ಸಮಗ್ರತೆಯನ್ನು ನಿವೇದಿಸುವ ಕೆಲಸವನ್ನು ಮಾಡಿವೆ. ಲಾವಣಿಕಾರರು, ತತ್ವಪದಕಾರರು, ಅನುಭಾವಿ ಕವಿಗಳು ದೇಸೀ ಚಿಂತನೆಯ ಮಾರ್ಗದ ಮೇಲೆ ಆಗುತ್ತಿರುವ ಶೋಣೆಯನ್ನು ತಮ್ಮ ನೈತಿಕ ನಡೆ ನುಡಿ ವಿಚಾರ ಸಾಹಿತ್ಯದ ಮೂಲಕ ಕಟ್ಟಿಕೊಟ್ಟರು "ಈ ಅನುಭಾವಿಕವಿಗಳು ತಮ್ಮಅಂತರಂಗದ ಸೂಕ್ಷ್ಮ ಕಂಪನಗಳನ್ನು, ಆರೋಗ್ಯಕರ ಪ್ರೇಮವನ್ನು ಬ್ರಿಟೀಷರ ದಬ್ಬಾಳಿಕೆ ಮತ್ತು ಯಂತ್ರ ನಾಗರೀಕತೆಯ ಸಂದರ್ಭದಲ್ಲಿ ಅಭಿವ್ಯಕ್ತಿಸಿದವರು. ತಮ್ಮ ಸುತ್ತಣ ಸಮುದಾಯದಲ್ಲಿ ನಾಶಗೊಳ್ಳುತ್ತಿದ್ದ ಮನುಷ್ಯ ಸಂಬಂಧಗಳನ್ನು ಕುರಿತು ಅವರು ಬರೆದರು. ಅವರ ರಚನೆಗಳಲ್ಲಿ ರಾಜಕೀಯ ಕೋಲಾಹಲ, ಅಸ್ಥಿರ ಆರ್ಥಿಕ ಬದುಕು, ಗುಲಾಮಗಿರಿಗೆ ತಮಗರಿವಿಲ್ಲದಂತೆಯೇ ಒಳಗಾದ ಸ್ಥಿತಿ ಇವುಗಳ ಹಿನ್ನೆಲೆಯಲ್ಲಿ ತಮ್ಮ ಪ್ರಸ್ತುತವನ್ನು ಗುರುತಿಸಿಕೊಂಡಿರುವ ಸ್ವರೂಪವನ್ನು ಆ ರಚನೆಗಳಲ್ಲಿ ಕಾಣಬಹುದು" "ದೇಸೀ

ಚಿಂತನೆಯ ಮಾರ್ಗದ ಮೇಲಾದ ಶೋಷಣೆಗಳ ವಿರುದ್ಧ ಅನುಭಾವಿಗಳು ದ್ವೇಷದ ಮೂಲಕ ಪ್ರತಿಭಟಿಸಲಿಲ್ಲ ಬದಲಾಗಿ ಪ್ರೇಮದ ಮೂಲಕ ಪೂರ್ಣ ಪರಿವರ್ತನೆಗೆ ತಮ್ಮನ್ನು ರೂಪಿಸಿಕೊಂಡರು. ಹೀಗೆ ಕರ್ನಾಟಕದ ದೇಸೀ ಮೌಖಿಕ ಮತ್ತು ಲಿಖಿತ ಪರಂಪರೆಗಳು ವಸಹಾತುಶಾಹಿ ವ್ಯವಸ್ಥೆಗೆತಮ್ಮ ಪ್ರತಿರೋಧವನ್ನು ವ್ಯಕ್ತಪಡಿಸಿವೆ.

"ಹಿಂದೂಸ್ಥಾನಕ ಬಂತು ಶೋಕ
ಮಂದಿ ಕುಂಡ್ಲಾಕ ನರಬೈಲಿ ಹೋತೋ ಕೈಲಾಕ
ಹಣದ ತೆರೆಗೆಯುತೆಲಿಗೆ ಏಳು
ಎಣಿಸಿ ಹಡಗವ ತುಂಬಿ ಹೂರಣವ
ಹವಳ ದೇಶಕ್ಕೆಲ್ಲಇದು
ಕುಣಿದು ಕುಣಿದು ದಣಿವು ಆದೀತು"[೪]

–ಶಿಶುನಾಳ ಶರೀಫ

ಭಾರತದ ಸಮಕಾಲೀನ ಒತ್ತಡಗಳಿಗೆ ಪ್ರಧಾನವಾಗಿ ಪ್ರತಿಕ್ರಿಯಿಸಿದ ತತ್ವಪದಕಾರರು ತಮ್ಮ ಪಾರಂಪರಿಕವಾಗಿ ಬಂದ ನೆಲೆಗಳ ಪಲ್ಲಟವನ್ನು ದಾಖಲಿಸುತ್ತಲೇ ವಸಹಾತುಶಾಹಿ ನಿರ್ಮಿಸಿದ ಭೌತಿಕ ವಸ್ತು ಪ್ರಪಂಚವು ಅವರ ಮಾನಸಿಕ ಪ್ರಪಂಚದ ಭಾಗವಾಗುತ್ತಿರುವುದನ್ನು ಗಮನಿಸಿಸುತ್ತೇವೆ. "ಈ ಕಾಲಮಾನದ ಕಾವ್ಯದ ಮುಖ್ಯನೆಲೆ ಪರಕೀಯ ಸಂಸ್ಕೃತಿಯ ಅನೇಕ ಅಂಶಗಳ ಗ್ರಹಿಕೆ ಹಾಗೂ ಅದರ ಸ್ವೀಕೃತಿಯ ಸಂದರ್ಭ. ಅಲ್ಲದೆ ನಮ್ಮ ಸಂದರ್ಭದಲ್ಲಿಯೇ ಸ್ಥಳೀಯ ವಸಹಾತುಶಾಹಿಯ ವಾಸ್ತವಿಕತೆ, ಇವುಗಳನ್ನು ಖಚಿತವಾಗಿ ವಿರೋಧಿಸುವುದಾಗಿತ್ತು. ತತ್ವಪದಕಾರರು ಸಮಾಜದ ವಿಮರ್ಶಕರಾಗಿರುವಂತೆ ಹರಿತವಾದ ವಿಡಂಬನೆಯನ್ನು ಪ್ರಕಟಿಸುತ್ತಾರೆ"[೫] ಈ ರೀತಿಯಲ್ಲಿ ನವೋದಯ ಕಾವ್ಯದ ಪೂರ್ವದ ಕನ್ನಡ ಕವಿಗಳು, ತತ್ವಪದಕಾರರು ತಮ್ಮ ಮೌಖಿಕ ಪರಂಪರೆಯ ಪ್ರತಿಭಟನೆಯನ್ನು ದಾಖಲಿಸಿದ್ದಾರೆ.

ನವೋದಯಕಾವ್ಯ ಸಂದರ್ಭದಲ್ಲಿ ವಸಹಾತುಶಾಹಿಯ ಆಗಮನವನ್ನು ಸ್ವಾತಂತ್ರ್ಯಕ್ಕಾಗಿ ಹೋರಾಡುವ ಜೊತೆಗೆ ವಸಹಾತು ಶಾಹಿಯಜ್ಞಾನ ಶಾಖೆಗಳಿಂದ ಆಯ್ಕೆಮಾಡಿಕೊಂಡ ಮೌಲ್ಯಯುತ ತಾತ್ವಿಕ ಚಿಂತನೆಗಳನ್ನು ತನ್ನೊಳಗೆ ಅರಗಿಸಿಕೊಳ್ಳುವ ಮಾರ್ಗದಲ್ಲಿ ಹೆಜ್ಜೆಇಟ್ಟಿತು. ಆದರೆತನ್ನ ವಿರುದ್ಧ ಆಗುತ್ತಿರುವ ಶೋಷಣೆಯನ್ನು ಪ್ರಬಲವಾಗಿ ವಿರೋಧಿಸಿತು ಮತ್ತು ಕನ್ನಡದ ಜನರನ್ನು ಸೋಷಣೆಯ ವಿರುದ್ಧ ಎಚ್ಚೆತ್ತುಕೊಳ್ಳುವಂತೆ ತನ್ನ ಸಾಹಿತ್ಯ ಸೃಷ್ಟಿಯನ್ನು ಮುಂದುವರೆಸಿತು. ಈ ನಿಟ್ಟಿನಲ್ಲಿ ದೇಸೀ ಚಿಂತನೆಗಳ ತಾತ್ವಿಕತೆಯನ್ನು ಅರಳಿಸಿದ ವರಕವಿ ಬೇಂದ್ರೆಯವರು

ವಸಹಾತುಶಾಹಿಯ ಶೋಷಣೆಯನ್ನು ತಮ್ಮ ಕವನದಲ್ಲಿ ಹೀಗೆ ಪ್ರತಿಭಟಿಸಿದ್ದಾರೆ.

ಬಲವೆಂಬುದು ಇದು ಬೆವರಿನ ಬಳ್ಳಿ
ಕಾಳಗವೆಂಬುದು ನೆತ್ತರ ಹೂವು
ಬಿಡುಗಡೆಯೆಂಬುದು ಸಾವಿನ ಹಣ್ಣು
ಇನ್ನೂ ಇನ್ನೂ ಇನ್ನೂ ಇನ್ನೂ
ಪಂಚಮರಾದಿ ಪಂಚವರ್ಣವೇ
ಪುಟಿಸು ಪಾಂಚಜನ್ಯ !
ಭೂಮಿತಾಯಿಯೇ ಜ್ವಾಲಾಮುಖದಿಂದೂದು ಶಂಖವನ್ನು !
ನಿಲ್ಲಲಿ ನಟರಾಜನ ನಾಟ್ಯ
ಭಂಗಪಡೆಯಲಿ ಬ್ರಹ್ಮಸಮಾಧಿ
ಹೋಗಲಿ ಹಾಲಿನ ಕಡಲಲಿ ಮಲಗಿದ
ದೇವನ ನಿದ್ದೆಯು ಹಾಳಾಗಿ !
ನೋಡಲಿ ನೋಡಲಿ ನೋಡಲಿ ಅವರು
ಮೂವರು ಕೂಡಿ, ರಚಿಸಿದ ಮೂರಾ ಬಟ್ಟೆಯ ನಾಟಕವ !
ಬಲಗಾಲ್ ಬುಡದಿಂ ಬಿಡುಗಡೆ ಬಿಡಿಸಲು
ನರಬಲಿಯೇ ಬೇಕು!
ಇದುವೆ ಕಾಳಿಯ ಪೂಜೆಯು ಶುದ್ಧ !
ಇದಕ್ಕೆ ಹುಂಬರು ಎಂಬರು ಯುದ್ಧ ! [೯]

–ಬೇಂದ್ರೆ

ಯಾಜಮಾನ್ಯ ಸಂಸ್ಕೃತಿಯ ಆಕ್ರಮಣದಿಂದ ಪಾರಾಗಲು ಸ್ಥಳೀಯ ಸಂಸ್ಕೃತಿಯು ತನ್ನ ಉಳಿವಿಗಾಗಿ ನಡೆಸುವ ಹೋರಾಟ, ಬಿಡುಗಡೆಗಾಗಿ ಹಂಬಲಿಸುವ ಮನಸ್ಸಿನ ಕ್ರಿಯಾಶೀಲ ಪ್ರತಿಕ್ರಿಯೆಯನ್ನು ಬೇಂದ್ರೆಯವರ ಈ ನರಬಲಿ ಕವನವು ಕಟ್ಟಿಕೊಡುತ್ತದೆ. ಬ್ರಿಟಿಷರ ವಸಹಾತುಶಾಹಿ ಆಡಳಿತದ ವಿರುದ್ಧವಾಗಿ ನರಬಲಿ ಕವನ ಬರೆದ ಬೇಂದ್ರೆಯವರು ಹಿಂಡಲಗಾ ಜೈಲಿನಲಿ ಸೆರೆವಾಸವನ್ನು ಮತ್ತು ಮುಗದದ ನಜರ್‌ಬಂಧಿ ಶಿಕ್ಷೆಯನ್ನು ಅನುಭವಿಸುತ್ತಾರೆ. ಬೇಂದ್ರೆಯವರ ಈ ಹೋರಾಟ ವಸಹಾತುಶಾಹಿಯ ವಿರುದ್ಧವಾಗಿ, ಸ್ಥಳೀಯತೆಯ ಸಂಸ್ಕೃತಿಯನ್ನು ಎಚ್ಚರಿಸುವ ಹೋರಾಟವಾಗಿತ್ತು ಎಂಬುದನ್ನು ಮರೆಯುವಂತಿಲ್ಲ.

ಕುವೆಂಪು ಅವರು 'ನೂರುದೇವರನೆಲ್ಲ ನೂಕಾಚೆ ದೂರ' ಎನ್ನುವ

ಘೋಷಣೆಯನ್ನು ಮೊಳಗಿಸುತ್ತಾ 'ಎದೆಯದನಿಗೂ ಮಿಗಿಲು ಶಾಸ್ತ್ರವಿಹುದೇನು' ಎನ್ನುವ ಆತ್ಮದರ್ಘನತೆಯ ಪ್ರತಿರೋಧವನ್ನು ವಸಹಾತುಶಾಹಿಯ ಆಕ್ರಮಣದ ವಿರುದ್ಧ ವ್ಯಕ್ತಪಡಿಸುವುದನ್ನು ಅವರ ಕಾವ್ಯಗಳಲ್ಲಿ ಕಾಣಬಹುದು ಬೆರಳ್ಗೆ ಕೊರಳ್, ಸ್ಮಶಾನಕುರುಕ್ಷೇತ್ರ, ಜಲಗಾರ ನಾಟಕಗಳು ಸಾಮಾಜಿಕ ಚಲನೆಗಳಲ್ಲಿ ವಸಹಾತುಶಾಹಿ ಸಾಮಾಜಿಕ ವ್ಯವಸ್ಥೆಗೆ ತೋರಿದ ಪ್ರತಿಕ್ರಿಯೆಯನ್ನು ನಾವು ಗಮನಿಸಬಹುದು ಮಲೆಗಳಲ್ಲಿಮದುಮಗಳು ಕಾದಂಬರಿಯ ಗುತ್ತಿಯ ಹೋರಾಟದ ಬದುಕು: ಮನುಷ್ಯ ಮನುಷ್ಯನಾಗಿ ಬದುಕಲು ಕಷ್ಟಪಡುವ ಸಂಕಟಗಳನ್ನು ಕುವೆಂಪು ಅವರು ವಿವರಿಸಿದ್ದಾರೆ.

ಪ್ರಸ್ತುತ ಸಮಾಜದಲ್ಲಿ ಆಧುನಿಕೋತ್ತರ ಕಾಲಘಟ್ಟದ ಸಾಮಾಜಿಕ ಚಲನೆಯನ್ನು ನಾವು ಜೀವಿಸುತ್ತಿದ್ದೇವೆ. ವಸಹಾತುಶಾಹಿಯ ಆಕ್ರಮಣ ಇಂದು ನಿನ್ನೆಯದಲ್ಲ ಕಾಲಾನುಕಾಲದಿಂದ ವಸಹಾತುಶಾಹಿಯು ಶೋಷಣೆ ನಡೆಸಿದೆ. ಅದಕ್ಕೆ ಪ್ರತಿಕ್ರಿಯೆಯಾಗಿ ಸ್ಥಳೀಯತೆಯು ತೋರಿದ ಪ್ರತಿಭಟನೆಯನ್ನು ನಾವು ಕನ್ನಡ ಸಾಹಿತ್ಯ ಸಂದರ್ಭದ ಹಿನ್ನೆಲೆಯಲ್ಲಿ ಚರ್ಚಿಸಿದ್ದೇವೆ. ಪ್ರಸ್ತುತ ಕನ್ನಡ ಸಾಹಿತ್ಯದಲ್ಲಿಯೂ ಸಹ ಈ ಆಧುನಿಕೋತ್ತರ ಕಾಲಘಟ್ಟದಲ್ಲಿ ಪ್ರಸ್ತುತವಾಗುತ್ತಿರುವ ಶೋಷಣೆಯನ್ನು ಕವಿಗಳು ಕಟ್ಟಿಕೊಟ್ಟಿದ್ದಾರೆ. ಜಂಬಣ್ಣ ಅಮರಚಿಂತಅವರ " ಬೆಂಕಿಯಿಂದ ಪಾರಾದ ಮನೆಗಳು ಮಂಜಿನಿಂದ ಸುಟ್ಟವು" ಎನ್ನುವ ನುಡಿಯು ಆಧುನಿಕಕಾಲಘಟ್ಟದ ಸಾಮಾಜಿಕ ವ್ಯವಸ್ಥೆಯಲ್ಲಿ ಸಾಮಾನ್ಯ ಮನುಷ್ಯ ಬದುಕಲು ಜಾತಿ ವ್ಯವಸ್ಥೆ, ಆರ್ಥಿಕ ಪರಿಸ್ಥಿತಿ, ಸಾಮಾಜಿಕ ಸಂಘರ್ಷಕಾರಣವಾಗಿದೆ ಎಂಬುದನ್ನು ಚಿತ್ರಿಸುತ್ತದೆ. ಬೌದ್ಧಿಕವಾಗಿ ಸಮಾಜದಲ್ಲಿ ಬೆಳೆಯುವ ಮನುಷ್ಯಆಧುನಿಕಯುಗದಲ್ಲೂ ಹುಟ್ಟಿದಜಾತಿಯ ಕಾರಣಕ್ಕೆ ಅನುಭವಿಸುವ ಶೋಷಣೆಯನ್ನು ಇಲ್ಲಿ ನಾವು ಕಾಣಬಹುದು. ಆಧುನಿಕ ಜಗತ್ತು ಬೆಳೆದರೂ ಸಹ ಭಾರತದ " ಇಂಡಿಯಾದ ಸಂಪ್ರದಾಯಬದ್ಧ ಸಮಾಜದೊಳಗೆ ಮನುಷ್ಯನ ಶಕ್ತಿಗಾಗಲಿ, ಅವನ ಶ್ರಮಕ್ಕಾಗಲಿ ಯಾವ ಬೆಲೆಯೂ ಇಲ್ಲ. ಯಾಕೆಂದರೆ ಯಾವುದೇ ಒಳ್ಳೆಯದು ಮತ್ತು ಕೆಟ್ಟದ್ದರ ಹಿನ್ನೆಲೆಯಲ್ಲಿ ದೈವದ ಅಥವಾ ದೆವ್ವದ ಕೈವಾಡವಿರುತ್ತದೆ. ಮಕ್ಕಳು ಹುಟ್ಟಿದರೂ ಹುಟ್ಟದಿದ್ದರೂ ಅಥವಾ ಗರ್ಭಪಾತವಾದರೂ ಹೊಲಗದ್ದೆಗಳಲ್ಲಿ ಪೈರುಪಚ್ಚೆ ಹುಲುಸಾಗಿ ಬೆಳೆದರೂ ಅಥವಾ ಬೆಳೆಯದಿದರೂ ಉತ್ತಮಜಾತಿಯಲ್ಲಿ ಹುಟ್ಟಲು-ಹುಟ್ಟದಿರಲು ಅವನ ಪೂರ್ವಜನ್ಮದ ಕರ್ಮಗಳು ಕಾರಣವಾಗಿರುತ್ತವೆ" ಆಧುನಿಕೋತ್ತರ ಈ ಸಮಾಜದಲ್ಲಿ ಶೋಷಣೆಯ ಸ್ವರೂಪವು

"ಕಾಲಕಾಲಕ್ಕೆ ಬದಲಾದ
ಊರು, ಗಲ್ಲಿ, ಪಟ್ಟಣಗಳು
ಕಾಡು ಕಲ್ಲುಗಳು ಬರಿದಾಗಿ
ಊರ ಬೇಲಿಗಳು ಮುರಿಯದೇ ಕಿರಿದಾದವು"[೮]

ಕಾಲಕಾಲಕ್ಕೆ ಬದಲಾಗುತ್ತಿರುವ ಸಾಮಾಜಿಕ ಪರಿಸ್ಥಿತಿ, ಮಾನವನ ಬೌದ್ಧಿಕ ಚಿಂತನೆಗಳೂ, ವರ್ಗಗಳು ಎಲ್ಲವೂ ಬದಲಾದವು ಹೊಸ ಚಿಂತನೆಗಳು ಬಂದವು ಆದರೆ ಊರು, ಗಲ್ಲಿ, ಪಟ್ಟಣಗಳ ಭೌತಿಕ ಸ್ವರೂಪ ಬದಲಾಯಿತೇ ಹೊರತು ಬೇಲಿಗಳು ಮುರಿಯದೇ ಕಿರಿದಾದವು. ಶೋಷಣೆಯ ಸ್ವರೂಪ ಬದಲಾಗಿದೆ ಆದರೆ ಶೋಷಣೆ ನಿಂತಿಲ್ಲ ಉದಾ; ಗಾರ್ಮೆಂಟ್ಸ್ ನೌಕರರು ಅದರಲ್ಲೂ ಹೆಣ್ಣುಮಕ್ಕಳ ಪರಿಸ್ಥಿತಿಯನ್ನು ನಾವು ನಿತ್ಯವೂ ಕಾಣುತ್ತಿದ್ದೇವೆ. ಕಾರ್ಖಾನೆಗಳು, ಉದ್ದಿಮೆಗಳು, ಹೀಗೆ ದುಡಿಯುವ ವರ್ಗವು ಅನುಭವಿಸುತ್ತಿರುವ ವೇತನ ತಾರತಮ್ಯ, ಕಡಿಮೆ ವೇತನ ಜೊತೆಗೆ ಸ್ತ್ರೀ ಶೋಷಣೆ ನಿಂತಿಲ್ಲ. ಜಾತಿತಾರತಮ್ಯ ಸ್ವಜನ ಪಕ್ಷಪಾತ ಈ ಎಲ್ಲವೂ ಸಮಾಜದ ಉದ್ಧಾರಕ್ಕೆ ತಡೆಯಾದ ದೊಡ್ಡಬೇಲಿಗಳಾಗಿದ್ದವು ಆದರೆ ಇಂದು ಅತ್ಯಾಧುನಿಕ ಯುಗದಲ್ಲಿಯೂ ಬೇಲಿಗಳು ಕಿರಿದಾದುವೇ ಹೊರೆತು ಮುರಿಯಲಿಲ್ಲ ಎನ್ನುವ ಆಶಯವು ಆಧುನಿಕೋತ್ತರ ಸಮಾಜದಲ್ಲಿ ವಸಾಹತುಷಾಹಿಯ ಶೋಷಣೆಯ ಸ್ವರೂಪವನ್ನು ನಮಗೆ ಕಟ್ಟಿಕೊಡುತ್ತದೆ.

ಅಡಿಟಿಪ್ಪಣಿಗಳು

೧. ಗಾಂಧೀ.ಮೋ.ಕ : ನನ್ನ ಆತ್ಮಕಥೆ (ಸಂಕ್ಷಿಪ್ತ) ಮತ್ತು ಹಿಂದ್ ಸ್ವರಾಜ್, ಅನು : ಸಿದ್ದವನಹಳ್ಳಿ ಕೃಷ್ಣಶರ್ಮ, ಕರ್ನಾಟಕಗಾಂಧೀ ಸ್ಮಾರಕನಿಧಿ,೧೯೫೮, ಪುಟ-೨೯

೨. ರಾಮಚಂದ್ರನ್.ಸಿ.ಎನ್: ವಸಾಹತೋತ್ತರಚಿಂತನೆ ಮತ್ತು ನವರಾಷ್ಟ್ರಗಳು, ಅಂಕಿತ ಪ್ರಕಾಶನ, ಬೆಂಗಳೂರು, ಪುಟ:೧೦೦

೩. ನಾಗರಾಜ.ಕಿ.ರಂ:ಕರ್ನಾಟಕ ಜಾನಪದ,ಸಂ-ಶಿವರುದ್ರಪ್ಪ,ಜಿ.ಎಸ್.,ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು,೧೯೮೧, ಪುಟ:೩೯-೪೦

೪. ಶಿಶುನಾಳ ಶರೀಫ: ಬರಕೋ ಪದ ಬರಕೋ, (ಸಂ) ಶಿವಾನಂದ ಗುಬ್ಬಣ್ಣನವರ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು :೧೯೮೧, ಪುಟ :೧೫೭

೫. ಶಿವಾರೆಡ್ಡಿ ಕೆ.ಸಿ.: ಕನ್ನಡದ ಹಾಡು ಪಾಡು, ಅಧ್ಯಯನ ಮಂಡಲ, ಬೆಂಗಳೂರು

೨೦೦೩ ಪುಟ : ೫೩
೬. ಅಂಬಿಕಾತನಯ ದತ್ತ: ಗರಿ, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ ೧೯೫೧, ಪುಟ-೬೪
೭. ದೇವಯ್ಯ ಹರವೆ : ದಲಿತ ಸಾಹಿತ್ಯ ಕೆಲವು ತಾತ್ವಿಕ ಚಿಂತನೆಗಳು, ದಲಿತ ಸಾಹಿತ್ಯ ಸಂಪುಟ : ವಿಮರ್ಶೆ, (ಸಂ) ಡಾ.ಸತ್ಯಮಂಗಲ ಮಹಾದೇವ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-೨೦೨೧ ಪುಟ:೧೪
೮. ಸುಬ್ಬು ಹೊಲೆಯಾರ್ : ಸೂಜಿಗಾತ್ರದ ಕೊಳವೆಯಿಂದ ಮನುಷ್ಯನೊಬ್ಬನ ಹಾಡು, ದ್ರಾವಿಡ ಪಬ್ಲಿಕೇಷನ್ಸ್ ಮೈಸೂರು, ೨೦೦೩ಪುಟ:೦೧

ಪರಾಮರ್ಶನ ಗ್ರಂಥಗಳು

೧. ಓ.ಎಲ್.ನಾಗಭೂಷಣ ಸ್ವಾಮಿ : ವಿಮರ್ಶೆಯ ಪರಿಭಾಷೆ, ಅಭಿನವ ಪ್ರಕಾಶನ, ಬೆಂಗಳೂರು-೨೦೨೧
೨. ಡಾ.ಸಿ.ಎನ್.ರಾಮಚಂದ್ರನ್ : ವಸಾಹತೋತ್ತರಚಿಂತನೆ, ಅಂಕಿತ ಪ್ರಕಾಶನ, ಬೆಂಗಳೂರು-೨೦೧೩
೩. ಡಾ.ಸಿ.ಎನ್.ರಾಮಚಂದ್ರನ್ : ಸಾಹಿತ್ಯ ವಿಮರ್ಶೆ, ಅಂಕಿತ ಪ್ರಕಾಶನ, ಬೆಂಗಳೂರು ೨೦೧೩
೪. ಅಂಬಿಕಾತನಯದತ್ತ : ಗರಿ, ಶ್ರೀಮಾತಾ ಪ್ರಕಾಶನ, ಹುಬ್ಬಳ್ಳಿ-೨೦೦೬
೫. ಕೆ.ಸಿ.ಶಿವಾರೆಡ್ಡಿ : ಕನ್ನಡದ ಹಾಡು ಪಾಡು, ಅಧ್ಯಯನ ಮಂಡಲ, ಬೆಂಗಳೂರು ೨೦೦೩
೬. ದೇವನೂರ ಮಹಾದೇವ : ಧ್ಯಾವನೂರು ಹಾಗೂ ಒಡಲಾಳ, ಪುಸ್ತಕ ಪ್ರಕಾಸನ, ಮೈಸೂರು-೨೦೧೧
೭. ಪಿ.ಲಂಕೇಶ್:ಸಾಹಿತಿ ಸಾಹಿತ್ಯ ವಿಮರ್ಶೆ, ಲಂಕೇಶ್ ಪ್ರಕಾಶನ, ಬೆಂಗಳೂರು ೨೦೦೮
೮. ಮೋ.ಕ.ಗಾಂಧೀ : ಆತ್ಮಕಥೆಅಥವಾ ನನ್ನ ಸತ್ಯಾನ್ವೇಷಣೆ ಅನು:ಗೊರೂರು ರಾಮಸ್ವಾಮಿ ಅಯ್ಯಾಂಗಾರ್, ಗಾಂಧಿ ಸ್ಮಾರಕ ನಿಧಿ, ಬೆಂಗಳೂರು-೧೯೮೭
೯. ಪ್ರೊ.ಕೆ.ವಿ.ತಿರುಮಲೇಶ್ : ಕನ್ನಡದ ಮುನ್ನಡೆ ಅಹವಾಲುಗಳು ಮತ್ತು ಸವಾಲುಗಳು, ಕನ್ನಡ ಸಾಹಿತ್ಯರಂಗ, ರೈಸ್‌ಯುನಿವರ್ಸಿಟಿ, ಉತ್ತರ ಅಮೇರಿಕ-೨೦೧೩
೧೦. ಸಂ: ಡಾ. ಸತ್ಯಮಂಗಲ ಮಹಾದೇವ : ದಲಿತ ಸಾಹಿತ್ಯ ಸಂಪುಟ ವಿಮರ್ಶೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು-೨೦೨೧

ಪುರುಷೋತ್ತಮ ಬಿಳಿಮಲೆ ಅವರ 'ಕಾಗೆ ಮುಟ್ಟಿದ ನೀರು' – ಅವಲೋಕನ

ಕರುಣಾಕರ ಆರ್.ಕೆ

ಇಂದು ಕನ್ನಡದಲ್ಲಿ ಆತ್ಮ ಕಥೆಗಳ ಪ್ರಕಾರ ಸಮೃದ್ಧವಾಗಿ ಬೆಳೆದು ನಿಂತಿದೆ. ಹಿಂದೆ ಹಿರಿಯರು ಮಾತ್ರ ಬರೆಯುತ್ತಿದ್ದ ಈ ಪ್ರಕಾರದಲ್ಲಿ ಇಂದು ಕಿರಿಯರು ಕೂಡ ಪ್ರವೇಶ ಪಡೆದಿದ್ದಾರೆ. ಸಮಾಜದ ಬೇರೆ ಬೇರೆ ಕ್ಷೇತ್ರದ ಜನರು ತಮಗೆ ಬರೆಯಲಾಗದಿದ್ದರೂ ಇತರರ ಮೂಲಕ ನಿರೂಪಣೆಯರೂಪದಲ್ಲಿ ಬರೆಸುತ್ತಿದ್ದಾರೆ. ಕನ್ನಡದಲ್ಲಿ ಬಂದಿರುವ ದಲಿತ ಆತ್ಮಕಥೆಗಳು ಜನಾಂಗದ ನೋವಿನ ದನಿಯಾಗಿ ಮಹತ್ವ ಪಡೆದಿದ್ದರೆ, ಮಹಿಳಾ ಆತ್ಮಕಥನಗಳು ಮಹಿಳೆಯರದೇ ಆದ ವಿಶಿಷ್ಟ ಅನುಭವಗಳಿಂದ ಗಮನ ಸೆಳೆದಿವೆ. ಹೀಗೆ ವೈವಿಧ್ಯಮಯ ಅನುಭವಗಳಿಂದ ಕನ್ನಡದಲ್ಲಿ ಆತ್ಮ ಕಥೆಗಳ ಪ್ರಕಾರ ಹುಲುಸಾಗಿಯೇ ಇದೆ ಎಂದು ಹೇಳಬಹುದು. ಆತ್ಮ ಕಥೆ ಬರೆಯುವವರಿಗೆ ಒಂದು ಸ್ಪಷ್ಟ ಉದ್ದೇಶ ಇರಬೇಕು. ತನ್ನನ್ನು ವೈಭವೀಕರಿಸಿಕೊಳ್ಳಲು ಬರೆಯುವ ಆತ್ಮ ಕಥೆಗಳು ನಗೆಪಾಟಲಿಗೆ ಗುರಿಯಾಗುತ್ತವೆ. ಸಮಾಜಕ್ಕೆ ಯಾವುದು ಮುಖ್ಯ ಯಾವುದು ಮುಖ್ಯವಲ್ಲ ಎಂಬ ಅರಿವು ಬರಹಗಾರನಿಗೆ ಇರಬೇಕು.

ಬಿಳಿಮಲೆ ಅವರ 'ಕಾಗೆ ಮುಟ್ಟಿದ ನೀರು' ಇತ್ತೀಚೆಗೆ ಒಂದು ಆಗಸ್ಟ್ ೨೦೨೦ರಲ್ಲಿ ಪ್ರಕಟವಾದ ಆತ್ಮ ಕಥನ. ಪ್ರಕಟವಾದ ಹತ್ತೇ ದಿನಗಳಲ್ಲಿ ಒಂದು ಸಾವಿರ ಪ್ರತಿಗಳು ಮಾರಾಟವಾಗಿ ಎರಡನೇ ಮುದ್ರಣ ಕಂಡ ಅಪರೂಪದ ಕೃತಿ ಇದು. ಲೇಖಕರು ಕೃತಿಯ ಬಗ್ಗೆ 'ಇದೊಂದು ಚದುರಿ ಬಿದ್ದ ಆತ್ಮದ ತುಣುಕುಗಳು' ಇಲ್ಲಿ ಹೇಳಿರುವುದಕ್ಕಿಂತ ಹೇಳದಿರುವ ಅನೇಕ ವಿವರಗಳಿವೆ. ಆದರೆ ಹೇಳಿರುವುದೆಲ್ಲಾ ನಿಜ. 'ಹೆಕ್ಕಿದ್ದು ಮುತ್ತು ಉಳಿದದ್ದು ಸಾಗರ' ಎನ್ನುತ್ತಾ ಕೃತಿಯ ಹಿಂದಿನ ಪ್ರೇರಣೆ ಬಗ್ಗೆ ವಿವರಿಸುತ್ತಾರೆ. ದೊಡ್ಡವರ ಆತ್ಮ ಚರಿತ್ರೆಗಳು ಮಹತ್ವದ್ದಾಗಲು ಅವರ ಸಾಧನೆ ಕಾರಣ. ತಾವು ಆ ಸಾಧಕರ ಪಟ್ಟಿಯಲ್ಲಿ ಇಲ್ಲದ ಕಾರಣ ಈ ಆತ್ಮ ಕಥೆಯ ಅವಶ್ಯಕತೆ ಇದೆಯೇ ಎಂದು ಪ್ರಶ್ನಿಸಿಕೊಳ್ಳುತ್ತಾ, 'ದೊಡ್ಡವರ ಹಾಗೆ ಸಣ್ಣವರಿಗೂ ಈ ಜಗತ್ತಿನಲ್ಲಿ ಸ್ಥಾನವಿರುತ್ತದೆ' ಎಂಬ ಕೀರಂ ನಾಗರಾಜು ಅವರ ಮಾತುಗಳು ತಮ್ಮ ಆತ್ಮ ವಿಶ್ವಾಸವನ್ನು ಹೆಚ್ಚಿಸಿದ ಕಾರಣ ಈ ಆತ್ಮಕಥೆ ಸಿದ್ಧವಾಯಿತು ಎನ್ನುತ್ತಾರೆ. ನಾಲ್ಕು ದಶಕಗಳಿಂದ ತಮ್ಮ ಉತ್ಸಾಹ ಬತ್ತದಂತೆ ನೋಡಿಕೊಂಡ ವಿದ್ಯಾರ್ಥಿ

ಸಮುದಾಯವನ್ನು ನೆನಪಿಸಿಕೊಳ್ಳುತ್ತಾ, 'ಅವರಿಲ್ಲದಿದ್ದರೆ ನಾನೆಲ್ಲಿರುತ್ತಿದ್ದೆ' ಎಂದು ಕೃತಿಯನ್ನು ವಿದ್ಯಾರ್ಥಿಗಳಿಗೆ ಸಮರ್ಪಿಸಿದ್ದಾರೆ.

ಕೃತಿಗಿಟ್ಟಿರುವ ಹೆಸರಿನ ಬಗ್ಗೆ ನೋಡಿದಾಗ ಕಾಗೆ ಮತ್ತು ನೀರು ನಮ್ಮ ಸಂಸ್ಕೃತಿಯಲ್ಲಿ ಬಹಳ ಮಹತ್ವದ ಸ್ಥಾನ ಪಡೆದಿವೆ. ಕಾಗೆಯ ಗುಣ ಸ್ವಭಾವದ ಬಗ್ಗೆ ಅನೇಕ ವೈರುಧ್ಯಕರ ವಿಚಾರಗಳು ಪ್ರಚಲಿತದಲ್ಲಿವೆ. ಇದು ಅಪಶಕುನವೆಂಬ ಆರೋಪಗಳು ಇವೆ. ಪಿತೃಗಳಿಗೆ ಪಿಂಡ ತಲುಪಿಸುವ ಮಹತ್ವದ ಜವಾಬ್ದಾರಿ ಕಾಗೆಯದು. 'ಕಾಗೆಯೊಂದು ಅಗಳ ಕಂಡರೆ ಕೂಗಿ ಕರೆಯದೆ ತನ್ನ ಬಳಗವ' ಎನ್ನುತ್ತಾರೆ ಬಸವಣ್ಣನವರು. "ಕಾಗೆ ಜನಪದ ಕಥೆಗಳಲ್ಲಿ ಪರಿವರ್ತನೆಯ ಹಾಗೂ ಬದಲಾವಣೆಯ ರೂಪಕ, ಬೆಳಗಿನ ಹರಿಕಾರ. ಹಲವು ಬುಡಕಟ್ಟು ಜನ ತಮ್ಮ ಮೂಲವನ್ನು ಕಾಗೆ, ಗೂಗೆ, ಬೆಕ್ಕು ಮುಂತಾದ ಪ್ರಾಣಿ ಪಕ್ಷಿಗಳಲ್ಲಿ ಗುರುತಿಸಿಕೊಂಡಿದ್ದಾರೆ. ಒಂದಗುಳ ಕಂಡರೆ ಕಾಕಾ ಎಂದು ಕರೆಯುವ ಕಾಗೆಯ ಬಂಧು ಜನ ಪ್ರೀತಿ ಅಪಾರ. ತನ್ನ ಮರಿಯಂತೆಯೆ ಕೋಗಿಲೆ ಮರಿಗೂ ಗುಟುಕುಕೊಡುವ ವಾತ್ಸಲ್ಯಮಯಿ. ಹಿರಿಯರಿಗೆ ದಿವಸದ ದಿನ ಹಾಕಿದ ಕೂಳನ್ನು ಮುಟ್ಟಿ ಅವರನ್ನು ಸ್ವರ್ಗಕ್ಕೇರಿಸುವ ನಿಚ್ಚಣಿಕೆ. ಗಡಿಗೆಯ ತಳದ ನೀರು ಎಟುಕದಿದ್ದಾಗ ಅದರಲ್ಲಿ ಕಲ್ಲು ಹಾಕಿ ನೀರು ಕುಡಿಯುವ ಬುದ್ಧಿವಂತ ಪಕ್ಷಿ. ಇನ್ನು ತನ್ನ ಸಂತತಿಯ ವಿನಾಶಕ್ಕೆ ಕಾರಣವಾಗಿದ್ದ ಕಾಳಿಂಗ ಸರ್ಪವನ್ನು ರಾಜಭಟರಿಂದ ಕೊಲ್ಲಿಸಿದ ಪಂಚತಂತ್ರದ ಕಥೆ ಯಾರಿಗೆ ತಾನೆ ಗೊತ್ತಿಲ್ಲ? ಮುಂದೆ ಸಂಭವಿಸುವ ಅಪಾಯವನ್ನು ಮೊದಲೇ ಗ್ರಹಿಸಿ ಸೂಚನೆ ಕೊಡುವ ಸೆಕ್ಯೂರಿಟಿ ದಳ ಕಾಗೆಯ ಬಳಗ. ನಾನು ಕಂಡಂತೆ ನಮ್ಮೂರು ಮೊದಲುಗೊಂಡು ಅಮೆರಿಕಾದ ನ್ಯೂಯಾರ್ಕ್ನ 'ಲಿಬರ್ಟಿ ಸ್ಟಾಚ್ಯೂ' ಆವರಣದಲ್ಲೂ ಕಾಗೆಗಳುಂಟು. ಇದನ್ನು ಅಂತರಾಷ್ಟ್ರೀಯ ಪಕ್ಷಿ ಎಂದು ಕರೆಯಬಹುದು. ಆದರೆ ರಾಮಾಯಣದಲ್ಲಿ ಶ್ರೀರಾಮನು ಈ ಕಾಕಾಸುರನ ಒಂದು ಕಣ್ಣನ್ನು ಊನ ಮಾಡಿದನೆಂದು ಹೇಳಿರುವುದು ಅಸಂಭವ. ಯಾಕೆಂದರೆ, ಒಂದು ಕ್ರೌಂಚ ಪಕ್ಷಿಯ ಸಾವಿಗೆ ಶೋಕಿಸಿ ಅದೇ ಸ್ಥಾಯಿಯಲ್ಲೇ ಶ್ರೀ ರಾಮಾಯಣದಂತಹ ಮಹಾಗಾನವನ್ನು ಹಾಡಿದ ವಾಲ್ಮೀಕಿ ಋಷಿ ತನ್ನ ಕಾವ್ಯ ನಾಯಕನಿಂದ ಈ ಪಕ್ಷಿಯ ಕಣ್ಣಿಗೆ ಬಾಣ ಬಿಡಿಸಿರಲಾರ. ಇದು ಪ್ರಕ್ಷಿಪ್ತ".[೧] ಎಂದು ಪ್ರೊ. ಶಿವರಾಮಯ್ಯ ಅಭಿಪ್ರಾಯ ಪಡುತ್ತಾರೆ. ಹಾಗೆಯೇ ನೀರು ಕೂಡ ನಮ್ಮ ಸಂಸ್ಕೃತಿಯಲ್ಲಿ ಮಹತ್ವದ ಸ್ಥಾನ ಪಡೆದಿದೆ. ನೀರಿಲ್ಲದೇ ಜೀವನವೇ ಇಲ್ಲ. ಜನರ ಜೀವನಾಡಿ ನೀರು. ನೀರಿದ್ದಲ್ಲಿಯೇ ನಾಗರಿಕತೆ ಸಂಸ್ಕೃತಿಗಳ ಉದಯ. ಕಾಗೆ ಮತ್ತು ನೀರು ನಮ್ಮ ಸಮಾಜದ ಎರಡು ಶಕ್ತಿಶಾಲೀ ಸಂಕೇತಗಳಾಗಿದ್ದು, 'ಕಾಗೆ ಮುಟ್ಟಿದ ನೀರು'

ಯಾರಿಗೂ ಬೇಡವಾಗುವ ರೂಪಕವನ್ನು ಇಲ್ಲಿ ಲೇಖಕರು ಬಳಸಿದ್ದಾರೆ. ದಿನೇಶ್ ಅಮೀನ್ಮಟ್ಟು ಅವರು ಮುನ್ನುಡಿಯಲ್ಲಿ ಹೇಳಿರುವಂತೆ "ಇತಿಹಾಸದ ಪುಟದಲ್ಲಿ ದಾಖಲಾದವರಲ್ಲಿ ಹೆಚ್ಚಿನವರನ್ನು ವರ್ತಮಾನ ಕ್ರೂರವಾಗಿ ನಡೆಸಿಕೊಂಡಿರುವುದನ್ನು ಕಾಣಬಹುದು. ಇದನ್ನೇ ಇನ್ನೊಂದು ಬಗೆಯಲ್ಲಿ ವರ್ತಮಾನದ ಕ್ರೌರ್ಯಕ್ಕೆ ಬಲಿಯಾದವರೇ ಇತಿಹಾಸದ ಪುಟದಲ್ಲಿ ಉಳಿಯಲು ಸಾಧ್ಯ. ಬಿಳಿಮಲೆಯವರು ವರ್ತಮಾನದ ಕ್ರೌರ್ಯವನ್ನು ಉಂಡು ಬೆಳೆದಿದ್ದರೂ ಅವೆಲ್ಲವನ್ನು ಬಿಚ್ಚಿಡಲು ಹೋಗಿಲ್ಲ. ಹಾಗೆ ಮಾಡಿದರೆ ಮಂಗಳೂರು, ಹಂಪಿ ಮತ್ತು ದೆಹಲಿಗಳಲ್ಲಿ ಅವರ ಆತ್ಮದ ಮೇಲೆ ಆಗಿರುವ ಗಾಯದ ಗುರುತುಗಳು ನಮ್ಮನ್ನು ಬೆಚ್ಚಿ ಬೀಳಿಸುತ್ತಿತ್ತು. ತಾನು ತೊಟ್ಟುಕೊಂಡಿರುವ ಸಜ್ಜನಿಕೆಯ ಪೋಷಾಕನ್ನು ಕಳಚಲು ಹೋಗದೆ ಬಹಳ ಮಂದಿಯನ್ನು ಬೆತ್ತಲೆಯಾಗುವ ಮುಜುಗರದಿಂದ ಅವರು ಪಾರು ಮಾಡಿದ್ದಾರೆ. ಹಂಪಿಯಲ್ಲಿ ಉಂಡ ಕಹಿಯನ್ನೊಂದಿಷ್ಟು ಹೊರಹಾಕಿದ್ದು ಬಿಟ್ಟರ ಉಳಿದದ್ದೆಲ್ಲವನ್ನು ನುಂಗಿ ವಿಷಕಂಠರಾಗಿದ್ದಾರೆ ".[3] ಎಂಬ ಮಾತುಗಳನ್ನು ಗಮನಿಸಿದರೆ ಕೃತಿಗೆ ಈ ಹೆಸರು ಇಡಲು ಕಾರಣವಾಗಿರಬಹುದು.

ನಿಸರ್ಗದ ನಡುವಿನ ಬಂಟಮಲೆ ಕಾಡಿನಿಂದ ದೆಹಲಿಯ ಕಾಂಕ್ರೀಟ್ ಕಾಡಿನವರೆಗಿನ ಈ ಪಯಣದಲ್ಲಿ ಲೇಖಕರು ಕಂಡುಂಡ ಅನುಭವಗಳು ಅಪಾರ. ವಾಟಕಜೆಯಂತ ಕುಗ್ರಾಮದಿಂದ ದೆಹಲಿಗೆ ಪಯಣಿಸಿದ ಬಿಳಿಮಲೆಯವರ ಈ ಪಯಣ ಯುವಕರಿಗೆ ಸ್ಫೂರ್ತಿದಾಯಕವಾಗಿದೆ. ಬಾಲ್ಯದ ಬಡತನವನ್ನು ಮೆಟ್ಟಿನಿಂತು, ಪ್ರಕೃತಿಯ ಸವಾಲುಗಳನ್ನು ಎದುರಿಸಿ ವಿದ್ಯಾವಂತನಾಗಿದ್ದು, ಸಾಮಾನ್ಯ ಸಂಗತಿಯಲ್ಲ. ಆಟಿ ತಿಂಗಳ ಅಮವಾಸ್ಯೆ ದಿನ ಮಟಮಟ ಮಧ್ಯಾಹ್ನ ಕಪ್ಪಗೆ, ಕುಳ್ಳಗೆ ಹುಟ್ಟಿದ ಮಗುವನ್ನು ಯಾರೂ ಪ್ರೀತಿಯಿಂದ ನೋಡಲಿಲ್ಲ. ಜಾತಕದ ಪ್ರಕಾರ ವಿದ್ಯಾಯೋಗವಿಲ್ಲದೆ, ಪಿತೃದ್ವೇಷಿಯಾಗುತ್ತಾನೆ ಎಂಬ ಅಂಶಗಳು ಜಾತಕ ನಂಬುವ ತಂದೆಯ ಅವಕೃಪೆಗೆ ಒಳಗಾಗುವಂತೆ ಮಾಡುತ್ತವೆ. ಜಾತಕ ಹೇಗೂ ಇರಲಿ ನಾವು ಮಾಡುವ ಕೆಲಸ ಮಾಡಬೇಕು ಎಂಬ ತಾಯಿಯ ಒತ್ತಾಸೆ ಮೇರೆಗೆ ಶಾಲೆ ಸೇರಿ ವಿದ್ಯಾವಂತನಾದದ್ದು, ತನ್ನ ಹದಿನೇಳನೇ ವಯಸ್ಸಿನವರೆಗೆ ಕಾಲಿಗೆ ಚಪ್ಪಲಿಯೇ ಇಲ್ಲದೇ ಕಳೆದು ದೆಹಲಿಯಲ್ಲಿ ಸೂಟುಬೂಟುಧಾರಿಯಾಗುವವರೆಗಿನ ಈ ಕಥನ ಸಾಂಸ್ಕೃತಿಕವಾಗಿಯೂ ಬಹಳ ಮಹತ್ವದ್ದು. ಈ ಆತ್ಮ ಕಥೆಯಲ್ಲಿ ಓದುಗರ ಹೆಚ್ಚಿನ ಆಕರ್ಷಣೆಗೆ ಒಳಗಾಗಿರುವ ಭಾಗ ಅವರ ಬಾಲ್ಯ. ಎಲ್ಲಾ ಆತ್ಮಚರಿತ್ರಕಾರರನ್ನು ವಿಶೇಷವಾಗಿ ಕಾಡುವುದು ಅವರ ಬಾಲ್ಯದ ನೆನಪುಗಳು. ಎಷ್ಟೋ ಆತ್ಮ ಕಥೆಗಳು ಟಿಪ್ಪಣಿಯ ಸ್ವರೂಪದಲ್ಲಿದ್ದು, ನೀರಸ ದಾಖಲೆಗಳಾಗಿ ಬಿಡುವ ಅಪಾಯಗಳಿರುತ್ತವೆ.

ಆದರೆ ಆ ಅಪಾಯವನ್ನು ಮೀರಿ ಈ ಕೃತಿ ಸೃಜನಶೀಲ ಸಾಹಿತ್ಯ ಕೃತಿಯಾಗಿ ನಮ್ಮನ್ನು ಸೆಳೆಯುತ್ತದೆ.

ಕರಾವಳಿ ಜನರ ಜೀವನದ ಅವಿಭಾಜ್ಯ ಅಂಗ ಯಕ್ಷಗಾನ. ಇದು ಬಾಲ್ಯದಿಂದಲೂ ಲೇಖಕರ ಜೀವನದಲ್ಲಿ ಮಹತ್ವದ ಪ್ರಭಾವ ಬೀರಿದೆ. ಸ್ವತಃ ತಂದೆಯೇ ವೇಷಧಾರಿಯಾಗಿದ್ದು, ಅರ್ಥ ಹೇಳುವುದರಲ್ಲಿ ನಿಸ್ಸೀಮರಾಗಿದ್ದರು. ಲೇಖಕರು ಬಾಲ್ಯದಿಂದ ನೋಡುತ್ತಾ ಬಂದ ಯಕ್ಷಗಾನಗಳು, ದೆಹಲಿಯಲ್ಲಿ ಯಕ್ಷಗಾನ ಆಡಿಸಿದ್ದು, ಈ ಕಲೆಯನ್ನು ಜಪಾನಿಗೆ ಕೊಂಡೊಯ್ದು ಆ ದೇಶದ ಜನರ ಮೆಚ್ಚುಗೆ ಪಡೆದದ್ದು ಮುಂತಾದ ಅನೇಕ ಅಂಶಗಳು ಕೃತಿಯಲ್ಲಿ ದಾಖಲಾಗಿವೆ. "ನಾನು ಉದ್ದಕ್ಕೂ ಯಕ್ಷಗಾನ ನೋಡುತ್ತಿದ್ದೆ. ತಾಳಮದ್ದಳೆಗಳಿಗೂ ತಪ್ಪದೇ ಹೋಗುತ್ತಿದ್ದೆ. ಆಗಣ ಪ್ರಸಿದ್ಧ ಅರ್ಥಧಾರಿಗಳಾದ ಶ್ರೀ ಶ್ರೇಣಿಗೋಪಾಲಕೃಷ್ಣ ಭಟ್, ಮಲ್ಪೆ ರಾಮದಾಸ ಸಾಮಗ, ಪೆರ್ಲ ಕೃಷ್ಣಭಟ್, ತೆಕ್ಕಟ್ಟೆ ಆನಂದ ಮಾಸ್ಟರ್, ಕೆರೆಮನೆ ಮಹಾಬಲ ಹೆಗಡೆ, ಕೋಳ್ಯೂರು ರಾಮಚಂದ್ರರಾವ್, ಉಡವೆಕೋಡಿ ಸುಬ್ಬಪ್ಪಯ್ಯ, ಪ್ರಭಾಕರ ಜೋಷಿ, ಮೂಡಂಬೈಲು ಗೋಪಾಲಕೃಷ್ಣ ಶಾಸ್ತ್ರಿ ಮೊದಲಾದವರು ಪುರಾಣದ ಯಾವ ಪಾತ್ರಗಳನ್ನೂ ಸಾಂಸ್ಥೀಕರಿಸಲು ಬಿಡದೆ, ದಿನವು ಅವುಗಳನ್ನು ಒಡೆದು ಮತ್ತೆ ಕಟ್ಟುತ್ತಿದ್ದರು. ಇದರಿಂದಾಗಿ ಯಾವ ಪಾತ್ರಗಳು ದೇವರ ಹಂತಕ್ಕೆ ಏರಿ ಅಲ್ಲಿಯೇ ಸ್ಥಿರೀಕರಣಗೊಳ್ಳುವ ಸಾಧ್ಯತೆಯೂ ಇರಲಿಲ್ಲ. ಅಪಾಯವು ಇರಲಿಲ್ಲ"[೩] ಎಂದು ಹೇಳುತ್ತಾರೆ. ಲೇಖಕರಿಗೆ ಶೋಭನರನ್ನು ಭೇಟಿಯಾಗಲು ಸಹಾಯ ಮಾಡಿದ್ದು ತಾಳಮದ್ದಲೆ. ಶೋಭನರ ತಂದೆ ತಾಳಮದ್ದಲೆ ಕಲಾವಿದರು. ಅವರು ಮೃತಪಟ್ಟ ಸಂದರ್ಭದಲ್ಲಿ ಸಾವಿಗೆ ಹೋಗಲಾಗದಿದ್ದಾಗ 'ನನ್ನ ಕಣ್ಣಿನಿಂದ ಒಸರಿದ ರಕ್ತ ದೆಹಲಿಯಿಂದ ಕಾಸರಗೋಡವರೆಗೆ ಹರಿಯತೊಡಗಿತು' ಎಂಬ ಮಾತುಗಳು ಓದುಗರ ಮನಕಲಕುತ್ತವೆ. ಬಾಲ್ಯದಲ್ಲಿ ಪ್ರಭಾವ ಬೀರಿದ ಕುಟ್ಟಿಬ್ಯಾರಿ, ಚೌರಿಗ ಕೃಷ್ಣಪ್ಪ, ಸಣ್ಣಣ್ಣ ಮೇಷ್ಟು, ಮೂಡೂರು ಮೇಷ್ಟು, ಪುತ್ತೂರಿನಲ್ಲಿ ಪ್ರಭಾವ ಬೀರಿದ ಅಧ್ಯಾಪಕರು, ಪ್ರತಿಭೆಗೆ ಬೆಲೆ ಕೊಡುತ್ತಿದ್ದ ಕುರುಂಜಿ ವೆಂಕಟರಮಣಗೌಡರು ಮಂಗಳೂರು, ದೆಹಲಿ, ಹಂಪಿಯಲ್ಲಿನ ವಿದ್ವಾಂಸರು ಹೀಗೆ ಅನೇಕರ ಪ್ರಭಾವವನ್ನು ಕೃತಿಯಲ್ಲಿ ದಾಖಲಿಸಿದ್ದಾರೆ. ಪೌರಾಣಿಕ ಪ್ರಸಿದ್ಧಿ ಪಡೆದ ಊರು ಸುಳ್ಯ. ಸೀತೆ ಅಪಹರಣಕ್ಕೆ ಒಳಗಾದಾಗ ಪುಷ್ಪಕ ವಿಮಾನದ ಮೇಲಿಂದ ತನ್ನ ಹೂಮಾಲೆಯನ್ನು ಎಸೆಯಲು, ಅದು ಬಿದ್ದ ಜಾಗ ಪೂಮಲೆ ಬೆಟ್ಟ. ಇಲ್ಲಿಂದ ವೃತ್ತಿ ಜೀವನ ಆರಂಭಿಸಿ ಮಂಗಳೂರು, ಹಂಪಿ ನಂತರ ದೆಹಲಿ ಕಡೆಗೆ ಸಾಗುತ್ತಾರೆ. ಹಂಪಿ ವಿಶ್ವವಿದ್ಯಾಲಯಕ್ಕೆ ಪ್ರಾಧ್ಯಾಪಕರಾಗಿ ಹೋದಾಗ ತಮ್ಮ ವೃತ್ತಿ ಜೀವನದ ವಿವರಗಳ ಜೊತೆಗೆ ಹಂಪಿಯ

ಇತಿಹಾಸ, ಪರಿಸರ, ಸಾಂಸ್ಕೃತಿಕ ಮಹತ್ವ ಅಲ್ಲಿ ಕನ್ನಡ ವಿಶ್ವವಿದ್ಯಾಲಯ ತಲೆ ಎತ್ತಿ ನಿಂತ ಬಗೆ, ಅಲ್ಲಿನ ಕಾರ್ಯ ಚಟುವಟಿಕೆಗಳು ಮುಂದೆ ದೆಹಲಿಗೆ ಹೋದಾಗ ಅಲ್ಲಿನ ಇತಿಹಾಸ, ಜೆ.ಎನ್.ಯುನಲ್ಲಿ ಮಾಡಿದ ಕೆಲಸಗಳು, ದೆಹಲಿ ಕರ್ನಾಟಕ ಸಂಘದ ವಿವರಗಳು, ಅಮೆರಿಕಾ, ಪಾಕಿಸ್ಥಾನ, ಜೆರುಸಲೆಮ್ನ ಅನುಭವಗಳು, ಜಪಾನಿನ ಸಾಂಸ್ಕೃತಿ ರಾಜಧಾನಿ, ಕ್ಯೋಟೋ ಬಗೆಗಿನ ವಿವರಗಳು, ಜಪಾನಿಯರ ಆಚರಣೆ, ಕಲೆ, ಸಂಸ್ಕೃತಿ ಇತ್ಯಾದಿ ಅನೇಕ ವಿವರಗಳನ್ನು ಕೃತಿಯಲ್ಲಿ ಕಾಣಬಹುದು.

ದೇವರು, ದೇವಮಾನವರು ಭಾಗದಲ್ಲಿ ದೇವರನ್ನು ಸೃಷ್ಟಿಸಿಕೊಂಡು ಮನುಷ್ಯ ನಡೆಸಿದ ಚಿಂತನೆಗಳು ನನಗೆ ಮುಖ್ಯವಾದವೇ ಹೊರತು ದೇವರು ಮುಖ್ಯವಾಗಲೇ ಇಲ್ಲ. ಚಿಕ್ಕಂದಿನಿಂದ ನನಗೆ ದೇವರು, ಧರ್ಮ, ಭೂತ, ಪಂಚಾಂಗ, ಜಾತಿ, ಪುನರ್ಜನ್ಮ ಇತ್ಯಾದಿ ಬಗ್ಗೆ ನಂಬಿಕೆ ಬರಲಿಲ್ಲವೆನ್ನುತ್ತಾರೆ. ಪಂಜದ ಜಾತ್ರೆಗೆ ಹೋಗುತ್ತಿದ್ದು, ದೇವರನ್ನು ನೋಡಲಲ್ಲ, ಜಾತ್ರೆ ಇತರೆ ಆಕರ್ಷಣೆಗೆ. ಓದುತ್ತಿದ್ದಾಗ ದೇವರು, ಧರ್ಮದ ವಿರುದ್ಧ ಮಾತನಾಡಿ ಕಮ್ಯುನಿಷ್ಟನೆಂಬ ಹಣೆಪಟ್ಟಿ ಧರಿಸಿದೆ. ವಡ್ಡಾರಾಧನೆಯ ಅಗ್ನಿರಾಜನ ಕಥೆ, ಋಗ್ವೇದದ ಯಮ, ಯಮಿಯರ ಸಂವಾದ, ತುಳು ಜನಪದದಲ್ಲಿ ಬರುವ ಬಾಳೆಮೀನು, ಮುಗುಡು ಮೀನುಗಳ ಕಥೆ, ಚಂದ್ರ ತಾರೆಯರ ಪ್ರಕರಣ ಇತ್ಯಾದಿ ಪ್ರಸಂಗಗಳನ್ನು ಲೌಕಿಕ ಪರಿಭಾಷೆಯಲ್ಲಿಯೇ ನೋಡಬೇಕಾದ ಅಗತ್ಯವಿದೆ. ಕೃಷ್ಣನಿಗೆ ಮಹತ್ವವನ್ನೇ ಕೊಡದೇ ವಿಕ್ರಮಾರ್ಜುನ ವಿಜಯ ಬರೆದ ಪಂಪ, ಕೃಷ್ಣಕಥೆ ಬರೆದ ಕುಮಾರವ್ಯಾಸರನ್ನು ಗಮನಿಸಿದರೆ ದೇವರಿಗೆ ಕೊಡಬೇಕಾದ ಸ್ಥಾನವನ್ನು ಅವರೇ ನಿರ್ಧರಿಸಿದ್ದಾರೆ. ಇಂದು ನಕಲಿ ಸ್ವಾಮಿಗಳು, ದೇವಮಾನವರ ವಂಚನೆಗೆ ವಿದ್ಯಾವಂತ ವರ್ಗ ಕೂಡ ಬಲಿಯಾಗಿ ಮೂಢನಂಬಿಕೆಗಳನ್ನು ಆಚರಿಸುತ್ತಿದೆ. ಅಹಿಂಸೆಯು ಒಂದು ಸಾಧಿತ ಪಥವಾಗಿದ್ದು, ಅದನ್ನು ಸಾಧಿಸಲು ಸಾಕಷ್ಟು ತಯಾರಿ ಧೈರ್ಯ ಬೇಕು. ಚಿಂತನೆ, ಮಾತು, ನಡವಳಿಕೆಗಳಲ್ಲಿ ಅದು ಪ್ರತಿಫಲಿಸಬೇಕು. ತ್ಯಾಗ, ಪ್ರೀತಿ, ಕರುಣೆ, ಕ್ಷಮೆ ಅದರ ಗುಣಗಳು. ನಮ್ಮ ದೇವತೆಗಳ ಕೈಯಲ್ಲಿ ಆಯುಧಗಳು ವಿಜೃಂಭಿಸುತ್ತಿವೆ. ಮನುಕುಲಕ್ಕೆ ಬೆಳಕು ತೋರಿದ ಬುದ್ಧ, ಬಸವ, ಗಾಂಧಿ, ಮಹಾವೀರ, ಯೇಸು ಮುಂತಾದವರು ಅಹಿಂಸೆಯನ್ನು ಭೋದಿಸಿದ್ದಾರೆ. ಆಧುನಿಕ ಸಮಾಜ ಹಿಂಸೆಯ ಕಡೆ ವಾಲುತ್ತಿರುವುದು ಬೇಸರದ ಸಂಗತಿ. ಹೊಸ ತಲೆಮಾರಿನ ಜನ ಯುದ್ಧದ ಪರ ಮಾತನಾಡುತ್ತಾರೆ. ಅವರಿಗೆ ಜನಾಂಗಗಳನ್ನೇ ನಾಶಮಾಡುವ ಯುದ್ಧಗಳ ಭೀಕರತೆ, ದುಷ್ಪರಿಣಾಮಗಳ ಅರಿವು ಮೂಡಿಸಬೇಕಾಗಿದೆ ಎಂದು ಅಭಿಪ್ರಾಯ ಪಡುತ್ತಾರೆ.

ಪ್ರವಾಸ ಮತ್ತು ಓದು ಲೇಖಕರ ನೆಚ್ಚಿನ ಹವ್ಯಾಸಗಳು. "ಮದ್ರಾಸ್

ಓರಿಯಂಟಲ್ ಮ್ಯಾನ್ಸಿಪ್ಟ್ ಲೈಬ್ರರಿಯಲ್ಲಿ ಕುಳಿತಿದ್ದ ಅನೇಕ ತಮಿಳು, ತೆಲುಗು ಮತ್ತು ಸಂಸ್ಕೃತ ಪಂಡಿತರ ಜೊತೆ ನಾನು ಕಳೆದ ದಿನಗಳು ಅಮೂಲ್ಯವಾಗಿತ್ತು. ಸಾಯಂಕಾಲದ ಸಮಯ ವ್ಯರ್ಥವಾಗಬಾರದೆಂದು ಸಂಸ್ಕೃತ ತರಗತಿಗಳಿಗೆ ಸೇರಿದೆ. ತಮಿಳು ಗೆಳೆಯರು ತಮಿಳಿನ ಹುಚ್ಚು ಹಿಡಿಸಿದರು. ವಾರಾಂತ್ಯದಲ್ಲಿ ತಮಿಳು ತರಗತಿಗಳಿಗೆ ಸೇರಿಕೊಂಡೆ. ಸಂಗಂ ಸಾಹಿತ್ಯ, ಸಿಲಪ್ಪದಿಕಾರಂ, ನಾಯನ್ಮಾರುಗಳು, ಆಳ್ವಾರರು, ಪೆರಿಯ ಪುರಾಣಂ, ಕಂಬ ರಾಮಾಯಣ, ತಿರುಕ್ಕುರುಳ್, ಸುಬ್ರಹ್ಮಣ್ಯ ಭಾರತಿ ಹೀಗೆ ಹೊಸದೊಂದು ಲೋಕವೇ ನನ್ನ ಮುಂದೆ ತೆರೆದುಕೊಂಡಿತ್ತು. ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳ ಕುರಿತಾದ ಅಧ್ಯಯನಗಳು ಎಷ್ಟೊಂದು ಮಹತ್ವದ್ದು ಎಂದು ಅರಿವಾದ ದಿನಗಳವು. ದಿನಕ್ಕೆ ೧೮–೨೦ ಗಂಟೆ ಓದುವ ಕೆಲಸ ಮಾಡಿದೆ. ರಜೆಯಲ್ಲಿ ಮಧುರೈ, ಕಾಂಚೀ, ಮಹಬಲಿಪುರಂ, ಚಿದಂಬರಂ ಊರುಗಳನ್ನು ಸುತ್ತಿದೆ. ..... ಮದ್ರಾಸಿಗೆ ಹೋಗದೇ ಇದ್ದಿದ್ದರೆ, ನನಗೆ ದ್ರಾವಿಡ ಸಂಸ್ಕೃತಿಯ ಬಗೆಗೆ ಮೋಹವೇ ಬೆಳೆಯುತ್ತಿರಲಿಲ್ಲ ಅದು ನನ್ನ ಚಿಂತನೆ ಮತ್ತು ಬರಹಗಳ ಮೇಲೆ ಗಾಢ ಪರಿಣಾಮ ಬೀರಿತು"[೪] ಎನ್ನುವ ಲೇಖಕರ ಮಾತುಗಳು ಇಂದಿನ ಯುವ ಜನಾಂಗಕ್ಕೆ ಸ್ಫೂರ್ತಿಯಾಗಬೇಕಾಗಿದೆ. ಇಂದಿನ ಯುವಕರು ಪ್ರವಾಸವನ್ನು ಮೋಜಿಗಾಗಿ ಎಂದು ಭಾವಿಸುತ್ತಾರೆ ಮತ್ತು ಜೀವನದ ಯಶಸ್ಸಿಗೆ ಸುಲಭ ಮಾರ್ಗಗಳನ್ನು ಹುಡುಕುತ್ತಾರೆ. "ನಮ್ಮ ಯುವಜನರು ಈ ಆತ್ಮಕಥೆಯನ್ನು ತಪ್ಪದೇ ಓದಬೇಕು ವರ್ತಮಾನದ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ವಿದ್ಯಮಾನಗಳು ಹೊಸ ತಲೆಮಾರಿಗೆ ಸ್ಫೂರ್ತಿದಾಯಕವಾಗಿಲ್ಲ. ಇದರಿಂದ ನಿರಾಶೆಗೊಳಗಾದ ಅವರು ಸಿನಿಕತನ, ಉಡಾಫೆಗಳನ್ನು ಬೆಳೆಸಿಕೊಂಡಿದ್ದಾರೆ...... ಬದುಕು ಗೆದ್ದವರ ಜೀವನ ಕಥನ ಅವರಿಗೆ ಸರಿಯಾದ ದಾರಿಯನ್ನು ಆಯ್ದುಕೊಳ್ಳಲು ನೆರವಾಗಬಹುದು "[೫] ಎಂಬ ಮುನ್ನುಡಿ ಮಾತುಗಳು ಗಮನಾರ್ಹವಾಗಿವೆ. ಬಿಳಿಮಲೆಯವರು ಉತ್ತಮ ಅಧ್ಯಾಪಕರು, ಒಳ್ಳೆಯ ಸಂಘಟಕರು, ಭಾಷಣಕಾರರು, ವಿಮರ್ಶಕರು, ಸಂಸ್ಕೃತಿ ಚಿಂತಕರೂ ಆಗಿದ್ದಾರೆ. ಸದಾ ಒಂದಲ್ಲಾ ಒಂದು ಹೊಸ ವಿಚಾರಗಳನ್ನು ಸೆಮಿನಾರ್ಗಳಲ್ಲಿ ತರಗತಿಗಳಲ್ಲಿ, ಭಾಷಣಗಳಲ್ಲಿ ಹೇಳುತ್ತಾ ಯುವ ಸಮುದಾಯವನ್ನು ವೈಚಾರಿಕತೆಯತ್ತ ಕೊಂಡೊಯ್ದವರು. ಪ್ರಗತಿಪರ ಚಳವಳಿಗಳ ಜೊತೆ ತಮ್ಮನ್ನು ಗುರುತಿಸಿಕೊಂಡವರು. ಪ್ರತಿಕೂಲ ಪರಿಸ್ಥಿತಿಗಳನ್ನು ಮೆಟ್ಟಿನಿಂತು ಬೆಳೆದ ಅವರ ಈ ಕಥನ ಇತ್ತೀಚಿಗೆ ಬಂದ ಆತ್ಮಕಥೆಗಳ ಸಾಲಿನ ಮಹತ್ವದ ಕೃತಿಯಾಗಿದೆ.

ಅಡಿ ಟಿಪ್ಪಣಿಗಳು

೧. ಅರುಹು ಕುರುಹು ಸಂಪುಟಃ ೧೧, ಸಂಚಿಕೆಃ ೪೪, ಏಪ್ರಿಲ್–ಜೂನ್ ೨೦೨೧, ಪುಟ ೧೦೧–೧೦೨.

೨. 'ಕಾಗೆ ಮುಟ್ಟಿದ ನೀರು' ೨ನೇ ಮುದ್ರಣ, ೧೦ ಆಗಸ್ಟ ೨೦೨೦, ಮುನ್ನುಡಿ ಪುಟ ೬.

೩. ಅದೇ ಪುಟ ೨೪೭.

೪. ಅದೇ ಪುಟ ೮೨, ೮೩.

೫. ಅದೇ ಪುಟ ೧೦.

ರಾಘವಾಂಕನ ಕಾವ್ಯವಸ್ತು– ಮರುಶೋಧನೆ

ಡಾ. ಜಿ.ಎಸ್.ರಮೇಶ್

ಕವಿ ರಾಘವಾಂಕನ ಉಪಲಬ್ಧವಿರುವ ಕಾವ್ಯಗಳು ನಾಲ್ಕು ಮಾತ್ರ. ಅವುಗಳು : ವೀರೇಶಚರಿತೆ, ಸೋಮನಾಥ ಚಾರಿತ್ರ, ಹರಿಶ್ಚಂದ್ರ ಕಾವ್ಯ, ಸಿದ್ಧರಾಮ ಪುರಾಣ ಈ ನಾಲ್ಕು ಕಾವ್ಯಗಳಲ್ಲಿ ತನ್ನಅಂತಃಸತ್ವದಿಂದಾಗಿ ಬಹುಚರ್ಚಿತವಾಗಿರುವ ಕಾವ್ಯವೆಂದರೆ ಹರಿಶ್ಚಂದ್ರ ಕಾವ್ಯವೇ. ಹನ್ನೆರಡನೇ ಶತಮಾನದ ಶರಣರ ಆಂದೋಲನದಲ್ಲಿ ಮೂಡಿಬಂದ ಮತ್ತು ಪ್ರತಿಪಾದಿತವಾದ ವಿಚಾರಧಾರೆಗಳಿಗೆ ಸೂಕ್ತ ಕಥನ ಪ್ರತಿಮೆಗಳನ್ನು ನಿರ್ಮಿಸಿದವನು ಕವಿ ಹರಿಹರ. ಅವನು ತನ್ನ ವಸ್ತುವಿನ ಆಯ್ಕೆ, ರಚನಾ ಕೌಶಲ, ಕಥನ ಕ್ರಮ, ಸ್ಥಾಪಿಸುವ ಧೋರಣೆ ಮತ್ತು ಭಾಷೆ– ಛಂದಸ್ಸುಗಳ ಬಳಕೆ – ಇವುಗಳಲ್ಲಿ ಹೊಸತನವನ್ನು ಮೆರೆದವನು. ತಮಿಳಿನ ಪೆರಿಯಪುರಾಣದ ಭಕ್ತರು ಮತ್ತು ಸಮೀಪಕಾಲೀನ ಶರಣರಜೀವನ ವಿಧಾನವನ್ನು ನಿರೂಪಿಸುವ ಹರಿಹರ, ತನ್ನ ರಗಳೆಗಳಲ್ಲಿ, ಶರಣರ ಆಂದೋಲನದಲ್ಲಿ ರೂಪಿತವಾದ ವಿಚಾರಗಳನ್ನು ಬಿಡಿಬಿಡಿಯಾಗಿ ಕಟ್ಟಿಕೊಡುತ್ತಾನೆ. ಇದಕ್ಕೆ ಹೊರತಾಗಿ ಆ ಆಂದೋಲನದಲ್ಲಿ ಹೊರಹೊಮ್ಮಿದ ನಾನಾ ವಿಚಾರಗಳ ಇಡಿಯಾದ ನಿರೂಪಣೆ, ಸ್ವಲ್ಪಮಟ್ಟಿಗಾದರೂ ನಮಗೆ ದೊರಕುವುದು ಅವನ ಬಸವರಾಜದೇವರ ರಗಳೆಯಲ್ಲಿ ಮಾತ್ರ. ಅದಕ್ಕೆ ಬಸವಣ್ಣನ ಸಂಕೀರ್ಣ ವ್ಯಕ್ತಿತ್ವವೂ ಕಾರಣವಾಗಿದೆ. ಹಾಗೆಯೇತನ್ನಗುರುವೂ, ಸೋದರಮಾವನೂಆದ ಹರಿಹರನ ಪ್ರಭಾವಕ್ಕೆ ಒಳಗಾಗಿರುವ ರಾಘವಾಂಕ ಹರಿಶ್ಚಂದ್ರಕಾವ್ಯದಲ್ಲಿ ಶರಣರ ಆಂದೋಲನದಲ್ಲಿ ಒಡಮೂಡಿದ ಅನೇಕ ವಿಚಾರಗಳಿಗೆ ಒಂದು ಪ್ರತಿಮೆಯನ್ನುಕಡೆದು ನಿಲ್ಲಿಸುವ ಪ್ರಯತ್ನ ಮಾಡಿದ್ದಾನೆ.

ರಾಘವಾಂಕ ತನ್ನಕಾವ್ಯವನ್ನು'ಹರಿಶ್ಚಂದ್ರಚಾರಿತ್ರ' ಎಂದು ಕರೆದಿದ್ದಾನೆ. ಇಲ್ಲಿ ಕವಿ ವೈದಿಕ ಮಾರ್ಗದ ಸಿದ್ಧ(ವಿಶ್ವಾಮಿತ್ರ)ನಿಗೆ ಶರಣ ಮಾರ್ಗದ ಸಾಧಕ(ಹರಿಶ್ಚಂದ್ರ)ನೊಬ್ಬನನ್ನು ಮುಖಾಮುಖಿಯಾಗಿಸಿದ್ದಾನೆ. ಇವರ ನಡುವಿನ ಘರ್ಷಣೆಯಲ್ಲಿ ಸತ್ಯದಂಥ ಸಾರ್ವಕಾಲಿಕ, ಸರ್ವಮಾನ್ಯ ಮೌಲ್ಯದತನ್ನ ಪರಿಕಲ್ಪನೆಯನ್ನು ಚಿರಸ್ಥಾಯಿಗೊಳಿಸುತ್ತಿದ್ದಾನೆ. 'ಕಡೆತನಕ ಬಂದ ಲೇಸಿಂಗೆ ತಲೆದೂಗಿ' ನೋಡಿದರೆ ಆ ಪಾತ್ರಗಳ ಧಾರ್ಮಿಕ ಹಿನ್ನೆಲೆಗಳು ನೇಪಥ್ಯಕ್ಕೆ ಸರಿದು, 'ಸಿದ್ಧ' ನ

ಹುಸಿಕತೆ ಹಾಗೂ ಸಾಧಕನ ಸತ್ಯಮಾರ್ಗಗಳು ಕರ್ಷಿತವಾಗುವಂತೆ ನಿಯಂತ್ರಿಸಿದ್ದಾನೆ. ರಾಘವಾಂಕ ತನ್ನಕೃತಿಯ ಸಂಕ್ಷಿಪ್ತರೂಪವನ್ನು ಮೊದಲೇ ಹೀಗೆ ಮಂಡಿಸುತ್ತಾನೆ:

ವಸುಧಾಧಿಪತಿ ಹರಿಶ್ಚಂದ್ರಘನಸತ್ಯನೆಂದೊಸೆದು
ವಾಸಿಷ್ಠನಿಂದ್ರಗೆನಲು ಕೌಶಿಕಂ ಹುಸಿಮಾಳ್ಪೆನೆಂದು
ಭಾಷೆಯನಿತ್ತು ಧರೆಗೆ ಬಂದವನಿಪನ ಸತಿಪುತ್ರರ
ಅಸುವಂತ್ಯವೆನೆ ನಿಗ್ರಹಂಮಾಡಿಯೊಪ್ಪದಿರೆ
ಶಶಿಮೌಳಿ ಶ್ರೀ ವಿಶ್ವನಾಥ ಭೂಪಂಗೆ ಕರುಣಿಸಿ
ಸಕಲ ಸಾಮ್ರಾಜ್ಯವಿತ್ತಾತನಂ ಮೆರೆದಕೃತಿ ಪುಣ್ಯದಾ ಕೃತಿಯಿದು.

(ಪ್ರಸ್ಥ..ಪ.ಸಂಖ್ಯೆ೧೭)

ಇದು ಕವಿಯ ದೃಷ್ಟಿಯಲ್ಲಿ'ಕಥಾಬೀಜ'. ಇದನ್ನು ಬಿತ್ತಿ ಬೆಳೆದು 'ಕಾವ್ಯವೃಕ್ಷ'ವನ್ನಾಗಿ(ಅದೇ-೧೮) ಮಾಡುತ್ತೇನೆ ಎಂದು ಘೋಷಿಸಿಕೊಂಡಿದ್ದಾನೆ. ಹರಿಶ್ಚಂದ್ರನ ಘನವ್ಯಕ್ತಿತ್ವವನ್ನು ಮೊದಲಲ್ಲಿಯೇ ಪರಿಚಯಿಸಿದ್ದಾನೆ (ಅದೇ ೪೦,೪೨). ಅವನಿಗೆ ಮುಖಾಮುಖಿಯಾಗುವ ವಿಶ್ವಾಮಿತ್ರ ಪಾತ್ರದ ವ್ಯಕ್ತಿತ್ವವನ್ನು ಮುಂದೆ (ಸ್ಥಲ ೩ರಲ್ಲಿ) ಚಿತ್ರಿಸಿದ್ದಾನೆ. ಕಾವ್ಯವಸ್ತುವನ್ನು ಪಡಿಮೂಡಿಸುವಲ್ಲಿ ಈ ವ್ಯಕ್ತಿ ವಿವರಗಳು ಮಹತ್ವದ್ದಾಗಿವೆ. ದೇವೇಂದ್ರನೋಲಗದಲ್ಲಿ"ಮುನಿಕುಲದ ನಡುವಿರ್ದ" ವಿಶ್ವಾಮಿತ್ರ ವಸಿಷ್ಠರಲ್ಲಿ 'ರಾಜಗುರು'ವಾದ ವಸಿಷ್ಠನನ್ನು"ರವಿಕುಲಜರಪ್ಪಿಕ್ಷ್ವಾಕುವಂಶದರಸುಗಳೊಳತಿ ಬಲರೆನಿಸಿ ಮನವಚನ ಕಾಯದೊಳಗೊಮ್ಮೆಯುಂ ಹುಸಿ ಹೊದ್ದದಂತೆ ನಡೆವ ಕಲಿಗಳಾರಯ್ಯ"ಎಂದುಇಂದ್ರ ಪ್ರಶ್ನಿಸಿದಾಗ, ಅವನು ಹರಿಶ್ಚಂದ್ರನ ಹೆಸರನ್ನು ಸೂಚಿಸುತ್ತಾನೆ. ಆದರೆ "ಅತಿಕೋಪ, ಬದ್ಧದ್ವೇಷ, ಅನಿಮಿತ್ತವೈರ"ಗಳೇ ಮೈವೆತ್ತಿರುವ ವಿಶ್ವಾಮಿತ್ರ ವಸಿಷ್ಠನ ಉತ್ತರವನ್ನು ಕೇಳಿಯೇ ಕೆರಳುತ್ತಾನೆ:

ತೀವಿದೊಡ್ಡೋಲಗದ ನಡುವೆ ತನ್ನಂ ಮೊದಲೊ
ಳೋವಿನುಡಿಸದ ಕೋಪವೊಂದಾ ವಸಿಷ್ಠ ಮುನಿ
ಯಾವುದಂ ಪೇಳ್ಪಡದನಲ್ಲೆಂಬ ಭಾಷೆಯೆರಡಖಿಳ ಜೀವಾವಳಿಯಲಿ
ಭಾವಿಪಡೆ ಕುಂದನಲ್ಲದೆ ಲೇಸ ಕಾಣದಿಹ
ಭಾವ ಮುಪ್ಪುರಿಗೊಂಡು ಕುಡಿವರಿದು ಕಡುಗೋಪ
ವಾವರಿಸಿ ಕೌಶಿಕಂ ನಿಂದು ನಿಲ್ ನುಡಿಯಬೇಡೆಂದು.........

(ಸ್ಥಲ೨, ಪ.ಸಂ.೮)

ವಸಿಷ್ಠ ಹರಿಶ್ಚಂದ್ರನ ಪರ ವಕಾಲತ್ತು ನಡೆಸಿದರೆ,"ವಸಿಷ್ಠ ಮುನಿ ಯಾವುದಂ ಪೇಳ್ದಿದನಲ್ಲೆಂಬ" ವಿಶ್ವಾಮಿತ್ರ ಹಿಂದೆಯೇ ಕೋಪಿಸಿದ್ದವನು, 'ಸತ್ಯಲೇಶವಂತವನಾಳ್ವ ದೇಶದೊಳು ಕೇಳ್ದರಿಯೇ" (ಅದೇ೯) ಎಂದು ವಾದ ಮಾಡುತ್ತಾ ಕವಿಯ ವಸ್ತು-ಉದ್ದೇಶಕ್ಕೆ ನೆರವಾಗುತ್ತಾನೆ. ಈ ವಾಗ್ವಾದಸರಣಿ ಕಾವ್ಯದ ಮುಂದಿನ ಘಟನೆಗಳ ಅಂತರಾರ್ಥವನ್ನು ಮನಗಾಣಿಸುವಂಥದಾಗಿದೆ. ವಸಿಷ್ಠನ ವಾದಕ್ಕೆ ತಳಹದಿ,-

...........ಸತ್ಯನಿಧಿ ಹರಿಶ್ಚಂದ್ರರಾಯನ ವಾಕ್ಯದೊಳು ಹುಸಿಗಳು
ಮೊಳೆಯವಿದು ನಿರುತವಾನರಿಯಲಾತನ ಸತ್ಯ
ದಳವನರಿವೊಡೆನೊಸಲ ಕಣ್ಣುಳ್ಳನಾಗಬೇ
ಕುಳಿದವರಿಗಳವಡದು ನೀನೇ ಪರೀಕ್ಷಿಸುವೆ....(ಅದೇ೧೪) ಎಂದು

ಚೆಂಡನ್ನು ವಿಶ್ವಾಮಿತ್ರನಂಗಳಕ್ಕೆಸೆಯುತ್ತಾನೆ. ಆದರೆ, ವಿಶ್ವಾಮಿತ್ರನ ವಾದದಲ್ಲಿ ತೋರಿಬರುವ ಸತ್ಯ ಮತ್ತು ಅದರ ಪರಿಕಲ್ಪನೆಯೇ ಭಿನ್ನವಾದುದಾಗಿದೆ.

"ಇಂತಿವಕೆ ವರ್ಪಂದುತನಕವಂಸ್ಥಿರನೆಯಾ
ದಂತಿರ್ಕೆ ಸತ್ಯಮಾತ್ರದೊಳಿಪ್ಪುದೇಂ ಸತ್ಯ
ವಂ ತಳೆದುದಕ್ಕೆ ಸಾಧನವಾಗಿ ಬಿಡಬೇಹುದುಂಟವಂ ಬಿಡದಿರ್ದಡೆ
ಎಂತು............ (ಅದೇ ೧೫) ಎಂದು ಪ್ರಶ್ನಿಸುವ ವಿಶ್ವಾಮಿತ್ರ, ಹರಿಶ್ಚಂದ್ರ

ಬಿಡಬೇಕಾದ ದೋಷಗಳನ್ನು ಮುಂದೊಡ್ಡುತ್ತಾನೆ.,-"ಲೋಭವಾರ್ತಂತೀವ್ರಭೀತಿ ನಿಷ್ಕರುಣ ಮೂರ್ಖತ್ವಜಾಡ್ಯಂ"ತನಗೆ ಬಿಡಬೇಹುದು........(ಅದೇ) - ಹೀಗೆ ಪೂರ್ಣಗೊಳ್ಳುವ ಸತ್ಯದ ಪರಿಕಲ್ಪನೆ ವಿಶ್ವಾಮಿತ್ರನದು; "ಈಗುಣವಿಲ್ಲದಿರ್ದಡಂತದು ಸತ್ಯವಲ್ಲ" (ಅದೇ ೧೬) ಎಂಬುದು ಅವನ ನಿಲುವು. ಈ ವಾದಕ್ಕೆ ವಿಶ್ವಾಮಿತ್ರ ಕೊಡುವ ಆಧಾರ ಹರಿಶ್ಚಂದ್ರನ ಪೂರ್ವ ವೃತ್ತಾಂತವಾಗಿದೆ: ಸಂತಾನವಿಲ್ಲವೆಂದು ವರುಣನಿಂದ ವರವನ್ನು ಪಡೆದು, ಅವನನ್ನು ಯಾಗಕ್ಕೆ ಆಹುತಿ ಕೊಡುವೆನೆಂದು ಮಾತುಕೊಟ್ಟು ಅನಂತರ ಶಿಶುವನ್ನು ಕಾಡಿಗಟ್ಟಿ ಮುಚ್ಚಿಟ್ಟನೆಂದು ಆರೋಪಿಸಿ,

ಹಿರಿದು ಹುಸಿಗಬುಧಪತಿ ಮುನಿದು ಮಾಡಿದ ಜಳೋ

ದರವ ಭಾವಿಸದೆ ಕಂಗೆಟ್ಟಜಾಡ್ಯಂ ಮಹಾ
ಧ್ವರಕೆ ಪಶುವಂ ಮಗನ ಮಾಡಲಾರದೆ ಮೋಹದಿಂದ ಜೀಗರ್ತ
ಮುನಿಯ
ವರಸುತ ಶುನಶ್ಶೇಪನಂ ತಂದು ಯಾಗವಿಧಿ
ಗರಿದು ಬೇಳಲ್ಕೆ ಮನದಂದ ಪಾತಕನು ಭೂ
ವರನೆನೇ.......

(ಅದೇ ೧೮,೧೯)

ವಸಿಷ್ಠ ವಿಶ್ವಾಮಿತ್ರನತರ್ಕವನ್ನೆಲ್ಲಾ ತಳ್ಳಿಹಾಕಿ, ಹರಿಶ್ಚಂದ್ರನಲ್ಲಿ "ಅಸತ್ಯವನು ಕಾಣಿಸಲು ಬಲ್ಲರು ಧಾತ್ರಿಯೊಳು ಮುನ್ನ ಹುಟ್ಟದರಿಲ್ಲಿನ್ನು ಹುಟ್ಟುವರ 'ಕಾಣೆ"(ಅದೇ೨೦) ಎಂದರೆ ಮುಳಿದು ವಿಶ್ವಾಮಿತ್ರ, ತನ್ನ ವಾದವನ್ನು ಹೊರಳಿಸಿಕೊಂಡು"....... ಆತ ಹುಸಿದನಾದಡೆ ನಿನ್ನನೇಗೈಯಬಹುದು" (ಅದೇ೨೧) ಎಂದು ಪ್ರಶ್ನಿಸುತ್ತಾನೆ. ಹೀಗೆ ಇಬ್ಬರೂ ತಮ್ಮ ಈವರೆಗಿನ ಆರ್ಜಿತ ಸತ್ವವನ್ನು ಪಣಕ್ಕೊಡ್ಡಿಕೊಳ್ಳುತ್ತಾರೆ. ವಸಿಷ್ಠನಿಗೆ ಗುರಿಯಿಟ್ಟ ಬಾಣ ಹರಿಶ್ಚಂದ್ರನನ್ನು ಬೇಟೆಯಾಡಲು ತೊಡಗುತ್ತದೆ. ಕವಿಯೇ ಹೇಳುವಂತೆ, "ಕೋಣನೆರೆಡುಂ ಹೋರೆಗಿಡುವಿಂಗೆ ಮಿತ್ತೆಂಬ" (ತೃ.ಪ.೧) ಗಾದೆಯಂತೆ ಈ ಯಾವುದರ ಅರಿವೂ ಇಲ್ಲದ ಹರಿಶ್ಚಂದ್ರ ವಸಿಷ್ಠನ ಪ್ರತಿನಿಧಿಯಾಗಿ ಪರೀಕ್ಷೆಗೆ ಒಳಪಡುತ್ತಾನೆ: ವಿಶ್ವಾಮಿತ್ರ ಪರೀಕ್ಷಿಸುವವನಾಗುತ್ತಾನೆ.

ಕವಿ, ತನ್ನ ಕಾವ್ಯದ ಉದ್ದೇಶ–ಆಶಯಗಳು ಸಾರ್ಥಕವಾಗುವಂಥ ವಸ್ತುವಿನ ಸ್ವರೂಪ, ವ್ಯಾಪ್ತಿಯನ್ನೂ ಎರಡು ಸಮಾಂತರವಾಗಿ ಹರಿಯುವ ಪಾತ್ರಘಟಕ (unit of characters)ಗಳ ರೂಪುರೇಷೆಯನ್ನೂ ಮೊದಲೆರೆಡು ಸ್ಥಲಗಳಲ್ಲಿ ಆಯೋಜಿಸಿದ್ದಾನೆ. ಇಂದ್ರನ ಸಭೆಯ ವಾಗ್ವಾದದಲ್ಲಿ ವಸಿಷ್ಠ ಹರಿಶ್ಚಂದ್ರನನ್ನು ಕುರಿತು'ಘನವಾದಿ', 'ಸತ್ಯವಂತ'ಎಂದು ವಿಶ್ವಾಸದಿಂದ ವಾದಿಸುತ್ತಾನೆ. ವಿಶ್ವಾಮಿತ್ರನಲ್ಲಿ, ಹರಿಶ್ಚಂದ್ರನನ್ನು"ಸ್ಥಿರನೇ", ಆದರೆ, "ಜಾಡ್ಯ"ಗಳಿಂದ ಆವೃತವಾಗಿದ್ದಾನೆ: ಅವುಗಳನ್ನು ನಿವರಾಸಿಕೊಂಡಲ್ಲದೆ "ಘನ ಸತ್ಯವಂತ"ನಾಗಲಾರ ಎಂಬ ನಿಲುವಿದೆ: ಅವನನ್ನು ಹುಸಿಕನನ್ನಾಗಿಮಾಡುವ. ವಿಶ್ವಾಮಿತ್ರನ ಆಶಯಕ್ಕೆ ಹಾಗೂ ವಾದಕ್ಕೆ ಹರಿಶ್ಚಂದ್ರನ ಪೂರ್ವ ವೃತ್ತಾಂತದ ವಿಶ್ವಾಸಾಧಾರವಿದೆ. ಕಾವ್ಯದುದ್ದಕ್ಕೂ ಕವಿಯ ಉದ್ದೇಶ ಸಾಧಕನಾದ ನಾಯಕನ ನಿಲುವಿನಲ್ಲಿ ವಸಿಷ್ಠನ ವಿಶ್ವಾಸದಂತೆ ಸತ್ಯ ನಿಷ್ಠೆಯೂ, ಅದನ್ನು ಅಲ್ಲಗಳೆಯುವ ವಿಶ್ವಾಮಿತ್ರನಗ್ರಹಿಕೆಯಂತೆ'ಜಾಡ್ಯ'ಗಳು ಸಂಯುಕ್ತವಾಗಿವೆ.

ಈ ಘರ್ಷಣೆಯೇಕಾವ್ಯದ ವಸ್ತುವಾದರೆ, ತ್ರಿಕರಣ ಶುದ್ಧಿಯ ಮೂಲಕ ಅದರ ನಿವಾರಣೆಯೇಕವಿಯಉದ್ದೇಶವಾಗಿದೆ. ಆದ್ದರಿಂದಲೇಕಾವ್ಯದಉದ್ದೇಶ ಈಗಾಗಲೇ ಸತ್ಯಸಂಧನೆಂದು ಪ್ರಸಿದ್ಧನಾಗಿರುವ ಮೌಲ್ಯನಿಷ್ಠ ಹರಿಶ್ಚಂದ್ರನಿಗೆಅಂಟಿರುವ ದೋಷಗಳನ್ನು, ಅವಗುಣಗಳನ್ನು ನಿವಾರಿಸಿ 'ಸತ್ಯಶುದ್ಧ' ನನ್ನಾಗಿಸುವ ಶೋಧನ ಪ್ರಕ್ರಿಯೆಯೇ ಆಗಿದೆ.೧

ಅಂದರೆ, ಶರಣರಆಂದೋಲನದಲ್ಲಿ ಪ್ರತಿಪಾದಿತವಾದ ಭಕ್ತ-ಸಾಧಕರ ಶುದ್ಧಜೀವನದ ಲಕ್ಷಣ ಗಳೆಲ್ಲವೂ ಅಥವಾ ಕೆಲವಾದರೂಹರಿಶ್ಚಂದ್ರನಲ್ಲಿಕಾಣಿಸುವ ಪ್ರಯತ್ನವನ್ನುರಾಘವಾಂಕ ಮಾಡಿದ್ದಾನೆ. ಜಿ.ಎಸ್.ಶಿವರುದ್ರಪ್ಪನವರು "ಹರಿಶ್ಚಂದ್ರನ ಪಾತ್ರದಲ್ಲಿಕಂಡುಬರುವ ಸತ್ಯನಿಷ್ಠೆ, ಶಿವಭಕ್ತಿ, ಮೃತ್ಯುಂಜಯ ಮನೋಧರ್ಮ- ಎಲ್ಲವೂ ಬಸವಣ್ಣನಂತಹ ಶರಣರ ಮನೋಧರ್ಮದಿಂದಲೂತಕ್ಕಮಟ್ಟಿಗೆ ಪ್ರೇರಿತವಾಗಿರಬಹುದೆನಲುಅವಕಾಶವಿಲ್ಲದಿಲ್ಲ"೨ಎಂದು ಅನುಮಾನಿಸಿದ್ದಾರೆ. ಆದರೆ ನಿಸ್ಸಂಶಯವಾಗಿಇದು ಸ್ಪಷ್ಟವಿದೆ. ಸತ್ಯನಿಷ್ಠೆ ನುಡಿದಂತೆ-ನಡೆ, ತ್ರಿಕರಣಶುದ್ಧಿ, ತ್ರಿವಿಧಭಕ್ತಿ, ಸಕಲಜೀವಾಳಗಳಲ್ಲಿ ಲೇಸನ್ನೇಕಾಣುವ ಭಾವ, ಮೇಲುಕೀಳೆಂಬ ತರತಮ ನಿರಾಕರಣೆ, ಕಾಯಕತತ್ವಅನುಸರಣೆ, ಇಂದ್ರಿಯ ನಿಯಂತ್ರಣ, ಷಡ್ವರ್ಗಗಳ ಹತೋಟಿ, ಏಕನಿಷ್ಠೆ- ಈ ಮುಂತಾದುವೆಲ್ಲವನ್ನೂ ಸಾಧಕ ಹರಿಶ್ಚಂದ್ರನ ವ್ಯಕ್ತಿತ್ವಕ್ಕೆಕೂಡಿಸುತ್ತಾ, ಸಮಗ್ರತೆಯನ್ನು ಸಾಧಿಸಿ ಅಂತಿಮವಾಗಿ"ಹರನೆಂಬುದೇ ಸತ್ಯ ಸತ್ಯವೆಂಬುದೆ ಹರನು"ಎಂಬುದನ್ನು ಸಾಕ್ಷಾತ್ಕರಿಸುವ ಪ್ರಯತ್ನ ಈ ಕಾವ್ಯದಲ್ಲಿಕಂಡುಬರುತ್ತದೆ. ಈ ವಿಚಾರಗಳಲ್ಲಿ ಒಂದೊಂದನ್ನೇ ಪ್ರತ್ಯೇಕವಾಗಿ ಹೆಕ್ಕಿಕೊಂಡು ಹರಿಹರ ಕವಿ 'ನೇಮ'ವಾಗಿ ಪರಿವರ್ತಿಸಿ, ಆ ಒಂದೊಂದನ್ನು ಶ್ರದ್ಧೆ-ನಿಷ್ಠೆಗಳಿಂದ ಅನುಸರಿಸುವ ಭಕ್ತರಚಿತ್ರ ಬಿಡಿಸುವ ವಿಧಾನವನ್ನು ಅನುಸರಿಸಿದ್ದಾನೆ.

ರಾಘವಾಂಕತನ್ನ ಕಾವ್ಯಗಳ ಸೃಷ್ಟಿಗೆ ಭಿನ್ನವಮೂಲಗಳಿಂದ ವಸ್ತುವನ್ನೂಕಥಾಹಂದರವನ್ನೂಆಯ್ಕೆ ಮಾಡಿಕೊಂಡಿದ್ದಾನೆ. ವೀರೇಶಚರಿತೆ, ಹರಿಶ್ಚಂದ್ರ ಕಾವ್ಯಗಳಿಗೆ ಪುರಾಣಗಳಿಂದಲೂ ಸೋಮನಾಥಚಾರಿತ್ರ, ಸಿದ್ಧರಾಮ ಪುರಾಣಗಳಿಗೆ ಇತಿಹಾಸದಿಂದಲೂ ಸ್ವೀಕರಿಸಿದ್ದಾನೆ. ಹರಿಹರತನ್ನ ಬೃಹತ್ ಪ್ರಮಾಣದಕಾವ್ಯಕೃಷಿಯಲ್ಲಿಅಲ್ಲಲ್ಲಿ ಸಾಂದರ್ಭಿಕವಾಗಿ ಅಳವಡಿಸಿರುವ ಸ್ಥಾಪಿತಅಥವಾ ಸ್ಥಿರಗೊಂಡ ಸಾಮಾಜಿಕ-ಧಾರ್ಮಿಕ ವಿಧಾನಗಳ ಅರ್ಥಹೀನತೆಯಚಿತ್ರಣರಾಘವಾಂಕನ ಮೇಲೆ ಗಾಢ ಪರಿಣಾಮ ಬೀರಿದೆ. ರಾಘವಾಂಕ ವೀರೇಶಚರಿತೆ,

ಸೋಮನಾಥಚಾರಿತ್ರಹಾಗೂ ಹರಿಶ್ಚಂದ್ರ ಕಾವ್ಯಗಳಲ್ಲಿ ತನ್ನ ನಿಷ್ಠಮಾರ್ಗಕ್ಕೆ ವಿರುದ್ಧವಾದ ಭಿನ್ನಧಾರ್ಮಿಕ ನೆಲೆಗಳ 'ಹುಸಿಕತೆ'ಯನ್ನು ಬಯಲು ಮಾಡಿದರೆ, ಸಿದ್ಧರಾಮ ಪುರಾಣದಲ್ಲಿತನ್ನ ನಂಬಿಕೆಯ ಮಾರ್ಗದ ನೆಲೆಯನ್ನು ಸ್ಥಾಪಿಸುವ, ಸ್ಥಿರಗೊಳಿಸುವ ಪ್ರಯತ್ನ ಮಾಡಿದ್ದಾನೆ.ಈ ಉದ್ದೇಶವನ್ನು ಸಾರ್ಥಕಗೊಳಿಸಲು ವೀರೇಶಚರಿತದಲ್ಲಿ ಪರಸಮಯಅರ್ಥಾತ್‌ಯಜ್ಞಯಾಗಾದಿ ವೈದಿಕ ಸಿದ್ಧಿಯ ಮಾರ್ಗ; ಸೋಮನಾಥಚಾರಿತ್ರದಲ್ಲಿ ಪರಸಮಯಸಿದ್ಧಸ್ಥಿತಿ(ಇಲ್ಲಿಅರ್ಥಾತ್‌ಜೈನ); ಹರಿಶ್ಚಂದ್ರಕಾವ್ಯದಲ್ಲಿ ಸಿದ್ಧ(ವೈದಿಕ ಮಾರ್ಗದ ಮುನಿ)–ಇವುಗಳಿಗೆ ಸರಳ ಆಚರಣೆ ಯಿಂದಕೂಡಿದಅರ್ಥಪೂರ್ಣ ಮೌಲ್ಯನಿಷ್ಠೆಯನ್ನುಎದುರಾಗಿಸುತ್ತಾನೆ. ಈಎರಡು ಭಿನ್ನ'ಪಾತ್ರ'ಗಳು(Channels) ವ್ಯಕ್ತರೂಪದಲ್ಲಿಕಾವ್ಯದುದ್ದಕ್ಕೂ ಹರಿಯುವುದನ್ನು ಸಾಮಾನ್ಯವಾಗಿಗುರುತಿಸಬಹುದಾಗಿದೆ. ಈ ಸಮಬಲ 'ಪಾತ್ರ'ಗಳನ್ನು ಪ್ರತಿನಿಧಿಸುವಂಥ ಸಿದ್ಧ ವ್ಯಕ್ತಿಗಳನ್ನು, ಸ್ಥಿತಿಗಳನ್ನು ಸಾಧಕ–ಸಿದ್ಧ ಮುಖಾಮುಖಿ ಮಾದರಿಯಲ್ಲಿ ಅಳವಡಿಸುತ್ತಾನೆ. ಹಾಗೆ ಮಾಡುವಲ್ಲಿತನ್ನಮಾರ್ಗವನ್ನು ಸಮರ್ಥವಾಗಿ ಪ್ರತಿನಿಧಿಸುವಂಥ ಸಾಧಕ ಪಾತ್ರ(character)ದ ಸತ್ವ, ಛಲ, ಮೌಲ್ಯನಿಷ್ಠೆಯನ್ನುಒಂದುಕಡೆಗೂಅನ್ಯಧಾರ್ಮಿಕ ಮಾರ್ಗ, ಸ್ಥಿತಿಗಳನ್ನು ಪ್ರತಿನಿಧಿಸುವ ಸಿದ್ಧಪಾತ್ರದ ಹುಸಿ ಹಾಗೂ ಅವಗುಣಗಳನ್ನು ಮತ್ತೊಂದುಕಡೆಗೂ ನಿಲ್ಲಿಸಿ, ತೌಲನಿಕ ರಚನಾವಿಧಾನದಲ್ಲಿಕಾವ್ಯವಸ್ತು ಉದ್ಭವಗೊಳ್ಳುವಂತೆ ಆಯೋಜಿಸಿದ್ದಾನೆ.

ರಾಘವಾಂಕತನ್ನೆಲ್ಲ ಕಾವ್ಯಗಳ ವಸ್ತು ರೂಪಿತವಾಗಲು, ಉದ್ದೇಶ ಸಾಕ್ಷಾತ್ಕಾರಗೊಳ್ಳಲು ಸವಾಲಿನ ಸೃಷ್ಟಿ, ಸಮರ್ಥನೆ, ಸಾಫಲ್ಯಗಳ ಮೂರು ಸ್ತರಗಳನ್ನು ಒಳಗು ಮಾಡುತ್ತಾನೆ. ಈ ಪ್ರಕ್ರಿಯೆ –ಪ್ರತಿಪಕ್ಷ ಪಾತ್ರದ ನೆಲೆಯಿಂದಅಂಕುರವಾಗುವ ಸವಾಲು – ಪರಸ್ಪರ ಪರಿಣಾಮಕಾರಕವಾಗಿರುವುದು ಸ್ಪಷ್ಟವಿದೆ. ನಾಯಕ ಪಾತ್ರತನ್ನ ನಿಷ್ಠ ಮಾರ್ಗದಲ್ಲಿಎದುರಾಗುವ ಸವಾಲನ್ನು, ಅದರಿಂದಉಂಟಾಗುವ'ಕಷ್ಟಪರಂಪರೆ'ಯನ್ನು ವಿಚಲಿತನಾಗದೆ ಸ್ವೀಕರಿಸುವ, ಸಹಿಸುವ, ಸಮರ್ಥಿಸುವ, ಘನಗೊಳ್ಳುವ ತನ್ಮೂಲಕವೇ ಸಾಫಲ್ಯವನ್ನು ಪಡೆಯುವ ವಿಧಾನ ಹಾಗೂ ಅದೇ ಕಾಲಕ್ಕೆ ಪ್ರತಿಪಕ್ಷಗಳು ಅಸಹನೆ, ಅಸಾಮರ್ಥ್ಯ, ದುರ್ಮಂತ್ರ ತಂತ್ರ–ಕುತಂತ್ರ ನಿಷ್ಕರುಣೆ, ಕುಟಿಲತೆ ಮುಂತಾದವುಗಳಿಂದ ವೈಫಲ್ಯಕ್ಕೆತುತ್ತಾಗುವಕ್ರಿಯೆ–ಪ್ರಕ್ರಿಯೆಗಳು ರಾಘವಾಂಕನ ಕಾವ್ಯಗಳ ವಸ್ತುವಿನ ಪ್ರಕಾಶನಕ್ಕೆದಾರಿ ಮಾಡಿಕೊಡುತ್ತವೆ.

ವೀರೇಶಚರಿತೆ ಮತ್ತು ಸೋಮನಾಥಚಾರಿತ್ರ ಗಳು ಅಂಥ ಮಹತ್ವದ

ಕಾವ್ಯಗಳಲ್ಲವಾದರೂ ವಸ್ತುವಿನ ಆಯ್ಕೆಯಲ್ಲಿ ಕವಿ ಕಂಡುಕೊಂಡ ವಿಧಾನದ ಅನಾವರಣಕ್ಕೆ ಮತ್ತು ಮಹತ್ವದ ಕಾವ್ಯವಾದ ಹರಿಶ್ಚಂದ್ರಕಾವ್ಯದ ವಸ್ತುವಿನ ಗ್ರಹಿಕೆಯ ಮಾನದಂಡಕ್ಕಾಗಿ ಇಲ್ಲಿ ಪರಿಶೀಲಿಸಬಹುದಷ್ಟೇ. ವೀರೇಶಚರಿತೆಯಲ್ಲಿ ಶಿವನಿಂದೆ ಮತ್ತು ಶಿವನ ಸರ್ವೇಶತ್ವದ ಪದಚ್ಯುತಿಗಾಗಿ ನಡೆಸಲು ಹವಣಿಸುವ ಹರವಿಹಿತ ಯಾಗ ಇವುಗಳು ಕೇವಲ ಶಿವನ ಅಂಶಿಕಸ್ವರೂಪದ ಸೃಷ್ಟಿಯಾದ ವೀರೇಶನಿಂದಾಗಿಂಯೇಧ್ವಂಸಗೊಂಡು ವಿಫಲವಾಗುವುದನ್ನು, ದಕ್ಷನು'ಕುರಿಮೊಗ'ದವನಾಗಿ ಶಿವನ ಬಳಗ ಸೇರವುದನ್ನು ಕವಿ ಚಿತ್ರಿಸಿದ್ದಾನೆ.

ಸೋಮನಾಥಚಾರಿತ್ರದಲ್ಲಿಇಡೀ ಸಮಾಜವನ್ನೇ ಆವರಿಸಿಕೊಂಡಿರುವ ಪರಸಮಯ ವ್ಯವಸ್ಥೆಯನ್ನು ಸ್ಥಿತ್ಯಂತರಗೊಳಿಸುವ ಮೃಡಭಕ್ತನ ಸಾಮರ್ಥ್ಯ, ಜಯಾಪಜಯಗಳು ವಸ್ತುವಾಗಿದೆ. ಹರಿಶ್ಚಂದ್ರಕಾವ್ಯದಲ್ಲಿ ವೈದಿಕ ಮಾರ್ಗದ'ಸಿದ್ಧ'ನಿಗೂ ಸಮರ್ಥ, ಭಕ್ತ–ಸಾಧಕ, ಮೌಲ್ಯನಿಷ್ಠನೂ, ಆದ ಹರಿಶ್ಚಂದ್ರ–ಇವರ ನಡುವಿನ ಘರ್ಷಣೆ, ಪರೀಕ್ಷೆ, ಮೌಲ್ಯಾಪಮೌಲ್ಯಗಳು ವಸ್ತುವಾಗಿವೆ. ಇನ್ನು ಸಿದ್ಧರಾಮ ಪುರಾಣದಲ್ಲಿ ಸ್ವಮತ–ಪರಮತವೆನ್ನದೆ ಸಕಲ ಜೀವಾಳಿಗಳಲ್ಲಿ ಲೇಸನೇ ಬಯಸುವ ಸಮಷ್ಟಿಹಿತದ ಶಿವಸಿದ್ಧ ಯೋಗಿಯೊಬ್ಬನ ಸ್ವಸಮಯ ಮಾದರಿಯನ್ನು ಸ್ಥಾಪಿಸುವ ಮತ್ತುಅವನೊಡನೆ ಸ್ಪರ್ಧೆಗಿಳಿಯುವ ಅನ್ಯ ಮತದ ವಿಕಾರಿಸಿದ್ಧರುಮುಂತಾದ ಭವಿಗಳು ಪಡೆಯುವಧನ್ಯತಾಭಾವ– ಇವು ವಸ್ತುವಿನ ಭಾಗವಾಗಿವೆ.

ರಾಘವಾಂಕತನ್ನ ಕಾವ್ಯಗಳ ವಸ್ತುವಿನ ಆಯ್ಕೆಯಲ್ಲಿ ನಿರ್ದಿಷ್ಟರಚನಾ ವಿನ್ಯಾಸವನ್ನು ಅನುಸರಿಸಿರುವುದು ಸ್ಪಷ್ಟವಿದೆ. ತಾನು ನಂಬುವ, ಪ್ರತಿಪಾದಿಸುವ ಮಾರ್ಗವನ್ನು ಪ್ರತಿನಿಧಿಸುವ, ತನ್ನ ಮುಖವಾಣಿಯಾದಪಾತ್ರಕ್ಕೆಅನ್ಯ ಮಾರ್ಗಗಳನ್ನು, ಪಾತ್ರಗಳನ್ನು ಎದುರಾಗಿಸುತ್ತಾನೆ. ಹಾಗೆ ಮಾಡುವಲ್ಲಿ ಅವನು ಸೃಷ್ಟಿಸುವುದುಎರಡೇ ಪಾತ್ರಗಳನ್ನು ಮತ್ತು ಅವು ಅನೇಕ ಪಾತ್ರಗಳಿಂದ ಕೂಡಿದ್ದು (characters in the unit) ಅಂತಿಮವಾಗಿಘಟಕ ಪಾತ್ರ(unit of characters)ವಾಗಿ ರೂಪುಗೊಳ್ಳುತ್ತವೆ. ಇದುಅತ್ಯಂತ ಸ್ಪಷ್ಟವಾಗುವುದುಕವಿಯ ಸಮರ್ಥಕಾವ್ಯವಾದ ಹರಿಶ್ಚಂದ್ರಕಾವ್ಯದಲ್ಲಿ ಈ ವಾದವನ್ನು ಪುಷ್ಟೀಕರಿಸಲು ವಿಶ್ವಾಮಿತ್ರನ ಪಾತ್ರವನ್ನು ನೋಡಬಹುದಾದರೆ– ಕವಿಯೇ ಹೇಳುವಂತೆ ಅವನು 'ಎರಡನೆಯ ಮೃಡ'. ಏನನ್ನಾದರೂ ಹೊಸೆದು ಹುಟ್ಟಿಸಬಲ್ಲ ಸಿದ್ಧಸತ್ವವುಳ್ಳವನು. ಅವನ ಮಾಯಾಸೃಷ್ಟಿಯಿಂದಾಗಿ ಜನಿಸುವ ಅಥವಾ ಅವನ ಆಣತಿಯಂತೆಯೇ ನಡೆಯುವ ಪಾತ್ರಗಳೆಲ್ಲವೂ ತಮ್ಮ ಉದ್ದಿಷ್ಟ ಕಾರ್ಯಮುಕ್ತಾಯವಾದಕ್ಷಣದಲ್ಲಿಅವನಲ್ಲಿಯೇ ಲೀನವಾಗಿ ಅವನೊಂದು ಬೃಹತ್ ಪ್ರತಿಮೆಯಾಗಿ, ಅವನ ಮತ್ತು ಅವನು ಪ್ರತಿನಿಧಿಸುವ ಮಾರ್ಗದಎಲ್ಲಾ ಅವಗುಣಗಳ

ಭಾವ-ಲಕ್ಷಣಗಳೂ ತೆರೆದುಕೊಂಡು ವಿಫಲವಾಗುತ್ತವೆ. ಹಾಗೆಯೇ ಅವನಿಗೆ ವಿರುದ್ಧವಾಗಿ ನಿಲ್ಲುವ ಪಾತ್ರವೂಒಂದುಘಟಕವಾಗಿಅದರಗುಣ-ವಿಶೇಷಗಳೂ ಅನಾವರಣಗೊಂಡು ಸಫಲವಾಗುತ್ತವೆ. ಈ ಎಲ್ಲವನ್ನು ಸಾಧಿಸಲು ಕವಿ ಕಾವ್ಯದ ಪೀಠಿಕಾಭಾಗದ'ಕಥಾ ಬೀಜ'ದ ಬಿತ್ತನೆಯಲ್ಲಿ ಸೂಚನೆ ನೀಡಿದ್ದಾನೆ. (ಸೋಮನಾಥಚಾರಿತ್ರದಲ್ಲಿ ಅದೇ ರೀತಿಯಲ್ಲಿ 'ಕಥಾಗರ್ಭ'ಎಂದು ಸೂಚನೆ ಇತ್ತಿದ್ದಾನೆ) ಅಂದರೆ ಬೀಜವು ಹೆಮ್ಮರವಾಗುವ ರೂಪಾಂತರ ಕ್ರಿಯೆಯ ಮುನ್ಸೂಚನೆ ಇಲ್ಲಿದೆ. ಕುವೆಂಪು ಅವರು ಹರಿಶ್ಚಂದ್ರಕಾವ್ಯ ವನ್ನುಕುರಿತು, "ಹರಿಶ್ಚಂದ್ರನುಜಾತಿ, ಮತ, ಕುಲ, ದೇಶ, ಐಶ್ವರ್ಯ, ಅಧಿಕಾರ, ರೂಪಇಷ್ಟಮಿತ್ರ ಕಳತ್ರಾದಿ ಮದ ಮಮಕಾರಳಿಂದೆಲ್ಲಾ ಒಂದರ ಮೇಲೊಂದು ಸಿಪ್ಪೆಸುಲಿದಂತೆ ಮಾಯೆಯ ಆವರಣಗಳೆಲ್ಲ ಕಳಚಿಬಿದ್ದು, ಸಂಪೂರ್ಣ ನಿರಾವರಣ ಸ್ಥಿತಿಗೆ ಏರಿದ ಶುದ್ಧಾತ್ಮಕ್ಕೆ ಈಶ್ವರ ಸಾಕ್ಷಾತ್ಕಾರವಾಗುತ್ತದೆ"[೩] ಎಂಬ ತಾತ್ವಿಕ ವ್ಯಾಖ್ಯಾನವನ್ನು ಇಲ್ಲಿ ಗಮನಿಸಬೇಕು. ಈ ಹಿನ್ನೆಲೆಯಲ್ಲಿ ರಾಘವಾಂಕನ ಅಧ್ಯಯನವನ್ನು ಮರು-ಶೋಧನೆಗೆ ಒಳಪಡಿಸಬೇಕಾದ ಅವಶ್ಯಕತೆಇದೆ.

ಆಕರ ಗ್ರಂಥಗಳು

೧. ಶಿವಮೂರ್ತಿಶಾಸ್ತ್ರೀ ಬಿ. (ಸಂ),'ವೀರೇಶಚರಿತೆ', ಹುಲುಕುಂಟೆಮಠ, ತುಮಕೂರು(೧೯೪೭)

೨. ಹಿರೇಮಠ ಆರ್.ಸಿ.,ಸುಂಕಾಪುರಎಂ.ಎಸ್.(ಸಂ),ಸೋಮನಾಥಚಾರಿತ್ರ, ಕ.ವಿ.ವಿ.ಧಾರವಾಡ(೧೯೬೭)

೩. ನರಸಿಂಹಾಚಾರ್ ಡಿ.ಎಲ್., ವೆಂಕಣ್ಣಯ್ಯಟಿ.ಎಸ್.(ಸಂ) ಸಿದ್ಧರಾಮ ಚಾರಿತ್ರ, ಮೈಸೂರು (೧೯೭೫)

೪. ಬಸವಾರಾಧ್ಯಎನ್, ಪಂಡಿತ ಬಸಪ್ಪಎಸ್.(ಸಂ) ಹರಿಶ್ಚಂದ್ರಕಾವ್ಯ, ಕಾವ್ಯಪ್ರಕಾಶ ಮಂದಿರ, ಮೈಸೂರು (೧೯೭೫).

ಅಡಿಟಿಪ್ಪಣಿಗಳು

೧. (i)ಹ.ಕಾ.ದಚರ್ಚೆಯ ಸಂದರ್ಭದಲ್ಲಿ ಡಾ.ಆರ್.ಸಿ.ಹಿರೇಮಠ ಅವರು ವ್ಯಕ್ತಪಡಿಸಿರುವ ಅಭಿಪ್ರಾಯ ರಾಘವಾಂಕನ ಕೃತಿಗಳಿಗೆಲ್ಲಾ ಅನ್ವಯವಾಗುವಂಥದಾಗಿದೆ: "ಘರ್ಷಣೆಯೇ ಈ ಕಾವ್ಯದ ಜೀವಾಳವಾಗಿದೆ"- ಮಹಾಕವಿ ರಾಘವಾಂಕ ಪು.೨೦೩(೧೯೬೬). ಆದರೆ ಅವರು ಘರ್ಷಣೆಯ ಸ್ವರೂಪವನ್ನು ಚರ್ಚಿಸಿಲ್ಲ.

(ii) "ಹರಿಶ್ಚಂದ್ರನ ಸತ್ಯಪರೀಕ್ಷೆ ಕಾವ್ಯದ ಕೇಂದ್ರ ಕ್ರಿಯೆ. ಆ ಪರೀಕ್ಷೆಗೆ ಸಂಬಂಧಿಸಿದಂತೆಯೇ ಘಟನೆಗಳು ಹುಟ್ಟಿಕೊಳ್ಳುತ್ತವೆ; ವಿವರಗಳು ತೆರೆದುಕೊಳ್ಳುತ್ತವೆ"-ಜಿ.ಎಚ್.ನಾಯಕ

ಕ.ಅ.ಸಂ.ಕನ್ನಡ ಸಾಹಿತ್ಯಚರಿತ್ರೆ, ಪುಟ೧೫೦೦(೧೯೭೭)

(iii)ರಾಮೇಗೌಡ ಅವರು, "ಸತ್ಯವನ್ನು ಸಾಧಿಸುವುದಕ್ಕಾಗಿ ಹರಿಶ್ಚಂದ್ರ ಪಟ್ಟಪಾಡಿನ ಕಥೆಯೇ ಇದರ ವಸ್ತು"ಎಂದಿದ್ದಾರೆ-ರಾಘವಾಂಕ - ಪುಟ ೩೨ (೨೦೦೮)

೨. ಜಿ.ಎಸ್. ಶಿವರುದ್ರಪ್ಪ -ಪರಿಶೀಲನ ಪು.(೧೯೭೨)

೩. ಕುವೆಂಪು -ರಸೋ ವೈ ಸಃ ಪುಟ-೫೧ (೧೯೮೯)

ದಕ್ಷಿಣ ಭಾರತದ ಜಾತಿ ಮತ್ತು ಬುಡಕಟ್ಟುಗಳು: ಕನ್ನಡ ಸಂಶೋಧನೆಗೆ ಮಹತ್ವದ ಸೇರ್ಪಡೆ

ಡಾ.ರವಿಕುಮಾರ್ ಬಾಗಿ

ಭಾರತ ಬಹುಜಾತಿ, ಜನಾಂಗ, ಭಾಷೆ, ಹಾಗೂ ಬಹುಸಂಸ್ಕೃತಿಗಳ ದೇಶವಾಗಿದೆ. ಇಲ್ಲಿರುವ ಪ್ರತಿಯೊಂದು ಜಾತಿಯೂ ತನ್ನದೇ ಆದ ವಿಶಿಷ್ಟ ಸಾಂಸ್ಕೃತಿಕತೆಯನ್ನು ಹೊಂದಿದೆ. ಹೀಗಾಗಿ ಯಾವುದೇ ಒಂದು ಸಂಸ್ಕೃತಿಯನ್ನು ಅಧ್ಯಯನ ಮಾಡಬೇಕಾದರೆ ಆ ಸಂಸ್ಕೃತಿಯನ್ನು ಪ್ರತಿನಿಧಿಸುವ ಜನಾಂಗವನ್ನು ಹಿಡಿಯಾಗಿ ಅಧ್ಯಯನ ಮಾಡಬೇಕಾಗುತ್ತದೆ. ಈ ರೀತಿಯ ಅಧ್ಯಯನ ಕೈಗೊಳ್ಳಬೇಕಾದರೆ ಆ ಜನಾಂಗದ ಚಾರಿತ್ರಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ವಿಕಾಸ ಕ್ರಮವನ್ನು ಗ್ರಹಿಸಬೇಕಾಗುತ್ತದೆ. ಈ ಮಾರ್ಗದಲ್ಲಿ ಭಾರತೀಯ ಜನಾಂಗೀಯ ಅಧ್ಯಯನ ನಡೆದಿರುವುದು ವಿರಳವೆಂದೇ ಹೇಳಬಹುದು.

ಇಪ್ಪತ್ತನೇ ಶತಮಾನದ ಮಧ್ಯಭಾಗದಲ್ಲಿ ಜಾನಪದ ಅಧ್ಯಯನ ಎನ್ನುವುದು ಪ್ರಧಾನವಾಗಿ ಮುನ್ನೆಲೆಗೆ ಬಂದು ಆ ಮೂಲಕ ಕ್ಷೇತ್ರಕಾರ್ಯ ನಡೆಸಿ, ಮಾಹಿತಿ ಸಂಗ್ರಹಣೆ ಮಾಡಿ ಅದನ್ನು ಯತಾವತ್ ನಿರೂಪಿಸುವ ಕ್ರಮವೊಂದು ರೂಪುಗೊಂಡಿತು. ನಂತರದ ದಿನಗಳಲ್ಲಿ ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿದ ಮಾಹಿತಿಯನ್ನು ವಿಶ್ಲೇಷಿಸುವುದರ ಜೊತೆಗೆ ಇವೆಲ್ಲವೂ ಸಂಸ್ಕೃತಿಯ ಭಾಗವೆಂದು ಪರಿಗಣಿಸಿದ ಪರಿಣಾಮ ಸಂಸ್ಕೃತಿ ಅಧ್ಯಯನಗಳು ಮುನ್ನೆಲೆಗೆ ಬಂದವು. ಇದರಿಂದಾಗಿ ಕಳೆದ ಮೂವತ್ತು ವರ್ಷಗಳಿಂದೀಚೆಗೆ ಕನ್ನಡದಲ್ಲಿ ಸಂಸ್ಕೃತಿ ಅಧ್ಯಯನ ಎನ್ನವುದು ಪ್ರಧಾನವಾಗಿ ಕಾಣಿಸಿಕೊಳ್ಳಲಾರಂಭಿಸಿತು. 'ಜಾನಪದೀಯ ಅಧ್ಯಯನ' ಎಂದು ನಡೆಸುತ್ತಿದ್ದ ಸಂಶೋಧನೆಗಳು ನಂತರದ ದಿನಗಳಲ್ಲಿ 'ಸಾಂಸ್ಕೃತಿಕ ಅಧ್ಯಯನ'ಗಳಾಗಿ ಮಾರ್ಪಾಡಾದವು. ಆ ಮೂಲಕ ಒಂದು ಪ್ರದೇಶ, ಒಂದು ಜನಾಂಗ, ಅವರ ಆಚರಣೆ, ನಂಬಿಕೆ, ಅವರಲ್ಲಿನ ಮೌಖಿಕ ಸಾಹಿತ್ಯ ಇತ್ಯಾದಿಗಳನ್ನು ಸಂಸ್ಕೃತಿಯ ಜೊತೆಗಿಟ್ಟು ಅಧ್ಯಯನ ಮಾಡುವ ವಿಧಾನವೊಂದು ಆರಂಭವಾಯಿತು. ಮುಂದುವರಿದು 'ಸಂಸ್ಕೃತಿ ಅಧ್ಯಯನ' ಎನ್ನುವುದು ಅನ್ಯಜ್ಞಾನ ಶಿಸ್ತುಗಳ ಕಡೆಗೂ ಹೊರಳಿತು. ಸಮಾಜಶಾಸ್ತ್ರೀಯ, ಮಾನವಶಾಸ್ತ್ರೀಯ ಹಾಗೂ ಕುಲಶಾಸ್ತ್ರೀಯ ಅಧ್ಯಯನಗಳಂತಹ ಅಂತರ್‌ಶಿಸ್ತೀಯ, ತೌಲನಿಕ ಅಧ್ಯಯನಗಳು

ಪ್ರಮುಖವಾಗತೊಡಗಿದವು. ಆದರೆ ಅವುಗಳ ಅಧ್ಯಯನಕ್ಕೆ, ಸಂಶೋಧನೆಗೆ ಬೇಕಾದಂತಹ ಮಹತ್ವದ ಮಾಹಿತಿಗಳಾಗಲಿ, ವಿವರಗಳಾಗಲಿ ದೊರಕಿದ್ದು ಮಾತ್ರ ಕಡಿಮೆ. ಈ ನಿಟ್ಟಿನನಲ್ಲಿ ಕನ್ನಡ ಸಂಶೋಧನೆಗೆ ಮಹತ್ವದ ಸಂಪನ್ಮೂಲದ ಕೊರತೆಯಾಗಿದ್ದದ್ದು ಎಡ್ಗರ್ ಥರ್ಸ್ಟನ್ ಮತ್ತು ಕೆ. ರಂಗಾಚಾರಿ ಅವರ 'ಕ್ಯಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾ'ದ ಏಳು ಸಂಪುಟಗಳು. ಇದಕ್ಕೂ ಮೊದಲು ಈ ಏಳು ಸಂಪುಟಗಳು ೧೯೦೯ರಲ್ಲಿ ಇಂಗ್ಲೀಷಿನಲ್ಲಿ ಮುದ್ರಣಗೊಂಡಿದ್ದರೂ ಕನ್ನಡದಲ್ಲಿ ಲಭ್ಯವಿಲ್ಲದಿದ್ದ ಕಾರಣ ಅನೇಕರಿಗೆ ಇವುಗಳ ಉಪಯುಕ್ತತೆ ದೊರಕಿದ್ದು ಕಡಿಮೆ. ಇದೀಗ ನೂರ ಹನ್ನೆರಡು ವರ್ಷಗಳ ನಂತರ ಕನ್ನಡದಲ್ಲಿ ಅನುವಾದಗೊಂಡು ಮುದ್ರಣಗೊಂಡಿವೆ ಎಂದರೆ ಇದುವರೆಗೂ ಕನ್ನಡ ಸಂಶೋಧನಾ ಜಗತ್ತು ಇವುಗಳಿಂದ ವಂಚಿತವಾಗಿದ್ದಂತೂ ನಿಜ.

೧೯೦೧ ರಲ್ಲಿ ಅಂದಿನ ಬ್ರಿಟಿಷ್ ಸರ್ಕಾರವು ಸಮಸ್ತ ಭಾರತದ ವ್ಯವಸ್ಥಿತವಾದ ಮತ್ತು ವಿವರವಾದ ಮಾನವಶಾಸ್ತ್ರ ಸಮೀಕ್ಷೆಗೆ ಮುಂದಾಯಿತು. ಅದರ ಫಲವೇ ಈ ಏಳು ಸಂಪುಟಗಳು. ಬ್ರಿಟೀಷ್ ಸರ್ಕಾರವು ಪ್ರತಿಯೊಂದು ಸಂಸ್ಥಾನಕ್ಕೂ ಒಬ್ಬೊಬ್ಬರು ಮಾನವಶಾಸ್ತ್ರದ ಸೂಪರಿಂಡೆಂಟ್ ಅವರನ್ನು ನೇಮಿಸಿ ಅವರ ಕರ್ತವ್ಯದ ಜೊತೆಗೆ ಸ್ಥಳೀಯವಾದ ಒಂದು ಬೃಹತ್ ವಸ್ತು ಸಂಗ್ರಹಾಲಯ ಹಾಗೂ ಅಲ್ಲಿನ ಜನರ ಸಮಸ್ತ ಜೀವನಕ್ರಮವನ್ನೂ ಸಮೀಕ್ಷೆ ಮಾಡಿ ದಾಖಲಿಸುವ ಕೆಲಸವನ್ನು ವಹಿಸಿತು. ಹೀಗಾಗಿ ಎಡ್ಗರ್ ಥರ್ಸ್ಟನ್ ಮದ್ರಾಸ್ ಪ್ರಾಂತ್ಯಕ್ಕೆ ನೇಮಕಗೊಂಡದ್ದರಿಂದ ಇಂತಹ ಮಹತ್ವದ ಕಾರ್ಯ ಸಾಧ್ಯವಾಯಿತು. ಮದ್ರಾಸ್ ಪ್ರಾಂತ್ಯ ಅಂದಿಗೆ ದಕ್ಷಿಣ ಭಾರತದ ಟ್ರಾವಂಕೂರ್, ಮೈಸೂರು, ಕೂರ್ಗ್, ಬಂಗನ್ ಪಲ್ಲೆ, ಸಂಡೂರ್, ಕೊಚ್ಚಿನ್, ಪುದುಕೊಟ್ಟೈ ಹಾಗೂ ಒರಿಯಾ ಪ್ರದೇಶಗಳನ್ನು ಒಳಗೊಂಡಿತ್ತು. ಈ ಪ್ರಾಂತ್ಯದ ಸುಮಾರು ಮುನ್ನೂರಕ್ಕೂ ಹೆಚ್ಚು ಜಾತಿ ಹಾಗೂ ಬುಡಕಟ್ಟುಗಳನ್ನು ಕುರಿತ ಅಧ್ಯಯನವನ್ನು ಈ ಸಂಪುಟಗಳು ಒಳಗೊಂಡಿವೆ. ಮುಖ್ಯವಾಗಿ ಈ ಪ್ರದೇಶಗಳಲ್ಲಿನ ಜಾತಿಗಳು, ಅವುಗಳ ಉಪಜಾತಿಗಳು, ಕುಲಗಳು, ಬೆಡಗುಗಳು, ಗೋತ್ರಗಳು, ಕಸುಬುಗಳು, ಪಂಗಡ, ಪಣಕಟ್ಟು, ಅವರ ಸಂಪ್ರದಾಯಗಳು, ಆಚರಣೆ, ನಂಬಿಕೆ ಹಾಗೂ ಅವರ ಶಾರೀರಿಕ ಗುಣಲಕ್ಷಣಗಳನ್ನೂ ಒಳಗೊಂಡಂತೆ ಸಣ್ಣ ಸಣ್ಣ ವಿವರಗಳನ್ನೂ ಅವುಗಳ ಆಳಕ್ಕಿಳಿದು ಶೋಧಿಸಲಾಗಿದೆ.

ಈ ಅಧ್ಯಯನವು ದಕ್ಷಿಣ ಭಾರತದ ಸುಮಾರು ಒಂದು ಲಕ್ಷದ ಐವತ್ತು ಸಾವಿರ ಚದರ ಮೈಲಿಗಳಷ್ಟು ಭೂ ಪ್ರದೇಶದಲ್ಲಿ ಹಬ್ಬಿದ್ದು, ನಾಲ್ಕು ಕೋಟಿಗೂ ಅಧಿಕ ಜನರನ್ನು ಪ್ರತಿನಿಧಿಸುತ್ತದೆ ಎಂದು ಹೇಳಲಾಗಿದೆ. ಮುಖ್ಯವಾಗಿ ಮೈಸೂರು

ಮತ್ತು ಮದ್ರಾಸ್ ಪ್ರಾಂತ್ಯದಲ್ಲಿ ವಾಸಿಸುವ ಬಹುತೇಕ ಎಲ್ಲ ಜಾತಿ, ಬುಡಕಟ್ಟುಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ದಾಖಲು ಮಾಡಲಾಗಿದೆ. ಹೀಗೆ ಕ್ಷೇತ್ರಕಾರ್ಯ ಮಾಡುವ ಸಂದರ್ಭದಲ್ಲಿ ಒಬ್ಬ ಸಂಶೋಧಕ ಎದುರಿಸಬಹುದಾದಂತಹ ಎಲ್ಲ ಸವಾಲು ಮತ್ತು ಸಮಸ್ಯೆಗಳನ್ನು ಥರ್ಸ್ಟನ್ ಕೂಡ ಎದುರಿಸಿದ್ದಾರೆ. ಸಂಶೋಧಕನಿಗೆ ಇದೊಂದು ಸಾಮಾನ್ಯ ಸಂಗತಿ. ಈಗಲೂ ಯಾವುದಾದರೂ ಬುಡುಕಟ್ಟು, ಅಲೆಮಾರಿ, ಆದಿವಾಸಿಗಳ ಬಳಿಗೆ ಕ್ಷೇತ್ರಕಾರ್ಯಕ್ಕೆಂದು ಹೋದರೆ ಅವರು ಸಂಶೋಧಕರನ್ನು ಅಷ್ಟು ಸುಲಭವಾಗಿ ತಮ್ಮೊಳಗೆ ಬಿಟ್ಟುಕೊಳ್ಳುವುದಿಲ್ಲ. ಹಾಗೆಯೇ ತಮ್ಮಲ್ಲಿರುವ ವಿಷಯಗಳನ್ನು ಹಂಚಿಕೊಳ್ಳುವುದಿಲ್ಲ. ಅವರೊಂದಿಗೆ ಒಂದು ರೀತಿಯ ಆತ್ಮೀಯತೆಯನ್ನು ಬೆಳೆಸಿಕೊಂಡು ಅವರಲ್ಲಿ ಒಂದಾಗಿ ನಂಬಿಕೆಯನ್ನು ಹುಟ್ಟಿಸಿದ ನಂತರವೇ ಅವರಿಂದ ಏನಾದರೂ ಮಾಹಿತಿ ಪಡೆಯಲು ಸಾಧ್ಯ. ಇಲ್ಲದಿದ್ದರೆ ಹೀಗೆ ಹೊರಗಿನಿಂದ ಬಂದವರನ್ನು ಅನ್ಯರನ್ನಾಗಿಸಿ ಗುಮಾನಿಯಿಂದಲೇ ನೋಡುತ್ತಾರೆ. ಈ ರೀತಿಯ ಅನುಭವ ಥರ್ಸ್ಟನ್ ಅವರಿಗೂ ತಮ್ಮ ಈ ಸಂಶೋಧನಾ ಕಾರ್ಯದ ಉದ್ದಕ್ಕೂ ಕಾಡಿದೆ. ವೈನಾಡಿನ ಅನೇಕ ಪನಿಯ ಸ್ತ್ರೀಯರು ಅವರಲ್ಲಿ ಅತ್ಯುತ್ತಮವಾದವರನ್ನು ಆರಿಸಿಕೊಂಡು ಹೋಗಿ ಗೊಂಬೆಗಳನ್ನಾಗಿ ಮಾಡಿ ಮದ್ರಾಸ್ ವಸ್ತು ಸಂಗ್ರಹಾಲಯದಲ್ಲಿ ಇಡುವ ಮಾಟಗಾರ ಇವನು ಎಂದು ಹೆದರಿದ್ದರು. ನೀಲಗಿರಿಯಲ್ಲಿನ ಇರುಳರು ಎತ್ತರ ಅಳೆಯುವ ಉಪಕರಣವನ್ನು ಗಲ್ಲುಗಂಬ ಎಂದು ಭಾವಿಸಿ ಅಳತೆ ಕೊಡಲು ನಿರಾಕರಿಸಿದರು. ದಕ್ಷಿಣ ಆಫ್ರಿಕಾದಲ್ಲಿ ಕೆಲಸ ಮಾಡಿಸಲು ನಮ್ಮನ್ನು ಹಿಡಿದುಕೊಂಡು ಹೋಗಲು ಈತ ಬಂದಿದ್ದಾನೆ ಎಂದು ಮೈಸೂರು ಸಂಸ್ಥಾನದವರು ಭಾವಿಸಿದ್ದರು.

ಮುಖ ಚಹರೆಯನ್ನು ಅಳತೆ ಮಾಡುವ ಸಂದರ್ಭದಲ್ಲಿ ಮೂಗು, ಹಣೆ ಸೇರುವ ಸ್ಥಾನ ಮತ್ತು ಕಣ್ಣುಗುಳಿಯ ಅಗಲವನ್ನು ಸೂಚಿಸಲು ಅಸ್ಟಿಲ್‌ನ ಬಿಳಿ ಬಣ್ಣದಿಂದ ಸಣ್ಣ ಬಿಂದು ಮಾಡಿದರೆ, ಅದು ಕ್ರಮೇಣ ಹಣೆಯ ಮೇಲೆ ಸಣ್ಣ ಗುಳ್ಳೆಯಾಗಿ ಕಾಣಿಸಿಕೊಳ್ಳುತ್ತಿತ್ತು. ಇದು ಇವನು ತಮ್ಮನ್ನು ಅಪಹರಿಸಿಕೊಂಡು ಹೋಗಲು ಹಾಕಿರುವ ಗುರುತು ಎಂದು ತಿಳಿದಿದ್ದರು. ಥರ್ಸ್ಟನ್ ಗ್ರಾಮಗಳಿಗೆ ಭೇಟಿ ಕೊಡುವುದು ಗೊತ್ತಾದರೆ ಅಲ್ಲಿ ವೃದ್ಧ ಸ್ತ್ರೀ-ಪುರುಷರು ಮತ್ತು ಎಳೆಯ ಕಂದಮ್ಮಗಳು ಮಾತ್ರ ಇರುತ್ತಿದ್ದರು. ಮಿಕ್ಕವರೆಲ್ಲ ಗ್ರಾಮಗಳನ್ನು ಜೀವ ಭಯದಿಂದ ತೊರೆಯುತ್ತಿದ್ದರು. ಒಮ್ಮೆ ಒಬ್ಬ ಗಂಡಸು ಥರ್ಸ್ಟನ್ ಅವರ ಪ್ರಯೋಗ ಶಾಲೆಯನ್ನು ಪ್ರವೇಶಸುತ್ತಿದ್ದರೆ ಆತನ ಹೆಂಡತಿ ಇದೇ ಕಡೆಯ ಭೇಟಿ ಎಂಬಂತೆ ಬಿಕ್ಕಿ ಬಿಕ್ಕಿ ಅತ್ತು ವಿದಾಯ ಹೇಳಿದಳು. ಈ ರೀತಿ ತಮ್ಮ ಸಂಶೋಧನೆಯ ಸಂಧರ್ಭದಲ್ಲಿ ಎದುರಾದ

ಅನೇಕ ಸವಾಲುಗಳನ್ನು ಥರ್ಸ್ಟನ್ ದಾಖಲಿಸುತ್ತಾರೆ. ಇಂತಹ ಅನೇಕ ಅಡೆತಡೆಗಳ ನಡುವೆಯೂ ತುಂಬ ಉಪಯುಕ್ತವಾದ ಸಂಶೋದನೆಯನ್ನು ಮಾಡುವುದರಲ್ಲಿ ಥರ್ಸ್ಟನ್ ಯಶಸ್ವಿಯಾಗಿದ್ದಾರೆ. ಜಾನಪದ, ಸಂಸ್ಕೃತಿ ಅಧ್ಯಯನ ಮತ್ತು ಸಮಾಜಶಾಸ್ತ್ರೀಯ ಅಧ್ಯಯನದ ಜೊತೆಗೆ ಮಾನವಶಾಸ್ತ್ರೀಯ ಹಾಗೂ ತಳಿಶಾಸ್ತ್ರ ಅಧ್ಯಯನ ಮಾಡುವವರಿಗೂ ಉಪಯುಕ್ತ ಮಾಹಿತಿಯನ್ನು ಈ ಸಂಪುಟಗಳು ಒದಗಿಸುತ್ತವೆ. ಮುಖ್ಯವಾಗಿ ದ್ರಾವಿಡರು ಮತ್ತು ನ್ಯೂಬಿಯನ್ನರು ಮತ್ತು ಮೆಡಿಟರೇನಿಯನ್ನರು ಈ ಮೂವರಲ್ಲಿಯೂ ಸಮಾನವಾಗಿ ಹೊಂದಿಕೆಯಾಗುವ ಅನೇಕ ಗುಣಲಕ್ಷಣಗಳನ್ನು ಗುರುತಿಸುತ್ತಾರೆ. ಈ ಗುಣಲಕ್ಷಣಗಳಲ್ಲಿ ಪ್ರಮುಖವಾದುದು ದಟ್ಟವಾಗಿ ಬೆಳೆದ ಗಡ್ಡ. ಬೇರೆ ಎಲ್ಲಾ ಜಾತಿಗಳಲ್ಲಿ ಅದು ಕೊರತೆಯಾಗಿರುತ್ತದೆ. ತಲೆಗೂದಲು ಗುಂಗುರಾಗಿರುತ್ತದೆ. ಪ್ರಸ್ತುತ ಆದಿಮ ಜಾತಿಗಳಾದ ಹೋಮೊ ದ್ರಾವಿಡರನ್ನು ಹಿಂದೂಸ್ತಾನದ ದಕ್ಷಿಣ ಭಾಗದ ಡೆಕ್ಕನ್ ಬುಡಕಟ್ಟುಗಳು ಮತ್ತು ಈಶಾನ್ಯ ಸಿಲೋನಿನ ಪರ್ವತ ಪ್ರದೇಶದ ನೆರೆಹೊರೆಯಲ್ಲಿರುವ ನಿವಾಸಿಗಳು ಮಾತ್ರ ಪ್ರತಿನಿಧಿಸುವುದನ್ನು ತಿಳಿಸುತ್ತಾರೆ. ಮತ್ತೊಂದು ಕಡೆ ಮಂಗೋಲರು ಮೆಡಿಟರೇನಿಯನ್ನರನ್ನು ಹೋಲುತ್ತಾರೆ. ಅವರ ತ್ವಚೆಯು ತಿಳಿ ಅಥವಾ ಕಡು ಕಂದುಬಣ್ಣ, ದಟ್ಟವಾಗಿ ಬೆಳೆದ ಗಡ್ಡ ಕೂಡ ಮೆಡಿಟರೇನಿಯನ್ನರ ಹಾಗೆ ಇರುತ್ತದೆ. ಅವರ ಹಣೆ ಸಾಮಾನ್ಯವಾಗಿ ಎತ್ತರವಾಗಿದ್ದು, ಮೂಗು ಎದ್ದು ಕಾಣುವುದನ್ನು ಗುರುತಿಸುತ್ತಾರೆ. ಆಸ್ಟ್ರೇಲಿಯನ್ನರು ಮತ್ತು ಭಾರತದ ದ್ರಾವಿಡರೊಡನೆ ನಡೆದ ಸಂಕರದ ಕಥನವನ್ನು ವಿವರಿಸುತ್ತಾರೆ. ಇವರ ಪ್ರಕಾರ ಆಸ್ಟ್ರೇಲಿಯನ್ನರಿಗಿಂತಲೂ ಭಾರತದ ದ್ರಾವಿಡರೇ ಮೊದಲು ಸಂಕರಕ್ಕೆ ಒಳಗಾದವರು. ಇದರ ಪರಿಣಾಮ ಆಸ್ಟ್ರೇಲಿಯಾದವರು ಇನ್ನೂ ಅನಾಗರಿಕ ಸ್ಥಿತಿಯಲ್ಲಿದ್ದರೆ, ಭಾರತದ ದ್ರಾವಿಡರು ಮುಂದೆ ಅನೇಕ ತಲೆಮಾರುಗಳಿಂದ ಅಪಾರ ಪ್ರಮಾಣದಲ್ಲಿ ನಾಗರಿಕ ಜನಾಂಗದವರಾಗಿದ್ದಾರೆ. ಈ ಎರಡೂ ಜನಾಂಗಗಳು ತಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಗಾಢವಾಗಿ ಬೇರೂರಿದ ವಿವರಗಳನ್ನು ಕೊಡುತ್ತಾರೆ. ಮುಂದುವರಿದು ದ್ರಾವಿಡರು ಮತ್ತು ಆಸ್ಟ್ರೇಲಿಯನ್ನರು ಇಬ್ಬರೂ ಕೆಲಮಟ್ಟಿಗೆ ಕಪ್ಪು ತ್ವಚೆ, ಕಪ್ಪುಕಣ್ಣು, ಕಪ್ಪು ಕೂದಲುಳ್ಳವರು ಹಾಗೂ ದಪ್ಪ ತುಟಿಗಳು, ಚಪ್ಪಟೆ ಮೂಗು, ಅಗಲವಾದ ಹೊಳ್ಳೆಗಳು, ತಲೆಬುರುಡೆಗಳಲ್ಲಿ ಪರಸ್ಪರ ಹೋಲಿಕೆ ಹೀಗೆ ಈ ಎರಡೂ ಸಮುದಾಯಗಳ ದೈಹಿಕ ಚಹರೆಯ ಲಕ್ಷಣಗಳಲ್ಲಿನ ವ್ಯತ್ಯಾಸಗಳು, ಸಾಮ್ಯತೆಗಳನ್ನು ಗುರುತಿಸುತ್ತಾರೆ. ಹೀಗಾಗಿ ದಕ್ಷಿಣ ಭಾರತದ ಜಾತಿಗಳು ಮತ್ತು ಬುಡಕಟ್ಟುಗಳು ಮಾನವಶಾಸ್ತ್ರೀಯ ಅಧ್ಯಯನಕ್ಕೆ ಅಗತ್ಯವಾದ ಕೈಪಿಡಿಯಂತಿವೆ. ಪ್ರತಿ ಸಂಪುಟದಲ್ಲೂ ಪ್ರತಿ ಜಾತಿಯ

ಲಕ್ಷಣ, ಅವರ ದೈಹಿಕ ಚಹರೆಗಳು, ಮುಖದಲ್ಲಿನ ಅಂಗಾಂಗಳ ವಿವರಗಳು ಅವುಗಳ ಸಂರಚನೆ, ಭಾಷೆ, ಆಚರಣೆ, ವಿಧಿ ನಿಷೇಧಗಳು ಇತ್ಯಾದಿಗಳನ್ನು ವಿವರಿಸಲಾಗಿದೆ.

ಭಾರತ ಮತ್ತು ಆಫ್ರಿಕಾದ ಸಸ್ಯಗಳು ಮತ್ತು ಪ್ರಾಣಿಗಳ ನಡುವೆ ಅನಾದಿ ಕಾಲದಿಂದಲೂ ಬಹಳ ನಿಕಟವಾದ ನಂಟು ಇರುವುದನ್ನು ಆರ್.ಡಿ ಓಲ್ಡ್‌ಹ್ಯಾಮ್ ನಿರ್ಣಯಿಸುವುದನ್ನು ದಾಖಲಿಸುವುದರ ಜೊತೆಗೆ, ಒಂದು ಕಾಲದಲ್ಲಿ ದಕ್ಷಿಣ ಆಫ್ರಿಕ ಮತ್ತು ಭಾರತವನ್ನು ಜೋಡಿಸಿದ್ದ ಅಖಂಡವಾದ ಶುಷ್ಕ ಭೂಭಾಗವನ್ನು ಹೀಗೆ ವಿವರಿಸುತ್ತಾರೆ. 'ನಟಾಲ್‌ನ ಕರಾವಳಿಯ ಕಾರೂ ಸ್ತರಗಳ ಮೇಲೆ ಸಂಚಯವಾಗಿರುವ ಕೆಲವು ನಿಕ್ಷೇಪಗಳನ್ನು ಸಂಗ್ರಹಿಸಿ, ನಿರ್ದಿಷ್ಟವಾಗಿ ಗುರುತಿಸಲಾದ ಮುತ್ತಿನ ಚಿಪ್ಪು ಮತ್ತು ನಕ್ಷತ್ರ ಮೀನುಗಳ ೩೫ ಜಾತಿಗಳ ಪೈಕಿ ೨೫ ದಕ್ಷಿಣ ಭಾರತದಲ್ಲಿ ಕಂಡು ಬರುತ್ತವೆ. ವಲಸೆ ಎಂಬುದು ಮಾನವ ಜನಾಂಗದ ಪ್ರಧಾನ ಲಕ್ಷಣ. ಅದನ್ನು ಪ್ರತಿ ದೇಶದ ಮೂಲನಿವಾಸಿಗಳಿಂದ ಹಿಡಿದು ಎಲ್ಲರೂ ವಲಸೆ ಪ್ರಕ್ರಿಯೆಯ ಭಾಗವಾದವರೇ. ಇಂತಹ ಸಂದರ್ಭದಲ್ಲಿ ವಲಸೆಗೆ ಇದ್ದಂತಹ ಕಾರಣಗಳು ಹಾಗೂ ಅನಿವಾರ್ಯತೆಗಳು ಮತ್ತು ಎಲ್ಲಿಂದ ಎಲ್ಲಿಗೆ ಯಾವ ಸ್ಥಳಕ್ಕೆ ಯಾವ ರೀತಿಯಲ್ಲಿ ವಲಸೆ ಹೋದರು ಎಂಬುದನ್ನು ವಿವರಿಸುತ್ತಾರೆ.

ಏಳು ಸಂಪುಟಗಳಲ್ಲಿ ದಕ್ಷಿಣ ಭಾರತದ ಮುನ್ನೂರಕ್ಕೂ ಅಧಿಕ ಜಾತಿ, ಬುಡಕಟ್ಟುಗಳು, ಅವರ ಭಾಷೆ, ಸಂಸ್ಕೃತಿ, ಅಲ್ಲಿನ ವಿಧಿನಿಷೇಧಗಳು ಹಾಗೂ ಅವರ ದೈಹಿಕ ಚಹರೆಗಳು, ಕ್ರಿಯಾವಿಧಿ, ಆಚರಣಾತ್ಮಕ ಜಗತ್ತನ್ನೂ ಒಳಗೊಂಡಂತೆ ಮದುವೆ, ಹುಟ್ಟು, ಸಾವು ಮುಂತಾದ ಸಂದರ್ಭದಲ್ಲಿ ನಡೆಸುವ ಸಣ್ಣ ಸಣ್ಣ ವಿವರಗಳನ್ನೂ ಸಹ ದಾಖಲಿಸುತ್ತಾರೆ. ಇವೆಲ್ಲವೂ ಬಹಳ ಅಚ್ಚುಕಟ್ಟಾಗಿ ಸಂಶೋಧನಾ ಶಿಸ್ತಿನ ಚೌಕಟ್ಟಿನಲ್ಲೇ ಮೂಡಿಬಂದಿವೆ. ಹಾಗೂ ಎಲ್ಲಾ ಜಾತಿಗಳನ್ನು ಮತ್ತು ಅವುಗಳ ವಿಶಿಷ್ಟತೆಗಳನ್ನು ಅಕಾರಾದಿಯಾಗಿಯೇ ನಿರೂಪಿಸಲಾಗಿದೆ. ಜೊತೆಗೆ ಪ್ರತಿ ಜಾತಿಯಲ್ಲಿನ ವಿಶಿಷ್ಟತೆ, ಭಿನ್ನತೆಗಳನ್ನು ಸ್ಪಷ್ಟವಾಗಿ ಗುರುತಿಸಲಾಗಿದೆ. ಮುಖ್ಯವಾಗಿ ಗಮನಿಸುವುದಾದರೆ ಪಂಡರಾಮರು ಶಿವಾಗಮದ ಧಾರ್ಮಿಕ ಕಿಯಾವಿಧಿಗಳ ಮೂಲಕ ಹಾದುಬಂದ 'ಅಭಿಷೇಕ' ಎಂಬ ಜಾತಿ, ವಣ್ಣಿಯನ್ನರ ಉಪಜಾತಿಯಾದ 'ಅಚ್ಚುತಾಳಿ', ೧೯೦೧ ರ ಮದ್ರಾಸ್ ಜನಗಣತಿಯ ವರದಿಯ ಪ್ರಕಾರ ಒರಿಯಾ ಭಾಷಿಕರಾದ ಹಾಗೂ ಎತ್ತುಗಳ ಮೇಲೆ ದವಸಧಾನ್ಯ ಸಾಗಿಸುವ 'ಅಚ್ಚುವಾರು' ಎಂಬ ಜಾತಿಗಳಿಂದ ಹಿಡಿದು ಬಡಗರು, ಅರವ, ಬೆಣಿಯ, ಭಟ್ರಾಳು, ಚಕ್ಕಳಿಯನ್, ಚಂಡಾಲ, ಚಪ್ಪರ್‌ಬಂದ್, ಚೆಂಚು ಕಾತೀರರು, ಕಮ್ಮ, ಕೊರಗ, ಪೆರೈಯ, ಮರವನ್ ಹೀಗೆ

ನೂರಾರು ಜಾತಿಗಳನ್ನು ಅವುಗಳ ಉಪಜಾತಿ, ಅವುಗಳ ಸಂಕೇತ, ಅವರು ತೊಡುವ ಉಡುಗೆ, ತಾಳಿ ಅದರ ವಿಶಿಷ್ಟತೆ, ಅವರ ಭಾಷಾ ವೈವಿಧ್ಯತೆ ಪದಗಳ ಅರ್ಥ, ಶ್ಲೋಕಗಳ ವಿವರಣೆ ಹೀಗೆ ಅವರ ಬದುಕಿನ ಆಚರಣಾ ಜಗತ್ತಿನ ಸೂಕ್ಷ್ಮ ವಿವರಗಳು, ಅವುಗಳ ಮಹತ್ವ ಹಾಗೂ ವಿಶೇಷತೆಗಳನ್ನೂ ವಿವರಿಸಲಾಗಿದೆ.

ಇಲ್ಲಿನ ಪ್ರತಿಯೊಂದು ಜಾತಿಯ ಆಚರಣೆಯಲ್ಲಿನ ವಿಶಿಷ್ಟತೆ ನಿಜಕ್ಕೂ ಓದುಗರಲ್ಲಿ ಬೆರಗು ಹುಟ್ಟಿಸುತ್ತದೆ. ಮಂಗಳೂರಿನ ಬಂಟರು ಚಿತಾ ಬೆಂಕಿಗೆ ಕಡ್ಡಾಯವಾಗಿ ಮಾವಿನ ಸೌದೆಯನ್ನು ಬಳಸುತ್ತಾರೆ. ಹಾಗೆಯೇ ಬಾವೂರಿಗಳ ಶವಶಂಸ್ಕಾರದ ಕ್ರಮವನ್ನು ವಿವರಿಸುತ್ತಾ ಇವರು 'ಮೃತರನ್ನು ಹೂಳುತ್ತಾರೆ ಇಲ್ಲವೆ ಸುಡುತ್ತಾರೆ, ಹೆಣವನ್ನು ಹಲವರು ಕೈಯಲ್ಲಿ ಎತ್ತಿಕೊಂಡು ಹೋಗುತ್ತಾರೆ ಇಲ್ಲವೆ ಚಟ್ಟದಲ್ಲಿ ಹೊಯ್ಯುತ್ತಾರೆ. ಹೆಣವನ್ನು ಹೊರಗೆ ತೆಗೆದುಕೊಂಡು ಹೋದ ನಂತರ ಮೃತನ ವಿಧವೆ ಹೆಣಕ್ಕೆ ಮೂರು ಬಾರಿ ಪ್ರದಕ್ಷಿಣೆ ಹಾಕಿ ಕಣ್ಣಿನ ಮೇಲೆ ಅಕ್ಕಿ ಮತ್ತು ಸ್ವಲ್ಪ ಕೆಂಡವನ್ನು ಎಸೆಯುತ್ತಾಳೆ. ಸಾಮಾನ್ಯವಾಗಿ ಅವಳು ಅವಳ ಪಾತ್ರೆ ಸೌಟನ್ನು ತನ್ನೊಂದಿಗೆ ತಂದಿರುತ್ತಾಳೆ. ಅವನ್ನು ಅಂದು ಅಲ್ಲಿ ಬಿಸಾಡುತ್ತಾಳೆ. ಸತ್ತ ವ್ಯಕ್ತಿ ಹಿರಿಯ ಮಹಿಳೆಯಾಗಿದ್ದಲ್ಲಿ ಈ ಶಾಸ್ತ್ರಗಳನ್ನು ಸೊಸೆ ನೆರವೇರಿಸುತ್ತಾಳೆ. ಸ್ಮಶಾಣದಲ್ಲಿ ಶವವನ್ನು ಗುಂಡಿಯ ಸುತ್ತ ಏಳು ಬಾರಿ ಪ್ರದಕ್ಷಿಣೆ ಹಾಕಿಸಲಾಗುತ್ತದೆ. ಅಲ್ಲಿದ್ದವರೆಲ್ಲ ಓಹ್ ಮರವೇ! ಓಹ್ ಆಕಾಶವೇ! ಓಹ್ ಭೂಮಿಯೇ ಇವನನ್ನು ಇಲ್ಲಿ ಹೂಳುತ್ತಿದ್ದೇವೆ ಇದು ನಮ್ಮ ತಪ್ಪಲ್ಲ.' 'ನೀನು ನಮ್ಮೊಂದಿಗೆ ಜೀವಿಸಿದ್ದೆ ಈಗ ತೊರೆಯುತ್ತಿದ್ದೀಯ, ಜನರಿಗೆ ತೊಂದರೆ ಮಾಡಬೇಡ' ಎನ್ನುತ್ತಾರೆ. ಮನೆಗೆ ಹಿಂತಿರುಗಿದ ಮೇಲೆ ಸಗಣಿ ಮಿಶ್ರಿತ ನೀರನ್ನು ತಲೆ ಮತ್ತು ಕಾಲುಗಳ ಮೇಲೆ ಸಿಂಪಡಿಸಿಕೊಳ್ಳುತ್ತಾರೆ. ಇದರೊಂದಿಗೆ ಶೇಂದಿಯೂ ಬೆರೆತಿರುತ್ತದೆ. ಮರುದಿನ ಮನೆಯಲ್ಲಿನ ಎಲ್ಲಾ ಹಳೆಯ ಮಡಕೆಗಳನ್ನು ಎಸೆಯಾಲಾಗುತ್ತದೆ. ಮೃತನ ಪಿತೃ ಸಂಬಂಧಿಗಳು ಬೇವಿನ ಎಲೆಗಳನ್ನು ಹಾಕಿ ಬೇಯಿಸಿದ ಅನ್ನವನ್ನು ಉಣ್ಣುತ್ತಾರೆ. ಈ ರೀತಿಯ ಅನೇಕ ಒಳ ವಿವರಗಳನ್ನು ಥರ್ಸ್ಟನ್ ಕೊಡುತ್ತಾರೆ. ಹಾಗೆಯೇ ಶ್ರೀವೈಷ್ಣವ ಮತ್ತು ಸ್ಮಾರ್ತರ ಭಿನ್ನತೆಗಳನ್ನು ಹೇಳುವಾಗ ಭಕ್ತಿಯ ಭಿನ್ನ ಬಗೆಗಳಲ್ಲಿ ಪ್ರಧಾನವಾದ ಮರ್ಕಟ ಮತ್ತು ಮಾರ್ಜಾಲ ಕಿಶೋರ ನ್ಯಾಯ ಪದ್ಧತಿಯ ವಿವರಗಳನ್ನು ದಾಖಲಿಸುತ್ತಾರೆ.

ಚಂಡಾಲ ಜಾತಿಯನ್ನು ಕುರಿತು ಹೇಳುತ್ತಾ ೧೯೦೧ ರ ಜನಗಣತಿಯ ವಿವರಗಳಲ್ಲಿ ಸಾವಿರಕ್ಕೂ ಅಧಿಕ ಜನರು ತಮ್ಮನ್ನು ತಾವು ಚಂಡಾಲರು ಎಂದು ಕರೆದುಕೊಂಡಿರುವುದನ್ನು ವಿವರಿಸುತ್ತಾರೆ. ಜೊತೆಗೆ ಶೂದ್ರ ಪುರುಷ ಹಾಗೂ ಬ್ರಾಹ್ಮಣ ಮಹಿಳೆಯ ನಡುವಣ ಲೈಂಗಿಕ ಸಂಪರ್ಕದಿಂದ ಜನಿಸುವ ಮಗು

ಸಮಾಜದ ಅತ್ಯಂತ ಕೀಳು ಜಾತಿಯಾದ ಚಂಡಾಲ ಜಾತಿಗೆ ಸೇರುತ್ತದೆ. ಅದೇ ರೀತಿ ಬ್ರಾಹ್ಮಣ ಪುರುಷ ಮತ್ತು ಶೂದ್ರ ಮಹಿಳೆಯ ಕೂಡುವಿಕೆಯಿಂದ ಹುಟ್ಟುವ ಮಗುವು ಅತ್ಯುನ್ನತ ಸಮ್ಮಿಶ್ರ ಜಾತಿಗಳಲ್ಲಿ ಒಂದಾಗುತ್ತದೆ ಎಂದು ಧರ್ಮಶಾಸ್ತ್ರದ ಹಿನ್ನೆಲೆಯಲ್ಲಿ ವಿವರಿಸುತ್ತಾರೆ. ಕ್ರಿಮಿನಲ್ ಟ್ರೈಬ್ಸ್ ಎಂದು ಕರೆಯುವ 'ಚಪ್ಪರ್ ಬಂದ್' ಸಮುದಾಯದವರು ಆ ಕಾಲಕ್ಕೆ ನಕಲಿ ನಾಣ್ಯ ತಯಾರಕರಾಗಿದ್ದರು. ಇವರ ಮೇಲೆ ಪೊಲೀಸರು ಸದಾ ನಿಗಾ ಇಟ್ಟಿರುತ್ತಿದ್ದರು. ಮೂಲತಃ ಬಾಂಬೆ ಮೂಲದವರಾದ ಇವರು ದಕ್ಷಿಣ ಭಾರತದ ತಮಿಳುನಾಡು, ಆಂಧ್ರ ಪ್ರದೇಶ, ಕರ್ನಾಟಕದ ಭಾಗಗಳಲ್ಲಿ ವಾಸಿಸುತ್ತಾರೆ. ಬ್ರಿಟೀಷರ ಕಾಲದಲ್ಲಿ ಕ್ರಿಮಿನಲ್ ಟ್ರೈಬ್ಸ್ ಎಂದು ಹಣೆಪಟ್ಟಿ ಕಟ್ಟಿಕೊಂಡ ಈ ಸಮುದಾಯವನ್ನು ಈಗಲೂ ಅದೇ ದೃಷ್ಟಿಯಿಂದ ನೋಡಲಾಗುತ್ತದೆ. ಅವರಿರುವ ಪ್ರಾಂತ್ಯದಲ್ಲಿ ಯಾರೇ ಕಳ್ಳತನ ಮಾಡಿದರೂ ಇವರನ್ನೇ ಗುರಿಯಾಗಿಟ್ಟುಕೊಂಡು ಪೊಲೀಸರು ಠಾಣೆಗೆ ಕರೆದು ವಿಚಾರಿಸಿ ಹಿಂಸಿಸುವುದು ಇಂದಿಗೂ ತಪ್ಪಿಲ್ಲ.ಇಂದು ಜನಿವಾರ ಎನ್ನುವುದು ಪ್ರಧಾನವಾಗಿ ಬ್ರಾಹ್ಮಣರಿಗೆ ಮಾತ್ರ ಸೀಮಿತವಾಗಿದೆ. ಆದರೆ ಹಿಂದೆ ಜನಿವಾರವನ್ನು ಅನೇಕ ಶೂದ್ರ ಮತ್ತು ದಲಿತ ಸಮುದಾಯಗಳು ಧರಿಸುತ್ತಿದ್ದುದನ್ನು ಅನೇಕ ಸಮುದಾಯಗಳ ಆಚರಣೆಗಳ ಹಿನ್ನೆಲೆಯಲ್ಲಿ ವಿವರಿಸಲಾಗಿದೆ. ಬಡಗಿಗಳು, ಚಮ್ಮಾರರು, ಅಕ್ಕಸಾಲಿಗರು, ಹೊಲೆಯರು, ಮಾದಿಗರು ಮುಂತಾದ ಜಾತಿಗಳು ಜನಿವಾರ ಧರಿಸುವುದನ್ನು ಹೇಳಲಾಗಿದೆ. ಇಂದಿಗೂ ಅನೇಕ ಅಬ್ರಾಹ್ಮಣ ಸಮುದಾಯಗಳು ತಮ್ಮ ಅನೇಕ ಆಚರಣೆಗಳಲ್ಲಿ ಜನಿವಾರ ಧರಿಸುವುದುಂಟು. ದಲಿತರಲ್ಲಿ ಪ್ರಧಾನವಾಗಿದ್ದ ಜನಿವಾರ ಕ್ರಮೇಣ ದೂರವಾಗಿ ಈಗ ಅದು ಊರಹಬ್ಬ, ಜಾತ್ರೆ ಇನ್ನಿತರ ಆಚರಣೆಗಳಿಗೆ ಮಾತ್ರ ಸೀಮಿತವಾಗಿದೆ. ಇನ್ನೊಂದು ದೃಷ್ಟಿಯಿಂದ ಮೂಲತಃ ಜನಿವಾರ ಎನ್ನುವುದೇ ತಳ ಸಮುದಾಯಗಳದ್ದಾಗಿದ್ದು, ಶಿವನ ಗಜಚರ್ಮಾಂಬರದ ಸಾಂಕೇತಿಕ ರೂಪವೇ ಈ ಜನಿವಾರ. ಹೀಗಾಗಿ ಶಿವ ತಳಸಮುದಾಯಗಳ ಪ್ರತಿನಿಧಿಯಾಗಿ ರೂಪುಗೊಂಡವನು.

ಕರ್ನಾಟಕದ ಮೀನುಗಾರ ಹಾಗೂ ಕೃಷಿಕರಾದ ಕಟ್ಟೇರರು ಕಾವೇರಿ, ಭವಾನಿ ಮತ್ತು ತುಂಗಭದ್ರ ನದಿ ತೀರಗಳಲ್ಲಿ ವಾಸಿಸುತ್ತಾರೆ. ಈ ಸಮುದಾಯದ ವಿಶೇಷತೆ ಎಂದರೆ ತಮ್ಮ ಜಾತಿಯ ಸಂಪ್ರದಾಯ ಕಟ್ಟುಪಾಡುಗಳ ಉಲ್ಲಂಘನೆಯಾದಾಗ ಸಮುದಾಯದ ಮುಖ್ಯಸ್ಥನ ನೇತೃತ್ವದಲ್ಲಿ ಪಂಚಾಯ್ತಿ ಮಾಡಿ ದಂಡ ವಿಧಿಸಲಾಗುತ್ತದೆ. ಹೀಗೆ ವಿಧಿಸಿದ ದಂಡದಲ್ಲಿ ಮುಖ್ಯಸ್ಥನಿಗೆ ಅರ್ಧಭಾಗ ಹಾಗೂ ಸ್ವಜಾತಿಯ ಜನರ ಕುಡಿತಕ್ಕೆ ಇನ್ನರ್ಧ ಭಾಗ ಹಣವನ್ನು ಬಳಸುವುದು

ವಿಶೇಷವಾಗಿದೆ. ಇವರಲ್ಲಿ ವಿವಾಹ ಪೂರ್ವ ಲೈಂಗಿಕತೆಗೆ ಅವಕಾಶವಿದ್ದರೂ ಅದಕ್ಕೂ ಮುನ್ನ ಹಾಗೆ ಕೂಡುವ ಜೋಡಿಗಳು ಮುಖ್ಯಸ್ಥನಿಗೆ ದಂಡ ಕೊಡಬೇಕಾಗುತ್ತದೆ. ಮದುವೆಯಲ್ಲಿ ವಧುವಿಗೆ ತಾಳಿಯನ್ನು ಬ್ರಾಹ್ಮಣನಿಂದ ಕಟ್ಟಿಸಲಾಗುತ್ತದೆ. ಇವರಲ್ಲಿ ವಿಧವಾ ವಿವಾಹ ಇದೆಯಾದರೂ ಅದನ್ನು ವಿಧವೆಯರೇ ರಾತ್ರಿಯ ಸಮಯದಲ್ಲಿ ನೆರವೇರಿಸುತ್ತಾರೆ. ವಿಧವೆಯಲ್ಲೊಬ್ಬರು ತಾಳಿ ಕಟ್ಟುತ್ತಾರೆ. ಈ ಸಂದರ್ಭದಲ್ಲಿ ಮದುವೆಯಾದ ಗಂಡಸಾಗಲಿ, ಹೆಂಗಸರಾಗಲಿ ಇರುವಂತಿಲ್ಲ. ಜೊತೆಗೆ ಈ ಸಂದರ್ಭದಲ್ಲಿ ಯಾವುದೇ ಮಂಗಳ ವಾದ್ಯಕ್ಕೂ ಅವಕಾಶವಿಲ್ಲ. ಹಾಗೆಯೇ ಈ ಸಮುದಾಯದಲ್ಲಿಯೂ ಹೆಣ್ಣು ಮಕ್ಕಳನ್ನು ಬಸವಿ ಬಿಡುವ ಪದ್ಧತಿ ರೂಢಿಯಲ್ಲಿದೆ. ದನಗಳು ಭಾರತೀಯರ ಜೀವನ ಪದ್ಧತಿಯಲ್ಲಿ ಮತ್ತು ಜಗತ್ತಿನ ನಾಗರಿಕತೆಯಲ್ಲಿ ಮಹತ್ವದ ಸ್ಥಾನವನ್ನು ಗಳಿಸಿವೆ. ಮನುಷ್ಯನ ಅಧಿಕೃತ ವ್ಯವಸಾಯ ಬದುಕು ಶುರುವಾದದ್ದೇ ದನಗಳು ಜೊತೆಯಾದ ನಂತರ. ಹೀಗಾಗಿ ದನ ಅಥವಾ ಹಸು ಎನ್ನುವುದನ್ನು ಕೇವಲ ಭಾವನಾತ್ಮಕ ನೆಲೆಯಲ್ಲಿ ನೋಡದೆ, ಮನುಷ್ಯರ ಬದುಕನ್ನು ಕಟ್ಟಿಕೊಳ್ಳಲು ನೆರವಾದ ಪ್ರಾಣಿ ಎಂದು ನೋಡಬೇಕಾಗಿದೆ. ಬಹುಶಃ ಈ ಎಲ್ಲ ಹಿನ್ನೆಲೆಯಲ್ಲಿಯೇ ದನಗಳಿಗೆ ಭಾರತೀಯ ಪರಂಪರೆಯಲ್ಲಿ ಬಹು ಮುಖ್ಯವಾದ ಸ್ಥಾನ ದೊರೆತಿರಬಹುದು. ಆದರೆ ದಕ್ಷಿಣ ಟ್ರಾವಂಕೂರ್‌ವರೆಗೆ ಹಬ್ಬಿರುವ ಆನೈಮಲೈ ಪರ್ವತ ಶ್ರೇಣಿಯಲ್ಲಿ ವಾಸಿಸುವ ಕಾಡಿರರ ಸಾಂಸ್ಕೃತಿಕ ಹಿನ್ನೆಲೆಯನ್ನು ಗಮನಿಸಿದರೆ, ಇವರು ತಮ್ಮ ಸಂಸ್ಕೃತಿ ಮತ್ತು ಬದುಕಿನಲ್ಲಿ ಹಸುವನ್ನು ಸಂಪೂರ್ಣವಾಗಿ ಹೊರಗಿಟ್ಟಿದ್ದಾರೆ. ಇವರು ದನಗಳ ಸಗಣಿಯಿಂದ ಹಿಡಿದು ಅವುಗಳ ಯಾವುದೇ ಉತ್ಪನ್ನಗಳನ್ನು ಬಳಸುವುದನ್ನು ನಿಷಿದ್ಧಗೊಳಿಸಿದ್ದಾರೆ.

ಇನ್ನೊಂದು ವಿಚಿತ್ರ ಹಾಗೂ ಸೇಡಿನ ಮನೋಭಾವವನ್ನು ಹೊಂದಿರುವ 'ಕಳ್ಳನ್ ಅಥವಾ ಕಾಳಿಂದ' ಎನ್ನುವ ಜಾತಿಯನ್ನು ಹೆಸರಿಸಿ ಅದರ ವಿಶೇಷತೆಯನ್ನು ಗುರುತಿಸುತ್ತಾರೆ. ಅವರ ಪ್ರಕಾರ ಮೂಲತಃ ಯೋಧ ವೃತ್ತಿಯವರಾದ ಈ ಸಮುದಾಯ ಅದನ್ನು ಕಳೆದುಕೊಂಡ ನಂತರ ಲೂಟಿಕೋರರಾಗಿ ಮಾರ್ಪಟ್ಟು ಕುಖ್ಯಾತಿ ಗಳಿಸಿದರು. ಜನರನ್ನು ರಾತ್ರಿಹೊತ್ತು ಅಡ್ಡಗಟ್ಟಿ ದರೋಡೆ ಮಾಡುವುದೇ ಇವರ ಕೆಲಸ. ಮಧುರೆಯಿಂದ ಪೆರಿಯಾಕುಳಂಗೆ ಹೋಗುವ ದಾರಿಯನ್ನು ಇವರ ದರೋಡೆ ಚಟುವಟಿಕೆಯ ಪ್ರದೇಶವೆಂದು ಗುರುತಿಸಲಾಗಿದೆ. ಇವರಲ್ಲಿ ಬಹಳ ವಿಚಿತ್ರವಾದ ವಿವಾಹ ಪದ್ಧತಿಗಳು ರೂಢಿಯಲ್ಲಿವೆ. ಸೋದರತ್ತೆಯನ್ನು ಹೊಂದಿರುವ ವ್ಯಕ್ತಿ ಅವಳು ತನಗಿಂತ ಎಷ್ಟೇ ವರ್ಷ ದೊಡ್ಡವಳಾಗಿದ್ದರೂ ಅಂದರೆ ಮೂವತ್ತು-ನಲವತ್ತು ವರ್ಷಗಳು ದೊಡ್ಡವಳಾಗಿದ್ದರೂ ತಂದೆ ತಾಯಿ ಒಪ್ಪಿದರೆ

ಮದುವೆಯಾಗಬೇಕು. ಒಂದು ವೇಳೆ ತಂದೆ ತಮ್ಮನಿಗೆ ಅಂದರೆ ಚಿಕ್ಕಪ್ಪನಿಗೆ ಮಗಳಿದ್ದರೆ ಅವಳನ್ನು ಮದುವೆಯಾಗುವಂತೆ ಒತ್ತಾಯಿಸಿದರೆ ಅವಳ ವಯಸ್ಸು ಎಷ್ಟೇ ಇದ್ದರೂ ನಿರಾಕರಿಸುವಂತಿಲ್ಲ. ಇವರಲ್ಲಿನ ಮತ್ತೊಂದು ವಿಶೇಷವೆಂದರೆ ಬಹುಪತಿತ್ವ ರೂಢಿಯಲ್ಲಿದೆ. ಒಬ್ಬ ಹೆಂಗಸು ಎಂಟರಿಂದ ಹತ್ತು ಜನ ಗಂಡಂದಿರನ್ನು ಹೊಂದಬಹುದು.

ಬೆಣ್ಣೆ ತುಪ್ಪ ಮಾರುವುದನ್ನೇ ಪ್ರಧಾನ ವೃತ್ತಿಯನ್ನಾಗಿಸಿಕೊಂಡ ಕನ್ನಡಿಯನ್ನರು ಬಹಳ ಗಟ್ಟಿಮುಟ್ಟಾದ ಜನ. ಇವರ ಆಚರಣೆಯ ವಿಶೇಷತೆಯೆಂದರೆ ಇವರಲ್ಲಿ ವಿಧವಾ ವಿವಾಹ ಒಪ್ಪಿತವಾಗಿದ್ದು, ಅದನ್ನು ಸಂಜೆಯ ಹೊತ್ತಲ್ಲಿ ನೆರವೇರಿಸುತ್ತಾರೆ. ಹಾಗೂ ಶವ ಸಂಸ್ಕಾರದ ಆಚರಣೆಯಲ್ಲಿ ಶವಕ್ಕೆ ಸ್ನಾನ ಮಾಡಿಸಿ ನಂತರ ನವರಂಧ್ರಗಳನ್ನು ಹತ್ತಿಯಿಂದ ಅಥವಾ ಬಟ್ಟೆಯಿಂದ ಮುಚ್ಚುತ್ತಾರೆ.

ಹಾಗೆಯೇ ಗುಬ್ಬಚ್ಚಿಗಳು ಕುಪ್ಪಳಿಸಿಕೊಂಡು ನಡೆಯುವುದಕ್ಕೂ ಕಾಮು ಜನಾಂಗಕ್ಕೂ ಸಂಬಂಧವಿರುವುದನ್ನು ವಿವರಿಸುತ್ತಾ, ಒಂದು ಕಾಲದಲ್ಲಿ ಕಾಮುಗಳನ್ನು ಬಂಧಿಸಲಾಗಿತ್ತು. ಗುಬ್ಬಚ್ಚಿಗಳು ಅವರನ್ನು ಬಂಧನದಿಂದ ಬಿಡಿಸಿ ತಾವು ಆ ಬಂಧನವನ್ನು ಸ್ವೀಕರಿಸಿದವು. ಆದುದರಿಂದ ಗುಬ್ಬಚ್ಚಿಗಳ ನಡಿಗೆ ಇಂದಿಗೂ ಕಾಲನ್ನು ಬಂಧಿಸಲ್ಪಟ್ಟ ರೀತಿಯಲ್ಲಿ ಕುಪ್ಪಳಿಸುವುದಾಗಿದೆ. ಈ ಕಾರಣದಿಂದಾಗಿ ಗುಬ್ಬಚ್ಚಿಗಳನ್ನು ಕಂಡರೆ ಕಾಮುಗಳಿಗೆ ಇಂದಿಗೂ ತುಂಬ ಗೌರವ. ಅನೇಕ ಕಾಮುಗಳು ತಮ್ಮ ಮನೆಗಳಲ್ಲಿ ಗುಬ್ಬಚ್ಚಿಗಳ ಆಹಾರಕ್ಕಾಗಿ ಭತ್ತದ ತೆನೆಗಳನ್ನು ನೇತು ಹಾಕಿರುತ್ತಾರೆ. ಒಂದು ಕಾಲದಲ್ಲಿ ನರಬಲಿ ಆಚರಣೆ ಇತ್ತು. ಹಾಗಾಗಿಯೇ ಅದು ಇಂದಿಗೂ ಜನರ ನೆನಪಿನಿಂದ ಮಾಸಿಲ್ಲ. ಆದರೆ ನರಬಲಿ ಎನ್ನುವುದು ಬಲಿಯಾಗಿ ಮಾರ್ಪಾಡಾಗಿ ನರರ ಜಾಗದಲ್ಲಿ ಪ್ರಾಣಿಗಳು ಪಕ್ಷಿಗಳು ಬಂದವು. ಹೀಗೆ ಬಲಿ ಎನ್ನುವುದು ಅನೇಕ ಮಾರ್ಪಾಡುಗಳನ್ನು ಪಡೆದುಕೊಂಡಿತು. ಬಲಿ ಕೊಡುವುದು ಎಂದರೆ ಶಾಂತಿ ಮಾಡುವುದು ಎಂದಾಯಿತು. ಹೀಗಾಗಿ ಸಮಾಜದಲ್ಲಿರುವ ಎಲ್ಲ ಜಾತಿ ಸಮುದಾಯಗಳೂ ಈ ಬಲಿ ಆಚರಣೆಯನ್ನು ಇಂದಿಗೂ ನಡೆಸುತ್ತಿವೆ. ಮಾಂಸಾಹಾರಿ ಸಮುದಾಯಗಳಲ್ಲಿ ಈ ಬಲಿ ಆಚರಣೆಯು ಕುರಿ, ಮೇಕೆ, ಕೋಳಿ, ಕೋಣ ಇತ್ಯಾದಿಗಳಿಗೆ ಬದಲಾವಣೆಗೊಂಡಿದ್ದರೆ ಮಾಂಸ ತಿನ್ನದ ಜಾತಿಗಳಲ್ಲಿ ಅದು ಬೂದುಗುಂಬಳಕಾಯಿ ಹೊಡೆದು ಅದರ ಹೋಳುಗಳಿಗೆ ಕುಂಕುಮ ಹಚ್ಚುವುದು, ಅನ್ನಕ್ಕೆ ಕುಂಕುಮ ಬೆರೆಸುವುದು ಇನ್ನೂ ಮುಂದುವರೆದು ನಿಂಬೆಹಣ್ಣನ್ನು ಎರಡು ಹೋಳಾಗಿ ಕುಯ್ದು ಅವುಗಳಿಗೆ ಕುಂಕುಮ ಹಚ್ಚಿ ಇಡುವಲ್ಲಿಗೆ ಬಲಿಯ ಆಚರಣೆ ಸಾಂಕೇತಿಕಗೊಂಡು ನಡೆದು ಬಂದಿದೆ. ಥರ್ಸ್ಟನ್ ಅವರು ಈ ನರಬಲಿ

ಆಚರಣೆಯು ಪಡೆದುಕೊಂಡ ಬದಲಾವಣೆಯ ಸ್ವರೂಪವನ್ನು ವಿವರಿಸುತ್ತಾರೆ. 'ಖೊಂಡ್' ಎಂಬ ಸಮುದಾಯದಲ್ಲಿ ನರಬಲಿ ಮಾರ್ಪಾಡಾದ ಬಗೆಯನ್ನು ವಿವರಿಸುತ್ತಾ ಇವರಲ್ಲಿದ್ದ ನರಬಲಿ ಇಂದು ಪ್ರಾಣಿ ಬಲಿಯಾಗಿ ಬದಲಾಗಿದ್ದರೂ ತಾವು ಬಲಿಕೊಡುವ ಟಗರಿಗೆ ಅಂದು ಸ್ನಾನ ಮಾಡಿಸಿ ಅದರ ತಲೆಯ ಕೂದಲನ್ನು ಬೋಳಿಸಿ ಕಚ್ಚಾ ಮಾನವ ರೂಪು ತೋರುವ ಹಾಗೆ ಮಾಡಿ, ನಂತರ ಅದರ ಕಣ್ಣಿನಿಂದ ಮೂಗಿನವರೆಗೆ ನಾಮ ಬಳಿದು ತಲೆಗೆ ಒಂದು ಪೇಟವನ್ನು ಕಟ್ಟಿ, ದೇಹದ ಸುತ್ತ ಬಿಳಿ ವಸ್ತ್ರವನ್ನು ಸುತ್ತಿ ಮನುಷ್ಯನೊಬ್ಬನ ಹಾಗೆ ಮಾಡಿ ಬಲಿಕೊಡುವ ವಿವರಗಳನ್ನು ತಿಳಿಸುತ್ತಾರೆ. ಒಕ್ಕಲಿಗರ ಒಂದು ಪಂಗಡವಾದ ಬೆಳ್ಳೊಕ್ಕಲಿಗರಲ್ಲಿ ನರಬಲಿ ಇದ್ದದ್ದನ್ನು ಗಮನಿಸಬಹುದು. ನಂತರ ಅದು ಕೈಯ ಒಂದು ಬೆರಳನ್ನು ಬಲಿ ಕೊಡುವಲ್ಲಿಗೆ ಮಾರ್ಪಾಟಾಯಿತು. ಈಗ ಮತ್ತೂ ಮುಂದುವರೆದು ಕೇವಲ ಸಾಂಕೇತಿಕತೆಯ ರೂಪದಲ್ಲಿ ಮದುವೆಯ ಸಂದರ್ಭದಲ್ಲಿ ವಧುವಿನ ಕೈಯಲ್ಲಿನ ಮಧ್ಯದ ಬೆರಳಿಗೆ ದರ್ಭೆಹುಲ್ಲನ್ನು ಕಟ್ಟುವುದರ ಮೂಲಕ ಆಚರಣೆಯಲ್ಲಿ ಆ ಬೆರಳನ್ನು ನಿಷ್ಕ್ರಿಯಗೊಳಿಸುವಲ್ಲಿಗೆ ಬಂದು ನಿಂತಿದೆ. ದೇವರಿಗೆ ಮುಡಿ ಕೊಡುವುದು ಕೂಡ ನರಬಲಿಯ ಸಂಕೇತ ಎಂದು ಭಾವಿಸಲಾಗಿದೆ. 'ಕೊಯಿ' ಎಂಬ ಬುಡಕಟ್ಟು ಜನಾಂಗದಲ್ಲಿ ಹೆರಿಗೆಯಾದ ನಂತರ ತಾಯಿಗೆ ತಣ್ಣೀರಿನಲ್ಲಿ ಸ್ನಾನ ಮಾಡಿಸುತ್ತಾರೆ. ಸಾಮಾನ್ಯವಾಗಿ ಹೆರಿಗೆಯಾದ ಮೂರು ತಿಂಗಳವರೆಗೆ ಬಾಣಂತಿಗೆ ತಣ್ಣೀರನ್ನು ಮುಟ್ಟಿಸುವುದಿಲ್ಲ. ಯಾಕೆಂದರೆ ದೇಹಕ್ಕೆ ಶೀತ ಸೇರಿಕೊಂಡು ಸನ್ನಿ ಹಿಡಿಯುತ್ತದೆ ಎಂಬ ನಂಬಿಕೆ ಈಗಲೂ ಇದೆ. ಆದರೆ ಇವರು ಹುಟ್ಟಿದ ದಿನವೇ ತಣ್ಣೀರಿನಲ್ಲಿ ಸ್ನಾನ ಮಾಡಿಸುವುದು ವಿಚಿತ್ರವಾಗಿದೆ. ಜೊತೆಗೆ ಸಾವಿನ ಆಚರಣೆಯಲ್ಲಿ ವ್ಯಕ್ತಿ ತೀರಿಕೊಂಡಾಗ ಸತ್ತ ದಿನವೇ ಹಸು ಅಥವಾ ಹೋರಿಯನ್ನು ಕಡಿದು ಅಡಿಗೆ ಮಾಡುತ್ತಾರೆ. ಹಾಗೆಯೆ ಹೋರಿಯ ಬಾಲವನ್ನು ಕತ್ತರಿಸಿ ಮೃತ ವ್ಯಕ್ತಿಯ ಕೈಯಲ್ಲಿ ಹಿಡಿಸಲಾಗುತ್ತದೆ. 'ಮರಮನ್' ಜಾತಿಯಲ್ಲಿ ವರನ ಸೋದರಿಯು ವಧುವಿನ ಕುತ್ತಿಗೆಗೆ ತಾಳಿಯನ್ನು ಕಟ್ಟುತ್ತಾಳೆ ಮತ್ತು ಇವರ ಮದುವೆಯಲ್ಲಿ ಮಾಂಸದೂಟ ಕಡ್ಡಾಯ. ಮುಕ್ಕುವನ್ ಸಮುದಾಯದಲ್ಲಿ ಶವದ ಬೆರಳಿಗೆ ಕಡ್ಡಾಯವಾಗಿ ಚಿನ್ನದ ಉಂಗುರವನ್ನು ತೊಡಿಸಿ ನಂತರ ಅದನ್ನು ಸಂಬಂಧಿಕರಿಗೆ ಹಿಂತಿರುಗಿಸಲಾಗುತ್ತದೆ. ಗಂಡ ಸತ್ತರೆ ಕ್ಷೌರಿಕ ಮಹಿಳೆಯಿಂದ ತಾಳಿಯನ್ನು ಕೀಳಿಸಲಾಗುತ್ತದೆ.

ತಮಿಳುನಾಡಿನಲ್ಲಿ 'ಪರೈಯ' ಎನ್ನುವುದೊಂದು ತಳ ಸಮುದಾಯದ ಜಾತಿ. ಇವರು ಮದುವೆ, ಶವಸಂಸ್ಕಾರ ಹಾಗೂ ಗ್ರಾಮದ ಇತರೆ ಉತ್ಸವಗಳಲ್ಲಿ ಡೋಲು ತಮಟೆ ಭಾರಿಸುತ್ತಾರೆ. 'ಪರೈಯ' ಎಂದರೆ ಡೋಲು ಅಥವಾ ತಮಟೆ ಎಂದೇ ಅರ್ಥ. ಇವರು ಬ್ರಾಹ್ಮಣರನ್ನು ತಮ್ಮ ಕೇರಿಗೆ ಬಿಟ್ಟುಕೊಳ್ಳುವುದಿಲ್ಲ. ಸಾಮಾನ್ಯವಾಗಿ

ಹಿಂದೆ ಎಲ್ಲ ಅಸ್ಪೃಶ್ಯ ಜಾತಿಗಳು ಬ್ರಾಹ್ಮಣರನ್ನು ತಮ್ಮ ಕೇರಿಗಳಿಗೆ ಸೇರುಸುತ್ತಿರಲಿಲ್ಲ. ಕಾರಣ ಬ್ರಾಹ್ಮಣ ನಮ್ಮ ಕೇರಿ ಪ್ರವೇಶಿಸಿದರೆ ನಮಗೆ ಕೇಡುಗಾಲ ಬರುತ್ತದೆ ಎಂಬ ನಂಬಿಕೆ. ಪರ್ರೈಯರು ಬ್ರಾಹ್ಮಣನು ತಮ್ಮ ಕೇರಿಯನ್ನು ಪ್ರವೇಶಿಸಲು ಮುಂದಾದರೆ ಗುಂಪಾಗಿ ಬಂದು ಎಕ್ಕಡದಿಂದ ಹೊಡೆಯುತ್ತಿದ್ದರು. ಇದು ಇವರ ನಂಬಿಕೆಯಾದರೆ ಬ್ರಾಹ್ಮಣರದು ಇನ್ನೊಂದು ರೀತಿಯದ್ದು. ಬ್ರಾಹ್ಮಣರು ಪರ್ರೈಯರ ವಸತಿ ಪ್ರದೇಶದಲ್ಲಿ ಹಲ್ಲೆಗೊಳಗಾಗದೆ ಹಾದು ಹೋದರೆ ಮಹಾನ್ ಅದೃಷ್ಟವೊಂದು ನಮಗೆ ಕಾದಿದೆ ಎಂದು ಭಾವಿಸುತ್ತಿದ್ದರು. ಇವರಲ್ಲಿ ಗಂಡ ಸತ್ತರೆ ತಾಳಿ ಧರಿಸುವುದು ಅಂದಿಗೇ ಕಡೆ. ಮತ್ತೆಂದೂ ತಾಳಿ ಧರಿಸುವುದಿಲ್ಲ ಮತ್ತು ಸತ್ತವರಿಗೆ ಕರ್ಪೂರವನ್ನು ಬಳಸುವುದಿಲ್ಲ. ಇವರು ಸತ್ತ ಪ್ರಾಣಿಯ ಮಾಂಸವನ್ನು ತಿನ್ನುತ್ತಾರೆ. ಮದುವೆಯಲ್ಲಿ ವಧುವಿಗೆ ತಾಳಿಯನ್ನು ಸೋದರ ಮಾವನ ಮಗನಿಂದ ಕಟ್ಟಿಸಲಾಗುತ್ತದೆ. ಆರ್.ಎಸ್. ಮಟೀರ್ ಹೇಳುವ ಪ್ರಕಾರ ಹಿಂದೆ ಇವರನ್ನು ಹಸು ಎಮ್ಮೆಗಳಂತೆ ಮಾರಾಟ ಮಾಡುತ್ತಿದ್ದರು. ಚಾವಟಿಯಿಂದ ಹೊಡೆದು ಇಡೀ ದಿನ ದುಡಿಸಿಕೊಳ್ಳುತ್ತಿದ್ದರು ಎಂಬ ಮಾಹಿತಿಯನ್ನು ದಾಖಲಿಸಿದ್ದಾರೆ.

ಪುರಾತನ ಬುಡಕಟ್ಟುಗಳಲ್ಲಿ ಒಂದಾದ 'ಸವರರು' ಯಾವಾಗಲೂ ತಾವು ಇತರರಿಗಿಂತ ಭಿನ್ನವೆಂದು ಭಾವಿಸಿರುತ್ತಾರೆ. ಇವರು ಪ್ರಧಾನವಾಗಿ ಎಮ್ಮೆ ಮಾಂಸವನ್ನು ಬಳಸುತ್ತಾರೆ. ಆದರೆ ಹಸುವಿನ ಮಾಂಸವನ್ನು ಉಪಯೋಗಿಸುವುದಿಲ್ಲ. ಹೆಚ್ಚಾದ ಎಮ್ಮೆಯ ಮಾಂಸವನ್ನು ಬಿಸಿಲಿನಲ್ಲಿ ಒಣಗಿಸಿ ಶೇಖರಿಸಿಟ್ಟು ಬಳಸುತ್ತಾರೆ. ಹಾಗೆಯೆ ಪ್ರತಿಯೊಬ್ಬ ಗಂಡಸೂ ಸಾಮಾನ್ಯವಾಗಿ ಒಂದು ಬೆಳ್ಳಿಯ ಉಂಗುರವನ್ನು ಬಲಗಡೆಯ ಮೂಗಿನ ಹೊಳ್ಳೆಯಲ್ಲಿ ಧರಿಸುತ್ತಾರೆ. ಒಬ್ಬ ವ್ಯಕ್ತಿ ಮೂರರಿಂದ ನಾಲ್ಕು ಮದುವೆಗಳನ್ನು ಆಗಬಹುದು. ಒಬ್ಬ ಹೆಂಗಸು ಮತ್ತೊಬ್ಬ ಗಂಡಸನ್ನು ಬಯಸಿದರೆ ಬಿಟ್ಟು ಹೋಗಬಹುದು. ಅವಳ ಪತಿ ಅವಳನ್ನು ತಡೆಯುವಂತಿಲ್ಲ. ಅದಕ್ಕೆ ಬದಲಾಗಿ ಆಕೆ ಒಂದು ಎಮ್ಮೆ ಮತ್ತು ಒಂದು ಹಂದಿಯನ್ನು ಮೊದಲ ಪತಿಗೆ ಕೊಡಬೇಕು. ಇವರ ವಿವಾಹದ ಸಂದರ್ಭದಲ್ಲಿ ಮಧ್ಯ ಕಡ್ಡಾಯವಾಗಿರುತ್ತದೆ. ಹುಡುಗಿಯ ನೋಡಲು ಹೋದಾಗಲೇ ಒಂದು ಕೊಡ ಮಧ್ಯವನ್ನು ತೆಗೆದುಕೊಂಡು ಹೋಗಬೇಕು. ಮೂರನೇ ಭೇಟಿಯಲ್ಲಿ ಅರಿಶಿಣ ಲೇಪಿಸಿರುವ ಮೂರು ಮಡಕೆಗಳಲ್ಲಿ ಮಧ್ಯ ಹಾಗೂ ಒಂದಿಷ್ಟು ಅರಿಶಿಣವನ್ನು ತೆಗೆದುಕೊಂಡು ಹೋಗಬೇಕು. ಗಂಡಿನ ಕಡೆಯವರು ಮಧ್ಯವನ್ನು ಸ್ವೀಕರಿಸುವುದೇ ಮದುವೆಯ ಒಪ್ಪಿಗೆಯ ಸಂಕೇತ. ತಿಥಿಗೆ ಕೋಣ ಕಡಿದು ಮಾಂಸದಡುಗೆ ಮಾಡುತ್ತಾರೆ. ಇವರಲ್ಲಿ ಬಹುಪಾಲು ನರಬಲಿ ಹಬ್ಬಗಳು ನಡೆದಿವೆ ಎನ್ನುತ್ತಾರೆ. ಇದೇ ರೀತಿ ತೋಡರಲ್ಲಿಯೂ ಎಮ್ಮೆ ಪ್ರಧಾನ ಪಾತ್ರವನ್ನು

ವಹಿಸುತ್ತದೆ. ಇವರು ಎಮ್ಮೆಯನ್ನು ಪೂಜಿಸುತ್ತಾರೆ ಮತ್ತು ಎಮ್ಮೆಯನ್ನು ಆಹಾರವಾಗಿಯೂ ಉಪಯೋಗಿಸುತ್ತಾರೆ. ಇವರಲ್ಲಿ ಹೆಣ್ಣು ಭ್ರೂಣಹತ್ಯೆ ಸಾಮಾನ್ಯವಾಗಿತ್ತು. ಇವರ ಮದುವೆ ಪದ್ಧತಿಯ ವಿಷೇಶವೆಂದರೆ ವರನಿಗೆ ಬಿಲ್ಲು ಬಾಣಗಳನ್ನು ಕೊಡುವುದರ ಮೂಲಕ ಮದುವೆಯಾಗುತ್ತಾರೆ.

ಟ್ರಾವಂಕೂರ್ ಪ್ರದೇಶದ ಹೆಂಡ ಇಳಿಸುವ ಜಾತಿಯಾದ 'ತಿಯನ್ ಅಥವಾ ಇಳುವನ್ ಅಥವಾ 'ಈಳವರು' ಎಂಬ ಜಾತಿ ಸಿಮೋನ್‌ನಿಂದ ಬಂದವರೆಂದು ಹೇಳಲಾಗುತ್ತದೆ. ಭೂ ದಾಖಲೆಗಳಲ್ಲಿ ಇವರನ್ನು 'ಈಳವರು' ಎಂದು ನಮೂದಿಸಲಾಗಿದೆ. ಇವರಲ್ಲಿ ಪತಿಯು ಪತ್ನಿಯನ್ನು ತೊರೆಯಲು ಬಯಸಿದರೆ ಕುಲಸ್ಥರು ಅಂದಾಜು ಮಾಡುವಷ್ಟು ಮದುವೆಯ ವೆಚ್ಚವನ್ನು ಪತ್ನಿಗೆ ಹಿಂತಿರುಗಿಸಬೇಕಾಗುತ್ತದೆ. ಅದೇ ರೀತಿ ಪತ್ನಿ ಪತಿಯನ್ನು ತ್ಯಜಿಸಲು ಬಯಸಿದರೆ ಮದುವೆಗೆ ಆತನು ಮಾಡಿದ ವೆಚ್ಚವನ್ನು ಪಾವತಿಸಬೇಕಾಗುತ್ತದೆ. ಸಾಯುತ್ತಿರುವ ವ್ಯಕ್ತಿ ಮಂಚದ ಮೇಲೆ ಮಲಗಿದರೆ ಅಶುಭ ಎಂದು ಭಾವಿಸಲಾಗುತ್ತದೆ. ಕೊನೆಯುಸಿರೆಳೆಯುವ ಮುನ್ನ ಗಂಜಿ ನೀರನ್ನು ಕುಡಿಸುತ್ತಾರೆ. ಇವರಲ್ಲಿ ಸೂತಕವಿರುವ ಎಲ್ಲರೂ ತಲೆ ಬೋಳಿಸಿಕೊಳ್ಳುತ್ತಾರೆ. ಸತ್ತ ವ್ಯಕ್ತಿಯ ಅಸ್ತಿಯನ್ನು ಊರೆಲ್ಲ ಮೆರವಣಿಗೆ ಮಾಡಿ ನಂತರ ನದಿಯಲ್ಲಿ ಬಿಡುತ್ತಾರೆ. ಇವರು ಚಿತೆಗೆ ಬೇವಿನ ಸೌದೆಗಳನ್ನು ಬಳಸುತ್ತಾರೆ.

ಹೀಗೆ ಈ ಏಳು ಸಂಪುಟಗಳಲ್ಲಿರುವ ಮುನ್ನೂರು ಜಾತಿ, ಬುಡಕಟ್ಟುಗಳಲ್ಲೂ ತಮ್ಮದೇ ಆದ ವಿಷೇಶ ಗುಣಲಕ್ಷಣಗಳಿವೆ. ಪ್ರತಿ ಜಾತಿಯ ಆಚರಣೆ, ನಂಬಿಕೆ, ಉಡುಗೆ ತೊಡುಗೆ, ಆಹಾರ ಮುಂತಾದವುಗಳ ಸಣ್ಣ ಸಣ್ಣ ವಿವರಗಳನ್ನೂ ಬಿಡದೆ ದಾಖಲಿಸಲಾಗಿದೆ. ಹೀಗಾಗಿ ಈ ಸಂಪುಟಗಳನ್ನು ಇಂದು ಸೂಕ್ಷ್ಮವಾದ ಓದಿಗೆ ಒಳಪಡಿಸಿದರೆ ಒಬ್ಬ ವ್ಯಕ್ತಿಯಿಂದ ಅಥವಾ ಇಬ್ಬರು ವ್ಯಕ್ತಿಗಳಿಂದ ಈ ಕೆಲಸ ಸಾಧ್ಯವೇ ಎಂಬ ಅನುಮಾನ ಹುಟ್ಟದಿರದು. ಎಡ್ಗರ್ ಥರ್ಸ್ಟನ್ ಒಬ್ಬ ಅಧಿಕಾರಿಯಾಗಿ, ದಕ್ಷಿಣ ಭಾರತದಂಥ ವಿಸ್ತಾರವಾದ ಭೂಪ್ರದೇಶವನ್ನು ತನ್ನ ಸಮೀಕ್ಷೆಗೆ ಆಯ್ಕೆ ಮಾಡಿಕೊಂಡು ಕೆಲಸ ಮಾಡಿರುವುದು ಸೋಜಿಗದ ಸಂಗತಿ. ಇದನ್ನು ಸಮೀಕ್ಷೆ ಎಂದು ಕರೆಯಲಾಗಿದೆ. ಹಾಗೆ ನೋಡಿದರೆ ಥರ್ಸ್ಟನ್ ಕೊಡುವ ವಿವರಗಳು, ಕಲೆಹಾಕಿದ ಮಾಹಿತಿ ಮತ್ತು ಒಂದೇ ರೀತಿಯ ಮಾಹಿತಿಗಳು ಬೇರೆ ಬೇರೆ ರೀತಿಯ ಜನರು ಹಾಗೂ ಭೂ ಪ್ರದೇಶಗಳಲ್ಲಿ ಬಳಕೆಗೊಳ್ಳುತ್ತಿರುವ ರೀತಿ, ವಿವಿಧ ವಿದ್ವಾಂಸರ ಅಭಿಪ್ರಾಯಗಳು, ವಿವಿಧ ಸಮುದಾಯಗಳಲ್ಲಿನ ಆಚರಣೆಗಳ ಭಿನ್ನತೆ, ಸಾಮ್ಯತೆ ಇತ್ಯಾದಿಗಳನ್ನು ಗಮನಿಸಿದರೆ ನಿಜಕ್ಕೂ ಇದೊಂದು ಬಹಳ ಗಂಭೀರವಾದ

ಸಂಶೋಧನಾ ಬರವಣಿಗೆಯೂ ಆಗಿದೆ. ಇಂತಹ ಮಹತ್ವದ ಸಂಪುಟಗಳು ಇಲ್ಲಿಯವರೆಗೂ ಕನ್ನಡದಲ್ಲಿ ಲಭ್ಯವಿಲ್ಲದಿದ್ದದ್ದು ಕನ್ನಡ ಸಂಶೋಧನೆಯ ಮಟ್ಟಿಗೆ ಬಹುದೊಡ್ಡ ಕೊರತೆಯಾಗಿಯೇ ಉಳಿದಿತ್ತು. ಈಗ ಡಾ. ಕೆ. ಮರುಳಸಿದ್ಧಪ್ಪ ಅವರು, ಡಾ. ಬಂಜಗೆರೆ ಜಯಪ್ರಕಾಶ್ ಅವರ ನೇತೃತ್ವದಲ್ಲಿ ಈ ಸಂಪುಟಗಳನ್ನು ಸಮರ್ಥವಾಗಿ ಅನುವಾದಿಸಿ ಕನ್ನಡ ಸಂಶೋಧನೆಗಿದ್ದ ಈ ಕೊರತೆಯನ್ನು ನೀಗಿಸಿದ್ದಾರೆ. ಇನ್ನು ಮುಂದೆ ಈ ಸಂಪುಟಗಳು ಮಾನವಶಾಸ್ತ್ರೀಯ, ಕುಲಶಾಸ್ತ್ರೀಯ, ಸಮಾಜಶಾಸ್ತ್ರೀಯ, ಅಂತರ್‌ಶಿಸ್ತೀಯ, ಬಹುಶಿಸ್ತೀಯ ಹಾಗೂ ತಳಿ ವಿಜ್ಞಾನಕ್ಕೆ ಸಂಬಂಧಿಸಿದ ಸಂಶೋಧನೆಗಳಿಗೆ ಬಹುಮುಖ್ಯ ಆಕರ ಗ್ರಂಥಗಳಾಗಿ ಒದಗಿ ಬರುವುದರಲ್ಲಿ ಯಾವುದೇ ಸಂಶಯವಿಲ್ಲವೆಂದು ಹೇಳಬಹುದು.

ಸ್ತ್ರೀ ಸಂವೇದನೆಯ ಭಿನ್ನ ನೆಲೆಗಳು (ಸಂಕ್ರಾಂತಿ, ತಲೆದಂಡ, ಮಹಾಚೈತ್ರ ಮತ್ತು ಶಿವರಾತ್ರಿ ನಾಟಕಗಳನ್ನು ಅನುಲಕ್ಷಿಸಿ)

ಡಾ. ಮಂಜುನಾಥ ಪಾಳ್ಯ

ಮಹಾಚೈತ್ರ, ತಲೆದಂಡ, ಸಂಕ್ರಾಂತಿ, ಶಿವರಾತ್ರಿ ನಾಟಕಗಳ ವಸ್ತು ಹನ್ನೆರಡನೇ ಶತಮಾನದಲ್ಲಿ ಕರ್ನಾಟಕದಲ್ಲಿ ಜರುಗಿದ ಶರಣ ಚಳುವಳಿಗೆ ಸಂಬಂಧಿಸಿದವುಗಳಾಗಿವೆ. ಒಂದು ಚಾರಿತ್ರಿಕ ಘಟ್ಟದಲ್ಲಿ ಉಂಟಾದ ಸಾಮಾಜಿಕ, ರಾಜಕೀಯ, ಧಾರ್ಮಿಕ ಮತ್ತು ಸಾಂಸ್ಕೃತಿಕ ಸಂಘರ್ಷ ಹಾಗೂ ತಲ್ಲಣಗಳು ಹಲವಾರು ಸಾಹಿತಿಗಳ ಸಾಹಿತ್ಯಕ್ಕೆ ಅಡಿಗಲ್ಲಾಗಿದೆ. "ನೋಯುವ ಹಲ್ಲಿಗೆ ನಾಲಿಗೆ ಮತ್ತೆ ಮತ್ತೆ ಹೊರಳುವಂತೆ ಪ್ರತಿಯೊಬ್ಬ ಕನ್ನಡಿಗ ಮತ್ತೆ ಮತ್ತೆ ಆ ಯುಗದ ಬೆರಗುಗೊಳಿಸುವ ಪ್ರತಿಭೆಗೆ, ಆ ಉತ್ಸಾಹಕ್ಕೆ ಮೌಲಿಕ ಪ್ರಶ್ನೆಗಳನ್ನು ಕೇಳುವ ಎದೆಗಾರಿಕೆಗೆ, ಗೆಲುವಿಗೆ, ನೋವಿಗೆ ಮರಳುವುದು, ಅದನ್ನು ಹೊಸ ಸಂದರ್ಭದಲ್ಲಿ ಅರ್ಥೈಸಲು ಯತ್ನಿಸುವ ಅನಿವಾರ್ಯ" – ಎಂಬ ಗಿರೀಶ್ ಕಾರ್ನಾಡರ (ಕಾರ್ನಾಡ ೧೯೯೪) ಮಾತು ವೀರಶೈವ ಕ್ರಾಂತಿಯು ಕನ್ನಡ ಲೇಖಕರನ್ನು ಹೇಗೆ ಆಕರ್ಷಿದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ.

ಈ ನಾಲ್ಕು ನಾಟಕಗಳಲ್ಲಿ ಪ್ರಭುತ್ವದ ವಿಭಿನ್ನ ಆಯಾಮಗಳು, ಆಶಯಗಳು, ಯಜಮಾನ್ಯದ ನೆಲೆಗಳು ಅಧಿಕಾರದ ನಿಯಂತ್ರಕ ಶಕ್ತಿ ಮತ್ತು ಅಧಿಕಾರದ ವಿರೋಧ ಇವುಗಳ ಜೊತೆಗೆ ಲಿಂಗ, ಜಾತಿ, ಪುರೋಹಿತಶಾಹಿ, ಕುಟುಂಬ, ವಿವಾಹ ಮುಂತಾದ ಅಧಿಕಾರದ ಸಾಂದರ್ಭಿಕ ನೆಲೆಗಳ ಸ್ವರೂಪವನ್ನು ಗುರುತಿಸಬಹುದು. ಧಾರ್ಮಿಕ ಮತ್ತು ರಾಜಕೀಯ ವಿಪ್ಲವಗಳು – ಸಾಂಸ್ಕೃತಿಕ ಪಲ್ಲಟಗಳು, ಕಾಂತ್ರಿಯ ವೈಫಲ್ಯ ಇವುಗಳ ವಿಭಿನ್ನ ಪರಿಶೀಲನೆಗಳು ಈ ನಾಟಕಗಳ ಕೇಂದ್ರವಾಗಿದೆ. ಹಾಗೆಯೇ ಈ ನಾಟಕಗಳಲ್ಲಿ ಕಾಣಿಸಿಕೊಳ್ಳುವ ಪ್ರಮುಖವಾದ ಸ್ತ್ರೀ ಪಾತ್ರಗಳು ಭಿನ್ನನೆಲೆಯಲ್ಲಿ ಅಭಿವ್ಯಕ್ತಿಗೊಂಡು ತಮ್ಮದೇ ಆದ ವೈಶಿಷ್ಟ ಹಾಗೂ ಸೀಮಿತತೆಯನ್ನು ಹೊಂದಿವೆ. ಈ ಹಿನ್ನೆಲೆಯಲ್ಲಿ ನಾನು ಸಂಕ್ರಾಂತಿಯ – ಉಷಾ, ತಲೆದಂಡ – ಕಲಾವತಿ,

ಮಹಾಚೈತ್ರ - ಮಾಧವಿ ಹಾಗೂ ಶಿವರಾತ್ರಿಯ - ಹುಚ್ಚಿ (ಕಲ್ಯಾಣದ ನಗರ ದೇವತೆಗಳ) ಸಾಂವತ್ರಿ, ಕಾಮಾಕ್ಷಿ ಮುಂತಾದ ಸ್ತ್ರೀ ಪಾತ್ರಗಳು ನಾಟಕದಲ್ಲಿ ಬಿಂಬಿತವಾಗಿರುವ ನೆಲೆಗಳನ್ನು ಗ್ರಹಿಸುವಲ್ಲಿಗೆ ನನ್ನ ಈ ಪ್ರಬಂಧದ ವ್ಯಾಪ್ತಿ ಒಳಗೊಂಡಿದೆ. ಈ ನಾಲ್ಕು ನಾಟಕಗಳಲ್ಲಿ ಕಂಡುಬರುವ ಸ್ತ್ರೀ ಪಾತ್ರಗಳ ಸಂವೇದನೆಯನ್ನು ಗಮನಿಸಿದಾಗ ವಿಭಿನ್ನ ನೆಲೆಯ ಸ್ತ್ರೀ ಸಂವೇದನೆಗಳನ್ನು ಗ್ರಹಿಸಬಹುದಾಗಿದೆ. ಅವುಗಳನ್ನು ಈ ಕೆಳಕಂಡಂತೆ ವಿಭಾಗಿಸಿಕೊಳ್ಳಬಹುದು.

–ಕ್ರಾಂತಿಗೆ ಪೂರಕವಾಗಿ ಕಾಣಿಸಿಕೊಳ್ಳುವ ಸ್ತ್ರೀ ಸಂವೇದನೆ.

–ಕ್ರಾಂತಿಗೆ ಹೊಸ ಆಯಾಮವನ್ನು ಕೊಟ್ಟು ಕ್ರಾಂತಿಯ ಸೋಲಿಗೆ ಕಾರಣವಾದ ಸ್ತ್ರೀಸಂವೇದನೆ.

–ಕ್ರಾಂತಿಯಲ್ಲಿ ತಮ್ಮ ಅಸ್ಥಿತ್ವವನ್ನು ಪ್ರಮುಖವಾಗಿ ಪ್ರತಿಪಾದಿಸಿದ ಸ್ತ್ರೀ ಸಂವೇದನೆ.

ಮಹಾಚೈತ್ರ ನಾಟಕದಲ್ಲಿ ಕಾಣಿಸಿಕೊಳ್ಳುವ ಅಂತರ್ ಜಾತಿಯ ವಿವಾಹವನ್ನು ಬಸವಣ್ಣನೇ ನಿಂತು ಮಾಡಿಸುತ್ತಾನೆ. ಆನಂತರದಲ್ಲಿ ಇದು ಧರ್ಮ ಮತ್ತು ರಾಜಕೀಯ ಶಕ್ತಿಗಳ ಕ್ರೌರ್ಯಕ್ಕೆ ಸಿಕ್ಕಿ ರಕ್ತಪಾತ ಹಿಂಸೆಗೆ ಕಾರಣವಾಗುತ್ತದೆ. ಇಲ್ಲಿ ಕಾಣಿಸಿಕೊಳ್ಳುವ ಮಾಧವಿ ಮೇಲ್ವರ್ಗದ ಹೆಣ್ಣಾಗಿ ಕಾಣಿಸಿಕೊಂಡು ಜಾತಿ. ಧರ್ಮಕ್ಕಿರುವ ಹೆಣ್ಣಿಗೆ ಮುಕ್ತ ಪ್ರೇಮ ಮಾತ್ರ ಶಾಶ್ವತವಾದದ್ದು ಎಂಬ ಚಿಂತನೆಯ ಪ್ರತೀಕವಾಗಿಯಷ್ಟೇ ಬಿಂಬಿತವಾಗಿದ್ದು ಕ್ರಾಂತಿಯಲ್ಲಿ ಒಬ್ಬ ಪ್ರಮುಖ ಪಾತ್ರವಾಗಿಯಷ್ಟೇ ಇಲ್ಲಿ ಮಾಧವಿ ಚಿತ್ರಿತಳಾಗಿದ್ದಾಳೆ. ಯಾವುದೇ ಒಂದು ದೊಡ್ಡ ಬದಲಾವಣೆಗೆ ಕೇಂದ್ರಬಿಂದುವಾಗದೆ ಪೂರಕವಾಗಿ ಕಾಣಿಸಿಕೊಳ್ಳುತ್ತಾಳೆ.

ತಲೆದಂಡ ನಾಟಕದಲ್ಲಿ ಕಾಣಿಸಿಕೊಳ್ಳುವ 'ಕಲಾವತಿ' ಪಾತ್ರ ಹೆಣ್ಣು ಗಂಡಿನ ಸಂಬಂಧದ ಪ್ರೇಮ-ಕಾಮದ ಸಂಬಂಧವಾಗಿರದೆ ಹಿರಿಯರ ಪ್ರತಿಷ್ಠೆ, ಹುಂಬುತನ ಹಟಮಾರಿತನದ ಬಿಕ್ಕಟ್ಟುಗಳಿಗೆ ಕಾರಣವಾಗುತ್ತದೆ ಎಂಬುದಕ್ಕೆ ಸಾಕ್ಷಿಯಾಗಿದೆ. ಇಲ್ಲಿನ ಕಲಾವತಿ ಪಾತ್ರವು ಮೇಲ್ವರ್ಗದ ಹೆಣ್ಣಾಗಿ ಕೆಳವರ್ಗದ ಗಂಡಿನ ಜೊತೆ ಪ್ರೇಮ ಸಾಧಿಸಿ ಒಂದು ಸಾಮಾಜಿಕ ಕ್ರಾಂತಿಗೆ ಮುನ್ನುಡಿ ಇಟ್ಟ ಮುಗ್ಧ ಹೆಣ್ಣಾಗಿ ಕಾಣಿಸುತ್ತಾಳೆ. ಇವಳೂ ಅಷ್ಟೇ ಒಂದು ಸಾಮಾಜಿಕ ಕ್ರಾಂತಿಗೆ ಪೂರಕಪಾತ್ರವಾಗಿಯಷ್ಟೇ ಕಾಣಿಸಿಕೊಳ್ಳುತ್ತಾಳೆ. ಇದು ಕರ್ನಾಡರ ತಲೆದಂಡದಲ್ಲಿನ ಕಲಾವತಿ ಪಾತ್ರದ ಸೀಮಿತತೆ. ಈ ಎರಡೂ ನಾಟಕಗಳಲ್ಲಿನ ಪ್ರಮುಖ ಸ್ತ್ರೀಪಾತ್ರಗಳಲ್ಲಿ ಕ್ರಾಂತಿಗೆ ಪೂರಕವಾಗಿ ಕಾಣಿಸಿಕೊಳ್ಳುವ ಸ್ತ್ರೀ ಸಂವೇದನೆಯನ್ನು ಗ್ರಹಿಸಬಹುದು.

ಸಂಕ್ರಾಂತಿ ನಾಟಕದಲ್ಲಿ ಕಾಣಿಸಿಕೊಳ್ಳುವ ಪ್ರಮುಖವಾದ ಏಕೈಕ ಸ್ತ್ರೀ ಪಾತ್ರ ಉಷಾಳದು.

ಇಲ್ಲಿನ ಉಷಾ ಕೇವಲ ಪೂರಕಪಾತ್ರವಾಗಿರದೆ ಅತ್ಯಂತ ಪ್ರಮುಖ ಹಾಗೂ ನಿರ್ಣಾಯಕ ಪಾತ್ರವಾಗಿದ್ದಾಳೆ. ಈ ಮೂಲಕ ಸಂಕ್ರಾಂತಿ ನಾಟಕದಲ್ಲಿನ ಹೆಣ್ಣು ಗಂಡಿನ ನೆಳಲಲ್ಲಿ ಬದುಕುವ ಆದರ್ಶ ಸ್ತ್ರೀ ಪಾತ್ರವಾಗಿರದೆ ತನ್ನ ಭಾವನೆಗಳಿಗಾಗಿ ಗಂಡನ್ನು ಕೆಣಕಿ ಅವನಲ್ಲಿರುವ ಪುರುಷತ್ವವನ್ನು ಸೂರೆಗೈದು ಕೊನೆಗೆ ಅವನ ಸಾವಿಗೆ ಕಾರಣವಾಗುತ್ತಾಳೆ. ಈ ನಾಟಕದಲ್ಲಿ ಉಷಾ–ರುದ್ರರ ಪ್ರೇಮ, ಕಾಮದ ಪ್ರಕರಣವಾಗಿ ಮಾರ್ಪಟ್ಟು ರಾಜಪ್ರಭುತ್ವ, ಪುರೋಹಿತಶಾಹಿಯ ಯಾಜಮಾನ್ಯ ಹಾಗೂ ಧಾರ್ಮಿಕ ಪ್ರಭುತ್ವದ ನಡುವಿನ ಸಂಘರ್ಷಕ್ಕೆ ವೇದಿಕೆಯಾಗುತ್ತದೆ. ಈ ಸ್ಥಿತಿಗೆ ಇಲ್ಲಿ ರುದ್ರನಿಗಿಂತ ಪ್ರಮುಖವಾದಗಳು ಉಷಾ, ರುದ್ರ ಬಸವಣ್ಣನ ಆದರ್ಶಗಳ ಪ್ರತೀಕವಾಗಿ ಮೇಲ್ವರ್ಗಕ್ಕೂ ಹಾಗೂ ಉಷಾ ಶೂದ್ರೀಕರಣಕ್ಕೆ ಪಲ್ಲಟಗೊಳ್ಳುವ ಸಂಕ್ರಮಣ ಸ್ಥಿತಿ ಕಂಡುಬರುತ್ತದೆ. ಉಷಾ ಶೂದ್ರಶಕ್ತಿಯ ಚೈತನ್ಯ ಕೆಣಕಿ ಅಲ್ಲಿ ತನನ್ನು ಲೀನಗೊಳಿಸಿಕೊಂಡು ತನ್ನನ್ನು ಗುರುತಿಸಿಕೊಂಡರೂ ಪುರೋಹಿತಶಾಹಿ ಯಾಜಮಾನ್ಯ ಹಾಗೂ ಪ್ರಭುತ್ವದ ಹಿತಾಸಕ್ತಿಯನ್ನು ಎತ್ತಿ ಹಿಡಿಯುತ್ತಾಳೆ. ಇದೇ ಈ ನಾಟಕದಲ್ಲಿನ ಪ್ರಮುಖವಾದ ಅಂಶ. ಪ್ರಾರಂಭದಲ್ಲಿ ಶುದ್ಧ ಪ್ರೇಮ, ಪುರೋಹಿತಶಾಹಿಯ ದಿಕ್ಕಾರ, ಪ್ರಭುತ್ವದ ದಿಕ್ಕಾರಗಳ ಪ್ರತೀಕವಾಗಿ ಕಾಣಿಸಿಕೊಳ್ಳುವ ಉಷಾಳ ಪಾತ್ರ ಬರುಬರುತ್ತ ತನ್ನ ಆಸೆಗಳು ಒಂದೊಂದಾಗಿ ಈಡೇರುತ್ತಿದ್ದಂತೆ ಹೋರಾಟದ ನೆಲೆಯಿಂದ ಸೇಡಿನ ನೆಲೆಗೆ ಹೊರಳುವುದು ಆಶ್ಚರ್ಯವಾಗಿ ಕಾಣುತ್ತದೆ. ಇದಕ್ಕೆ ಹಲವಾರು ರೀತಿಯ ವಿಮರ್ಶಾದೃಷ್ಟಿಕೋನವನ್ನು ನೀಡಲಾಗಿದೆ. ಧರ್ಮ, ಪ್ರೇಮ ಮತ್ತು ಭಾವನೆಗಳ ನಡುವಿನ ಬಿಕ್ಕಟ್ಟು, ಜಾತಿ ಹಾಗೂ ಲಿಂಗ ರಾಜಕಾರಣಕ್ಕೆ ಹೇಗೆ ಕಾರಣವಾಗುತ್ತದೆ ಎಂಬುದು ಲಂಕೇಶರ 'ಸಂಕ್ರಾಂತಿ' ನಾಟಕದಲ್ಲಿ ಕಂಡುಬರುವ ಪ್ರಮುಖ ಅಂಶಗಳಲ್ಲಿ ಒಂದಾಗಿದೆ. "ಒಂದು ಬದಲಾಗುತ್ತಿರುವ ಸಮಾಜದಲ್ಲಿ ಖಿಡಿಚಿಟಿಣಿಣುಂಟಿಚಿಟ ರಿಜಡಿಣುಂಜ ನಲ್ಲಿ (ಸಂಕ್ರಮಣದ ಕಾಲದಲ್ಲಿ) ನಿಮ್ಮ ಧರ್ಮದ ಕಲ್ಪನೆ ಮತ್ತು ಪ್ರೇಮದ ಕಲ್ಪನೆ ಹ್ಯಾಗೆ – ಭಾವವೂ ಕೂಡ ಬದಲಾವಣೆಯನ್ನು ಪಡೆಯದೇ ಇದ್ರೆ ಒಂದು ದುರಂತಕ್ಕೆ ಎಡೆಮಾಡಿಕೊಡುತ್ತೆ ಅಂತ. ಅದು ಬಸವಣ್ಣನ ಬಗ್ಗೆಯೂ ಅಲ್ಲ, ಬಿಜ್ಜಳನ ಬಗ್ಗೆಯೂ ಅಲ್ಲ. ನೀವು ಪ್ರೇಮ ಮಾಡುವುದು ಕೂಡ ನಿಮ್ಮ ಜಾತಿಯ ಅಹಂಕಾರದಿಂದ ಇರಬಹುದು. ಧರ್ಮದ ಅಹಂಕಾರದಿಂದ ಇರಬಹುದು, ನೀವು ಧರ್ಮವನ್ನು ಒಪ್ಪೋದು ಕೂಡಾ ಇನ್ಯಾವುದೋ ಒಂದು ನೆಪದಲ್ಲಿ ಇರಬಹುದು. ಎನ್ನುವಂಥಾ ಒಂದು ವಿಷಯದಲ್ಲಿ ನಾನು ಅಲ್ಲಿಟ್ಟಿದ್ದೇನೆ." (ರಾಘವೇಂದ್ರ ಪಾಟೀಲ :ಸಂ, ಬೋದಿಲೇರನ ಸಖ, ಲಂಕೇಶ್ ನೆನಪಿನ ಸಂಪುಟ, ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ, ಚಿತ್ರದುರ್ಗ–೨೦೦೧, ಪುಟ ೧೩೦) ಎಂದು

ಲಂಕೇಶರೇ ಸಂಕ್ರಾಂತಿ ನಾಟಕದ ಬಗ್ಗೆ ಹೇಳುತ್ತಾರೆ. ಆದ್ದರಿಂದಲೇ ಇಲ್ಲಿ ಹೆಣ್ಣುಗಂಡಿನ ಸಂಬಂಧ ಕೇವಲ ರೂಢಿಗತವಾಗಿರದೆ ಜಾತಿ ವ್ಯವಸ್ಥೆಯ ಕ್ರೌರ್ಯವನ್ನು ಮಾತ್ರ ಪ್ರತಿಬಿಂಬಿಸದೆ ಪ್ರಕೃತಿ, ಧರ್ಮ, ಕಾಮಪ್ರೇಮಗಳ ಪ್ರತೀಕವಾಗಿದೆ. ಇಲ್ಲಿನ ಉಷಾಳ ಪಾತ್ರ ಕೇವಲ ಆದರ್ಶ ಪ್ರೇಮದ ಹೆಣ್ಣಷ್ಟೇ ಆಗಿರದೆ ಲಿಂಗ ಸಂಬಂಧಕ್ಕೆ (ಬಯಕೆಗೆ) ಹೆಚ್ಚು ಬಲಕೊಟ್ಟು ಕಾಮದ ಸೂಕ್ಷ್ಮತೆಯನ್ನು ಬಿಂಬಿಸುತ್ತದೆ. ಅವಳ ಪ್ರೇಮ ಮುಖ್ಯವಾಗಿ ಭೌತಿಕವಾದದ್ದು ಮಾನಸಿಕವಾದದ್ದಲ್ಲ. ಮನುಷ್ಯನ ದೇಹದಲ್ಲಿ ಪಲ್ಲಟಗೊಳ್ಳುವ ತರ್ಕದಿಂದ ಉದ್ಭವಿಸಿದ ಅವಳ ಪ್ರೇಮ ರುದ್ರನ ಶರಣತ್ವ ಸ್ಪಷ್ಟ ರೂಪ ಪಡೆಯುತ್ತಿದ್ದಂತೆ ದ್ವೇಷಕ್ಕೆ ತಿರುಗುತ್ತದೆ. ಪ್ರೀತಿಸಿದವರನ್ನು ಪೂರ್ತಿ ಪಡೆಯಲಾಗದಿದ್ದರೆ ಕೊಂದಾದರೂ ದಕ್ಕಿಸಿಕೊಳ್ಳುವ ಉಗ್ರ ಪ್ರೇಮ ಅದು ಎಂದು ಕೆಲವರು ವಿಮರ್ಶಿಸಿದ್ದಾರೆ. (ಟಿ. ರಾಮಚಂದ್ರಯ್ಯ, ವಚನ ಚಳುವಳಿ ಆಶಯಗಳ ಹಿನ್ನೆಲೆಯಲ್ಲಿ 'ತಲೆದಂಡ', 'ಸಂಕ್ರಾಂತಿ', 'ಮಹಾಚೈತ್ರ' ನಾಟಕಗಳು ಒಂದು ಅಧ್ಯಯನ ಎಂ.ಫಿಲ್ ಪದವಿಗಾಗಿ ಸಲ್ಲಿಸಿದ ಪ್ರಬಂಧ) ಆದರೆ, ಸಂಕ್ರಾಂತಿ ನಾಟಕದಲ್ಲಿಯೇ ಹೇಳುವಂತೆ, ತನ್ನ ಮತ್ತು ರುದ್ರನ ನಡುವಿನ ದೈಹಿಕ ಸಂಬಂಧ ಅದು ಪ್ರೇಮವಲ್ಲ ಬಲಾತ್ಕಾರ ಎಂದು ಘೋಷಿಸುವ ಉಷಾ ಅದಕ್ಕೆ ಈ ರೀತಿಯ ಸಮರ್ಥನೆ ನೀಡುತ್ತಾಳೆ.

ಉಷಾ : "ನನ್ನ ಬಳಿ ಮಾತನಾಡುತ್ತಿದ್ದವ ಬೇರೆ ಆತ ಮೈಮೇಲೆ ಬಿದ್ದ. ಆತ ನನಗೆ ಬೇಕಾದವನಾಗಿದ್ದ. ಆದರೆ ನಾನು ಎದ್ದು ನೋಡಿದಾಗ ಆತ ಇರಲಿಲ್ಲ. ಅಲ್ಲಿದ್ದವನು ಶರಣ ರುದ್ರ ಇದು ಅತ್ಯಾಚಾರವಲ್ಲದೆ ಮತ್ತೇನು? (ಪಿ. ಲಂಕೇಶ್ : ಸಂಕ್ರಾಂತಿ, ೧೨ನೇ ಮುದ್ರಣ, ಪತ್ರಿಕೆ ಪ್ರಕಾಶನ, ೨೦೦೨, ಪುಟ-೭೪)

ಇಲ್ಲಿ ಅವಳು ಬ್ರಾಹ್ಮಣತ್ವಕ್ಕಿಂತ ಶರಣತ್ವನ್ನು ಬಹಳವಾಗಿ ದ್ವೇಷಿಸುತ್ತಾಳೆ. ನಾಟಕದ ಕೊನೆಯಲ್ಲಿ ಕಂಡುಬರುವ ಉಷಾ ಹಾಗೂ ಬಿಜ್ಜಳನ ಮಾತುಗಳನ್ನು ಹಾಗೂ ತೀರ್ಮಾನಗಳನ್ನು ಗಮನಿಸಿದಾಗ ಪ್ರಭುತ್ವ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಾದಾಗ ಸಮಾಜದ ಕನಿಷ್ಟ ವರ್ಗದ ಮೇಲೆ ತನ್ನ ಕೋಪ, ಆಕ್ರೋಶವನ್ನು ವ್ಯಕ್ತಪಡಿಸುತ್ತದೆಯೇ ಹೊರತು ಮೇಲ್ವರ್ಗದ ಮೇಲಲ್ಲ ಎಂಬುದು ಸ್ಪಷ್ಟವಾಗುತ್ತದೆ. ಅನೇಕ ಸಂದರ್ಭಗಳಲ್ಲಿ ಮೇಲ್ವರ್ಗ ಮತ್ತು ಪ್ರಭುತ್ವಗಳು ತಮ್ಮ ಅಸ್ತಿತ್ವಕ್ಕೆ ಕಂಠಕಪ್ರಾಯವಾದಾಗ ಎರಡೂ ಒಂದಾಗಿ ಪಿತೂರಿ ನಡೆಸಿರುವುದು ಮತ್ತು ಕೆಳವರ್ಗದ ಬದಲಾಗುವ ಶಕ್ತಿಗೆ ಕುಂದುತರಲು ಹೆಣ್ಣನ್ನು ದಾಳವಾಗಿ ಬಳಸುವ ರಾಜತಾಂತ್ರಿಕ ಕುತಂತ್ರವನ್ನು ಹೆಣೆದಿರುವುದು ಇತಿಹಾಸದಲ್ಲಷ್ಟೇ ಅಲ್ಲದೆ ಪ್ರಸ್ತುತ ವ್ಯವಸ್ಥೆಯಲ್ಲಿಯೂ ಕಂಡುಬರುತ್ತದೆ. ಅಂತಹ ಒಂದು ಚಿತ್ರಣ

ಸಂಕ್ರಾಂತಿಯಲ್ಲಿಯೂ ಬಿಂಬಿತವಾಗಿದೆ. ಮೇಲ್ವರ್ಗದ ಹೆಣ್ಣಾದ ಉಷಾಳನ್ನು ಬಿಜ್ಜಳ ದಾಳವಾಗಿ ಬಳಸಿದ್ದ ಮತ್ತು ಅದಕ್ಕೆ ಪುಷ್ಟಿಯಾಗಿ ಉಷಾಳ ವರ್ತನೆಯೂ ನಾಟಕದ ಕೊನೆಯಲ್ಲಿ ವ್ಯಕ್ತವಾಗುತ್ತದೆ. ಇಲ್ಲಿ ಉಷಾ ಮೇಲ್ವರ್ಗದ ಹೆಣ್ಣಾಗಿ ಸಾಮಾಜಿಕ ಸಮಾನತೆಗೆ ಹೋರಾಟ ನಡೆಸಿದ ಬಸವಣ್ಣ ಚಳುವಳಿಗೆ ದಿವ್ಯಶಕ್ತಿಯಂತೆ ಕಂಡುಬರುವ ಶೂದ್ರ ರುದ್ರನ ಅಂತಃಸತ್ವವನ್ನು ಕದಡಿ ಅವನನ್ನು ಕಾಮದ ಬಲೆಯಲ್ಲಿ ಕೆಡವಿ ಕೊನೆಗೆ ಅವನ ತಲೆದಂಡವನ್ನು ಪ್ರೇಮದ ಕಾಣಿಕೆಯೆಂಬಂತೆ ಪಡೆಯುತ್ತಾಳೆ. ಇದಕ್ಕೆ ನಾಟಕದಲ್ಲಿನ ಈ ಕೆಳಗಿನ ಸಾಲುಗಳು ಸಾಕ್ಷಿಯಾಗಿದೆ.

ಬಿಜ್ಜಳ : (ಅತ್ಯುತ್ಸಾಹದಿಂದ, ಸಭೆಗೆ), ಕೇಳಿ, ನಾನು ಮತ್ತು ಬಸವಣ್ಣ ಮುಖ್ಯ ಕೆಲಸದ ಮೇಲೆ ಬಂದಿದ್ದೇವೆ. ರುದ್ರ ನಿಮ್ಮ ಮುಖಂಡ. ಈ ಊರ ಶರಣರ ಮುಂದಾಳು. ಈತನ ಮೇಲೆ ನಮ್ಮ ರಾಜ್ಯದ ಒಂದು ಪಂಗಡ ಕೆಲವು ಆಪಾದನೆ ಮಾಡಿದೆ; ನಾನು ಮಾತ್ರ ಅದನ್ನು ನಂಬಿಲ್ಲ. ಶರಣರ ಶರಣತ್ವದ ಬಗ್ಗೆ ನನಗೆ ಸಂದೇಹ ಇಲ್ಲ; ರುದ್ರನ ಶರಣತ್ವದಲ್ಲಿ ಸಹ ಸಂದೇಹವೇ ಇಲ್ಲ. ಆದರೆ ರಾಜ್ಯದ ಕಟ್ಟಳೆ, ವ್ಯವಸ್ಥೆ ಕಾಪಾಡಬೇಕಾದ್ದು ನನ್ನ ಕರ್ತವ್ಯ. ಆಪಾದನೆ ಬಂದಾಗ ಅದನ್ನು ಗಮನಿಸಬೇಕಾದ್ದು ನನ್ನ ಜವಾಬ್ದಾರಿ. ಇಲ್ಲಿಂದ ಕೊಂಚ ದೂರದಲ್ಲಿಯೇ ಈ ಸಭೆಯ ತೀರ್ಮಾನಕ್ಕಾಗಿ ಈ ಪಂಗಡದ ಜನ ಕಾಯುತ್ತಿದ್ದಾರೆ, ನೀವು ಕಿವಿಗೊಟ್ಟು ಕೇಳಿದರೆ ಅದರ ಬಡಿತ ನಿಮಗೆ ಕೇಳಿಸೀತು. ಆಡಳಿತ ಯಂತ್ರ ನಡೆಸುವ ನಾನು ಯಾವ ಧರ್ಮಕ್ಕೂ ಸೇರಿದವನಲ್ಲ. ಇನ್ನೊಂದು ಅರ್ಥದಲ್ಲಿ ಎಲ್ಲ ಧರ್ಮಗಳೂ ನನ್ನವು. ಇದನ್ನು ನೀವು ನೆನಪಿಡಬೇಕು. ರುದ್ರನ ಪ್ರೇಮ ಪ್ರಕರಣವನ್ನು ಜನ ಹಲವು ರೀತಿಯಲ್ಲಿ ನೋಡುತ್ತಿದ್ದಾರೆ; ಇದು ಪ್ರೇಮವೋ, ಕಾಮವೋ, ನಿಜವೋ, ಸುಳ್ಳೊ ನಾವು ಈಗ ನೋಡಬೇಕಾಗಿದೆ. ಅತ್ಯಾಚಾರಕ್ಕೆ ಈ ರಾಜ್ಯದಲ್ಲಿ ಶಿಕ್ಷೆ ತಲೆದಂಡ.

ಉಷಾ, ಕೊಂಚ ಮುಂದೆ ಬಾ. ನನ್ನ ಭಾರ ನಿನಗೆ ಗೊತ್ತಿದೆ. ನನ್ನ ವಿಶ್ವಾಸವೂ ನಿನಗೆ ಗೊತ್ತಿದೆ. ನಿನ್ನನ್ನು ಬರಹೇಳಿದಾಗ ನೀನು ಬರಲಿಲ್ಲ. ಅದು ಸಾಮಾನ್ಯವಾಗಿ ರಾಜಾಜ್ಞೆಯ ಉಲ್ಲಂಘನೆ. ಆದರೆ ನಾನು ನಿನ್ನನ್ನು ಕ್ಷಮಿಸಿದ್ದೇನೆ. ನಿನ್ನ ಪ್ರೇಮಕ್ಕೆ ಅದು ಪ್ರೇಮವಾಗಿದ್ದರೆ – ನನ್ನ ಸಂಪೂರ್ಣ ಬೆಂಬಲವಿದೆ. ಹೇಳು ರುದ್ರನದು ಪ್ರೇಮವೋ ಬಲತ್ಕಾರವೋ?

(ಮೌನ, ಎಲ್ಲರೂ ಉಷಾ ಕಡೆ ನೋಡುತ್ತಿದ್ದಾರೆ) ಹೇಳು, ಮಾತಾಡು, ನನ್ನ ಪೂರ್ಣ ರಕ್ಷಣೆಯಿದೆ.

ಉಷಾ : (ಸ್ಪಷ್ಟವಾಗಿ, ಗಂಭೀರವಾಗಿ) ಬಲಾತ್ಕಾರ.

(ಎಲ್ಲೆಲ್ಲೂ ಗದ್ದಲ, ಕೆಲವರು ಏಳಲು ಬಸವಣ್ಣನವರೂ ಎದ್ದು ನಿಲ್ಲುವರು. 'ಹುಚ್ಚಿ', 'ಹಾದರಗಿತ್ತಿ', 'ಹಾರವರ ರಂಡೆ' ಇತ್ಯಾದಿ ಗದ್ದಲ. ಬಿಜ್ಜಳ ಗದ್ದಲವಾಗಲು ಕೊಂಚ ಕಾಲ ಕೊಡುವನು. ಆಮೇಲೆ ಚಪ್ಪಾಳೆ ತಟ್ಟಿ, ಗದ್ದಲ ನಿಲ್ಲದಿರಲು ಎತ್ತರಿಸಿದ ಕಂಠದಲ್ಲಿ, ಎಲ್ಲರಿಗೂ ಕೇಳಿಸುವಂತೆ)

ಬಿಜ್ಜಳ : ಇದು ಬಲಾತ್ಕಾರದ ಪ್ರಕರಣವೆಂದು ಉಷಾದೇವಿ ಹೇಳಿದ್ದಾಳೆ; ರುದ್ರ ಮರಣದಂಡನೆಗೆ ಗುರಿಯಾಗಿದ್ದಾನೆ. (ಲಂಕೇಶ್: ಸಂಕ್ರಾಂತಿ, ೧೨ನೇ ಮುದ್ರಣ, ಪತ್ರಿಕೆ ಪ್ರಕಾಶನ, ೨೦೦೨, ಪುಟ-೭೨)

ಈ ಅಂಶಗಳನ್ನು ಪರಿಗಣಿಸಿದಾಗ ಲಂಕೇಶರ 'ಉಷಾ'ಳ ಪಾತ್ರವು ಪರಂಪರೆಯಿಂದಲೂ ಪ್ರಸ್ತುತ ವ್ಯವಸ್ಥೆಯಲ್ಲಿ ರಾಜಪ್ರಭುತ್ವವು ತನ್ನ ಚದುರಂಗದ ಆಟದಲ್ಲಿ ಹೇಗೆ ಹೆಣ್ಣನ್ನು ದಾಳವಾಗಿ ಬಳಸುತ್ತದೆ ಎಂಬುದರ ಜೊತೆಗೆ ಆಧುನಿಕ ಪ್ರೇಮದಲ್ಲಿ ಮೇಲ್ವರ್ಗದ ಹೆಣ್ಣು ಕೆಳವರ್ಗದ ಜೊತೆ ಕಾಮದ ನೆಲೆಯಲ್ಲಿ ಅರಳಿ ಪುನಃ ತನ್ನ ಅಸ್ತಿತ್ವವನ್ನು ಮೇಲ್ವರ್ಗದಲ್ಲಿಯೇ ಕಾಯ್ದುಕೊಳ್ಳುವ ವಾಸ್ತವತೆಯು ಕಂಡುಬರುತ್ತದೆ. ಈ ಸಂವೇದನೆಯನ್ನು ನಾವು 'ಕ್ರಾಂತಿಗೆ ಹೊಸ ಆಯಾಮವನ್ನು ಕೊಟ್ಟು ತನ್ನ ಅಸ್ಥಿತ್ವಕ್ಕೆ ನೆಲೆಯನ್ನು ಕಂಡುಕೊಳ್ಳುವ ದಿಟ್ಟ ಹೆಣ್ಣಿನ ಮನೋಭಾವ ಕಂಡುಬರುತ್ತದೆ. ಆದರೆ ಅದು ಸೋಲನ್ನು ಕಂಡು ಮತ್ತೆ ಪ್ರಭುತ್ವ ಮತ್ತು ಮೇಲ್ವರ್ಗದ ಹಿಡಿತದಿಂದ ಬಿಡಿಸಿಕೊಳ್ಳಲಾರದ ಸ್ತ್ರೀ ಸಂವೇದನೆಯಾಗಿ ಕಂಡುಬಂದು ಇವೆರಡರ ಪ್ರತಿಪಾದನೆಯತ್ತ ವಾಲುವ ಸ್ತ್ರೀ ಸಂವೇದನೆಯಾಗಿ ಕಂಡುಬರುತ್ತದೆ.

ಶಿವರಾತ್ರಿ ನಾಟಕದಲ್ಲಿ ಕಂಬಾರರು ವೈಚಾರಿಕ ಸಂಘರ್ಷಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟಿದ್ದರೂ ಜಾನಪದ ಅಂತರಾಳ ಬಳಕೆಯಿಂದ ಅದು ಬೇರೆಯೇ ತೆರೆನಾದ ನೆಲೆಗಟ್ಟಿನಲ್ಲಿ ವೈಚಾರಿಕತೆಯ ಹುಡುಕಾಟವನ್ನು ನಡೆಸುತ್ತದೆ. ಇದೊಂದು ಸ್ತ್ರೀ ಕೇಂದ್ರಿತ ನಾಟಕವೆಂದು ಪರಿಗಣಿಸಬಹುದಾಗಿದೆ. ಇಲ್ಲಿನ ಸ್ತ್ರೀ ಪಾತ್ರಗಳು ಬಹಳ ಪ್ರಮುಖವಾದ ತೀರ್ಮಾನಗಳಿಗೆ ಕೇವಲ ಮೂಕ ಸಾಕ್ಷಿಗಳಾಗಿರದೆ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಅಂತಹ ಸ್ತ್ರೀ ಪಾತ್ರಗಳಲ್ಲಿ ನಾಟಕದ ಪ್ರಾರಂಭದಿಂದ ಅಂತ್ಯದವರೆಗೂ ಕಾಣಿಸಿಕೊಳ್ಳುವ ನಗರದೇವತೆಯ ಪಾತ್ರ (ಹುಚ್ಚಿ) ಬಹಳ ವೈಶಿಷ್ಟ್ಯವಾಗಿದೆ. ಹುಚ್ಚಿ ಪಾತ್ರ ನಾಟಕದ ಉದ್ದಕ್ಕೂ ಬಸವಣ್ಣನ ನಿಲುವುಗಳನ್ನು ಎತ್ತಿ ಹಿಡಿಯುತ್ತಾಳೆ ಅದಕ್ಕೆ ಕಾರಣ ಬಸವಣ್ಣನ ಚಿಂತನೆಯಲ್ಲಿ ಕಂಡುಬರುವ ಸ್ತ್ರೀ ಧೋರಣೆ. ಅದರ ಪ್ರತಿಪಾದನೆಗೆ ನಾಗರದೇವತೆ ಸೂತ್ರದಾರಗಳಂತೆ ಕಂಡುಬರುತ್ತಾಳೆ. ಪ್ರಾರಂಭದಲ್ಲಿ ಕಾಲಜ್ಞಾನಿಯಂತೆ ಮುಂದಿನ ಅನಾಹುತಗಳನ್ನು ಹೇಳುತ್ತಾ ಜನರಿಗೆ ಎಚ್ಚರಿಕೆ ನೀಡುವುದು, ಸಂಗಯ್ಯ (ಕೂಡಲ ಸಂಗಯ್ಯ) ಮೂಲಕ ಭರತವಾಕ್ಯ

ನುಡಿಸುವುದು. ಇದೆಲ್ಲಕ್ಕಿಂತ ಮುಖ್ಯವಾದದ್ದು ನಾಟಕದ ಕೊನೆಯಲ್ಲಿ ಅವಳೇ ಬಿಜ್ಜಳನ ಕೊಲೆಗೆ ಅನುಮಾಡಿಕೊಡುವುದು ಈ ಅಂಶಗಳನ್ನು ಗಮನಿಸಿದಾಗ ಈ ಪಾತ್ರದ ಮೂಲಕ ಕಂಬಾರರು ಸ್ತ್ರೀ ಪ್ರಧಾನ ಸಂಸ್ಕೃತಿಯಾದ ಜಾನಪದ ಪ್ರಮುಖ ಆಶಯಗಳನ್ನು ಬಿತ್ತರಿಸಿದ್ದಾರೆ. ಈ ಹಿನ್ನೆಲೆಯಲ್ಲಿ ನಾಟಕದಲ್ಲಿನ ಹುಚ್ಚಿ ಪಾತ್ರದ ಚಿತ್ರಣವನ್ನು ಮತ್ತಷ್ಟು ಸತ್ವಯುತವಾಗಿ ಪ್ರತಿಪಾದಿಸಿ ಸ್ತ್ರೀ ಸಂವೇದನೆಯನ್ನು ಎತ್ತಿಹಿಡಿಯುವ ಪ್ರಯತ್ನವೂ ಇದಾಗಿದೆ ಎನ್ನಬಹುದು. ಆಧುನಿಕ ಮನಸ್ಸುಗಳ ಪ್ರಭುತ್ವದ ಪರಿಕಲ್ಪನೆಯಲ್ಲಿ ಹೆಣ್ಣೊಂದು ಕಾಲಜ್ಞಾನ, ಕ್ರಾಂತಿ, ಸಂಘರ್ಷ, ಕೊಲೆ (ಶಿಕ್ಷೆ) ಮುಂತಾದ ವಿಷಯಗಳಲ್ಲಿ ಪ್ರಮುಖ ಪಾತ್ರ ವಹಿಸುವುದನ್ನು ಒಪ್ಪದೇ ಇರುವುದು ಮತ್ತು ಆ ತೆರೆನಾದ ಜವಾಬ್ದಾರಿಯನ್ನು ಅವಳಿಗೆ ನೀಡುವಲ್ಲಿ ಮಾಡುತ್ತಿರುವ ವಿಳಂಬ (ಮಹಿಳಾ ಮೀಸಲಾತಿ) ಇತ್ಯಾದಿ ಅಂಶಗಳಿಗೆ ಉತ್ತರ ಹುಡುಕ ಹೊರಟ್ಟಿದ್ದಾರೆ. ಆದ್ದರಿಂದಲೇ ಈ ನಾಟಕದಲ್ಲಿ ಕಂಡುಬರುವ ಸ್ತ್ರೀ ಸಂವೇದನೆಯನ್ನು ಉಳಿದ ಮೂರು ನಾಟಕಗಳಿಗಿಂತ (ತಲೆದಂಡ, ಸಂಕ್ರಾಂತಿ, ಮಹಾಚೈತ್ರ) ಭಿನ್ನ ನೆಲೆಯಲ್ಲಿ ಗ್ರಹಿಸಬಹುದು.

ಈ ನಾಟಕದಲ್ಲಿ ಕಂಡುಬರುವ ಉಳಿದ ಪ್ರಮುಖ ಸ್ತ್ರೀಪಾತ್ರಗಳೆಂದರೆ ಸಾವಂತ್ರಿ (ಸೂಳೆ) ಮತ್ತು ಅವಳ ಮಗಳು ಕಾಮಾಕ್ಷಿ. ಸಾವಂತ್ರಿಯ ಪಾತ್ರವು ಪ್ರಸ್ತುತ ಅಧಿಕಾರ ಶಾಹಿ ಮತ್ತು ಪ್ರಭುತ್ವದ ರಾಜಕೀಯದಲ್ಲಿ ನಿರ್ಣಾಯಕ ಸನ್ನಿವೇಶ ಮತ್ತು ತೀರ್ಮಾನಗಳ ಸಂದರ್ಭದಲ್ಲಿ ಕಾಣಬರುವ 'ಸ್ತ್ರೀ'ಯ ಪಾಲುದಾರಿಕೆ ಮತ್ತು ಹಿಡಿತವನ್ನು ಮಾರ್ಮಿಕವಾಗಿ ಪ್ರತಿಬಿಂಬಿತವಾಗಿದೆ. ಬಿಜ್ಜಳನಿಗೆ ಸಾವಂತ್ರಿ ಹೇಳುವ ಮಾತುಗಳು, ಬಿಜ್ಜಳನಿಗೆ ಎತ್ತುವ ಪ್ರಶ್ನೆಗಳು, ಸಲಹೆ ಸೂಚನೆಗಳು ಇದಕ್ಕೆ ಸಾಕ್ಷಿಯಾಗಿವೆ.

"ಬಿಜ್ಜಳ : ಈ ಬೂದಿಪವಾಡದ ಅಗತ್ಯ ನನಗಿಲ್ಲವೆ. ಧರ್ಮವನ್ನು ಹೇಳುವುದಕ್ಕಾಗಿ ಶಾಸ್ತ್ರಗಳಿವೆ, ವಿವರಿಸಲಿಕ್ಕೆ ಶಾಸ್ತ್ರಿಗಳಿದ್ದಾರೆ. ಈಗ ಹೇಳು : ನಮ್ಮ ರಾಜ್ಯದ ಕಾನೂನು ಹೇಳುತ್ತದೆ : ರಾಜ್ಯದಲ್ಲಿರುವ ಎಲ್ಲ ಎಲ್ಲದರ ಮೇಲೆ ರಾಜನಿಗೆ ಹಕ್ಕಿದೆ. ಮಹಾರಾಜರಾದ ಬಿಜ್ಜಳ ದೊರೆಗಳು ನಾವು ಕೇಳುತ್ತಿದ್ದೇವೆ : ನಮಗೆ ಕಾಮಾಕ್ಷಿ ಬೇಕು. ಅವಳು ಎಲ್ಲಿದ್ದರಲ್ಲಿಂದ, ಹ್ಯಾಗಿದ್ದರೆ ಹಾಗೇ ಬೇಕು. ಕರೆದುಕೊಂಡು ಬಾ.

ಸಾವಂತ್ರಿ : ಸ್ವಚ್ಛಂದವಾಗಿ ದೇಹ ಮಾರುವುದಕ್ಕೆ ಬಂದವರಲ್ಲ ನಾವು. ನಮಗೂ ನಿಯಮಗಳಿವೆ ಸ್ವಾಮಿ. ಸಂದರ್ಭಾನುಸಾರ ಮುಖ ನೋಡಿ ಮಣೆ ಹಾಕುವ ನಿಯಮಗಳಲ್ಲ ಇವು. ಎಲ್ಲರಿಗೂ ಸಮಾನವಾದ ನಿಯಮಗಳು. ಸಂಗೀತದಲ್ಲಿ

ಅಂತರ್ಗತ ನಿಯಮಗಳಿರುವಂತೆ ಸ್ತ್ರೀಯ ದೇಹದೊಳಗೂ ಇವೆ. ಇಲ್ಲದಿದ್ದರೆ ಸ್ತ್ರೀ ಜಗತ್ತನ್ನು ವಿವರಿಸಲಾದೀತೆ? ಕೈಕೈ ಹಿಡಿದು ಏಳು ಹೆಜ್ಜೆ ಹಾಕಿದಾಗ ಉಂಟಾದ ಸ್ಪರ್ಶದ ಅನುಭವವನ್ನು ಆಜನ್ಮ ಪರ್ಯಂತ ನೆನಪಿಟ್ಟುಕೊಂಬುವಳು ಮಡದಿ. ಸ್ಪರ್ಶದ ಅನುಭವವನ್ನು ಅದು ಮರೆಯಾದೊಡನೆ ಮರೆಯುವವಳು ಸೂಳೆ. ತಮ್ಮ ಸ್ಪರ್ಶ ಆಗಲೇ ಕಾಮಾಕ್ಷಿಗೆ ಮರೆವಾಗಿದೆ ಪ್ರಭು. ಗಿರಾಕಿಯ ಕಣ್ಣಿನಿಂದ ನೋಡಿ ತನ್ನ ಬೆಲೆ ಕಟ್ಟಿಕೊಳ್ಳುವುದಿಲ್ಲ ಇಲ್ಲಿಯ ಹೆಣ್ಣು. ತನ್ನನ್ನು ತಾನೇ ಕನ್ನಡಿಯಲ್ಲಿ ನೋಡಿಕೊಂಡು ಬೆಲೆಕಟ್ಟಿಕೊಳ್ಳುತ್ತಾಳೆ. ಅವಳ ಬೆಲೆಯನ್ನು ಒಪ್ಪುವ ಗಿರಾಕಿಗೆ ತನ್ನನ್ನು ಒಪ್ಪಿಸಿಕೊಳ್ಳುತ್ತಾಳೆ. ಪ್ರೀತಿಯಲ್ಲಾದರೆ ಹೆಣ್ಣುಗಂಡು ಇಬ್ಬರೂ ಒಂದಾಗಿ ಒಬ್ಬರು ಇನ್ನೊಬ್ಬರ ಕಣ್ಣಲ್ಲಿ ನೋಡಿಕೊಳ್ಳುತ್ತ ತಮಗೆ ಬೇಕಾದ ಜಗತ್ತನ್ನು ಕಟ್ಟಿಕೊಳ್ಳುತ್ತಾರೆ. ಬಲಾತ್ಕಾರದಲ್ಲಾದರೆ ಹೆಂಗಸನ್ನ ಬಲಿಹಾಕಿ ಉಸಿರುಗಟ್ಟುವಂತೆ ಮಾಡಿ, ಆ ಈ ಕಡೆ ನೋಡಲು ಬೆಳಕಿಲ್ಲದಂತೆ ಮಾಡಲಾಗುತ್ತದೆ. ನಿಮ್ಮ ರಾಜ್ಯದಲ್ಲಿ ಮಾತ್ರ ಎಲ್ಲದಕ್ಕೂ ರಾಜರೇ ಬೆಲೆಗಟ್ಟುತ್ತಾರೆ. ಈ ರಾಜ್ಯದಲ್ಲಿ ನಾಗರಿಕ ಆಡಳಿತ ಇರುವುದೇ ನಿಜವಾದರೆ ತಾವು ಬಲಾತ್ಕಾರದಿಂದ ಅಧಿಕಾರ ಚಲಾಯಿಸಬಾರದು ಪ್ರಭು." (ಚಂದ್ರಶೇಖರ ಕಂಬಾರ: ಶಿವರಾತ್ರಿ, ಪ್ರಥಮ ಮುದ್ರಣ, ಅಂಕಿತ ಪುಸ್ತಕ, ೨೦೧೧, ಪುಟ-೭೯-೫೨)

ಹಾಗೆಯೇ ಮುಗ್ಧ ಸಂಗಯ್ಯ ಸೂಳೆ ಸಾವಂತ್ರಿಯ ಮನೆಗೆ ಬಂದು ಕಾಮಾಕ್ಷಿಯನ್ನು ಬಯಸಿದಾಗ ಕಾಮಾಕ್ಷಿ ಮಹಾಜನರನ್ನು ಧಿಕ್ಕರಿಸಿ, ಮುಗ್ಧ ಸಂಗಯ್ಯನಿಗೆ ಒಲಿದು ಲಿಂಗಪೂಜೆಗೆ ಅನುವು ಮಾಡಿಕೊಡುವುದು ಸಹ ಸ್ತ್ರೀ ಅಸ್ಮಿತ್ವದ ಪ್ರತಿಪಾದನೆಯೇ ಆಗಿದೆ.

"ಸಂಗಯ್ಯ : ಎಲ್ಲರೂ ಸುಂದರಿಯರೆ, ಆದರೆ ಕಾಮಾಕ್ಷಿ ಅತಿ ಸುಂದರಿ ! ನನಗೆ ಕಾಮಾಕ್ಷಿಯೇ ಇರಲಿ.

ಸಾವಂತ್ರಿ : ಆಕೆ ಮಹಾರಾಜರಿಗಾಗಿ ಕಾಯುತ್ತಿದ್ದಾಳೆ. ಅವಳ ಬೆಲೆಯೂ ದುಬಾರಿ. ಇನ್ನುಳಿದ ಮೂವರಲ್ಲಿ ಯಾರಾದರೂ...

ಸಂಗಯ್ಯ : ಏನು ನೀನು ಹೇಳುವುದು? ನಾನು ಬಂದಿದ್ದೇ ಕಾಮಾಕ್ಷಿಗಾಗಿ. ಅವಳಿಗೆ ಮಹಾರಾಜ ಕೊಡೋ ಬೆಲೆಯನ್ನ ನಾನೇ ಕೊಟ್ಟರೆ ಸಾಲದೊ? ಇಕೊ ಈ ಸರ ತೆಗೆದುಕೊ – ಮಹಾರಾಜ ಕೊಡುವ ಬೆಲೆಗಿಂತ ಇದು ಹೆಚ್ಚಿಗಿದೆಯೋ ಇಲ್ಲವೋ ಹೇಳು. (ಸರವನ್ನು ಸಾವಂತ್ರಿಯ ಕೈಗೆ ಕೊಡುವನು. ತುಸು ಹೊತ್ತು ನೋಡಿ ಸಾವಂತ್ರಿ ಕಾಮಾಕ್ಷಿಯ ಕೈಗೆ ಕೊಡುವಳು. ಕಾಮಾಕ್ಷಿ ಸರವನ್ನು ನೋಡಿ ಆಮೇಲೆ–ತಿರುಗಿ ಸಾವಂತ್ರಿಗೇ ಕೊಡುವಳು).

ಕಾಮಾಕ್ಷಿ : ಅಮ್ಮಾ ಈ ಸರದ ಬೆಲೆ ನನ್ನ ಬೆಲೆಗಿಂತ ಹೆಚ್ಚು. ನನಗಿದು

ಬೇಡ. ಆತ್ಮಸಂತೋಷಕ್ಕಾಗಿ ನಾನಿವರ ಸೇವೆ ಮಾಡುತ್ತೇನೆ. ದಯವಿಟ್ಟು ಅಪ್ಪಣೆ ಕೊಡು. ಮುಂದಿನದು ನಿನ್ನ ಜವಾಬ್ದಾರಿ.

ಸಾವಂತ್ರಿ : ಧನ್ಯಳಾದೆ ಮಗಳೆ ! ಜೊತೆಗೆ ನನ್ನನ್ನೂ ಧನ್ಯಳನ್ನಾಗಿಸಿದೆ. ಹೋಗು. ಮುಗ್ಧಸಂಗಯ್ಯನಿಗೆ ಅವನು ಬಯಸುವ ಸುಖಗಳ ನೀಡಿ ಸಂತೋಷಪಡಿಸು.

ಸಂಗಯ್ಯ : ನಾನು ಈ ಹಾಸಿಗೆಯ ಮೇಲೆ ಕುಳಿತುಕೊಂಡು ಲಿಂಗಪೂಜೆ ಮಾಡಬೇಕು. ಹನ್ನೊಂದು ಸಲ ಮಾಡಬೇಕಾದ ಪೂಜೆ ಅದು. ಸಾಮಾನ್ಯವಲ್ಲ ! ಅದರಿಂದ ಸಿಗದಂಥಾ ಆನಂದ ಬೇರೆ ಇಲ್ಲವೆಂದು ನಿನಗೇ ತಿಳಿಯುತ್ತದೆ. ಅಚಿಟಿ ಪೂಜೆ ಮಾಡುವುದಕ್ಕೆ ನೀನು ನನಗೆ ಸಹಾಯ ಮಾಡಬೇಕು, ಆದೀತೊ?

ಕಾಮಾಕ್ಷಿ : ಆಗಲಿ ಸ್ವಾಮಿ. ತಾವು ಹೇಳಿದಂತೇ ಮಾಡುತ್ತೇನೆ." (ಚಂದ್ರಶೇಖರ ಕಂಬಾರ : ಶಿವರಾತ್ರಿ, ಪ್ರಥಮ ಮುದ್ರಣ, ಅಂಕಿತ ಪುಸ್ತಕ, ೨೦೧೧, ಪುಟ–೩೨–೩೪)

ನಾಟಕದಲ್ಲಿನ ಈ ಅಂಶಗಳನ್ನು ಗಮನಿಸಿದಾಗ ಇಲ್ಲಿನ ಎರಡೂ ಸ್ತ್ರೀ ಪಾತ್ರಗಳು ಪ್ರಸ್ತುತ ವ್ಯವಸ್ಥೆಯಲ್ಲಿ ಸ್ವತಂತ್ರ ಅಸ್ತಿತ್ವ ಕಂಡುಕೊಳ್ಳುವ ಸ್ತ್ರೀ ಸಂವೇದನೆಗೆ ಸಾಕ್ಷಿಯಾಗಿವೆ. ಹೀಗೆ ಶಿವರಾತ್ರಿ ನಾಟಕದಲ್ಲಿನ ಸ್ತ್ರೀ ಸಂವೇದನೆಯು ಸಂಕ್ರಾಂತಿ, ತಲೆದಂಡ, ಮಹಚೈತ್ರ ನಾಟಕಗಳಲ್ಲಿನ ಸ್ತ್ರೀ ಪಾತ್ರಗಳಿಗಿಂತ ವಿಭಿನ್ನವಾಗಿದ್ದು, ಗಟ್ಟಿತನವಾದ ತನ್ನ ಅಸ್ಥಿತ್ವವನ್ನು ತಾನೇ ಪ್ರತಿಪಾದಿಸುವ ಮೂಲಕ ಅಧಿಕಾರ ಮತ್ತು ಪ್ರಭುತ್ವಕ್ಕೆ ಅಸ್ಥಿತ್ವಕ್ಕೆ ಸಡ್ಡು ಹೊಡೆಯುತ್ತವೆ.

ಒಟ್ಟಾರೆಯಾಗಿ ಕನ್ನಡದ ಜಗತ್ಪ್ರಸಿದ್ಧ ನಾಟಕಕಾರರಾಗಿರುವ ಲಂಕೇಶ್, ಗಿರೀಶ್‌ಕಾರ್ನಾಡ್, ಎಚ್.ಎಸ್. ಶಿವಪ್ರಕಾಶ್ ಮತ್ತು ಚಂದ್ರಶೇಖರ ಕಂಬಾರರ ಇವರುಗಳ ನಾಟಕಗಳಲ್ಲಿನ ಪ್ರಮುಖ ಸ್ತ್ರೀ ಪಾತ್ರಗಳ ಸಂವೇದನೆಗಳು ವಿಭಿನ್ನ ನೆಲೆಗಳಲ್ಲಿ ಕಂಡುಬರುತ್ತದೆ. ಇದು ಒಂದು ಕಾಲಘಟ್ಟದಲ್ಲಿ ಭಿನ್ನಸ್ವರೂಪವನ್ನು ಪಡೆಯಬಲ್ಲ ಚಿಂತನಾಲಹರಿಯನ್ನೂ ಸಹ ಬಿಂಬಿಸುತ್ತದೆ. ಸಂಕ್ರಾಂತಿ, ತಲೆದಂಡ, ಮಹಾಚೈತ್ರ, ಮತ್ತು ಶಿವರಾತ್ರಿ ನಾಟಕಗಳಲ್ಲಿ ಚಿತ್ರಣಗೊಂಡಿರುವ ವಿಭಿನ್ನ ನೆಲೆಯ ಸ್ತ್ರೀ ಪಾತ್ರಗಳನ್ನು ಗ್ರಹಿಸುವ ಒಂದು ಪ್ರಯತ್ನವಾಗಿದೆ. ಈ ದೃಷ್ಟಿಕೋನದಿಂದ ಈ ನಾಲ್ಕೂ ನಾಟಕಗಳಲ್ಲಿನ ಸ್ತ್ರೀ ಪಾತ್ರಗಳನ್ನು ಮತ್ತಷ್ಟು ಆಳವಾದ ಚಿಂತನೆಗೆ ಒಳಪಡಿಸಲು ಅವಕಾಶವಿದೆ. ಹಾಗೆಯೇ ಕನ್ನಡ ಸಾಹಿತ್ಯದಲ್ಲಿನ ಸ್ತ್ರೀ ಚಿಂತನೆಯ ವಿವಿಧ ಅಯಾಮಗಳ ಗ್ರಹಿಕೆಗೂ ಇದು ಪೂರಕವಾಗಿದೆ.

ಪರಾಮರ್ಶನ ಗ್ರಂಥಗಳು

೧. ಕೀರ್ತಿನಾಥ ಕುರ್ತಕೋಟಿ : ವಿಮರ್ಶೆಯ ವಿನಯ ನಾಟಕ, ಮನೋಹರ ಗ್ರಂಥಮಾಲೆ, ಧಾರವಾಡ–೧೯೮೫.

೨. ಸಂ. ಕೃಷ್ಣಮೂರ್ತಿ ಚಂದರ್ : ಗಿರೀಶ್ ಕಾರ್ನಾಡರ ನಾಟಕಗಳು, ಸ್ವಪ್ನ ಬುಕ್ ಹೌಸ್, ಬೆಂಗಳೂರು–೨೦೦೩.

೩. ಗಿರೀಶ ಕಾರ್ನಾಡ : ತಲೆದಂಡ, ಮನೋಹರ ಗ್ರಂಥಮಾಲಾ, ಧಾರವಾಡ ೧೯೯೫.

೪. ಸಂ. ಡಾ. ಜಯಪ್ರಕಾಶ ಮಾವಿನಕುಳಿ : ಲಂಕೇಶರ ನಾಟಕಗಳು : ಕರ್ನಾಟಕ ಸಂಘ, ಪುತ್ತೂರು–೧೯೯೯.

೫. ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ : ಸಾಹಿತ್ಯ ಸಂಸ್ಕೃತಿ, ಅಂಕಿತ ಪುಸ್ತಕ, ಬೆಂಗಳೂರು ೧೯೯೮.

೬. ಡಾ. ಕೆ. ಮರುಳ ಸಿದ್ಧಪ್ಪ : ಆಧುನಿಕ ಕನ್ನಡ ನಾಟಕ, ಅಂಕಿತ ಪುಸ್ತಕ, ಬೆಂಗಳೂರು–೨೦೦೨.

೭. ಪಿ. ಲಂಕೇಶ್ : ಸಂಕ್ರಾಂತಿ, ಪತ್ರಿಕೆ ಪ್ರಕಾಶನ, ಬೆಂಗಳೂರು–೧೯೭೧.

೮. ಸಂ. ಜಿ.ಎಸ್. ಶಿವರುದ್ರಪ್ಪ : ಕನ್ನಡ ನಾಟಕ : ಪರಂಪರೆ ಮತ್ತು ಪ್ರಯೋಗ, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೯. ಚಂದ್ರಶೇಖರ ಕಂಬಾರ : ಶಿವರಾತ್ರಿ, ಅಂಕಿತ ಪುಸ್ತಕ, ಬೆಂಗಳೂರು–೨೦೧೧.

ಹೊಸಗನ್ನಡ ಸಾಹಿತ್ಯ: ಆಧುನಿಕ ಸಣ್ಣಕತೆ ಮುನ್ನೋಟ

ಡಾ. ಆರ್.ಮಹೇಶ್

ಕನ್ನಡಸಾಹಿತ್ಯ ಪ್ರಾಚೀನ ಕಾಲದಿಂದಲೂ ಮುನ್ನಡೆ ಸಾಧಿಸುತ್ತಲೇ ಬಂದಿದೆ. ವಸ್ತು, ಭಾಷೆ ಮತ್ತು ಅಭಿವ್ಯಕ್ತಿ ಕ್ರಮದಲ್ಲಿ ಬೇರೆ ಭಾಷೆ ಮತ್ತು ಸಾಹಿತ್ಯದೊಂದಿಗೆ ಅನುಸಂಧಾನ ಮಾಡುತ್ತಲೆ ತನ್ನ ಅನನ್ಯತೆಯನ್ನು ಮೆರೆದಿದೆ. ಈ ದಿಸೆಯಲ್ಲಿ ಶಾಸನ ಸಾಹಿತ್ಯ, ವಚನ ಸಾಹಿತ್ಯ, ಮಧ್ಯಕಾಲೀನ ಕನ್ನಡ ಸಾಹಿತ್ಯ (ಭಕ್ತಿಪಂಥ), ದಾಸ ಸಾಹಿತ್ಯ ಹಾಗೂ ಹೊಸಗನ್ನಡ ಸಾಹಿತ್ಯವೆಂದು ಅವಲೋಕಿಸಲು ಸಾಧ್ಯವಿದೆ. ಪ್ರಾಚೀನ ಕನ್ನಡಸಾಹಿತ್ಯ ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳ ಜೊತೆಗೆ ಆಧುನಿಕ ಕನ್ನಡ ಸಾಹಿತ್ಯ ಇಂಗ್ಲಿಷ್ ಭಾಷೆ ಜೊತೆಗೆ ಸೆಣೆಸಾಡುತ್ತಲೇ ಮುನ್ನಡೆಯುತ್ತಾ ಬಂದಿದೆ.

ಪ್ರಸ್ತುತ ಸಂದರ್ಭದಲ್ಲಿ "ಮುನ್ನೋಟ ಪರಿಕಲ್ಪನೆ ಬಗ್ಗೆ ವಿವೇಚಿಸುವುದಾದರೆ ಸಾಹಿತ್ಯದ ಪರಿಭಾಷೆಯಲ್ಲಿ ಈ ಶಬ್ಧದ ಅರ್ಥ ತುಂಬಾ ವೈಶಾಲ್ಯತೆಯನ್ನು ಪಡೆಯುತ್ತದೆ. "ಮುನ್ನೋಟ" ವೆಂದರೆ "ಮುಂದೆ" ಪ್ರದರ್ಶಿತವಾಗುವ ಅಥವಾ ಪ್ರಕಟವಾಗುವ ದೃಶ್ಯ ಅಥವಾ ವಿಷಯಗಳ ಪೂರ್ವ ಪರಿಚಯ"ವೆಂದರ್ಥ. (ಸಂಕ್ಷಿಪ್ತ ಕನ್ನಡ ನಿಘಂಟು. ಕನ್ನಡ ಸಾಹಿತ್ಯ ಪರಿಷತ್ತು) ಮುಂದೆ ಘಟಿಸುವುದರ ಬಗ್ಗೆ ಮೊದಲೇ ಗ್ರಹಿಸುವ ತಿಳಿವಳಿಕೆ ಗ್ರಹಿಸಬಹುದು. ಮುಂದಿನ ಸಂಭವನೀಯತೆಯ ಬಗ್ಗೆ ಸುಳಿವು, ಜಾಡು ಇತ್ಯಾದಿ, ಇದಕ್ಕೆ ಪೂರಕವಾಗಿ "ಮುನ್ನೆಲೆ" ಪರಿಭಾಷೆ ನೋಡುವುದಾದರೆ ಮೊದಲಿನ ಸ್ಥಳ, ಮುಂಚಿನ ಜಾಗ ಎಂದರ್ಥ. "ಮುನ್ನೋಟ" ಮತ್ತು "ಮುನ್ನೆಲೆ" ಎರೆಡೂ ಕೂಡ ಒಂದಕ್ಕೊಂದು ಪೂರಕವಾದವುಗಳೇ ಮುನ್ನೆಲೆ ಇದು ಮೊದಲನದನ್ನ(ಭೂತ) ಪರಿಚಯಿಸಿದರೆ ಮುನ್ನೋಟ ಮುಂದಿನದನ್ನ (ಭವಿಷತ್) ತಿಳಿಸುತ್ತದೆ. ಹಾಗಾಗಿ ವರ್ತಮಾನದಲ್ಲಿ ನಿಂತು ಭೂತ ಮತ್ತು ಭವಿಷತ್‌ಗಳನ್ನ ಚರ್ಚಿಸುವುದು, ಸಾಹಿತ್ಯ ಪ್ರಕಾರವೊಂದರ ಮುನ್ನೋಟ ಗ್ರಹಿಸಬೇಕಾದರೆ ಆ ಪ್ರಕಾರದ ಪರಂಪರೆ ಮತ್ತು ಆಧುನಿಕತೆಗಳೆರಡನ್ನೂ ಮುಖಾಮುಖಿ ಮಾಡುವುದೆ ಸೂಕ್ತ. ಸಾಮಾನ್ಯ ಅರ್ಥದಲ್ಲಿ ಮಾನವನ ಬದುಕೇ ತುಂಬಾ ಕ್ರಿಯಾಶೀಲವಾದುದು. ಅಂದರೆ ಪ್ರಗತಿಯನ್ನು ಹೊಂದುತ್ತಿರುತ್ತದೆ.

ಪ್ರಗತಿಯೆಂದರೆ "ಮುನ್ನಡೆ" ಮುಂದೆಸಾಗುವುದು, ಅಭಿವೃದ್ಧಿಯತ್ತ ಸಾಗುವುದು ಎಂದರ್ಥ. ಹಾಗೆಯೇ ಸಾಹಿತ್ಯ ಕೂಡ ನಿಂತ ನೀರಲ್ಲ ಸದಾ ಚಲನಶೀಲತೆಯನ್ನು ಬಯಸುತ್ತದೆ. ಅದು ಸೃಜನಶಿಲತೆಯ ಲಕ್ಷಣ ಕೂಡ. ಈ ಹಿನ್ನೆಲೆಯಲ್ಲಿ ಮುದ್ದಣ್ಣನಿಂದ ಆರಂಭವಾದ ಗದ್ಯ ಸಾಹಿತ್ಯ ಕಥೆ ಮತ್ತು ಕಾದಂಬರಿಗಳ ಉಗಮಕ್ಕೆ ಪೂರಕವಾದ ವಾತಾವರಣವನ್ನು ನಿರ್ಮಿಸಿತು. ೧೮ನೆಯ ಶತಮಾನದ ಅನಂತರದಲ್ಲಿ ಕೈಗಾರಿಕಾ ಕ್ರಾಂತಿ, ವಸಾಹತುನೀತಿ ಮತ್ತು ಇಂಗ್ಲಿಷ್ ಸಾಹಿತ್ಯ ಹಾಗೂ ಭಾಷೆಯ ಪ್ರಭಾವದಿಂದ ಆಧುನಿಕ ಸಣ್ಣಕತೆ (ಗದ್ಯಸಾಹಿತ್ಯ) ಪ್ರಕಾರದ ಹೊಸ ಮಾದರಿಯೊಂದು ಜನ್ಮ ತಳೆಯಿತು.

ಪ್ರಾಚೀನ ದಿನದಿಂದಲೂ ಸಣ್ಣಕತೆಯ ಮೌಖಿಕ ಪರಂಪರೆ ರೂಢಿಯಲ್ಲಿದ್ದು, ಕತೆ ಹೇಳುವ ಮತ್ತು ಕೇಳುವ ಪ್ರೌವೃತ್ತಿ ಇಂದಿಗೂ ಕೂಡ ಅನೂಚಾನವಾಗಿ ನಡೆಯುತ್ತಲೇ ಬಂದಿದೆ. ಹಳೆಗನ್ನಡ ಸಾಹಿತ್ಯದಲ್ಲಿ ಕಾವ್ಯದ (ಪದ್ಯ) ಜೊತೆಗೆ ಗದ್ಯ ಬೆರತಿದ್ದರಿಂದ ಆ ಕಾವ್ಯಗಳಲ್ಲಿಯೇ ಕಥನ ಕಲೆಯೊಂದು ಬೆರೆತಿರುವುದು ಕಂಡು ಬರುತ್ತದೆ. (ಕಥನ ಕಾವ್ಯಗಳು) ಬಹುಭಾಗ ಮಹಾಕಾವ್ಯಗಳೆಲ್ಲವು ಅನೇಕ ಕಥನಗಳನ್ನೊಳಗೊಂಡಿರುವುದನ್ನು ಕಾಣಬಹುದು. ಉದಾ: ಮಹಾಭಾರತ, ರಾಮಾಯಣ, ಪಂಪನ, ಕನ್ನಡ. ಜನ್ನನ ಕಾವ್ಯಗಳು (ಬಹುಭಾಗ ಜೈನಕವಿಗಳ ಕಾವ್ಯಗಳು). ೯ನೆಯ ಶತಮಾನದ 'ವಡ್ಡಾರಾಧನೆ' ಪಂಚತಂತ್ರ ಮುಂತಾದ ಕೃತಿಗಳು. ವಡ್ಡಾರಾಧನೆ ಕನ್ನಡದ ಮೊದಲ ಕಥಾಗುಚ್ಛ, ಪ್ರಾಚೀನ ದಿನಗಳಿಂದಲೇ ಕಥನ ಕಲೆ ಮೌಖಿಕ ಮತ್ತು ಹಳೆಗನ್ನಡ ಕೃತಿಗಳಲ್ಲಿ ಬೆರೆತು ಮುನ್ನಡೆ ಸಾಧಿಸುತ್ತಲೆ ಬಂದಿದೆ.

ಆಧುನಿಕ ಸಣ್ಣಕತೆ ಪಾಶ್ಚಾತ್ಯರಿಂದ ಆಮದಾದದ್ದೆ ಹತ್ತೊಂಬತ್ತನೆಯ ಶತಮಾನದ ಆರಂಭದಲ್ಲಿ ಅಂದರೆ ನವೋದಯ ಪೂರ್ವದಲ್ಲಿ ಸಣ್ಣಕತೆಗಳನ್ನು ಬರೆದವರೆಂದರೆ ಪಂಜೆಯವರು, ಗೋಏಂದ ಪೈನ, ಕೆರೂರು ವಾಸುದೇವಾಚಾರ್ಯ ಮತ್ತು ಎಂ.ಎನ್.ಕಾಮತ್ ಅವರು. ಇವರನ್ನು ಆರಂಭದ ಕತೆಗಾರರೆಂದು ಗುರುತಿಸಲಾಗಿದೆ. ೧೯೦೦ರಲ್ಲಿ ಪಂಜೆ ಮಂಗೇಶರಾಯರು ಸುವಾಸಿನಿ ಪತ್ರಿಕೆಯಲ್ಲಿ ಪ್ರಕಟಿಸಿದ 'ಭಾರತ ಶ್ರವಣ', 'ಕಮಲಪುರದ ಹೊಟ್ಲಿನಲ್ಲಿ' 'ನನ್ನ ಚಿಕ್ಕ ತಾಯಿ', 'ನನ್ನ ಚಿಕ್ಕ ತಂದೆಯ ಉಯಿಲ್' ಕತೆಗಳೇ ಆರಂಭದ ಆಧುನಿಕ ಸಣ್ಣಕತೆಗಳೆಂದು ಗುರುತಿಸಲ್ಪಟಿವೆ. ಆದರೆ ಆರಂಭದ ಇವರ ಕತೆಗಳಲ್ಲಿ ಸಾಮಾಜಿಕವಾದ ಮತ್ತು ಚಾರಿತ್ರಿಕವಾದ ಅಂಶಗಳೇ ಹೆಚ್ಚು ಕಂಡು ಬರುತ್ತವೆ. ಕೆರೂರುರ ಕತೆಗಳು ಹೆಚ್ಚು ಇಂಗ್ಲಿಷ್ ಮಾದರಿಯನ್ನೊಳಗೊಂಡ ಕತೆಗಳು. ಏಕೆಂದರೆ ಕೆರೂರರು ಸ್ವತಃ ಪತ್ರಿಕೆ ನಡೆಸುತ್ತಿದ್ದುದರಿಂದ ಪತ್ರಿಕೆಗಳಲ್ಲಿ ಪ್ರಕಟಿಸುವುದಕ್ಕಾಗಿಯೇ ಕತೆಗಳನ್ನು

ಬರೆಯುತ್ತಿದ್ದರು ಜೊತೆಗೆ ಇಂಗ್ಲಿಷ್‌ನಿಂದ ಕನ್ನಡಕ್ಕೆ ಭಾಷಾಂತರ ಮಾಡುತ್ತಿದ್ದರು.

ಚಾರಿತ್ರಿಕವಾಗಿ ನೋಡಿದರೆ ಕನ್ನಡದಲ್ಲಿ ಸಣ್ಣಕತೆಗಳನ್ನು ಬರೆದವರಲ್ಲಿ ಮಾಸ್ತಿ ಅವರು ಮೊದಲಿಗರಲ್ಲ. ಆದರೂ ಕನ್ನಡದ ಮೊದಲ ಮಹತ್ವದ ಕತೆಗಾರರೆಂಬುದರಲ್ಲಿ ಎರಡು ಮಾತುಗಳಿಲ್ಲ. ಪರಂಪರಾಗತವಾದ ಸಾಂಸ್ಕೃತಿಕ ಜೀವಸತ್ವವನ್ನು ಹಾಗೂ ಅಂದಿನ ಮೌಲ್ಯ, ನಂಬಿಕೆ, ಸನ್ನಿವೇಶ, ಸಂದರ್ಭಗಳು, ಸಾಂಪ್ರದಾಯ ಅಲ್ಲದೆ ಬಡತನ ವೈರುಧ್ಯಗಳು ಇಂತಹ ವೈರುಧ್ಯಗಳಿಗೆ ಪರಿಹಾರ ಕಂಡು ಕೊಳ್ಳುವ ತಾಳ್ಮೆ ಮುಂತಾದ ಗುಣಗಳನ್ನು ತಮ್ಮ ಕತೆಗಳಲ್ಲಿ ಬಿತ್ತರಿಸಿದ್ದಾರೆ. ಕಥೆ ಹೆಣೆಯುವ ನಿರೂಪಣಾತಂತ್ರ ಮತ್ತು ಭಾಷೆಯನ್ನು ದುಡಿಸಿಕೊಂಡ ಕೀರ್ತಿ ಮಾಸ್ತಿ ಅವರಿಗೆ ಸಲ್ಲುತ್ತದೆ.

ಪರಂಪರೆ ಮತ್ತು ಆಧುನಿಕತೆಯನ್ನು ಮುಖಾಮುಖಿ ಮಾಡಿದ ಮಾಸ್ತಿ ಅವರು (ಉದಾ: ಮೊಸರಿನ ಮಂಗಮ್ಮ) ನಿಧಾನವಾಗಿ ನಮ್ಮ ಬದುಕಲ್ಲಿ ಪ್ರವೇಶಿಸುವ ಆಧುನಿಕತೆ ಮತ್ತು ವಸಾಹತುಶಾಹಿಯಂತಹ ವಿಷಯಗಳನ್ನು ತಮ್ಮ ಕತೆಗಳಲ್ಲಿ ಪ್ರಯೋಗಿಸಿದ್ದಾರೆ. ಇವಿಷ್ಟೆ ಅಲ್ಲದೆ ಸನಾತನ ಧರ್ಮಾಚರಣೆ, ಸಂಸ್ಕೃತಿ,(ವೈದಿಕ ಧರ್ಮದಲ್ಲಿನ ಮೌಢ್ಯ ಹಾಗೂ ಮತಾಂತರದಂತಹ ವಿಚಾರಗಳನ್ನು ಉದಾ:ಡೂಬಾಯಿ ಪಾದ್ರಿಯ ಒಂದು ಪತ್ರದಂತಹ ಐತಿಹಾಸಿಕ ಕತೆಯಲ್ಲಿ ಪರಿಚಯಿಸಿದ್ದಾರೆ. ಪ್ರಭುತ್ವವೇ ಮುಖ್ಯವಲ್ಲ ಪ್ರಭುವಾದವನು ಪ್ರಜಾಧರ್ಮವನ್ನು ಪಾಲಿಸಬೇಕು ಹಾಗೂ ಬಲವಂತದ ಮತಾಂತರ ಸಲ್ಲದೆಂದು ಹೇಳುತ್ತಾರೆ. ಸಹಿಷ್ಣುತಾ ಮನೋಭಾವ ಮುಖ್ಯವೆಂದು ಹೇಳುತ್ತಾರೆ. ಜೊತೆಗೆ ನವೋದಯ ಸಂದರ್ಭದ ಕುವೆಂಪು ತಮ್ಮ ಕತೆಗಳಲ್ಲಿ ಆದರ್ಶ, ಹಾಸ್ಯದುರಂತ, ಭ್ರಾಂತಿ, ಆಧ್ಯಾತ್ಮ ಮುಂತಾದ ವಿಚಾರಗಳನ್ನು ಓದುಗರಿಗೆ ಪರಿಚಯಿಸಿದರು. ಹೀಗೆ ನವೋದಯ ಪೂರ್ವದಲ್ಲಿ ಕಂಡು ಬಂದ ಸಾಂಪ್ರದಾಯಕತೆ ಮತ್ತು ಸಾಮಾಜಿಕ ವಿಚಾರಗಳು ನವೋದಯ ಸಂದರ್ಭದ ಕತೆಗಳಲ್ಲಿ ತಂತ್ರ ಭಾಷೆ (ಶೈಲಿ) ವಸ್ತುವಿನ ಆಯ್ಕೆ ವಿಚಾರದಲ್ಲಿ ನಾವಿನ್ಯತೆ ಸಾಧಿಸಿದ್ದು ಸಣ್ಣಕಥಾ ರಚನೆಯಲ್ಲಾದೆ ಬದಲಾವಣೆ ಅಥವಾ ಮುನ್ನೋಟವೆಂದೇ ನಾನು ಭಾವಿಸುತ್ತೇನೆ.

೧೯೪೦ರ ವೇಳೆಗೆ ಆರಂಭವಾದ ಪ್ರಗತಿಶೀಲ ಚಳವಳಿ (೧೯೩೭ರ ವೇಳೆಗಾಗಲೇ ಪ್ರಗತಿಶೀಲಗಾಳಿ ಬೀಸಲಾರಂಭಿಸಿತ್ತು) ಸಣ್ಣಕಥಾ ರಚನೆಗೆ ಪೂರಕ ವಾತಾವರಣವನ್ನು ನಿರ್ಮಿಸಿತ್ತು. ನವೋದಯದವರಿಗೆ ಸಮಾಜ ಮುಖ್ಯವಾದರೆ ಪ್ರಗತಿಶೀಲರು ತಮ್ಮ ಕತೆಗಳಿಗೆ ಕೌಟುಂಬಿಕ ಸಮಸ್ಯೆಗಳನ್ನು ವಸ್ತುವಾಗಿ ಸ್ವೀಕರಿಸಿದರು. ಬಡತನ, ಮಹಿಳೆಯರ ಶೋಷಣೆ, ಕೂಲಿಕಾರ್ಮಿಕರ ಸಮಸ್ಯೆಗಳು ಸ್ತ್ರೀ ಸ್ವಾತಂತ್ರ್ಯ ಆರ್ಥಿಕ ಸ್ವಾತಂತ್ರ್ಯ ಮುಂತಾದ ವಿಚಾರಗಳು ಪ್ರಗತಿಶೀಲ ಕತೆಗಳಿಗೆ ವಸ್ತುಗಳಾದವು.

ಸ್ತ್ರೀಯರ ಸಮಸ್ಯೆಗಳಿಗೆ ಹೆಚ್ಚಿನ ಒತ್ತು ಕೊಟ್ಟರು ವೇಶ್ಯಾಸಮಸ್ಯೆ, ಉದಾ: ನಿರಂಜ ಅವರ ಕೊನೆಯ ಗಿರಾಕಿ. ಈ ಹಿನ್ನೆಲೆಯಲ್ಲಿ ಅ.ನ.ಕೃ, ತ.ರಾ.ಸು, ನಿರಂಜನ, ಕಟ್ಟಿಮನಿ ಚದುರಂಗ ಮುಂತಾದವರು ಕತೆಗಳನ್ನು ರಚಿಸಿದರು. ೧೯೫೦ರ ಅನಂತರ ನವ್ಯಕತೆಗಾರರು ಪಾಶ್ಚಾತ್ಯರ (ಇಂಗ್ಲಿಷ್) ಮಾದರಿಯಲ್ಲಿ ಕತೆಗಳನ್ನು ರಚಿಸಿದರು. ಈ ದಿಸೆಯಲ್ಲಿ ವ್ಯಕ್ತಿಕೇಂದ್ರಿತ ನೆಲೆಯಲ್ಲಿ ಕತೆಗಳನ್ನು ರಚಿಸಿದರು. ವಿ.ಕೃ.ಗೋಕಾಕ್, ಶಾಂತಿನಾಥ ದೇಸಾಯಿ, ಯಶವಂತಚಿತ್ತಾಲ, ಅನಂತಮೂರ್ತಿ, ಪಿ.ಲಂಕೇಶ್, ಕೆ.ಪಿ.ಪೂರ್ಣಚಂದ್ರ ತೇಜಸ್ವಿ, ಕೃಷ್ಣ ಆಲನಹಳ್ಳಿ ಮುಂತಾದವರು. ಪರಂಪರೆ ಮತ್ತು ಮೌಲ್ಯಗಳನ್ನು ಪ್ರಶ್ನೆ ಮಾಡುವ ಹಾಗೂ ಮಾನವ ಸಂಬಂಧಗಳ ಹುಡುಕಾಟ ನವ್ಯಕತೆಗಳಲ್ಲಿ ಕಾಣಿಸಿತು. ಅಂತರ್ಮುಖತೆ, ಒಂಟಿತನ, ಅನಿಶ್ಚಿತತೆ, ದ್ವಂದ್ವ ಮನಃಸ್ಥಿತಿ ನವ್ಯಕತೆಗಳಲ್ಲಿ ಕಂಡು ಬಂದಿತು. ಉದಾ: ದೇಸಾಯಿ ಅವರ ಮಂಜುಗಡ್ಡೆ, ಚಿತ್ತಾಲರ ಕತೆಯಾದಳು ಹುಡುಗಿ, ಅನಂತ ಮೂರ್ತಿ ಅವರ ಸೂರ್ಯನ ಕುದುರೆ, ತೇಜಸ್ವಿ ಅವರ ತುಕ್ಕೋಜಿ ಕಂಡು ಬರುತ್ತವೆ.

೧೯೭೦ರ ದಶಕದ ಅನಂತರ ದಲಿತ–ಬಂಡಾಯ ಸಾಹಿತ್ಯ ಪಂಥ ಆರಂಭವಾದ ನಂತರದಲ್ಲಿ ಹಸಿವು, ಶೋಷಣೆ, ಬಡತನ, ಉಳಿಗಮಾನ್ಯಪದ್ಧತಿ, ಯಜಮಾನಿಕೆ ಸಂಸ್ಕೃತಿ ವಿರುದ್ಧ ಹೋರಾಟ, ಪುರೋಹಿತಶಾಹಿ ಪದ್ಧತಿ ವಿರೋಧ, ಮಹಿಳೆ ಮತ್ತು ಮುಸ್ಲಿಂ ಸಂವೇದನೆಗಳು ದಲಿತ–ಬಂಡಾಯ ಕತೆಗಳಲ್ಲಿ ಕಾಣಿಸಿದವು. ಭೂ ಮಾಲೀಕರೆ, ಬಂಡವಾಳ ಶಾಹಿಗಳ ವಿರೋಧ, ಜಾತೀಯತೆ ಮುಂತಾದ ವಿಚಾರಗಳಿಗೆ ಹೆಚ್ಚಿನ ಒತ್ತು ಕೊಡಲಾಯಿತು. ಈ ದಿಸೆಯಲ್ಲಿ ಕುಂ.ವೀರಭದ್ರಪ್ಪನ ಕತೆಗಳು, ಬರಗೂರರ ಕತೆಗಳು, ದೇವನೂರು ಮಹಾದೇವ ಅವರ ಕತೆಗಳನ್ನು ಹೆಸರಿಸಬಹುದು. ಈ ರೀತಿ ಆಧುನಿಕ ಸಣ್ಣಕತೆ ನವೋದಯ ಪೂರ್ವದ ಚಾರಿತ್ರಿಕ ಮತ್ತು ಸಾಮಾಜಿಕ ಅಂಶಗಳು ನವೋದಯ ಸಂದರ್ಭದ ಪರಂಪರೆ ಮತ್ತು ಆಧುನಿಕತೆಯ ನಿಧಾನಗತಿಯ ಪ್ರವೇಶ ಅನಂತರದ ಪ್ರಗತಿಶೀಲ ಕತೆಗಳಲ್ಲಿನ ಕೌಟುಂಬಿಕ ಸಮಸ್ಯೆಗಳು, ಸ್ತ್ರೀಯರ ಸಮಸ್ಯೆಗಳು, ಸ್ತ್ರೀಯರ ಆರ್ಥಿಕ ಮತ್ತು ಆಯ್ಕೆ ಸ್ವಾತಂತ್ರ್ಯ ಅನಂತರ ನವ್ಯದ ವ್ಯಕ್ತಿ ಕೇಂದ್ರಿತ ಮತ್ತು ಮಾನವ ಸಂಬಂಧದ ಹುಡುಕಾಟ ಹಾಗೂ ಪರಂಪರೆ ಮತ್ತು ಮೌಲ್ಯಗಳನ್ನು ಪ್ರಶ್ನೆ ಮಾಡುವ ಮನೋಭಾವ ಕಂಡು ಬಂದರೆ ದಲಿತ ಮತ್ತು ಬಂಡಾಯ ಕತೆಗಳಲ್ಲಿ ಹಸಿವು, ಶೋಷಣೆ, ಮುಸ್ಲಿಂ ಮತ್ತು ಸ್ತ್ರೀ ಸಂವೇದನೆಗಳು ಕಂಡು ಬರುತ್ತವೆ. ಈ ರೀತಿ ಆಧುನಿಕ ಕನ್ನಡ ಸಣ್ಣಕತೆಗಳು ಅಭಿವ್ಯಕ್ತಿ ವಿಧಾನದಲ್ಲಿ, ವಸ್ತುವಿನ ಆಯ್ಕೆಯಲ್ಲಿ, ಭಾಷೆ ಬಳಕೆ ಮತ್ತು ತಂತ್ರಗಾರಿಕೆಯಲ್ಲಿ ಹಂತ ಹಂತವಾಗಿ ಒಂದು ಪಂಥದ ಅನಂತರ ಮತ್ತೊಂದು

ಪಂಥದಲ್ಲಿ ಆಗಿರುವ ಈ ತರಹದ ಬದಲಾವಣೆಯನ್ನು ನಾನು ಆಧುನಿಕ ಸಣ್ಣಕತೆ ಪ್ರಕಾರದ ಬೆಳವಣಿಗೆಯಲ್ಲಿ ಕಂಡು ಬಂದಿರುವ ಮುನ್ನಡೆ (ಮುನ್ನೋಟ) ಯೆಂದೇ ಭಾವಿಸುತ್ತೇನೆ.

ಪ್ರಸ್ತುತ ಸಂದರ್ಭದಲ್ಲಿ ಸಣ್ಣಕತೆ ಪ್ರಕಾರದ ಅಭಿವ್ಯಕ್ತಿ ವಿಧಾನ ಅಂದರೆ ರಚನಾಕ್ರಮವನ್ನು ಅದರ ಮುನ್ನೋಟವನ್ನು ಗ್ರಹಿಸುವುದು ಮುಖ್ಯವೆಂದು ಭಾವಿಸಿದ್ದೇನೆ. ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಸಮಗ್ರವಾದ ಸಣ್ಣಕಥಾ ರಚನಾ ವಿನ್ಯಾಸದ ಮುನ್ನೋಟ ಅಂದರೆ ಕತೆ ರಚಿಸುವವರ ಮತ್ತು ಓದುಗರ ಮನ:ಸ್ಥಿತಿಯನ್ನು ಗ್ರಹಿಸುವುದೆಂದರ್ಥ. ಅಂದರೆ ಅಭಿವ್ಯಕ್ತಿ ಕ್ರಮ ಮತ್ತು ಓದುಗ ವರ್ಗದಲ್ಲಾಗುತ್ತಿರುವ ಬದಲಾವಣೆಯನ್ನು ಅವರ ಮನಸ್ಥಿತಿಯನ್ನ ಗ್ರಹಿಸುವುದು. ಪ್ರಸ್ತುತ ಕಥಾ ರಚನೆಯ ಮಾದರಿಯನ್ನು ಗ್ರಹಿಸುವುದಕ್ಕೆ ನಾನು ಇಲ್ಲಿ ಕೆಲವು ಕತೆಗಳು ಮತ್ತು ಕೆಲ ಕತೆಗಾರರನ್ನಷ್ಟೇ ಉದಾಹರಿಸುತ್ತೇನೆ. ಕಳೆದ ತಲೆಮಾರಿಗೆ ಹೋಲಿಸಿದರೆ ಇತ್ತೀಚಿನ ತಲೆಮಾರಿನ ಕತೆಗಾರರು ಎಲ್ಲ ಪಂಥ ಸಾಂಪ್ರದಾಯವನ್ನ ಅಂದರೆ ಪರಂಪರೆಯನ್ನ ಮೀರಿ ಕತೆಗಳನ್ನು ಬರೆಯುತ್ತಿದ್ದಾರೆ. ಇಲ್ಲಿ ಉದಾಹರಣೆಗಾಗಿ ವಸುಧೇಂದ್ರ, ಅಮರೇಶ ನುಗಡೋಣಿ, ಲೋಕೇಶ ಅಗಸನಕಟ್ಟೆ ಮತ್ತು ೨೦೧೨ರ ಪ್ರಜಾವಾಣಿಯ ದೀಪಾವಳಿ ವಿಶೇಷಾಂಕದಲ್ಲಿ ಬಹುಮಾನ ಪಡೆದ ಮೂರು ಕತೆಗಳನ್ನ ನಿದರ್ಶನವನ್ನಾಗಿ ತೆಗೆದುಕೊಂಡು ಅವಲೋಕಿಸಿ ಪ್ರಸ್ತುತ ತಲೆಮಾರಿನ ಸಣ್ಣಕತೆಗಳ ಮುನ್ನೋಟದ ಮಾದರಿಯೊಂದನ್ನ ಗ್ರಹಿಸಲಾಗಿದೆ.

ಜಿ.ಎಸ್.ಆಮೂರ ಹೇಳುವಂತೆ "ಹೊಸ ಶತಮಾನದ ಕತೆಗಳು ಕಳೆದ ಶತಮಾನದ ಕತೆಗಾರರನ್ನು ಕಾಡಿದ ಸಮಸ್ಯೆಗಳು ಅಸ್ಮಿತೆಯ ಪ್ರಶ್ನೆ, ಪರಂಪರೆ – ಆಧುನಿಕತೆಗಳ ಸಂಘರ್ಷ, ಫ್ಯೂಡಲ್ ವ್ಯವಸ್ಥೆಯ ಅತಿರೇಕಗಳು ಇತ್ಯಾದಿ – ಹೆಚ್ಚು ಕಡಿಮೆ ಮಾಯವಾಗಿವೆ. ಅದರ ಬದಲು ತೀರಾ ಸಮಕಾಲೀನ ಪ್ರಶ್ನೆಗಳಾದ ಜಾಗತೀಕರಣ, ಔದ್ಯೋಗಿಕರಣ, ಬಡತನದ ಸಮಸ್ಯೆಗಳು, ಸಾಮಾಜಿಕ ಅಸಮಾನತೆ, ಕತೆಗಾರರಿಗೆ ವಸ್ತುವನ್ನೊದಗಿಸಿವೆ. ಎಲ್ಲ ಕಾಲಕ್ಕೂ ಪ್ರಸ್ತುತವಾದ ಗಂಡು – ಹೆಣ್ಣಿನ ಸಂಬಂಧದ ಸಮಸ್ಯೆಗಳು, ಸ್ವಾರ್ಥ, – ಕ್ರೌರ್ಯ ಇಂಥ ಮಾನವೀಯ ಅತಿರೇಕಗಳೂ ಇಂದಿನ ಕತೆಗಾರರನ್ನು ಪ್ರಚೋದಿಸಿದೆ" (ಪ್ರಜಾವಾಣಿ, ದೀಪಾವಳಿ ವಿಶೇಷಾಂಕ, ಕಥಾಸ್ಪರ್ಧೆ, ತೀರ್ಪುಗಾರರ ಮಾತು) ಪ್ರಸ್ತುತ ಹೇಳಿಕೆಯನ್ನು ಪರಿಶೀಲಿಸಿದಾಗ ಪ್ರಸ್ತುತ ಶತಮಾನದ ಕತೆಗಾರರನ್ನ ಪ್ರಚೋದಿಸಿರುವ ಸಮಸ್ಯೆಗಳು ತುಂಬಾ ವಿಭಿನ್ನವಾದವುಗಳು. ಏಕೆಂದರೆ ನವೋದಯ ಪೂರ್ವದ ಸಾಮಾಜಿಕತೆ, ಹಾಸ್ಯ ಮತ್ತು ವರ್ಣನಾತ್ಮಕತೆಯಾಗಲಿ, ನವೋದಯದ ಪರಂಪರೆ ಮತ್ತು ಆಧುನಿಕತೆ

ಮುಖಾಮುಖಿಯಾಗಲಿ ಹಾಗೂ ಪ್ರಗತಿಶೀಲರನ್ನು ಕಾಡಿದ ಕೌಟುಂಬಿಕ ಸಮಸ್ಯೆಗಳಾದ ಸ್ತ್ರೀಯರ ಸಮಸ್ಯೆಗಳು, ಶಿಕ್ಷಣ, ಸಮಸ್ಯೆಗಳಾಗಲಿ ನವ್ಯ ಸಂದರ್ಭದ ವ್ಯಕ್ತಿ ನೆಲೆಗಟ್ಟಿನ, ಸಂಬಂಧಗಳ ಬಿರುಕು, ಒಂಟಿತನ ಮತ್ತು ಅಂತ ರ್ಮುಖತೆಗಳಾಗಲಿ, ದಲಿತ–ಬಂಡಾಯ ಸಂದರ್ಭದ ಹಸಿವು, ಶೋಷಣೆ ಒಟ್ಟಾರೆ ವ್ಯವಸ್ಥೆ ವಿರುದ್ಧ ಹೋರಾಟದ ಮನೋಭಾವ ಪ್ರಸ್ತುತ ತಲೆಮಾರಿನ ಕತೆಗಳಲ್ಲಿ ಹಿಂದೆ ಸರಿದಿರುವುದನ್ನು ಗುರುತಿಸಬಹುದು– ಉದಾಹರಣೆಗಾಗಿ ಬಿ.ಕೆ.ದಯಾನಂದ ಅವರ ನಾಯಿಬೇಟೆ, ಪರಮೇಶ್ವರ ಗುಂಡ್ಕಲ್ ಅವರ ಜಾನಕಿ ಮತ್ತು ಶಂಕರಯ್ಯ. ಆರ್ ಘಂಟಿ ಅವರ ಹೀಂಗಾ ಒಂದೂರಾಗ ಕತೆಗಳನ್ನು ಹೆಸರಿಸಬಹುದು. ನಾಯಿಬೇಟೆ ಕತೆಯಲ್ಲಿ ತನ್ನ ಬದುಕಿಗಾಗಿ ಕೀಳು ವೃತಿಯಾದ ನಾಯಿಬೇಟೆಯನ್ನು (ಮುನಿಸಪಾಲಟಿಯವರಿಗೆ ನಾಯಿಗಳನ್ನು ಹಿಡಿದುಕೊಡುವ ವೃತ್ತಿ) ಒಪ್ಪಿಕೊಂಡ ಸೆಂಟ್ ಹನ್ಮಂತ ಅಮಾಯಕ. ಇಲ್ಲಿ ಹನ್ಮಂತನೇ ಬೇಟೆಯ ಪ್ರಾಣಿಯಾಗುತ್ತಾನೆ. ನಾಜೂಕುತನದಿಂದ ವಂಚನೆ ಮಾಡುವ ಸಮುದಾಯದ (ಕಲಿತ ವ್ಯಕ್ತಿಗಳು) ವ್ಯಂಗ್ಯ ಇಲ್ಲಿ ಪ್ರಯೋಗಿಸಲ್ಪಟ್ಟಿದೆ. ಅಂದರೆ ಮಧ್ಯವರ್ತಿ ಸಂಸ್ಕೃತಿಯೊಂದು ಪ್ರಸ್ತುತದಲ್ಲಿ ಮನುಷ್ಯ ಬದುಕಲ್ಲಿ ಪ್ರವೇಶವಾಗಿರುವುದನ್ನು ಇಂದು ಎಲ್ಲ ಕ್ಷೇತ್ರಗಳಲ್ಲಿಯೂ ಕಾಣುತ್ತೇವೆ. ಅಮಾಯಕರನ್ನ, ಮುಗ್ಧರನ್ನ ವಂಚಿಸುವ ವರ್ಗ ಇಂದು ಸಮಾಜಕ್ಕೆ ಕಂಟಕಪ್ರಾಯವಾಗಿದೆ.

ಇಂದು ಕಾರ್ಪೊರೇಟ್ ಸಂಸ್ಕೃತಿಯೊಂದು ತಲೆಯೆತ್ತಿ ಮೌಲ್ಯಗಳನ್ನೆಲ್ಲ ಗಾಳಿಗೆ ತೂರಿ ಹಣಮಾಡುವಂತಹ ಪ್ರೌವೃತ್ತಿ ಹಾಗೂ ತನ್ನ ಪದವಿ. ಅಂತಸ್ತುಗಳನ್ನೆಲ್ಲಾ ಬದಿಗೆ ಇಟ್ಟು ಸಿಲಿಕಾನ್ ನಗರಗಳಲ್ಲಿ ಹೈಟಕ್ ವೇಶ್ಯಾವೃತ್ತಿ (ಜಾಗತೀಕರಣದ ಪ್ರಭಾವದಿಂದ) ಜ್ವಲಂತ ಸಮಸ್ಯೆಯಾಗಿ ಕಾಡುತ್ತಿರುವುದನ್ನು ಜಾನಕಿ ಕತೆಯಲ್ಲಿ ಕಾಣುತ್ತೇವೆ ಸಾಫ್ಟ್‌ವೇರ್ ಎಂಜನಿಯರಾದರೂ ವೇಶ್ಯಾವೃತ್ತಿಯನ್ನು ಆರಿಸಿಕೊಳ್ಳುವ ಮಹಿಳೆ ಆಂಟಿ ದೊಡ್ಡವಳಾದ ಮೇಲೆ ನಾನು ಸೂಳೆಯಾಗಬೇಕು ಎಂಥಾ ಮಜಾ ಇರುತ್ತೆ ಅಲ್ವಾ! ಈ ರೀತಿ ಹುಡುಗಿಯೊಬ್ಬಳು ಹೇಳುವ ಮಾತು ಲೈಂಗಿಕತೆ, ಕೌಟುಂಬಿಕ ಸಂಬಂಧಗಳ ಅಸಮಾನತೆ ಇಂದಿನ ಕತೆಗಾರರನ್ನು ಹೆಚ್ಚು ಆಕರ್ಷಿಸುತ್ತಿವೆ.

ವಸುಧೇಂದ್ರ ಅವರ ಯುಗಾದಿ ಕತೆಯಲ್ಲಿ ತಂದೆ ಮಕ್ಕಳ ಸಂಬಂಧ ಇಂದು ಯಾವ ರೀತಿಯದೆಂದು ಕಂಡು ಬರುತ್ತದೆ. ಕಡಿಮೆ ವೇತನದ ಶಿಕ್ಷಕನ ಮಗನೊಬ್ಬ ಸಾಫ್ಟ್‌ವೇರ್ ಎಂಜನಿಯರಾಗಿ ಕೈ ತುಂಬ ವೇತನ ಪಡೆದು ತನ್ನ ಬದುಕಲ್ಲಿ ಹಠಾತ್ತಾಗಿ ಮಾರ್ಪಾಡಾದಾಗ ಸಾಂಪ್ರದಾಯ, ಆಚಾರವಿಚಾರ, ಜಾತಿ ಕಟ್ಟಳೆ ಮೀರುವ ಹಣ ಹೆಚ್ಚಿದಂತೆಲ್ಲಾ ಆಯ್ಕೆ ಸ್ವತಂತ್ರವನ್ನು ತನ್ನದೇಯೆಂದು ತಿಳಿದು ಮಾನವ ಸಂಬಂಧಗಳನ್ನು ಹಣದಿಂದಲೇ ನಿರ್ಧರಿಸುವ ಎಂಜನಿಯರೊಬ್ಬ

ಕೊನೆಗೆ ಹಣದಿಂದ ನೆಮ್ಮದಿ ಮತ್ತು ಸಂಬಂಧಗಳು ಗಟ್ಟಿ ಗೊಳ್ಳುವುದಿಲ್ಲವೆಂದು ಅರಿಯುತ್ತಾನೆ ಈ ಕತೆಯಲ್ಲಿ ಇಂದಿನ ಕನ್ನಡ ಶಾಲೆಗಳ ಸ್ಥಿತಿಗತಿ, ಸದಾ ಒಂಟಿಯಾಗಿರಲು ಬಯಸುವ ಮನಸ್ಸುಗಳು, ಇಂದಿನ ಸ್ಪರ್ಧೆ ಹಾಗೂ ಜಂಜಾಟದಿಂದ ದೂರ ಉಳಿಯಲು ಬಯಸುವ ಮನಃಸ್ಥಿತಿಗಳು, ಹಣ & ಪ್ರತಿಭೆಯೇ ಮುಖ್ಯವಾಗಿ ಭಾವುಕತೆ ಹಿಂದೆ ಸರಿಯುವ, ಹಣ ಮತ್ತು ಅಧಿಕಾರವನ್ನು ಶ್ರೇಷ್ಠವೆಂದು ಭಾವಿಸುವಂತಹ ಮನಃಸ್ಥಿತಿವುಳ್ಳ ಪಾತ್ರಗಳನ್ನು ಇಂದಿನ ಕತೆಗಾರರು ಸೃಷ್ಠಿಸುತ್ತಿದ್ದಾರೆ.

ಡಾ.ಲೋಕೇಶ್ ಅಗಸನಕಟ್ಟೆ ಅವರ ಉತ್ತರಾಯಣದಲ್ಲಿ ಪಟ್ಟಣ ಪ್ರದೇಶದ ಮಧ್ಯಮ ವರ್ಗದವರ ಸಮಸ್ಯೆಗಳೇನೆಂಬುದನ್ನು ಕಾಣುತ್ತೇವೆ ಹಿರಿಯರು ಸಂಪಾದಿಸಿದ ಆಸ್ತಿ ಬಗ್ಗೆ ಯಾವುದೇ ರೀತಿಯ ಭಾವನಾತ್ಮಕ ಸಂಬಂಧವಿಲ್ಲದಿರುವುದು. ಇಲ್ಲಿ ಮುಖ್ಯವಾಗಿ ಅತೀ ಆಸೆ ಪಟ್ಟು ವಿನಾಶವಾಗುವ ಮಕ್ಕಳು, ಹಿರಿಯರನ್ನು (ಅಪ್ಪ, ಅಮ್ಮ) ವೃದ್ಧಾಶ್ರಮಗಳಿಗೆ ತಳ್ಳುವ ಮನೋಭಾವ, ಮಗನ ದುರಾಸೆಯಿಂದ ನೆಮ್ಮದಿ ಕಳೆದುಕೊಳ್ಳುವ ಆಚಾರ್ಯರ, ಕೂಡು ಕುಟುಂಬಕ್ಕೆ ಬದಲಾಗಿ ಒಂಟಿಯಾಗಿರುವ ಮನಃಸ್ಥಿತಿಗಳನ್ನು ಕಾಣುತ್ತೇವೆ. ಹಿಂದಿನ ಇವರ ಹಟ್ಟಿಯೆಂಬ ಭೂಮಿಯ ತುಣುಕು ಕಥಾಸಂಕಲನದ ಕಥೆಗಳ ವಸ್ತು, ಪಾತ್ರ, ಗ್ರಾಮ್ಯತೆ, ಹಸಿವು, ಉತ್ತರಾಯಣ ಕತೆಯಲ್ಲಿ ಇಲ್ಲ. ಜಾಗತೀಕರಣದ ಬಿಕ್ಕಟ್ಟು ಮತ್ತು ವಸಾಹತೋತ್ತರ ನೀತಿಯ ತಲ್ಲಣಗಳು ಇಂದಿನ ಕಥೆಗಳ ವಸ್ತುಗಳು ಆಗಿವೆ. ಇದೇ ರೀತಿ ಇಂದು ಕತೆಗಳನ್ನು ಬರೆಯುವವರ ಒಂದು ಪಟ್ಟಿಯನ್ನು ತಯಾರಿಸಬಹುದು.

ಈ ರೀತಿ ಪ್ರಸ್ತುತ ಸಣ್ಣಕಥಾ ಪ್ರಕಾರ ಎಲ್ಲ ರೀತಿಯ ಪರಂಪರೆ, ಪಂಥಗಳನ್ನು ದಾಟಿ ಇಂದಿನ ತುರ್ತು ಯಾವುದಾಗಿದೆಯೋ ಆ ಕಡೆ ಚಲಿಸತ್ತಿರುವುದನ್ನು ಕಾಣಬಹುದಾಗಿದೆ ಒಟ್ಟಾರೆ ಪ್ರಸ್ತುತ ಕತೆಗಳನ್ನು ಗಮನಿಸಿದಾಗ ಸ್ಥಗಿತತೆಯಿಂದ ಚಲನಶೀಲತೆಯ ಕಡೆ ಸಾಗುತ್ತಿರುವ ಈ ಪ್ರಕ್ರಿಯೆಯನ್ನ ಸಣ್ಣಕತಾ ರಚನೆಯಲ್ಲಾಗುತ್ತಿರುವ ಮುನ್ನೋಟವೆಂದು ಹೇಳಬಹುದಾಗಿದೆ ಬಹುಶ: ಕಾವ್ಯ ನಾಟಕ, ಮುಂತಾದ ಪ್ರಕಾರಗಳಲ್ಲೂ ಈ ತರಹದ ಮುನ್ನೋಟ (ಬದಲಾವಣೆ ಪ್ರಕ್ರಿಯೆ) ಕಂಡು ಬರುತ್ತಿದೆ. ಉದಾಹರಣೆಗಾಗಿ ಎಸ್.ಜಿ.ಸಿದ್ದರಾಮಯ್ಯನವರು ಜಾನಪದ ಮತ್ತು ಪುರಾಣವನ್ನು ನೆನಪಿಸುವ ಪದ್ಯಗಳನ್ನು ಬರೆಯುತ್ತಿದ್ದಾರೆ. ಈ ದಿಸೆಯಲ್ಲಿ ಲಕ್ಷ್ಮಿಪತಿ ಕೋಲಾರ, ಕೃಷ್ಣಮೂರ್ತಿ ಬಿಳಿಗೆರೆ ಮುಂತಾದವರ ಕಾವ್ಯ ಹೆಸರಿಸಬಹುದು. ಡಾ. ಲೋಕೇಶ್ ಅವರ ನಾಟಕ ನಮ್ಮೆಲ್ಲರ ಬುದ್ಧ ಒಂದು ಉದಾಹರಣೆ.

ಆಧುನಿಕ ಸಣ್ಣಕತೆಗಳ ಪ್ರಸ್ತುತ ತಲೆಮಾರಿನ ಕತೆಗಾರರ ಕತೆಗಳಲ್ಲಿನ

ಮುನ್ನೋಟವನ್ನ ಅಂದರೆ ಕಥಾ ಪ್ರಕಾರ ಸಾಗುವ ಮಾರ್ಗವನ್ನು ಈ ಕೆಳಕಂಡಂತೆ ಗುರುತಿಸಬಹುದು.

೧) ಅವಿಭಕ್ತ ಕುಟುಂಬದ ನಾಶದ ನೋವಿನ ಛಾಯೆಗಳು

೨) ಅಮಾನವೀಯತೆಯ ಕರಾಳಮುಖಗಳ ಅನಾವರಣ

೩) ಹಣಕೇಂದ್ರಿತ ಸಮುದಾಯವನ್ನ ಎದುರಿಸುವುದು ಹೇಗೆ ಎನ್ನುವ ಪ್ರಶ್ನೆಗಳು

೪) ಸಮಾನತೆ ಹೆಸರಲ್ಲಿ ನಡೆಯುವ ಸೋಗಿನ ನಾಟಕ

೫) ಮಡಿವಂತಿಕೆಯ ಸಂದರ್ಭದಲ್ಲಿ ದಲ್ಲಾಳಿ ಸಂಸ್ಕೃತಿಯೊಂದು ಸೃಷ್ಟಿಸಿರುವ ಬಿಕ್ಕಟ್ಟುಗಳು

೬) ಜಾಗತೀಕರಣದ ಪ್ರಭಾವ ಮತ್ತು ಪರಿಣಾಮಗಳು

೭) ಭಾಷೆಯ ಘನಿಷ್ಠ ದುಡಿಮೆ

೮) ಸಮಕಾಲೀನ ಸಂದರ್ಭಕ್ಕೆ ಕತೆಗಾರನೊಬ್ಬ ಕೊಡುವ ಸಂದೇಶ

ಪರಾಮರ್ಶನ ಗ್ರಂಥಗಳು

೧) ಕನ್ನಡ ಸಣ್ಣಕಥೆಗಳು : ಸಂ. ಜಿ.ಎಚ್.ನಾಯಕ

೨) ಶತಮಾನದ ಸಣ್ಣಕತೆಗಳ ಸಮೀಕ್ಷೆ : ಡಾ. ಕರೀಗೌಡ ಬೀಚನಹಳ್ಳಿ

೩) ಪ್ರಜಾವಾಣಿ ದೀಪಾವಳಿ ವಿಶೇಷಾಂಕ : ೨೦೧೨

ಎಚ್.ಎಸ್ ಶಿವಪ್ರಕಾಶರ ಮಾದಾರಿ ಮಾದಯ್ಯ ನಾಟಕದಲ್ಲಿ ಬುಟಕಟ್ಟು ಸಂಸ್ಕೃತಿಯ ಮೌಲ್ಯಗಳ ಸಂಘರ್ಷ ಹಾಗೂ ಪ್ರಭುತ್ವದ ಧೋರಣೆ

ಡಾ. ತಾರಾಮಣಿ. ಆರ್

ಎಚ್. ಎಸ್. ಶಿವಪ್ರಕಾಶರ ಮಾದಾರಿ ಮಾದಯ್ಯ ನಾಟಕವು ಮಲೆಮಾದೇಶ್ವರ ಕಾವ್ಯವನ್ನು ಆಧರಿಸಿ ೧೯೯೦ರಲ್ಲಿ ರಚನೆಗೊಂಡ ನಾಟಕವಾಗಿದೆ. ಮಲೆಮಾದೇಶ್ವರ ಕರ್ನಾಟಕದ ಸಾಂಸ್ಕೃತಿಕ ಪುರುಷರಲ್ಲಿ ಒಬ್ಬರು. ಮಧ್ಯಕಾಲೀನ ಅಂದರೆ ೧೬-೧೭ನೇ ಶತಮಾನದಲ್ಲಿ ಕರ್ನಾಟಕದ ಉತ್ತರಭಾಗದಿಂದ ದಕ್ಷಿಣಕ್ಕೆ ವಲಸೆ ಬಂದು ಅಲ್ಲಲ್ಲಿ ಸಂಚರಿಸುತ್ತಾ ಸಮಾಜದಲ್ಲಿ ಕೆಳಸ್ತರದಲ್ಲಿದ್ದ ಜನರನ್ನು ಪ್ರಭಾವಿಸುತ್ತಾ ಅವರಲ್ಲಿ ಆತ್ಮವಿಶ್ವಾಸ ತುಂಬುವುದರ ಮೂಲಕ ತನ್ನ ಒಕ್ಕಲನ್ನು ಬೆಳೆಸಿದವನು ಮಲೆಮಾದೇಶ್ವರ. ಭಾರತೀಯ ಸಮಾಜದಲ್ಲಿ ಮೇಲು-ಕೀಳಿನ ತಾರತಮ್ಯದ ವ್ಯವಸ್ಥೆ ತೀವ್ರವಾಗಿದ್ದ ಸಂಧರ್ಭದಲ್ಲಿ ಅದನ್ನು ತೊಡೆದು ಹಾಕಲು ಪ್ರಯತ್ನಿಸಿದ ಸಿದ್ಧಪುರುಷರಲ್ಲಿ ಮಲೆಮಾದೇಶ್ವರ ಮತ್ತು ಮಂಟೇಸ್ವಾಮಿ ಪ್ರಮುಖರು.

೧೨ನೇ ಶತಮಾನದಲ್ಲಿ ಬಸವಣ್ಣನವರಿಂದ ಪ್ರಾರಂಭಗೊಂಡ ಶರಣ ಚಳುವಳಿ ಕಾಲಾಂತರದಲ್ಲಿ ತಾನು ವಿರೋಧಿಸಿದ್ದ ವೈದಿಕ ವ್ಯವಸ್ಥೆಯ ಅನೇಕ ಅಂಶಗಳನ್ನು ರೂಢಿಸಿಕೊಳ್ಳುತ್ತಾ ಬಂದು ಒಂದು ಪ್ರತಿವ್ಯವಸ್ಥೆಯಾಗಿ ರೂಪುಗೊಂಡಿತು. ಆ ಸಂದರ್ಭದಲ್ಲಿ ಮೇಲು ಜಾತಿಯ ಶರಣರ ತಿರಸ್ಕಾರವನ್ನು ಮತ್ತು ಚಳುವಳಿಯ ದೌರ್ಬಲ್ಯಗಳನ್ನು ಸಹಿಸಲಾರದೆ ಕೆಳಜಾತಿಗಳಿಗೆ ಸೇರಿದ ಮಲೆಮಾದೇಶ್ವರ ಮತ್ತು ಮಂಟೇಸ್ವಾಮಿ ಕಲ್ಯಾಣದಿಂದ ಕರ್ನಾಟಕದ ದಕ್ಷಿಣ ಭಾಗಕ್ಕೆ ಬಂದು ಅಲ್ಲಿ ವೀರಶೈವ ಧರ್ಮದ ಮೂಲತತ್ವಗಳನ್ನು ಒಳಗೊಂಡಂತಂಹ ತಮ್ಮದೇ ಆದ ಹೊಸ ಪಂಥವನ್ನು ಸ್ಥಾಪಿಸಿದರು.

ಮಲೆಮಹದೇಶ್ವರ ಕಾವ್ಯದ ಬಹುಮುಖ್ಯ ಭಾಗ ಶ್ರವಣದೊರೆಯ ಸಾಲು. ನಿಸರ್ಗದ ದೇವತೆಗಳನ್ನು ತನ್ನ ಅಡಿಯಾಳಾಗಿಸಿಕೊಂಡ ಶ್ರವಣನನ್ನು ತಳಸಮುದಾಯದಿಂದ ಬಂದ ಮಾದಾರಿ ಮಾದಯ್ಯ ಸಂಹರಿಸುವ ಕಥೆ. ಎಚ್. ಎಸ್. ಶಿವಪ್ರಕಾಶರ ಮಾದಾರಿ ಮಾದಯ್ಯ ನಾಟಕವು ಮಲೆಮಾದೇಶ್ವರ ಕಾವ್ಯವನ್ನು

ಆಧರಿಸಿ ರಚನೆಗೊಂಡಿರುವ ನಾಟಕವಾದರೂ ಇಂದಿಗೂ ಮುಂದುವರೆದಿರುವ ಧಾರ್ಮಿಕ ಸಂಸ್ಥೆಗಳ ಕ್ರೌರ್ಯ, ಜಾತಿರಾಜಕಾರಣ, ಹಾಗೂ ಪ್ರಭುತ್ವದ ಧೋರಣೆಗಳನ್ನು ಮಾರ್ಮಿಕವಾಗಿ ವಿಡಂಬಿಸಿರುವುದನ್ನು ಕಾಣುತ್ತೇವೆ. ದರ್ಪ–ದೌರ್ಜನ್ಯದ ಸಂಕೇತದಂತೆ ಚಿತ್ರಿತಗೊಂಡಿರುವ ಶ್ರವಣನ ಸಂಹಾರವಾಗುವುದು ತುಳಿತಕ್ಕೊಳಗಾದ ಎಲ್ಲಾ ಸಮುದಾಯದ ರಕ್ತ ಮತ್ತು ಬೆವರಿನ ಸಂಕೇತವಾದ ಉರಿಚಮ್ಮಾಳಿಗೆಯಿಂದ. ನಾಟಕದ ಮುನ್ನುಡಿಯಲ್ಲಿ ಶಿವಪ್ರಕಾಶರು ಮಾದಯ್ಯನನ್ನು ಕುರಿತು "ಮಾದಯ್ಯ ಯೊರೂಬಾ ಜನಾಂಗದ ಓಗನ್ನನ ಹಾಗೆ, ಗ್ರೀಕರ ಪ್ರಮಿಥ್ಯೂಸನ ಹಾಗೆ, ಬ್ಲೇಕನ ಜೀಸಸ್ನ ಹಾಗೆ ಅವನು ಒಬ್ಬ ಸಾಂಸ್ಕೃತಿಕ ಪುರುಷ. ಕಸಿದುಕೊಳ್ಳಲ್ಪಟ್ಟದ್ದ ಬೆಳಕನ್ನು ಮರಳಿಸಿದವ. ಎಲ್ಲ ಕಟ್ಟುಗಳನ್ನೂ ಬಿಚ್ಚುವವ. ನರಮನುಷ್ಯರಾದಿಯಾಗಿ ಎಲ್ಲ ಜೀವ–ಜಡಗಳನ್ನೂ ಕಲ್ಪನೆಯ ಆಚೆ ಕಡೆ ಸೀಮೆಗೆ ಕೊಂಡೊಯ್ಯುವವ, ಮಾನವತ್ತ ದೈವತ್ಯಗಳನ್ನು ಮೀರಿದ ದೈವೀಕ ಮಾನವತೆಯ ಹರಿಕಾರ, ಅವನೊಬ್ಬ ಕಠೋರ ವಾಸ್ತವಗಳಿಗಿಂತ ಕಠೋರವಾದ ಆದರ್ಶ".[೨] ಇಂಥ ಕಠೋರವಾದ ಆದರ್ಶಯುತ ವಿಚಾರವನ್ನು ಆಧರಿಸಿ ಈ ನಾಟಕವನ್ನು ರಚಿಸಿರುವುದಾಗಿ ಹೇಳುವ ನಾಟಕಕಾರರು ಮುಂದುವರೆದು "ಮಲೆಮಾದೇಶ್ವರನ ಕಾವ್ಯದಿಂದ ಕೆಲವು ಸ್ಥೂಲ ಘಟನೆ ಪಾತ್ರಗಳನ್ನು ಇಲ್ಲಿ ಬಳಸಿಕೊಂಡಿರುವುದು ನಿಜವಾದರೂ ಈ ನಾಟಕ ಆ ಪುರಾಣವಲ್ಲ ಎನ್ನುವುದು ಆ ಕಾವ್ಯವನ್ನು ಓದಿದವರಿಗೆ ಕೇಳಿದವರಿಗೆ ಖಂಡಿತಾ ಅರ್ಥವಾಗುತ್ತದೆ. ಆ ಕಾವ್ಯವನ್ನು ಓದುವವರು, ಕೇಳುವವರು ಬಿಚ್ಚು ಮನಸ್ಸಿನಿಂದ ಈ ನಾಟಕವನ್ನು ಸ್ವತಂತ್ರವಾಗಿ ಓದಬಹುದು".[೩] ಎನ್ನುತ್ತಾರೆ. ಇಲ್ಲಿ ನಾಟಕಕಾರರು ಪುರಾಣದ ಕಟ್ಟುಗಳಿಂದ ಮಾದೇಶ್ವರನನ್ನು ಮುಕ್ತಗೊಳಿಸಿ ಸಾಮಾನ್ಯ ಮನುಷ್ಯರ ನಡುವಿನಿಂದಲೇ ಹುಟ್ಟಬಹುದಾದ ನಾಯಕನನ್ನು, ಅವನ ಕರ್ತವ್ಯಗಳನ್ನು ಪರಿಚಯಿಸುತ್ತಲೇ ಆಧುನಿಕ ಸಮಾಜದ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ಸ್ಥಾಪಿತ ಮೌಲ್ಯಗಳ ಜೊತೆಗೆ ಸಂಘರ್ಷಕ್ಕೆ ಇಳಿಯುವುದನ್ನು ಕಾಣುತ್ತೇವೆ.

ಬುಡಕಟ್ಟು ಸಂಸ್ಕೃತಿಗಳ ನಡುವಿನ ಮೌಲ್ಯಗಳ ಸಂಘರ್ಷವಾಗಿ ನಾಟಕ

ಮಲೆಮಾದೇಶ್ವರ ಕಾವ್ಯದಲ್ಲಿ ಗತಕಾಲದ ಒಂದು ವಿಶಿಷ್ಟ ಸಮುದಾಯವೊಂದರ ಆಹಾರ ಪದ್ಧತಿ, ವೃತ್ತಿಜೀವನ, ಜೀವನ ಕ್ರಮ ಮುಂತಾದವುಗಳು ಅತ್ಯಂತ ನಿಖರವಾಗಿ ಹಾಗೂ ವಿಸ್ತೃತವಾಗಿ ಮೂಡಿಬಂದಿದೆ. ಸಂಕಮ್ಮನ ಸಾಲಿನಲ್ಲಿ ಸೋಲಿಗರ ಬೇಟೆಯ ವಿವರವನ್ನು ನೀಡುವ ಕ್ರಮವನ್ನು ಗಮನಿಸಿದಾಗ ಸೋಲಿಗರ ಬೇಟೆ ಎಂದರೇನು? ಅಂದು ಅದು ಹೇಗೆ ನಡೆಯುತ್ತಿತ್ತು ಎಂಬುದರ ಸ್ಪಷ್ಟತೆಯನ್ನು ಕಾವ್ಯ ಮೂಡಿಸುತ್ತದೆ.

"ಅವರು ಹೆಜ್ಜೇನು ಮಲೆಗೆ ಹೋಗವರೆ ! ಹೆಜ್ಜೇನು ಬ್ಯಾಟೆ ಮಾಡವರೆ
ಕಿರುಜೇನು ಮಲೆಗೆ ಹೋಗವರೆ ! ಕಿರುಜೇನು ಬೇಟೆ ಮಾಡವರೆ
ಕಾಡು ಬಾಳೆ ಕಿತ್ತವರೆ ! ಕಟ್ಟೆಯ ನೀರ ಮೊಗದವರೆ
ಬಿದರಕ್ಕಿ ಕೊಡ್ಸವರೆ ! ಬೆಲ್ಲೂ ಗೆಣ್ಸ ಕಿತ್ತವರೆ
ಅಲಸಂದೆ ಹಣ್ಣ ಆದವರೆ ! ಮಾಗಳಿ ಬೇರ ಕಿತ್ತವರೆ"

ಹೀಗೆ ಕಾವ್ಯವು ಒಂದು ಸಮುದಾಯದ ಬದುಕಿನ ವಿವರಗಳನ್ನು ಖಚಿತವಾಗಿ ದಾಖಲಿಸುವುದರ ಮೂಲಕ ಆ ಸಮುದಾಯದ ಇತಿಹಾಸವನ್ನು ಕಟ್ಟಿಕೊಡುತ್ತದೆ.

ಕಾಡಿನ ಆಸರೆಯಲ್ಲಿ ಅದರ ಮಗುವಿನಂತೆ ಬೆಳೆದ ಮನುಷ್ಯ ಅದು ನೀಡುವ ಜೇನು, ಗೆಡ್ಡೆ, ಗೆಣಸು, ಹಣ್ಣು-ಹಂಪಲು ಹಾಗೂ ಅದರೊಳಗಿನ ಪ್ರಾಣಿ ಪಶುಗಳನ್ನು ಅಗತ್ಯವಿದ್ದಷ್ಟು ಆಹಾರಕ್ಕಾಗಿ ಕೊಂದು ಅಲ್ಲಿ ದೊರೆಯುವ ಬಿದಿರು, ಬೆತ್ತ ಹಾಗೂ ಗಂಧದ ಮರವನ್ನು ಕಡಿದು ಮಾರಿ ತನ್ನ ಅಗತ್ಯದ ವಸ್ತುಗಳನ್ನು ಕೊಳ್ಳುತ್ತಿದ್ದ. ಇಷ್ಟರಮಟ್ಟಿಗೆ ಮಾತ್ರ ಹೊರ ಜಗತ್ತಿನೊಂದಿಗೆ ಸಂಪರ್ಕ ಇಟ್ಟುಕೊಂಡು ತನ್ನ ಪಾಡಿಗೆ ತಾನು ಕಾಡಿನ ಕುವರನಾಗಿದ್ದ ಅವನಿಗೆ ಆಧುನಿಕತೆ ಧಾವಿಸಿ ತನ್ನ ನಿಯಂತ್ರಣಕ್ಕೊಳಪಡಿಸಿದ ವಿಚಾರವನ್ನು ನಾಟಕದ ಗುಡ್ಡರ ಮಾತುಗಳು ವ್ಯಕ್ತಪಡಿಸುತ್ತವೆ. ಆ ಕಾಲದ ಮಹತ್ವವನ್ನು ಕಾವ್ಯ ಕಟ್ಟಿಕೊಡುವಂತೆ ನಾಟಕದ ಗುಡ್ಡರು ತಮ್ಮ ತಮ್ಮ ಪ್ರದೇಶಗಳನ್ನು ಬಿಟ್ಟು ಬರುವುದರ ಹಿನ್ನೆಲೆಯನ್ನು ತಮ್ಮ ಅಸಹಾಯಕ ಬದುಕಿನ ವಿವರವನ್ನು ಕಟ್ಟಿಕೊಡುವ ರೀತಿಯಲ್ಲಿ ಇಂದಿನ ಸಮುದಾಯ ಅಥವಾ ಸಮಾಜದ ಜನರ ಜೀವನದ ಇತಿಹಾಸವು ಅನಾವರಣಗೊಳ್ಳುತ್ತದೆ. ಗುಡ್ಡರ ಮಾತುಗಳಲ್ಲಿ ಬುಡಕಟ್ಟು ಸಮುದಾಯದ ಬದುಕು ದುರಂತವಾದುದರ ಚಿತ್ರಣವಿದೆ. ಆಧುನಿಕ ಜೀವನ ಕ್ರಮದಿಂದಾಗಿ ಬುಡಕಟ್ಟು ಸಂಪ್ರದಾಯಗಳು, ಸಂಸ್ಕೃತಿಗಳು ಎದುರಿಸುತ್ತಿರುವ ತಲ್ಲಣದೊಂದಿಗೆ, ಆದಿವಾಸಿಗಳ ವಿವಿಧ ರೀತಿಯ ಆಹಾರ ಸಂಪ್ರದಾಯಗಳು ಇಂದು ಕಣ್ಮರೆಯಾಗುತ್ತಿರುವುದರ ವಿಷಾದ ನಾಟಕದಲ್ಲಿದೆ. ಒಂದು ಸಂಸ್ಕೃತಿಯ ಉಗಮಕ್ಕೆ ಕಾರಣವಾಗುವ ನೆಲ, ಜಲ, ಮಲೆ, ಬೆಟ್ಟ, ಗುಡ್ಡ, ಆಹಾರ ಮುಂತಾದವುಗಳ ನಾಶವನ್ನು ನಾಟಕ ತೋರುವುದಲ್ಲದೆ ಸಂಸ್ಕೃತಿ ನಾಶದ ಕರಾಳ ಛಾಯೆಯ ದರ್ಶನವನ್ನುಂಟುಮಾಡುತ್ತಿದೆ.

ನಾಟಕ ಪ್ರಾರಂಭವಾಗುವುದು ಗುಡ್ಡರ ಮಾತುಗಳ ಮೂಲಕ. ಪರಂಪರಾಗತವಾಗಿ ಮಲೆಮಾದೇಶ್ವರನ ಕಾವ್ಯವನ್ನು ಪ್ರಸ್ತುತ ಪಡಿಸುವವರನ್ನು ದೇವರಗುಡ್ಡರು ಅಥವಾ ಕಂಸಾಳೆಯವರು ಎಂದು ಕರೆಯಲಾಗುತ್ತದೆ. ಇವರೆಲ್ಲರೂ

ಮಾದೇಶ್ವರನ ಒಕ್ಕಲು. ಈ ಗುಡ್ಡರು ಇಲ್ಲಿ ಕಥೆಯನ್ನು ಹೇಳುವುದರೊಂದಿಗೆ ನಾಟಕದ ಪಾತ್ರಗಳೂ ಆಗಿ ಮುಂದುವರೆಯುತ್ತಾರೆ. ಇದು ಗ್ರೀಕರ ಮೇಳದವರನ್ನು ನೆನಪಿಗೆ ತರುತ್ತದೆ.

ಕಾಡು ಬಲಿಷ್ಠರ ಪಾಲಾದ ಮೇಲೆ ಒಂದೊಂದೇ ಮನುಷ್ಯ ವಿರೋಧಿ ಕೃತ್ಯಗಳು ನಡೆಯತೊಡಗಿದವು. ಕಾಡುಗಳ್ಳರ ಹಾವಳಿ ಹೆಚ್ಚಾಗಿ ಕಾಡಿನಲ್ಲಿನ ಅಮೂಲ್ಯ ಮರಗಳ ನಾಶವಾಗ ತೊಡಗಿತು. ಕಾಡುಗಳ್ಳರನ್ನು ಹಿಡಿಯುವ ನೆಪದಲ್ಲಿ ಅವರ ಮೇಲೆ ಗುಂಡಿನ ಚಕಮಕಿಯೂ ನಡೆಯತೊಡಗಿತು. ಅದರಲ್ಲಿ ಸತ್ತ ಕಾಡುಗಳ್ಳರೆಷ್ಟೋ ಅದು ಬೇರೆಯ ಪ್ರಶ್ನೆ ಆದರೆ ಅಲ್ಲಿನ ಮೂಲ ನಿವಾಸಿಗಳು ಬಲಿಯಾದುದಂತೂ ಸತ್ಯ. ಈ ಹಿನ್ನೆಲೆಯಲ್ಲಿ ನಾಟಕದ ಗುಡ್ಡರು ತಮ್ಮ ನೆಲೆಗಳಾದ ಆನೆಮಲೆ, ಜೇನುಮಲೆ, ನಾಗಮಲೆ, ಕಾನುಮಲೆ, ಗುಂಜಿಮಲೆ, ಗುಲಗಂಜಿ ಮಲೆಗಳಿಂದ ಹೊರ ಬರಬೇಕಾದ ಅನಿವಾರ್ಯಗಳನ್ನು ತಿಳಿಸುತ್ತಾ ಸಾಗುತ್ತಾರೆ.

ಗುಡ್ಡ ಆನೆಮಲೆ, ತನ್ನ ಮೂಲ ನೆಲೆಯು ಕಳ್ಳಕಾಕರ ಹಾವಳಿಗೆ ಗುರಿಯಾಗಿ ಅಲ್ಲಿ ಪೋಲೀಸರ ಗುಂಡಿನ ಚಕಮಕಿಗೆ ಹೆದರಿ ನೆಲೆಹೀನನಾಗಿ ಬೆಂಗಳೂರಿನಂತಹ ಪಟ್ಟಣಕ್ಕೆ ಬರಬೇಕಾದುದರ ಅನಿವಾರ್ಯತೆಯನ್ನು ತಿಳಿಸುತ್ತಾನೆ. "ನಾನು ಆನೆಮಲೆ. ಅಲ್ಲಿ ಕಳ್ಳಕಾಕರೆಲ್ಲ ಆನೆ ಬ್ಯಾಟೆ ಆಡ್ತಾ ಅವ್ರೆ. ಪೋಲೀಸ್ನೋರು ಕಳ್ಳರ ಬ್ಯಾಟೆ ಆಡ್ತಾ ಅವ್ರೆ. ಅವ್ರು-ಇವ್ರು ಸೇರ್ಕಂಡು ಜನ್ಗಳ್ ಬ್ಯಾಟೆಆಡ್ತಾ ಅವ್ರೆ. ಕೂಲಿನಾಲಿ ಮಾಡ್ಕಳಕೆ ಈ ಬೆಂಗ್ಳೂರ್ಪಟ್ನ ಸೇರ್ಕಂಡಿದೀನಿ".

ಗುಡ್ಡ ಎರಡನೆಯವನಾದ, ಜೇನುಮಲೆಯು ತನ್ನ ಜೀವನ ನಿರ್ವಹಣೆಗೆಂದು ಕಾಡಿನ ಜೇನನ್ನು ಸಂಗ್ರಹಿಸಿ ಬೆಂಗಳೂರಿನಂತಹ ಪಟ್ಟಣದಲ್ಲಿ ಮಾರಲು ಬಂದ ಮುಗ್ಧ ಆದಿವಾಸಿ. ಕಳ್ಳಕಾಕರಿಂದ ತುಂಬಿರುವ ಈ ನಾಗರಿಕ ಜಗತ್ತಿನಲ್ಲಿ ಮುಗ್ಧರು ವಂಚನೆಗೆ ವಂಚನೆಗೆ ಒಳಗಾಗುತ್ತಲೇ ಇರುವುದನ್ನು ಜೇನುಮಲೆಯ ಮಾತುಗಳಲ್ಲಿ ಕಾಣುತ್ತೇವೆ.

ಕಾಡಿಗೆ ಕಾಂಕ್ರೀಟ್ ಸಂಸ್ಕೃತಿಯು ಧಾಳಿಯಿಟ್ಟ ತಕ್ಷಣವೇ ಅಲ್ಲಿನ ಮೂಲ ನಿವಾಸಿಗಳ ಬದುಕಿನಲ್ಲಿ ಉಂಟಾದ ಸಮಸ್ಯೆಗಳನ್ನು ಗುಡ್ಡ ಮೂರನೆಯವನಾದ ಕಾನುಮಲೆಯ ಮಾತುಗಳಲ್ಲಿ ಕಾಣಬಹುದು. ಕಾಡಿನ ಸಂಸ್ಕೃತಿಗೆ ಕಾಂಕ್ರೀಟ್ ಸಂಸ್ಕೃತಿ ಧಾಳಿಯಿಟ್ಟಾಗ ಅವರ ದಾಸ್ಯಕ್ಕೆ ಒಳಗಾಗಿ ಬದುಕಬೇಕಾದ ಅನಿವಾರ್ಯತೆಯನ್ನು ಕಾಣುತ್ತೇವೆ. "ಅಲ್ಲಿರೋ ಗಂಧದ್ ಮರ್ಗಳ್ನೆಲ್ಲ ಬುಡಕೊತ್ತ ಕೊಚ್ಚಾಕ್ ಬುಟ್ಟವರೆ. ಇಲ್ಲೇ ಒಂದು ಇಸ್ಕೂಲ್ ಬಿಲ್ಡಿಂಗ್ ಕಟ್ತಾ ಅವ್ರೆ. ಅಲ್ಲಿ ಕೂಲಿ ಮಾಡ್ತಾ ಇದೀನಿ" ಎಂಬಲ್ಲಿ ಕಾಡಿನ ಮೂಲನಿವಾಸಿಗಳನ್ನು ತಮ್ಮ

ನಿಯಂತ್ರಣದಲ್ಲಿಟ್ಟುಕೊಂಡು ಅವರನ್ನು ಜೀತದಾಳುಗಳಂತೆ ದುಡಿಸಿಕೊಳ್ಳುತ್ತಿರುವ ವ್ಯವಸ್ಥೆಯ ಕ್ರೌರ್ಯದ ಅರಿವಾಗುತ್ತದೆ. ತನ್ನ ಮೂಲ ಕಸುಬಿಗಿಂತ ಜವಾನನ ಉದ್ದಿಮೆಯೇ ಮೇಲು ಎಂಬ ಭಾವವನ್ನು ಅವನಲ್ಲಿ ಮೂಡಿಸುವುದರ ಮೂಲಕ ಕಾಂಕ್ರೀಟ್ ಕಟ್ಟಡದ ನಿರ್ಮಾಣದಲ್ಲಿ ತೊಡಗಿರುವ ಈ ಜನಪದ ಮನಸ್ಸು ತನ್ನತನವನ್ನು ಕಳೆದುಕೊಂಡು ಅನ್ಯವನ್ನು ತನ್ನದನ್ನಾಗಿಸಿಕೊಳ್ಳುವ ಬಲವಂತವಾದ ಹೇರಿಕೆಯನ್ನು ಇಲ್ಲಿ ಕಾಣಬಹುದು.

ನಗರೀಕರಣ ಪ್ರಕ್ರಿಯೆಯಿಂದಾಗಿ ಮಹಾನಗರಗಳ ನಿರ್ಮಾಣಕ್ಕೆಂದು ಬೆಟ್ಟಗುಡ್ಡಗಳನ್ನು ಡೈನಾಮೈಟ್‌ನಿಂದ ಸಿಡಿಸಿ ಅದರ ಕಲ್ಲುಗಳನ್ನು ಬಹು ಮೌಲ್ಯಗಳಿಗೆ ಮಾರಿಕೊಳ್ಳಲಾಗುತ್ತಿದೆ. ಇಂದು ಅದಿರು ಯೋಜನೆಯಂತ ಅಭಿವೃದ್ಧಿಪರ ಯೋಜನೆಗಳ ಹೆಸರಿನಲ್ಲಿ ನಿಸರ್ಗದ ನೇರ ನಾಶ ನಡೆಯುತ್ತಿದ್ದು ಇದು ಆದಿವಾಸಿಗಳ ಆತ್ಮಸ್ಥೈರ್ಯವನ್ನೂ ನಾಶಗೊಳಿಸುತ್ತಿರುವುದು ಗುಡ್ಡ ನಾಲ್ಕನೆಯವನ ಮಾತುಗಳಲ್ಲಿ ವ್ಯಕ್ತವಾಗುತ್ತಿದೆ.

ನಗರದ ಬೆಡಗಿಗೆ ಬೆರಗಾಗಿ ಮಲೆಸೀಮೆಯನ್ನು ಬಿಟ್ಟು ಬಂದು ತಮ್ಮ ಮಕ್ಕಳನ್ನು ಅರಸುತ್ತಿರುವವನಾಗಿ ಗುಡ್ಡ ಆರು ಕಂಡುಬರುತ್ತಾನೆ.

"ನಾನು ಜನ ಪಿತ್ಪಿತಾಂತ ಓಡಾಡೋವಂತ ಈ ಬೀದಿ ಕೊನೇಗ್ ಕೂತ್ಕಂಡು ಎಕ್ದಾ ಒಲಿಯೋನು. ಎಲ್ಲಾರ್ ಕಾಲೂ ನನ್ ಕಣ್ ಮುಂದೆ ಓಡಾಡ್ತವೆ. ಯಾರ್ ಕಣ್ಣೂ ನಾನ್ ಕಾಣಾಕಿಲ್ಲ. ನಾವೆಲ್ಲ ದಾರಿಕಳ್ ಕಂಡಿದೀವಿ. ಈ ಪಟ್ನುದ್ ದಾರಿ ಒಳ್ಗೆ ದಾರಿ ಉಡುಕ್ತಾ ಇದೀವಿ". ಗುಡ್ಡ ಏಳನೆಯವನ ಈ ಮಾತು ಇಂದಿಗೂ ಜಾರಿಯಲ್ಲಿರುವ ಜಾತಿವ್ಯವಸ್ಥೆಯ ಕರಾಳ ಚಿತ್ರಣವನ್ನು ನೀಡುತ್ತದೆ. ಗುಡ್ಡರ ಮೇಲಿನ ಮಾತುಗಳನ್ನು ಗಮನಿಸಿದಾಗ ಮುಖ್ಯವಾಗಿ ಎರಡು ಅಂಶಗಳು ಸ್ಪಷ್ಟಗೊಳ್ಳುತ್ತವೆ. ಮೊದಲನೆಯದಾಗಿ ನಾವೇ ಪೋಷಿಸಿಕೊಂಡು ಬಂದ ವ್ಯವಸ್ಥೆಯೇ ಇಂತಹ ಅಸಹಾಯಕತೆಗೆ ನಮ್ಮನ್ನು ದಬ್ಬುವುದು, ಎರಡನೆಯದಾಗಿ ಆಧುನಿಕತೆಯ ಹೆಸರಿನಲ್ಲಿ ಹಲವು ಸೌಲಭ್ಯಗಳನ್ನು ಪಡೆಯುವ ಆತುರದಲ್ಲಿ ಸ್ವತಃ ವಿವೇಚನೆಯಿಲ್ಲದೆ ವರ್ತಿಸುವ ಮನುಷ್ಯರ ಮಾನಸಿಕ ದೌರ್ಬಲ್ಯ.

ತೇಜಸ್ವಿಯವರು ತಮ್ಮ ಜುಗಾರಿಕ್ರಾಸ್ ಕಾದಂಬರಿಯ ಮುನ್ನುಡಿಯಲ್ಲಿ ತಮಗೂ ಮತ್ತು ಕುವೆಂಪು ಅವರಿಗೂ ನಡುವಿನ ಒಂದು ತಲೆಮಾರಿನ ಅಂತರದಲ್ಲಿ ಕಾಡೊಳಗಿನ ಜೀವನ ಅವನತಿಯ ಹಾದಿ ಹಿಡಿದ ಪರಿಯನ್ನು ಹೀಗೆ ವರ್ಣಿಸುತ್ತಾರೆ. "ಕುವೆಂಪು ಅವರ ಕಾನೂರು ಹೆಗ್ಗಡತಿ, ಕಾರಂತರ ಮರಳಿಮಣ್ಣಿಗೆ ಕಾಲದ ಸಹ್ಯಾದ್ರಿಯ ಕಾಡುಗಳಿಗೂ ಇವತ್ತಿನ ಪರಿಸ್ಥಿತಿಗೂ ಇರುವ ಅಜಗಜಾಂತರ ವ್ಯತ್ಯಾಸಕ್ಕೆ ಈ

ಕಾದಂಬರಿಯೇ ಉದಾಹರಣೆ. ಕಾಡುಗಳು ಇವತ್ತು ಬಾಗಿಲು ತೆರೆದಿಟ್ಟ ಖಜಾನೆಗಳಾಗಿವೆ. ಈ ಕಾಡುಗಳ ಒಂದೊಂದೇ ಮರ ಎರಡು ಮೂರು ಲಕ್ಷ ಬೆಲೆ ಬಾಳುತ್ತದೆ. ಕಲ್ಲು ಕಳ್ಳರಿಗೆ, ಮರಗಳ್ಳರಿಗೆ, ಗಂಧ ಚಕ್ಕೆ ಸಾಗಣೆ ಮಾಡುವ ಖದೀಮರಿಗೆ ಕಣ್ಣು ಹರಿಸಿದಲ್ಲೆಲ್ಲಾ ಹಣ ರಾಶಿ ಬಿದ್ದಿರುವಂತೆ ಕಾಣುತ್ತದೆ. ಕಾಡಿನಿಂದ ಉತ್ಪತ್ತಿಯಾಗುತ್ತಿರುವ ಕಾಳಧನ ನಮ್ಮ ದೇಶದ ಅತ್ಯುನ್ನತ ರಾಜಕೀಯವನ್ನು ಸಹ ನಿಯಂತ್ರಿಸುತ್ತಿದೆ. ಇಲ್ಲಿ ಕಟ್ಟುವ ಅಣೆಕಟ್ಟುಗಳಾಗಲಿ, ಮುಳುಗಡೆಯಾಗುವ ಕಾಡಾಗಲಿ, ಕಲ್ಲು ಅದಿರುಗಳನ್ನು ತೆಗೆಯುವುದಾಗಲಿ, ಜನಗಳಿಗಿಂತ ಹೆಚ್ಚಾಗಿ ರಾಜಕಾರಣಿಗೂ ರಾಜಕೀಯಕ್ಕೂ ಅಗತ್ಯವಾಗ ತೊಡಗಿದೆ. ಕಾಳ ವ್ಯವಹಾರಗಳ ವಿಷವೃತ್ತ ಈ ಮಟ್ಟ ತಲುಪಿದ ಮೇಲೆ ಕಾನೂನು ಮತ್ತು ನ್ಯಾಯಾಲಯಗಳು ಇದನ್ನು ಪ್ರತಿರೋಧಿಸಲಾರವು"[೭] ಹೀಗೆ ಗುಡ್ಡರ ಮಾತುಗಳ ಮೂಲಕ ಕಾಡುಗಳ ಅಭಿವೃದ್ಧಿಯ ಹೆಸರಿನಲ್ಲಿ, ದೇಶ ಕಟ್ಟುವ ನೆಪದಲ್ಲಿ, ರಾಷ್ಟ್ರಾಭ್ಯುದಯದ ನೆಪದಲ್ಲಿ ತನಗೆ ಸರಿಬಾರದ್ದನ್ನು, ಸಣ್ಣಪುಟ್ಟದ್ದನ್ನು ಅಳಿಸಿ ಹಾಕಿಬಿಡುವ ವ್ಯವಸ್ಥಿತ ಸಂಚುಗಳನ್ನು ನಾಟಕವು ಬಿತ್ತರಿಸುತ್ತದೆ.

ನಿಸರ್ಗದ ಶಕ್ತಿಗಳನ್ನು ತನ್ನ ಅಡಿಯಾಳಾಗಿಸಿಕೊಳ್ಳಲು ಹವಣಿಸುತ್ತಿರುವ ಶ್ರವಣನಂತಹವರನ್ನು ನಾಶ ಮಾಡುವ ತಂತ್ರವಾಗಿ ನಾಟಕ:

ಮಲೆಮಾದೇಶ್ವರ ಕಾವ್ಯದ ಬಹುಮುಖ್ಯ ಭಾಗ ಶ್ರವಣದೊರೆಯ ಸಾಲು. ಶ್ರವಣದೊರೆ ಮತ್ತು ಮಾದಪ್ಪನ ಸಂಘರ್ಷ ಕಾವ್ಯದ ಬಹುಮುಖ್ಯವಾದ ಭಾಗವಾಗಿದೆ. ಮೂಲತಃ ಶ್ರವಣನನ್ನು ಸಂಹರಿಸಲೆಂದೇ ಮಾದಪ್ಪನ ಅವತಾರವಾದುದನ್ನು ಕಾವ್ಯದಲ್ಲಿ ಕಾಣಬಹುದಾಗಿದೆ. ಭಾರತೀಯ ಪುರಾಣಗಳಲ್ಲಿ ವರ್ಣಿತವಾಗಿರುವ ಅಸಮಾನ ಶೂರರಾದ ದೈತ್ಯರ ಎದುರು ಬ್ರಹ್ಮ, ವಿಷ್ಣು, ಮಹೇಶ್ವರರು ಹೋರಾಡಿ, ದೇವತೆಗಳನ್ನು ಉದ್ಧರಿಸಿದ ಕತೆಯೇ ಇಲ್ಲಿ ಜನಪದ ಕಥೆಯ ರೂಪದಲ್ಲಿ ಮರುಕಳಿಸಿದೆ. ಶ್ರವಣನಿಗೆ ಅದ್ವಿತೀಯ ಶಕ್ತಿಯನ್ನು ಆರೋಪಿಸಿ, ಅಂಥ ಘೋರ ವ್ಯಕ್ತಿಯನ್ನು ಜಯಿಸಿದ ಮಾದೇಶ್ವರನ ಮಹಿಮೆಗೆ ಕಳಸವಿಡುವಂತೆ ಇಲ್ಲಿನ ಸನ್ನಿವೇಶಗಳನ್ನು ಅಳವಡಿಸಲಾಗಿದೆ. ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಲು ಮಾದೇಶ್ವರ ಕುಟಿಲ ನೀತಿಯನ್ನು ಅನುಸರಿಸಿ ಶ್ರವಣನನ್ನು ಉಪಾಯಾಂತರದಿಂದ ನಿವಾರಿಸುವ ತಂತ್ರವೊಂದನ್ನು ಕಲ್ಪಿಸಿರುವುದು ನಿರುಪಮವಾಗಿದೆ.[೮] ಶ್ರವಣ ಸರ್ವ ಕಾಲಕ್ಕೂ ದರ್ಪದ, ದೌರ್ಜನ್ಯದ, ಅಹಂಕಾರದ ಪ್ರತೀಕವೇ ಆಗಿರುವುದರಿಂದ ನಾಟಕಕಾರರು ತಮ್ಮ ನಾಟಕದ ಮೂಲಕ ಇಂದು ಬೆಂಗಳೂರಿನಂತಹ ನಗರಗಳಲ್ಲಿ ಇರುವ ಶ್ರವಣನಂತಹ ರಾಜನನ್ನು ಹಾಗೂ ಅವನ ಆಶ್ರಯದಲ್ಲಿ ಕೊಬ್ಬಿರುವ ದರ್ಪಿಷ್ಠರನ್ನು ಮುನ್ನೆಲೆಯಲ್ಲಿಟ್ಟು ನಾಟಕವನ್ನು

ಪ್ರಸ್ತುತ ಪಡಿಸಿರುವುದು ಗಮನಾರ್ಹ. ಗುಡ್ಡರು ನಾಟಕವನ್ನು ಆಡಬೇಕೆಂದು ಯೋಚಿಸುವಾಗ ಅವರಿಗೆ ಬೆಂಗಳೂರು ಬಂಕಾಪುರಿಯಾಗಿಯೂ ಇಲ್ಲಿನ ಜನರೆಲ್ಲ ಶ್ರವಣ ದೊರೆಯಂತೆಯೂ ಕಾಣುವುದರಿಂದ ಶ್ರವಣದೊರೆಯ ನಾಟಕವನ್ನು ಆಯ್ದುಕೊಳ್ಳುತ್ತಾರೆ. ಶ್ರವಣನಂತಹ ಪ್ರಭುತ್ವಶಾಹಿ ಆಳ್ವಿಕೆ ನಡೆಸುತ್ತಿರುವಲ್ಲಿ ವ್ಯವಸ್ಥೆ ಹೇಗಿದೆ ಎಂಬುದರ ವಿಚಾರವನ್ನು ನಾಟಕಕಾರರು ಹೀಗೆ ಚಿತ್ರಿಸುತ್ತಾರೆ:

"ಆ ಸಮುಣುನ್ ರಾಜ್ದೊಳ್ಗೆ ದೊಡ್ ದೊಡ್ ಸ್ರೀಮಂತ್ರು ಮನೆ ಒಳ್ಗೆ ಲಕ್ಸುಮ್ ದೇವಿ ಕಾಲ್ ಮುರ್ಕಂಡ್ ಬಿದ್ದೌಳೆ. ಇಸ್ಕೂಲು ಕಾಲೇಜ್ನಾಗೆ ಸರಸೋತಿ ಬಾಯ್ ಕಟ್ಟುಸ್ಕೊಂಡು ಬಿದ್ದೌಳೆ. ತಿರುಪ್ತಿ ತಿಮ್ಮಪ್ಪ ಸೆಟ್ರು-ಮಾರ್ವಾಡಿಗಳ್ ಮನೆ ಬಾಗಿಲ ಕಾಯ್ಕೊಂಡವನೆ. ಅಕ ಅದಿಕ್ಕೆ ಇದು ಬಂಕಾಪುರಿ"

ಇಲ್ಲಿ ಶ್ರೀಮಂತರು, ಸ್ಕೂಲು-ಕಾಲೇಜುಗಳು, ಸೆಟ್ರು-ಮಾರ್ವಾಡಿಗಳು ಇಂದಿನ ದೇಶದ ಅರಾಜಕತೆಯ, ಅಪ್ರಾಮಾಣಿಕತೆಯ ಸಂಕೇತವಾಗಿ ತೋರುತ್ತಾರೆ. ಸಮಸ್ತ ಮುನ್ನೂರು ಕೋಟಿ ದೇವಾನುದೇವತೆಗಳನ್ನು ಸೆರೆಯಲ್ಲಿಟ್ಟು ಲೋಕಕಂಟಕನಾಗಿ ಮೆರೆಯುತ್ತಿರುವ ಶ್ರವಣದೊರೆ ಶ್ರೀಮಂತರು, ಸೆಟ್ರು, ಮಾರ್ವಾಡಿಗಳ ಬೆಂಬಲಿಗನಾಗಿ, ರಕ್ಷಕನಾಗಿ ಕಂಡುಬರುತ್ತಾನೆ. ಇವರ ದರ್ಪ, ದೌರ್ಜನ್ಯಗಳಿಗೆ ಸಿಲುಕಿ ನರಳುತ್ತಿರುವವರು ಸಾಮನ್ಯ ಜನ ಹಾಗಾಗಿಯೇ ಇಲ್ಲಿ ಶ್ರವಣ ದೊರೆ ಮತ್ತು ಮಾದಾರಿ ಮಾದಯ್ಯನ ನಡುವಿನ ಸಂಘರ್ಷವು ಸರ್ವಾಧಿಕಾರಿ ಮತ್ತು ಸಾಮಾನ್ಯ ಜನತೆಯ ನಡುವಿನ ಸಂಘರ್ಷವಾಗಿ ಇತಿಹಾಸದಲ್ಲಿ ನಡೆದಿರಬಹುದಾದ ಎಲ್ಲ ಹೋರಾಟಗಳನ್ನ ಸಂಕೇತಿಸುತ್ತದೆ. ನಾಟಕದಲ್ಲಿ ಸಾಮಾನ್ಯರ ಪ್ರತಿನಿಧಿಯಾದ ಗುಡ್ಡ ಏಳನೆಯವನು ಮಾದೇವನಾಗಿ ಪರಿವರ್ತಿತಗೊಂಡು ಶ್ರವಣನನ್ನು ಸಂಹರಿಸುತ್ತಾನೆ. ಸಾಮಾನ್ಯರ ನಡುವಿನಿಂದ ಜನಪರ ನಾಯಕನ ಜನನವಾಗುವುದರಿಂದ ಆತ ಕೆಲವೊಂದು ಗುಣಗಳನ್ನು ಒಳಗೊಂಡಿರಬೇಕಾಗುತ್ತದೆ ಅವುಗಳೆಂದರೆ;

ಅವನು ಅನ್ಯಾಯದ ವಿರುದ್ಧ ಹೋರಾಡುವವನಾಗಿರಬೇಕು
ಅಹಂಕಾರಿಗಳನ್ನು ವಿವೇಕಿಗಳನ್ನಾಗಿಸುವ ಚಾತುರ್ಯವಿರಬೇಕು
ಹಿಂಸೆಯ ಬದಲು ತಂತ್ರಗಳನ್ನು ಬಳಸುವವನಾಗಿರಬೇಕು

ಈ ಎಲ್ಲಾ ಗುಣಗಳನ್ನು ಹೊಂದಿರುವ ನಾಯಕನು ಸಮಾಜದಲ್ಲಿ ಈಗಾಗಲೇ ಸ್ಥಾಪಿತಗೊಂಡಿರುವ ಮೌಲ್ಯಗಳ ಜೊತೆಗೆ ನಿರಂತರವಾಗಿ ಹೋರಾಟ ನಡೆಸಬೇಕಾಗುತ್ತದೆ. ಶ್ರವಣನಂತಹ ಸಾಮ್ರಾಜ್ಯಶಾಹಿಯ ಆಳ್ವಿಕೆಯಲ್ಲಿ ಬಹಳವಾಗಿ ಕಾಡುವ ಸಮಸ್ಯೆಗಳಾದ ಹಸಿವು, ಅಲ್ಲಿನ ಮಠಾಧಿಪತಿಗಳ ಧೋರಣೆ, ಜಾತಿಯ

ಸಮಸ್ಯೆಗಳು ಎಲ್ಲಾ ಕಾಲದಲ್ಲಿಯೂ ಇರುವ ವಾಸ್ತವ ಸತ್ಯವಾಗಿದ್ದು ಅದನ್ನು ಹೋಗಲಾಡಿಸಲು ನಾಯಕ ಟಡುವ ನಿರಂತರ ಪ್ರಯತ್ನವನ್ನು ನಾಟಕದಲ್ಲಿ ಕಾಣುತ್ತೇವೆ.

ಎಲ್ಲಾ ಕಾಲದಲ್ಲಿಯೂ ಮನುಷ್ಯನನ್ನು ಕಾಡುವ ಬಹುಮುಖ್ಯ ಸಮಸ್ಯೆಗಳಲ್ಲಿ ಹಸಿವು ಬಡತನ, ದಾರಿದ್ರ್ಯ ಇವು ಸಾರ್ವಕಾಲಿಕ ಸಮಸ್ಯೆಗಳು ಇದನ್ನು ನಿವಾರಿಸಿ ಜನರ ನೋವು ದುಃಖಗಳಿಗೆ ಸ್ಪಂದಿಸುವುದು ಅಧಿಕಾರದಲ್ಲಿರುವ ಪ್ರತಿಯೊಬ್ಬನ ಕರ್ತವ್ಯವಾಗಿರುತ್ತದೆ. ಆದರೆ ಶ್ರವಣನಂತಹ ದೊರೆಗಳು ಲೋಕಕ್ಕೆ ಅಪವಾದವಾಗಿರುವುದು ಒಂದು ದುರಂತ. ಅವನ ಕ್ರಿಯೆಗಳೆಲ್ಲವೂ ಕೇವಲ ಮಾತಿನಲ್ಲಿಯೇ. ತನ್ನ ದಿಗ್ವಿಜಯ ಪೂರ್ಣಗೊಳ್ಳಲು ಸೂರ್ಯ, ಚಂದ್ರ, ಭೂತಾಯಿಯನ್ನು ಸೆರೆಯಿಡಿಯಲು ಹೊರಟ ಶ್ರವಣ ತನ್ನ ಪ್ರಜೆಗಳಿಗೆ ನೀಡುವ ಆಶ್ವಾಸನೆ ಎಲ್ಲಾ ಕಾಲದಲ್ಲೂ ಪ್ರಭುತ್ವವು ನೀಡುವ ಪೊಳ್ಳು ಆಶ್ವಾಸನೆಯಂತೆಯೆ ಗೋಚರವಾಗುತ್ತದೆ.

"ನನ್ನ ಪ್ರಜಾಸಮಸ್ತರೆ, ಕಾಡಿನವರೆ, ನಾಡಿನವರೆ; ಬಹುಸಂಖ್ಯಾತರೇ; ಬಡವರೆ, ಬಲ್ಲಿದರೆ; ಜ್ಞಾನಿಗಳೇ, ಅಜ್ಞಾನಿಗಳಡ, ಸ್ತ್ರೀಯರೆ, ಪುರುಷರೆ, ನಮ್ಮ ತ್ರಿಲೋಕವಿಜಯ ಅಂತಿಮ ಘಟ್ಟವನ್ನು ತಲುಪುತ್ತಿದೆ. ಇಲ್ಲಿಯವರೆಗೆ ನೀವು ಅನುಭವಿಸಿದ ಹಸಿವು, ಸಂತೃಪ್ತಿ, ದುಃಖ–ಸುಖ, ಶ್ರಮ–ವಿಶ್ರಾಂತಿ ಇವೆಲ್ಲವೂ ಈ ಮಹೋನ್ನತ ಘಟನೆಗೆಂದು ಇತಿಹಾಸ ಪುರುಷ ಅಂದರೆ, ನಾನು ಏರ್ಪಡಿಸಿದ ಸಿದ್ಧತೆಗಳು ನಾಳೆ ನಮ್ಮ ವಿಜಯೋತ್ಸವ ಸಂಪೂರ್ಣವಾದ ಮೇಲೆ ಎಲ್ಲರಿಗೂ ಕೆಲಸವಿಲ್ಲದೆ ಸಂಬಳ, ಶ್ರಮವಿಲ್ಲದೆ ಪ್ರತಿಫಲ, ಅಲ್ಲಿಯತನಕ ನಿಮ್ಮಲ್ಲಿರುವ ವೈಷಮ್ಯಗಳನ್ನು ಮರೆತು ಎಲ್ಲರೂ ಈ ವಿಜಯೋತ್ಸವದ ಮಹಾ ಕಾರ್ಯಕ್ರಮದಲ್ಲಿ ಸಹಕರಿಸಬೇಕೆಂದು ನಮ್ಮ ವಿನಯ ಪೂರ್ವಕ ಆಜ್ಞೆ". ಇದು ಅಧಿಕಾರದ ಅಮಲಿನಲ್ಲಿರುವ, ಹಸಿವೆಂಬುದರ ಅರಿವಿಲ್ಲದತಂಹ ಪ್ರತಿಯೊಬ್ಬ ಅಧಿಕಾರಿಯ ಆಸ್ವಾನೆಯಾಗಿದೆ. ಅಂತೆಯೇ ಇದಕ್ಕೆ ಪ್ರತಿಯಾಗಿ ಬಡತನದಲ್ಲಿದ್ದು ಹಸಿವಿನ ಕರಾಳತೆಯ ಪರಿಚಯವಿರುವ ಸಾಮಾನ್ಯನ ಅನುಭವವನ್ನು ನಾಟಕಕಾರರು ಬಹಳ ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

"ಈ ಅಸ್ವು ಲೋಕಾನೆಲ್ಲ ಕಿತ್ಕಂಡ್ ತಿನ್ತಾ ಅದೆ. ಇಂದುಲ್ ಕಾಲ್ದೊಳ್ಗೆ ಮಾರಿಮಸ್ಣೀರಾಗಿ ರಕ್ತ ಮಾಂಸ ಕೇಳ್ತಿತ್ತು. ಇವಾಗ ಬೆಂಗ್ಳೂರು, ಮೈಸೂರು ದ್ವೊಡ್ ದ್ವೊಡ್ ಪೇಟೆಗಳೊಳ್ಗೆ ಕೂಗಲ್ಮಾರಿ ಅಂಗೆ ಬಡುವ್ರು ಬಿಕಾರಿಗುಳ್ ಕಟ್ಲೊಳಗ್ ಕುಂತ್ಕಂಡು, ಕೆಂಡದ್ ನಾಲ್ಗೆ ಒಳ್ಗಡೆ ನುಡಿತಾ ಅದೆ. ಅದೇ ಅಸ್ವು ಮಾರಮ್ನಂಗೆ ನಾಲ್ಗೆ ಚಾಚಿ, ಕಣ್ಕೆಕ್ಕರಿಸ್ಕಂಡ್ ನೋಡ್ತದೆ. ಅದುಕ್ ಕ್ವಾರೆ ಅಲ್ ಬತ್ತದೆ. ಗುಂಡ್ಗೆ

ಬಗಿಯುವಂತ ಉಗುರ್ ಬತ್ತದೆ. ತಲೆ ಕೆದ್ರುಕತದೆ. ಮಕ್ಳುನ್ ಎದ್ರುಸ್ತದೆ. ಮುದುಕ್ರನ್ನ ನಡುಗುಸ್ತದೆ. ಬಡುವ್ರನ್ನ ಬಗ್ಗುಸ್ತೆ. ಧಗ್ಗಂತ ಅತ್ಕಂತದೆ. ಉರೀತದೆ. ಅಬ್ಗಂತದೆ. ಅಳ್ಳಗಳೊಳ್ಗೆ ಮಾರಮ್ನಾಗಿ ಬೀರಮ್ನಾಗಿ ಕೋಳಿ ಕೇಳ್ತದೆ. ಕುರೀನ್ ಕೇಳ್ತದೆ. ಮಕ್ಳನ್ ಕೇಳ್ತದೆ. ಅಸ್ಟೋರ್ನ ಕೇಳ್ತದೆ. ತಂತಾನೆ ತಿಂದ್ಕಳಕೋಯ್ತದೆ, ತಂತಾನೆ ತನ್ಕಳಕ್ಕಾಗಕಿಲ್ಲ ಒಟ್ಟೆ ತುಂಬ್ದೋರ್ನ ಇಟ್ಕಳ್ತದೆ. ಪ್ಯಾಟೆಗೋಯ್ತದೆ. ಪಟ್ನುಕೋಯ್ತದೆ. ಬೆಂಗ್ಳೂರ್ಗೋರ್ಯತ್ತದೆ. ಮೈಸೂರ್ಗೋರ್ಯತ್ತದೆ. ದೇಸ್ದೇಸುಕ್ ಓಯ್ತದೆ. ನಾನಿದೀನಿ. ನಾನಿಂಗೇ ಇರಕಿಲ್ಲ. ನನ್ನಾನೇ ತಿನ್ಕತೀನಿ. ನಿನ್ನೂ ತಿನ್ಕತೀನಿ. ಇಂಗಂತ ಬಡ್ರು ಬಗ್ರು ಒಟ್ಟೆ ಒಳ್ಗೆ ಕೆಂಡುದ್ ನಾಲ್ಗೆ ನುಡೀತದೆ. ಅಸ್ಟು ಬ್ರಮ್ಮಾಂಡಕ್ಕಿಂತ ದೊಡ್ದು. ಬ್ರಮ್ಮಾಂಡನೆಲ್ಲ ನಡುಗುಸ್ತದೆ. ಗುಡುಗ್ನ ತಿನ್ಕತದ್. ಸಿಡ್ಲುನ ನುಂಕತದೆ. ಸೂರ್ಯಚಂದ್ರುನ್ನೇ ನುಂಗಿಕಂಡಿರ ರಾವು ಯಾವ್ದುಗೊತ್ತಾ? ಅಸ್ಟು ಬ್ರಮ್ಮಾಂಡಕ್ಕಿಂತ ದೊಡ್ದು. ಚಂದ್ರುಂಕಿಂತ ದೊಡ್ದು. ಆಕಾಶಕ್ಕಿಂತ ದೊಡ್ದು". ಇದು ಹಸಿವಿನ ಕರಾಳ ರೂಪವನ್ನು ಅನುಭವಿಸಿದ ಸಾಮಾನ್ಯನ ಅನುಭವವಾಗಿದೆ. ಯಾವುದೇ ಕಾಲ, ದೇಶವೆನ್ನದೆ ಹಸಿವು ಸಾಮಾನ್ಯರನ್ನು ಕಾಡುವ ರೀತಿಯನ್ನು ಮಾದೇವನು ಪರಿಚಯಿಸುವ ರೀತಿ ಅಸಮಾನ್ಯವಾಗಿದೆ. ಶ್ರವಣನಿಗೆ ಜನರ ಹಸಿವನ್ನು ನೀಗಿಸುವ ಹಂಬಲವಿಲ್ಲ. ದಿಗ್ವಿಜಯದ ಹಂಬಲ. ಇಂತಹ ಅಸಮರ್ಥ ದೊರೆಯ ಆಶ್ರಯದಲ್ಲಿ ಹಲವಾರು ವ್ಯಕ್ತಿಗಳೂ, ಸಂಸ್ಥೆಗಳು, ಮಠ–ಮಾನ್ಯಗಳೂ, ತಮ್ಮ ಉದ್ದೇಶ ಸಾಧನೆಗಾಗಿ ಸಾಮಾನ್ಯರನ್ನು ಹಿಂಸಿಸುವುದು ಸರ್ವೇಸಾಮಾನ್ಯವಾದ ಸಂಗತಿಯಂತೆ ಚಿತ್ರತಗೊಂಡಿದೆ.

ಪ್ರಾಚೀನ ಕಾಲದಲ್ಲಿ ಮಠಗಳು ಮತ್ತು ಅಲ್ಲಿನ ಮಠಾಧಿಪತಿಗಳು ಧಾರ್ಮಿಕ ಸಂಸ್ಥೆಗಳಾಗಿ, ಶಿಕ್ಷಣ ಸಂಸ್ಥೆಗಳಾಗಿ ನೀತಿಬೋಧನೆಯನ್ನು ಮಾಡುವ ಕೇಂದ್ರಗಳಾಗಿದ್ದವು. ಆದರೆ ಆಧುನಿಕ ಕಾಲದಲ್ಲಿ ಮಠಗಳಿಗಿರುವ ಸ್ಥಾನವೇನು? ಎಂಬುದನ್ನು ನಾಟಕ ವಿಡಂಬನಾತ್ಮಕವಾಗಿ ಚಿತ್ರಿಸಿದೆ. ಇಂದು ಮಠಗಳು ಮತ್ತು ಮಠಾಧಿಪತಿಗಳು ರಾಜಕೀಯ ವಲಯದಲ್ಲಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಳ್ಳುತ್ತಿವೆ. ಇಂದು ಚುನಾವಣೆಗೆ ನಿಂತ ರಾಜಕೀಯ ಅಭ್ಯರ್ಥಿಗಳ ಸೋಲು ಗೆಲುವನ್ನು ನಿರ್ಧರಿಸುವಷ್ಟು ಪ್ರಾಬಲ್ಯವನ್ನು ಗಳಿಸಿವೆ. ಹಾಗಾಗಿಯೇ ಮಾದಯ್ಯ ಶ್ರವಣ ದೊರೆಗೆ ಚಮ್ಮಾಳಿಗೆಯನ್ನು ತರಲು ಹೊರಟ ಸಂದರ್ಭದಲ್ಲಿ ಕಾಡು ಮೇಡುಗಳಲ್ಲಿ ಅಲೆದು ಹಸಿವಿನಿಂದ ಸುತ್ತೂರು ಮಠಕ್ಕೆ ಬಂದಾಗ ದಾಸೋಹ ಕೇಂದ್ರವಾಗಿದ್ದ ಅಲ್ಲಿನ ಮಠ ಮತ್ತು ಮಠಾಧಿಕಾರಿಗಳು ಪ್ರವಚನವನ್ನು ನೀಡುತ್ತ ದೈಹಿಕ ಹಸಿವಿಗಿಂತ ಮಾನಸಿಕ ಹಸಿವನ್ನು ನಿವಾರಿಸುವುದಾಗಿ ಹೇಳುತ್ತ ಹಿಂದಿನಿಂದಿಲೂ ನಡೆಸಿಕೊಂಡು

ಬಂದ ಕಾಯಕದಿಂದ ಪಲಾಯನ ಮಾಡುತ್ತಿವೆ. ಜನರಿಗೆ ಸೂಕ್ತ ಮಾರ್ಗದರ್ಶನಗಳನ್ನು ನೀಡುತ್ತಿದ್ದ ಮಠಾಧಿಪತಿಗಳು ಇಂದು ಪ್ರಚಾರ ಪ್ರಿಯರಾಗಿದ್ದಾರೆ. ತಮ್ಮದೇ ಜಾತಿ ಉಪಜಾತಿಗಳಿಗೊಂದು ಮಠಗಳು ಸ್ಥಾಪನೆಯಾಗುತ್ತಿವೆ. ಸಮಾಜದ ಅಂಧತ್ವವನ್ನು ತೊಡೆದು ಹಾಕುವ ಕೆಲಸ ಮಾಡುತ್ತಿದ್ದ ಮಠಗಳು ಈಗ ತಮ್ಮ ಹಾಗೂ ತಮ್ಮ ಜಾತಿಯ ಜನರ ಅಭಿವೃದ್ಧಿಯಲ್ಲಿ ತೊಡಗಿಕೊಂಡು ತಾವೇ ಅಂಧತ್ವದಲ್ಲಿ ಸಿಲುಕಿಕೊಂಡಿವೆ. "ಸಾಕ್ಷಾತ್ ಶ್ರವಣ ದೊರೆಗಳೇ ನಮ್ಮ ಹತ್ತಿರ ಬಂದು ಆಶೀರ್ವಾದ ಪಡದುಕೊಳ್ಳುವ ಫೋಟೋ ಇಲ್ಲೇ ಇದೆ. ನೋಡು. ಪೇಪರ್ನಲ್ಲೂ ಬಂದಿತ್ತು. ಟೀವಿಲೂ ಬಂದಿತ್ತು. ನೋಡಲಿಲ್ಲವೇ? ರೇಡಿಯೋಲೂ ಹೇಳಿದ್ರಂತೆ. ಕೇಳಿಸಿಕೋಳ್ಳಲಿಲ್ಲವೆ? ಹೀಗಿರುವಾಗ ತಿರುಪೆ ಎತ್ತುವ ನೀನು ನಮಗೆ ಆಶೀರ್ವಾದ ಮಾಡಬಲ್ಲೆಯಾ?" ಹೀಗೆ ಶ್ರವಣ ದೊರೆಯಂತಹ ರಾಜಕೀಯ ನಾಯಕರನ್ನು ಹುಟ್ಟುಹಾಕುತ್ತ ಭೂ ಕಬಳಿಕೆ, ಹೈಟೆಕ್ ಶಾಲೆಗಳು, ಹೈಟೆಕ್ ಆಸ್ಪತ್ರೆಗಳನ್ನು ಆರಂಭಿಸಿ ಹಣಗಳಿಕೆಯ ಕಡೆಗೆ ವಾಲುತ್ತಿರುವ ಇಂದಿನ ಮಠಗಳನ್ನು ನಾಟಕಕಾರರು ವಿಡಂಬಿಸುತ್ತಿದ್ದಾರೆ.

ಅಧಿಕಾರದ ವ್ಯಾಮೋಹಕ್ಕೆ ಒಳಗಾದ ವ್ಯಕ್ತಿ ತಾನು ಮಡದಿಯನ್ನಾಗಿ ಮಾಡಿಕೊಳ್ಳಹೊರಟಿರುವುದು ತನ್ನ ತಾಯಿಯೆಂಬ ಅರಿವಿದ್ದೂ ಮುಂದುವರೆಯುವುದು ಅವನ ಕ್ರೌರ್ಯದ ಸಂಕೇತವೇ ಆಗಿದೆ. ಶ್ರವಣನ ಈ ಆಸೆಗಳನ್ನು ಹುಸಿಗೊಳಿಸುವವನು, ಅವನ ಇಂತಹ ಕ್ರೌರ್ಯದ ವಿರುದ್ಧ ಬಂಡಾಯವೇಳುವವನು ಮಾದಯ್ಯ. ಮಾದಯ್ಯ ಅನ್ಯಾಯದ ವಿರುದ್ಧ ಹೋರಾಡುವ, ಅಹಂಕಾರಿಗಳನ್ನು ವಿವೇಕಿಗಳನ್ನಾಗಿಸುವ, ಹಿಂಸೆಯ ಬದಲು ತಂತ್ರ ಪ್ರತಿತಂತ್ರಗಳನ್ನು ರಚಿಸುವ ಚಾತುರ್ಯವುಳ್ಳವನಾಗಿದ್ದಾನೆ. ಹಾಗಾಗಿ ಶ್ರವಣನಂತಹ ಅಧಿಕಾರಿಯನ್ನು ಕೊಲ್ಲಲು ಇದುವರೆಗೂ ನೊಂದು ಬೆಂದಿರುವ ತಳವರ್ಗದ ಹರಳಯ್ಯ ಮತ್ತು ಕಲ್ಯಾಣಮ್ಮನವರ ದೇಹದ ರಕ್ತ ಮತ್ತು ಬೆವರಿನ ಸಾಕಾರ ರೂಪವಾದ ಉರಿಚಮ್ಮಾಳಿಗೆಯನ್ನು ಹೊತ್ತು ಶ್ರವಣ ದೊರೆ ಹಾಗೂ ಅವನ ಸುತ್ತ ಕೊಬ್ಬಿರುವ ಇತರರನ್ನು ಬುಡಸಮೇತ ಕಿತ್ತು ಹಾಕಲು ಮಾದೇವ ಹೊರಡುತ್ತಾನೆ.

ಚಮ್ಮಾಳಿಗೆಯು ತಲೆತಲಾಂತರದಿಂದಲೂ ನೋವನ್ನುಂಡವರನ್ನು ಸಂಕೇತಿಸುವುದರಿಂದ ಆ ನೋವನ್ನುಂಡವರ ಬಿಸಿ ಉಸಿರು ಚಮ್ಮಾಳಿಗೆಯಲ್ಲಿ ಸೇರಿ ಶ್ರವಣನನ್ನು ಬುಡ ಸಮೇತ ಕಿತ್ತು ಹಾಕುವುದರೊಂದಿಗೆ ಪರಂಪರಾಗತವಾಗಿ ಬಂದಿರುವ ಅಪಮೌಲ್ಯಗಳನ್ನು ಕಿತ್ತೊಗೆಯುವ ಮೂಲಕ ಸಾಮಾಜಿಕ ಅಸಮಾನತೆಯನ್ನು ಹೋಗಲಾಡಿಸ ಬಯಸುವ ಮಾದಯ್ಯನ ನಿಲುವು ನಾಟಕದಲ್ಲಿ ಸ್ಪಷ್ಟವಾಗಿ ವ್ಯಕ್ತಗೊಂಡಿದೆ.

ಪರಾಮರ್ಶನ ಗ್ರಂಥಗಳು:

೧. ಮಲೆಮಾದಪ್ಪನ ಮಹಾಕಾವ್ಯ ಸಾಂಸ್ಕೃತಿಕ ಮುಖಾಮುಖಿ, ಡಾ. ವೆಂಕಟೇಶ ಇಂದ್ವಾಡಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

೨. ನಾಟಕಗಳು ಇಂದಿನವರೆಗೆ, ಎಚ್. ಎಸ್. ಶಿವಪ್ರಕಾಶ್, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೧೧.

೩. ಮುನ್ನುಡಿ, ಜುಗಾರಿ ಕ್ರಾಸ್, ಪೂರ್ಣಚಂದ್ರ ತೇಜಸ್ವಿ

೪. ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು, ಜೀ. ಶಂ. ಪರಮಶಿವಯ್ಯ, ಅಭಿನವ ಪ್ರಕಾಶನ, ಬೆಂಗಳೂರು.

ಚಿತ್ರದುರ್ಗ ಪರಿಸರದ ಪ್ರದರ್ಶನಾತ್ಮಕ ಜನಪದ ಕಲೆಗಳು

ಡಾ.ಚಿತ್ತಯ್ಯ ಕೆ

ಜನಪದ ಕಲೆಗಳು ಸಂಸ್ಕೃತಿಯ ಜೀವನಾಡಿ. ತನ್ನ ಎಲ್ಲ ವೈವಿಧ್ಯತೆಗಳೊಂದಿಗೆ ಕಲೆಗಳು ಸಹಜವಾಗಿ ಕಾಣಿಸಿಕೊಳ್ಳುತ್ತವೆ. ಚಿತ್ರದುರ್ಗ ಪರಿಸರದಲ್ಲಿ ಜರುಗುವ ಬುಡಕಟ್ಟು ಸಮುದಾಯದ ಹಬ್ಬ, ಜಾತ್ರೆ, ಉತ್ಸವ ಹಾಗೂ ವಿಶೇಷ ಸಂದರ್ಭಗಳಲ್ಲಿ ಕಂಡು ಬರುವ ಪ್ರದಶನಾತ್ಮಕ ಕಲೆಗಳು ಜನರನ್ನು ಆಕರ್ಷಿಸುವ ಶಕ್ತಿಯನ್ನು ಪಡೆದುಕೊಂಡಿವೆ. ಆದರೆ ಈ ಕಲೆಗಳ ರೂಪ ವೈಲಕ್ಷಣಗಳನ್ನು ರೂಪಿಸುವುದು ಆಯಾ ಪ್ರದೇಶದ ಭೂಗುಣ-ಹವಾಗುಣ ರಾಜಕೀಯ ಚರಿತ್ರೆ, ಅಲ್ಲಿ ಆಳಿ-ಬಾಳಿದ ಜನಾಂಗ ಎಂಬುವುದನ್ನು ಸೂಕ್ಷ್ಮವಾಗಿ ಗಮನಿಸಬಹುದು. ಹಾಗೆ ನೋಡಿದರೆ ಮಧ್ಯ ಕರ್ನಾಟಕದ ಚಿತ್ರದುರ್ಗ ಜಿಲ್ಲೆ ತುಂಬಾ ವಿಲಕ್ಷಣವಾದ ಭೌಗೋಳಿಕತೆಯಿಂದ ಕೂಡಿದೆ. ತೆಂಗು-ಕಂಗಿನಿಂದ ಕಂಗೊಳಿಸುವ ಹಾಗೂ ಅರೆಮಲೆನಾಡು ಎಂದು ಕರೆಸಿಕೊಂಡಿರುವ ಹೊಸದುರ್ಗ ಮತ್ತು ಹೊಳಲ್ಕೆರೆ. ಇಲ್ಲಿಯ ಜಾನಪದ ಸಮೃದ್ಧಿ ಅತೀ ವಿರಳ. ವೀರಗಾಸೆ ಯಂತಹ ಕೆಲವೇ ಮೇಲ್ವರ್ಗದ ಕಲೆಗಳು ಸಂಕೀರ್ಣ ಕಲೆಗಳಾಗಿ ಬೆಳೆದಿವೆ. ಆಂಧ್ರಪ್ರದೇಶದ ಗಡಿಯಂಚಿಗೆ ಹೊಂದಿಕೊಂಡಿರುವ ಹಿರಿಯೂರು, ಚಳ್ಳಕೆರೆ, ಭದ್ರಾ ಮೇಲ್ದಂಡೆ ಯೋಜನೆಯಿಂದ ವಿವಿಸಾಗರಕ್ಕೆ ಹರಿದು ಬರುವ ಅಲ್ಪಪ್ರಮಾಣದ ಹಿನ್ನೀರು, ವಿವಿಸಾಗರದಿಂದ ವರ್ಷಕ್ಕೆ ಎರಡು-ಮೂರು ಬಾರಿ ವೇದಾವತಿ ನದಿಗೆ ಹರಿದು ಬರುವ ನೀರಿನಿಂದ ಇತ್ತೀಚೆಗೆ ಈ ಭಾಗದ ಒಣ ಭೂಮಿಯನ್ನು ನೀರಾವರಿ ಪ್ರದೇಶವನ್ನಾಗಿ ಪರಿವರ್ತಿಸಿಕೊಂಡು ವೇದಾವತಿ ನದಿ ತೀರದ ಗ್ರಾಮದಲ್ಲಿ ತೆಂಗು-ಅಡಿಕೆ ಬೆಳೆಯಲು ಮುಂದಾಗಿರುವುದು ವಿಶೇಷವಾಗಿದೆ.

ಗುಡ್ಡ ಬೆಟ್ಟಗಳಿಂದ ಕೂಡಿರುವ ಮೊಳಕಾಲ್ಮೂರು ಭಾಗಗಳು ಹೆಚ್ಚು ಕಡಿಮೆ ಒಣ ಪ್ರದೇಶವನ್ನು ಹೊಂದಿದೆ. ಹೀಗಾಗಿ ಇಲ್ಲಿ ಬೀಳುವ ಅತ್ಯಲ್ಪ ಪ್ರಮಾಣ ಮಳೆ. ಈ ಭಾಗದಲ್ಲಿ ವರ್ಷಕ್ಕೆ ಒಂದೇ ಫಸಲನ್ನು ಬೆಳೆಯಲಾಗುತ್ತದೆ. ಜಿಲ್ಲೆಯ ಇಂಥ ಭೂ ಪ್ರದೇಶದಲ್ಲಿ ಬದುಕನ್ನು ಕಟ್ಟಿಕೊಂಡಿರುವ ಬಹುಪಾಲು ಮಂದಿ ಕಾಡುಗೊಲ್ಲ ಮ್ಯಾಸಬೇಡ ಬುಡಕಟ್ಟುಗಳು. ಆದಿಮ ಸಂಸ್ಕೃತಿಯ ಲಕ್ಷಣಗಳನ್ನು ದಟ್ಟವಾಗಿ

ಉಳಿಸಿಕೊಂಡು ಬಂದಿರುವ ಈ ಬುಡಕಟ್ಟುಗಳು ಸಮೃದ್ಧ ಜನಪದ ಸಾಹಿತ್ಯ ಹಾಗೂ ಕಲೆಗಳ ಗಣಿಯಾಗಿವೆ.

ಇದಲ್ಲದೆ ಇಡೀ ಜಿಲ್ಲೆಯಾದ್ಯಂತ ಸಾಮಾಜಿಕವಾಗಿ ತೀರಾ ಹಿಂದುಳಿದ ಆದಿ ಕರ್ನಾಟಕ, ಆದಿದ್ರಾವಿಡ, ಲಂಬಾಣಿ, ಕುರುಬ ಮುಂತಾದ ಅಲ್ಪಸಂಖ್ಯಾತ ಮುಂತಾದ ಹಿಂದುಳಿದ ಸಮುದಾಯಗಳು ನೆಲೆಸಿದ್ದಾರೆ. ಜಾನಪದ ಜೀವನ ವಿಧಾನ ಇವರೆಲ್ಲರ ಬದುಕಿನ ಎಲ್ಲ ಆಯಾಮಗಳಲ್ಲೂ ಜಾನಪದ ಸಾಹಿತ್ಯ-ಕಲೆ ಹಾಸುಹೊಕ್ಕಾಗಿದೆ. ಕಲೆ ಈ ಪರಿಸರದ ಜನರಿಗೆ ಉಸಿರಾಟದಷ್ಟೆ ಸಹಜ ಕ್ರಿಯೆಯಾಗಿದೆ ಎಂದರೆ ತಪ್ಪಾಗಲಾರದು. ಜನಪದ ಕಲೆ ಎಂದು ಗುರುತಿಸುವ ಪ್ರಕ್ರಿಯೆಗಳೆಲ್ಲಾ ಧಾರ್ಮಿಕ ವಿಧಿ ವಿಧಾನದ ಸಂದರ್ಭಗಳೊಂದಿಗೆ ತಳಕು ಹಾಕಿಕೊಂಡಿರುವುದನ್ನು ನಾಯಕನಹಟ್ಟಿ ತಿಪ್ಪೇಸ್ವಾಮಿ, ಕ್ಯಾತಪ್ಪ, ಗೌರಸಮುದ್ರದ ಮಾರಿದೇವತೆ, ದೊಡ್ಡಉಳ್ಳಾರ್ತಿ ಗೌರಿದೇವಿ, ಸೂನ್ನೆದ ಮಾರಮ್ಮ, ದಡ್ಲಿಸೂರನಾಯಕ ಮುಂತಾದ ಜಾತ್ರಾ ಆಚರಣಾ ಸಂದರ್ಭದಲ್ಲಿ ಇಂದಿಗೂ ಕಾಣಬಹದು. ಧಾರ್ಮಿಕ, ಸಾಂಸ್ಕೃತಿಕ ಪ್ರಕ್ರಿಯೆಯ ಅಂಗವಾಗಿ ಮತ್ತು ಮನರಂಜನೆಯ ಸಾಧನಗಳಾಗಿ, ಬರಬರುತ್ತಾ ಪ್ರತ್ಯೇಕ ಕಲಾಪ್ರಕಾರಗಳೆಂಬಂತೆ ಬಳಕೆಯಾಗುತ್ತಾ, ಸಾರ್ವಜನಿಕ ಸಭೆ, ಮೆರವಣಿಗೆಗಳಲ್ಲೂ ಭಾಗವಹಿಸುವುದರೊಂದಿಗೆ ಸಾರ್ವತ್ರಿಕವೂ, ಜಾತ್ಯತೀತವೂ ಅಗುವುದರೊಂದಿಗೆ ಪ್ರದರ್ಶನ ಕಲೆಗಳ ಸಂಕೀರ್ಣತೆಯನ್ನು ಪಡೆದುಕೊಳ್ಳುತ್ತಿರುವುದನ್ನು ಗುರುತಿಸಲು ಸಾಧ್ಯವಿದೆ.

ಪ್ರದರ್ಶನಾತ್ಮಕ ಕಲೆಗಳು: ಮಾಗಿಯ ಕಾಲ ಹಾಗೂ ವಿಶೇಷ ಸಂದರ್ಭಗಳಲ್ಲಿ ಜರುಗುವ ಹಬ್ಬ, ಜಾತ್ರೆ ಹಾಗೂ ಉತ್ಸವಗಳಲ್ಲಿ ಜನರನ್ನು ಆಕರ್ಷಿಸುವ, ಪ್ರದರ್ಶನಗೊಳ್ಳುವ ಬಯಲು ಸೀಮೆಯಲ್ಲಿ ಅತ್ಯಂತ ಜನಪ್ರಿಯವಾದ ಕಲೆಗಳಾದ ಕೋಲಾಟ, ಉರುಮೆ, ತಮಟೆ, ಚೌಡಿಕೆ, ಸೋಬಾನೆ ಪದ, ಗಗ್ಗರ(ಕಗ್ಗದ) ಪದ, ಭಜನೆ, ಮಣೇವು ಇತ್ಯಾದಿ.

ಕೋಲಾಟ : ಚಿತ್ರದುರ್ಗ ಮತ್ತು ಆಂಧ್ರದ ಗಡಿ ಭಾಗದ ಗಂಡು ಕಲೆ. ಇದು ಮಕ್ಕಳು, ಮಹಿಳೆಯರಿಂದ ಹಿಡಿದು ವಯೋವೃದ್ಧರವರೆಗೂ ಯಾವುದೇ ಜಾತಿ-ಲಿಂಗ ಬೇಧವಿಲ್ಲದೆ ಕೋಲಾಟವನ್ನು ಆಡುತ್ತಾರೆ. ಕತ್ರಿಕೋಲು, ಸುತ್ತುಕೋಲು, ಜಡೇಕೋಲು, ಸಾದಕೋಲು ಹೀಗೆ ಕೋಲಾಟ(ವಿಧ)ದ ಹಲವು ಕೋಪ್‌ಗಳಿರುವುದು ಪ್ರದರ್ಶನಗಳು ಕಂಡುಬರುತ್ತವೆ. ಅವುಗಳಲ್ಲಿ ವಿಶಿಷ್ಟ ಮತ್ತು ಪ್ರತಿಷ್ಠೆಯ ಆಟವೆಂದರೆ 'ಜಡೇಕೋಲು'. ಇದು ಈ ಭಾಗದ ಬುಡಕಟ್ಟು ಸಮುದಾಯದ ಹಟ್ಟಿಗಳಲ್ಲಿ ಹೇರಳವಾಗಿ ಕಂಡುಬರುತ್ತದೆ. ಚಳ್ಳಕೆರೆ ತಾಲ್ಲೂಕಿನ ಹೊಟ್ಟೆಪ್ಪನಹಳ್ಳಿ, ಜಡೇಕುಂಟೆ,

ಹುಳ್ಳಿಕಟ್ಟೆ, ಪರಶುರಾಂಪುರ, ಸೂರನಹಳ್ಳಿ, ಬಂಜಗೆರೆ, ಚಿಕ್ಕೇನಹಳ್ಳಿ, ಗೋಪನಹಳ್ಳಿ ಮುಂತಾದ ಗ್ರಾಮದಲ್ಲಿ ಕೋಲಾಟದ ಕಲಾವಿದರು ಇದ್ದಾರೆ. ಹನ್ನೆರಡು ಹದಿಮೂರು ವರ್ಷದ ಶಾಲಾ ಹುಡುಗ, ಹುಡುಗಿಯರು ಈ ಕೋಲಾಟ ಆಡುತ್ತಾರೆ. ಮಳೆಗಾಲ ಕಳೆದು ಹೊಲದ ಬೆಳೆ ಮನೆ ಸೇರಿ, ಬಿಡುವಾದ ಕಾಲಕ್ಕೆ ರೈತರು ಸಂಜೆ ಹೊತ್ತಿನಲ್ಲಿ ಕೋಲಾಟದ ಮೂಲಕ ಮನರಂಜನೆ ಪಡೆಯುತ್ತಿದ್ದರು. ಆದರೆ ಇಂದು ಟಿ.ವಿ.ಮಾಧ್ಯಮದ ಹಾವಳಿಯಿಂದ ಕೋಲಾಟ ಪ್ರದರ್ಶನವು ಜಾತ್ರೆ, ಉತ್ಸವಗಳಿಗೆ ಮಾತ್ರ ಸೀಮಿತವಾಗಿರುವುದು ವಿಪರ್ಯಾಸದ ಸಂಗತಿಯೇ ಸರಿ.

ಬೆಳದಿಂಗಳ ರಾತ್ರಿ ಅಥವಾ ವಿದ್ಯುತ್ ದೀಪದ ಬೆಳಕಿನಲ್ಲಿ ತಮ್ಮ ತಮ್ಮ ಊರುಗಳ ಮುಂದೆ ಅಥವಾ ದೇವಸ್ಥಾನಗಳ ಮುಂದೆ ಕೋಲಾಟ ಆಡುತ್ತಾರೆ. ಬುಡಕಟ್ಟು ಸಮುದಾಯದವರು ತಮ್ಮ ಆರಾಧ್ಯ ದೈವಗಳ ಜಾತ್ರೆ ಹಬ್ಬ, ಹರಿದಿನಗಳಲ್ಲಿ ವಿಶೇಷವಾಗಿ ಕೋಲಾಟ ಆಡುತ್ತಾರೆ. ಕೋಲಾಟ ಕಲಿಸಲು ಹಟ್ಟಿಗಳಲ್ಲಿ ಮೇಳಗಾರರಿದ್ದಾರೆ. ಇವರು ಹೊಸದಾಗಿ ಕಲಿಯುವಂತಹ ಮಕ್ಕಳಿಗೆ ಗುರುಗಳಿದ್ದಂತೆ. ಸುಮಾರು ಒಂದೆರಡು ತಿಂಗಳಲ್ಲಿ ಕೋಲು ಹೊಡೆಯುವುದನ್ನು ಕಲಿಸುತ್ತಾರೆ. ಈ ಕೋಲಾಟವನ್ನು ಹೆಚ್ಚಾಗಿ ದೇವರುಗಳ ಜಾತ್ರೆಯಲ್ಲಿ ಪ್ರದರ್ಶಿಸಲಾಗುತ್ತದೆ. ಆಯಾಯ ದೇವತೆಗಳ ಹಬ್ಬಗಳಲ್ಲಿ ಆ ದೈವದ ಮೇಲೆ ಹಾಡನ್ನು ಹಾಡುತ್ತಾ ಹೆಜ್ಜೆ ಹಾಕುತ್ತಾ(ಕೋಲೊಯ್ಯುತ್ತಾ) ಕುಣಿಯುತ್ತಾರೆ. ಕೋಲಾಟಕ್ಕೆ ಬೇಕಾಗುವ ಕೋಲುಗಳನ್ನು ಬಹಳ ಕಟ್ಟುನಿಟ್ಟಾಗಿ ಅಡವಿಗೆ ಹೋಗಿ ಮರವನ್ನು ಪೂಜಿಸಿ ಕಡಿದುಕೊಂಡು ಬರುತ್ತಾರೆ. ಕಾರೆಗಿಡ, ಹಿಂಗಾರದಗಿಡ, ಕೊಡಸು ಮುಂತಾದ ಮರಗಳಿಂದ ಕೋಲುಗಳನ್ನು ಕಡಿಯುತ್ತಾರೆ. ಅನಂತರ ಅವುಗಳನ್ನು ಒಣಗಿಸಿ ಒಂದುವರೆ ಅಡಿ ಉದ್ದಕ್ಕೆ ಕತ್ತರಿಸಿ ದುಂಡಾಗಿಸಿ ಕೋಲಾಟಕ್ಕೆ ಕೋಲುಗಳನ್ನು ಸಿದ್ದಿಗೊಳಿಸುತ್ತಾರೆ. ನಂತರ ಅರಿಶಿಣ, ಎಣ್ಣೆ ಬೆರೆಸಿ ಕೋಲುಗಳಿಗೆ ಬಳಿಯುತ್ತಾರೆ. ಕ್ಯಾತೇದೇವರ ಜಾತ್ರೆ ಪ್ರಾರಂಭವಾಗುತ್ತಿದ್ದಂತೆ ತಮ್ಮ ಕಟ್ಟೆಮನೆ ವ್ಯಾಪ್ತಿಯ ಹಟ್ಟಿಗಳಲ್ಲಿ ಕಾಡುಗೊಲ್ಲರ ಕೋಲಾಟದ ಪ್ರದರ್ಶನಗೊಳ್ಳುತ್ತವೆ. ಕೋಲಾಟದಲ್ಲಿ ಹತ್ತು ಹನ್ನೆರಡು ಜನಗಳ ಒಂದೊಂದು ತಂಡವಿರುತ್ತದೆ. ಇವರಿಗೆ ಒಬ್ಬ ಮೇಳಗಾರ ಇರುತ್ತಾನೆ. ಒಂದು ಹಲಗೆ, ಪ್ರತಿಯೊಬ್ಬರು ಕಾಲುಗಳಿಗೆ ಚಿರುಗೆಜ್ಜೆ, ಕಿರುಗೆಜ್ಜೆ ಕಟ್ಟಿಕೊಳ್ಳುತ್ತಾರೆ. ಎಲ್ಲರೂ ಒಂದೇ ತರಹದ ಬಿಳಿ ಬನಿಯನ್ ಮತ್ತು ಬಿಳಿ ಕಚ್ಚೆಪಂಚೆ ಉಟ್ಟಿರುತ್ತಾರೆ. ತಲೆಗೊಂದು ಕೆಂಪು ಟವಲ್ ಕಟ್ಟಿಕೊಳ್ಳುತ್ತಾರೆ. ಕ್ಯಾತಪ್ಪನ ಜಾತ್ರೆಯಲ್ಲಿ ಸುತ್ತ ಮುತ್ತಲಿನ ಹಳ್ಳಿಗಳಿಂದ ಸುಮಾರು ಎಂಟೊಂಬತ್ತು ಕೋಲಾಟದ ತಂಡಗಳು ಬಂದಿರುತ್ತವೆ. ಒಂದೊಂದು ತಂಡದವರು ಒಂದೊಂದು ರೀತಿಯಲ್ಲಿ ಪ್ರದರ್ಶನ

ಕೊಡುತ್ತಾರೆ. ಕಾಮಸಮುದ್ರದ ಮಹಿಳಾ ಕೋಲಾಟದ ತಂಡ ಆಕರ್ಷಕವಾಗಿ ಪ್ರದರ್ಶನ ನಡೆಸುತ್ತದೆ.

ಚೌಡಿಕೆ: ಇದು ಎಲ್ಲಮ್ಮನ ಆರಾಧನಾ ಕಲೆಯಾದರೂ ಕ್ಯಾತಪ್ಪನ ಜಾತ್ರೆಯಲ್ಲಿಯೂ ಈ ಕಲೆ ಪ್ರದರ್ಶನಗೊಳ್ಳುತ್ತದೆ. ಚೌಡಿಕೆ ಕಲಾವಿದರನ್ನು ಜೋಗಪ್ಪ ಮತ್ತು ಜೋಗತಿ ಅಥವಾ ಬಸವಿಯವರು ಎಂದು ಕರೆಯಲಾಗುತ್ತದೆ. ಜೋಗಪ್ಪ, ಜೋಗತಿಯರು ದೇವರ ದೀಕ್ಷೆಯನ್ನು ಪಡೆದುಕೊಳ್ಳುತ್ತಾರೆ. ಇವರು ಚೌಡಿಕೆ, ತಾಳ, ತಮಟೆ ವಾದ್ಯಗಳನ್ನು ಬಳಸುತ್ತಾರೆ.

ಉರುಮೆ ವಾದ್ಯ: ಜನರನ್ನು ಹುಚ್ಚೆದ್ದು ಕುಣಿಯುವಂತೆ ಮಾಡುವ ವಾದ್ಯವೆಂದರೆ ಉರುಮೆ. ಇದನ್ನು ಕಾಡುಗೊಲ್ಲರು ಮತ್ತು ಮ್ಯಾಸಬೇಡರು ತಮ್ಮ ದೇವರುಗಳ ಉತ್ಸವಗಳಲ್ಲಿ ಹೆಚ್ಚಾಗಿ ಬಳಸುತ್ತಾರೆ. ಈ ವಾದ್ಯ ಇಲ್ಲದೆ ಹೋದರೆ ಗುಬ್ಬ(ಗುಡಿ)ದಲ್ಲಿರುವ ದೈವಗಳನ್ನು ಯಾವುದೇ ಕಾರಣಕ್ಕೂ ಹೊರ ತೆಗೆಯುವುದಿಲ್ಲ. ಇತರ ಜನಾಂಗದವರೂ ಉರುಮೆ ಈ ವಾದ್ಯವನ್ನು ಬಳಸುತ್ತಾರೆ. ಮಾರಮ್ಮ, ದುರುಗಮ್ಮ, ಗಾಳಿಯಮ್ಮ ಮುಂತಾದ ದೇವತೆ ಹಾಗೂ ದೇವರುಗಳ ಜಾತ್ರೆ ಉತ್ಸವಗಳಲ್ಲಿ ಉರುಮೆಯ ವಾದ್ಯವನ್ನು ಉಜ್ಜದೇ ಹೋದರೆ ತಮ್ಮ ವಂಶವೇ ನಿರ್ವಂಶವಾಗುತ್ತದೆ ಎಂಬ ನಂಬಿಕೆ ಕಲಾವಿದರಲ್ಲಿ ಇನ್ನೂ ಇದೆ.

ಹಬ್ಬ, ಹರಿದಿನ ಹಾಗೂ ಜಾತ್ರೆ ಉತ್ಸವಗಳಲ್ಲಿ ಮತ್ತು ದೇವರುಗಳ ಮೆರವಣಿಗೆಯಲ್ಲಿ ಉರುಮೆ ಬೇಕೇ ಬೇಕಾಗುತ್ತದೆ. ಚಳ್ಳಕೆರೆ ತಾಲ್ಲೂಕಿನ ಗುಡಿಹಳ್ಳಿ ಗ್ರಾಮದ ಕೆಲವೇ ಕೆಲ ಕಲಾವಿದರು ಉರುಮೆ ಬಡಿಯುವುದರಲ್ಲಿ ಮತ್ತು ಧರ್ಮ ಹಾಗೂ ಇನ್ನಿತರ ಪರಿಕರಗಳಿಂದ ವಾದ್ಯ ಕಟ್ಟುವ ವಿಶೇಷ ಕಲೆಯನ್ನು ಮೈಗೂಡಿಸಿಕೊಂಡಿದ್ದಾರೆ. ಹಾಗಾಗಿ ಗುಡಿಹಳ್ಳಿಯ ಕಲಾವಿದರನ್ನು ಜಿಲ್ಲೆಯಲ್ಲಿ ಜರುಗುವ ಅನೇಕ ಜಾತ್ರೆ, ಹಬ್ಬ ಹರಿದಿನಗಳಲ್ಲಿ ಹಾಗೂ ವಿಶೇಷ ಸಂದರ್ಭಗಳಲ್ಲಿ ಅವರನ್ನು ಆಮಂತ್ರಿಸುತ್ತಾರೆ.

ತಮಟೆ ಕುಣಿತ: ಇದೊಂದು ಚರ್ಮವಾದ್ಯ. ಬೇಟೆಯಾಡಲು, ಹೊಲದಲ್ಲಿ ಕಾವಲು ಕಾಯಲು ಹೊರಟಾಗ ಈ ವಾದ್ಯ ಅಗತ್ಯವಾಗಿ ಬೇಕೇಬೇಕು. ಊರಿನಲ್ಲಿ ಏನಾದರೂ ಹೊಸ ಸುದ್ದಿಯನ್ನು ಮತ್ತು ಸರ್ಕಾರಿ ಯೋಜನೆಗಳ ಸೌಲಭ್ಯವನ್ನು ಜನರಿಗೆ ತಿಳಿಸಬೇಕೆಂದರೆ ಈ ವಾದ್ಯವನ್ನು ಬಳಸುತ್ತಾರೆ. ಮೂರು ಅಡಿ ಸುತ್ತಳತೆಯ ಕಬ್ಬಿಣದ ಬಳೆಯನ್ನು ತಯಾರಿಸುತ್ತಾರೆ. ತಮಟೆಯ ಕಂಠಕ್ಕೆ ಮೇಕೆ, ಕೋಣ ಇಲ್ಲವೇ ಕುರಿಮರಿಯ ಚರ್ಮವನ್ನು ಬಿಗಿಯಾಗಿ ಕಟ್ಟಲಾಗುತ್ತದೆ. ಈ ತಮಟೆಯನ್ನು ದ್ಯಾವರನಹಳ್ಳಿ ಹಾಗೂ ಪುರ್ಲೆಹಳ್ಳಿಯ ಆದಿ ಕರ್ನಾಟಕದವರು ದೇವರ ಜಾತ್ರೆಯಲ್ಲಿ

ಬಡಿಯುವುದು ವಾಡಿಕೆ.

ತಮಟೆ ವಾದ್ಯ ಬಡಿಯುವ (ನುಡಿಸುವ) ಮೊದಲು ಅದನ್ನು ಬೆಂಕಿಯ ಮುಂದೆ ಹಿಡಿದು ಚನ್ನಾಗಿ ಹದಕ್ಕೆ ಬರುವಂತೆ ಕಾಸುತ್ತಾರೆ. ಹದಕ್ಕೆ ಬಂದ ನಂತರ ಬಡಿಯುತ್ತಾರೆ. ತಮಟೆಯ ಕಂಟದ ಹುರಿಯನ್ನು ಎಡ ತೋಳಿಗೆ ಹಾಕಿಕೊಂಡು, ಎದೆಯ ಮೇಲೆ ಕಂಟವನ್ನೊರಗಿಸಿಕೊಂಡು ಬಡಿಯುತ್ತಾರೆ. ಇದನ್ನು ತಪ್ಪಡೆ ಎಂದು ಕರೆಯುವ ವಾಡಿಕೆ ಇದೆ. ರಂಗದ ಕುಣಿತ, ಮಾರಿಕುಣಿತ ಮೊದಲಾದ ಜನಪದ ಕುಣಿತಗಳಿಗೆ ಹಿನ್ನೆಲೆಯಾಗಿ ತಮಟೆಯನ್ನು ಬಳಸುತ್ತಾರೆ. ಕ್ಯಾತಪ್ಪದೇವರ ಜಾತ್ರೆಯಲ್ಲಿ ದೇವರಿಗೆ ಹರಕೆ ಒಪ್ಪಿಸಲು ಕೆಲವು ಭಕ್ತರು ತಮಟೆ ವಾದ್ಯವನ್ನು ಮೆರವಣಿಗೆಯಲ್ಲಿ ಬಳಸುತ್ತಾರೆ. ಇಂತಹ ಅನೇಕ ವಿಧದ ಪ್ರದರ್ಶನ ಕಲೆಗಳು ವಾದ್ಯಗಳು ಕಂಡುಬರುತ್ತವೆಯಾದರೂ, ಅವುಗಳ ಪ್ರದರ್ಶನ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ಬಹು ಬಡತನದಿಂದ ನರಳುತ್ತಿರುವ ಉರುಮೆವಾದ್ಯ ಹಾಗೂ ತಮಟೆ ವಾದ್ಯ ಕಲಾವಿದರಿಗೆ ಒಪ್ಪೊತ್ತಿನ ಗಂಜಿಗೆ ದುಡಿದು ತಿನ್ನುವುದು ಕಷ್ಟವಾಗಿದೆ. ಇಂತಹ ಕಲೆಗಳು ನಶಿಸಿ ಹೋಗುವ ಮುನ್ನ ಕಲಾವಿದರಿಗೆ ಪ್ರೋತ್ಸಾಹ ನೀಡುವ ಮೂಲಕ ಅವನ್ನು ರಕ್ಷಿಸುವಂತಾಗಬೇಕು.

ಪದ ಹಾಡುವುದು: ಕಾಡುಗೊಲ್ಲರಿಗೆ ದನಕರುಗಳೇ ದೇವರು, ಕಳ್ಳೆ, ಕಳಸ ಎಂದರೆ ಪಂಚಪ್ರಾಣ. ಪದ ಹೇಳುವುದರಲ್ಲಿ ಎತ್ತಿದ ಕೈ. ಅದು ದೇವರ ಹಬ್ಬ ಹರಿದಿನದಲ್ಲಿ ಪದ ಹೇಳುವುದೆಂದರೆ ಎಲ್ಲಿಲ್ಲದ ಸಂತೋಷ. ಆದ್ದರಿಂದ ಜಾತ್ರೆ, ಉತ್ಸವಗಳಲ್ಲಿ ಪದ ಹೇಳುವ ಸಂಪ್ರದಾಯ ಬೆಳೆಸಿಕೊಂಡಿದ್ದಾರೆ. ಸಾಂಸ್ಕೃತಿಕವೀರರಾದ ಜುಂಜಪ್ಪ, ಎತ್ತಪ್ಪ, ಚಿತ್ತಯ್ಯ, ಕಾಟಯ್ಯ, ಸಿರಿಯಣ್ಣ, ಈರಣ್ಣ, ಕೋಣಾದ ತಮ್ಮಣ್ಣ, ಚಿಕ್ಕಣ್ಣ, ಕಾಟಮಲಿಂಗ, ಕದರಿನರಸಿಂಹ, ಮಾರಕ್ಕ ಮೊದಲಾದ ದೇವರುಗಳ ಮೇಲೂ ಪದಕಟ್ಟಿ ಹಾಡುತ್ತಾರೆ. ಪದಕಟ್ಟುವ ಮತ್ತು ಪದಹಾಡುವ ಸೃಜನಶೀಲ ಕಲಾವಿದರು ಕಂಡುಬರುತ್ತಾರೆ. ಈ ರೀತಿಯ ಪದ ಹೇಳುವುದರಲ್ಲಿ ಗಂಡಸರಿಗಿಂತ ಹೆಂಗಸರದೇ ಮೇಲುಗೈ. ಮದುವೆ, ಮುಂಜಿ, ಹಬ್ಬ, ಹರಿದಿನ ಹಾಗೂ ಉತ್ಸವದ ಸಂದರ್ಭದಲ್ಲಿ ಸೋಬಾನೆ ಪದಗಳು, ಸಂಪ್ರದಾಯದ ಹಾಡುಗಳು ಹಾಡುವುದನ್ನು ಕೇಳುವುದರಲ್ಲಿ ಅತೀವ ಸಂತೋಷವಾಗುತ್ತದೆ. ಅವರದೇ ಆದ ಧಾಟಿ, ಸ್ಮೃತಿ, ಚರಣ, ಪಲ್ಲವಿ, ಅನುಪಲ್ಲವಿ, ಲಯ, ಗೇಯತೆ ಹಾಗೂ ಮಾಧುರ್ಯತೆ ಯಾವುದೇ ತಾಳವಿಲ್ಲದೆ ಸುಶ್ರಾವ್ಯವಾಗಿ ಹಾಡುವ ಕಲೆಯನ್ನು ರೂಢಿಸಿಕೊಂಡಿರುವುದು ಸೋಜಿಗವೆನಿಸುತ್ತದೆ.

ಜಾನಪದ ಸಿರಿಯಜ್ಜಿಯಂತೆ ಅನೇಕ ಕಲಾವಿದರು ಜನಮನ್ನಣೆ

ಗಳಿಸಿಕೊಂಡಿರುವ ಚನ್ನಮ್ಮನಾಗತಿಹಳ್ಳಿಯ ಪುಟ್ಟೀರಮ್ಮ, ನಾಗಮ್ಮ, ತಾಯಮ್ಮ, ಕ್ಯಾತಗೊಂಡನಹಳ್ಳಿಯ ಗುಂಡಮ್ಮ, ಸಿರಿಯಮ್ಮ, ಮುಕ್ಕಜ್ಜಿ, ಚಿಕ್ಕೇನಹಳ್ಳಿಯ ಶಾಂತಮ್ಮ, ಈರಮ್ಮ, ಸಿರಿಯಕ್ಕ, ಚಿಕ್ಕಮ್ಮ, ಸೂರನಹಳ್ಳಿಯ ನಾಗಜ್ಜಿ, ಕ್ಯಾತಮ್ಮ, ಸಣ್ಣತಿಮ್ಮಕ್ಕ, ಕಸ್ತೂರಿತಿಮ್ಮನಹಳ್ಳಿಯ ದೊಡ್ಡೀರಮ್ಮ, ನಾಗಮ್ಮ, ಜಯಮ್ಮ, ಉಪ್ಪಾರಹಟ್ಟಿಯ ಚಿ.ಕ್ಯಾತಮ್ಮ, ಕುರುಡಿಹಳ್ಳಿನಾಗಜ್ಜರ ಸಾಂತಮ್ಮ, ನೆಂಗಿಚಿಕ್ಕಪ್ಪರ ಸಿರಿಯಮ್ಮ, ಈರಮ್ಮ, ಕರಿಯಮ್ಮ, ಗುಡಿಹಳ್ಳಿ ಈರಜ್ಜಿ, ಗೌಡರ ಶಾಂತವೀರಮ್ಮ, ಕೆಂಚವೀರನಹಳ್ಳಿ ಸಣ್ಣಮ್ಮ, ಬಂಜಗೆರೆ ಸಣ್ಣವೀರಮ್ಮ, ಗೌರಮ್ಮ, ಮುಕ್ಕಮ್ಮ, ಬಡಮ್ಮ, ಹೆಗ್ಗೆರೆ ಕುರಿವೀರಣ್ಣ, ಜಾನಮದ್ದಿ ಕೋಲಾಟದ ನರಸಪ್ಪ, ಅಜ್ಜಪ್ಪ, ಕೋಲಿನ ತಿಪ್ಪಯ್ಯ, ಸಾವುಕಾರ ಸಿದ್ದಪ್ಪ, ಕ್ಯಾತಣ್ಣ, ಕೆಂಜೆಡಿಯಪ್ಪ. ಇವರನ್ನು ಪದಗಾರ್ತಿಯರು, ಪದಗಾರರು ಎಂತಲೂ ಕರೆಯುತ್ತಾರೆ. ಅಥವಾ ಮಹಿಳೆಯರನ್ನು ಸೋಬಾನೆ ಹೇಳುವವರು ಎಂಥಲೂ ಕರೆಯುತ್ತಾರೆ.

ಗಣೆ: ಧಾರ್ಮಿಕ ಆವರಣದಲ್ಲಿ ಅನಾವರಣಗೊಳ್ಳುವ 'ಗಣೆ' ಕಾಡುಗೊಲ್ಲರ ಹಬ್ಬ ಹರಿದಿನಗಳಲ್ಲಿ ಮಾತ್ರ ಬಳಸುವ ಒಂದು ವಿಶಿಷ್ಟ ವಾದ್ಯ. ಸುಮಾರು ನಾಲ್ಕೈದು ಅಡಿ ಉದ್ದದ ಬಿದಿರುಕೋಲನ್ನೇ ಗಣೆ ಎಂದು ಕರೆಯುತ್ತಾರೆ. ಗಣೆಯನ್ನು ವಿವಿಧ ಸಂದರ್ಭದಲ್ಲಿ ವಿವಿಧ ಉದ್ದೇಶಗಳಿಗೆ ಬಳಸುವುದರಿಂದ ಅದರ ಮಹತ್ವ ಸಮಯ ಸಂದರ್ಭಕ್ಕನುಗುಣವಾಗಿ ವ್ಯತ್ಯಾಸವಾಗುತ್ತಾ ಹೋಗುತ್ತದೆ. ಇದರಲ್ಲಿ ಕಥನಗಣೆ, ಹೇಳಿಕೆ ಗಣೆ ಮತ್ತು ಹೊತ್ತಾಡೋ ಗಣೆಗಳೂ ಇವೆ. ನೆಲಮೂಲ ಸಂಸ್ಕೃತಿ ಹಿನ್ನೆಲೆಯಲ್ಲಿ ಬಂದ ಕಾಡುಗೊಲ್ಲರ ಪ್ರಧಾನ ವೃತ್ತಿಯೇ ಪಶುಪಾಲನೆ. ಹಿಂದೆ ಸಾಕಷ್ಟು ಹುಲ್ಲುಗಾವಲುಗಳು ಇದ್ದ ಕಾಲದಲ್ಲೂ ಪಶುಪಾಲನೆ ಅವರ ಬದುಕಿಗೆ ಒಂದು ಸವಾಲಾಗಿತ್ತು. ಪಶುಪಾಲನೆ, ಅವುಗಳ ಸಂರಕ್ಷಣೆ ಒಂದು ಮೌಲ್ಯವಾಗಿದ್ದ ಕಾಲದಲ್ಲಿ 'ತುರುಗೋಳ್'ಗಾಗಿ ಪ್ರಾಣತೆತ್ತ ಅನೇಕ ವೀರರು ಹೋರಾಡಿದ ಚಿತ್ರಗಳೇ ವೀರಗಲ್ಲುಗಳಾಗಿ, ಶಾಸನಗಳಾಗಿ ಕಂಡುಬರುತ್ತವೆ. ಜೊತೆಗೆ ತಮ್ಮ ಬದುಕನ್ನೇ ಬಲಿಕೊಟ್ಟು ಈರಗಾರರು ಆ ಜನಾಂಗದ ಆರಾಧ್ಯ ದೈವಗಳು, ಸಾಂಸ್ಕೃತಿಕ ವೀರರೂ ಆಗಿದ್ದುಂಟು. ಇಂತಹ ವೀರರ ಹೋರಾಟದ ಚಿತ್ರಗಳೇ ಮುಂದೆ ಕತೆಗಳಾಗಿ, ಹಾಡುಗಳಾಗಿ ರೂಪುಗೊಂಡಾಗ, ಅವುಗಳನ್ನು ಕಾಪಾಡಿಕೊಳ್ಳಲು ಈ ಮೌಖಿಕ ಕಾವ್ಯದ ಜೊತೆಗೆ ಗಣೆ ವಾದ್ಯವನ್ನು ಬಳಸಿಕೊಂಡರು. ದನಗಳನ್ನು ಮೇಯಿಸುವಾಗ ಹೊತ್ತು ಕಳೆಯಲು, ಬೇಸರ ಕಳೆಯಲು ಗಣೆಯನ್ನು ನುಡಿಸುತ್ತಿದ್ದರು. ಇದರಿಂದ ಅತ್ಯಂತ ಮೃದು ಮಧುರವಾದ ಹಾಗೂ ಮೋಹಕವಾದ ನಾದ ಹೊರ ಹೊಮ್ಮುತ್ತದೆ. ಈ ಜನಾಂಗದ ಸಾಂಸ್ಕೃತಿಕ ವೀರರನ್ನು ಕುರಿತ ದೊಡ್ಡ ಕಥನ ಪರಂಪರೆಯೇ

ಹುಟ್ಟಿಕೊಂಡಿದೆ. ಇವರನ್ನು ಕುರಿತ ಗಣೆಯ ಕಥಾ ಕಾವ್ಯಗಳನ್ನು ಹಾಡುವ ಮುನ್ನ ಗಣೆಗೆ ಮಾಧ್ಯಮವಾದ ಬಿದಿರಮ್ಮ ಕುರಿತ ಸ್ತುತಿಗೀತೆಯನ್ನು ಕಾಣಬಹುದು.

ಕಲ್ಲಿನಲ್ಲಿ ವುಟ್ಟೋಳೆ ಕಲ್ಲಿನಲ್ಲಿ ಬೆಳೆಯೋಳೆ
ಸೊಲ್ಲು ಸೊಲ್ಲಿಗೆ ದನಿಕೊಡೇ ಬಿದಿರಮ್ಮ
ಕುರಿಯ ಕಾವಣ್ಣಗೊಂದು ಕಿರುಗೆಣ್ಣಿನ ಬಿದಿರಾದೆ
ಮ್ಯಾಕೆ ಕಾವಗಣ್ಣಗೊಂದು ಗೀಕಿನ ಬೋಳು ದಡಿಯಾದೆ
ಎತ್ತು ಕಾವಣ್ಣಗೊಂದು ಮುತ್ತಿನ ಬಾರಿಕೋಲಾದೆ

ಆವು(ಹಸು)ಕಾವಣ್ಣಗೊಂದು ದ್ಯಾವಗಣ್ಣಿನ ಬಿದಿರಾದೆ
ಎಮ್ಮೆಕಾವಗಣ್ಣಗೊಂದು ಚಿನ್ನದ ಡಾಬುಗಣೆಯಾದೆ
ಅಜ್ಜಿಗೂರುಗೋಲಾದೆ ಅಜ್ಜಗೂರುಗೋಲಾದೆ

ಕುಂಟಾಗೊಂದು ಕೋಲಾದೆ ಬಂಟಾಗೊಂದು ಕೋಲಾದೆ
ಹಟ್ಟೇಯ ಕ್ಯಾತಯ್ಯಗೊಂದು ಬಿಚ್ಚಣಿಕೆ ಬಿದಿರಾದೆ
ಆಲು ಕೇತೇಲಿಂಗಗೊಂದು ತೋಗೋ ತೊಟ್ಟಿಲಾದೆ
ವಡ್ನಳ್ಳಿ ಮಾರಕ್ಕಗೊಂದು ವಡ್ಡೀದ ಅರಮನೆಯಾದೆ
ದೊಡ್ಡೊನು ಜುಂಜಪ್ಪಗೊಂದು ವಡ್ಡೀದ ಮರಬಿಲ್ಲಾದೆ
ನೀನ್ಯಾರಿಗಲ್ಲದವಳು
ಕ್ವಾಟಗು ನೀನಾದಲ್ಲೆ ಪ್ಯಾಟಗು ಪಡಿಯಾದಲ್ಲೆ
ನೀಟಾಗಾರಣ್ಣನಿಗೆ ಊದೋಕೊಂದು ಗಣೆಯಾದೆ.

ಬಿದಿರು ನಮ್ಮ ಜನಪದರಿಗೆ ದೈವವಾಗಿ ಕಾಣುತ್ತದೆ. ಯಾವ ಕೃತಕತೆಯ ಸೋಂಕು ಉಲ್ಲದೆ ಸರಳವಾಗಿರುವುದನ್ನುಈ ಹಾಡು ತನಗೆ ತಾನೇ ತನ್ನ ಭಾವಗೀತಾತ್ಮಕತೆಯಿಂದ ಕೃಷಿ ಸಂಸ್ಕೃತಿಯ ದಟ್ಟ ಚಿತ್ರಣವನ್ನು ಅತ್ಯಂತ ಆತ್ಮೀಯವಾಗಿಸುತ್ತದೆ. ಆಚರಣೆಗಳಲ್ಲಿ ಊದುವ ಅಥವಾ ಹೇಳಿಕೆ ಗಣೆಗಳು ಇದ್ದೇ ಇರುತ್ತವೆ. ಅವು ಕೂಡಾ ದೈವಗಳೆಂದೇ ಭಾವಿಸುವುದರಿಂದ, ಸಹಜವಾಗಿ ಅದು ದೇವರ ಪ್ರತಿನಿಧಿಯಾಗಿಬಿಡುತ್ತದೆ. ದೇವರ ಪ್ರತಿನಿಧಿಯಾದ ಗಣೆಯನ್ನು ಪೂಜಾರಿ ಊದಿ ನೀಡುವ ಹೇಳಿಕೆಯನ್ನು ದೈವವಾಣಿಯೆಂದೇ ಭಾವಿಸುತ್ತಾರೆ.

ಈ ಗಣೆಗಳಿಗೆ ಬೆಳ್ಳಿಯ ಅಥವಾ ತಾಮ್ರದ ತಗಡಿನಿಂದ ಅಲ್ಲಲ್ಲಿ ಹೊದಿಕೆ(ಕಟ್ಟು) ಹಾಕಿಸಿರುತ್ತಾರೆ.

ಹೀಗೆ ಸಂಪ್ರದಾಯ, ಆರಾಧನಾ ಪ್ರಧಾನವಾದ ಉರುಮೆ, ತಪ್ಪಡೆ, ಗಣೆ, ಸನಾಯಿ, ಕೋಲಾಟ ಇನ್ನು ಮುಂತಾದ ಕಲಾ ಕುಣಿತಗಳಿಗೆ ಎಂಥಾ ಸಂಕಷ್ಟ ಒದಗಿಬಂದರೂ ಅವು ಕಾಲಕ್ಕೆ ತಕ್ಕಂತೆ ಮರುಹುಟ್ಟು ಪಡೆದು ಸದಾ ಜೀವಂತಿಕೆ ಉಳಿಸಿಕೊಳ್ಳುವುದೇ ಜನಪದ ಪ್ರದರ್ಶನಾತ್ಮಕ ಕಲೆಗಳ ವಿಶೇಷ.

ಆಕರ ಗ್ರಂಥಗಳು

೧. ಮೀರಾಸಾಬಿಹಳ್ಳಿ ಶಿವಣ್ಣ – ಎತ್ತಪ್ಪ ಮತ್ತು ಜುಂಜಪ್ಪ ಸಾಂಸ್ಕೃತಿಕ ವೀರರು ಅಧ್ಯಯನ

೨. ಕೃಷ್ಣಮೂರ್ತಿ ಹನೂರು – ಮ್ಯಾಸಬೇಡರ ಸಂಸ್ಕೃತಿ

೩. ಕೃಷ್ಣಮೂರ್ತಿ ಹನೂರು – ಮ್ಯಾಸಬೇಡರ ವೀರ ಗೀತೆಗಳು

೪. ತೀ.ನಂ ಶಂಕರನಾರಾಯಣ – ಕಾಡುಗೊಲ್ಲರ ಸಂಪ್ರದಾಯ ಮತ್ತು ಆಚರಣೆಗಳು

೫. ಚೆಲುವರಾಜ – ಜುಂಜಪ್ಪನ ಕಾವ್ಯ

ಅನುವಾದ ಸಾಹಿತ್ಯಕ್ಕೆ ವೆಂಕಟರಾಜ ಪುಣಿಂಚತ್ತಾಯರ ಕೊಡುಗೆ

ಡಾ. ಧನಂಜಯ ಕುಂಬ್ಳೆ

ಕಾಸರಗೋಡಿನಂತಹ ಬಹುಭಾಷಾ ವಲಯದಲ್ಲಿ ಅನುವಾದಕ್ಕೆ ವಿಪುಲವಾದ ಅವಕಾಶಗಳಿವೆ. ಆದರೆ ಆ ಅವಕಾಶವನ್ನು ಬಳಸಿಕೊಂಡವರು ಬೆರಳೆಣಿಕೆ ಮಂದಿ ಮಾತ್ರ. ಕಾಸರಗೋಡಿನವರಾದ ಬಿ.ಕೆ ತಿಮ್ಮಪ್ಪನವರು ಮೂವತ್ತಕ್ಕಿಂತಲೂ ಹೆಚ್ಚು ಕೃತಿಗಳನ್ನು ಕನ್ನಡಕ್ಕೆ ತಂದರು. ಸಿ ರಾಘವನ್ ಅವರು ಹಲವು ಕನ್ನಡದ ಕೃತಿಗಳನ್ನು ಮಲಯಾಳಂಗೆ ಭಾಷಾಂತರಿಸಿದರು. ಪ್ರೊ. ಮೋಹನ ಕುಂಟಾರ್, ಡಾ.ನಾ ದಾಮೋದರ ಶೆಟ್ಟಿ, ಡಾ. ಕೆ ಕಮಲಾಕ್ಷ ಮೊದಲಾದವರು ಈ ಕ್ಷೇತ್ರದಲ್ಲಿ ಗಂಭೀರವಾಗಿ ತೊಡಗಿಸಿಕೊಂಡವರು. ಆ ನಿಟ್ಟಿನಲ್ಲಿ ಹಿರಿಯರಾದ ದಿವಂಗತ ಮುಂಡೂರು ವೆಂಕಟರಾಜ ಪುಣಿಂಚತ್ತಾಯರೂ ಮಹತ್ವದ ಅನುವಾದಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಈ ಕ್ಷೇತ್ರವನ್ನು ತುಂಬುವ ಕಾರ್ಯ ಮಾಡಿದ್ದರು. ಸಂಸ್ಕೃತದಿಂದ ಕನ್ನಡಕ್ಕೆ, ಮಲಯಾಳದಿಂದ ಕನ್ನಡಕ್ಕೆ, ತಮಿಳಿನಿಂದ ಕನ್ನಡಕ್ಕೆ, ಸಂಸ್ಕೃತದಿಂದ ತುಳುವಿಗೆ, ಹಿಂದಿಯಿಂದ ಕನ್ನಡಕ್ಕೆ ಹೀಗೆ ಹಲವು ಭಾಷೆಗಳ ನಡುವೆ ಸೇತುವೆಯಾಗಿ ಭಾಷಾ ಪರಸ್ಪರತೆಗೆ ಕಾರಣರಾಗಿದ್ದಾರೆ.

'ನನ್ನುಪ್ಪಾಪ್ಪಾಕ್ಕೊರಾನುಂಡಾರ್ನು' ಎಂಬ ವೈಕ್ಕಂ ಮುಹಮ್ಮದ್ ಬಷೀರ್ ಅವರ ಕಾದಂಬರಿಯನ್ನು 'ನನ್ನಜ್ಜನಿಗೊಂದಾನೆಯಿತ್ತು' ಎಂಬ ಶೀರ್ಷಿಕೆಯಡಿ ಪುಣಿಂಚತ್ತಾಯರು ಅನುವಾದಿಸಿದ್ದಾರೆ. ಅದನ್ನು ಸಾಹಿತ್ಯ ಅಕಾಡೆಮಿ ೧೯೭೩ರಲ್ಲಿ ಪ್ರಕಟಿಸಿತು. ಅದು ದ್ವಿತೀಯ ಮುದ್ರಣವನ್ನು ಕೆಲವು ವರ್ಷದಲ್ಲಿ ಕಂಡಿತು ಎಂಬುದು ಆ ಕೃತಿಯ ಜನಪ್ರೀತಿಗೆ ಸಾಕ್ಷಿ. ಬಷೀರರ ತಿಳಿಹಾಸ್ಯ, ಹಳ್ಳಿಯ ಚಿತ್ರಣ, ಗ್ರಾಮ ಪ್ರದೇಶದ ಸಹಜ ಮುಗ್ಧ ಪಾತ್ರಗಳ ಸಂಭಾಷಣೆ, ಸಹಜ ಕಥಾ ನಿರೂಪಣೆ ಮೂಲದಂತೆಯೇ ಓದಿಸಿಕೊಳ್ಳುವ ಗುಣ ಪುಣಿಂಚತ್ತಾಯರ ಅನುವಾದದಲ್ಲಿದೆ.

"ಆಗಲಿ, ನಿನ್ನ ಹೆಸರೇನು?'

'ಕುಞ್ಞಿಪಾತುಮ್ಮ'

'ಆಹಾ! ಚೆಂದವಾದ ಹೆಸರು. ಅದಿರಲಿ ಈ ನೈದಿಲೆಯ ಕೊಳದಲ್ಲಿ ಸ್ನಾನ ಮಾಡಿದರೇನಂತೆ?'

' ಜಿಗಣೆ ಕಚ್ಚೀತು'

‘ ಹೆಣ್ಣು ಜಿಗಣೆಯೋ ಗಂಡು ಜಿಗಣೆಯೋ..’

‘ಎರಡೂ ಇವೆ. ಗಂಡನೂ ಹೆಂಡತಿಯೂ! ಅವುಗಳಲ್ಲೊಂದು ನನ್ನನ್ನು ಕಚ್ಚಿ ನೆತ್ತರು ಪೂರಾ ಕುಡಿದು ಬಿಟ್ಟಿತು...”

ಅನಂತರ ಕುಞ್ಞಿಪಾತುಮ್ಮ ತನಗೆ ಜಿಗಳೆ ಕಚ್ಚಿದ ವಿಷಯವನ್ನು ಬಹಳ ತನ್ಮಯತೆಯಿಂದ ವರ್ಣಿಸಿದಳು. ಕೊನೆಗೆ ಅದು ತನ್ನ ತೊಡೆಯನ್ನು ಕಚ್ಚಿ ಜೋತಾಡುತ್ತಿರುವ ಸಂದರ್ಭವನ್ನವಳು ವಿವರಿಸಿದಾಗ ಆ ಜಂಬಗಾರ್ತಿ ನಡುಗಿದಳು. ಅವಳು ಕಣ್ಣಗಲಿಸಿ ‘ಬ್ಬ್ ಓ’ ಎಂದು ಬಾಯಿಬಿಟ್ಟು ಒಂದು ಮರಿಯಾನೆಯಂತೆ ಉದ್ಗಾರವೆತ್ತಿದಳು

ಹೀಗೆ ಮೂಲದಲ್ಲೇ ಓದುತ್ತಿದ್ದೇವೆ ಎಂದು ಭಾಸವಾಗುವಂತೆ ಅನುವಾದವನ್ನು ಕನ್ನಡದ ಬರವಣಿಗೆಯ ಶೈಲಿಗೆ ಒಗ್ಗಿಸಿ ಮೂಲದ ಭಾವ ಜೀವಗಳನ್ನು ತರುವ ಶಕ್ತಿ ಪುಣಿಂಚತ್ತಾಯರ ಅನುವಾದಕ್ಕಿದೆ. ಈ ಕೃತಿ ಅನುವಾದ ಕ್ಷೇತ್ರದಲ್ಲಿ ಪುಣಿಂಚತ್ತಾಯರಿಗೆ ವಿಶೇಷ ಪ್ರಸಿದ್ಧಿಯನ್ನು ತಂದುಕೊಟ್ಟಿತು

ಮಲಯಾಳದಿಂದ ಕೆಲವು ಬಿಡಿ ಕವಿತೆ, ಕಥನ ಕವನಗಳನ್ನು ಪುಣಿಂಚತ್ತಾಯರು ಅನುವಾದಿಸಿದ್ದಾರೆ. ಅವರ ಉಭಯ ಭಾಷಾ ಪ್ರಭುತ್ವ ಮತ್ತು ಪರಕಾಯ ಪ್ರವೇಶ ಸಾಮರ್ಥ್ಯಕ್ಕೆ ಈ ಅನುವಾದಗಳು ಸಾಕ್ಷಿ. ಮಲಯಾಳದ ಪ್ರಸಿದ್ಧ ಕವಿ ವೈಲೋಪ್ಪಳ್ಳಿ ಶ್ರೀಧರ ಮೆನೊನ್ ಅವರ ‘ಮಾಂಬಳಂ’ ಎಂಬ ಕವಿತೆಯನ್ನು ೨೪ ಚೌಪದಿಗಳಲ್ಲಿ ಅವರು ಅನುವಾದಿಸಿದ್ದಾರೆ.

ಅಂಗಳದಿ ಬೆಳೆದಿರುವ ಮಾವಿನ
ಗಿಡದಿ ಮೊದಲನೆ ಹಣ್ಣದು
ಉದುರೆ ತಾಯಿಯ ಕಂಗಳಲಿ ಬಿಸಿ
ಕಂಬನಿಯುತಾನೊಸರಿತು.... ಎಂದು ಆರಂಭವಾಗುವ ಈ ಕವಿತೆ ಮಾವಿನ ಹಣ್ಣಿನ ರಸವನ್ನು ಒಣಗಿಸಿ ಮಾಡುವ ಮಾಂಬಳದ ಕತೆಯನ್ನು ಸೊಗಸಾಗಿ ಚಿತ್ರಿಸುತ್ತದೆ. ಮಾಧವನ್ ಅಯ್ಯಪ್ಪನ್ ಅವರ ಕವಿತೆಯೊಂದನ್ನು “ಕಗ್ಗಂಟುಗಳು”ಎಂಬ ಹೆಸರಲ್ಲಿ ಅನುವಾದಿಸಿದ್ದಾರೆ.

ಒಮ್ಮೆ ನಕ್ಕು ಬಿಡು, ಪ್ರಭಾತದ ಪರಿಶುದ್ಧತೆಯಲ್ಲಿ
ಕಾಡುಹೂಗಳು ಅರಳುವ ಹಾಗೆ
ಸುಮ್ಮಗೆ ಯಾವುದೇ ಉದ್ದೇಶವಿಲ್ಲದ
ಒಂದು ಸಂದರ್ಶನದ ಮಾಧುರ್ಯದ ಹಾಗೆ.... ಹೀಗೆ ಮಲಯಾಳಂ ನವ್ಯ ಕವಿತೆಯ ಜಾಯಮಾನವನ್ನು ಹಾಗೆ ಕನ್ನಡದಲ್ಲೂ ತರುವ ಪ್ರಯತ್ನ ಈ

ಅನುವಾದದಲ್ಲಿದೆ. ಮಲಯಾಳಂನಲ್ಲಿ ಕವಿತೆಯ ಓದಿನ ಶೈಲಿಯೇ ವಿಶಿಷ್ಟ. ಆ ವಿಶಿಷ್ಟತೆಯ ಶೈಲಿಯನ್ನು ಅನುವಾದದಲ್ಲಿಯೂ ತರುವ ಪ್ರಯತ್ನವನ್ನು ಈ ಅನುವಾದಗಳಲ್ಲಿ ಪುಣಿಂಚತ್ತಾಯರು ತಂದಿದ್ದಾರೆ.

ಕೆಲವು ಮಲಯಾಳಂ ಸಣ್ಣಕತೆಗಳನ್ನೂ ಪುಣಿಂಚತ್ತಾಯರು ಅನುವಾದಿಸಿದ್ದಾರೆ. ಪೆರುಂಬಡವಂ ಶ್ರೀಧರನ್ ಅವರ 'ನೀಲಾಕಾಶದ ಕೆಳಗೆ', ಮುಂಡೂರು ಕೃಷ್ಣನ್ ಕುಟ್ಟಿಯವರ 'ನಾನು ಎಲ್ಲಿ', ಜಿ. ಭಾರ್ಗವನ್ ಪಿಳ್ಳೆಯವರ 'ಎಂಟುನೂರು' ಮತ್ತು 'ಬಂಗಾರದ ಮಣ್ಣು' ಇವು ಅನುವಾದಗೊಂಡ ಸಣ್ಣಕತೆಗಳು. ಪ್ರಜಾಮತ, ಮಲ್ಲಿಗೆ, ಸೇವಾಮೃತ ಮೊದಲಾದ ಪತ್ರಿಕೆಗಳಲ್ಲಿ ಇವು ಪ್ರಕಟಗೊಂಡಿತ್ತು.

ಪಿ. ಬಾಲಚಂದ್ರನ್ ಅವರ 'ಬಡಪಾಯಿ ಉಸ್ಮಾನ್' ಎಂಬ ನಾಟಕವನ್ನೂ ಪುಣಿಂಚತ್ತಾಯರು ಅನುವಾದಿಸಿದ್ದಾರೆ. ಈ ನಾಟಕದ ಕುರಿತು ಡಾ. ಕೆ ಕಮಲಾಕ್ಷರು ಹೀಗೆ ಹೇಳುತ್ತಾರೆ;

'ಈ ನಾಟಕ ಮುಗ್ಧ ಪಾತ್ರವೊಂದರ ಸುತ್ತ ಹೆಣೆದಿರುವುದು. ರಂಗತಂತ್ರದ ದೃಷ್ಟಿಯಿಂದ ಮಾತ್ರವಲ್ಲದೆ ಉಸ್ಮಾನನ ಪಾತ್ರದ ವೈಶಿಷ್ಟ್ಯದ ಕಾರಣಕ್ಕೂ ಈ ನಾಟಕ ಉಲ್ಲೇಖನೀಯ. ಬೆಳೆಯುವ ಮಗನನ್ನು ಲೋಕಕ್ಕೆ ತೆರೆದುಕೊಳ್ಳಲು ಬಿಡದೆ ತನ್ನ ಸೀಮಿತ ಪ್ರೀತಿಯ ವರ್ತುಲದಲ್ಲಿ ದಿಗ್ಬಂಧನಗೊಳಿಸುವ ತಾಯಿಯ ಕಾರಣವಾಗಿ ಜನರೆಂದರೆ ಭಯದಿಂದ ನಡುಗುವ ಹುಡುಗ ಉಸ್ಮಾನ್. ಆದರೆ ಜನರ ಪ್ರೀತಿ ಆತ್ಮೀಯತೆಗಳಿಗಾಗಿ ತೀವ್ರ ಹಂಬಲಿಸುವ ಜೀವ. ತನ್ನನ್ನು ಪ್ರೀತಿಸಲು ಮತ್ತು ತಾನು ಪ್ರೀತಿಸಲು ಒಂದು ಹೆಣ್ಣು ಬೇಕೆಂದು ಪ್ರಯತ್ನಿಸುತ್ತಾನೆ. ಹೆಂಡತಿಯಲ್ಲಿ ತಾಯಿಯ ವಾತ್ಸಲ್ಯವನ್ನು ನಿರೀಕ್ಷಿಸುತ್ತಾನೆ. ಸಂಗೀತವನ್ನು ಇಷ್ಟಪಡುತ್ತಾನೆ. ಮನುಷ್ಯ ಸಂಬಂಧಗಳನ್ನು ಪರಿಗಣಿಸದ ಧಾರ್ಮಿಕ ಕಟ್ಟುಪಾಡುಗಳನ್ನು ತಿರಸ್ಕರಿಸುತ್ತಾನೆ. ಈ ಭೂಮಿಯೇ ಸ್ಮಶಾನ. ಅದರ ಉಸಿರುಕಟ್ಟಿಸುವ ವಾತಾವರಣದಲ್ಲಿ ಬದುಕಬೇಕಾಗಿರುವುದರಿಂದ ತನಗೆ ಸಂತಾನವೇ ಬೇಡವೆನ್ನುತ್ತಾನೆ. ಕೊನೆಗೆ ಆ ಪಂಜರದಲ್ಲೇ ಅಸುನೀಗುತ್ತಾನೆ. ನಾವೆಲ್ಲರೂ ಒಂದರ್ಥದಲ್ಲಿ ಬಡಪಾಯಿ ಉಸ್ಮಾನ್‌ನಂತೆ 'ಮಯ್ಯತ್ತಿಂಗರ' (ಒಂದು ಊರು, ಹೆಣವನ್ನಿಡುವ ಜಾಗ) ದಲ್ಲಿ ಉಸಿರಾಡುವ ಹೆಣಗಳು.. ಇದು ನಾಟಕದ ಆಶಯ." (ರಾಜಹಂಸ ಪು.ಸಂ: ೫೨) ವಿಷಾದದ ಆಶಯವಿದ್ದರೂ ಅದರೊಳಗಿನ ಕಾಳಜಿ ಮಾನವೀಯವಾದುದು

ಮಲಯಾಳಂ ಪುಣಿಂಚತ್ತಾಯರು ಆಸಕ್ತಿಯಿಂದ ಕಲಿತ ಭಾಷೆಯಾದರೆ ಸಂಸ್ಕೃತ ಅವರ ತಜ್ಞತೆಯ ಭಾಷೆ. ಸಂಸ್ಕೃತದಿಂದಲೂ ಕೆಲವು ಅನುವಾದಗಳನ್ನು ಅವರು ಮಾಡಿದ್ದಾರೆ. 'ಸುಭಾಷಿತ ಲಹರಿ' ಎಂಬ ನೂರ ಮೂವತ್ತೆಂಟು ಶ್ಲೋಕಗಳ

ಅನುವಾದವನ್ನು ಚುಟುಕುಗಳ ರೂಪದಲ್ಲಿ ಅವರು ಅನುವಾದಿಸಿದ್ದಾರೆ. ೧೯೬೯ರಲ್ಲಿ ಅದು ಪ್ರಕಟವಾಯಿತು. ಈ ಅನುವಾದಗಳು ಭಾವಾನುವಾದಗಳು. ಅವರ ಅನುವಾದದ ಭಾಷೆ ಸರಳವಾಗಿದ್ದು ಮೂಲಕ್ಕೆ ನಿಕಟವಾಗುವ ಉದ್ದೇಶವುಳ್ಳದ್ದು. ಅರ್ಥಕ್ಕೆ ತೊಂದರೆಯಾಗುವಂತಿದ್ದರೆ ಅವರು ಪ್ರಾಸ ಛಂದಸ್ಸನ್ನು ಮೀರಿದ ಸಂದರ್ಭಗಳೂ ಇವೆ. ಪಂಡಿತರ ಸ್ವತ್ತಾಗಿದ್ದ ಈ ಅಮೂಲ್ಯ ಸುಭಾಷಿತಗಳು ಸಾಮಾನ್ಯ ಕನ್ನಡ ಜ್ಞಾನವುಳ್ಳವರಿಗೂ ದೊರಕಲೆಂಬ ಕಾಳಜಿಯನ್ನು ನಾವು ಕಾಣಬಹುದು. ಕೆಲವು ಸುಭಾಷಿತಗಳನ್ನು ಗಮನಿಸಬಹುದು.

ಇತರರ ಉತ್ಕರ್ಷಕೆ ಮತ್ಸರಿಸುತ
ಬಹುಖೇದಿಸುವರು ದುರ್ಜನರು
ಅದಕೇನೂ ಬದಲೆಸಗಲಿಕಾಗದೆ
ಕೇವಲ ನಿಂದೆಯ ಮಾಡುವರು

ಸೊಳ್ಳೆಯು ಸೂಳೆಯು ನೊಣ ಹೆಗ್ಗಣಗಳ್
ಭಿಕ್ಷುಕ ಲೆಕ್ಕಿಗ ಪಠೇಲರು
ಇಂತೀ ಏಳೆಣಿಕೆಯ ಜೀವಿಗಳುರೆ
ಬಾಳ್ವರು ಪರರಾಶ್ರಯದಿಂದ

ಅಸಾರವಾಗಿಹ ಸಂಸಾರದಲ್ಲಿ
ಸಾರವು ಮಾವನ ಮನೆಯಹುದು
ವಿಷ್ಣುವು ಪಾಲ್ಗಡಲಲಿ ಪವಡಿಸಿಹನು
ಶಿವನು ಹಿಮಾಲಯ ಸೇರಿಹನು

ಇದಲ್ಲದೇ ಪುಣಿಂಚತ್ತಾಯರು ಯಜುರ್ವೇದದ ರುದ್ರಮಂತ್ರವನ್ನು, ಹತ್ತು ಭಾವಗೀತೆಗಳಲ್ಲಿ ಅನುವಾದಿಸಿದ್ದಾರೆ. ಬಡತನದ ಬಗೆಗಿರುವ ಶ್ಲೋಕಗಳನ್ನು ಅನುವಾದಿಸಿದ್ದಾರೆ. ಹಾಗೆಯೆ ಸಂಸ್ಕೃತ ಶ್ಲೋಕಗಳನ್ನು ತುಳುವಿಗೆ, ತುಳುವಿನ ಪಾಡ್ದನಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

ಹಿಂದಿ ಭಾಷಾ ಪ್ರವೀಣರಾಗಿದ್ದ ಪುಣಿಂಚತ್ತಾಯರು ಕಬೀರ, ತುಳಸೀದಾಸ ಹಾಗೂ ರಹೀಮರ ಹಿಂದಿ ದೋಹಾಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

ಪುಣಿಂಚತ್ತಾಯರ ಮಗ ವಿಜಯರಾಜರು ಇತ್ತೀಚೆಗೆ ಸಿಕ್ಕಿದ ಅಪ್ರಕಟಿತ ಕೆಲವು ದೋಹಗಳನ್ನು ಒದಗಿಸಿದ್ದಾರೆ. ವೆಂಕಟಸುಬ್ಬಯ್ಯನ ದೋಹೆಗಳು ಎಂಬ ಹೆಸರಿನ ಅಪ್ರಕಟಿತ ಅನುವಾದಗಳಲ್ಲಿ ಕೆಲವನ್ನು ಇಲ್ಲಿ ನೀಡುತ್ತಿದ್ದೇನೆ. ಇವು ತುಳಸೀ ದಾಸರ ದೋಹೆಗಳು

ಕಾಮ ಕ್ರೋಧ ಮದ ಲೋಭಗಳು
ಅಂತರಂಗದಲ್ಲಿರುವನಕ
ಮೂರ್ಖನಿರಲಿ ಪಂಡಿತನಿರಲಿ
ಭೇದವುಂಟೆ ಅವರಿಬ್ಬರಲಿ

ಸಜ್ಜನನೆಂದರೆ ಮಾಮರವಯ್ಯಾ
ಪರರಿಗಾಗಿ ಅದು ಬದುಕುವುದು
ಕಲ್ಲನ್ನೆಸೆಯುವ ದುಷ್ಟರ ಪಾದಕೂ
ಹಣ್ಣನೆ ಕಾಣಿಕೆ ಸಲಿಸುವುದು

ರಾಮಚರಣದಾಶ್ರಯವನು ಬಿಟ್ಟು
ಮೋಕ್ಷವನೇರಲು ಬಯಸುವವ
ಮೋಡದ ನೆರವಿಲ್ಲದೆ ಮೇಲೇರಲು
ಬಯಸುವ ನೀರಿಗೆ ಸಮನಹನು

ಇತ್ತೀಚೆಗೆ ಸಿಕ್ಕ ಅವರ ಅಪ್ರಕಟಿತ ರಹೀಮನ ದೋಹೆಗಳ ಅನುವಾದದ ಕೆಲವು ಉದಾಹರಣೆಗಳು;

ಬೇಡಲು ಹೊರಟರೆ ಎಂಥವನಾದರೂ
ಕೂಡಲೆ ಸಣ್ಣವನಾಗುವನು
ಬಲಿಯೊಳು ಬೇಡಲು ಹೊರಟಿಹ
ವಿಷ್ಣುವು ವಾಮನನೆನಿಸಿಹನು

ಸಂತರು ತೊರೆದಿಹ ಭೋಗಗಳನ್ನು
ಮೂಢರು ಪಡೆಯಲು ಬಯಸುವರು
ಮನುಜರು ಏನನು ಕಾರಿದರೋ
ನಾಯಿಗಳದನೇ ನೆಕ್ಕುವವು

ಇಂತಹ ಸಹಜವಾದ ಧ್ವನಿಪೂರ್ಣವಾದ ಅನೇಕ ದೋಹೆಗಳನ್ನು ಪುಣಿಂಚತ್ತಾಯರು ಅನುವಾದಿಸಿದ್ದಾರೆ. ಮನುಷ್ಯನಿಗೆ ತಿಳುವಳಿಕೆ ನೀಡುವ, ಬದುಕಿನ ಸತ್ಯಗಳನ್ನು ತೆರೆದು ತೋರಿಸುವ ದೋಹೆಗಳನ್ನು ಕವಿ ಅನುವಾದಿಸಿದ್ದಾರೆ. ಪುಣಿಂಚತ್ತಾಯರ ಕವಿತ್ವದ ಶಕ್ತಿ ಇಲ್ಲೂ ಸೊಗಸಾಗಿ ಪ್ರಕಟಗೊಂಡಿದೆ.

ತೋಟದ ಯಜಮಾನರು ಬಂದಾಗ
ಮೊಗ್ಗೆಗಳಿಂತೆಂದವು ಬೇಗ
ಅರಳಿದ ಹೂಗಳ ದಿನವಿಂದು
ನಮ್ಮಯ ಸರದಿಯು ನಾಳೆಂದು

ಇಂತಹ ಸರಳ ರಚನೆಗಳು ವರ್ತಮಾನ ಕಾಲದ ಓದುಗನಿಗೆ ಖಂಡಿತವಾಗಿಯೂ ಆಪ್ಯಾಯಮಾನವೆನಿಸೀತು. ಈ ಅಪ್ರಕಟಿತ ದೋಹೆಗಳು ಸಂಕಲನಗೊಂಡು ಪ್ರಕಟವಾದರೆ ಇನ್ನಷ್ಟು ದೋಹೆಗಳು ಓದುಗರಿಗೆ ಸಿಕ್ಕೀತು.

ಪರಾಮರ್ಶನ ಕೃತಿಗಳು

ಪಾದೇಕಲ್ಲು ವಿಷ್ಣು ಭಟ್ಟ (ಸಂ), ಮಹಾಜನಪದ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಎಂ.ಜಿ. ಎಂ ಕಾಲೇಜು ಉಡುಪಿ, ೨೦೧೪.

ವಿವಿಧ ಲೇಖಕರು (ಸಂಗ್ರಹ) , ಚಂದ್ರಗಿರಿಯ ರಾಜಹಂಸ, ಗಾಯತ್ರಿ ಪ್ರಕಾಶನ, ಅನಂತ ಪ್ರಕಾಶ, ಕಿನ್ನಿಗೋಳಿ, ೨೦೦೫

ವೆಂಕಟರಾಜ ಪುಣಿಂಚತ್ತಾಯ (ಅನುವಾದ), ನನ್ನಜ್ಜನಿಗೊಂದಾನೆಯಿತ್ತು, ಕೇಂದ್ರ ಸಾಹಿತ್ಯ ಅಕಾಡೆಮಿ, ನವದೆಹಲಿ, ೧೯೭೩

ಶ್ರೀಕೃಷ್ಣ ಭಟ್ ಪಿ. (ಸಂ), ಪೊಂಗದಿರು, ಶ್ರೀಪುಂಡೂರು ವೆಂಕಟರಾಜ ಪುಣಿಂಚತ್ತಾಯ ಷಷ್ಟ್ಯಬ್ಧ ಅಭಿನಂದನ ಸಮಿತಿ, ರೂಪಮಹಲ್, ತಾಳಿಪಡ್ಪು, ಕಾಸರಗೋಡು, ೧೯೯೮

ಆಧುನಿಕ ಕನ್ನಡ ನಾಟಕಗಳಲ್ಲಿ ಏಕಲವ್ಯ ಪಾತ್ರದ ತೌಲನಿಕ ವಿಶ್ಲೇಷಣೆ

ಡಾ.ಅಶೋಕ ಎಸ್.ಎಸ್

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮೂರು ಕಾಲಘಟ್ಟಗಳಲ್ಲಿ ಕಂಡು ಬುರುವ ಪ್ರಮುಖ ನಾಟಕಕಾರರಾದ ಗೋವಿಂದಪೈ ಅವರ 'ಹೆಬ್ಬೆರಳು', ಕುವೆಂಪು ಅವರ 'ಬೆರಳ್ ಗೆ ಕೊರಳ್' ಹಾಗೂ ಸಿದ್ಧಲಿಂಗಯ್ಯ ಅವರ 'ಏಕಲವ್ಯ' ನಾಟಕಗಳಲ್ಲಿ ಏಕಲವ್ಯ ಪಾತ್ರವನ್ನು ಕುರಿತಂತೆ ಪ್ರಸ್ತುತ ಲೇಖನದಲ್ಲಿ ಚರ್ಚಿಸಲಾಗಿದೆ. ಈ ಮೂವರು ನಾಟಕಕಾರರೂ ಕೂಡಾ ಆಯಾಯ ಕಾಲದ ಸಾಮಾಜಿಕ ರಾಜಕೀಯ, ಸಾಂಸ್ಕೃತಿಕ ಆಯಾಮಗಳ ಹಿನ್ನೆಲೆಯಲ್ಲಿ ಪೌರಾಣಿಕ ವಸ್ತು ಮತ್ತು ಪಾತ್ರವೊಂದನ್ನು ಸಮಕಾಲೀನ ಸಮಾಜದ ವಿದ್ಯಮಾನಗಳ ಹಿನ್ನೆಲೆಯಲ್ಲಿ ಪುರಾಣವನ್ನು ಮುರಿದು ಕಟ್ಟಿದ್ದಾರೆ. ಒಂದೇ ವಸ್ತುವನ್ನು ಆಧರಿಸಿದ ಈ ಮೂರು ನಾಟಕಗಳಲ್ಲಿ ಹಲವಾರು ಸಾಮ್ಯತೆಗಳು ಹಾಗೂ ಭಿನ್ನತೆಗಳು ಕಂಡುಬರುತ್ತವೆ. ಪ್ರಾಚೀನ ಭಾರತೀಯ ಸಮಾಜದಲ್ಲಿದ್ದ ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರ ಅತಿಶೂದ್ರ ಎಂಬ ಶ್ರೇಣೀಕರಣ ವ್ಯವಸ್ಥೆ ಇಂದು ಆಧುನಿಕ ಯುಗದಲ್ಲಿಯೂ ಕೂಡಾ ತನ್ನ ಸ್ವರೂಪವನ್ನು ಬದಲಾಯಿಸಿಕೊಂಡು ಮುಂದುವರೆಯುತ್ತಿರುವುದು ಕಾಣುತ್ತಿದೆ. ಪ್ರಸ್ತುತ ಸಮಾಜದಲ್ಲಿನ ಜಾತಿಧರ್ಮದ ಅಸಹಿಷ್ಣುತೆ, ಜಾಗತೀಕರಣದ ಹಿನ್ನೆಲೆಯಲ್ಲಿ ಶಿಕ್ಷಣದ ವ್ಯಾಪಾರೀಕರಣ ಹಾಗೂ ಅಧಿಕಾರ ಸಂಬಂಧಗಳ ನಡುವಿನ ಅಪವಿತ್ರ ಮೈತ್ರಿಯೊಂದಿಗೆ ಉಂಟುಮಾಡುತ್ತಿರುವ ಅವಾಂತರಗಳನ್ನು ಈ ಪೌರಾಣಿಕ ಕಥಾಧಾರಿತ ಕೃತಿಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

ಮಹಾಭಾರತ ಮಹಾಕಾವ್ಯದಲ್ಲಿ ಏಕಲವ್ಯ ಬೇಡರ ಶೂದ್ರ ಸಮುದಾಯಕ್ಕೆ ಸೇರಿದವ. ಇವನು ಶ್ರೇಣೀಕೃತ ಸಮಾಜದ ಭಾಗವಾಗಿದ್ದ ದ್ರೋಣಾಚಾರ್ಯರ ನಿರಾಕರಣೆಯ ಹೊರತಾಗಿಯೂ ಬಿಲ್ಲುವಿದ್ಯೆಯಲ್ಲಿ ಅರ್ಜುನನಿಗಿಂತ ಪ್ರವೀಣನಾಗಿರುತ್ತಾನೆ. ಇದನ್ನು ಸಹಿಸದ ಕ್ಷತ್ರಿಯನಾಗಿದ್ದ ಅರ್ಜುನ ದ್ರೋಣನಿಗೆ ಕೊಟ್ಟಮಾತನ್ನು ತಪ್ಪಿ ನೀನು ನಡೆದುಕೊಂಡಿರುವೆ ಎಂದು ಗುರುದಕ್ಷಿಣೆಯಾಗಿ ಏಕಲವ್ಯನ ಹೆಬ್ಬೆರಳನ್ನು ಗುರುಕಾಣಿಕೆಯಾಗಿ ಪಡೆದುಕೊ ಎಂದು ಹೇಳುತ್ತಾನೆ. ದ್ರೋಣಾಚಾರ್ಯ ಮರುಮಾತಿಲ್ಲದೆ ಹಾಗೆಯೇ ಬಲಿತೆಗೆದುಕೊಳ್ಳುತ್ತಾನೆ. ಇದೇ

ವಸ್ತುವನ್ನು ಕುರಿತಂತೆ ರಚಿಸಿರುವ ಕೃತಿಗಳ ಸಾರಾಂಶವನ್ನು ಕೂಡಾ ಹೇಳಿ ಚರ್ಚಿಸಲಾಗಿದೆ.

ಗೋವಿಂದಪ್ಪೈ ಅವರ 'ಹೆಬ್ಬೆರಳು' ಎಂಬ ಪದ್ಯನಾಟಕದಲ್ಲಿ ಏಕಲವ್ಯನ ಸಾಕುತಂದೆ ಹಿರಣ್ಯಧನು ಬೇಡವೆಂದರೂ ಏಕಲವ್ಯ ಬಿಲ್ಲುವಿದ್ಯೆಯನ್ನು ಕಲಿಯಲು ದ್ರೋಣನ ಬಳಿ ಹೋಗುವನು. ಅನಾರ್ಯನಾದ ಬಿಲ್ಲಕುಮಾರನಿಗೆ ವಿದ್ಯೆ ಕಲಿಸುವುದು ಸಂಪ್ರದಾಯಕ್ಕೆ ವಿರೋಧವೆಂದು ದ್ರೋಣನು ನಿರಾಕರಿಸುವನು. ಏಕಲವ್ಯ ನಮಸ್ಕರಿಸಿ ಹಿಂತಿರುಗುವಾಗ ದ್ರೋಣನು ಒಳ್ಳೆಯ ಮನಸ್ಸಿನಿಂದ ಹರಸಿದ ಕಾರಣ ಅವನು ಬಿಲ್ಲುವಿದ್ಯೆಯಲ್ಲಿ ಶೂರನಾಗುತ್ತಾನೆ. ಏಕಲವ್ಯನಿಗೆ ದ್ರೋಣನೇ ಗುರುವೆಂದು ಅವನಿಂದ ಕೇಳಿ ತಿಳಿದ ಅರ್ಜುನನು ಅಸೂಯೆಪಟ್ಟು ಗುರುವನ್ನು ಅವನಲ್ಲಿಗೆ ಕರೆದುಕೊಂಡು ಹೋಗುವನು. ಅಲ್ಲಿ ಏಕಲವ್ಯನು ಗುರುವಿಗೆ ತನ್ನ ಹೆಬ್ಬೆರಳನ್ನು ಕಾಣಿಕೆಯಾಗಿ ಸಮರ್ಪಿಸುವನು. ಪ್ರಾಚೀನ ಗ್ರೀಕ್ ನಾಟಕಗಳಲ್ಲಿ ಕಥೆಯನ್ನು ಬೆಳೆಸಲು ಮೇಳದವರು ಇರುವಂತೆ ಇದರಲ್ಲಿ ಗೊಂದಲದವರು ಇದ್ದಾರೆ.

ಕುವೆಂಪು ಅವರು ಏಕಲವ್ಯನನ್ನು ಕಥಾನಾಯಕನನ್ನಾಗಿ ಮಾಡಿಕೊಂಡು ರಚಿಸಿರುವ 'ಬೆರಳ್ ಗೆ ಕೊರಳ್' ನಾಟಕದಲ್ಲಿ ಒಟ್ಟು ಮೂರು ದೃಶ್ಯಗಳಿವೆ. ಅವುಗಳಿಗೆ ಗುರು ಕರ್ಮ ಯಜ್ಞ ಎಂದು ಸೂಚಿಸಿದ್ದಾರೆ. ತನಗಿಂತ ಮಿಗಿಲಾದ ಅದ್ವಿತೀಯ ಬಿಲ್ಲುಗಾರ ಬೇರೆ ಯಾರೂ ಕೂಡಾ ಇರಕೂಡದೆಂಬ ಅಜರ್ಯನನ ಅಸೂಯೆ ಹಾಗೂ ಜಾತಿಅಸಹನೆಯ ಫಲವಾಗಿ ಗುರು ದ್ರೋಣನ ಮೇಲೆ ಒತ್ತಡ ತಂದು ತನ್ನನ್ನು ಮೀರಿಸುವಂತಹ ಬಿಲ್ಲುಗಾರನಾದ ಏಕಲವ್ಯನ ಹೆಬ್ಬೆರಳನ್ನು ಗುರುಕಾಣಿಕೆಯಾಗಿ ಪಡೆಯುವ ವಸ್ತು ಈ ನಾಟಕದಲ್ಲಿದೆ. ಅರ್ಜುನನ ಮತ್ಸರದ ಕಾರಣದಿಂದ ಏಕಲವ್ಯನಿಗೆ ವಿದ್ಯೆಯನ್ನು ಕಲಿಸಲಾಗದೆ ಅಸಹಾಯಕನಾದ ದ್ರೋಣ 'ಕಾಡಾದೊಡಂ ನೂರುಮಡಿ ಲೇಸು, ಕರುಬು ಕಿಚ್ಚುರಿವ ಆ ನಮ್ಮ ನಾಡಿಗಿಂತ' ಎಂದುಕೊಳ್ಳತೊಡಗಿದ. ನಂತರ ಅರ್ಜುನನಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳುವ ಸಲುವಾಗಿ ಮನಸ್ಸಿಲ್ಲದ ಮನಸ್ಸಿನಿಂದ ದ್ರೋನ ಏಕಲವ್ಯನ ಹೆಬ್ಬೆರಳನ್ನಿ ಬಲಿಯಾಗಿ ಕೇಳುತ್ತಾನೆ. ಅದಕ್ಕೆ ಪ್ರತಿಕ್ರಿಯಿಸಿದ ಏಕಲವ್ಯ 'ಪಡೆವುದೆಲ್ಲ ಕೊಡುವುದಕ್ಕಲ್ತೆ ಆರ್ಯ? ಮೇಣ್ ಪೂರ್ಣಮಂ ಕೊಡದೆ ಪಡೆದೆವೆಂತು ಪೂರ್ಣಮಂ ಎನ್ನುತ್ತಾ ಕೊಳ್ ದಕ್ಷಿಣೆಯನ್ ಇದನ್! ಗೆಲ್ಗೆಧರ್ಮಂ! ಗೆಲ್ಗೆದೈವೇಚ್ಛೆ! ನಿಮ್ಮ ವಚನಂನಿಲ್ಗೆ! ಮೇಣ್ ಅರ್ಜುನನ ಪೆರ್ ಬಯಕೆಯುಂ ಸಲ್ಗೆ' ಎಂದು ಏಕಲವ್ಯ ಬೆರಳನ್ನು ಕತ್ತರಿಸಿ ಕೊಡುತ್ತಾನೆ. ಇಂತಹ ಮಹಾಪಾಪದ ಕಾರ್ಯಕ್ಕೆ ಪಾಪಪ್ರಜ್ಞೆಯಿಂದ ದ್ರೋಣ ವತ್ಸಾ ನಿನ್ನ ಬೆರಳ್ಗೆ ನನ್ನ ಕೊರಳ್ ಎಂದು ಕೇಳುತ್ತಾನೆ.

ಮಹಾಭಾರತದ ಕಥೆಯಲ್ಲಿ ದ್ರೋಣನಿಗೆ ಯಾವುದೇ ರೀತಿಯ ಪಾಪಪ್ರಜ್ಞೆ ಕಾಡುವುದಿಲ್ಲ. ಅರ್ಜುನ ಕೇಳಿದ ತಕ್ಷಣವೇ ಹೋಗಿ ಏಕಲವ್ಯನ ಬೆರಳನ್ನು ಕತ್ತರಿಸಿಕೊಡುವಂತೆ ಕೇಳುತ್ತಾನೆ. ಆದರೆ 'ಬೆರಳ್‌ಗೆ ಕೊರಳ್' ನಾಟಕದಲ್ಲಿ ದ್ರೋಣನಿಗೆ ತಾನು ಅರ್ಜುನನ ಮಾತಿನಂತೆ ಅಸಹಾಯಕನಾಗಿ ನಡೆದುಕೊಂಡಿದ್ದರ ಬಗ್ಗೆ ತೀವ್ರವಾಗಿ ತಪ್ಪಿನ ಅರಿವಾಗುತ್ತದೆ. ಗುರು ದ್ರೋಣರು ಏಕಲವ್ಯನಿಗೆ ವಿದ್ಯೆ ಕಲಿಸಲು ನಿರಾಕರಿಸಿದರೂ ಹರಸಿ ಕಳಿಸಿದ್ದರಿಂದ ಅವನು ಬಿಲ್ಲುವಿದ್ಯೆಯಲ್ಲಿ ಪರಿಣಿತನಾಗುತ್ತಾನೆ ಎಂದು ಹೇಳಲಾಗಿದೆ. ಅಂದರೆ ಪುರಾಣದಲ್ಲಿ ಶೂದ್ರರು ವಿದ್ಯೆಯನ್ನು ಕಲಿಯಲು ಅನರ್ಹರು ಎಂಬುದು ಹೇಗೆ ವ್ಯಕ್ತವಾಗಿದೆಯೋ ಅದು ಹಾಗೆಯೇ ಗೋವಿಂದಪ್ಪೈ ಅವರಲ್ಲಿಯೂ ಮುಂದುವರೆಯುತ್ತದೆ. ಅಂದರೆ ಏಕಲವ್ಯ ಅಲ್ಲಿ ಅವಮಾನಕ್ಕೊಳಗಾಗಿದ್ದು, ಬಲಿಯಾಗಿದ್ದು ಯಾವ ಕಾರಣದಿಂದ ಎಂಬುದಕ್ಕಿಂತ ಹೆಚ್ಚಿನದಾಗಿ ಏಕಲವ್ಯನ ಗುರುಭಕ್ತಿಯ ಪರಾಕಾಷ್ಠೆಯನ್ನು ಕೊಂಡಾಡುಲಾಗುತ್ತದೆ. ಹಾಗಾಗಿ ಇಲ್ಲಿ ಯಾವುದೇ ಬದಲಾವಣೆ ಕಾಣುವುದಿಲ್ಲ. ಆದರೆ ಕುವೆಂಪು ಅವರು ಮಹಾಭಾರತದ ಕಥೆಯಲ್ಲಿನ ಶ್ರೇಣೀಕೃತ ಸಾಮಾಜಿಕ ಪೆಡಸು ವ್ಯವಸ್ಥೆಯನ್ನು ಈ ಮೂಲಕ ಪರೀಕ್ಷಿಸಿ ವಿಮರ್ಶಿಸುತ್ತಾರೆ. ಪುರಾಣವನ್ನು ಮುರಿದು ಕಟ್ಟುವುದರ ಮೂಲಕ ಈ ವಸ್ತುವಿಗೆ ಪುನರ್ ವ್ಯಾಖ್ಯಾನ ಮಾಡುತ್ತಾರೆ. ಮೇಲ್ವರ್ಗಕ್ಕೆ ಸೇರಿದ ದ್ರೋಣನಲ್ಲಿ ಮನಃಪರಿವರ್ತನೆಯನ್ನು ಕುವೆಂಪು ಅವರು ಕಾಣುತ್ತಾರೆ. ಆದರೆ ಅರ್ಜುನನಲ್ಲಿ ಈ ಕುರಿತು ಯಾವುದೇ ಬದಲಾವಣೆ ಆಗದಿರುವುದು ಕೂಡಾ ಒಂದು ರೀತಿ ಈ ಸಮಾಜದಲ್ಲಿ ಜಡ್ಡುಗಟ್ಟಿದ ವರ್ಣ ಹಾಗೂ ವರ್ಗ ವ್ಯವಸ್ಥೆಯನ್ನು ಲೇವಡಿ ಮಾಡುತ್ತದೆ. ಡಾ. ಕೆ.ಸಿ ಶಿವಾರೆಡ್ಡಿ ಅವರು "ಕುವೆಂಪು ಅವರು ಬೆರಳ್‌ಗೆ ಕೊರಳ್ ನಾಟಕದಲ್ಲಿ ವರ್ಣ ವರ್ಗ ವ್ಯವಸ್ಥೆಗಳನ್ನು ಒಟ್ಟಿಗೆ ವಿಶ್ಲೇಷಣೆಗೆ ಗುರುತುಪಡಿಸುತ್ತಾರೆ. ಮೇಲುವರ್ಗದವರಿಗೆ ಮಾತ್ರ ಮೀಸಲಾಗಿದ್ದ ವಿದ್ಯೆ ಹಾಗೂ ಯುದ್ಧಕಲೆಯನ್ನು ಏಕಲವ್ಯ ಪಡೆದಿದ್ದರಿಂದ ಸಾಮ್ರಾಜ್ಯಶಾಹಿ ಶಕ್ತಿಗಳು ಅವನ ಅಸ್ತಿತ್ವವನ್ನೇ ಬಲಿ ತೆಗೆದುಕೊಳ್ಳುತ್ತವೆ. ಪುರೋಹಿತನಿಗೆ ಒಂದು ನಿಯಮ, ಶೂದ್ರನಿಗೆ ಮತ್ತೊಂದು ನಿಯಮದ ತಾರತಮ್ಯದ ಪುರೋಹಿತ ಶಕ್ತಿಯಿಂದಲೇ ಏಕಲವ್ಯನನ್ನು ನಿಸ್ತೇಜಗೊಳಿಸುವ ಸಾಮ್ರಾಜ್ಯಶಕ್ತಿಗಳ ತಂತ್ರವಾಗಿದೆ ಇದು. ಶೂದ್ರನೊಬ್ಬ ಸಾಂಪ್ರದಾಯಿಕ ನಿಯಮಗಳನ್ನು ಮೀರಿದರೆ ಅದಕ್ಕೆ ತಮ್ಮ ಹಕ್ಕುಗಳನ್ನು ಪ್ರತಿಷ್ಠಾಪಿಸಲು ರಾಪ್ರಭುತ್ವದ ಬೆಂಬಲದಿಂದ ಶಿಕ್ಷೆ ವಿಧಿಸುವ ಮಾದರಿಗೆ ಈ ಘಟನೆ ಒಂದು ಮಾರ್ಮಿಕ ಉದಾಹರಣೆ. ಏಕಲವ್ಯನ ಕಾಲಕ್ಕೆ ಪುರೋಹಿತವರ್ಗ ಶಸ್ತ್ರಗಳನ್ನು ಹಿಡಿಯುವ ರಾಜತಂತ್ರಗಳನ್ನು ರೂಪಿಸುವ ಯುದ್ಧಕಲೆಯನ್ನು ಕರಗತ

ಮಾಡಿಕೊಳ್ಳುವಂತಹ ಹಂತ ವಿಕಾಸಗೊಂಡು ಶೂದ್ರವರ್ಗದ ಹಕ್ಕುಗಳನ್ನು ದಮನಗೊಳಿಸುವ ಹಂತವನ್ನು ತಲುಪಿದ್ದಕ್ಕೆ ಸಾಕ್ಷಿಯಂತಿದೆ ಈ ಪ್ರಸಂಗ. ವರ್ಣ ವ್ಯವಸ್ಥೆಯ ಮಧ್ಯೆಯೂ ಬದಲಾವಣೆಗೆ ಒಳಗಾದರೂ ಸಾಮ್ರಾಜ್ಯಶಾಹಿ ಶಕ್ತಿಗಳ ಅಸೂಯೆಯಾಗ್ನಿ ಅದಕ್ಕೆ ಅವಕಾಶ ಕಲ್ಪಸದೆ ಈ ನಾಟಕದ ಘಟನೆಗಳು ವರ್ಣ ವರ್ಗ ಸಂಘರ್ಷವನ್ನೆ ಕಟ್ಟಿಕೊಡುತ್ತದೆ" ತುಂಬ ವಿಮರ್ಶಾತ್ಮಕವಾದ ನುಡಿಗಳನ್ನು ಈ ಕುರಿತು ಹೇಳುವಾಗ ಇವರು ಹೇಳುವ ಈನ ವಿಚಾರ ಇಂದಿನ ಸಮಕಾಲೀನ ಸಂದರ್ಭಕ್ಕೂ ಅನ್ವಯವಾಗುತ್ತದೆ. ಇಂದು ಶಿಕ್ಷಣ ಎಂಬ ವ್ಯವಸ್ಥೆಯಲ್ಲಿಯೇ ಹಲವಾರು ಶ್ರೇಣೀಕರಣಗಳಿವೆ. ಅದು ವ್ಯಾಪಾರೀಕರಣಕ್ಕೊಳಗಾಗಿ ಉಳ್ಳವರ ಪಾಲಾಗುತ್ತಿರುವುದನ್ನು ಕೂಡಾ ಗಮನಿಸಬೇಕಾಗುತ್ತದೆ. ಈ ಹಿನ್ನಲೆಯಲ್ಲಿ ಇಂದಿನ ಶಿಕ್ಷಣ ಸರ್ಕಾರಿ ಶಾಲಾ ಕಾಲೇಜುಗಳಿಗೆ ನಿರ್ಗತಿಕರು, ಬಡವರು ಹೋದರೆ ಷಾಪಿಂಗ್‌ಮಾಲುಗಳ ಹಾಗೆ ತಲೆಯೆತ್ತಿರುವ ಖಾಸಗಿ ಶಾಲಾಕಾಲೇಜುಗಳಿಗೆ ಮೇಲುವರ್ಗದ ಶ್ರೀಮಂತರು ಹೋಗುತ್ತಾರೆ. ಇರುವ ಎಲ್ಲಾ ಆಯ್ಕೆ ಮತ್ತು ಅವಕಾಶಗಳು ಉಳ್ಳವರ ಪಾಲಾಗುತ್ತಿರುವುದನ್ನು ಕೂಡಾ ಶಿವಾರೆಡ್ಡಿ ಅವರ ಚಿಂತನೆಗಳೊಂದಿಗೆ ಸಮಕಾಲೀನ ಸಂದರ್ಭದಲ್ಲಿ ಚಿಂತಿಸಬೇಕಿದೆ.

ನವೋದಯ ಸಾಹಿತ್ಯ ಘಟ್ಟದ 'ಹೆಬ್ಬೆರಳು' ಹಾಗೂ 'ಬೆರಳ್ ಗೆ ಕೊರಳ್' ನಾಟಕಗಳಿಗಿಂತಲೂ ದಲಿತ ಬಂಡಾಯ ಸಾಹಿತ್ಯ ಘಟ್ಟದಲ್ಲಿ ಕೊಂಚ ಭಿನ್ನ ಮಾದರಿಯಾಗಿ ನಮಗೆ ಸಿದ್ಧಲಿಂಗಯ್ಯ ಅವರ 'ಏಕಲವ್ಯ' ನಾಟಕ ಕಾಣುತ್ತದೆ. ಸಿದ್ಧಲಿಂಗಯ್ಯ ಅವರ 'ಏಕಲವ್ಯ' ನಾಟಕದ ಕಥೆ ಕಾಡು ಮತ್ತು ನಾಡಿನ ನಡುವಿನ ಸಂಘರ್ಷದ ಕಥೆಯಾಗಿ ಕಾಣುತ್ತದೆ. ಇಲ್ಲಿ ಏಕಲವ್ಯ ಕಾಡನ್ನು ನಾಡಿನ ರಕ್ಕಸರಿಂದ ರಕ್ಷಿಸಿ ಸ್ಥಳೀಯ ಕಾಡಿನ ಸಂಸ್ಕೃತಿಯನ್ನು ಕಾಪಾಡುವಂತಹ ನಾಯಕನಾಗಿ ಕಾಣುತ್ತಾನೆ. ಪುರಾಣದ ಕಥೆಗಿಂತ ಸಂಪೂರ್ಣ ಭಿನ್ನವಾಗಿ ನಮಗಿಲ್ಲಿ ಕಾಣುತ್ತಾ ಹೋಗುತ್ತದೆ. ಈ ಕುರಿತಂತೆ ಪ್ರಸಿದ್ಧ ವಿಮರ್ಶಕರಾದ ಕೆ. ಮರುಳಸಿದ್ದಪ್ಪ ಅವರು 'ಏಕಲವ್ಯ' ನಾಟಕ ಕುರಿತಂತೆ ಮಹತ್ವದ ವಿಚಾರಗಳನ್ನು ಮಂಡಿಸುತ್ತಾರೆ. ಎಲ್ಲರಿಗು ತಿಳಿದಿರುವಂತೆ ಶೂದ್ರನಾದ ಏಕಲವ್ಯನಿಗೆ ಬಿಲ್ಲುವಿದ್ಯೆಯನ್ನು ಅಂದಿನ ವರ್ಣಾಶ್ರಮ ವ್ಯವಸ್ಥೆಯೊಳಗೆ ಕ್ಷತ್ರಿಯರು ನಿರಾಕರಿಸಿ ಜ್ಞಾನದ ರಾಜಕಾರಣ ಮಾಡುತ್ತಾರೆ. ಹಿಂದೂ ಧರ್ಮದ ಕರಾಳ ವರ್ಣ ತಾರತಮ್ಯವನ್ನು ವಿಮರ್ಶಿಸುವ ಸಾಧನವಾಗಿ ಇದೇ "ಪುರಾಣ ಕಥೆಯನ್ನು ಕುವೆಂಪು ಅವರು 'ಬೆರಳ್ ಗೆ ಕೊರಳ್' ನಾಟಕದಲ್ಲಿ ಪುನರ್ ರಚಿಸಿದರು. ಏಕಲವ್ಯನ ಬೆರಳು ಕತ್ತರಿಸಿದವರಿಗೆ ಆದ ಶಿಕ್ಷೆಯನ್ನು ಕರ್ಮ ಸಿದ್ಧಾಂತದ ಚೌಕಟ್ಟಿನಲ್ಲಿಯೇ ಕುವೆಂಪು ವಿವರಿಸಿದ್ದಾರೆ. ಗೋವಿಂದ ಪೈ ಅವರು ತಮ್ಮ 'ಹೆಬ್ಬೆರಳು'

ನಾಟಕದಲ್ಲಿ ಏಕಲವ್ಯನು ಬೆರಳು ಕತ್ತರಿಸಿ ಕೊಟ್ಟಿದ್ದು ತಪ್ಪುಗ್ರಹಿಕೆಯಿಂದಾದ ಆಕಸ್ಮಿಕವೆಂಬಂತೆ ಚಿತ್ರಿಸಿ ದ್ರೋಣಾಚಾರ್ಯರಿಗೆ ಈ ಸಂಬಂಧವಾಗಿ ತಗಲುಕೊಂಡಿದ್ದ ಕಳಂಕವನ್ನು ತೊಡೆದು ಹಾಕಲು ಪ್ರಯತ್ನಿಸಿದರು. ಸಿದ್ಧಲಿಂಗಯ್ಯನವರು ಇದೀಗ ಏಕಲವ್ಯ'ನ ಕಥೆಯನ್ನು ಮತ್ತೊಂದು ನೆಲೆಯಿಂದ ಅರ್ಥೈಸಲು ಹೊರಟಿದ್ದಾರೆ. ಕಾಡಿನ ಮತ್ತು ನಾಡಿನ ಮಧ್ಯೆ ನಡೆದ ಸಂಘರ್ಷದ ಕಥೆಯಾಗಿ ಏಕಲವ್ಯನ ಬದುಕು ಸಿದ್ಧಲಿಂಗಯ್ಯನವರಿಗೆ ಗೋಚರವಾಗಿದೆ. ಕಾಡು ಪ್ರತಿನಿಧಿಸುವ ನಿಸರ್ಗ ಸಹಜ ಮುಗ್ಧತೆ ಮತ್ತು ಸರ್ವ ಜೀವಚೈತನ್ಯವನ್ನು ಕಾಪಾಡುವ ಭರವಸೆಯನ್ನು ಏಕಲವ್ಯ ಮತ್ತವನ ಸಹಚರರು ಪ್ರತಿನಿಧಿಸಿದರೆ, ನಗರ ನಾಗರಿಕತೆಯ ಸ್ವಾರ್ಥ, ಅಹಂಕಾರ ಮತ್ತು ಕ್ರೌರ್ಯದ ಸಾಕಾರವಾಗಿ ರಾಜ ಮತ್ತು ಅವನ ಅನುಚರವರ್ಗ ಕಾಣಿಸಿಕೊಳ್ಳುತ್ತದೆ" ಮರುಳಸಿದ್ದಪ್ಪ ಅವರು ಆಧುನಿಕ ಭಾರತದ ವಸಹತೋತ್ತರ ಚಿಂತನೆಯಲ್ಲಿ ಈ ನಾಟಕವನ್ನು ನೋಡಲಾಗಿದೆ ಎಂದು ಅನಿಸುತ್ತದೆ. ಮಾರುಕಟ್ಟೆ ಸಂಸ್ಕೃತಿ ಈ ದೇಶದ ನಿಸರ್ಗದ ಸಂಪತ್ತನ್ನು ವಿನಾಶ ಮಾಡಿ ನಿರ್ವೀರ್ಯಗೊಳಿಸುತ್ತಿರುವುದು ಅಲ್ಲದೆ, ತಮ್ಮೆಲ್ಲರಿಗೆ ಅಡ್ಡಿಪಡಿಸುವಂಥವರನ್ನೆಲ್ಲ ಮುಗಿಸುತ್ತಾ ಹೋಗುವುದರ ಸಾಂಕೇತಿಕವಾಗಿ ಇಲ್ಲಿ ಪಾಂಡವರು ಮತ್ತು ಕೌರವರು ಮಾರುಕಟ್ಟೆ ಸಂಸ್ಕೃತಿಗೆ ಸೇರಿದವರು. ಅವರಿಗೆ ಯಾವುದೇ ರೀತಿಯ ನೈತಿಕತೆಯ ಪರಿವೇ ಇಲ್ಲದೆ ಮೋಜು-ಮಸ್ತಿಗಳಲ್ಲಿ ಮುಳುಗಿರುವಂತಹವರು. ಇಂತಹ ಅಮಲೇರಿದ ಜನ ಅಣ್ಣ-ತಮ್ಮತಾಯಿ-ತಂದೆ ಅಕ್ಕ-ತಂಗಿ ಸಂಬಂಧಗಳ ಬೆಲೆ ಗೊತ್ತಿರದಂತಹ ಈ ಪಡೆ ತಮ್ಮ ಮೋಜಗಾಗಿ ಅಡ್ಡಿಉಂಟುಮಾಡುವವರ ಮೇಲೆ ದಾಳಿ ಮಾಡಿ ಅವರನ್ನು ಸಂಹರಿಸಲು ಮುಂದಾಗುವಂತಹ ನಾಡಿನ ರಾಕ್ಷಸರು. ಕಾಡಿನಲ್ಲಿರುವಂತಹವರನ್ನು ಅನಾಗರಿಕರು, ಅವಿದ್ಯಾವಂತರು ಎಂದೆಲ್ಲ ಕರೆಯುವ ನಾಡಿನ ಮಂದಿ ಇದೀಗ ಅದು ಎಸಗುವ ಅನಾಚಾರಗಳನ್ನು ನಾಗರಿಕರ ಹೇಯಕೃತ್ಯವೆಂದು ನಾಟಕದಲ್ಲಿ ವರ್ಣನೆ ಮಾಡಿರುವುದು ಅತ್ಯಂತ ಉಚಿತವಾದುದಾಗಿದೆ.

ಡಾ.ಮರುಳಸಿದ್ದಪ್ಪ ಅವರು ನಾಟಕವನ್ನು ಕುರಿತಂತೆ ತಮ್ಮ ಚರ್ಚೆಯನ್ನು ಮುಂದುವರಿಸುತ್ತಾ ಈ ರೀತಿ ಹೇಳುತ್ತಾರೆ. "ಜೂಜಿನ ಹುಚ್ಚಿಗಾಗಿ ಕೈಹಿಡಿದ ಮಡದಿಯನ್ನು ಪಣವಿಟ್ಟು ವೈರದಿಂದ ಪರಸ್ಪರ ಅಣ್ಣತಮ್ಮಂದಿರೇ ಕಚ್ಚಾಡಿ ಗುರು-ಶಿಷ್ಯ, ತಂದೆ-ಮಕ್ಕಳು, ಅಣ್ಣ-ತಮ್ಮಂದಿರೇ ಕತ್ತಿ ಹಿಡಿದು ಹೋರಾಡುತ್ತಿರುವ ನಾಗರಿಕ ಕ್ರೌರ್ಯದ ಹಿನ್ನೆಲೆಯಲ್ಲಿ ಪರ್ಯಾಯವೆಂಬಂತೆ ಕಾಡಿನ ಮುಗ್ಧ ಬೇಡನ ಕಥೆ ತೆರೆದುಕೊಳ್ಳುತ್ತದೆ. ಹೀಗೆ ನಾಟಕ ಆರಂಭದಲ್ಲಿಯೇ ಪುರಾಣಕತೆಯ ಮೂಲಕ

ತಾವು ಪ್ರತಿಪಾದಿಸಲಿರುವ ಸಾಮಾಜಿಕ ಸಂದೇಶವನ್ನು ನಾಟಕಕಾರರು ಸ್ಪಷ್ಟಪಡಿಸಿದ್ದಾರೆ. ನಾಗರಿಕರು ಕಲಿತ ವಿದ್ಯೆ ಹೇಗೆ ಅಪವ್ಯಯವಾಗುತ್ತದೆ? ಅವರ ಶಸ್ತ್ರಾಸ್ತ್ರ ನೈಪುಣ್ಯತೆಗೆ ಅಸಂಖ್ಯಾತ ಅಂಗವಿಕಲತೆಗೆ, ಅಗಣಿತ ವೈಧವ್ಯಕ್ಕೆ ಹೇಗೆ ಕಾರಣವಾಗುತ್ತದೆ? ಎಂಬುದು ನಾಟಕದಲ್ಲಿ ಮತ್ತೆ ಮತ್ತೆ ಪ್ರಸ್ತಾಪಗೊಳ್ಳುತ್ತದೆ. ಕೇವಲ ವೈಯಕ್ತಿಕ ನೆಲೆಯಿಂದ ಹುಟ್ಟಿದ ಅಭಿಮಾನ, ಛಲ ಮತ್ತು ಹೊಟ್ಟೆಕಿಚ್ಚಿನಿಂದಾಗಿ ಸಂಭವಿಸಿದ ಮಹಾಭಾರತದ ಯುದ್ಧ ಇದಾವುದಕ್ಕೂ ಸಂಬಂಧವಿಲ್ಲದ ಸಾವಿರಾರು ಸೈನಿಕರನ್ನು ಬಲಿ ತೆಗೆದುಕೊಳ್ಳುವ ಬಗೆಗೆ ನಾಟಕಕಾರರ ತಿರಸ್ಕಾರವಿದೆ. ಆದರೆ ಏಕಲವ್ಯನು ಸಾಧಿಸ ಹೊರಟ ಬಿಲ್ವಿದ್ಯೆ ಲೋಕಕಲ್ಯಾಣಕ್ಕಾಗಿ, ತನ್ನ ನಾಡಿನ ರಕ್ಷಣೆಗಾಗಿ ಮೀಸಲಾದ ವಿದ್ಯೆ, ಪಾತ್ರಾಪಾತ್ರರನ್ನು ನೋಡಿ ವಿದ್ಯೆಯನ್ನು ಕಲಿಸಬೇಕೆನ್ನುವ ನಂಬಿಕೆಯಿರುವ ಹಿಂದೂ ಪರಂಪರೆಯಲ್ಲಿ ಕ್ಷತ್ರಿಯರಿಗೂ ಬೇಡರಿಗೂ ಇರುವ ಈ ವ್ಯತ್ಯಾಸ ವ್ಯಂಗ್ಯಪೂರ್ಣವಾಗಿದೆ" ಅಂದರೆ ನಾಗರಿಕ ಅನಾಗರಿಕ ಜಗತ್ತಿನ ಮೌಲ್ಯಗಳ ನಡುವೆ ನಡೆಯುವ ಸಂಘರ್ಷ ಹಾಗೂ ಪರಸ್ಪರ ಹೋಲಿಕೆಯೇ ನಾಟಕದ ಮುಖ್ಯಕೇಂದ್ರವಾಗಿದೆ. ಈ ನಾಟಕದಲ್ಲಿ ನಾಗರಿಕರು ಯಾರು? ಅನಾಗರಿಕರು ಯಾರು? ಎಂಬುದರ ಬಗ್ಗೆ ಸ್ಪಷ್ಟತೆಯನ್ನು ನಾಟಕಕಾರರು ಕಟ್ಟಿಕೊಡುತ್ತಾರೆ. ಮರುಳಸಿದ್ದಪ್ಪ ಅವರು ಹೇಳುವ ಹಾಗೆ ಪಾಂಡವರು ಮತ್ತು ಕೌರವರ ನಡುವಿನ ಯುದ್ಧ ಅನಾಗರಿಕತೆಯಿಂದ ಕೂಡಿರುವಂಥದ್ದು. ಅವರ ಹುಚ್ಚಾಟಕ್ಕೆ ಎಷ್ಟೋ ಅಮಾಯಕ ಮಂದಿ ಬಲಿಯಾಗಿರುವುದನ್ನು ನಾವು ಕಾಣಬಹುದಾಗಿದೆ. ಹೀಗೆ ಸಿದ್ಧಲಿಂಗಯ್ಯನವರ 'ಏಕಲವ್ಯ'ನಾಟಕ ಹೊಸದಾಗಿ ವ್ಯಾಖ್ಯಾನಗೊಂಡಿರುವುದನ್ನು ನಾವು ಮನಗಾಣಬಹುದು. ಅವರವರ ಹುಚ್ಚಾಟ ಮತ್ತು ತೆವಲುಗಳಿಗೆ ಎಷ್ಟು ಶ್ರಮಿಕರು, ಎಷ್ಟು ಸಂಖ್ಯೆಯ ಸೈನಿಕರು ಬಲಿಯಾಗಿದ್ದಾರೆ. ಶ್ರಮಿಕರ ರಕ್ತ ಮತ್ತು ಬೆವರು ಬಸಿದು ಹೇಗೆ ಪಾಂಡವರು ಮತ್ತು ಕೌರವರು ತಮ್ಮ ಹುಸಿ ಪ್ರತಿಷ್ಠೆಗಳನ್ನು ಮೆರೆದಿದ್ದಾರೆ. ಇವರು ಇಂದಿನ ಮಾರುಕಟ್ಟೆ ಶಾಹಿಯ ಹಾಗೂ ಬಂಡವಾಳಶಾಹಿಯ ಭಾಗವಾಗಿ ನಮಗೆ ಈ ನಾಟಕದಲ್ಲಿ ಕಾಣುತ್ತಾ ಹೋಗುತ್ತಾರೆ. ಇಂತಹ ಹೊಸ ದೃಷ್ಟಿಕೋನದಿಂದ ಸಿದ್ಧಲಿಂಗಯ್ಯನವರು 'ಏಕಲವ್ಯ'ನಾಟಕವನ್ನು, ಸಮಕಾಲೀನ ಸಮಾಜದ ವಿದ್ಯಮಾನಗಳ ಹಿನ್ನೆಲೆಯಲ್ಲಿ ನೋಡಿರುವುದು ಅತ್ಯಂತ ವಿಶಿಷ್ಟತೆಯಿಂದ ಕೂಡಿದೆ. ನಾಟಕದಲ್ಲಿ ಏಕಲವ್ಯ ನಿಸರ್ಗವನ್ನು ತನ್ನ ತಾಯಿಯ ಹಾಗೆ ನೋಡುವುದು. ಅದಕ್ಕೆ ಅಪಾಯ ತರುವಂತಹ ನಾಡಿನ ಅನಾಗರಿಕ ಜನರಿಂದ ರಕ್ಷಿಸುವಂತಹ ದೇಸಿ ಸಂಸ್ಕೃತಿಯ ನಾಯಕನಾಗಿ ಕಾಣುವುದು ಕೂಡ ನಾಟಕದಲ್ಲಿ ಒಂದು ಹೊಸ ಬೆಳಕನ್ನು ಚೆಲ್ಲುತ್ತದೆ. ಒಟ್ಟಿನಲ್ಲಿ ಈ ಮೂರು ನಾಟಕಗಳಲ್ಲಿ ಪುರಾಣ ಪುನರ್

ವ್ಯಾಖ್ಯಾನಕ್ಕೊಳಗಾಗಿ ಪ್ರಸ್ತುತ ಸಮಾಜದ ಆಗುಹೋಗುಗಳ ಹಿನ್ನೆಲೆಯಲ್ಲಿ ರೂಪುಗೊಂಡಿರುವುದರಲ್ಲಿ ಅನೇಕ ಸಾಮ್ಯತೆಗಳು ಹಾಗೂ ಉಳಿದಂತೆ ಕೆಲವು ಭಿನ್ನತೆಗಳು ಕೂಡಾ ಕಾಣಿಸಿಕೊಳ್ಳುತ್ತವೆ.

ಗ್ರಂಥ ಋಣ

೧. ಕುವೆಂಪು ಸಮಗ್ರ ನಾಟಕ,ಸಂ: ಡಾ.ಕೆ.ಸಿ ಶಿವಾರೆಡ್ಡಿ,ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಎರಡನೆಯ ಮುದ್ರಣ ೨೦೧೭

೨. ಗೋವಿಂ ಪೈ ಸಮಗ್ರ ನಾಟಕಗಳು, ಸಂ: ಎಸ್. ಶಿವಾಜಿ ಜೋಯಿಸ್. ರಾಷ್ಟ್ರಕವಿ ಗೋವಿಂದಪೈ ಸಂಶೋಧನಾ ಕೇಂದ್ರ, ಉಡುಪಿ ಮತ್ತ ಕಾವ್ಯಾಲಯ. ಪ್ರಕಾಶಕರು, ಜಯನಗರ, ಮೈಸೂರು ೨೦೦೮

೩. ಆಧುನಿಕ ಕನ್ನಡ ನಾಟಕ, ಕೆ.ಮರುಳ ಸಿದ್ದಪ್ಪ, ಲಿಪಿ ಪ್ರಕಾಶನ, ವಿಸ್ತೃತ ಮುದ್ರಣ ೧೯೯೬ ಬೆಂಗಳೂರು

೪. ಸಿದ್ಧಲಿಂಗಯ್ಯ ವಾಚಿಕೆ, ದಂಡಪ್ಪ ಕೊಂಡ್ರಳ್ಳಿ, ನುಡಿ ಪುಸ್ತಕ ಪ್ರಕಾಶನ, ಬೆಂಗಳೂರ

ಹೆಚ್. ಎಸ್. ಶಿವಪ್ರಕಾಶರ ಕಾವ್ಯದಲ್ಲಿ 'ಹಸಿರುದೇವತೆ ಹೆತ್ತವ್ವ'

ಡಾ. ಚೈತಾಲಿ. ಕೆ.ಎಸ್

"ತಂದೆಯ ನೆನೆದರೆ ತಂಗಳು ಬಿಸಿಯಾಯ್ತು
ಗಂಗಾದೇವಿ ನನ್ನ ಹಡೆದವ್ವ ನೆನೆದರೆ ಮಾಸೀದ
ತಲೆಯು ಮಡಿಯಾಯ್ತು"

'ತಾಯ್ತನ'ವೆಂಬುದು ಒಂದು ಘನತೆ; ಎಲ್ಲರನ್ನು-ಎಲ್ಲವನ್ನು ಒಳಗೊಳ್ಳುವ 'ಶಕ್ತಿ ಸಂಚಯದ ಮಾರ್ಗ; ಚೈತನ್ಯದಾಯಕ ಮಾಂತ್ರಿಕತೆ; ಪರ್ಯಾಯಗಳಿಲ್ಲದ-ಸ್ಪರ್ಧೆಯೇ ಸಾಧ್ಯವಿಲ್ಲದ ಪಟ್ಟ.

ಕಾಲ-ದೇಶಗಳನ್ನುಮೀರಿದರೂ ಬೇರುಗಳು ಅಲ್ಲಾಡದಂತೆ ಉಳಿದಿರುವ ವಿಶಾಲ ಆಲದಮರ. 'ಜನನಿ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ' ಎಂಬ ಋಷಿವಾಕ್ಯದಿಂದಮೊದಲುಗೊಂಡು 'ಮನೆಯೆ ಮೊದಲ ಪಾಠಶಾಲೆ ಜನನಿತಾನೆ ಮೊದಲ ಗುರುವು ಎಂಬ ಕವಿವಾಣಿಯವರೆಗೆ ತಾಯ್ತನ ಮಹತ್ವವ್ಯಾಪಿಸಿದೆ.

ಸಮಕಾಲೀನ ಸಂದರ್ಭದಲ್ಲಿ'ತಾಯ್ತನ' ಎಂಬಪರಿಕಲ್ಪನೆ ಭಿನ್ನವ್ಯಾಖ್ಯಾನಗಳಿಗೆ ಒಳಗಾಗುತ್ತಿದೆ. ಇದು 'ಹೆಣ್ಣಿನ ಪರಿಪೂರ್ಣತೆಯ ಅಂತಿಮ ಸಾಧನ' ಎಂಬ ಆರೋಪಿತ ಸತ್ಯದಿಂದ ಹಿಡಿದು ಮಗುವಿಗೆ ಜನ್ಮ ನೀಡುವುದು ಆಕೆಯ ಆಯ್ಕೆಯಾಗಬೇಕಾಗಿರುವ ಸಾಧ್ಯತೆಯವರೆಗೆ ವಿಸ್ತರಿಸುತ್ತಿದೆ. ಹೆಣ್ಣಿಗೆ ಮಾತ್ರ ಪ್ರಕೃತಿದತ್ತವಾಗಿ ಲಭಿಸಿರುವ ಈ ಶಕ್ತಿ ಆಕೆಯ ವ್ಯಕ್ತಿ ಸ್ವಾತಂತ್ರ್ಯವನ್ನು ಆಕ್ರಮಿಸಿಕೊಳ್ಳುತ್ತಿರುವ ಕುರಿತು ತಕರಾರುಗಳು ಎದ್ದಿವೆ. 'ಬಾಡಿಗೆತಾಯ್ತನ' ಎಂಬ ಹೊಸ ಬೆಳವಣಿಗೆಯಲ್ಲಿ ಮಹಿಳೆ ಸಂತಾನೋತ್ಪಾದನೆ ಎಂಬ ಕಾರ್ಖಾನೆಯ ಕಾರ್ಮಿಕಳಾಗುತ್ತಿರುವ ಸಂದರ್ಭಗಳು ಸೃಷ್ಟಿಯಾಗುತ್ತಿವೆ. ಆದರೆ ಎಲ್ಲವೂ ಮಾರಾಟದ ಸರಕಾಗಿರುವ ಇಂದಿನದಿನಗಳಲ್ಲಿ ಮಗುವಿಗೆ ಜನ್ಮ ನೀಡುವ ಜೈವಿಕಕ್ರಿಯೆಯಿಂದಾಚೆ ತಾಯ್ತನವೆಂಬುದು ಗಂಡು-ಹೆಣ್ಣು ಇಬ್ಬರಲ್ಲು ಇರಬೇಕಾದ ಪ್ರಜ್ಞೆ ಎಂಬ ಅರಿವನ್ನು ಪಡೆದುಕೊಳ್ಳಬೇಕಾಗಿರುವ ಸಂಕೀರ್ಣ ಸ್ಥಿತಿಯಲ್ಲಿ ನಾವಿದ್ದೇವೆ.

ಹಾಗೆ ನೋಡಿದರೆ ಕನ್ನಡ ಕಾವ್ಯ ಪರಂಪರೆಯುದ್ದಕ್ಕು ಈ ತಾಯ್ತನದ ಸೆಳೆತ ಮೂಲಧಾರೆಯಂತೆ ಹರಿಯುತ್ತಲೆ ಬರುತ್ತಿದೆ. ಬಾಲಕರಿಲ್ಲದ ಬಾಲೆಯ

ಜನ್ಮವನ್ನು ಹಾಸುಂಡು ಬೀಸಿ ಒಗೆದ ಬಾಳೆ ಎಲೆಗೆ ಹೋಲಿಸಿರುವ ಜನಪದ ಸಾಹಿತ್ಯ ಮಕ್ಕಳನ್ನು ಹೆರುವುದೇ ಹೆಣ್ಣಿನ ಪರಮಪವಿತ್ರ ಕರ್ತವ್ಯವೆಂಬ ಘೋಷಣೆಯನ್ನು ಹೊರಡಿಸುತ್ತದೆ. ಹಳೆಗನ್ನಡ ಕಾವ್ಯಗಳು ಸಹ 'ತಾಯಿ'ಸ್ಥಾನಕ್ಕೆ ವಿಶೇಷಗೌರವ ಸನ್ಮಾನಗಳನ್ನು ಒದಗಿಸಿವೆ ಮತ್ತು ಪಾತಿವ್ರತ್ಯದಂತೆ ತಾಯಿತನವೂ ಒಂದು ಮೌಲ್ಯವೆಂದು ಪರಿಗಣಿಸಲ್ಪಟ್ಟಿದೆ. ಆಧುನಿಕ ಕನ್ನಡ ಕಾವ್ಯದ ವಿಷಯಕ್ಕೆ ಬಂದರೆ ಸ್ತ್ರೀ ಪರಎಂದು ನಾವು ಭಾವಿಸಬಹುದಾದ ಕುವೆಂಪುರವರು 'ಭಾರತಜನನಿಯ ತನುಜಾತೆ' ಕವಿತೆಯ ಮೂಲಕ ರಾಷ್ಟ್ರವನ್ನೇ ತಾಯಿಯನ್ನಾಗಿಸಿದ್ದಾರೆ. ಬೇಂದ್ರೆಯವರು 'ಐದು ಐದೆಯರಿಂದ' ತಾವು ಒಡಮೂಡಿದ್ದಾಗಿ ಸಾರಿದ್ದಾರೆ. ಜಿ. ಎಸ್. ಶಿವರುದ್ರಪ್ಪನವರು 'ಜಡೆಯಾಚೆಗಿನ ತಾಯಮುಖ' ಕಾಣಲೆಂದು ಹಂಬಲಿಸಿದ್ದಾರೆ. ಒಲವಿನ ಹೆಣ್ಣನ್ನು ಪ್ರೀತಿಯಿಂದ ವರ್ಣಿಸುವ ಕೆ.ಎಸ್.ನ. ಭೂಮಿಯನ್ನು ಪೊರೆವತಾಯಿಯಾಗಿಕಂಡಿದ್ದಾರೆ.

ಬಿ.ಆರ್. ಲಕ್ಷ್ಮಣರಾವ್ ಅಮ್ಮನ ಎದೆಯಾಳದಲ್ಲಿ ಗಾಳಕ್ಕೆ ಸಿಕ್ಕ ಮೀನಾಗಿದ್ದಾರೆ; ಲಕ್ಷ್ಮೀನಾರಾಯಣ ಭಟ್ಟರು ಸೂತ್ರವೊಂದು ತಮ್ಮನ್ನು ಸಂಬಂಧದ ನೆವದಲ್ಲಿ ತಾಯಿಯೊಂದಿಗೆ ಬಿಗಿದಿರುವ ಕುರಿತು ಹೇಳಿದ್ದಾರೆ; ಫಲವತ್ತಾದಕಪ್ಪು ನೆಲದಂತಹ ಅವ್ವನ ಚಿತ್ರವನ್ನು ಲಂಕೇಶರು ಕಟ್ಟಿಕೊಟ್ಟಿದ್ದಾರೆ.

ಈ ನಿಟ್ಟಿನಲ್ಲಿ ಸಮಕಾಲೀನ ಕನ್ನಡಕಾವ್ಯ ಪ್ರಪಂಚದಲ್ಲಿ ತಮ್ಮ ವಿಶಿಷ್ಟ ಸಂವೇದನೆಗಳ ಮೂಲಕ ಗುರುತಿಸಿಕೊಂಡಿರುವ ಹೆಚ್.ಎಸ್. ಶಿವಪ್ರಕಾಶ್ ತಮ್ಮಒಟ್ಟು ಕವಿತೆಗಳಲ್ಲಿ ಕಟ್ಟಿಕೊಟ್ಟಿರುವ ತಾಯ್ತನದ ಸ್ವರೂಪ ಈ ಮೊದಲಿನ ಕನ್ನಡ ಕಾವ್ಯ ಪರಂಪರೆಯ ಮುಂದುವರಿಕೆಯ ಭಾಗವಾಗಿದೆಯೇ ಅಥವಾ ಇಂದಿನ ಸಂಕೀರ್ಣ ಸನ್ನಿವೇಶಗಳಿಗೆ ಪರಿಹಾರ ಮಾರ್ಗವಾಗಿದೆಯೇ ಎಂಬುದನ್ನು ಅರಿಯುವುದು ನಮ್ಮ ತಿಳಿವಿನ ವಲಯವನ್ನು ವಿಸ್ತರಿಸಿಕೊಳ್ಳುವ ಒಂದು ಪ್ರಮುಖ ಪ್ರಯತ್ನಎಂಬುದು ನನ್ನ ಭಾವನೆ.

ಹೆಚ್.ಎಸ್. ಶಿವಪ್ರಕಾಶ್ ಸಮಕಾಲೀನ ಕಾಲಘಟ್ಟದ ಮಹತ್ವದ ಕವಿ. ಶರಣರು, ಸೂಫಿ ಮುಂತಾದವರಿಂದ ಪ್ರಭಾವಿತಗೊಂಡಕಾರಣಕ್ಕಾಗಿ ಅನುಭಾವಿಕ ಜಗತ್ತಿನ ಹುಡುಕಾಟ ಅವರ ಕಾವ್ಯಗಳ ಒಳದನಿಯೆಂದು ಗುರುತಿಸಿದವರಿದ್ದಾರೆ. ಚರಿತ್ರೆ-ಪುರಾಣಗಳ ಮೂಲಕ ವಾಸ್ತವವನ್ನು ಕಂಡುಕೊಳ್ಳುವ ಪ್ರಯತ್ನಗಳಾಗಿ ಅವರ ಕಾವ್ಯವನ್ನು ನೋಡಿದವರಿದ್ದಾರೆ. ಅವರ ಕವಿತೆಗಳು ಅಂತರಾಳದಲ್ಲಿ ವಿಪರೀತ ವಿಷಾದ, ನೋವು ತುಂಬಿರುವ ರಚನೆಗಳೆಂದು ವಿಮರ್ಶಕರು ಗುರುತಿಸಿದ್ದಾರೆ. ಹೆಣ್ಣನ್ನು ತನ್ನ ನಿಜದ ನೆಲೆಯಲ್ಲಿ ಗುರುತಿಸಲು ಪ್ರಯತ್ನಿಸಿದವರಲ್ಲಿ

ಮೊದಲಿಗರಾದ ವಚನಕಾರರು ಅದರಲ್ಲುಅಲ್ಲಮನಂತಹವರಿಂದ ಪ್ರಭಾವಿತಗೊಂಡ ಶಿವಪ್ರಕಾಶರ ಕಾವ್ಯದಲ್ಲಿ ಅಪ್ರಯತ್ನಪೂರ್ವಕವಾಗಿಯೇ ಮಹಿಳಾ ಪ್ರಜ್ಞೆ ಜಾಗೃತವಾಗಿದೆ. ಹೀಗಾಗಿಯೆ ನಮ್ಮ ಪುರಾಣಗಳು ಸೃಷ್ಟಿಸಿರುವ, ನಮ್ಮ ಕಾವ್ಯಗಳು ಪ್ರತಿಪಾದಿಸಿರುವ ಸಿದ್ಧ ಚೌಕಟ್ಟಿನಾಚೆಗೆ ಶಿವಪ್ರಕಾಶರ ಕಾವ್ಯ ಇಣುಕಲುಯತ್ನಿಸುತ್ತವೆ. ತಾಯ್ತನದ ಬಗೆಗೆ ಜನಪ್ರಿಯವಾಗಿರುವ ರೂಢಿಗತ ವಿಚಾರಗಳನ್ನು ಮರುವಿಮರ್ಶೆಗೆ ಒಳಪಡಿಸುವ ಕೆಲಸವನ್ನು ಇವರ ಕವಿತೆಗಳು ಮಾಡುತ್ತವೆ.

ತಾಯ್ತನವೆಂಬುದು ಮಗುವಿಗೆ ಜನ್ಮ ನೀಡುವ ನೈಸರ್ಗಿಕ ಕ್ರಿಯೆ. ಆದರೆ ಮಗುವೊಂದನ್ನು ಸಲಹುವ, ಅದರ ಅಗತ್ಯಗಳನ್ನು ಪೂರೈಸುವಎಲ್ಲ ಜವಾಬ್ದಾರಿಗಳು ಆರೋಪಿತವಾಗಿರುವುದು ಮಹಿಳೆಯ ಮೇಲೆಯೆ. ಪುರುಷ ಸಮಾಜದ ಅಪೇಕ್ಷೆಗಳೆಲ್ಲವೂ ಮಹಿಳೆಯರ ಮೇಲೆ 'ತಾಯಿ' ಎಂಬಪದದ ಮೂಲಕ ಹೇರಲ್ಪಟ್ಟಿವೆ. ಆದರೆಇದುಜೈವಿಕ ಚೌಕಟ್ಟುಗಳನ್ನು ಮೀರಿ ಇಬ್ಬರಲ್ಲು ಇರಬೇಕಾದ ಮೌಲ್ಯವೆಂಬುದು ಕವಿಯ ಪ್ರತಿಪಾದನೆ. ಈ ವಿಶೇಷತೆಯೇ ಅವರ ಕಾವ್ಯವನ್ನು ಉಳಿದವರಿಗಿಂತ ಭಿನ್ನವಾಗಿಸಿದೆ.

ತಮ್ಮ'ತಾಯಂದಿರ ದಿವಸ'ಕವಿತೆಯಲ್ಲಿ, ಗಂಡಸಿನ ಗಂಡಾಂತರಗಳನ್ನು ತಾಳಿಕೊಂಡು, ನೀರೊಲೆಯಸೌದೆಯಾಗಿ, ಅಡಿಗೆಯೊಲೆಯ ಇದ್ದಿಲಾಗಿ ಬೂದಿಯಾಗಿ ಬಿರುಗಾಳಿಯಲ್ಲಿ ಹೇಳಹೆಸರಿಲ್ಲದೆ ಕಳೆದುಹೋದ ತಾಯಂದಿರನ್ನು ಕೀರ್ತಿಸುವುದರ ಬದಲು"ತಾಯಾಗಬೇಕು ನಾವೂ ಇವತ್ತು"ಎನ್ನುತ್ತಾರೆ. ಪಕ್ಷಿಗಳಲ್ಲಿ ಹೆಣ್ಣು ಮೊಟ್ಟೆಯಿಟ್ಟರೂ ಕಾವು ಕೊಡುವ, ಆಹಾರ ಸಂಗ್ರಹಿಸುವ, ಗೂಡುಕಟ್ಟುವ ಕೆಲಸಗಳನ್ನು ಗಂಡು – ಹೆಣ್ಣುಕೂಡಿಯೆ ನಿರ್ವಹಿಸುತ್ತವೆ. ನಾಗರಿಕರೆನಿಸಿಕೊಂಡಿರುವ ಮನುಷ್ಯರಲ್ಲಿ ಮಾತ್ರತಾಯ್ತನ ಹೆಣ್ಣಿನಜವಾಬ್ದಾರಿ ಎಂಬ ಸೀಮಿತ ದೃಷ್ಟಿಕೋನವಿದೆ. "ತಾಯಾಗುತ್ತೇನೆ ನಾನು ಹಡೆಯದ ಇಡೀಜಗತ್ತಿಗೋಸ್ಕರ" ಎನ್ನುವಲ್ಲಿ ತಾಯ್ತನವನ್ನು ಸಂಭ್ರಮಿಸುವ ಗಂಡಿನ ಮನಸ್ಥಿತಿಯನ್ನು ಗುರುತಿಸಬಹುದು. ಎಲ್ಲರಿಗೂತಾಯ್ತನದ ಮಾಧುರ್ಯವನ್ನು ಹಂಚುವ ಭರಾಟೆಯಲ್ಲಿ ನಮ್ಮೊಳಗೆ ನಾವೇ ತಬ್ಬಲಿಗಳಾಗುವ ಇಕ್ಕಟ್ಟಿನಿಂದ ಹೊರಬರುವ ಆಶಯ ಕವಿತೆಯಲ್ಲಿದೆ. ಇತಿಹಾಸದುದ್ದಕ್ಕೂ ನಾವು ಕೇಳುತ್ತಲೇ ಬಂದ ಸ್ಥಾಪಿತ ಸತ್ಯಗಳನ್ನು ಅಳಿಸಿ ಹೊಸ ಮನ್ವಂತರ ಸೃಷ್ಟಿಸುವ ಬಯಕೆ ಕವಿಯದು. ತಾಯ್ತನ ಕೇವಲ ಮಗುವಿಗೆ ಜನ್ಮ ನೀಡುವುದರಿಂದ ಬರುವುದಿಲ್ಲ, ಪ್ರೀತಿ ಕಾಳಜಿ, ಮಗುವಿನೊಂದಿಗೆ ಮಿಡಿಯುವ ಭಾವನೆ ಯಾರೇ ಹೊಂದಿದ್ದರೂ ತಾಯ್ತನಕ್ಕೆ ಅರ್ಹರು ಎಂಬ ಬೆರ್ಟೋಲ್ಡ್ ಬ್ರೆಕ್ಟ್ ನ 'ಕಕೇಶಿಯನ್ ಚಾಕ್‌ಸರ್ಕಲ್' ಎಂಬ ನಾಟಕ ದಮಾತುಗಳು ಇಲ್ಲಿ ನೆನಪಾಗುತ್ತದೆ.

ಹುಟ್ಟಿದ ಮೇಲೆಯೂ ಸತ್ತಂತಿದ್ದ ಮಗುವಿಗೆ,

"ತುರುಕಿದಳು ನೋಡುನೋಡುತ್ತರಲು
ನೆಲದ ಮೌನಯೋನಿಯಂತಿದ್ದ ಎಳೆಗೂಸು
ಬಾಯೊಳಕ್ಕೆ
ಜ್ಯೋತಿರ್ಲಿಂಗದ ಹಾಗೆ ತುಂಬಿದ್ದ ಮೊಲೆಯನ್ನು
ಅರಚತೊಡಗಿತು ಆ ಕೂಸು
ಹರಿದವು ಮತ್ತೊಂದು ಸಲ ನಿಂತಿದ್ದ ಝರಿಗಳು"

ಕಾಶ್ಮೀರದ ಅನುಭಾವಿ ಹೆಣ್ಣುಮಗಳು ಲಲ್ಲೇಶ್ವರಿಯ ಮಹಿಮೆ ಸಾರುವ ಕವಿತೆಯಿದು. ಮಗುವಿಗೆ ಜನ್ಮ ನೀಡುವ ದೈಹಿಕ ಪ್ರಕ್ರಿಯೆಯ ಆಚೆಗೂ ಹೆಣ್ಣಿಗೆ ತಾಯಿಯಾಗಬಲ್ಲ, ಒಂದು ಜೀವಕ್ಕೆ ಚೈತನ್ಯಶೀಲತೆಯನ್ನು ತುಂಬಬಲ್ಲ ಶಕ್ತಿ ಇದೆ ಎಂಬುದನ್ನು ಕವಿ ನಂಬುತ್ತಾರೆ. ಈ ಕಾರಣಕ್ಕಾಗಿಯೇ ಅವರ 'ಸಮಗಾರ ಭೀಮವ್ವ' ಕವಿತೆ ಮಹತ್ವವನ್ನು ಪಡೆದಿದೆ. ಜಾತಿಯ ಕಟ್ಟನ್ನು ತೊರೆದ ನಾಗಲಿಂಗಯೋಗಿಗೆ ತನ್ನ ಎದೆಹಾಲು ನೀಡಿ ಅವನ ಜ್ವರವನ್ನು ತಣಿಸಿದ ಅವಿವಾಹಿತ ಕನ್ಯೆಯನ್ನು ಕುರಿತ ಕವಿತೆ ಇದು. ತಾಯಿಯಾಗಲು ವೈವಾಹಿಕ ಚೌಕಟ್ಟಿನ ವ್ಯಾಪ್ತಿಗೆ ಒಳಪಡಬೇಕೆಂಬ ಮಾನವ ನಿರ್ಮಿತ ಮಿತಿಗಳಾಚೆಗೆ ತಾಯ್ತನವೆಂಬ ಪರಿಕಲ್ಪನೆಯನ್ನು ಕವಿ ಒಯ್ಯುತ್ತಾರೆ. ಅಕ್ಷರ ಹಾದಿಯ ಮೇಲೆ ಯುಗದಿಂದ ಯುಗಕ್ಕೆ ಯೌವನದಿಂದ ವೃದ್ಧಾಪ್ಯಕ್ಕೆ ಕವಿ ಸಾಗುತ್ತಿರುವುದು ತಾಯಿಯ ಬಾಗು ಬೆನ್ನಿನ ಮೂಳೆದಂಡಗಳನ್ನು ಹಿಡಿದೇ

ಅಮ್ಮಾ
ಕೊಡುಜಾಗ ನನಗೆ ನನ್ನಜಗತ್ತಿಗೆ
ನಿನ್ನ ಮಡಿಲ ಮೇಲೆ ನೀನು ನನಗೆ
ಒಂದೇ ಒಂದರಗಳಿಗೆ ನಿನ್ನ ಮರಿಗಿಳಿಗೆ
ಹುಟ್ಟಿಗೂ ಮೊದಲ ನೀಳ ಮಾಯಾನಿದ್ದೆ ಹಾಡು
ಮೊದಲಿಗೂ ಮೊದಲ ಜೋಗುಳ

ಕವಿ ತಮ್ಮಲ್ಲಿ ಕಾಡುತ್ತಿರುವ ಅಭದ್ರತೆಯ ಭಾವನೆಯನ್ನು ಹೋಗಲಾಡಿಸುವ ಜೀವದ್ರವ್ಯವಾಗಿ ತಾಯಿಯ ಜೋಗುಳವನ್ನು ಪರಿಭಾವಿಸಿದ್ದಾರೆ. ತಾಯಿಯ ಜೋಗುಳದ ನಿನಾದ ಎಂತಹ ತಹತಹಿಕೆಯನ್ನಾದರೂ ನೀಗುತ್ತದೆಂಬುದು ಕವಿಯ ಭಾವನೆ.

"ಇದ್ದಲಿನ ಒಲೆಯಲ್ಲಿ ಕೆಂಡಕೆದರಿಸಲೆಂದು
ಊದುಗೊಳಪೆಯಲ್ಲೂದುತ್ತಲೇ ಇರುವ
ಕುಂಕುಮ ಬೊಟ್ಟು ಹಸಿರುದೇವತೆ ಹೆತ್ತವ್ವನಿಗೆ ಹೇಳು:
ಬುತ್ತಿ ಬೇಕಿದೆಯಂತೆ ಅವನೆದೆಗೆ
ತಗುಲಿರುವ ಕ್ಷುದೆಯ ಬಾಧೆಗೆ"

ಯಾವ ಹೆಣ್ಣೂ ಎದೆ ತುಂಬಾತಾಯಿಯಾಗಬಲ್ಲ, ಬಸಿರ ತುಂಬಾ ಹಸಿರು ತಳೆಯಬಲ್ಲ, ಒಂದು ಗುಕ್ಕು ಹಾಲನ್ನು, ಒಂದು ತುತ್ತು ಅನ್ನವನ್ನು ಅನಾಥರಿಗೆ ನೀಡಬಲ್ಲವಳಾಗಿರುತ್ತಾಳೆ. ಹೊಟ್ಟೆಯ ಹಸಿವನ್ನು ಮಾತ್ರವಲ್ಲದೆ ಎದೆಯಕ್ಷುದೆಯನ್ನು ನೀಗಿಸುವ ಶಕ್ತಿ ಆಕೆಗಿದೆ. ಹಾಗಾಗಿ ಕವಿ ಆಕೆಯನ್ನು ಹಸಿರು ದೇವತೆ ಹೆತ್ತವ್ವ ಎನ್ನುತ್ತಾರೆ. ಹೆತ್ತವ್ವತನ್ನ ನಿಸರ್ಗದತ್ತ ಗುಣಗಳಿಂದ ಇಡೀ ಪ್ರಪಂಚಕ್ಕೆಲ್ಲ ಪ್ರೀತಿಯನ್ನು ಹಂಚಬಲ್ಲ, ಗಂಡು ಪ್ರಜ್ಞೆಯ ಮೃಗೀಯ ವರ್ತನೆಯನ್ನು ಕಳೆಯಬಲ್ಲ ಶಕ್ತಿರೂಪಿಣಿ.

ಭಾರತೀಯ ಕೃಷಿ ಪರಂಪರೆಯಲ್ಲಿ ಆಹಾರ ಒದಗಿಸುವ ಭೂಮಿಯನ್ನು ತಾಯಿ ಎಂದೇ ಪರಿಭಾವಿಸಲಾಗುತ್ತದೆ. ಫಲವಂತಿಕೆಯ ಶಕ್ತಿಯನ್ನು ಪರಮ ಶಕ್ತಿಯಾಗಿ ಆರಾಧಿಸುವ ಕ್ರಮವಿದು. ಎಳ್ಳು ಜೀರಿಗೆ ಬೆಳೆಯುವ ಭೂಮ್ತಾಯಿಯನ್ನು ಎದ್ದೊಂದು ಗಳಿಗೆ ನೆನೆಯುವ ಜನಪದರಂತೆ ಶಿವಪ್ರಕಾಶರು 'ನೆಲತಾಯಿ'ಯನ್ನು ನೆನೆಯುತ್ತಾರೆ. ನೆಲದ ಮಕ್ಕಳು, ಮಣ್ಣಿನ ಮಕ್ಕಳು, ಭೂಮಿ ತಾಯಿ– ಈ ಪದಗಳ ಬಳಕೆಯನ್ನು ಸಾಮಾನ್ಯವಾಗಿ ನಾವು ಕಾವ್ಯ ಜಗತ್ತಿನಲ್ಲಿ ಕಾಣುತ್ತೇವೆ. ಈ 'ನೆಲತಾಯಿ'ಪದವು ನೆಲದೊಟ್ಟಿಗಿನ ನಮ್ಮ ಸಂಬಂಧವನ್ನು ಇನ್ನೂ ಆಪ್ಯಾಯಗೊಳಿಸುತ್ತದೆ. ಶಿವಪ್ರಕಾಶರು ಹೆಣ್ಣನ್ನು ಭೂಮಿಯಾಗಿ ಕಾಣುವುದರ ಹಿಂದೆ ಸ್ತ್ರೀಪರ ಕಾಳಜಿಯುಳ್ಳ ಉದಾರ ಮಾನವತಾವಾದದ ಕವಿ ಕೆ. ಎಸ್. ನರಸಿಂಹಸ್ವಾಮಿಯವರ ಪ್ರಭಾವವವನ್ನು ಕಾಣಬಹುದು. ಬದುಕಿನ ಜಂಜಡಗಳಿಗೆ ಎದೆಯೊಡ್ಡುವ ಪರಿಯನ್ನು ತನ್ನ ಸಂತಾನಕ್ಕೆ ಕಲಿಸುವ ಶಿಕ್ಷಕಿಯಾಗಿ ಅವರು ನೆಲದ ತಾಯಿಯನ್ನುಕಂಡಿದ್ದಾರೆ. ಆದರೆಎಲ್ಲರ ಹಸಿವನ್ನು ತಣಿಸುವ ನೆಲದ ತಾಯಿಯನ್ನು ನಾವು ಸರಿಯಾಗಿ ನಡೆಸಿಕೊಂಡಿಲ್ಲವೆಂಬ ಕೊರಗು ಕವಿಗಿದೆ.

"ನೀನೆ ಪಾಲಿಸಿದೋನು
ನೀನೆ ಲಾಲಿಸಿದೋನು
ದಾಳಿ ಮಾಡಿದನಲ್ಲೆ ನೆಲತಾಯಿ
ನಿನ್ನ ಕಾಯುವವರ್ಯಾರೆ ಮಹಮಾಯಿ"

ತಾನು ಅಕ್ಕರೆಯಿಂದ ಸಾಕಿ ಸಲಹಿದ ಶಿಶುವೇ ಭೂಮಿಯನ್ನು ನಾಶಗೊಳಿಸುತ್ತಿರುವ ವಿನಾಶಕಾರಿ ಸ್ಥಿತಿಯನ್ನು ಕವಿ ಪ್ರಸ್ತಾಪಿಸಿದ್ದಾರೆ. ಭೂಕಂಪವಾದರೂ ಬಿರಿಯದ, ಜಲಪ್ರಳಯವಾದರೂ ಬೀಳದ, ಬೆಂಕಿ ನುಂಗಿದರೂ ಬೂದಿಯಾಗದ ಮೊಟ್ಟೆಗೆ ನೆಲತಾಯಿ ಕಾವು ಕೊಡುತ್ತಾಳೆ ಎಂಬ ಅಗಾಧ ನಂಬಿಕೆ ಕವಿಯದು. ಮನುಷ್ಯನ ವಿನಾಶಕಾರಿ ಬುದ್ಧಿಯನ್ನು ಸಹಿಸಿಯೂ ತಾಯ್ತನದ ಸ್ಥಿತಿ ಆತನನ್ನು ಪೊರೆಯುತ್ತದೆಂಬ ಭಾವನೆಕವಿಯದು. ಕವಿಗೆ ಕೇವಲ ಭೂಮಿ ಮಾತ್ರವಲ್ಲ ಪ್ರಕೃತಿಯ ಸಮಸ್ತ ಪರಿಕರಗಳೂ ಮಾತೃ ಸ್ವರೂಪವೇ. ಇವರಕಾವ್ಯದಲ್ಲಿತಾರೆಚಂದ್ರಮ ಮುಗಿಲುಗಳು "ತಾರವ್ವ ಚಂದ್ರವ್ವ ಮುಗಿಲವ್ವ ಭುಗಿಲವ್ವ" ಆಗಿವೆ, ಸೂರ್ಯ "ಬೃಹತ್‌ಒಲೆಯ ಬಸಿರಿನೊಳಗಣ ಭ್ರೂಣ"ವಾಗಿದ್ದಾನೆ. ತಂಗಾಳಿಯನ್ನು "ಎಷ್ಟು ದಿವಸದ ಬಳಿಕ ಬಂದೆವ್ವ ತಂಗಾಳಿ" ಎಂದು ಕೇಳುತ್ತಾರೆ. ಹೆಣ್ಣು ಗೆಲ್ಲಬಹುದಾದ ವಸ್ತು ಎಂಬ ಭಾವನೆ ಕವಿಯ ಯಾವ ಕವಿತೆಯಲ್ಲು ಕಾಣುವುದಿಲ್ಲ. ಸೋಲರಿಯದ 'ಗಂಡು' ಗೆಲ್ಲಲೊಲ್ಲದೆ ಸೋಲಲಿಕ್ಕೆಂದೇ ಕಾಯುವ ರೀತಿಯ ಬಹಳಷ್ಟು ಕವಿತೆಗಳು ಇವೆ.

'ಮತ್ತೆ ಬಂದ ಮಗಳಿಗೆ' ಕವಿತೆಯಲ್ಲಿ ತನ್ನ'ಹಡೆಯದಅಪ್ಪ'ನಿಗಾಗಿ ಬಂದ ಮಗಳಿಗೆ ಕೃತಜ್ಞತೆಸಲ್ಲಿಸುತ್ತಾರೆ. ತಾಯಿ ಶಿಶುವನ್ನುತೊರೆಯುವುದನ್ನು ಉಸಿರು ಒಡಲನ್ನು, ಬೆಳಕುಕಣ್ಣನ್ನು, ಬುದ್ಧ ಕರುಣೆಯನ್ನು ತೊರೆಯುವುದಕ್ಕೆ ಹೋಲಿಸಿದ್ದಾರೆ.

ಹೆಣ್ಣು ಇಂದಿನ ಕಾರ್ಪೊರೇಟ್ ಜಗತ್ತಿನಲ್ಲಿ ತನ್ನತಾಯ್ತನದ ಮೂಲಭೂತ ಪ್ರಶ್ನೆಯನ್ನಿಟ್ಟುಕೊಂಡು ಗಂಡಿನಜೊತೆಗೆ ಸಮಾನ ಸ್ಪರ್ಧೆಯನ್ನು ನಡೆಸಬೇಕಿದೆ. ತನ್ನ ವೃತ್ತಿ ಮತ್ತು ತಾಯ್ತನ-ಎರಡರಲ್ಲಿಒಂದನ್ನುಆಯ್ಕೆಮಾಡಿಕೊಳ್ಳಬೇಕಾದ ಅನಿವಾರ್ಯತೆ ಬಂದಾಗ ವೃತ್ತಿಯನ್ನು ತ್ಯಾಗ ಮಾಡಿದ ಬಹಳಷ್ಟು ತಾಯಂದಿರು ನಮ್ಮೆದುರಿಗಿದ್ದಾರೆ. ಮಾತೃತ್ವವೆಂಬುದು ಕೇವಲ ಮಹಿಳೆಗೆ ಮಾತ್ರ ಸಂಬಂಧಿಸಿದ್ದೆನ್ನುವ ಪರಂಪರಾಗತ ನಂಬಿಕೆಯಿಂದ ಇಂದಿನ ಬಹುತೇಕ ಹೆಣ್ಣು ಮಕ್ಕಳು ತಮ್ಮಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸಲಾಗಲಿಲ್ಲವೆಂಬ ಕೊರಗಿನಲ್ಲಿದ್ದಾರೆ. ಆದರೆ ಈ ತಾಯ್ತನವೆಂಬ ಭಾವನಾತ್ಮಕ ಪರಿಕಲ್ಪನೆಯನ್ನು ಮೌಲ್ಯ ಪ್ರತಿಪಾದನೆಯ ಶಕ್ತಿಶಾಲಿ ಮಾಧ್ಯಮವಾಗಿ ಪರಿವರ್ತಿಸಿರುವುದು ಪುರುಷ ಪ್ರಜ್ಞೆಯೆಆಗಿದೆ. ತಾಯ್ತನದ ಪರ ವಕಾಲತ್ತು ವಹಿಸಿದವರಲ್ಲಿಯೂ ಪುರುಷರಿಗೆಅಗ್ರಸ್ಥಾನ. ಆದರೆ ಮಗುವಿಗೆ ಜನ್ಮ ನೀಡುವ ನೈಸರ್ಗಿಕ ಕ್ರಿಯೆಯಿಂದಾಚೆಗೂ ತಾಯ್ತನವಿರುತ್ತದೆ; ಅದು ಗಂಡು-ಹೆಣ್ಣು ಇಬ್ಬರಲ್ಲೂ ಇರಬೇಕಾದ ಮೌಲ್ಯವೆಂಬುದನ್ನು ಕವಿ ತಮ್ಮ ಕಾವ್ಯದುದ್ದಕ್ಕೂ ಪ್ರತಿಪಾದಿಸಿದ್ದಾರೆ. ತಮಗೆ ಅಭದ್ರತೆಯ ಭಾವನೆ ಕಾಡಿದಾಗಲೆಲ್ಲ ಅವರು

ನಂಬಿರುವುದು ತಾಯಿಯ ಅಗಾಧ ವಾತ್ಸಲ್ಯವನ್ನು. ಆದರೆ ಹೆಣ್ಣಿನ ಹೆಗಲ ಮೇಲಿರುವ ಈ ಕಾಯುವ ಪೊರೆಯುವ ಶಕ್ತಿ ಇಡೀ ಜಗತ್ತಿಗೆ ಹರಡಬೇಕೆಂಬುದು ಕವಿಯ ನಿರೀಕ್ಷೆ. ಮಾಸಿದ ತಲೆಯಷ್ಟೇಅಲ್ಲ ಮಾಸಿದ ಬುದ್ಧಿಯನ್ನು, ಮಾಸಿದ ದೃಷ್ಟಿಕೋನವನ್ನು, ಮಾಸಿದ ಪರಂಪರಾಗತ ನಂಬಿಕೆಗಳನ್ನು, ಮಾಸಿದ ಮೌಲ್ಯ ವ್ಯವಸ್ಥೆಯನ್ನು ಶುಚಿಗೊಳಿಸುವ ಗಂಗೋತ್ರಿಯಂತಹ ತಾಯ್ತನ ಜಗತ್ತಿನಾದ್ಯಂತ ಪಸರಿಸಲಿ ಎಂಬ ಆಶಯಕವಿಯದು.

ಪರಾಮರ್ಶನ ಕೃತಿಗಳು

೧. ಹೋಗಿ ಬನ್ನಿ ಋತುಗಳೇ – ಎಚ್. ಎಸ್. ಶಿವಪ್ರಕಾಶ್

೨. ಗಂಧಗಾಳಿ – ಡಾ. ಎಚ್. ಎಲ್. ಪುಷ್ಪ

೩. ಕನ್ನಡಕಾವ್ಯಕಂಡ ಹೆಣ್ಣು – ಡಾ. ಸಿ. ವೀರಣ್ಣ

ಮಹಲಿಂಗರಂಗನ ಕನ್ನಡ ಪ್ರಜ್ಞೆ

ಡಾ.ಗುರುಪಾದ ಛಿವಾರಿ

ಹಳೆಗನ್ನಡ ಮತ್ತು ನಡುಗನ್ನಡ ಕವಿಗಳು ಕನ್ನಡ ಕಾವ್ಯ ರಚನೆಯಲ್ಲಿ ತೊಡಗಲು ಅವರಿಗಿದ್ದ ಸವಾಲು ಮತ್ತು ಆತಂಕಗಳು ವಿಶಿಷ್ಟವಾದವು. ಸಂಸ್ಕೃತ ಕಾವ್ಯಗಳನ್ನು ಮಾದರಿಯಾಗಿಟ್ಟು ಕೊಂಡು ಕನ್ನಡದಲ್ಲಿ ಕಾವ್ಯರಚನೆಗೆ ತೊಡಗಿದ ಕವಿಗಳು ವಸ್ತು, ತಂತ್ರ ಹಾಗೂ ಅಭಿವ್ಯಕ್ತಿಗಳಲ್ಲಿ ಕನ್ನಡತನವನ್ನು ಉಳಿಸಿಕೊಂಡು ಸ್ವಂತಿಕೆಯನ್ನು ಸಾಧಿಸುವದು ಬಹುಮುಖ್ಯವಾಗಿತ್ತು. ಇಲ್ಲವಾದರೆ ಕನ್ನಡ ಕಾವ್ಯಗಳು ಕೇವಲ ಸಂಸ್ಕೃತದ ಅನುವಾದಗಳೋ ಅಥವಾ ಅನುಕರಣೆಗಳೋ ಆಗಬಹುದಿತ್ತು. ಕನ್ನಡ ಕವಿಗಳ ಕಾವ್ಯಪ್ರಜ್ಞೆ ಮತ್ತು ಭಾಷಾಪ್ರಜ್ಞೆಗಳು ಈ ಅಪಾಯಗಳಿಂದ ಪಾರುಮಾಡುವಲ್ಲಿ ಯಶಸ್ವಿಯಾದವು. ಮಾರ್ಗ ಮತ್ತು ದೇಶಿಗಳ ಸಮನ್ವಯತೆ ಕನ್ನಡ ಕಾವ್ಯಗಳನ್ನು ವಿಶಿಷ್ಟ ಮತ್ತು ವಿಭಿನ್ನಗೊಳಿಸಿದವು. ಇದರೊಂದಿಗೆ ಸಂಸ್ಕೃತದಲ್ಲಿದ್ದ ತತ್ವಚಿಂತನೆಯನ್ನು ಕನ್ನಡದಲ್ಲಿ ಕಾವ್ಯರೂಪದಲ್ಲಿ ತರಲು ಇದ್ದ ಆತಂಕ ಮತ್ತು ಸವಾಲು ಮತ್ತೊಂದು ಬಗೆಯದು. ವೇದಾಂತ ವಿಚಾರಗಳನ್ನು ದೇವವಾಣಿಯಾದ ಸಂಸ್ಕೃತದಲ್ಲಿ ಮಾತ್ರ ಸಮರ್ಥವಾಗಿ ಸಶಕ್ತವಾಗಿ ಹೇಳಲು ಸಾಧ್ಯ. ಪ್ರಾದೇಶಿಕ ಭಾಷೆಗಳು ಇದಕ್ಕೆ ಅಸಮರ್ಥವಾದವು ಎನ್ನುವ ವಾದವನ್ನು ಅಲ್ಲಗಳೆದು ಕಾವ್ಯ ರಚಿಸಿ ಸೈ ಎನಿಸಿಕೊಳ್ಳುವುದು. ಈ ದಿಸೆಯಲ್ಲಿ ಕನ್ನಡ ಕವಿ ಮಹಲಿಂಗರಂಗನ ಸಾಧನೆ ಮಹತ್ವದ್ದಾಗಿದೆ.

ಕನ್ನಡ ಕವಿಗಳ ಕಾವ್ಯಭಾಷೆಯ ಬಗೆಗಿನ ದೃಷ್ಟಿ-ಧೋರಣೆಗಳೂ ಗಮನಾರ್ಹವಾಗಿವೆ. 'ಅವರುತಮ್ಮ ಮಾತೃಭಾಷೆಯಾದ ಕನ್ನಡದಲ್ಲಿ ಕಾವ್ಯರಚನೆಗೆ ತೊಡಗಲು ಇದ್ದ ಆತಂಕ ಸಂಸ್ಕೃತ ಭಾಷೆಯದು. ಇದು ಬರಿಯಆತಂಕವಲ್ಲ, ಒಂದು ಸವಾಲೂ ಕೂಡ. ಇದನ್ನು ಎದುರಿಸುವಲ್ಲಿ ಅವರು ತಾಳಿದ ನಿಲುವುಗಳು, ತೋರಿದ ಪ್ರತಿಕ್ರಿಯೆಗಳು, ಕನ್ನಡ ಸಾಹಿತ್ಯದ ವಿವಿಧ ರೂಪಗಳ ಆವಿಷ್ಕಾರಕ್ಕೆ ಕಾರಣವಾದವು.' 'ಜೈನರಿಗೆ ಕನ್ನಡ ಕೇವಲ ಸಂಪರ್ಕ ಭಾಷೆಯಾಗದೆ ಮಾತೃ ಭಾಷೆಯಾಗಿತ್ತು. ಧಾರ್ಮಿಕ ವಿಚಾರಗಳ ಅಭಿವ್ಯಕ್ತಿಗಾಗಿ ಪ್ರಾಕೃತದಂತೆ ಕನ್ನಡವನ್ನೂ ಬಳಸುವ ಮೂಲಕ, ತತ್ವಚಿಂತನೆಗೆ ಭಾಷಾ ಮಾಧ್ಯಮ ಅಡ್ಡಿಯಾಗದೆಂಬುದನ್ನು ತೋರಿಸಿಕೊಟ್ಟರು.' ಜೈನರಂತೆ ವೀರಶೈವ ಕವಿಗಳಿಗೂ ಕನ್ನಡದಲ್ಲಿ ಕಾವ್ಯರಚಿಸಲು

ಯಾವ ಆತಂಕವಿರಲಿಲ್ಲ. ಅವರಿಗೆ 'ಕನ್ನಡ ಮಾತೃಭಾಷೆ ಹಾಗೂ ಧಾರ್ಮಿಕ ಭಾಷೆ ಎರಡೂ ಹೌದು. ಜೈನ ಕವಿಗಳು ಮಾರ್ಗ–ದೇಸಿಗಳ ಸಮನ್ವಯದ ಕಾವ್ಯಭಾಷೆಯನ್ನು ರೂಪಿಸಿಕೊಂಡರು. ಶಾಸ್ತ್ರಭಾಷೆಯಾಗಿ ಕನ್ನಡವನ್ನು ಬಳಸಿ ಬೆಳಸಿದರು. ವಚನಕಾರರು ಕನ್ನಡವನ್ನು ತತ್ತ್ವಚಿಂತನಕ್ಕೆ ಹದಗೊಳಿಸಿದರು. ವೀರಶೈವ ಕವಿಗಳು ದೇಸಿ ಭಾಷೆಯನ್ನು ಹೆಚ್ಚಾಗಿ ಬಳಸಿದರು. ಆದರೆ ವೈದಿಕರಿಗೆ ಸಂಸ್ಕೃತ ದೇವಭಾಷೆ, ಧಾರ್ಮಿಕ ಭಾಷೆ. ಕನ್ನಡ ಕೇವಲ ಆಡುಭಾಷೆ. ಬ್ರಾಹ್ಮಣ ಸಮಾಜದಲ್ಲಿ ಬಹುಕಾಲ ಸಂಸ್ಕೃತಕ್ಕಿದ್ದ ಮನ್ನಣೆ, ಗೌರವಗಳು ಕನ್ನಡಕ್ಕಿರಲಿಲ್ಲ. ಹೀಗಾಗಿ ವೈದಿಕ ಕವಿಗಳು ಕನ್ನಡದಲ್ಲಿ ಬರೆಯುವುದು ಮೊದಮೊದಲಿಗೆ ಬಹುದೊಡ್ಡ ಸವಾಲಾಗಿತ್ತು. ಬ್ರಾಹ್ಮಣ ಧಾರ್ಮಿಕ ಸಾಹಿತ್ಯ ಕನ್ನಡದಲ್ಲಿ ತಡವಾಗಿ ಬರಲು ಮಡಿವಂತಿಕೆಯೂ ಒಂದು ಮುಖ್ಯಕಾರಣ. ಹದಿನೈದನೆಯ ಶತಮಾನದ ಹೊತ್ತಿಗೆ ಈ ನಿಲುವು ಬದಲಾಯಿತು.

ತಮ್ಮ ಕನ್ನಡದ ಅಭಿಮಾನವನ್ನೂ ಪ್ರೀತಿಯನ್ನೂ ಕಂಠೋಕ್ತವಾಗಿ ಹೇಳಿಕೊಂಡವರಲ್ಲಿ ವಚನಕಾರರೇ ಮೊದಲಿಗರೆನ್ನಬಹುದು.

> ನೋಡಿರೆ ಕನ್ನಡವ, ನುಡಿಸಿರೆ ಕನ್ನಡವ ।
> ತಲೆಯೊಲೆವುತ ಬಂದು ಕುಣಿವ ಕನ್ನಡವ ।

ಎಂದುತನ್ನ ಸ್ವರವಚನದಲ್ಲಿ ಶರಣ ನಿಜಗುಣಯೋಗಿ ಕನ್ನಡದ ಬಗ್ಗೆ ತೋರಿದ ಪ್ರೀತಿ ೧೨ನೆಯ ಶತಮಾನದ ಎಲ್ಲ ಶರಣರ ಪ್ರಾತಿನಿಧಿಕ ಧ್ವನಿಯಾಗಿದೆ. ವಚನಕಾರರು ಕನ್ನಡ ಭಾಷೆಯ ಸಾಧ್ಯತೆಗಳನ್ನು ಸೂರೆಗೊಂಡು, ಆಧ್ಯಾತ್ಮಿಕ ಸೂಕ್ಷ್ಮಾನುಭವಗಳಿಗೆ ತೆರೆದಿಟ್ಟರು; ತಮ್ಮ ಅಚ್ಚಗನ್ನಡದ ಒಲವನ್ನು ಸಾರಿ ಹೇಳಿದರು. ತತ್ವಜ್ಞಾನವನ್ನು ಸಂಸ್ಕೃತ ಭಾಷಾ ಮಾಧ್ಯಮದ ಮೂಲಕವೇ ಅಭಿವ್ಯಕ್ತಗೊಳಿಸುವುದು ಸಾಧ್ಯವೆಂಬ ಪರಂಪರಾಗತ ನಂಬಿಕೆಯನ್ನುಅವರು ಹುಸಿಗೊಳಿಸಿದರು. ಭೀಮಕವಿ "ಬರಿಯ ಕನ್ನಡ ಭಾಷೆಯೆಂದೆನಲಾಗದಿಳೆಗಿದು ಲೇಸೆನಿಪ ವೇದ ಪ್ರಮಾಣವೆನಿಪ್ಪುದು" ಎಂದಿರುವುದು ಆತನ ಉತ್ಕಟ ಭಾಷಾಭಿಮಾನಕ್ಕೆ ಸಾಕ್ಷಿ. ಮಹಲಿಂಗರಂಗನ ಕನ್ನಡದ ಅಭಿಮಾನವೂ ಈ ನಿಟ್ಟಿನಲ್ಲಿ ವಿಶೇಷವಾದುದು. 'ಅಖಿಲ ವೇದಾಂತಾರ್ಥವನು ಸಂಗ್ರಹಿಸಿ ಸಕಲರಿಗೆ ತಿಳಿವಂತೆ', 'ಯೋಗಿಜನರಹುದೆನುವಂತೆ', 'ಸುಲಭೋಪಾಯದಿಂದೊಲಿದು' ಕನ್ನಡದಲ್ಲಿ ಹೇಳಬೇಕೆಂದು ಹೊರಟವನಾತ. ಇದುವರೆಗೆ ಸಂಸ್ಕೃತದಲ್ಲಿಯೆ ಉಳಿದ, ಕನ್ನಡಿಗರಿಗೆ ಅಲಭ್ಯವಾದ ಅದ್ವೈತ ವೇದಾಂತವನ್ನು 'ಲಲಿತವಹ ಕನ್ನಡ'ದಲ್ಲಿ ಜನಸಾಮಾನ್ಯರಿಗೂ ಮುಟ್ಟಿಸಬೇಕೆಂಬ

ಜನಪರ ಕಾಳಜಿ ಅವನದು. ಜೊತೆಗೆ ಕನ್ನಡದ ಸೊಗಸು, ಸೌಂದರ್ಯ, ಸವಿಗಳನ್ನು ಬಲ್ಲವ; ಮನಸಾರೆ ಮೆಚ್ಚಿಕೊಂಡವ. ಕನ್ನಡದ ಪ್ರೇಮವನ್ನು ಸಾರಿ ಹೇಳಿದ ಆತನ ಪದ್ಯ ಅತ್ಯಂತ ಜನಪ್ರಿಯವಾದದ್ದು:

ಸುಲಿದಬಾಳೆಯ ಹಣ್ಣಿನಂದದಿ
ಕಳೆದ ಸಿಗುರಿನ ಕಬ್ಬಿನಂದದಿ
ಲಳಿಸಿದುಷ್ಣದ ಹಾಲಿನಂದದಿ ಸುಲಭವಾಗಿರ್ಪ ।
ಲಲಿತವಹ ಕನ್ನಡದ ನುಡಿಯಲಿ
ತಿಳಿದು ತನ್ನೊಳು ತನ್ನ ಮೋಕ್ಷವ
ಗಳಿಸಿಕೊಂಡರೆ ಸಾಲದೆ? ಸಂಸ್ಕೃತದಲಿನ್ನೇನು? । [೧-೫]

ಸುಲಿದ ಬಾಳೆಹಣ್ಣಿನಂತೆ, ಸಿಗುರು ಕಳೆದ ಕಬ್ಬಿನಂತೆ, ಸುಖೋಷ್ಣವಾದ ಹಾಲಿನಂತೆ ಸರಳ ಹಾಗೂ ಸುಂದರವಾದ ಕನ್ನಡ ಭಾಷೆಯಲ್ಲಿ ತತ್ತ್ವ ವಿಚಾರಗಳನ್ನು ಅರಿತುಕೊಳ್ಳುವುದು ಇಷ್ಟು ಸುಲಭವಾಗಿರುವಾಗ ಸಂಸ್ಕೃತಕ್ಕೆ ಏಕೆ ಜೋತು ಬೀಳಬೇಕು ಎನ್ನುವುದು ಆತನ ಪ್ರಶ್ನೆ. ಸಂಸ್ಕೃತದಲಿನ್ನೇನು ಎನ್ನುವ ಮಾತು ಅತ್ಯಂತ ದಿಟ್ಟತನದ್ದು.

ಸಂಸ್ಕೃತ ಭಾರತದ ಅತ್ಯಂತ ಪ್ರಾಚೀನ ಭಾಷೆ. ಜ್ಞಾನ ಭಂಢಾರವೆಲ್ಲ ಸಂಸ್ಕೃತದಲ್ಲಿಯೇ ಇತ್ತು. ಈ ಜ್ಞಾನವು ವೇದಗಳ ಕಾಲದಿಂದ ಗುರು-ಶಿಷ್ಯ ಪರಂಪರೆಯಲ್ಲಿ ಮೌಖಿಕವಾಗಿ ಸಾಗಿ ಬಂದದ್ದು. ವೇದ-ಮಂತ್ರಗಳು, ದೇವತಾ ಸ್ತೋತ್ರಗಳು ಸಂಸ್ಕೃತದಲ್ಲಿವೆ. ದೇವವಾಣಿಯಾಗಿ ಪಂಡಿತರ ಭಾಷೆಯಾಗಿ ಪರಿಗಣಿತವಾದ ಸಂಸ್ಕೃತಕ್ಕೆ ರಾಷ್ಟ್ರೀಯ ಮಹತ್ವವಿತ್ತು. ಸನಾತನ ವೈದಿಕ ಧರ್ಮ-ತತ್ತ್ವ ಗ್ರಂಥಗಳೆಲ್ಲ ಸಂಸ್ಕೃತದಲ್ಲಿ ರಚನೆಯಾದವು. ವಾಲ್ಮೀಕಿ, ವ್ಯಾಸ, ಕಾಳಿದಾಸಾದಿಗಳ ಮಹಾಕಾವ್ಯಗಳು, ಅಲಂಕಾರ, ಛಂದಸ್ಸು, ವ್ಯಾಕರಣ ಮೊದಲಾದ ಶಾಸ್ತ್ರಗ್ರಂಥಗಳು ಈ ಭಾಷೆಯಲ್ಲಿ ಸಮೃದ್ಧವಾಗಿ ಬೆಳೆದು ಬಂದವು. ಭಾರತೀಯ ಪ್ರಾದೇಶಿಕ ಭಾಷಾ ಸಾಹಿತ್ಯಗಳು ಮೊದಮೊದಲಿಗೆ ಸಂಸ್ಕೃತದ ಮೇಲ್ಪಂಕ್ತಿಯನ್ನು ಅನುಸರಿಸಿ ರಚಿತವಾಗಿವೆ. ಕನ್ನಡ ಭಾಷೆ, ಸಾಹಿತ್ಯಗಳ ಮೇಲೆ ಸಂಸ್ಕೃತದ ಪ್ರಭಾವ ಹಳೆಗನ್ನಡ ಕಾಲದಿಂದಲೂ ದಟ್ಟವಾಗಿದೆ. ವೈದಿಕ ಮನೆತನಗಳಲ್ಲಿ ಏನನ್ನು ಹೇಳಿದರೂ ಸಂಸ್ಕೃತದಲ್ಲಿಯೆ ಹೇಳಬೇಕು ಕೇಳಬೇಕೆಂಬ ಸಾಂಪ್ರದಾಯಿಕ ಮಡಿವಂತಿಕೆಯ ಧೋರಣೆಯನ್ನು ಬೆಳೆಸಿಕೊಂಡು ಬರಲಾಗಿತ್ತು. ಅಧಿಕಾರಿಗಳಲ್ಲದವರ ಕೈಯಲ್ಲಿ ಈ ಜ್ಞಾನವು ಸಿಕ್ಕಬಾರದೆಂಬುದೂ ಒಂದು ಕಾರಣವಿರಬೇಕು. 'ಮೂಲಕೃತಿಯ ಭಿನ್ನ ಪಾಠಗಳು ಬೆಳೆಯುತ್ತ ಹೋಗುವ ಅಪಾಯಗಳಿಂದ ತಾತ್ವಿಕ ಕೃತಿಗಳನ್ನು ರಕ್ಷಿಸುವ ಸಲುವಾಗಿ ಒಂದು ಮೀಸಲು ಭಾಷೆಯನ್ನು [ಸಂಸ್ಕೃತ] ಬಳಸಿದರೆಂದು

ತೋರುತ್ತದೆ' ಎನ್ನಲಾಗಿದೆ. ಹೀಗಾಗಿ ಕೆಲ ವಿಶಿಷ್ಟ ಮತದ ಜನರ ಕೈಯಲ್ಲಿ ತತ್ತ್ವಜ್ಞಾನ ಉಳಿಯುವಂತಾಯಿತು, ಸಂಸ್ಕೃತ ದೇವವಾಣಿಯಾಗಿ ಪೂಜ್ಯವಾಯಿತು. ಹಳಗನ್ನಡ ಕವಿಗಳು ಸಂಸ್ಕೃತ ಮತ್ತು ಕನ್ನಡ ಉಭಯ ಭಾಷಾ ವಿಶಾರದರಾಗಿರುತ್ತಿದ್ದರು. ಸಂಸ್ಕೃತದ ಅತಿಯಾದ ಪ್ರಭಾವದಿಂದ ಕನ್ನಡವನ್ನು ಬಿಡಿಸಿಕೊಳ್ಳಲು ನಯಸೇನ, ಆಂಡಯ್ಯನಂಥವರು ಪ್ರಯತ್ನಿಸಿದುದು, ಅಚ್ಚಗನ್ನಡದ ಒಲವನ್ನು ತೋರಿದುದು ಸಾಹಿತ್ಯಚರಿತ್ರೆಯಲ್ಲಿ ಈಗಾಗಲೇ ದಾಖಲಾಗಿವೆ. ವೈದಿಕರ ಭಾಷೆಯ ಕುರಿತಾದ ಮಡಿವಂತಿಕೆಯ ಧೋರಣೆಯನ್ನು ರಂಗನಾಥನೂ ತಿರಸ್ಕರಿಸಿದ್ದಾನೆ. ಈ ಭಾಷಾ-ರಾಜಕಾರಣದ ವಿರುದ್ಧ ಬಂಡಾಯದ ಬಾವುಟವನ್ನು ಆತ ಹಾರಿಸಿದ್ದಾನೆ. ಇದುವರೆಗೆ ವೇದಾಂತ ವಿಷಯವನ್ನು ಸಂಸ್ಕೃತನಿಷ್ಠಗೊಳಿಸಿ ಜನಸಾಮಾನ್ಯರ ಬಳಿ ಅದು ಸುಳಿಯದಂತಾದುದಕ್ಕೆ ಆತನಿಗೆ ತೀವ್ರ ಬೇಸರವಿದೆ. ಟೀಕೆ-ಟಿಪ್ಪಣಿ, ವ್ಯಾಖ್ಯಾನಗಳನ್ನೂ ಸಂಸ್ಕೃತದಲ್ಲಿಯೆ ಬರೆಯುತ್ತ ವಿದ್ವತ್ತಿನ ಠೇಂಕಾರವನ್ನು ಮಾಡುತ್ತ ಕುಳಿತ ಪಂಡಿತ ಮಂಡಳಿಯನ್ನು ಕವಿಯು ಸೂಕ್ಷ್ಮವಾಗಿ ತರಾಟೆಗೆ ತೆಗೆದುಕೊಂಡಿದ್ದಾನೆ. ತನ್ನ ಕೃತಿ ಕನ್ನಡದಲ್ಲಿದೆ ಎಂಬ ಕಾರಣಕ್ಕೆ ಹಿರಿಯರಿಂದ ಉಪೇಕ್ಷಿತವಾಗಬಾರದೆಂಬ ಕಾಳಜಿಯೂ ವ್ಯಕ್ತವಾಗಿದೆ:

ಕನ್ನಡದ ನುಡಿಯೆಂದುಪೇಕ್ಷಿಸ
ಲಿನ್ನು ಹಿರಿಯರಿಗಂಜಿ ನುಡಿವೆನು
ಕನ್ನಡಿಯೆ ದರ್ಪಣವಲ್ಲದೆ ಭೇದವೇನಿದಕೆ।
ಮುನ್ನಲುಪನಿಷದರ್ಥವನು ಸಂ
ಪನ್ನ ಮತಿಗಳು ಪೇಳ್ದುದನೆ ನಾ
ಕನ್ನಡಿಸಿದೆನು ಕೊರತೆಯಿರ್ದೊಡೆ ಮನ್ನಿಸುವದೊಲಿದು। [೧-೪]

'ತಾನು ಪೂರ್ವಾಚಾರ್ಯರು ಹೇಳಿದ ಉಪನಿಷತ್ತಿನ ವಿಚಾರಗಳನ್ನೆ ಕನ್ನಡಿಸಿರುವುದು, ದರ್ಪಣವೆಂದು ಸಂಸ್ಕೃತದಲ್ಲಿ, ಕನ್ನಡಿಯೆಂದು ಕನ್ನಡದಲ್ಲಿ ಹೇಳಿದ ವಸ್ತು ಒಂದೇ. ಸಂಸ್ಕೃತಪ್ರಿಯ ಹಿರಿಯರು ತನ್ನ ಕೃತಿಯನ್ನು ಪ್ರೀತಿಯಿಂದ ಸ್ವೀಕರಿಸಬೇಕು, ಕೊರತೆಗಳಿದ್ದರೆ ಮನ್ನಿಸಬೇಕು' ಎಂಬ ಕವಿಯ ಪ್ರಾಂಜಲ ಮನಸ್ಸಿನ ಬಿನ್ನಹ, ಸೌಜನ್ಯಗಳು ಅರ್ಥವಾಗುವಂಥವು. ಸಂಸ್ಕೃತಪ್ರಿಯ ವಿದ್ವಾಂಸರು ತನ್ನ ಕೃತಿಯನ್ನು ಸ್ವೀಕರಿಸುವರೋ ಇಲ್ಲವೋ ಎಂಬ ಆತಂಕ, ಕೃತಿ ಉಪೇಕ್ಷೆಗೆ ಎಲ್ಲಿ ಗುರಿಯಾದೀತೋ ಎಂಬ ಅಳುಕು ಅವನಲ್ಲಿ ಇರುವಂತಿದೆ. 'ಕನ್ನಡದ ನುಡಿಯೆಂದುಪೇಕ್ಷಿಸಲಿನ್ನು ಹಿರಿಯರಿಗಂಜಿ ನುಡಿವೆನು' ಎಂದು ಹೇಳಲು ಇದೇ ಕಾರಣ. ಇದರಿಂದ ಸಾಂಪ್ರದಾಯಿಕ ಶಕ್ತಿಗಳ ಕಪಿಮುಷ್ಟಿ ಎಷ್ಟು ಬಲವತ್ತರವಾದುದು

ಎನ್ನುವುದು ತಿಳಿಯುತ್ತದೆ. ಕನ್ನಡದಲ್ಲಿ ವೇದಾಂತ ಸಾಹಿತ್ಯ ತಡವಾಗಿ ಬರಲು ಇದೂ ಒಂದು ಮುಖ್ಯಕಾರಣ. ಚಿದಾನಂದಾವಧೂತರೂ ಈ ಕುರಿತಾಗಿ ಹೇಳಿದ ಮಾತುಗಳನ್ನು ಇಲ್ಲಿ ಗಮನಿಸಬಹುದು:

ಮಾತು ಕನ್ನಡವೆಂದು ಸಂಸ್ಕೃತ
ಮಾತನರಿವವರಿದನು ಹಳಿವುದು
ನೀತಿಯಲ್ಲವು ಮಾತುಗಳೆ ಮಾಣಿಕಗಳಿಟ್ಟಂತೆ ।
ಮಾತು ಬಹುಪರಿಯಾಗಿ ಕರೆವರು
ಪ್ರೀತಿಯಲಿ ಒಂದಾದ ವಸ್ತುವ
ಮಾತು ಭಿನ್ನಿಸಲೇನು ವಸ್ತುವಿನನುಭವೆ ಮುಖ್ಯೆಂದ ।

ಮಹಲಿಂಗರಂಗ ತತ್ತ್ವಜ್ಞಾನದ ನಿರೂಪಣೆಗೆ ಸಂಸ್ಕೃತಕ್ಕಿಂತ ಸರಳವಾದ ಕನ್ನಡವೇ ಮೇಲೆಂದು ಹೇಳಿರುವುದು ಬರಿ ಅಭಿಮಾನದ ಮಾತಷ್ಟೇ ಅಲ್ಲ. ಮನುಷ್ಯ 'ಸ್ವರೂಪಜ್ಞಾನ' ಮಾಡಿಕೊಂಡು ಮೋಕ್ಷವನ್ನು ಪಡೆಯಲು ಸರಳವಾದ ಕನ್ನಡವಿರುವಾಗ, ಕ್ಲಿಷ್ಟವಾದ ಸಂಸ್ಕೃತಕ್ಕೆ ಮೊರೆಹೋಗಬೇಕಾದ ಅಗತ್ಯವೆಲ್ಲಿದೆ? 'ಕನ್ನಡ ಭಾಷೆ ಮತ್ತು ಸಾಹಿತ್ಯ ಬೆಳೆಯಬೇಕಾದದ್ದು ಹಾಗೂ ಉಳಿಯ ಬೇಕಾದದ್ದು ಈ ಬಗೆಯ ಸವಾಲುಗಳನ್ನು ಎದುರಿಸುವುದರಿಂದ ಹಾಗೂ ಆಂತರಿಕ ಸತ್ವಗಳಿಂದ ಎಂಬುದನ್ನು 'ಅನುಭವಾಮೃತ' ಕಾವ್ಯನಿರ್ಮಿತಿಯ ಮೂಲಕ ತೋರಿಸಿಕೊಟ್ಟವ ರಂಗನಾಥ.' . "ಮೋಕ್ಷದಂತಹ ಆತ್ಯಂತಿಕವಾದ ಗಹನವಾದ ಪುರುಷಾರ್ಥವನ್ನು ಸಾಧಿಸಲು, ಜನಸಾಮಾನ್ಯರಿಗೆ ಪರಕೀಯವೆನ್ನಿಸುವ ಸಂಸ್ಕೃತಕ್ಕಿಂತ, ತಾಯಿಯ ಹಾಲಿನಂತೆ ಸಹಜವಾಗಿ ಒಲಿದಿರುವ ತಾಯ್ನುಡಿಯಾದ ಕನ್ನಡ ಮಾಧ್ಯಮದಿಂದ ಮಾತ್ರ ಸಾಧ್ಯ ಎಂಬ ಸೂಚನೆ ಅದು. ಕನ್ನಡಿಗರು ಕನ್ನಡದ ಮೂಲಕವೆ ಮೋಕ್ಷವನ್ನು ಗಳಿಸಬಲ್ಲರೆಂಬ ನಂಬಿಕೆ ಅಪ್ರತಿಮವಾದದ್ದು; ಅದು ಆತ್ಮವಿಶ್ವಾಸವನ್ನೂ ಮಾತೃಭಾಷಾ ವಿಶ್ವಾಸವನ್ನೂ ಅವಿನಾಭಾವದಿಂದ ಬೆಸೆಯುತ್ತದೆ." ಭಾಷೆಯು ಸಂವಹನ ಮಾಧ್ಯಮ. ಹಾಗೆ ನೋಡಿದರೆ ಯಾವ ಭಾಷೆಯೂ ಅಶಕ್ತವಲ್ಲ; ಅದು ಬಳಸಿದಷ್ಟೂ ಬೆಳೆಯುತ್ತದೆ; ಶಕ್ತಿ ಸಂಪನ್ನವಾಗುತ್ತದೆ. ಭಾಷೆಯ ಸಾಮರ್ಥ್ಯ ಬಳಸುವವರ ಶಕ್ತಿಯನ್ನು ಅವಲಂಬಿಸಿದೆ. ಕನ್ನಡದ ಪ್ರೀತಿ ಹಾಗೂ ತತ್ವಾನುರಕ್ತಿಗಳು ಕಾವ್ಯರಚನೆಗೆ ಮಹಲಿಂಗರಂಗನನ್ನು ಪ್ರೇರೇಪಿಸಿವೆ. ಗಹನವಾದ ತತ್ತ್ವಶಾಸ್ತ್ರದ ನಿರೂಪಣೆಗೆ ಕನ್ನಡವನ್ನು ಹದಗೊಳಿಸಿ ಆ ಮೂಲಕ ಆತ ಕನ್ನಡದ ಘನತೆ ಗೌರವಗಳನ್ನು ಎತ್ತಿ ಹಿಡಿದಿದ್ದಾನೆ. 'ಅನುಭವಾಮೃತ' ಸಂಸ್ಕೃತಕ್ಕೆ, ತೆಲುಗಿಗೆ ಭಾಷಾಂತರಗೊಂಡಿರುವದು ಇದರ ಜನಪ್ರಿಯತೆಯ ಹಾಗೂ ಮೌಲಿಕತೆಯ ದ್ಯೋತಕವಾಗಿದೆ. ತತ್ವವಿಚಾರಗಳನ್ನು

ಕನ್ನಡದಲ್ಲೂ ಖಚಿತ, ಸ್ಪಷ್ಟ ಮತ್ತು ಆಕರ್ಷಕವಾಗಿ ನಿರೂಪಿಸಲು ಸಾಧ್ಯವೆಂಬುದನ್ನು ಅವನು ತೋರಿಸಿಕೊಟ್ಟಿದ್ದಾನೆ. ಇಂದಿನ ಜಾಗತೀಕರಣದ ಕಾಲದಲ್ಲಿ ಇಂಗ್ಲಿಷ್ ಭಾಷೆಗೆ ಸಿಗುತ್ತಿರುವ ಅವಾಸ್ತವಿಕ ಪ್ರಾಶಸ್ತ್ಯ ಮತ್ತು ಮಹತ್ವಗಳ ನಡುವೆ ಕನ್ನಡದಂತಹ ಪ್ರಾದೇಶಿಕ ಭಾಷೆಯ ಬೆಳವಣಿಗೆಗೆ ಒದಗುವ ಆತಂಕಗಳನ್ನು ನಿವಾರಿಸಿಕೊಳ್ಳುವ ಮಾರ್ಗ ಇಲ್ಲಿದೆ. ಮಹಲಿಂಗರಂಗನ ದೃಷ್ಟಿ-ಧೋರಣೆಗಳು ಅತ್ಯಂತ ಪ್ರಸ್ತುತ, ಸ್ವಾಗತಾರ್ಹ, ಅಷ್ಟೇ ಶ್ಲಾಘನೀಯವಾಗಿವೆ. ತಮ್ಮೆಲ್ಲ ಅಗತ್ಯಗಳಿಗಾಗಿ ಕನ್ನಡಿಗರು ಕನ್ನಡವನ್ನೇ ಬಳಸುವ, ಬೆಳಸುವ ಸಂಕಲ್ಪಮಾಡಿದರಷ್ಟೇ ಸಾಲದು, ಆ ದಿಶೆಯಲ್ಲಿ ಪ್ರಯತ್ನಶೀಲರಾಗುವದೂ ಮುಖ್ಯವಾಗಿದೆ. ನಾವು ಮನದೆರೆದು ಮಾತನಾಡುವುದು ನಮ್ಮ ಭಾಷೆಯಲ್ಲಿ ಮಾತ್ರ ಸಾಧ್ಯ. "ಒಂದು ಭಾಷೆ ಉಳಿಯುವುದೂ ಬೆಳೆಯುವುದೂ ಆಯಾ ಭಾಷೆಯನ್ನಾಡುವ ಜನರಿಂದ; ಆಯಾ ಭಾಷೆಯಲ್ಲಿ ವಿಚಾರ ಮಾಡುವುದರಿಂದ; ಆಯಾ ಭಾಷೆಯ ಅರ್ಥವಂತಿಕೆಯ ಸಾಧ್ಯತೆಗಳನ್ನು ಅನ್ವೇಷಿಸುವವರಿಂದ, ಅದರ ಆಯಾಮಗಳನ್ನು ವಿಸ್ತರಿಸುವ ಪ್ರಯೋಗ ಪರಿಣತಮತಿಗಳಿಂದ." ಈ ಹಿನ್ನೆಲೆಯಲ್ಲಿ ಕನ್ನಡ ನುಡಿಯ ಬಗೆಗಿನ ಮಹಲಿಂಗರಂಗನ ಧೋರಣೆ ಹೆಚ್ಚು ವೈಜ್ಞಾನಿಕ ಮತ್ತು ವೈಚಾರಿಕವಾಗಿದೆ. ಭಾಷೆ ನಮ್ಮ ಉಸಿರಾಟದಷ್ಟೇ ಸಹಜವಾದದ್ದು. ಬದುಕಿನುದ್ದಕ್ಕೂ ಕೊನೆಯ ಉಸಿರೆಳೆವ ತನಕ ನಮ್ಮ ಸಂಗಾತಿಯಾಗಿ ಇರುವಂಥದು. ಅದು ನಾಡಿನ ಸಂಸ್ಕೃತಿಯ ಜೀವನಾಡಿ. ಒಂದು ಜನಾಂಗದ ಸೃಜನಶೀಲತೆಯ ಪ್ರತೀಕ; ನಾವು ಕಂಡ ಸತ್ಯ ಮೂರ್ತಗೊಳ್ಳುವ ಅಭಿವ್ಯಕ್ತಿಯ ಮಾಧ್ಯಮ. ಹೀಗಾಗಿ ತಾಯ್ನುಡಿಯ ಸ್ಥಾನ ಎಲ್ಲಕ್ಕಿಂತ ಮಹತ್ವದ್ದು. ಒಟ್ಟಿನಲ್ಲಿ ಕೆಚ್ಚೆದೆಯಿಂದ ಕನ್ನಡದ ಅಭಿಮಾನವನ್ನು ಸಾರಿ ಹೇಳಿದ ಕವಿಗಳ ಸಾಲಿನಲ್ಲಿ ರಂಗನಾಥನಿಗೆ ಒಂದು ಗಣ್ಯವಾದ ಸ್ಥಾನ ಮೀಸಲಾಗಿದೆ.

ಟಾಲ್‌ಸ್ಟಾಯ್ ಮತ್ತು ಕುವೆಂಪು: ಒಂದು ನೋಟ

ಪ್ರದೀಪ ಆರ್.ಎನ್

ಜಗತ್ತಿನ ಶ್ರೇಷ್ಠ ದಾರ್ಶನಿಕರಲ್ಲಿ ಒಬ್ಬರಾದ ಮಹರ್ಷಿ ಕೌಂಟ್ ಲಿಯೋ ಟಾಲ್‌ಸ್ಟಾಯ್(೧೮೨೮-೧೯೧೦) ರಷ್ಯನ್ ಸಾಹಿತ್ಯದ ಪ್ರಮುಖ ಬರಹಗಾರ. ಇವರ ಬರಹಗಳು ರಷ್ಯನ್‌ನಲ್ಲಿ ಮಾತ್ರವಲ್ಲದೆ ಕಾಲ-ದೇಶ-ಭಾಷೆಗಳನ್ನು ಮೀರಿ ಇಂದಿಗೂ ಅನುವಾದಗಳ ಮೂಲಕ ಅಪಾರ ಓದುಗರನ್ನು ಸೆಳೆಯುತ್ತಲೇ ಬಂದಿವೆ. ಹುಟ್ಟಿನಿಂದಲೇ ಶ್ರೀಮಂತ ಜಮೀನ್ದಾರಿ ಮನೆತನದಲ್ಲಿ ಜನಸಿದ್ದ ಇವರು ಮುಂದೆ ಸಾಮಾನ್ಯರಲ್ಲಿ ಸಾಮಾನ್ಯನಾಗಿ ಬದುಕಿದರು. ಯೌವನದಲ್ಲಿ ಭೋಗಿಯಾಗಿದ್ದ ಇವರು ಮುಂದೆ ರೈತರೊಡನೆ, ಎಸ್ಟೇಟನ ಕಾರ್ಮಿಕರೊಡನೆ ತಾನು ಜಮೀನ್ದಾರನೆಂಬ ದರ್ಪವನ್ನು ಮರೆತು ಅವರೊಡನೆ ಅವರಂತೆಯೇ ಸಾಮಾನ್ಯನಾಗಿ ಯೋಗಿಯಂತೆ ಬದುಕಿದ ಸಂತ. ರೈತರ ಮಕ್ಕಳಿಗಾಗಿ ತನ್ನ ಮನೆಯನ್ನೇ ಶಾಲೆಯಾಗಿಸಿ ಉಚಿತವಾಗಿ ಅಕ್ಷರಾಭ್ಯಾಸ ನೀಡಿದ ಮಹಾನ್ ಗುರು. ತಂಗುದಾಣಗಳನ್ನು, ದಾಸೋಹಗಳನ್ನು ನಿರ್ಮಿಸಿ ಬಡವರಿಗೆ, ಹಸಿದವರಿಗೆ ಆಹಾರ ನೀಡಿದ ಮಾನವತವಾದಿ. ಇವರ ಬಹಳಷ್ಟು ಬರಹಗಳು ರಷ್ಯಾದಲ್ಲಿ ವಿವಾದಗಳಿಗೆ ಒಳಗಾಗಿದ್ದವು. ಚರ್ಚಿನ ಹಾಗೂ ಪುರೋಹಿತಶಾಹಿ(ಪಾದ್ರಿ)ಯ ವಿರುದ್ಧ ಇವರು ಬರೆದ ವೈಚಾರಿಕ ಬರಹಗಳು ಸೋವಿಯತ್ ದೇಶದಲ್ಲಿ ನಿಷೇಧಕ್ಕೊಳಗಾಗಿದ್ದವು. ಆದರೂ ಅವರನ್ನು ಓದುವ ಮನಸ್ಸುಗಳು ಮಾತ್ರ ಕಡಿಮೆಯಾಗಲಿಲ್ಲ. ತನ್ನ ಎಲ್ಲಾ ಲೌಕಿಕ ಆಡಂಬರಗಳನ್ನು ತ್ಯಜಿಸಿ ಗೃಹಸ್ಥಾಶ್ರಮದಿಂದ ಹೊರಬಂದು ಸಣ್ಣ ರೈಲ್ವೇ ನಿಲ್ದಾಣವೊಂದರಲ್ಲಿ ನೆಲೆಸಿ ಅನಾರೋಗ್ಯದಿಂದ ಅಲ್ಲಿಯೇ ಕೊನೆಯುಸಿರೆಳೆದರು. ಅವರ ಆಸೆಯಂತೆಯೇ ಯಾವ ಕ್ರೈಸ್ತ ವಿಧಿ-ವಿಧಾನಗಳನ್ನು ಮಾಡದೆ, ಪುರೋಹಿತರಿಲ್ಲದೆ ಅಂತ್ಯ ಸಂಸ್ಕಾರವನ್ನು ನೆರವೇರಿಸಲಾಯಿತು. ಟಾಲ್‌ಸ್ಟಾಯ್ ಅಂತಿಮ ದರ್ಶನಕ್ಕೆ ಬಂದಿದ್ದ ಸಾವಿರಾರು ವಿದ್ಯಾರ್ಥಿಗಳು, ರೈತರು, ಬರಹಗಾರರು ಸಂತಾಪ ಸೂಚಿಸಿದರು. ರಷ್ಯಾದ ಯಸ್ನಾಯ ಪೊಲ್ಯಾನದಲ್ಲಿ ಇರುವ ಟಾಲ್‌ಸ್ಟಾಯ್ ಅವರ ಸಮಾಧಿಗೆ ಬೇಟಿ ನೀಡಿದ್ದ ಯು.ಆರ್.ಅನಂತಮೂರ್ತಿಯವರು ಹೇಳುವ ಮಾತು ಈ ರೀತಿ ಇದೆ; "ಟಾಲ್‌ಸ್ಟಾಯ್ ಸತ್ತಮೇಲೆ ಅವನಿಚ್ಛೆಯ ಮೇರೆಗೆ ರೈತರ ಒಂದು ಗೋರಿಯನ್ನು ಮಣ್ಣಿನಲ್ಲಿ ಎಬ್ಬಿಸಲಾಗಿತ್ತು. ಈ ಗೋರಿಯ ವೈಶಿಷ್ಟ್ಯವೆಂದರೆ ಮನುಷ್ಯನನ್ನು ಹೂತಲ್ಲಿ

ಮಣ್ಣನ್ನು ಕೊಂಚ ಉಬ್ಬಿಸಿ ಇಟ್ಟಿರುತ್ತಾರೆ. ಹುಲ್ಲು ಬೆಳೆಸಬಲ್ಲ ಟಾಲ್‌ಸ್ಟಾಯ್‌ಗೆ ಭವಿಷ್ಯವಿದೆ" ಎನ್ನುತ್ತಾರೆ ಅನಂತಮೂರ್ತಿಯವರು. (ಸುರಗಿ, ಪು.ಸಂ.೨೦೩) ಇಂತಹ ಮಹಾನ್ ಲೇಖಕ ನಮ್ಮ ನಾಡಿನ ಕುವೆಂಪು(೧೯೦೪-೧೯೯೪)ರವರ ಮೇಲೆ ಪರೋಕ್ಷವಾಗಿ ತಮ್ಮ ಬರಹಗಳ ಮೂಲಕ ಪ್ರಭಾವ ಬೀರಿದರು. ಇವರ 'ವಾರ್ ಅಂಡ್ ಪೀಸ್', 'ಅನ್ನಾಕರೆನಿನಾ', 'ರಿಸರೆಕ್ಷನ್', 'ಕನ್‌ಫೆಶನ್' ಕೃತಿಗಳು ಕುವೆಂಪು ಮೇಲೆ ಗಾಢವಾಗಿ ಆವರಿಸಿದವು. ಇದರ ಪ್ರತಿಫಲವೇ ಮುಂದೆ 'ಕಾನೂರು ಹೆಗ್ಗಡತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಕಾದಂಬರಿಗಳ ರೂಪದಲ್ಲಿ ಮೂಡಿಬಂದಿರುವುದನ್ನು ಕಾಣಬಹುದು. ಇದನ್ನ ಸ್ವತಃ ಕುವೆಂಪು ಅವರೆ ಟಾಲ್‌ಸ್ಟಾಯ್ ಕಾದಂಬರಿಗಳ ಪ್ರಭಾವ ಕುರಿತು ತಮ್ಮ ಆತ್ಮಕಥೆಯಲ್ಲಿ ಹೇಳಿಕೊಳ್ಳುತ್ತಾರೆ. ಪಾಶ್ಚಾತ್ಯ ಸಾಹಿತಿಗಳ ನಾಟಕ ಹಾಗೂ ಕಾವ್ಯಗಳಿಂದ ಪ್ರಭಾವಗೊಂಡ ಕುವೆಂಪು ಟಾಲ್‌ಸ್ಟಾಯ್‌ನನ್ನು ಓದಿದ ನಂತರ ಇಂತಹ ಮಹಾನ್ ಲೇಖಕನೇ ಕಾದಂಬರಿಯ ಪ್ರಕಾರದಲ್ಲಿ ಬರೆವಷ್ಟು ಕೀಳುಮಟ್ಟಕ್ಕೆ ಇಳಿದನಲ್ಲ ಎಂದು ಅಂದುಕೊಳ್ಳುತ್ತಾರೆ. ಏಕೆಂದರೆ ಅಲ್ಲಿವರೆಗೆ ಕುವೆಂಪುರವರಿಗೆ ಕಾದಂಬರಿ ಪ್ರಕಾರ ನಿರಸವಾಗಿತ್ತು. ಟಾಲ್‌ಸ್ಟಾಯ್ ಅವರ ಬೃಹತ್ ಕಾದಂಬರಿಗಳನ್ನು ಓದಿದ ನಂತರ ತಮ್ಮ ನಿರ್ಧಾರ ಬದಲಿಸಿಕೊಂಡ ಕುವೆಂಪು ನಾನೇಕೆ ಇಂತಹ ಮಹಾಕಾದಂಬರಿಯನ್ನು ಕನ್ನಡದಲ್ಲಿ ರಚಿಸಬಾರದೆಂದು ಯೋಚಿಸಿದರು. ಅವೇ ಮುಂದೆ ಹೆಗ್ಗಡತಿ ಹಾಗೂ ಮದುಮಗಳಾಗಿ ಕನ್ನಡಿಗರಿಗೆ ದೊರೆತವು.

ಟಾಲ್‌ಸ್ಟಾಯ್ ಬರವಣಿಗೆಯನ್ನು ೧೮೫೨ರಲ್ಲಿ ಆರಂಭಿಸಿದರು. ಅದು ತಮ್ಮ ಬಾಲ್ಯದ ನೆನಪುಗಳನ್ನ ಆತ್ಮಕಥೆಯ ರೂಪದಲ್ಲಿ ಪತ್ರಿಕೆಯೊಂದಕ್ಕೆ ಬರೆಯುತ್ತಿದ್ದರು. ಅದಕ್ಕೆ 'ಚೈಲ್ಡ್‌ಹುಡ್' ಎಂಬ ಶೀರ್ಷಿಕೆ ನೀಡಿದರು. ಆಗ ಅವರಿಗೆ ಕೇವಲ ಇಪ್ಪತ್ತನಾಲ್ಕು ವಯಸ್ಸು. ಈ ಬರಹ ಅಪಾರ ಓದುಗರನ್ನು ಸೆಳೆದು ಸಂಪಾದಕರು ಇವರನ್ನು ಇನ್ನಷ್ಟು ಬರೆಯುವಂತೆ ಪ್ರೋತ್ಸಾಹಿಸಿದರು. ವಿಶೇಷವೆಂದರೆ ಅವರು ಪತ್ರಿಕೆಗೆ ಕಳಿಸುತ್ತದ್ದ ಬರಹಗಳು ತಮ್ಮ ಮನೆಯ ಜನಕ್ಕೆ ತಿಳಿಯದ ಹಾಗೆ ಇರಲು 'ಎಲ್.ಎನ್.' ಎಂದು ಮಾತ್ರ ಬರೆದು ಕಳಿಸುತ್ತಿದ್ದರು. ಅದು ಹಾಗೇಯೆ ಪ್ರಕಟಗೊಳ್ಳುತ್ತಿತ್ತು. ಅವರು ಬರಹಗಾರರಾಗಿ ಪ್ರಸಿದ್ಧರಾದ ನಂತರ ಮನೆಯವರಿಗೆ ಆ ಲೇಖಕ ಎಲ್.ಎನ್. ಬೇರೆ ಯಾರೂ ಅಲ್ಲ ತಮ್ಮ ಮನೆಯ ಮಗ ಲಿಯೋ ನಿಕೋಲಾವಿಚ್ ಟಾಲ್‌ಸ್ಟಾಯ್ ಎಂಬುದು ತಿಳಿದುಬರುತ್ತದೆ. ಮುಂದೆ ಅವರು ಸೈನ್ಯ ಸೇರಿದ ನಂತರ ಅಲ್ಲಿನ ಅನುಭವಗಳನ್ನು 'ಬಾಯ್‌ಹುಡ್'ನಲ್ಲಿ ದಾಖಲಿಸುತ್ತಾ ಹೋದರು. ಸಾಮಾನ್ಯವಾಗಿ ನಾವು ಗಮನಿಸಿದಂತೆ ಬಹಳಷ್ಟು ಜನ ಸಾಹಿತಿ ಅಥವಾ ಸಾಧಕರು

ತಮ್ಮ ಆತ್ಮಕಥೆಯನ್ನು ತನ್ನ ಜೀವಿತದ ಕೊನೆಯ ಘಟ್ಟ ಅಂದರೆ ವೃದ್ಧಾಪ್ಯದಲ್ಲಿ ಬರೆದರೆ ಟಾಲ್‌ಸ್ಟಾಯ್ ತನ್ನ ಯೌವನದಲ್ಲೆ ಬರೆದುಕೊಂಡರು. ಕುವೆಂಪುರವರ 'ನೆನಪಿನ ದೋಣಿ' ಪ್ರಕಟಗೊಂಡಿದ್ದು ೧೯೮೦ರಲ್ಲಿ. ಅಂದರೆ ಸರಿಸುಮಾರು ಅವರ ಎಪ್ಪತ್ತು ವರುಷಗಳ ನಂತರ ಬರೆದದ್ದು. ಅವರು ತಮ್ಮ ಬರವಣಿಗೆಯನ್ನು 'ಕಿಶೋರಚಂದ್ರವಾಣಿ' ಕಾವ್ಯನಾಮದಲ್ಲಿ ಆರಂಭಿಸಿದ್ದರು.

'ವಾರ್ ಅಂಡ್ ಪೀಸ್' ಮೊದಲು ಪತ್ರಿಕೆಯೊಂದರಲ್ಲಿ ಧಾರಾವಾಹಿಯಾಗಿ ಪ್ರಕಟಗೊಳ್ಳುವಾಗ ಅದರ ಶೀರ್ಷಿಕೆ '೧೮೦೫' ಎಂದಿತ್ತು. ತನ್ನ ಈ ಬೃಹತ್ ಕಾದಂಬರಿ ಕುರಿತು ಟಾಲ್‌ಸ್ಟಾಯ್ ಹೇಳುವ ಮಾತು ಈ ರೀತಿ ಇದೆ; 'ವಾರ್ ಅಂಡ್ ಪೀಸ್ ಅನ್ನುವುದೇನು? ಅದು ಕಾದಂಬರಿಯಲ್ಲ, ಕವಿತೆಯೂ ಅಲ್ಲ, ಚರಿತ್ರೆಯ ದಾಖಲೆಯಂತೂ ಅಲ್ಲವೇ ಅಲ್ಲ. ಕೃತಿಕಾರನೂ ಏನನ್ನು ಹೇಳಲು ಬಯಸಿದ್ದನೋ ಅದು ಯಾವ ರೂಪದಲ್ಲಿ ವ್ಯಕ್ತವಾಗಿದೆಯೋ ಅದೇ ವಾರ್ ಅಂಡ್ ಪೀಸ್' ಎನ್ನುವನು. ಹಾಗೆಯೇ ಕುವೆಂಪು ಅವರ 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಕಾದಂಬರಿಯಾಗುವ ಮೊದಲು ಅದರ ಶೀರ್ಷಿಕೆ 'ಮಲೆನಾಡಿನ ಮೂಲೆಯಲ್ಲಿ' ಎಂದಿಟ್ಟಿದ್ದ ಮಾಹಿತಿಯನ್ನು ತಮ್ಮ ಆತ್ಮಕಥೆಯಲ್ಲಿ ಹೇಳಿಕೊಳ್ಳುತ್ತಾರೆ. ಮುಂದೆ ಬರೆದ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಆರಂಭದಲ್ಲಿಯೇ ಒಂದು ಕವಿವಾಣಿ ಇದೆ. ಅದು ಎಲ್ಲರಿಗೂ ಚಿರಪರಿಚಿತವಾದ ಕುವೆಂಪು ದರ್ಶನವಾಣಿ.

'ಇಲ್ಲಿ
ಯಾರೂ ಮುಖ್ಯರಲ್ಲ;
ಯಾರೂ ಅಮುಖ್ಯರಲ್ಲ;
ಯಾವುದೂ ಯಃಕಶ್ಚಿತವಲ್ಲ!.....'

ತನ್ನ ಹುಟ್ಟೂರಾದ ಯಸ್ನಾಯಾ ಪೋಲ್ಯಾನ ಪ್ರದೇಶವು ಟಾಲ್‌ಸ್ಟಾಯ್‌ನ ಮೆಚ್ಚಿನ ಕೇಂದ್ರವಾದಂತೆ, ಕುವೆಂಪು ಅವರಿಗೆ ತನ್ನ ಮಲೆನಾಡಿನ ಕುಪ್ಪಳ್ಳಿ ಕಾದಂಬರಿಯ ಕೇಂದ್ರವಾಯಿತು. ಗೃಹಸ್ಥನಾದ ಟಾಲ್‌ಸ್ಟಾಯ್ ಎಲ್ಲವನ್ನು ತೊರೆದು ಕೊನೆಗೆ ಸನ್ಯಾಸಿಯಂತೆ ಮನೆತೊರೆದರು. ಯೌವನದಲ್ಲಿ ಪರಮಹಂಸ, ವಿವೇಕಾನಂದರ ಪ್ರಭಾವಕ್ಕೆ ಒಳಗಾದ ಕುವೆಂಪು ಮೈಸೂರಿನ ರಾಮಕೃಷ್ಣ ಮಠದಲ್ಲಿ ಆಧ್ಯಾತ್ಮಿಕವಾಗಿ ಸಾಧನೆ ಮಾಡಿದರು. ಎಲ್ಲಿ ತನ್ನ ಮಗ ಮಠದ ಸನ್ಯಾಸಿಯಾಗುವನೋ ಎಂಬ ಆತಂಕ ಕುವೆಂಪು ತಂದೆ-ತಾಯಿಯಲ್ಲಿ ಉಂಟಾಗಿತ್ತು! ಮುಂದೆ ಕುವೆಂಪು ಮದುವೆಯಾಗಿ ಬ್ರಹ್ಮಚರ್ಯದಿಂದ ವೈವಾಹಿಕ ಗೃಹಾಸ್ಥಾಶ್ರಮಕ್ಕೆ ಮರಳಿದರು. ತೇಜಸ್ವಿಯಂತಹ ಮಹಾಕೃತಿಯನ್ನು ಕನ್ನಡ ಸಾಹಿತ್ಯಕ್ಕೆ ಕೊಟ್ಟಿರುವುದನ್ನು ನಾವು

ನೆನೆಯಬೇಕು. ಟಾಲ್‌ಸ್ಟಾಯ್ ಸೋಫಿಯಾಳನ್ನು ವಿವಾಹವಾದಾಗ ಅವರಿಬ್ಬರ ವಯಸ್ಸಿನ ಅಂತರ ಹದಿನಾರು ವರುಷ. ಆಗ ಟಾಲ್‌ಸ್ಟಾಯ್‌ಗೆ ಮೂವತ್ನಾಲ್ಕು ಸೋಫಿಯಾಳಿಗೆ ಹದಿನೆಂಟು ವಯಸ್ಸು. ಅದೇ ರೀತಿ ಕುವೆಂಪು ಹಾಗೂ ಹೇಮಾವತಿ ಅವರ ವಯಸ್ಸಿನ ಅಂತರ ವರನ ಅರ್ಧದಷ್ಟು ವಧುವಿನ ವಯಸ್ಸಾಗಿತ್ತು. ಕುವೆಂಪುಗೆ ಮೂವತ್ತೆರೆಡು ಹೇಮಾವತಿಯವರಿಗೆ ಹದಿನಾರು ವರ್ಷ ವಯಸ್ಸಾಗಿತ್ತು. ಟಾಲ್‌ಸ್ಟಾಯ್ ಸೋಫಿಯಾಳ ಮೇಲೆ ತೋರಿಸುತ್ತಿದ್ದ ಪ್ರೀತಿ, ಅದೇ ರೀತಿ ಕುವೆಂಪು ಸಹ ತಮ್ಮ ಮಡದಿ ಹೇಮಾವತಿಯನ್ನು ಪ್ರೀತಿಸುತ್ತಿದ್ದರು. ಅವರ "ಸ್ವರ್ಗ ದ್ವಾರದಿ ಯಕ್ಷಪ್ರಶ್ನೆ" ಕವಿತೆ ಸ್ವಪ್ನದಲ್ಲಿ ಸತ್ತ ಕುವೆಂಪು ಅವರಿಗೆ ಸ್ವರ್ಗದ ಬಾಗಿಲು ತೆರೆಯಲು ನಿರಾಕರಿಸಿದಾಗ ಅವರು ತನ್ನಲ್ಲಾ ಪುರುಷವಾದಿ ದರ್ಪ, ತಾನು ನಾಡಿನ ಕವಿ, ಪ್ರಶಸ್ತಿ ವಿಜೇತ, ರಸಋಷಿ ಕುವೆಂಪು ಎಂದೆಲ್ಲಾ ಆತ್ಮಪ್ರಶಂಸೆಯ ಪರಿಚಯ ಕೊಟ್ಟರು ಸ್ವರ್ಗದ ಬಾಗಿಲು ತೆರೆಯುವುದಿಲ್ಲ. ಕೊನೆಗೆ ಅಂಜುತ್ತಲೆ ತನ್ನೆಲ್ಲಾ ನಾಚಿಕೆಯನ್ನು ಬದಿಗಿಟ್ಟು ನಾನು 'ಹೇಮಿ ಗಂಡ' ಎಂದು ತನ್ನ ಪರಿಚಯ ತಿಳಿಸಿದಾಗ ಮಾತ್ರ ಸ್ವರ್ಗದ್ವಾರ ತೆರೆದುಕೊಳ್ಳುತ್ತದೆ. ಈ ಪ್ರಸಂಗವಂತೂ ಕನ್ನಡ ಸಾಹಿತ್ಯದ ದೊಡ್ಡ ಸ್ತ್ರೀವಾದದ ರೂಪಕದಂತೆ ಕಾಣುತ್ತದೆ.

ಟಾಲ್‌ಸ್ಟಾಯ್ ತನ್ನ ಆತ್ಮಕಥೆ (ಶೈಶವ, ಬಾಲ್ಯ, ಯೌವನ)ಯನ್ನು ಯೌವನದ ವರೆಗೆ ಮಾತ್ರ ಬರೆದು ನಿಲ್ಲಿಸಿದರು. ಅವರ ಮುಂದಿನ ಜೀವನದ ದಾಖಲೆಯನ್ನು ಅವರು ಮಾಡಲೇ ಇಲ್ಲ. ಆದರೆ ಮುಂದೆ ಅವರ ಮಗಳು ಅಲೆಕ್ಸಾಂಡ್ರ ಟಾಲ್‌ಸ್ಟಾಯ್ 'ಟ್ರ್ಯಾಜಿಡಿ ಆಫ್ ಟಾಲ್‌ಸ್ಟಾಯ್' (ಟಾಲ್‌ಸ್ಟಾಯ್‌ನ ದುರಂತ) ಎಂಬ ಶೀರ್ಷಿಕೆಯಲ್ಲಿ ತನ್ನ ತಂದೆಯ ಜೀವನವನ್ನು ಒಂದು ದುರಂತ ಕಥೆಯೆಂದಳು. ಕುವೆಂಪು ಸಹ ತಮ್ಮ ನೆನಪಿನ ದೋಣಿಯ ಪಯಣವನ್ನು ಅವರ ವಿವಾಹದವರೆಗಿನ ಜೀವನ ಚಿತ್ರಣವನ್ನಷ್ಟೆ ನೀಡಿದರು. ಆ ನಂತರದ ನೆನಪಿನ ದೋಣಿಯ ಪಯಣದ ಅನುಭವಗಳನ್ನು ಅವರು ಆತ್ಮಕಥೆಯ ರೂಪದಲ್ಲಿ ಬರೆಯಲೇ ಇಲ್ಲ. ಆದರೆ ಮುಂದೆ ಅವರ ಮಗ ತೇಜಸ್ವಿ 'ಅಣ್ಣನ ನೆನಪು' ಬರೆವ ಮೂಲಕ ಕುವೆಂಪು ಅವರ ಕೌಟುಂಬಿಕ ಜೀವನವನ್ನು ತೆರೆದಿಟ್ಟರು. ತಮ್ಮ 'ನೆನಪಿನ ದೋಣಿಯಲ್ಲಿ' ಆತ್ಮಕಥೆಯು ಟಾಲ್‌ಸ್ಟಾಯ್ ಅವರ 'ಕನ್‌ಫೆಶನ್'(ಬಿನ್ನಪ)ನಂತೆಯೇ ಮೂಡಿಬಂದಿರುವುದನ್ನು ಕುವೆಂಪುರವರೆ ಉಲ್ಲೇಖಮಾಡುತ್ತಾರೆ. ಅಲ್ಲಿ ಟಾಲ್‌ಸ್ಟಾಯ್ ಕ್ರಿಸ್ತನೊಂದಿಗೆ ಬಿನ್ನಪಿಸಿದರೆ ಇಲ್ಲಿ ಕುವೆಂಪು ಶಾರದಾಂಬೆ, ಕಾಳಿ, ಪರಮಹಂಸ ಹಾಗೂ ವಿವೇಕಾನಂದರರನ್ನು ದಿನನಿತ್ಯ ನೆನೆದು ಬಿನ್ನಪ ಮಾಡಿಕೊಳ್ಳುವರು.

'ರಾಮಾಯಣ ದರ್ಶನಂ' ಬರೆದ ಕುವೆಂಪು ಕವಿಕ್ರತು ದರ್ಶನಂನಲ್ಲಿ

'ಹೋಮರ್, ವರ್ಜಿಲ್, ಡಾಂಟೆ, ಮಿಲ್ಟನ್‌ನಂತಹ ಮಹಾನ್ ಕವಿಗಳನ್ನು ನೆನದರು. ಆದರೆ ತನ್ನ ಕಾದಂಬರಿಗಳ ಬರಹಕ್ಕೆ ಸ್ಪೂರ್ತಿಯಾದ ಟಾಲ್‌ಸ್ಟಾಯ್‌ನ ಸ್ಮರಣೆಯನ್ನು ಮರೆತದ್ದೇಕೆ?! ಬಹುಶಃ ಅದರ ಮುಂದಿನ ಸಾಲಿನಲ್ಲಿ ಬರುವ 'ಕಾಲ ದೇಶದ ನುಡಿಯ ಜಾತಿಯ ವಿಭೇದಮಂ ಲೆಕ್ಕಿಸದೆ ಜಗತೀ ಕಲಾಚಾರ್ಯರೆಲ್ಲರ್ಗೆ' ಎಂಬಲ್ಲಿ ತನ್ನ ಟಾಲ್‌ಸ್ಟಾಯ್ ಸಹ ಸೇರಿರಬೇಕೆನಿಸುತ್ತದೆ. ಟಾಲ್‌ಸ್ಟಾಯ್ ಅವರ ಆತ್ಮಕಥೆಯನ್ನು(ಶೈಶವ, ಬಾಲ್ಯ, ಯೌವನ) ಕನ್ನಡಕ್ಕೆ ಅನುವಾದಿಸಿದ ಆನಂದ(ಅಜ್ಜಂಪುರ ಸೀತಾರಾಮ್)ರವರು ಕುವೆಂಪು ಅವರಿಗೆ ಅರ್ಪಣೆ ಮಾಡಿರುವುದನ್ನು ಕೃತಿಯ ಆರಂಭದಲ್ಲಿ ನೋಡಬಹುದಾಗಿದೆ. ಅದೇ ರೀತಿ ದೇಜಗೌ ಸಹ ತಮ್ಮ 'ಯುದ್ಧ ಮತ್ತು ಶಾಂತಿ' ಯನ್ನು ತಮ್ಮ ಗುರು ಕುವೆಂಪು ಅವರಿಗೆ ಅರ್ಪಿಸಿದ್ದಾರೆ. ಈ ಇಬ್ಬರು ಮಹಾನ್ ಕಾದಂಬರಿಕಾರರಿಗೆ ಚಿಕ್ಕವಯಸ್ಸಿನಿಂದಲೂ ಡೈರಿ ಬರೆವ ಹವ್ಯಾಸವಿದ್ದದ್ದು ಮತ್ತೊಂದು ಸಾಮ್ಯತೆಯನ್ನು ನಮಗೆ ಕಾಣಸಿಗುತ್ತದೆ. ಕುವೆಂಪು ತಮ್ಮ ಶಿಷ್ಯರಲ್ಲಿ ಒಬ್ಬರಾದ ದೇ.ಜವರೇಗೌಡರಿಗೆ ಟಾಲ್‌ಸ್ಟಾಯ್ ಅವರ ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸುವಂತೆ ಸೂಚಿಸಿದ್ದರು. ಅವರ ಆಸೆಯಂತೆ ಮುಂದೆ ದೇ.ಜಗೌ ಅವರಿಂದ ಟಾಲ್‌ಸ್ಟಾಯ್ ಅವರ 'ಅನ್ನಾಕರೆನಿನಾ' (ಇದೇ ಹೆಸರಿನಲ್ಲಿ ಅನುವಾದಗೊಂಡಿದೆ) 'ರಿಸರೆಕ್ಸನ್' (ಪುನರುತ್ಥಾನ) ಮತ್ತು 'ವಾರ್ ಅಂಡ್ ಪೀಸ್'(ಯುದ್ಧ ಮತ್ತು ಶಾಂತಿ)ನ್ನು ಅನುವಾದಗೊಂಡು ಕನ್ನಡ ಮನಸ್ಸುಗಳನ್ನು ತಲುಪಿದವು. ದೇಜಗೌ ಅವರು ಟಾಲ್‌ಸ್ಟಾಯ್ ಕೃತಿಗಳ ಅನುವಾದಮಾಡುವುದರ ಕುರಿತು ಅವರ ಗುರುಗಳಾದ ಕುವೆಂಪು ಹೇಳುವ ಮಾತು ಈ ರೀತಿ ಇದೆ: 'ಇದು ನಿಜವಾಗಿಯೂ ಸಾಹಸದ ಯೋಜನೆ; ಇದು ಕಾರ್ಯಗತವಾದಾಗ ನಿಮ್ಮ ಜನ್ಮ ಸಾರ್ಥಕವಾಗುತ್ತದೆ, ಕನ್ನಡ ಭಾಷೆ ಶ್ರೀಮಂತವಾಗುತ್ತದೆ' ಎಂದರಂತೆ. ಟಾಲ್‌ಸ್ಟಾಯ್ ಕೃತಿಗಳನ್ನು ಓದಿ ತಿದ್ದಿದವರು ಅವರ ಮಡದಿ ಸೋಫಿಯಾ. ಅದೇ ರೀತಿ ಟಾಲ್‌ಸ್ಟಾಯ್‌ನ ಎಲ್ಲಾ ಕೃತಿಗಳನ್ನು ಇಂಗ್ಲೀಷಿಗೆ ಅನುವಾದಿಸಲು ಶ್ರಮಿಸಿದ ಆಯಿಲ್ಮರ್ ಮಾಡ್ ಆತನ ಮಡದಿ ಶ್ರೀಮತಿ ಲೂಯಿಯವರನ್ನು ನಾವೆಲ್ಲಾ ನೆನೆಯಲೇಬೇಕು. ಮುಂದೆ ಕನ್ನಡದ ಅನುವಾದಕ್ಕೆ ಬಂದರೆ ಟಾಲ್‌ಸ್ಟಾಯ್ ಅವರ ಮಹಾಕಾದಂಬರಿಗಳನ್ನ, ನಾಟಕಗಳನ್ನ ಅನುವಾದ ಮಾಡಿದ ದೇಜಗೌ ಅವರಿಗೆ ಬೆನ್ನೆಲುಬಾಗಿ ನಿಂತ ಅವರ ಶ್ರೀಮತಿ, ಸಾವಿತ್ರಮ್ಮನವರ ಕೊಡುಗೆಯೂ ಅಪಾರವಾಗಿರುವುದನ್ನು ಕೇಳಿದ್ದೆವೆ.

ಟಾಲ್‌ಸ್ಟಾಯ್ ಹಾಗೂ ಕುವೆಂಪು ಈ ಇಬ್ಬರ ದರ್ಶನಗಳಲ್ಲಿ ಹಲವು ಹೋಲಿಕೆಗಳನ್ನು ನೋಡಿದರೆ ಓದುಗರಿಗೆ ಆಶ್ಚರ್ಯ ಉಂಟಾಗುತ್ತದೆ. ಎಲ್ಲಿಯಾ

ಸೋವಿಯತ್ತಿನ ಯಾಸ್ನಾವಾ, ಎಲ್ಲಿಯಾ ಕರುನಾಡ ಮಲೆನಾಡಿನ ಕುಪ್ಪಳ್ಳಿ, ಎತ್ತಣಿದೆತ್ತ ಸಂಬಂಧವಯ್ಯ ಎನ್ನುವ ಸೋಜಿಗ ನಮ್ಮಲ್ಲಿ ತಾರ್ಕಿಕವಾಗಿಯೇ ಉಳಿದಿದೆ. ಸಾಕ್ರಟಿಸ್-ಪ್ಲೇಟೋ-ಅರಿಸ್ಟಾಟಲ್-ಅಲೆಕ್ಸಾಂಡರ್ ಹೀಗೆ ಒಂದು ದಾರ್ಶನಿಕ ಪರಂಪರೆಯ ಸರಪಳಿಯನ್ನು ನಾವೆಲ್ಲ ಇತಿಹಾಸದಲ್ಲಿ ಓದಿದ್ದೆವೆ. ಅದೇ ರೀತಿ ಟಾಲ್‌ಸ್ಟಾಯ್-ಗಾಂಧಿ-ಮಾರ್ಟಿನ್‌ಲೂಥರ್-ಕುವೆಂಪು-ಅನಂತಮೂರ್ತಿ-ಲಂಕೇಶ್-ತೇಜಸ್ವಿ-ದೇವನೂರುಮಹಾದೇವ ಹೀಗೆ ಒಂದು ಪರಂಪರೆಯು ನಮ್ಮ ನಡುವೆ ಕಾಣಸಿಗುವ ಸಾಕ್ಷಿಪ್ರಜ್ಞೆಯಾಗಿದೆ. ರಸಋಷಿ, ದಾರ್ಶನಿಕ ಕವಿ ಕುವೆಂಪು ಮಹಾನ್ ಮಾನವತವಾದಿ ಟಾಲ್‌ಸ್ಟಾಯ್ ಮಹರ್ಷಿಯನ್ನು ರಸಋಷಿ ಎಂದೇ ಕರೆದು, ಅವರ ಕುರಿತು ಒಂದು ಕವಿತೆ ರಚಿಸಿದ್ದಾರೆ.

ಟಾಲ್‌ಸ್ಟಾಯ್

ಬಾಳ ಕೊಳುಗುಳದಲ್ಲಿ ಬೀರ ತುಳಿಲಾಳಾಗಿ
ಹೋರಿಯಂದದಿ ಹೋರಿ ಮಡಿದ ನಿನ್ನಾ ಮೃತ್ಯು
ಧರ್ಮ ಕ್ಷುಧೆಗೆ ಚಿರಂಜೀವದಮೃತದ ತುತ್ತು,
ಟಾಲ್‌ಸ್ಟಾಯ್! ನಿರಂಕುಶಮತಿಯೆ, ಶಮದಮಕ್ಕಾಗಿ
ಸಮೆದೆ ನಿನ್ನಾತ್ಮಮಂ, ಸೌಖ್ಯದ ಸಿರಿಯ ತೊರೆದು
ದುಃಖದಾರಿದ್ರ್ಯಮಂ ಕೆಳಗೊಂಡೆ. ಬೇಸತ್ತು
ಮತದ ಬೂಟಾಟಿಕೆಗೆ, ಅದರ ಹುತ್ತವ ಕಿತ್ತು,
ಬೆಳ್ಳೊರೆಗಳ ನೋಣೆಯೆ ವಿಪ್ಲವ ಫಣಿಯನಿರಿದು
ಕೆರಳಿಸುತೊಳಗೆ ಬಿಟ್ಟೆ! ಕ್ರಾಂತಿಕಾರನೆ ಮಾತ್ರ
ನೀನಲ್ತು; ಕಾವ್ಯರಸನಂದನ ಕೃಷಿಕನಾದೆ.
ಮನುಜ ಜೀವನ ರಂಗಭೂಮಿಯಲಿ ತವಪಾತ್ರ
ನೈಕಮುಖಿ. ಸಾಧಕವರೇಣ್ಯ, ಸತ್ಯದ ಬೋಧೆ
ನಿನ್ನಂದೆ ಮಿಂಚಾಯ್ತು – ಹೋರಾಡುತಲೆ ಬಿದ್ದ;
ಸೋತಂತೆ ತೋರ್ದರೂ, ರಸಋಷಿ, ದಿಟದಿ ಗೆದ್ದ!

–ಕುವೆಂಪು (೨೦-೦೩-೧೯೩೫) (ಕೃತ್ತಿಕೆ)

ಕೃಷ್ಣಾ ಕುಮಾರಿ: ಶತಮಾನದ ಖಂಡಕಾವ್ಯ

ಡಾ. ರವಿಶಂಕರ್ ಎ.ಕೆ

ಹೊಸಜನ್ಮದಂತೆ, ಯೌವನದ ಬರುವಿಕೆಯಂತೆ
ಹೊಸ ಸುಗ್ಗಿಯಂತನನುಭೂತ ಅನುಭವದಂತೆ
ಹೊಸ ಹೊಸಗೆಯಂತೆ ಹೊಸಚಂದ್ರನುದಯಿಸಿದಂತೆ ಸತ್ಯ ಸ್ವರೂಪ ಪ್ರೇಮಾ!

ಕನ್ನಡ ಸಾಹಿತ್ಯವು ಶತಮಾನದ ಕಾವ್ಯ ಸಾಂಗತ್ಯದ ಹೊಸ ಅಭಿರುಚಿಯನ್ನು ಕಳೆದರೂ ಹೊಸ ಬದಲಾವಣೆಗಳು ಸೃಷ್ಟಿಗೊಳ್ಳದೆ, ಇರುವ ಸ್ವರೂಪವೇ ಗದ್ಯ-ಪದ್ಯ ಮಾದರಿಯ ತವಕದಲ್ಲಿ ಬೇಯುವ ಹಸಿ ಹಂಬಲಗಳಂತೆ ಕಾಣಸಿಗುತ್ತಿವೆ. ಕಾವ್ಯದ ಜಗತ್ತನ್ನು ಬದಲಿಸಲು ಆಂಗ್ಲಮಾದರಿಯ ಓದುವಿನ ಸಾಹಿತ್ಯ ಕ್ರಮ ನಮ್ಮಲ್ಲೂ ಬಂದದ್ದು ಸಿದ್ಧಮಾದರಿಯಾದರೂ, ನಮ್ಮಲ್ಲಿ ಇದ್ದುದರ ರೂಪಕ್ಕೆ ಸ್ವರೂಪ ಸಹಜತೆ ಒದಗಿ ಬಂತು.

ಕಾವ್ಯದ ಹಾದಿ

ಕನ್ನಡ ಕಾವ್ಯದ ಹೊಸಮಾದರಿಗಳು ನಮಗೆ ದೊರೆತದ್ದೇ ೧೯೦೦ರ ನಂತರವೆನ್ನಬಹುದು. ಇಂಗ್ಲಿಷ್ ಗೀತಗಳು, ಕೃಷ್ಣಾ ಕುಮಾರಿ ಮೊದಲಾದ ಹೊಸ 'ಹೆಜ್ಜೆಗಳಲ್ಲಿ ಅನುವಾದ ಹಾಗೂ ರೂಪಾಂತರದ ಹೊಸ ಕಾವ್ಯ ಸ್ವರೂಪದ ಅನ್ವೇಷಣೆಯನ್ನು ಕನ್ನಡ ಸಾಹಿತ್ಯ ಪಡೆಯಿತು. ಇದರ ಹಿಂದೆ ಕಾವ್ಯದ ಹಾದಿಯು ಅತ್ಯಂತ ಹೆಚ್ಚು ಅರ್ಥಪೂರ್ಣವಾಗಿ ಸವೆದಿದೆ. ಕವಿರಾಜ ಮಾರ್ಗದಿಂದ, ಹಲವು ಶಾಸನ, ಕಾವ್ಯಗಳಿಂದ ವಿಜೃಂಭಣೆಗೊಂಡ ಕನ್ನಡ ಕಾವ್ಯ ಜಗತ್ತನ್ನು ಭಾರತೀಯ ಕಾವ್ಯ ಮೀಮಾಂಸೆಯು ಉಲ್ಲೇಖಿಸುತ್ತಾ ಕಾವ್ಯದ ಸಹಜ ಕರ್ತವ್ಯವನ್ನು ವ್ಯಾಖ್ಯಾನಿಸಿದೆ. ದ. ರಾ. ಬೇಂದ್ರೆ ಅವರು ಕೃಷ್ಣಾ ಕುಮಾರಿಯ ಪ್ರಸ್ತಾವನೆಯಾಗಿ ["ತನುವಿಲ್ಲದಲ್ಲಿ ಪ್ರಾಣ ಪ್ರತಿಷ್ಠೆಯನ್ನು" ಮಾಡುವದೇ ಕವಿಕುಂಜರರ ಕಾರ್ಯವೆಂದು ಹದಿನೇಳನೆಯ ಶತಮಾನದ ಗೋವಿಂದನೆಂಬ ಕವಿಯು ತನ್ನ ಬಂಧುಗಳಿಗೆ ಸನದನ್ನು ಕೊಟ್ಟಿರುವನು] ಇಂತಹ ಕಾವ್ಯಸತ್ವ ಕಾರ್ಯವನ್ನು ಹರಿಹರನ ಪ್ರಯೋಗ, ಲಕ್ಷ್ಮೀಶನ ಕಾವ್ಯ

ಸೋವಿಯತ್ತಿನ ಯಾಸ್ನಾವಾ, ಎಲ್ಲಿಯಾ ಕರುನಾಡ ಮಲೆನಾಡಿನ ಕುಪ್ಪಳ್ಳಿ, ಎತ್ತಣಿದೆತ್ತ ಸಂಬಂಧವಯ್ಯ ಎನ್ನುವ ಸೋಜಿಗ ನಮ್ಮಲ್ಲಿ ತಾರ್ಕಿಕವಾಗಿಯೇ ಉಳಿದಿದೆ. ಸಾಕ್ರಟಿಸ್-ಪ್ಲೇಟೋ-ಅರಿಸ್ಟಾಟಲ್-ಅಲೆಕ್ಸಾಂಡರ್ ಹೀಗೆ ಒಂದು ದಾರ್ಶನಿಕ ಪರಂಪರೆಯ ಸರಪಳಿಯನ್ನು ನಾವೆಲ್ಲ ಇತಿಹಾಸದಲ್ಲಿ ಓದಿದ್ದೇವೆ. ಅದೇ ರೀತಿ ಟಾಲ್‌ಸ್ಟಾಯ್-ಗಾಂಧಿ-ಮಾರ್ಟಿನ್‌ಲೂಥರ್-ಕುವೆಂಪು-ಅನಂತಮೂರ್ತಿ-ಲಂಕೇಶ್-ತೇಜಸ್ವಿ-ದೇವನೂರುಮಹಾದೇವ ಹೀಗೆ ಒಂದು ಪರಂಪರೆಯು ನಮ್ಮ ನಡುವೆ ಕಾಣಸಿಗುವ ಸಾಕ್ಷಿಪ್ರಜ್ಞೆಯಾಗಿದೆ. ರಸಋುಷಿ, ದಾರ್ಶನಿಕ ಕವಿ ಕುವೆಂಪು ಮಹಾನ್ ಮಾನವತವಾದಿ ಟಾಲ್‌ಸ್ಟಾಯ್ ಮಹರ್ಷಿಯನ್ನು ರಸಋುಷಿ ಎಂದೇ ಕರೆದು, ಅವರ ಕುರಿತು ಒಂದು ಕವಿತೆ ರಚಿಸಿದ್ದಾರೆ.

ಟಾಲ್‌ಸ್ಟಾಯ್

ಬಾಳ ಕೊಳುಗುಳದಲ್ಲಿ ಬೀರ ತುಳಿಲಾಳಾಗಿ
ಹೋರಿಯಂದದಿ ಹೋರಿ ಮಡಿದ ನಿನ್ನಾ ಮೃತ್ಯು
ಧರ್ಮ ಕ್ಷುಧೆಗೆ ಚಿರಂಜೀವದಮೃತದ ತುತ್ತು,
ಟಾಲ್‌ಸ್ಟಾಯ್! ನಿರಂಕುಶಮತಿಯೆ, ಶಮದಮಕ್ಕಾಗಿ
ಸಮೆದೆ ನಿನ್ನಾತ್ಮಮಂ, ಸೌಖ್ಯದ ಸಿರಿಯ ತೊರೆದು
ದುಃಖದಾರಿದ್ರ್ಯಮಂ ಕೆಳಗೊಂಡೆ. ಬೇಸತ್ತು
ಮತದ ಬೂಟಾಟಿಕೆಗೆ, ಅದರ ಹುತ್ತವ ಕಿತ್ತು,
ಬೆಳ್ಳೊರೆಗಳ ನೋಣೆಯೆ ವಿಪ್ಲವ ಫಣಿಯನಿರಿದು
ಕೆರಳಿಸುತೊಳಗೆ ಬಿಟ್ಟೆ! ಕ್ರಾಂತಿಕಾರನೆ ಮಾತ್ರ
ನೀನಲ್ತು; ಕಾವ್ಯರಸನಂದನ ಕೃಷಿಕನಾದೆ.
ಮನುಜ ಜೀವನ ರಂಗಭೂಮಿಯಲಿ ತವಪಾತ್ರ
ನೈಕಮುಖಿ. ಸಾಧಕವರೇಣ್ಯ, ಸತ್ಯದ ಬೋಧೆ
ನಿನ್ನಂದೆ ಮಿಂಚಾಯ್ತು – ಹೋರಾಡುತಲೆ ಬಿದ್ದ;
ಸೋತಂತೆ ತೋರ್ದರೂ, ರಸಋುಷಿ, ದಿಟದಿ ಗೆದ್ದ!

–ಕುವೆಂಪು (೨೦-೦೩-೧೯೩೫) (ಕೃತ್ತಿಕೆ)

ಕೃಷ್ಣಾ ಕುಮಾರಿ: ಶತಮಾನದ ಖಂಡಕಾವ್ಯ

ಡಾ. ರವಿಶಂಕರ್ ಎ.ಕೆ

ಹೊಸಜನ್ಮದಂತೆ, ಯೌವನದ ಬರುವಿಕೆಯಂತೆ
ಹೊಸ ಸುಗ್ಗಿಯಂತನನುಭೂತ ಅನುಭವದಂತೆ
ಹೊಸ ಹೊಸಗೆಯಂತೆ ಹೊಸಚಂದ್ರನುದಯಿಸಿದಂತೆ ಸತ್ಯ ಸ್ವರೂಪ ಪ್ರೇಮಾ!

ಕನ್ನಡ ಸಾಹಿತ್ಯವು ಶತಮಾನದ ಕಾವ್ಯ ಸಾಂಗತ್ಯದ ಹೊಸ ಅಭಿರುಚಿಯನ್ನು ಕಳೆದರೂ ಹೊಸ ಬದಲಾವಣೆಗಳು ಸೃಷ್ಟಿಗೊಳ್ಳದೆ, ಇರುವ ಸ್ವರೂಪವೇ ಗದ್ಯ-ಪದ್ಯ ಮಾದರಿಯ ತವಕದಲ್ಲಿ ಬೇಯುವ ಹಸಿ ಹಂಬಲಗಳಂತೆ ಕಾಣಸಿಗುತ್ತಿವೆ. ಕಾವ್ಯದ ಜಗತ್ತನ್ನು ಬದಲಿಸಲು ಆಂಗ್ಲಮಾದರಿಯ ಓದುವಿನ ಸಾಹಿತ್ಯ ಕ್ರಮ ನಮ್ಮಲ್ಲೂ ಬಂದದ್ದು ಸಿದ್ಧಮಾದರಿಯಾದರೂ, ನಮ್ಮಲ್ಲಿ ಇದ್ದುದರ ರೂಪಕ್ಕೆ ಸ್ವರೂಪ ಸಹಜತೆ ಒದಗಿ ಬಂತು.

ಕಾವ್ಯದ ಹಾದಿ

ಕನ್ನಡ ಕಾವ್ಯದ ಹೊಸಮಾದರಿಗಳು ನಮಗೆ ದೊರೆತದ್ದೇ ೧೯೦೦ರ ನಂತರವೆನ್ನಬಹುದು. ಇಂಗ್ಲಿಷ್ ಗೀತಗಳು, ಕೃಷ್ಣಾ ಕುಮಾರಿ ಮೊದಲಾದ ಹೊಸ 'ಹೆಜ್ಜೆಗಳಲ್ಲಿ ಅನುವಾದ ಹಾಗೂ ರೂಪಾಂತರದ ಹೊಸ ಕಾವ್ಯ ಸ್ವರೂಪದ ಅನ್ವೇಷಣೆಯನ್ನು ಕನ್ನಡ ಸಾಹಿತ್ಯ ಪಡೆಯಿತು. ಇದರ ಹಿಂದೆ ಕಾವ್ಯದ ಹಾದಿಯು ಅತ್ಯಂತ ಹೆಚ್ಚು ಅರ್ಥಪೂರ್ಣವಾಗಿ ಸವೆದಿದೆ. ಕವಿರಾಜ ಮಾರ್ಗದಿಂದ, ಹಲವು ಶಾಸನ, ಕಾವ್ಯಗಳಿಂದ ವಿಜೃಂಭಣೆಗೊಂಡ ಕನ್ನಡ ಕಾವ್ಯ ಜಗತ್ತನ್ನು ಭಾರತೀಯ ಕಾವ್ಯ ಮೀಮಾಂಸೆಯು ಉಲ್ಲೇಖಿಸುತ್ತಾ ಕಾವ್ಯದ ಸಹಜ ಕರ್ತವ್ಯವನ್ನು ವ್ಯಾಖ್ಯಾನಿಸಿದೆ. ದ. ರಾ. ಬೇಂದ್ರೆ ಅವರು ಕೃಷ್ಣಾ ಕುಮಾರಿಯ ಪ್ರಸ್ತಾವನೆಯಾಗಿ ["ತನುವಿಲ್ಲದಲ್ಲಿ ಪ್ರಾಣ ಪ್ರತಿಷ್ಠೆಯನ್ನು" ಮಾಡುವದೇ ಕವಿಕುಂಜರರ ಕಾರ್ಯವೆಂದು ಹದಿನೇಳನೆಯ ಶತಮಾನದ ಗೋವಿಂದನೆಂಬ ಕವಿಯು ತನ್ನ ಬಂಧುಗಳಿಗೆ ಸನದನ್ನು ಕೊಟ್ಟಿರುವನು] ಇಂತಹ ಕಾವ್ಯಸತ್ವ ಕಾರ್ಯವನ್ನು ಹರಿಹರನ ಪ್ರಯೋಗ, ಲಕ್ಷ್ಮೀಶನ ಕಾವ್ಯ

ವಿನ್ಯಾಸ, ಕುಮಾರವ್ಯಾಸನ ಕಾವ್ಯಕರ್ಮ ಕ್ರಿಯೆಗಳೆಲ್ಲವೂ ಬೇಂದ್ರೆ ಅವರ ಕಾವ್ಯ ಪ್ರಯೋಗ ಪ್ರಾರಂಭಕ್ಕೆ ಪ್ರೇರಣೆಯಾಗಿವೆ. ಅದರ ಸತ್ವ ಫಲವೇ ಕೃಷ್ಣಾ ಕುಮಾರಿ.

ಹೊಸ ಮಾದರಿಗಳ ತಾತ್ವಿಕತೆ

ರೂಪಾಂತರ, ಭಾವಾಂತರ ಹಾಗೂ ಭಾಷಾಂತರಗಳೆಂಬ ಮಾರ್ಗಗಳ ಮೂಲಕ ಭಾರತೀಯ ಸಾಹಿತ್ಯ ಹಾಗೂ ಪಾಶ್ಚಾತ್ಯ ಸಾಹಿತ್ಯವು ಅಧಿಕವಾಗಿ ಪ್ರವೇಶ ಪಡೆಯಿತು. ಆ ಪ್ರವೇಶವೇ ಇಪ್ಪತ್ತನೇ ಶತಮಾನದ ಅರ್ಧಶತಮಾನಗಳ ಕಾಲ ಕನ್ನಡ ಸಾಹಿತ್ಯದ ಬೇರುಗಳನ್ನು ಗಟ್ಟಿಗೊಳಿಸಿತು. ಅದರ ಫಲವಾಗಿ ಭಾರತೀಯ ಸಾಹಿತ್ಯದಲ್ಲಿ ಪಸರಿಸಿದ್ದ ಗ್ರೀಕ್ ಸಾಹಿತ್ಯವಾಗಲಿ, ಆಂಗ್ಲ ಸಾಹಿತ್ಯವಾಗಲಿ, ಭಾರತೀಯ ಬಂಗಾಳಿ, ಹಿಂದಿ, ಮರಾಠಿ ಮೊದಲಾದ ಸಾಹಿತ್ಯಗಳು ಅನುವಾದದ ಸ್ವರೂಪದಲ್ಲೇ ರೂಪಾಂತರ ಹಾಗೂ ಭಾವಾಂತರಗೊಂಡವು. ಬೇಂದ್ರೆಯಂತಹ ಕವಿಗಳು ಆಧುನಿಕ ಕನ್ನಡ ಸಾಹಿತ್ಯದ ಮೊದಲ ಹೆಜ್ಜೆಗಳನ್ನು ಕನ್ನಡೀಕರಿಸುವ 'ಕನ್ನಡ ಸಂಸ್ಕೃತಿ'ಯ ಮಾದರಿಯಲ್ಲಿ ಹೊಸ ಮಾದರಿಯ ತಾತ್ವಿಕತೆಯನ್ನು ನಿರ್ಮಿಸಿದರು. ಅಂತಹ ದರ್ಶನವಾಗಿಯೇ 'ಕೃಷ್ಣಾ ಕುಮಾರಿ'ಯಂತಹ ಕೃತಿಯ ಫಲಶೃತಿ. ೧೯೨೯ರಲ್ಲಿ ಪ್ರಕಟವಾದ ಲೆ.ಕ. ಜೇಮ್ಸ್ ಟಾಡ್‌ರ ಇಂಗ್ಲಿಷ್ ಪುಸ್ತಕ Annals and Antiquities of Rajasthan ಮತ್ತು ೧೮೮೬ರಲ್ಲಿ ಪ್ರಕಟವಾದ ಚ. ವಾಸುದೇವಯ್ಯ ಅವರ ಆರ್ಯಕೀರ್ತಿ ಕೃತಿಗಳ ಅಧ್ಯಯನದೊಂದಿಗೆ ಕಥೆಯನ್ನು ಸ್ವೀಕರಿಸಿದ್ದಾರೆ. ಈ ಕಥೆಗಳ ರೂಪಾಂತರ ಪದ್ಯಗಳಲ್ಲಿ ಮೂಲ ಕಥೆಯ ಕೊನೆಯ ಭಾಗವು ಬೇಂದ್ರೆ ಅವರಿಗೆ ಕಥಾವಸ್ತು. ತನ್ನಿಷ್ಟದ ಜೈಮಿನಿಭಾರತದ ಲಕ್ಷ್ಮೀಶನ ಕಾವ್ಯ ಶೈಲಿಯೂ, ಆರ್ಯಕೀರ್ತಿ ಕೃತಿಯ ಗದ್ಯ ಶೈಲಿಯೂ, ಬೈರನ್, ಬ್ರೌನಿಂಗ್ ಪರಂಪರೆಯ ವಿಚಾರ ತತ್ವವೂ ಹೊಸ ಮಾದರಿಗೆ ಕಾಣ್ಕೆಯಾಗಿದೆ. ಮುಂದೆ ಮೇಘದೂತದ ಕನ್ನಡೀಕರಣದಲ್ಲಿ ಬೇಂದ್ರೆ ಅವರು ತಮ್ಮ ಅನುವಾದ ಶೈಲಿಯ ಹೊಸ ತಾತ್ವಿಕತೆಯನ್ನು ನಿರೂಪಿಸಿದ್ದಾರೆ.

ಕೃಷ್ಣಾ ಕುಮಾರಿ ಎಂಬ ಬೇಂದ್ರೆಯವರ ಮೊದಲ ಪ್ರಯೋಗ

'ಕೃಷ್ಣಾಕುಮಾರಿ'ಯ ಪ್ರಸ್ತಾವನೆಯಲ್ಲಿ "ನೃಪತುಂಗದೇವನು ತೋರಿಸಿಕೊಟ್ಟ ರಾಜಮಾರ್ಗದಲ್ಲಿ ನಾನು ದಟ್ಟಡಿಯಿಡಹತ್ತಿರುವೇನೋ ಇಲ್ಲವೋ ಅದನ್ನು ರಸಿಕರೇ ಹೇಳಬಲ್ಲರು." ಕವಿರಾಜಮಾರ್ಗದ ಹಾದಿಯನ್ನು ಮುಂದುವರೆಸುವ ಕಾವ್ಯ ತಾತ್ವಿಕತೆಯನ್ನು ದ. ರಾ. ಬೇಂದ್ರೆ ಅವರು ಸಹೃದಯರ ವಿಮರ್ಶೆಯ ನಿರೀಕ್ಷೆಯಂತೆ

ಸೂಚಿಸಿದ್ದಾರೆ. ಕನ್ನಡ ಸಾಹಿತ್ಯದ ಹೊಸ ಪ್ರಯೋಗಗಳ ಸ್ವೀಕಾರದ ಸಂದರ್ಭವದು. ಕಾವ್ಯವು ಕವನದ ಆಯಾಮವನ್ನು ಪಡೆಯುವ ಮುನ್ನ ಖಂಡ ಕಾವ್ಯದ ಸ್ವರೂಪಕ್ಕೆ ಹೆಜ್ಜೆಯಿಟ್ಟಿತು. ಈ ಕೃಷ್ಣಾ ಕುಮಾರಿಯು ಕೂಡ ಖಂಡಕಾವ್ಯದ ಮೊದಲ ಪ್ರಯೋಗವಾಗಿದೆ. ಕಾವ್ಯ ಪರಂಪರೆಯಿಂದ ಬಂದ ಭಾರತೀಯ ಸಾಹಿತ್ಯಕ್ಕೆ ಕವನವು ಹೊಸ ಪ್ರವೇಶವೇ ಆಗಿತ್ತು. ಕಾವ್ಯ ಪರಂಪರೆಯಿಂದ ಕವನ ಶೈಲಿಗೆ ಬದಲಾವಣೆಗಳನ್ನು ತಂದುಕೊಳ್ಳಲು ಖಂಡ ಕಾವ್ಯದ ಪ್ರವೇಶವೂ ಅನಿವಾರ್ಯವಾಗಿತ್ತು. ಇಂತಹ ಸಂದರ್ಭದಲ್ಲಿ ಪ್ರಾರಂಭದ ಕವಿಗಳು ಖಂಡ ಕಾವ್ಯಗಳನ್ನು ರಚಿಸಿದರು. ಸಂಸ್ಕೃತ ಸಾಹಿತ್ಯದಲ್ಲಿ ಈಗಾಗಲೇ ಬೃಹತ್ತಾಗಿ ಬೆಳೆದಿದ್ದ ಖಂಡ ಕಾವ್ಯ ಪರಂಪರೆಯು ಕನ್ನಡಕ್ಕೆ ಹೊಸತಾಗಿಯೇ ಮೂಡಿಬಂದಿತು. ಇದನ್ನು ಶೈಲಿಯ ಪರಿವರ್ತನಾ ಸೇತುವೆಯೆಂದು ಸೂಚಿಸಬಹುದು.

ಬೇಂದ್ರೆ ಅವರು ಷಟ್ಪದಿಯ ಹೊಸ ಪ್ರಯೋಗವನ್ನು ಸೂಚಿಸುವಾಗ ಲಕ್ಷ್ಮೀಶನ ವಾರ್ಧಕ ಷಟ್ಪದಿಯನ್ನು ಅನುಸರಿಸುತ್ತಲೇ ಹೊಸ ಮಾದರಿಗಳಿಗೆ ತೆರೆದುಕೊಳ್ಳುತ್ತಾ ಷಟ್ಪದಿಯನ್ನು ಸ್ವರೂಪಗೊಳಿಸಿದ್ದಾರೆ. ಇಪ್ಪತ್ತು ಗಣಗಳ ಸೂತ್ರವನ್ನು ಅನುಸರಿಸುತ್ತಲೇ ಮೂರು ಮತ್ತು ಆರನೇ ಸಾಲಿನ ಮೂವತ್ತು ಗಣಗಳ ಮಾತ್ರಕೆಯನ್ನು ಮೀರುವ ಮೂಲಕ ಹೊಸ ಸ್ವರೂಪಕ್ಕೆ ನಾಂದಿ ಹಾಡಿದರು. ಮುಂದೆ ಉಯ್ಯಾಲೆ ಸಂಕಲನದಲ್ಲಿ ಅಷ್ಟಷಟ್ಪದಿಯ ಪ್ರಯೋಗವನ್ನೂ ಕಾಣಬಹುದು. ಇಲ್ಲಿ ವಾರ್ಧಕ ಷಟ್ಪದಿಯ ಪ್ರಯೋಗವಾಗಲೀ, ಕಾವ್ಯದಲ್ಲಿ ಬಳಸಿರುವ ಶಬ್ದ ಬಳಕೆಯಾಗಲೀ, ಆಡಂಬರವಾಗದೆ ಸಹಜವಾಗಿದೆ. ಎಸ್. ಅನಂತನಾರಾಯಣ, ಜಿ.ಎಸ್ ಆಮೂರ ಇವರೆಲ್ಲಾ ಸೂಚಿಸುವ ಕೃಷ್ಣಾ ಕುಮಾರಿಯೊಳಗಿನ 'ದೋಷ' ಎಂಬುದನ್ನು ಬೇಂದ್ರೆ ಅವರ ಮುಂದಿನ ಸಂಕಲನಗಳ ಪ್ರಯೋಗವನ್ನೂ, ಹೊಸಮಾದರಿಯ ಕಥನ ಶೈಲಿಯನ್ನು ಸೂಚಿಸುತ್ತಾ ತಿರಸ್ಕರಿಸುತ್ತಿದ್ದೇನೆ. ಕೃಷ್ಣಾ ಕುಮಾರಿಯು ಆಯ್ಕೆಯ ಪೂರ್ಣ ಕಥೆಯಲ್ಲ. ಕವಿಯೇ ಸೂಚಿಸುವಂತೆ ಮೂಲದ ಅಂತಿಮಭಾಗವಷ್ಟೇ. ಒಂದೇ ಸನ್ನಿವೇಶದಲ್ಲಿ ಮಿಂಚಿ ಮರೆಯಾಗುವ ಬದುಕಿನ ಅರ್ಥಪೂರ್ಣ ಭಾಗ. ಆದರೆ ಆ ಭಯಾನಕತೆಯು ಹೊಂದುವ ಸೌಂದರ್ಯ ಸೌಮ್ಯ ಗುಣವು ಇಲ್ಲಿ ಪ್ರಕಟವಾಗಿದೆ.

ಕಥನದೊಳಗೆ ತೋರಿದ ಮೌಲ್ಯಗಳು

ಕೃಷ್ಣಾ ಕುಮಾರಿಯು ತನ್ನ ಸೌಂದರ್ಯವನ್ನು ತಾನೇ ಬಲಿಕೊಡುವ ಆತ್ಮ ನಿರ್ವಾಣದ ಕಥೆ ಇಲ್ಲಿದೆ. ಕೃಷ್ಣಾ ಕುಮಾರಿಯ ಪೂರ್ವ ಜೀವನದ ಕಥೆಯು

ಇಲ್ಲಿಲ್ಲ. ಬೇಂದ್ರೆ ಭಾವುಕ ಕವಿ. ಭಾವನೆಗಳನ್ನು ಅತ್ಯಂತ ಮೌಲ್ಯಯುತವಾಗಿ ಸಂಕಲಿಸಬಲ್ಲರು. ವಿರಹವನ್ನೂ, ಪ್ರೇಮವನ್ನೂ ಅತ್ಯಂತ ಬೌದ್ಧಿಕವಾಗಿ ಹೆಣೆಯಬಲ್ಲರು. ಬೇಂದ್ರೆಯವರ ಸಮಗ್ರ ಔದುಂಬರಗಾಥವನ್ನು ಅಧ್ಯಯನ ಮಾಡಿದಾಗ ನವರಸಗಳನ್ನೂ ತನ್ನ ಕಾವ್ಯ ಶಕ್ತಿಯಾಗಿಸಿಕೊಂಡಿರುವ ಕವಿಗೆ ಭಕ್ತಿಯೆಂಬ ಹೊಸ ರಸಭಾವದ ಸಂಯೋಗವು ಕವಿತೆಗಳ ಮೂಲ ಶಕ್ತಿಯಾಗಿರುವುದನ್ನು ಗಮನಿಸಬಹುದು.

ಕವಿ ಭಾವ ಪೂರ್ಣ ಸಾರದೊಂದಿಗೆ ಭಾವಗೀತೆಯ ತಾತ್ವಿಕತೆಯನ್ನು ಕವಿತೆಯ ಮೂಲ ಚೈತನ್ಯವಾಗಿಸಿಕೊಂಡಿದ್ದಾರೆ. "ಅಂಬಿಕಾತನಯದತ್ತರ ಕಲ್ಪನೆಯ ಭಾವಗೀತವು ಭಾವ–ಬುದ್ಧಿಗಳ ಸಂಗಮವನ್ನು ಬಯಸುವಂಥದಾದ್ದರಿಂದ ಬರಿಯ 'ಭಾವನಿರ್ಭರತೆಯಾಗಲಿ, ವಿಚಾರಾವೇಶವಾಗಲಿ ಅವರ ಲಕ್ಷ್ಯವಾಗಲಿಲ್ಲ. ಈ ಎಲ್ಲಾ ಉದಾಹರಣೆಗಳು ಬೇಂದ್ರೆ ಕಾವ್ಯ ಸೃಷ್ಟಿಯ ಇನ್ನೊಂದು ಪವಾಡದ ಮೇಲೂ ಬೆಳಕು ಚೆಲ್ಲುತ್ತವೆ. ಅದೆಂದರೆ, ಬೇರೆ ಬೇರೆ ಮೂಲಗಳಿಂದ ಬಂದ ಪ್ರಭಾವಗಳು ಅವರ ಪ್ರತಿಭೆಯ ಮೂಸೆಯಲ್ಲಿ ಕರಗಿ ಹೇಗೆ ಹೊಸ ಆಕಾರಗಳನ್ನು ತಳೆಯುತ್ತವೆ ಎನ್ನುವುದು. ಈ ಆಕಾರಗಳು ಅಂಬಿಕಾತನಯದತ್ತರ ಸ್ವಂತದ ಸೃಷ್ಟಿಗಳೇ ವಿನಹಃ ಬೇರೆ ಕವಿಗಳಿಂದ ಪಡೆದುಕೊಂಡವುಗಳಲ್ಲ. ಇದು ಅಂಬಿಕಾತನಯದತ್ತರ ಜ್ವಲಂತ ಸೋಪಜ್ಞತೆ." ಜಿ.ಎಸ್. ಆಮೂರ ಅವರು ವಿನಯಪೂರ್ವಕ ವಿಮರ್ಶೆಯು ಸರಿ ಎನಿಸಿದೆ. ಬೇಂದ್ರೆ ಕನ್ನಡೀಕರಿಸುವ ತತ್ವವನ್ನು ಕೃಷ್ಣಾ ಕುಮಾರಿಯಿಂದಲೇ ಪ್ರಾರಂಭಿಸಿರುವುದು ವಿಶೇಷ. ಇಲ್ಲಿ ಕೃಷ್ಣಾ ಕುಮಾರಿಯು ಯೌವನ ತುಂಬಿದ ರಾಜಕುಮಾರಿ. ಇವಳ ಪ್ರೇಮವು ನಾಶವಾಗಿದೆ. ಇದೇ ಕಾರಣವು ಹಲವು ಜನರ ಹಂಬಲಕ್ಕೆ ಕಾರಣವಾಗಿದೆ. ಇದನ್ನು ಕವಿ 'ಹಲವು ಅರಸರ ಮನಸ್ಸಿನಲ್ಲಿ ಮನಸಿಜನ ದಾಳಿ' ಎಂದಿದ್ದಾರೆ. ಜಗತ್ಸಿಂಹ, ಮಾನಸಿಂಹ ಇವರಾರು ಕೂಡ ಪ್ರೇಮದ ಸ್ವರೂಪದಲ್ಲಿ ಕೃಷ್ಣಕುಮಾರಿಯನ್ನು ಕಾಣಲೇ ಇಲ್ಲ. ಎಲ್ಲರೂ ಮದುವೆಯ ನೆಪದಲ್ಲಿ ತನ್ನ ಸ್ವತ್ತಾಗಿಸಿಕೊಳ್ಳುವ ನೆಪವು ಆಕೆಯ ಸೌಂದರ್ಯಸಾಕ್ತಿ, ರಾಜ್ಯಾಸಕ್ತಿಯೇ ಆಗಿದೆ. ಈ ಸಂಪತ್ತಿನ ವ್ಯಾಮೋಹದಲ್ಲಿ ಸೌಂದರ್ಯದ ಅಳಿವು ಇಲ್ಲಿ ವಿಶೇಷವಾದುದು.

ನನ್ನ ವಿನಾಶಕ್ಕೆ ಈ ಸೌಂದರ್ಯವೇ ಕಾರಣ ಎಂದು ಭಾವಿಸಿ, ಈ ಸೌಂದರ್ಯವೇ ಈ ರಾಜ್ಯದ ಅಳಿವಿಗೂ ಕಾರಣವೆಂದು ಭಾವಿಸಿ ವಿಷ ಸೇವಿಸುತ್ತಾಳೆ. ಈ ವಿಷವನ್ನು ಸೇವಿಸುವಾಗ ನಾಲ್ಕು ಬಟ್ಟಲಿನ ಪ್ರಸಂಗವು ವಿಶೇಷವಾದುದು. ಬೇಂದ್ರೆ ಅವರೂ ಕೂಡ ನಾಲ್ಕು ಸಂಖ್ಯೆಯನ್ನು ತನ್ನ ಕಾವ್ಯ ರಂಗದಲ್ಲಿ ಮತ್ತೆಮತ್ತೆ ತಂತಿಯಂತೆ ವಿಭಿನ್ನವಾಗಿ ನುಡಿಸಿದ್ದಾರೆ. ಸೌಂದರ್ಯವೆಂಬುದು ಒಳಿತು ಕೆಡುಕಿನ

ಸ್ವರೂಪ. ಸೌಂದರ್ಯ ಕೇವಲ ನೋಡಲು, ಅನುಭವಿಸಲು ಕಾಣುವ ಸುಖಸಾರವಲ್ಲ. ಅಷ್ಟೇ ನೋವು, ಕಷ್ಟಗಳನ್ನು ಸರಳವಾಗಿ ತಂದಿಡುತ್ತದೆ. ಕೃಷ್ಣಾ ಕುಮಾರಿ ಖಂಡಕಾವ್ಯದಲ್ಲಿ ಕೃಷ್ಣಾ ಕುಮಾರಿಯ ಸೌಂದರ್ಯ ಕುರಿತು ಅಮಾವಾಸ್ಯೆಯ ದಿನದಲ್ಲಿ, ಆ ಕತ್ತಲಲ್ಲಿ, ಚಿಕ್ಕೆಗಳು ಕಪ್ಪು ಮೋಡದ ಮರೆಯಲ್ಲಿ ಅಡಗಿ, ಗುಂಪು ಸೇರಿ ನೀಡುತ್ತಿರುವ ಸೌಂದರ್ಯದ ಶಕ್ತಿಯ ವ್ಯಾಖ್ಯಾನವು ಇಂದಿಗೂ ಅರ್ಥಗಮ್ಯ. ಸೌಂದರ್ಯದ ಬೆಂಬತ್ತಿದ ಮನುಷ್ಯ ಹಾಗೂ ಉದ್ಯಮ, ನಿತ್ಯ ಬದುಕುಗಳೆಲ್ಲಾ ಈ ನುಡಿಗಳನ್ನು ತಿಳಿಯಲೇ ಬೇಕಿದೆ. ಸೌಂದರ್ಯವೆಂಬುದು ಕಟುವಿಷ, ಮೃತಗರ್ಭಬೇವು, ರತ್ನವ ಹೆಡೆಯೊಳಿಟ್ಟಿರುವ ಹಾವು ಎಂಬ ಪ್ರತಿಮೆಗಳ ಮೂಲಕ ಉಂಟಾಗುವ ಅನಾಹುತಗಳನ್ನು ವಿವರಿಸಲಾಗಿದೆ. ಪಿಯೂಷ(ಅಮೃತ), ಮಾವು, ಸುರವಂದ್ಯ ಮೊದಲಾದ ಪ್ರಿಯ ರುಚಿಗಳನ್ನು ನೀಡುವ ಭೋಗದ ಯೋಗವಾಗಿಯೂ ಕಾಣುತ್ತದೆ. ಸೌಂದರ್ಯವೆಂಬ ಅಭಿರುಚಿಯು ಅದೆಷ್ಟು ಸುಂದರವೋ ಅಷ್ಟೇ ಅಹಂಕಾರದಲ್ಲಿ ತನ್ನಾಸೆಯನ್ನು ಕೊಂದು ತಾನು ಸಾವಿಗೆ ಒಳಗಾಗುತ್ತದೆ. ಸೌಂದರ್ಯದ ವಿನಾಶವನ್ನು ಇಲ್ಲಿ ಸರಳವಾಗಿ ಸ್ಪಷ್ಟಪಡಿಸಿದ್ದಾರೆ. ಅಮಾವಾಸ್ಯೆಯ ಕತ್ತಲಿಗೂ, ಸೌಂದರ್ಯದ ಸಾವಿಗೂ ಹೊಂದಿರುವ ತಾದ್ಯಾತ್ಮ ವಿಶೇಷವಾದುದು. ಸೌಂದರ್ಯವೆಂಬುದೇ ಇಲ್ಲಿ ಸಾವಾಗಿ ಪರಿಣಮಿಸುವ ಬಗೆಗೆ ಚಿಕ್ಕೆಗಳು ನಮಸ್ಕರಿಸುತ್ತಿವೆ. ಎಷ್ಟೋ ನಮ್ಮ ಯುವತಿಯರು ತಮ್ಮ ಸೌಂದರ್ಯವೇ ತಂದ ನೋವಿಗೆ ಒಳಗಾಗಿ ಸಾವಿಗೆ ಶರಣಾಗುವ ಘಟನೆಗಳು ನಿತ್ಯವೂ ಕೇಳುತ್ತೇವೆ. ಅಂತಹ ಸಾವಿನ ಚಿತ್ರಣದ ಮನೋಸ್ಥಿತಿಯ ಅಭಿವ್ಯಕ್ತಿಯು ಈ ಕಾವ್ಯದಲ್ಲಿ ಮೂಡಿಬಂದಿದೆ. ಕವಿಯ ಅಂತರಾಳದ ಭಾವಾನ್ವೇಷಣೆಯು ಸಾವಿನ ಚಹರೆಯ ದರ್ಶನವನ್ನು ಕಾವ್ಯದಲ್ಲಿಯೇ ಬಿಂಬಿಸುವುದನ್ನು ಕಾಣಬಹುದು. ಇಲ್ಲಿ ಐದ್ಯೆದು ಷಟ್ಪದಿಗಳ ಮೂಲಕ ಕವಿ ಬೇಂದ್ರೆ ಅವರು ನಾಲ್ಕು ಬಟ್ಟಲಿನ ವಿಷದ ಸಂವೇದನೆಗಳನ್ನು ನಿರೂಪಿಸಿದ್ದಾರೆ. ಈ ವಿಚಾರವನ್ನು ಡಾ. ಜಿ.ಎಸ್.ಆಮೂರ ಅವರು ೧೯೮೯ರಲ್ಲಿ ಅತ್ಯಂತ ಅರ್ಥಪೂರ್ಣವಾಗಿ ವಿವರಿಸಿದ್ದಾರೆ.೧ ಇದೇ ತಾತ್ವಿಕತೆಯು ಜಿ. ಕೃಷ್ಣಪ್ಪ ಅವರ ಚಿಂತನೆಯಲ್ಲಿ ಹೊಸ ಬಗೆಯ ವಿಶ್ಲೇಷಣೆಗೆ ಒಳಪಡುತ್ತದೆ.೨ ಈ ಎರಡು ಬಗೆಯ ಮೌಲ್ಯಿಕ ವಿಮರ್ಶೆಗಳನ್ನು ಟಿಪ್ಪಣಿ ಮಾದರಿಯಲ್ಲಿ ಉಲ್ಲೇಖಿಸಿದ್ದೇನೆ. ಬೇಂದ್ರೆ ಬಳಸುವ ಪಂಚತತ್ವ, ಪಂಚಪ್ರಾಣಗಳು, ನಾಲ್ಕುಮುಖಗಳ ಸಾಂಕೇತಿಕ ತತ್ವಗಳು ಅವರ ಸಾಹಿತ್ಯ ರಚನೆಯ ಮೂಲನೆಲೆಯಾಗಿ ಹಲವು ಕವಿತೆಗಳಿಗೆ ಶೈಲಿ ಸ್ವರೂಪವನ್ನು ನೀಡಿದೆ. ಬೇಂದ್ರೆ ಅವರು ತಂದಿರುವ ಈ ನಕ್ಷತ್ರಮಾಲೆಯು ಕನ್ನಡಕ್ಕೆ ಹೊಸತಿರಬಹುದು. ಆದರೆ

ಇಂದಿಗೂ ಇಂತಹ ಬೌದ್ಧಿಕ ಸಾಹಿತ್ಯ ನೆಲೆಯನ್ನು ನಾವಿನ್ನು ಮೀರಲಾಗಿಲ್ಲ ಎಂಬುದೇ ಕಾಲ ವಿಸ್ಮಯದ ಕುತೂಹಲ. ಒಬ್ಬ ಶ್ರೇಷ್ಠ ಲೇಖಕನ ಬೌದ್ಧಿಕತೆಯು ಕಾಲಾತೀತವಾದುದು ಎಂಬುದಕ್ಕೆ ಇಂತಹ ಬರಹಗಳೇ ಸಾಕ್ಷಿಯಾಗಿ ನಿಲ್ಲುತ್ತವೆ.

ಕಥನವಲ್ಲವಿದು ಕಾವ್ಯರಂಗ

ಈ ಕಥೆಯೊಳಗೆ ಬಳಸುವ ಪದೋಕ್ತಿಗಳ ಶೈಲಿಯನ್ನು ಗಮನಿಸೋಣ. ಸೌಂದರ್ಯವನ್ನು ಹೋಲಿಸುವಾಗ ಅಂದದ ಐಸಿರಿಯಾಗಿ, ತುಂಬಾ ಚೆಂದದ ಮೈಸಿರಿಯಾಗಿ ಸೃಷ್ಟಿಸಿದ್ದಾರೆ. ಎರಡನೇ ಪದ್ಯದಲ್ಲಿ ಬಳಸುವ ಪದೋಕ್ತಿಗಳು ಬದುಕನ್ನು ಹಂತಹಂತವಾಗಿ ಪರಿಚಯಿಸುತ್ತವೆ. ನಮ್ಮ ಜನ್ಮಕ್ಕೆ ಬಾಲ್ಯ, ಯೌವನ, ಹೆಣ್ತನ ಇವುಗಳು ಹೊಂದುವ ಚೆಲ್ವಿಕೆಯು ಬಾಲ್ಯಕ್ಕೆ, ಸುಡುಗತೆಯು ಯೌವನಕೆ, ನಾರಿಯರ ಮಾರಿತನ ಹೆಣ್ತನಕೆ ತರುವ ಅರ್ಥಾಂತರ ನ್ಯಾಸಕ್ರಮವು ಕವಿ ಲಕ್ಷ್ಮೀಶನಿಂದಲೇ ಬಂದಿದೆ. ರಾಜ್ಯದ ಸಂಪತ್ತು, ತನ್ನ ಸಂಪತ್ತು ಒಂದೇ ಎಂಬುದಾಗಿ ತಂದು ನಿರ್ವಚಿಸುವ ಕವಿಯು ವೀರಲಕ್ಷ್ಮಿ, ವಿಜಯ ಲಕ್ಷ್ಮಿ, ಶ್ರೀಲಕ್ಷ್ಮಿ, ವಿದ್ಯಾಲಕ್ಷ್ಮಿ, ಸೌಭಾಗ್ಯಲಕ್ಷ್ಮಿಗಳೆಂದು ವಿಂಗಡಿಸಿ ಒಂದು ರಾಜ್ಯದ ಸಂಪತ್ತಿಗೆ ಸಂಕೇತಗೊಳಿಸಿದ್ದಾರೆ. ಸ್ತ್ರೀಯೊಬ್ಬಳ ಮಾನಭಂಗವಾಗಿ ನೀವೆಲ್ಲರೂ ಸಮರ್ಥವಾಗಿ ನಿಲ್ಲುವಿರೆ ಎಂದು ಪ್ರಶ್ನಿಸುತ್ತಲೇ, ಸ್ತ್ರೀ ಮಾನಭಂಗವೆಂಬುದು ಎಲ್ಲರ ಸರ್ವನಾಶವೆಂದು ಭವಿಷ್ಯ ನುಡಿದರು. ಆದರೆ ಅಧೋಮುಖದ ಜಗತ್ತಿನಲ್ಲಿ ಸ್ತ್ರೀಮಾನಭಂಗಕ್ಕೆ ಈ ಎಲ್ಲಾ ಲಕ್ಷ್ಮಿಯರೇ ಬೆಂಬಲ–ಕಾರಣವಾಗಿ ಸಮಾಜವನ್ನು ನಾಶಮಾಡುವ ಮನುಷ್ಯ ಪ್ರಕೃತಿಗೆ ಭವಿಷ್ಯವಿದೆಯೇ?

ಕೃಷ್ಣಪಕ್ಷದಲ್ಲಿ, ಕೃಷ್ಣತರ ರಾತ್ರಿ, ಕೃಷ್ಣತಮಳಾದ ಕೃಷ್ಣೆ ಕೃಷ್ಣಮುಖ, ಕೃಷ್ಣಮಯ, ಕೃಷ್ಣಹುಣ್ಣಿಮೆ, ಕೃಷ್ಣಕೀರ್ತಿ, ಕೃಷ್ಣಾರ್ಪಣಂ ಈ ಎಂಟು ಪದಗಳಲ್ಲಿ ಕಪ್ಪು ಎಂಬ ಪದವು ಎಂಟು ಅರ್ಥಗಳನ್ನು ವಿಭಿನ್ನವಾಗಿ ವಿವರಿಸಿದೆ. ರಾತ್ರಿಯ ಕತ್ತಲು, ಕಪ್ಪಾದ ಕನ್ಯೆ, ಕಪ್ಪುಮುಖ, ಕತ್ತಲ ರಾತ್ರಿ, ಕಪ್ಪಿನ ವೈಭವ, ಸಾವು ಹೀಗೆ ವಿಭಿನ್ನ ಪದೋಕ್ತಿಗಳನ್ನು ಹಂತ ಹಂತವಾಗಿ ಒಂದೇ ಷಟ್ಪದಿಯಲ್ಲಿ ತಂದಿರುವುದು ವಿಶಿಷ್ಟವೇ ಸರಿ. ವಾರ್ಧಕ ಷಟ್ಪದಿಯ ಲಕ್ಷಣದಂತೆ ದ್ವಿತಿಯಾಕ್ಷರ ಪ್ರಾಸವನ್ನು ಅನುಸರಿಸುತ್ತಾ ಪ್ರತಿಪದ್ಯಕ್ಕೆ ಸೂತ್ರೋಪಾದಿಯಲ್ಲಿ ಪದಮಾಲೆಯನ್ನು ರೂಪಿಸಿರುವುದು ಕವಿಯ ಶಕ್ತಿಯೆಂದು ಗುರ್ತಿಸಬಹುದು. ಈ ವಿಭಿನ್ನ ಓಘವು ಓದುಗನ ಕಥಾ ಅರ್ಥೈಸಿಕೊಳ್ಳುವಿಕೆಗೆ ತೊಂದರೆ ಉಂಟುಮಾಡಿರಬಹುದು. ಆದರೆ ಕಾವ್ಯಾಸಕ್ತರಿಗೆ ಇದೊಂದು ಕಾವ್ಯಕಬ್ಬವೇ ಸರಿ.

ಕಥೆಯೊಳಗೆ ತೆರೆದುಕೊಳ್ಳುವ ಕಾವ್ಯದ ಮಜಲು

ಕನ್ನಡ ಸಾಹಿತ್ಯದಲ್ಲಿ ಕೃಷ್ಣಾ ಕುಮಾರಿಯು ಒಂದು ರೂಪಾಂತರ ಕೃತಿಯಾಗಿ ಪ್ರಕಟಗೊಳ್ಳದೆ, ಸ್ವತಂತ್ರ ಕೃತಿಯಾಗಿದ್ದರೆ ಆಧುನಿಕ ಕನ್ನಡ ಸಾಹಿತ್ಯದ ಮೊದಲ ಪ್ರಕಟಿತ ಕಾವ್ಯವಾಗಿ ದೊರೆಯುತ್ತಿತ್ತು. ಇಂಗ್ಲೀಷ್ ಗೀತಗಳು ಕೃತಿಯು ಮೂರು ಸ್ವತಂತ್ರ ಕವಿತೆಗಳೊಂದಿಗೆ ಮೊದಲ ಪ್ರಕಟಿತ ಕಾವ್ಯ ಸಂಕಲನವಾಯಿತು. ಆದರೆ ಅಧ್ಯಯನ ಮುಖೇನ ಚರ್ಚಿಸುವುದಾದರೆ 'ಕೃಷ್ಣಾ ಕುಮಾರಿ' ಸಂಕಲನವು ಖಂಡಕಾವ್ಯವಾದರೂ ಅದೊಂದು ಸ್ವತಂತ್ರ ಸಂಕಲನ. ಕಥೆಯು ಹೊರಗಿನದಾದರೂ ಅದನ್ನು ಪುನರ್ ರಚಿಸಿರುವ ಬಗೆಯು ಹೊಸತು. ಆದ್ದರಿಂದ ಕನ್ನಡ ಸಾಹಿತ್ಯದಲ್ಲಿ ಕೃಷ್ಣಾ ಕುಮಾರಿ ಸಂಕಲನವು ಅತ್ಯಂತ ಸ್ವತಂತ್ರ ರಚನೆಯ ಮೊದಲ ಕಾವ್ಯವೆಂದೇ ಕರೆಯಬಹುದು. ಸಂಕಲನದಲ್ಲಿರುವ ಯಾವ ಸಾಲೂ ಕೂಡ ಅನುವಾದವಲ್ಲ. ಅದೊಂದು ಹೊಸ ಬಗೆಯ ಕನ್ನಡೀಕರಣ. ಶೈಲಿಯ ಅನುಸರಣೆಯಿದ್ದರೂ, ನಾವಿನ್ಯತೆಯ ಕಟ್ಟುವಿಕೆಯು ಛಂದೋಬಂಧದಲ್ಲಿ ಕನ್ನಡತನವಿದೆ. ಕೃಷ್ಣಾ ಕುಮಾರಿ ಸಂಕಲನಕ್ಕೆ ಈಗ ನೂರು ವರ್ಷ.

ಸೌಂದರ್ಯವೇ ಪ್ರೇಮ; ಸೌಂದರ್ಯವೇ ಸಾವು.

ಇಂದಿಗೂ ಈ ಸಾಲಿನೊಂದಿಗೆ ಸೌಂದರ್ಯ ಮತ್ತು ಪ್ರೇಮಗಳು ಸಾಗುತ್ತಿವೆ. ಪಾಶ್ಚಾತ್ಯ ಅನುಕರಣೆಯಿಂದ ಬಳಸಿ ಸ್ವದೇಶಿತನಕ್ಕೆ ತೊಡಗಿರುವ ಮನುಷ್ಯ ಸಂಸ್ಕೃತಿಯು ಸೌಂದರ್ಯದ ಹೊಸ ಆಯಾಮಗಳನ್ನು ಅನ್ವೇಷಿಸುತ್ತಿದೆ. ಸೌಂದರ್ಯ ಕೇವಲ ಗಂಡು-ಹೆಣ್ಣಿಗೆ ಸೀಮಿತವಾಗಿ ಉಳಿಯದೇ, ಎಲ್ಲರಲ್ಲೂ ಅದೊಂದು ಪ್ರದರ್ಶನ ಕಲೆಯಾಗಿ, ಅಸ್ಥಿತ್ವದ-ಗುರುತ್ವದ ಸಂಕೇತವಾಗಿ ಸೂಚಿತವಾಗುತ್ತಿದೆ. ಇಲ್ಲೆಲ್ಲಾ 'ಕೃಷ್ಣಾ ಕುಮಾರಿ'ಯು ನೀಡುವ ಬೌದ್ಧಿಕ ಪಾಠವು ಅರ್ಥಪೂರ್ಣ ಎನ್ನಬಹುದು.

ಕಾವ್ಯ ರಚನೆಯಲ್ಲಿನ ಪದೋಕ್ತಿಗಳು

ಕವಿತೆಯನ್ನು ರಚಿಸುವಾಗ ನಾವು ಅರ್ಥಕ್ಕೆ ಸೋತು, ಪ್ರಾಸಕ್ಕೆ ಜೋತು ಪದಬಳಕೆಯ ನಾವಿನ್ಯತೆಯನ್ನು ಕಳೆದುಕೊಳ್ಳುತ್ತಿದ್ದೇವೆ. ವಿಶಾಲವಾದ ಓದು, ಸ್ವೀಕರಣೆ-ಅನ್ವಯಿಕೆ ಮೊದಲಾದ ಪದಸಂಪತ್ತಿನ ಜ್ಞಾನವು ಬೇಕಾಗಿದೆ. ಶಬ್ದಕೋಶಗಳು ನಿಂತ ನೀರಾಗುತ್ತಿವೆ. ಹೊಸ ಭಾಷೆಯ ಪದಗಳೇ ನಮ್ಮ ನುಡಿಗಳನ್ನು ಕಬಳಿಸುತ್ತಿರುವಾಗ ಹೊಸಸೃಷ್ಟಿಗೆ ಜಾಗವೆಲ್ಲಿ. ಕನ್ನಡದ ಹೊಸತನಕ್ಕೆ ಯೋಗವೆಲ್ಲಿ. ಇಲ್ಲಿ ನಮ್ಮ ಭಾಷೆಯ ಬೌದ್ಧಿಕತೆಯನ್ನು ವಿಸ್ತರಿಸಿಕೊಳ್ಳಬೇಕಿದೆ.

ಅಧ್ಯಯನದ ಸಮಗ್ರೀಕರಣ

ನಮ್ಮ ಓದುಗಳು ಇಂದು ಮೂರು ಮಾದರಿಗಳಲ್ಲಿವೆ. ಸ್ವಂತವೆಂದು ಅನ್ಯ ಕೃತಿಗಳ ಪದಗಳನ್ನೇ ಹೊಸದಾಗಿ ಬಳಸಿ ಬೆಳೆಸುವ ಕ್ರಮ. ಅನ್ಯಭಾಷೆಯೊಂದಿಗೆ ಅನುವಾದ ಪ್ರಕ್ರಿಯೆ. ಸಂಪಾದನಾ ಕಾರ್ಯಗಳು. ಆದರೆ ಇಲ್ಲಿ ನಾವು ದೇಶದ, ವಿಶ್ವದ ವಿವಿಧ ಸಾಹಿತ್ಯಗಳನ್ನು ಹೇಗೆ ಅಧ್ಯಯನ ಮಾಡುತ್ತಿದ್ದೇವೆ. ನಮ್ಮ ಭಾಷೆಯ ಜನಗಳಿಗೆ ಅದನ್ನು ಹೇಗೆ ನೀಡುತ್ತಿದ್ದೇವೆ ಎಂಬುದಕ್ಕೆ ನಮ್ಮ ಕೊಡುಗೆ ಅತಿ ಕಡಿಮೆ ಎನ್ನಬಹುದು. ಈ ದೃಷ್ಟಿಯಿಂದ 'ಕೃಷ್ಣಾ ಕುಮಾರಿ' ಕೃತಿಯು ಅರ್ಥಪೂರ್ಣ ಓದುವಾಗಿ, ಹೊಸ ರಚನೆಗೆ ಮಾದರಿಯಾಗಿ ದೊರೆಯುತ್ತದೆ. ನಾಡು-ನುಡಿಯನ್ನು ವಿಶ್ವದ ಯಾವುದೇ ಕಥೆಗೆ ಅದರಲ್ಲೂ ಇತಿಹಾಸವನ್ನು ಮರೆಯುತ್ತಿರುವ ಕಾಲದಲ್ಲಿ ಹಲವು ಘಟನೆಗಳು ಎಷ್ಟೆಲ್ಲಾ ಪೂರಕವಾಗಿ ಸಾಮಾಗ್ರಿಯನ್ನು ಒದಗಿಸಬಲ್ಲವು ಎಂಬುದನ್ನು ಅರಿಯಬೇಕಿದೆ. ಅಧ್ಯಯನಶೀಲರಾದ ನಾವು ಈ ದಿಕ್ಕಿನಲ್ಲಿ ಸಾಗಬೇಕಿದೆ.

ಟಿಪ್ಪಣಿಗಳು

೧. ಜಿ.ಎಸ್. ಆಮೂರ; ಕೃಷ್ಣಾ ಕುಮಾರಿ : ಪ್ರೇಮದರ್ಶನದ ತಿರುಳು(ಕೃಷ್ಣಾ ಕುಮಾರಿ_೧೯೯೦ರ ಕೃತಿಯಲ್ಲಿ ಸೇರ್ಪಡೆ ಲೇಖನ)

"ಸಾವನ್ನು ಬರಮಾಡಿಕೊಳ್ಳಲು ಕೃಷ್ಣಾ ಕುಮಾರಿ ನಡೆಯಿಸುವ ಮೊದಲನೆಯ ಮೂರು ಪ್ರಯತ್ನಗಳು ಯಶಸ್ವಿಯಾಗುವುದಿಲ್ಲ. ಆದರೆ ಇವು ಅವಳ ಆಧ್ಯಾತ್ಮಿಕ ಪ್ರಯಾಣದ ಹಂತಗಳನ್ನು ಸೂಚಿಸುತ್ತ ಹೋಗುವುದರಿಂದ ನಿರರ್ಥಕವೆನಿಸುವುದಿಲ್ಲ.

ವಿಷದ ಮೊದಲನೆಯ ಬಟ್ಟಲನ್ನು ಎತ್ತುವಾಗ ಕೃಷ್ಣೆಯಲ್ಲಿ ತಮೋವಿಕಾರಗಳು ಪ್ರಬಲವಾಗುತ್ತವೆ. ದುಃಖದಲ್ಲಿ ಅವಳು ತನ್ನ ಜನ್ಮ, ಬಾಲ್ಯ, ಯೌವನ, ಹೆಣ್ಣನ, ಬಾಳ್ವಿಕೆ, ಚೆಲುವುಗಳನ್ನು ಹಳಿಯುತ್ತಾಳೆ, ನಾರಿಯರ ಮಾರಿತನಕ್ಕೆ, ನರರ ಬೆದಿಗುದಿಗೆ, ಷಂಡಗಂಡಸುತನಕ್ಕೆ, ಹತವೀರ್ಯ ಜನತೆಗೆ ರಾಜಪುತ್ರರ ಕುಲಕ್ಕೆ ಛೀ ಹಾಕುತ್ತಾಳೆ. ಕಳೆದುಹೋದ ಮೌಲ್ಯಗಳಿಗಾಗಿ ಪರಿತಪಿಸುತ್ತಾಳೆ. ತನ್ನ ಸಂಕಟಕ್ಕೆ ಕಾರಣರಾದ ಎಲ್ಲರನ್ನೂ ಶಪಿಸುತ್ತಾಳೆ. ಸ್ತ್ರೀಯ ಮಾನಭಂಗವಾದ ಸ್ಥಳದಲ್ಲಿ ಲಕ್ಷ್ಮಿಯರು ಇರಕೂಡದೆಂದು ಹಟಹಿಡಿ ಯುತ್ತಾಳೆ,

ಮೊದಲನೆಯ ಬಟ್ಟಲು ಪ್ರಾಣಾಗ್ನಿಗೆ ಆಹುತಿಯಾಗುತ್ತದೆ. ಮುಂದೆ ತಂದಿಟ್ಟ ಎರಡನೆಯ ಬಟ್ಟಲನ್ನು ನೋಡಿದಾಗ ಕುಮಾರಿಯ ರಾಜಸಾಂತ ಕರಣ ಕೆರಳುತ್ತದೆ.

ಮಿಂಚಿ ಹೋದದ್ದನ್ನು ಚಿಂತಿಸುವುದೇಕಿನ್ನು?

ಸಂಚಿತದೊಳಿದ್ದುದನು ವಂಚಿಸುವರಾರೀ ವಿರಿಂಚಿಯ ಪ್ರಪಂಚದಲ್ಲಿ?

ಎಂದು ತನ್ನ ಕರ್ಮಫಲವನ್ನು ಅನುಭೋಗಿಸುವುದಕ್ಕೆ ಅವಳು ಸಿದ್ಧಳಾಗುತ್ತಾಳೆ.

ಆದರೆ ಎರಡನೆಯ ಬಟ್ಟಲು ಪ್ರಾಣಶಕ್ತಿಗೆ ತೀರ್ಥವಾಗುತ್ತದೆ. ಸಾವು ಬರುವುದಿಲ್ಲ. ಮೂರನೆಯ ಬಟ್ಟಲನ್ನೆತ್ತುವಾಗ ಕುಮಾರಿಯಲ್ಲಿ ಸಾತ್ವಿಕಬುದ್ಧಿಯ ಪ್ರವೃತ್ತಿಯಾಗುತ್ತದೆ. ಅಂತಃಕರಣ ಶುದ್ಧಿ ದೊರೆತು ಕರ್ತವ್ಯ ಬುದ್ಧಿಯಿಂದ ಸಾವನ್ನು ಅವಳು ಒಪ್ಪಿಕೊಳ್ಳುತ್ತಾಳೆ. ಕಳೆದು ಹೋಗಲಿ ಕಾಳರಾತ್ರಿ ಈ ಕಾಳು ವಿಷ, ಕಾರೊಡಲ ಹಾಳಿನಲ್ಲಿ' ಎಂದು ಕತ್ತಲೆಯ ಜಗತ್ತಿನಿಂದ ಪಾರಾಗಿ ಏಕಲಿಂಗನಿಗೆ ತನ್ನ 'ಶರಣಜೀವ'ವನ್ನು ಅರ್ಪಿಸಿಕೊಳ್ಳುತ್ತಾಳೆ.

ಮೂರನೆಯ ಬಟ್ಟಲು 'ಪ್ರಾಣೇಶ್ವರನಿಗೆ ಪ್ರಸಾದ'ವಾಗಲು ನಿಸ್ತ್ರೈಗುಣ್ಯದ ಸ್ಥಿತಿಯನ್ನು ಅವಳು ತಲಪುತ್ತಾಳೆ. ನನ್ನಿ, ನಿಷ್ಕಾಮ, ಆತ್ಮಸ್ಥೈರ್ಯ ಪ್ರೇಮ, ಭಕ್ತಿ- ಈ ಪಂಚತತ್ವಗಳಿಗೆ ತನ್ನ ಪಂಚಪ್ರಾಣಗಳನ್ನು ಸಮರ್ಪಿಸಿ ಕೃತಕೃತ್ಯಳಾಗುತ್ತಾಳೆ. ತಾಯಿ, ತಂದೆ, ತಾಯ್ನಾಡು, ಸತ್ಯ, ಈಶ್ವರ ಇವರು ಈ ಐದು ತತ್ವಗಳ ಸಂಕೇತಗಳು, ಕುಮಾರಿಯ ಒಂದೊಂದು ಅವಸ್ಥೆಯನ್ನೂ ಐದೈದು ಷಟ್ಪದಿಗಳಲ್ಲಿ ಕವಿ ವರ್ಣಿಸಿದ್ದಾರೆ. ಕೃಷ್ಣಾ ಕುಮಾರಿಯ ಸಾವಿನ ಪ್ರತಿಕ್ರಿಯೆಗಳಲ್ಲಿಯೂ ಇದೇ ಬಗೆಯ ಸಾಂಕೇತಿಕತೆಯಿದೆ. ತಾಯಿ ಅಂತಃಕರಣದ ಅಧಿದೇವತೆ; ತಂದೆ ಬುದ್ಧಿ ಪ್ರಧಾನ, ಜಗತ್ಸಿಂಹನದು ಸತ್ಯಪ್ರವೃತ್ತಿ, ಮಾನಸಿಂಹ ರಜೋವಿಶಿಷ್ಟ, ಅಮೀರಖಾನ್ ತಮೋಗುಣಿ, ಪ್ರತಿಯೊಬ್ಬನ ಪ್ರತಿಕ್ರಿಯೆ ಅವನ ಪ್ರಕೃತಿಗೆ ಅನುಗುಣವಾಗಿ ಬಂದಿದೆ." ಇದೇ ವಿಚಾರವನ್ನು ಅತ್ಯಂತ ಸಂಕ್ಷಿಪ್ತವಾಗಿ ಡಾ. ಜಿ. ಕೃಷ್ಣಪ್ಪ ಅವರು ಅತ್ಯಂತ ಅರ್ಥಪೂರ್ಣವಾಗಿ ವಿವರಿಸಿದ್ದಾರೆ.

೨. ಡಾ. ಜಿ. ಕೃಷ್ಣಪ್ಪ; ಕೃಷ್ಣಾ ಕುಮಾರಿಗೆ ನೂರರ ಸಂಭ್ರಮ.(ಪ್ರಜಾವಾಣಿ ಲೇಖನ)

"ಹೆಣ್ಣಿನ ಸೌಂದರ್ಯ ಅಮೃತ, ಮಾವು, ಕಾಮಧೇನು. ಅಂದವೇ ಅದರ ಐಸಿರಿ. ಆ ಪವಿತ್ರಾತ್ಮಳನ್ನು ಕುಟುಂಬ ಮತ್ತು ಸಮಾಜ ಉತ್ತಮವಾಗಿ ಕಂಡು ಪೋಷಿಸದಿದ್ದರೆ ಆಕೆ ಕಟುವಿಷ, ಬೇವು, ಹಾವು ಆಗುತ್ತಾಳೆ ಎಂಬ ಚಿಂತನೆಯನ್ನು ಸಾರಿದ್ದಾರೆ.

ಕೃಷ್ಣಾ ಕುಮಾರಿಯು ವಿಷದ ಮೊದಲ ಬಟ್ಟಲನ್ನು ಕುಡಿಯುವಾಗ ತಮೋವಿಕಾರಗಳು ಪ್ರಬಲವಾಗುತ್ತವೆ. ಆಗ ಅವಳು ತನ್ನ ಜನ್ಮ, ಬಾಲ್ಯ, ಯೌವನ, ಹೆಣ್ತನ, ಚೆಲುವನ್ನು ನೆನೆದು ನೋಯುತ್ತಾಳೆ. ಕನ್ಯೆಯಾದ ತನ್ನನ್ನು ರಕ್ಷಿಸಲಾಗದ ರಾಜಪುತ್ರ ಕುಲದ ಷಂಡ ಗಂಡಸುತನಕ್ಕೆ 'ಥೂ' ಎನ್ನುತ್ತಾಳೆ.

ವಿಷದ ಎರಡನೇ ಬಟ್ಟಲನ್ನು ಕುಡಿಯುವಾಗ ರಜೋಗುಣಗಳು ಮೇಲೆದ್ದು ಬರುತ್ತವೆ. 'ಗರ್ವದಿಂದಿರಾಗು ಕ್ಷತ್ರಿಯನ ಪ್ರೇಮದ ಪುತ್ರಿ' ಎಂದು ಸಾವನ್ನು ಎದುರಿಸಲು ಸಿದ್ಧಳಾಗುತ್ತಾಳೆ. ವಿಷದ ಮೂರನೇ ಬಟ್ಟಲನ್ನು ಕುಡಿಯುವಾಗ ಸಾತ್ವಿಕ ಬುದ್ಧಿಯು

ಪ್ರಬಲವಾಗುತ್ತದೆ. 'ಸಾಯುವೆನು ಸಂತೋಷದಿಂದ' ಎಂದು ತೀರ್ಮಾನಿಸುತ್ತಾಳೆ. ಅವಳು ದೇವಸ್ವರೂಪರಾದ ತಾಯಿ ತಂದೆಯರಿಗೆ, ನಾಡಿಗೆ, ಸತ್ಯ ಸ್ವರೂಪದ ಪ್ರೇಮಕ್ಕೆ, ಈಶ್ವರನಿಗೆ ಪಂಚಪ್ರಾಣಗಳನ್ನು ಅರ್ಪಿಸಿದಳು ಎಂದು ಕವಿ ಬಣ್ಣಿಸಿದ್ದಾರೆ."

ಗ್ರಂಥ ಋಣ

೧. ಅಂಬಿಕಾತನಯ ದತ್ತರ ಕೃಷ್ಣಾ ಕುಮಾರಿ., (ಸಂ) ವಾಮನ ಬೇಂದ್ರೆ., ೧೯೨೨.,೧೯೯೦., ಅಂಬಿಕಾತನಯದತ್ತ ವೇದಿಕೆ, ಶ್ರೀಮಾತಾ ಪ್ರಕಾಶನ, ಧಾರವಾಡ

೨. ಜಿ. ಕೃಷ್ಣಪ್ಪ., ಕೃಷ್ಣಾ ಕುಮಾರಿಗೆ ನೂರರ ಸಂಭ್ರಮ., ಪ್ರಜಾವಾಣಿ ೨೪, ಏಪ್ರಿಲ್ ೨೦೨೨

೩. ದ. ರಾ. ಬೇಂದ್ರೆ., ವಾಮನ ಬೇಂದ್ರೆ(ಸಂ)., ೨೦೧೧., ಔದುಂಬರ ಗಾಥೆ ವರಕವಿ ಡಾ॥ ದ. ರಾ. ಬೇಂದ್ರೆಯವರ ಸಮಗ್ರ ಗದ್ಯ ಸಾಹಿತ್ಯ, ಸಾಹಿತ್ಯ ಯೋಗ : ಭಾಗ ೨ ಸಂಪುಟ ೧೪., ವರಕವಿ ಡಾ॥ ದ. ರಾ. ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳಿ.

೪. ರಂ. ಶ್ರೀ ಮುಗಳಿ., ಬೇಂದ್ರೆ ಕಾವ್ಯ., ೧೯೮೬, ೨೦೧೧., ಅಭಿನವ ಪ್ರಕಾಶನ, ಬೆಂಗಳೂರು.

೫. ಜಿ. ಕೃಷ್ಣಪ್ಪ., ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ., ೨೦೦೧,೨೦೦೨., ಕಾಮಧೇನು ಪ್ರಕಾಶನ, ಬೆಂಗಳೂರು.

೬. ಜಿ. ಕೃಷ್ಣಪ್ಪ., ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ: ಒಂದು ಅಧ್ಯಯನ., ೨೦೦೧, ೨೦೦೨., ಕಾಮಧೇನು ಪ್ರಕಾಶನ, ಬೆಂಗಳೂರು.

ಗಮಕದಲ್ಲಿ ವಾಚನ-ವ್ಯಾಖ್ಯಾನಕಾರನ ಪ್ರಾಮುಖ್ಯತೆ

ಡಾ. ಪಾವಗಡ ರೇಣುಕಾಪ್ರಸಾದ್ ಪಿ.ಆರ್

ಸಂಗೀತಂ ಅಥಸಾಹಿತ್ಯಂ ಸರಸ್ವತ್ಯಾಃ ಸ್ತನದ್ವಯೇಮ್।
ಏಕಂ ಆಪಾತಮಧುರಂ ಅನ್ಯಾತ್ ಆಲೋಲಪಸಾಮೃತಮ್॥

ಸಂಗೀತ ಮತ್ತು ಸಾಹಿತ್ಯ ಪರಸ್ಪರ ಆಶ್ರಯ ಗುಣಗಳನ್ನು ಹೊಂದಿವೆ. ಸಂಗೀತವು ಹಲವು ವಿಧಗಳಲ್ಲಿ ಗೋಚರವಾಗುತ್ತವೆ. ಅದರಲ್ಲಿ ಗಮಕ ಸಂಗೀತವು ಒಂದು ಇದು ಸಂಗೀತದ ಜೀವ ಸ್ವರವನ್ನು ಪಡೆದುಕೊಂಡು ಸ್ವತಂತ್ರವಾದ ರೀತಿಯಲ್ಲಿ ನೆಲೆನಿಂತಿದೆ. ಸಂಗೀತದಲ್ಲಿ ಶಾಸ್ತ್ರಬದ್ಧವಾಗಿ ಕೀರ್ತನೆಗಳನ್ನು ಹಾಡುವ ಒಂದು ವಿಧಾನವಾದರೆ, ದೇವರನಾಮಗಳನ್ನು ಹಾಡುವುದು ಮತ್ತೊಂದು ವಿಧ. ಸುಳಾದಿ ಉಗಾಭೋಗ ಇದರೊಂದಿಗೆ ಆಧುನಿಕ ಕಾಲದ ಭಾವಗೀತೆಗಳ ಗಾಯನವು ಸಂಗೀತ ಕ್ಷೇತ್ರದಲ್ಲಿ ಕಾಣಿಸಿಕೊಂಡಿವೆ. ಇದರೊಂದಿಗೆ ಕೊಂಚ ವಿಭಿನ್ನ ಹಾಗೂ ವಿಶೇಷವಾಗಿ ಕಾಣುವುದು ಗಮಕ ಕಲೆಯಾಗಿದೆ. ಗಮಕ ಕಲೆಯ ಪ್ರಾಚೀನತೆಯನ್ನು ಲವಕುಶರ ರಾಮಾಯಣ ವಾಚನದಿಂದ ಗುರುತಿಸುತ್ತಾರೆ. ಅನೇಕ ರಾಜರ ಆಸ್ಥಾನಗಳಲ್ಲಿ ಗಮಕಿ ಸ್ಥಾನವನ್ನು ಪಡೆದಿದ್ದನೆಂಬುದು ನಮಗೆ ಶಾಸನ ಕಾವ್ಯಗಳ ಮುಖೇನ ಗೊತ್ತಾಗುತ್ತದೆ. ಕವಿ ವಾದಿ, ವಾಗ್ಮಿ ಇದರೊಂದಿಗೆ ಗಮಕಿಗೂ ಸಹ ಗೌರವವನ್ನು ರಾಜಮಹಾರಾಜರು ನೀಡಿದ್ದರು ಎಂಬುದಕ್ಕೆ ಅನೇಕ ಉದಾಹರಣೆಗಳಿವೆ. ಗಮಕಿ ಸಾಹಿತ್ಯ ಆರಾಧಕ ಕವಿಯ ಬರವಣಿಗೆಯನ್ನು ಶ್ರವ್ಯರೂಪಕ್ಕೆ ಬದಲಾಯಿಸಿ, ಶ್ರೋತೃಗಳ ಕಿವಿಗಳಿಗೆ ಆಪ್ಯಾಯಮಾನವಾಗುವಂತೆ ಮಾಡುವ ಕಲೆಗಾರಿಕೆ ಅವನದಾಗಿರುತ್ತಿತ್ತು. ಹೀಗಾಗಿ ಗಮಕಿ ಕವಿಯ ಸಹೃದಯತೆ ಕೇಳುಗನ ಸಹೃದಯತೆ ಎರಡನ್ನು ತನ್ನ ಸಹೃದಯತೆಯೊಂದಿಗೆ ಬೆಸೆಸಿ ಕಾವ್ಯದ ರಸಭಾವವನ್ನು ಜೀವಂತಗೊಳಿಸುತ್ತಾನೆ. ಇಂತಹ ಪ್ರಾಚೀನ ಗಮಕ ಕಲೆ ಕರ್ನಾಟಕದಲ್ಲಿ ಕಾಲದಿಂದ ಕಾಲಕ್ಕೆ ಹೊಸ ಹೊಸ ರೂಪಗಳನ್ನು ಪಡೆದುಕೊಂಡು ಜೀವಂತವಾಗಿ ಕಂಗೊಳಿಸುತ್ತಿದೆ.

ಗಮಕವೆಂಬುದು ಜನಸಮುದಾಯಕ್ಕೆ ಸಾಹಿತ್ಯದ ಪರಿಚಯವನ್ನು ಸಂಗೀತದ ಮುಖೇನ ತಲುಪಿಸುವುದರ ಸಾಧನ. ಇದನ್ನು "ಕಾವ್ಯಗಾಯನ ಕಲೆ" ಎಂದು ಕರೆಸಿಕೊಂಡರು. ಇತ್ತೀಚಿನ ದಿನಗಳಲ್ಲಿ ಗಮಕವಾಚನ ಮತ್ತು ವ್ಯಾಖ್ಯಾನ ಎಂದು ಬದಲಾವಣೆ ಹೊಂದಿದೆ. ಗಮಕ ಕಲೆಯು ಹಳಗನ್ನಡ ಮತ್ತು ನಡುಗನ್ನಡ

ಕಾವ್ಯಾಭಿಮಾನಿಗಳಿಗೆ ಹೆಚ್ಚು ಪ್ರಯೋಜನ ಕಾರಿಯಾಗಿದೆಯೆಂದು ಹೇಳಬಹುದು. ಏಕೆಂದರೆ ಹಳಗನ್ನಡ ಕವಿಗಳು ಬರೆಯುತ್ತಿದ್ದ ಕಾವ್ಯದ ಪದ್ಯಗಳನ್ನು ಪದವಿಭಾಗ ಮಾಡಿ ಅರ್ಥಕ್ಕೆ ಅನುಗುಣವಾಗಿ ರಾಗ ಸಂಯೋಜನೆಯೊಂದಿಗೆ ಭಾವವನ್ನು ಸಮರ್ಥವಾಗಿ ಕೇಳುಗನಿಗೆ ತಲುಪಿಸುವ ಜವಾಬ್ದಾರಿ ಯನ್ನು ಗಮಕಿ ಮಾಡುತ್ತಾ ಬಂದಿದ್ದಾನೆ. ಒಂದು ಪದ್ಯದಿಂದ ಮತ್ತೊಂದು ಪದ್ಯವನ್ನು ವಾಚಿಸಲು ಅದರ ಭಾವ ಮತ್ತು ಸಂದರ್ಭಗಳು ಬದಲಾದಾಗ ಗಮಕಿಗೆ ಕೆಲವು ಕ್ಷಣಗಳ ಸಮಯಾವಕಾಶ ಅವಶ್ಯಕವಾಗಿರುತ್ತದೆ. ಇದರೊಂದಿಗೆ ಹಳಗನ್ನಡದ ಕವಿಗಳ ಪದವಿಶೇಷತೆ ಅರ್ಥಶಕ್ತಿ ಮತ್ತು ಧ್ವನಿ ಶಕ್ತಿಯನ್ನು ಗಮಕಿ ವಾಚನದ ಮುಖೇನ ತಲುಪಿಸಿದ್ದರೂ ಕೇಳುಗರಿಗೆ ವಾಚ್ಯಾರ್ಥದ ಮತ್ತಷ್ಟು ವಿವರಗಳು ಅವಶ್ಯಕವಾದವು. ಇದನ್ನು ಗಮಕಿಗಳು ಗಮನಿಸಿ ಈ ಕೊರತೆಯನ್ನು ನೀಗಿಸಲು ವ್ಯಾಖ್ಯಾನಕಾರರು ಗಮಕ ಕಾರ್ಯಕ್ರಮದಲ್ಲಿ ಸಂಯೋಜನಗೊಂಡರು. ಇಂದಿನ ದಿನಗಳಲ್ಲಿ ಗಮಕ ಕಾರ್ಯಕ್ರಮ ವಾಚನ ವ್ಯಾಖ್ಯಾನದ ಸಮತೋಲನದಲ್ಲಿ ನಡೆಯುತ್ತಿದೆ. ವಾಚನಕಾರನಷ್ಟೇ ಪ್ರಾಮುಖ್ಯತೆ ವ್ಯಾಖ್ಯಾನಕಾರನಿಗೂ ಲಭಿಸುತ್ತಿರುವುದನ್ನು ನಾವು ಕಾಣಬಹುದಾಗಿದೆ. ಕೆಲವು ವೇಳೆ ವ್ಯಾಖ್ಯಾನಕಾರನೇ ಶ್ರೋತೃಗಳ ಗಮನವನ್ನು ಹೆಚ್ಚಾಗಿ ಸೆಳೆದಿರುವ ಸಂದರ್ಭಗಳನ್ನು ನಿರಾಕರಿಸಲಾಗದು.

ಗಮಕದಲ್ಲಿ ವಾಚನಕಾರನ ಪ್ರಾಮುಖ್ಯತೆ : ಗಮಕವಾಚನದಲ್ಲಿ ಗಮಕಿಗೆ ಕಾವ್ಯದ ಲಕ್ಷಣ ರಸವಿಚಾರ ಛಂದಸ್ಸು, ಯತಿ, ಪ್ರಾಸ, ಗಣ ಇವೆಲ್ಲದರ ಅರಿವಿನೊಂದಿಗೆ ಸಂಗೀತದ ಮೂಲಗುಣಗಳಾದ ಶೃತಿ, ಸ್ಥಾಯಿ, ಸ್ವರ ರಾಗ ಇವುಗಳ ತಿಳುವಳಿಕೆಯು ಅವಶ್ಯಕವಾಗಿರುತ್ತದೆ. ಈ ಎಲ್ಲಾ ಲಕ್ಷಣಗಳನ್ನು ಗಮಕಿ ಗಮನದಲ್ಲಿಟ್ಟುಕೊಂಡು ವಾಚಿಸಬೇಕಾಗುತ್ತದೆ. ಗಮಕಿ ಕಾವ್ಯವಾಚನದಲ್ಲಿ ಅನುಮಾನ ಮತುತ ಭಯದಿಂದ ಕೂಡಿರಬಾರದು. ಸ್ವರಗಳನ್ನು ಅತ್ಯಂತ ಎತ್ತರ ಅಥವಾ ತಗ್ಗಿನ ಸ್ಥಾಯಿಗಳಲ್ಲಿ ಸಂದರ್ಭದ ಔಚಿತ್ಯವನ್ನು ಗಮನಿಸದೇ ಹಾಡುವುದು ವಾಚನದ ಮತ್ತೊಂದು ದೋಷವಾಗುತ್ತದೆ. ನೀರಸ ಅಥವಾ ವಿರಸವಾಗಿ ಹಾಡಿದಾಗಲೂ ಕಾವ್ಯ ಅರ್ಥಹೀನವಾಗುತ್ತದೆ. ಅಸ್ಪಷ್ಟತೆ ಮೂಗಿನಲ್ಲಿ ಹಾಡುವುದು ನೋಡುವವರಿಗೆ ಭಯವಾಗುವಂತೆ ವಿಶೇಷವಾದ ಆಂಗೀಕ ಅಭಿನಯ ಇವೆಲ್ಲವು ವಾಚನಕಲೆಯ ದೋಷಗಳೇ ಆಗಿವೆ. ಭವಭೂತಿ ತನ್ನ "ಮಾಲತೀ ಮಾಧವ" ಎಂಬ ನಾಟಕದಲ್ಲಿ ಹೀಗೆ ಹೇಳಿದ್ದಾನೆ.

ಯತ್ಪರೌಢಿತ್ವ ಮುದಾರತಾ ಚ ವಚಸಾಂ।
ಯಚ್ಚಾರ್ಥತೋ ಗೌರವಂ। ತಚ್ಚೇದಸ್ತಿ ತತಸಸ್ತ ವ
ಗಮಕಂ। ಪಾಂಡಿತ್ಯ ವೇದಗ್ದಯೋಃ।

ಎಂದು ಗಮಕ ಲಕ್ಷಣಗಳನ್ನು ವಿವರಿಸಿದ್ದಾನೆ: 'ಗಮಕಂ' ಎಂದರೆ 'ಬೋಧಕ' ಎನ್ನುವ ಅರ್ಥವಿದೆ. ಬೋಧಕನಿಗೆ ವಿಷಯವನ್ನು ಸ್ಪಷ್ಟಗೊಳಿಸುವ ಮಾರ್ಗ ತಿಳಿದಿರಬೇಕು. ಜೊತೆಗೆ ಜನರಿಗೆ ತಿಳಿಯುವಂತೆ ಹೇಳುವ ಚಾಕಚಕ್ಯತೆ ಇರಬೇಕು. ಕವಿಯ ಭಾವವನ್ನು ಅವನ ವಿಚಾರ ಸರಣಿಯನ್ನು 'ಸ್ವರವಿನ್ಯಾಸಕ್ರಮ, ಸ್ವರ ವಿಶೇಷ' ಅಥವಾ ಧ್ವನಿವಿಶೇಷಗಳ ಮೂಲಕವೇ ವಿವರಿಸಬೇಕು. ಶಾಸ್ತ್ರೀಯ ಸಂಗೀತದಲ್ಲಿ ಗಮಕವೆಂದರೆ ರಾಗಗಳ ಸ್ವರ ಸಂಯೋಜನೆ ಕ್ರಮದ ವಿವಿಧ ರೂಪ ಅಥವಾ ನಡೆಗಳೆಂದು ಕರೆಯುತ್ತಾರೆ. ಕಾವ್ಯವಾಚನದಲ್ಲೂ ಈ ಎಲ್ಲಾ ಅಂಶಗಳೂ ಸೇರಿಗೊಂಡಿವೆ. ಶ್ರವಣದ ಮೂಲಕ ಕೇಳುಗನ ಮನಸ್ಸನ್ನು ವಿಧವಿಧವಾದ ಭಾವತರಂಗಗಳನ್ನು ಅಂದರೆ ಶಾಂತಶೋಕ, ಕೋಪ, ಸಂತೋಷ, ಉತ್ಸಾಹ ಮೊದಲಾದ 'ನವರಸ'ಗಳನ್ನು ಉಂಟುಮಾಡುವುದಾಗಿದೆ. ಕಾವ್ಯದಲ್ಲಿ ಬರುವ ಪದ ಅಥವಾ ಪದವೃಂದದ ಪ್ರಾಮುಖ್ಯತೆ, ಔಚಿತ್ಯ ಮತ್ತು ಅರ್ಥವನ್ನು ಗ್ರಹಿಸಿ ವಿವೇಕಾನುಭವಗಳಿಂದ ಸಮನ್ವಯಗೊಳಿಸಿ ಹಾಡುವುದರಿಂದ ಗಮಕಿ ಸಹೃದಯರ ಮನಗೆಲ್ಲುವುವರಲ್ಲಿ ಅನುಮಾನವಿಲ್ಲ.

ಗಮಕದಲ್ಲಿ ವ್ಯಾಖ್ಯಾನಕಾರನ ಪ್ರಾಮುಖ್ಯತೆ : ಕಾವ್ಯದ ಕೂಲಂಕಷವಾದ ವರ್ಣನೆ ಮಾಡುವವನನ್ನು ವ್ಯಾಖ್ಯಾನಕಾರನೆಂದು ಕರೆಯುತ್ತಾರೆ. ವ್ಯಾಖ್ಯಾನಕಾರ ಕವಿಯ ಭಾವನೆಗಳನ್ನು ಗ್ರಹಿಸಿ ಕವಿಗೆ 'ಚ್ಯುತಿ' ಬಾರದಂತೆ ವಿವರಣೆ ನೀಡುವ ಕೆಲಸ ಮಾಡಬೇಕಾಗುತ್ತದೆ. ವಾಚನಕಾರನ ಮನೋಧರ್ಮವನ್ನು ಅನುಸರಿಸಿ ಅದರ ಅನುಗುಣವಾಗಿ ವ್ಯಾಖ್ಯಾನ ಮಾಡಿದರೆ ಮಾತ್ರ 'ಗಮಕ'ದ ಉದ್ದೇಶ ಸಫಲವಾಗುತ್ತದೆ. ಆದ್ದರಿಂದ ಕಾವ್ಯವಾಚನ-ವ್ಯಾಖ್ಯಾನ ಕಾರ್ಯಕ್ರಮದಲ್ಲಿ ವ್ಯಾಖ್ಯಾನಕಾರನ ಜವಾಬ್ದಾರಿ ಹಿರಿದಾಗಿರುತ್ತದೆ. ವ್ಯಾಖ್ಯಾನಕಾರನು ಹೆಚ್ಚು ಅಧ್ಯಯನಶೀಲನಾಗಿರಬೇಕು. ಭಾಷಾಪಾಂಡಿತ್ಯ ಮತ್ತು ವಿಷಯ ಪಾಂಡಿತ್ಯ ಎರಡನ್ನೂ ಸಾಧಿಸಿಕೊಂಡಿರಬೇಕು. ಪದದಾರಿದ್ರ್ಯದಿಂದ ವ್ಯಾಖ್ಯಾನಕಾರ ಸೊರಗಬಾರದು. ನಾನಾರ್ಥ, ಸಮಾನಾರ್ಥ, ಭಾವಾರ್ಥ, ಲಕ್ಷಣಾರ್ಥಗಳ ಜೊತೆಗೆ ಪದ್ಯದ ಧ್ವನಿಯನ್ನು ನಿಖರವಾಗಿ ಗ್ರಹಿಸಿ ಅದನ್ನು ಆಕರ್ಷಕವಾಗಿ ಕೇಳುಗರ ಮುಂದೆ ಮಂಡಿಸಬೇಕಾಗುತ್ತದೆ. ಸಂದರ್ಭೋಚಿತವಾಗಿ ಸಂಸ್ಕೃತ ಸುಭಾಷಿತಗಳನ್ನು ಗಾದೆ ಮಾತುಗಳನ್ನು ನುಡಿಗಟ್ಟುಗಳನ್ನು ಬಳಸಿಕೊಂಡು ಕೇಳುಗನ ಮನಸ್ಸಿನಲ್ಲಿ ವಿಚಾರಲಹರಿ ಉಂಟುಮಾಡುವುದು ಉತ್ತಮ ವ್ಯಾಖ್ಯಾನಕಾರನ ಲಕ್ಷಣವಾಗಿರುತ್ತದೆ. ಆದರೆ ಅತಿಯಾದ ವಿಷಯ ಮಾಹಿತಿ, ಸುದೀರ್ಘ ವಿವರಣೆ, ಪದ ಪದ ವಿಶ್ಲೇಷಣೆಗಳನ್ನು ಮಾಡುತ್ತಾ ಪಾಂಡಿತ್ಯ ಪ್ರದರ್ಶನಕ್ಕೆ ವ್ಯಾಖ್ಯಾನಕಾರ ತೊಡಗುವುದನ್ನು

ವಾಚನಾಭಿಮಾನಿಗಳು ಟೀಕಿಸುತ್ತಾರೆಂಬುದನ್ನು ಮನಗಾಣಬೇಕು. ಸರಣೀ ಕಾರ್ಯಕ್ರಮಗಳಿಗೆ ವ್ಯಾಖ್ಯಾನಕಾರ ಹಿಂದಿನ ಕಥೆಯನ್ನು ಪುನರಾವರ್ತನೆ ಮಾಡುವುದರಲ್ಲಿಯೇ ಸಮಯ ಪೋಲಾಗಿಸುವುದು ಸಾಮಾನ್ಯ ದೋಷವಾಗಿರುತ್ತದೆ. ಇದರರ್ಥ ಸಮಯ ಪ್ರಜ್ಞೆ ವ್ಯಾಖ್ಯಾನಕಾರನಿಗೆ ಅತೀ ಅವಶ್ಯಕ ಗುಣವಾಗಿರುತ್ತದೆ. ವ್ಯಾಖ್ಯಾನಕಾರ ಕವಿಯ ಆಶಯವನ್ನು ಸರಿಯಾಗಿ ಮನಗಾಣದೇ ಹೋದರೆ ಕವಿಯ ಉದ್ದೇಶ ಸಫಲವಾಗುವುದಿಲ್ಲ. ಕಾವ್ಯದ ಉದ್ದೇಶಕ್ಕೆ ಹಾನಿಯಾಗುತ್ತದೆ. ಅಂದರೆ ವ್ಯಾಖ್ಯಾನಕಾರ ವಿಮರ್ಶಕನಾಗದೇ ಕವಿಯ ಭಾವನೆಗಳಿಗೆ ಬೆಲೆಕೊಟ್ಟು ಕಾವ್ಯದ ಸೊಬಗನ್ನು ವರ್ಣಿಸಬೇಕಾಗುತ್ತದೆ. ವ್ಯಾಖ್ಯಾನಕಾರ ತನ್ನ ಸ್ವಂತದ ಅಭಿಪ್ರಾಯಗಳನ್ನು ಒತ್ತಾಯಪೂರ್ವಕವಾಗಿ ಹೇರಬಾರದು. ಇದರಿಂದ ಕಾವ್ಯದ ಮಹತ್ತಿಗೆ ಧಕ್ಕೆಯಾಗುತ್ತದೆ. ಗಮಕ ಕಾರ್ಯಕ್ರಮದಲ್ಲಿ ವಾಚನಕಾರನಿಗೆ ಇಲ್ಲದ ಮತ್ತೊಂದು ಸಮಸ್ಯೆ ವ್ಯಾಖ್ಯಾನಕಾರನಿಗಿರುತ್ತದೆ. ಅದೇ ನಿರೂಪಕನ ಜವಾಬ್ದಾರಿ. ಕಾವ್ಯದ ಒಡಲಿನಲ್ಲಿಯೇ ಸಂಭಾಷಣೆಯ ಸಂದರ್ಭಗಳಿದ್ದರೆ ಆಗ ವ್ಯಾಖ್ಯಾನಕಾರ ಆಯಾ ಪಾತ್ರಗಳ ಸಂಭಾಷಣೆಯನ್ನು ಜಾಗರೂಕತೆಯಿಂದ ಅರ್ಥ ಮತ್ತು ಭಾವ ಕೆಡದೆ ವಿವರಿಸಬೇಕಾಗುತ್ತದೆ. ಉದಾಹರಣೆಗೆ, ರಾಘವಾಂಕನ 'ಹರಿಶ್ಚಂದ್ರ ಕಾವ್ಯ'ದಲ್ಲಿ ಒಂದೇ ಪದ್ಯದಲ್ಲಿ ಪಾತ್ರಗಳ ನಡುವಿನ ಸಂಭಾಷಣೆ ಪರಿಣಾಮಕಾರಿಯಾಗಿ ವರ್ಣಿತವಾಗಿದೆ. ವಾಚನದಲ್ಲಿಯೇ ಅದು ಅಭಿವ್ಯಕ್ತವಾಗುವಂತಿದ್ದರೂ ವ್ಯಾಖ್ಯಾನಕಾರ ಅರ್ಥವಿವರಣೆ ಕೊಡುವುದು ಅವಶ್ಯವಾದಾಗ ತುಂಬಾ ಎಚ್ಚರಿಕೆಯಿಂದ ನಿರೂಪಕನ ಪಾತ್ರ ವಹಿಸಬೇಕಾಗುತ್ತದೆ.

ವ್ಯಾಖ್ಯಾನಕಾರನಿಗೆ ಈಗಾಗಲೇ ತಿಳಿಸಿದಂತೆ ಅಧ್ಯಯನ ವಿಶಾಲತೆಯನ್ನು ಹೆಚ್ಚಿಸಿಕೊಳ್ಳಲು ನೀಡುವ ಸಲಹೆಗಳೆಂದರೆ ಗ್ರಂಥಗಳ ಸಂಪಾದನೆ ಮತ್ತು ನಿರಂತರವಾದ ಅವಲೋಕನ. ವ್ಯಾಖ್ಯಾನಕಾರನು ಕನ್ನಡ ಶಬ್ದಕೋಶ, ಕ್ಲಿಷ್ಟ ಪದಕೋಶ ಹಳಗನ್ನಡ ಶಬ್ದಕೋಶ, ಕುಮಾರವ್ಯಾಸ ನಿಘಂಟು ಇವುಗಳ ಜೊತೆಗೆ ಪುರಾಣನಾಮ ಚೂಡಾಮಣಿ, ಪುರಾಣ ಭಾರತ ಪದಕೋಶ, ಮನು ರಾಮಾಯಣ, ಮಹಾಭಾರತ ಮತ್ತು ಭಾಗವತ ಗ್ರಂಥಗಳನ್ನು ನಿರಂತರವಾಗಿ ಅವಲೋಕನ ಮಾಡುವುದರಿಂದ ಸಂದರ್ಭೋಚಿತ ವಿವರಣೆ ನೀಡಲು ಸಾಧ್ಯವಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಪಂಪ, ರನ್ನ ಕುಮಾರವ್ಯಾಸ, ಲಕ್ಷ್ಮೀಶ, ರಾಘವಾಂಕ ಹರಿಹರ ಮುಂತಾದ ಅನೇಕ ಕವಿಗಳ ಕಾವ್ಯಗಳ ಸಮಗ್ರ ಅಧ್ಯಯನ ಕೃತಿಗಳು ಲಭಿಸುತ್ತಿರುವುದರಿಂದ ವ್ಯಾಖ್ಯಾನಕಾರನ ಅಧ್ಯಯನಕ್ಕೆ ಮಹತ್ತರವಾದ ಉಪಯೋಗವಾಗಿದೆ. ಇದೇ ಸಮಯದಲ್ಲಿ ಗಮನಿಸಿದ ಮತ್ತೊಂದು ಅಂಶವೆಂದರೆ ಆಯ್ಕೆ ಮಾಡಿಕೊಂಡ

ಕವಿಯ ವಾಚನ ವ್ಯಾಖ್ಯಾನ ಕಾರ್ಯಕ್ರಮದಲ್ಲಿ ಮತ್ತೊಬ್ಬ ಕವಿಯ ಕಾವ್ಯ ಸಂದರ್ಭಗಳನ್ನು ತೌಲನಿಕವಾಗಿ ಉದಾಹರಣೆ ನೀಡುವುದನ್ನು ಪ್ರಸಿದ್ಧ ವ್ಯಾಖ್ಯಾನಕಾರರ ಕಾರ್ಯಕ್ರಮದಲ್ಲಿ ಆಲಿಸಿದ್ದೇವೆ. ಈ ರೀತಿಯ ತೌಲನಿಕ ಅಧ್ಯಯನ ಕ್ರಮವು ಐಚ್ಛಿಕ ಕನ್ನಡ ಸಾಹಿತ್ಯಾಭ್ಯಾಸಿಗಳ ಸಭೆಯಲ್ಲಿ ಔಚಿತ್ಯಪೂರ್ಣವೆನಿಸುತ್ತದೆ. ಆದರೆ ಈ ತೌಲನಿಕ ವ್ಯಾಖ್ಯಾನ ಕ್ರಮವು ಜನಸಾಮಾನ್ಯರ ಗಮಕ ಕಾರ್ಯಕ್ರಮದಲ್ಲಿ ಸಭಿಕನಿಗೆ ಗೊಂದಲವುಂಟು ಮಾಡುತ್ತದೆ ಮತ್ತು ಕಾವ್ಯಭಾಗದ ರಸಘಟ್ಟವನ್ನು ಕೇಳುಗನಿಗೆ ತಲುಪಿಸುವುದರಲ್ಲಿ ವಿಫಲವಾಗುತ್ತದೆ. ಆದ್ದರಿಂದ ವ್ಯಾಖ್ಯಾನಕಾರನಿಗೆ ತಾವು ನೀಡುತ್ತಿರುವ ಕಾರ್ಯಕ್ರಮದಲ್ಲಿರುವ ಕೇಳುಗರ ಬಗ್ಗೆ ಅರಿವಿರಬೇಕು ಇಲ್ಲವಾದರೆ 'ನೀರಿಳಿಯದ ಗಂಟಲಲ್ಲಿ ಕಡುಬು ತುರುಕಿ'ದಂತಾಗುತ್ತದೆ. ಗಮಕ ಕಾರ್ಯಕ್ರಮ ಯಶಸ್ವಿಯಾಗಬೇಕಾದರೆ ಕಲಾವಿದರು ಸಭಿಕರೊಂದಿಗೆ ಮಿಳಿತವಾಗುವುದು ಮುಖ್ಯ. ಅನೇಕ ಸಂದರ್ಭಗಳಲ್ಲಿ ಕಲಾವಿದರು ವೇದಿಕೆಯಲ್ಲಿ ಕುಳಿತು ಪದ್ಯಗಳ ಆಯ್ಕೆ ಮಾಡಲು ತೊಡಗುತ್ತಾರೆ. ವಾಚನಕಾರನಿಗೆ ಪೂರ್ವ ಸೂಚನೆ ನೀಡದೆ ಇದ್ದಕ್ಕಿದ್ದಂತೆ ಪದ್ಯವಾಚನ ಮಾಡಲು ಸೂಚಿಸಿದರೆ ವಾಚನಕಾರನಿಗೆ ತಬ್ಬಿಬ್ಬಾಗುತ್ತದೆ. ಸಂದರ್ಭದ ಮಹತ್ವವನ್ನು ಅರಿಯದೆ, ರಸಭಾವಕ್ಕೆ ವಿರೋಧವುಂಟಾಗುವ ರಾಗಸಂಯೋಜನೆಯನ್ನು ವಾಚನಕಾರ ಮಾಡಬೇಕಾಗುತ್ತದೆ. ಆದ್ದರಿಂದ ತತ್‌ಕ್ಷಣದ ಮಾರ್ಪಾಡುಗಳನ್ನು ಮಾಡಿಕೊಳ್ಳುವುದು ಉತ್ತಮ ಗಮಕಿಯ ಲಕ್ಷಣವಲ್ಲ. ಇದರೊಂದಿಗೆ ಮತ್ತೊಂದು ಅಂಶವನ್ನು ವ್ಯಾಖ್ಯಾನಕಾರ ಗಮನಿಸಬೇಕಾಗುತ್ತದೆ. ವಾಚನಕಾರ ಕಾವ್ಯವನ್ನು ವಾಚಿಸಬೇಕಾದರೆ ವ್ಯಾಖ್ಯಾನಕಾರ ಪದ್ಯವನ್ನು ಗಮನವಿಟ್ಟು ಆಲಿಸಬೇಕು. ಇದರಿಂದ ಪದ್ಯದ ಭಾವ ಮತ್ತು ಕಥಾಹಂದರ ತಿಳಿಯುತ್ತದೆ. ವ್ಯಾಖ್ಯಾನಕಾರ ವಾಚನವನ್ನು ಗಮನಿಸಲಿಲ್ಲವಾದರೆ ಅಸಂಬದ್ಧವಾದ ವಿವರಣೆ ಅಥವಾ ಪುನರಾವರ್ತನೆಯನ್ನು ಮಾಡುತ್ತಾನೆ. ಇದರಿಂದಾಗಿ ಶ್ರೋತೃವಿಗೆ ಕಿರಿಕಿರಿಯಾಗುತ್ತದೆ. ಗಮಕ ಕಾರ್ಯಕ್ರಮ ಯಶಸ್ವಿಯಾಗಲು ಕಲಾವಿದರ ನಡುವೆ ಹೊಂದಾಣಿಕೆ ಅವಶ್ಯ ಎಂಬುದನ್ನು ಮನಗಾಣಬೇಕು.

ಸಾಮಾನ್ಯವಾಗಿ ವಾಚನ-ವ್ಯಾಖ್ಯಾನ ಕಾರ್ಯಕ್ರಮಗಳು ಒಂದರಿಂದ ಒಂದೂವರೆ ಗಂಟೆಯ ವ್ಯಾಪ್ತಿಯನ್ನು ಹೊಂದಿರುತ್ತದೆ. ಒಂದರಿಂದ ಒಂದೂವರೆ ಗಂಟೆಯ ಒಳಗೆ ನೀಡುವುದಾದರೆ ಕಥಾ ಭಾಗದ ಆಯ್ಕೆಯನ್ನು ಸಮಯಕ್ಕೆ ಅನುಗುಣವಾಗಿ ಮಾಡಿಕೊಳ್ಳಬೇಕು. ಈ ಸಮಯದಲ್ಲಿ ೧೫ ರಿಂದ ೨೦ ಪದ್ಯಗಳನ್ನು ಮಾತ್ರ ವಾಚನ-ವ್ಯಾಖ್ಯಾನ ಮಾಡಲು ಸಾಧ್ಯ. ಆಧರೆ ಕಥಾಭಾಗದಲ್ಲಿ ೬೦, ೮೦, ೧೨೦ ಪದ್ಯಗಳಿದ್ದು ಮುಖ್ಯವಾದ ಪದ್ಯಗಳನ್ನು ಆಯ್ಕೆ ಮಾಡಿಕೊಳ್ಳಲು ಮತ್ತು

ಒಂದು ಪದ್ಯದಿಂದ ಮತ್ತೊಂದು ಪದ್ಯಕ್ಕೆ ಕಥಾಸಂಯೋಜನೆ ಮಾಡಲು ವ್ಯಾಖ್ಯಾನಕಾರನಿಗೆ ಸವಾಲಿನ ಕೆಲಸವಾಗಿರುತ್ತದೆ. ಆದ್ದರಿಂದ ವ್ಯಾಖ್ಯಾನಕಾರ ಸಂಕ್ಷಿಪ್ತಗೊಳಿಸುವ ಅಥವಾ ವಿಸ್ತರಿಸುವ ಸಾಮರ್ಥ್ಯವನ್ನು ಗಳಿಸಿಕೊಳ್ಳುವುದು ವ್ಯಾಖ್ಯಾನಕಾರನ ಗುಣವಾಗಿರುತ್ತದೆ. ೨೦೧೯ರಲ್ಲಿ 'ಕರೋನ' ಎಂಬ ಭಯಾನಕ ರೋಗ ಬಂದಮೇಲೆ ಗಮಕ ಕಲೆಯಲ್ಲೂ ಸಾಕಷ್ಟು ಬದಲಾವಣೆಗಳಾಗಿವೆ. ಆನ್‌ಲೈನ್ ಕಾರ್ಯಕ್ರಮಗಳು ಹೆಚ್ಚಾಗುತ್ತಿವೆ. ಸಮಯ ಮತ್ತು ಸ್ಥಳದ ನಿರ್ಬಂಧವಿಲ್ಲದೆ ಎಲ್ಲೆಡೆ ಕಾವ್ಯಾಧ್ಯಯನ ಸಾಧ್ಯವಾಗುತ್ತಿದೆ. ಹೊಸ ಹೊಸ ಪ್ರತಿಭೆಗಳು ಗಮಕ ಕ್ಷೇತ್ರಕ್ಕೆ ಪರಿಚಿತವಾಗುತ್ತಿವೆ. ಇವೆಲ್ಲವೂ ಗಮಕ ಕಲೆಯ ಬೆಳವಣಿಗೆಗೆ ಸಹಾಯವಾಗುತ್ತಿವೆ.

ಯಶವಂತ ಚಿತ್ತಾಲರ ಕಥನಗಳಲ್ಲಿ ಗಂಡು ಹೆಣ್ಣಿನ ಚಿತ್ರಣ

ಡಾ.ಮೇಘನಾ.ಕೆ

ಭಾರತೀಯ ಸಮಾಜದ ಸ್ತರದಲ್ಲಿ ಆಧಾರಸ್ತಂಭವಾಗಿ ಕಂಡುಬರುವ ಕುಟುಂಬವು ವ್ಯಕ್ತಿಯ ಜೀವನದ ಮೇಲೆ ಗಾಢವಾದ ಪರಿಣಾಮ ಬೀರುವ ಸಂಸ್ಥೆಯಾಗಿದೆ. ಕೌಟುಂಬಿಕ ನೆಲೆಯಲ್ಲಿ ಗಂಡು ಹೆಣ್ಣಿನ ಸಂಬಂಧಗಳನ್ನು ಕೇಂದ್ರವಾಗಿರಿಸಿಕೊಂಡು ಸಾಗುವ ಚಿತ್ತಾಲರ ಕಥನಗಳ ವಿವೇಚನೆ ಈ ಮಾದರಿಯದು. ದಾಂಪತ್ಯ ಸಂಬಂಧಕ್ಕೊಂದು ಆ ಮೂಲಕ ಮಹತ್ವದ ಚೌಕಟ್ಟನ್ನು ಒದಗಿಸುತ್ತಾರೆ. ಚಿತ್ತಾಲರು ಗಂಡು ಹೆಣ್ಣಿನ ಸಂಬಂಧವನ್ನು ಒಂದು ಬಂಧನವಾಗಿ ನೋಡದೆ ಸ್ವತಂತ್ರವಾಗಿ ಚರ್ಚಿಸುವ, ಆಲೋಚಿಸುವ ಭಿನ್ನ ಮಾದರಿಯ ಆಲೋಚನಾ ಕ್ರಮವಿದೆ. ನಮ್ಮ ಭಾರತೀಯ ಪರಂಪರೆಯು ಸಾಂಪ್ರದಾಯಿಕವಾಗಿ ನೋಡುವ ಕೆಲವೊಂದು ಸಾಮಾಜಿಕ ಸಮಸ್ಯೆಗಳಾದ 'ವರದಕ್ಷಿಣೆ', 'ವಿಧವಾ ಪುನರ್ ವಿವಾಹ ಸಮಸ್ಯೆ', ಹೆಣ್ಣನ್ನು ಅನೇಕ ಕಟ್ಟುಪಾಡುಗಳ ಮೂಲಕ ನೋಡುವ ಕ್ರಮ ಹೀಗೆ ಹಲವು ಬಗೆಯಲ್ಲಿ ಬಂಧನಕ್ಕೊಳಪಡಿಸಲಾಗಿದೆ. ಚಿತ್ತಾಲರು ಇಂತಹ ಅಂಶಗಳನ್ನು ಅವರ 'ಅಪ್ಪ', 'ಉತ್ತುಮಿ', 'ಕಾಮಾಕ್ಷಿ ಮಾಡಲೆತ್ನಿಸಿದ ಅತಿ ದಿಟ್ಟ ಕೆಲಸ', 'ಪುರುಷೋತ್ತಮ' ಮುಂತಾದ ಕಥನಗಳಲ್ಲಿ ಚರ್ಚೆಗೆ ಒಳಪಡಿಸುತ್ತಲೇ ಸಂಪ್ರದಾಯವನ್ನು ಪ್ರಶ್ನಿಸುತ್ತ ಹೊಸ ಆವಿಷ್ಕಾರಕ್ಕೆ ಕೈಹಾಕುತ್ತಾರೆ.

ಆಧುನಿಕ ಮನುಷ್ಯ ಜೀವನದ ಅನಂತ ಮುಖಗಳನ್ನು ಬಯಲು ಮಾಡುವ ಯಶವಂತ ಚಿತ್ತಾಲರ ಕಥನಗಳಲ್ಲಿ ಮುಖ್ಯವಾಗಿ ವ್ಯಕ್ತಿಯ ಮಾನಸಿಕ ಹಾಗೂ ಬೌದ್ಧಿಕ ನಿಗೂಢತೆಗಳನ್ನು ಶೋಧಿಸುವ ನಿಲುವನ್ನು ತಲುಪಿದ್ದಾರೆ. ಯಾವುದೇ ಸಾಹಿತ್ಯ ಅದು ರೂಪತಾಳುವುದು ಸಮಾಜದ ಒಳಗಿನಿಂದಲೇ ಆಗಿರುತ್ತದೆ. ಸಮಾಜವೆಂದರೆ ಅಲ್ಲಿನ ಮನುಷ್ಯನ ಸಂಬಂಧಗಳು ಇದರೊಂದಿಗೆ ಬೆಸೆದುಕೊಂಡಿರುತ್ತವೆ. ಇದನ್ನು ಚಿತ್ತಾಲರು ಮತ್ತು ಅವರ ಸಮಕಾಲೀನ ಬರಹಗಾರರಾದ ಲಂಕೇಶ್, ದೇಸಾಯಿ, ತೇಜಸ್ವಿ ಇತರ ಲೇಖಕರು ನೋಡುವ ದೃಷ್ಟಿಕೋನ ಸಮಾಜಪ್ರಜ್ಞೆಯ ನೆಲೆಯಲ್ಲಿಯೇ ರೂಪತಾಳುತ್ತಾ ಹೋಗುತ್ತದೆ. ಆದ್ದರಿಂದ ಸಾಹಿತ್ಯ ಮತ್ತು ಸಮಾಜದ ನಡುವಿನ ಸಂಬಂಧ ಅನನ್ಯವಾದುದು. ಈ

ಮೇಲಿನ ಅಂಶಗಳ ಕೇಂದ್ರಪ್ರಜ್ಞೆಯಲ್ಲಿ ಕಂಡುಬರುವ ಕುಟುಂಬ, ಜಾತಿ, ವರ್ಗ, ಲೈಂಗಿಕತೆ, ಆಚಾರ–ವಿಚಾರಗಳು, ಶಿಕ್ಷಣ, ಆಧುನಿಕತೆಯ ರೂಪುರೇಷೆಗಳು, ಗಂಡು–ಹೆಣ್ಣಿನ ಸಂಬಂಧಗಳು ಮಹತ್ವದ ಪಾತ್ರವಹಿಸುತ್ತವೆ. ಈ ನೆಲೆಯಲ್ಲಿ ಚಿತ್ತಾಲರ ಕಥನ ಸಾಹಿತ್ಯದಲ್ಲಿ ಗಂಡುಹೆಣ್ಣಿನ ಮನುಷ್ಯ ಸಂಬಂಧಗಳು ಯಾವ ನೆಲೆಯದ್ದು? ಅವರ ನಡುವಿನ ಮಾನವೀಯ ಸಂಬಂಧಗಳು ಹೇಗೆ ಅಭಿವ್ಯಕ್ತಿ ತಾಳಿವೆ? ಎಂಬ ಪ್ರಶ್ನೆಗಳ ಸುತ್ತಲೂ ಕಥನ ಕ್ರಿಯೆಯ ಪ್ರಯೋಗಶೀಲತೆಯಿದೆ. ಮನುಷ್ಯನ ಪ್ರಜ್ಞೆಯ ವಿವಿಧ ಅವಸ್ಥೆಗಳನ್ನು ಕಥನಗಳು ಅಭಿವ್ಯಕ್ತಿಸುವ ಕ್ರಮ ಮುಖ್ಯ. ಸುತ್ತಲಿನ ಪರಿಸರದೊಂದಿಗೆ ದಿನನಿತ್ಯದ ಬದುಕಿನ ರಹಸ್ಯವನ್ನು ಅನಾವರಣಗೊಳಿಸುವ ಒಲವನ್ನು ಚಿತ್ತಾಲರು ತೋರಿದ್ದಾರೆ. ಗಂಡು ಹೆಣ್ಣಿನ ಸಂಬಂಧಗಳನ್ನು ಶೋಧಿಸುವಾಗ ಅವುಗಳಲ್ಲಿರುವ ತನ್ನತನದ ಶೋಧ, ಪರಕೀಯ ಪ್ರಜ್ಞೆ, ಸಾವು–ನೋವುಗಳ ಬಗ್ಗೆ ಕಥೆಗಾರರಿಗೆ ಇರುವ ಕುತೂಹಲ ವಿಶೇಷವಾದುದು.

ಚಿತ್ತಾಲರ ಮೊದಲ ಕಾದಂಬರಿಯಾದ 'ಮೂರು ದಾರಿಗಳು' ಕಾದಂಬರಿಯಲ್ಲಿ ಹನೇಹಳ್ಳಿಯ ವಿಶ್ವನಾಥ ಶಾನುಭೋಗರು ಮನೆತನದ ಗೌರವ ರಕ್ಷಿಸಿಕೊಂಡು ಹೋಗುವುದರಲ್ಲಿ ಅಪಾರ ಕಾಳಜಿಯುಳ್ಳವರು. ವಿಶ್ವನಾಥ–ಅನುಸೂಯ ದಂಪತಿಗಳ ಒಬ್ಬಳೇ ಮಗಳು ನಿರ್ಮಲೆ. ಒಮ್ಮೆ ನಿರ್ಮಲೆ ಮತ್ತು ರಂಗಪ್ಪನ ಪ್ರಕರಣ ಹಳ್ಳಿಯಲ್ಲಿ ಗಾಳಿ ಸುದ್ದಿಯಾಗಿ ಹರಡಿದಾಗ ಈ ಹಗರಣದ ಬಗ್ಗೆ ಆತಂಕಪಟ್ಟ ವಿಶ್ವನಾಥ ಶಾನುಬೋಗರು ಆತುರಾತುರವಾಗಿ ಹೆರವನಹಟ್ಟಿಯ ಉಪೇಂದ್ರ–ಸೀತಕ್ಕರ ಮಗ ವಾಸುದೇವನೊಂದಿಗೆ ಮಗಳ ಮದುವೆಯ ಪ್ರಸ್ತಾಪ ಮಾಡುತ್ತಾರೆ. ಈ ಸಂದರ್ಭದಲ್ಲಿ ವಾಸುದೇವನ ಆಪ್ತ ಗೆಳೆಯನಾದ ಸಿನ್ನ ಸಿರ್ಸಿಗೆ ಹೋದಾಗ ಅವನೆದುರಿಗೆ ನಿರ್ಮಲೆಯ ಪ್ರಕರಣವನ್ನು ಪ್ರಸ್ತಾಪಿಸಿ ಅವನನ್ನು ಎಚ್ಚರಿಸುವ ಪ್ರಯತ್ನ ಮಾಡುತ್ತಾನೆ. ಒಮ್ಮೆ ನಿರ್ಮಲೆಯನ್ನು ನೋಡಿ ಸಂತೈಸಲು ವಾಸುದೇವ ಹನೇಹಳ್ಳಿಗೆ ಬಂದಾಗ ಸಂಜೆ ಇಬ್ಬರೇ ಕಪಿಲತೀರ್ಥದ ಬಳಿ ಮಾತನಾಡುವಾಗ ಬರುವ ಸನ್ನಿವೇಶ ಹೀಗಿದೆ.

"ನೀಮಾ. ಹಿಂದಿನದನ್ನೆಲ್ಲ ಮರೆತು ಬಿಡು'

ನಿರ್ಮಲೆಯ ಮೌನ...

"ನನಗೆಲ್ಲಾ ಗೊತ್ತಿದೆ ನಿರ್ಮಲಾ, ಆದರೆ ನನಗಾವುದರಲ್ಲೂ ವಿಶ್ವಾಸವಿಲ್ಲ. ಇಂತಹ ಸುದ್ದಿ ಹಬ್ಬಿಸಿದವರು ಎಂತಹ ಜನರೆಂಬುದನ್ನು ನಾನು ಬಲ್ಲೆ"

"ಅದು ಬರಿಯ ಸುದ್ದಿಯಾಗಿರದೆ ನಿಜವಾಗಿಯೂ ನಡೆದಿದ್ದರೆ?" ನಿರ್ಮಲೆಯ ಪ್ರಶ್ನೆ.

"ನಿಜವಿದ್ದರೂ ನನಗೆ ಅದರ ಪರಿವೆಯೇ ಇಲ್ಲ; ಅದಕ್ಕೆ ನನ್ನ ಪೂರ್ಣ ಕ್ಷಮೆ ಇದೆ"

"ಪರಿವೆಯಿರಬೇಕಾದುದು ನನಗೆ ನಿಮಗಲ್ಲ, ಆದದ್ದನ್ನು ಕುರಿತು ನನಗೇನೂ ಕೆಡುಕೆನಿಸಲಿಲ್ಲ. ಅದಕ್ಕೆ ಯಾರ ಕ್ಷಮೆಯೂ ಬೇಕಿಲ್ಲ"[7]

ಹೀಗೆ ವಾಸುದೇವ-ನಿರ್ಮಲೆಯ ಮಧ್ಯೆ ಚರ್ಚೆಯಾಗುವ ಮಾತುಗಳು ಅವನ ಕನಿಕರದ ನೆಲೆಯಲ್ಲಿ ವ್ಯಕ್ತವಾಗಿರುವ ಮಾತುಗಳನ್ನು ನಿರ್ಮಲೆ ತಿರಸ್ಕರಿಸುತ್ತಾಳೆ. ವಾಸುದೇವನ ಮಾತುಗಳು ಆದರ್ಶದ ನೆಲೆಯಲ್ಲಿ ಅಭಿವ್ಯಕ್ತಗೊಂಡಿದ್ದರೂ ಎಲ್ಲೋ ಒಂದು ಕಡೆ ಅತಿಯಾದ ಬಾವುಕತೆಯೂ ಓದುಗರನ್ನು ಕಾಡಿಸದೇ ಇರಲಾರದು. ಅಲ್ಲದೇ ಒಂದುವೇಳೆ ನಿರ್ಮಲೆ ಮತ್ತು ವಾಸುದೇವ ಈ ಸಮಾಜದ, ಸಂಪ್ರದಾಯಗಳ ದಾಂಪತ್ಯದ ಚೌಕಟ್ಟನ್ನು ಒಪ್ಪಿ ಮದುವೆಯಾಗಿದ್ದರೆ? ವ್ಯಕ್ತಿ ಸ್ವಭಾವದ ಹಿನ್ನೆಲೆಯಲ್ಲಿ ವಾಸುದೇವ ಮುಂದೊಂದು ದಿನ ಹೀಗೆಯೇ ಇರುತ್ತಾನೆಂಬ ಆಲೋಚನೆಗಳಲ್ಲಿ ಪಕ್ವತೆ ಇದೆಯೇ? ಕಾಲಸರಿದಂತೆ ಅನೇಕ ಮನಸ್ಸಿನಲ್ಲಿ ಬದಲಾವಣೆಗಳೂ ಸಾಧ್ಯವಾಗಬಹುದು. ಅಥವಾ ಒಂದು ವೇಳೆ ಒಪ್ಪಿದ್ದರೆ ಇಬ್ಬರೂ ಸುಖವಾದ ದಾಂಪತ್ಯ ಜೀವನ ನಡೆಸಬಹುದಾಗಿತ್ತು. ಆದರೆ ಅವಳ ಆಯ್ಕೆ ಇಲ್ಲಿ ಸ್ವಾಭಿಮಾನದ ಪ್ರಶ್ನೆಯಾಗಿಯೂ ಕಾಡುತ್ತದೆ. ಇಲ್ಲಿ ಸುಖದ ಮತ್ತು ದುಖಃದ ಎರಡೂ ನೆಲೆಯಲ್ಲಿಯೂ ಆಲೋಚಿಸಬೇಕಾಗುತ್ತದೆ. ಹಾಗಾಗಿ ಮುಖ್ಯವಾಗಿ ನಿರ್ಮಲೆ ಒಟ್ಟಾರೆ ಸುತ್ತಲ ಪ್ರಪಂಚದಲ್ಲಿ ತನ್ನನ್ನು ಬಂಧಿಸಿಕೊಳ್ಳುತ್ತಾಳೆಯೇ ಹೊರತು ಮುಕ್ತವಾಗಿ ಅಪ್ಪ-ಅಮ್ಮರೊಂದಿಗಾಗಲಿ, ವಾಸುದೇವ, ಗೆಳತಿ ಪ್ರಿಯಾಂಗಿಯ ಜೊತೆಯಾಗಲೀ, ಅಥವಾ ಈ ಎಲ್ಲಾ ಗೊಂದಲಗಳಿಗೆ, ಗಾಳಿಸುದ್ದಿಗೆ ಕಾರಣನಾದ ಫೋಟೋ ಸ್ಟುಡಿಯೋ ರಂಗಪ್ಪನೊಂದಿಗಾಗಲಿ ಚರ್ಚಿಸುವುದೇ ಇಲ್ಲ. ಇಲ್ಲಿನ ಪಾತ್ರಗಳು ಯಾರೂ ಪರಸ್ಪರ ಸಂವಾದಿಸುವುದೇ ಇಲ್ಲ. ಕೊನೆಗೆ ನಿರ್ಮಲೆ ಸಾವಿನಲ್ಲಿ ತನ್ನ ಅಸ್ತಿತ್ವವನ್ನು ಕಂಡುಕೊಳ್ಳುತ್ತಾಳೆ. ಹಾಗಾಗಿ ಅವಳ ಸಾವಿನಲ್ಲಿ ವ್ಯವಸ್ಥೆಯ ಪಾತ್ರ ಮಾತ್ರ ಒಪ್ಪಿತವಾಗುವುದಿಲ್ಲ. ಸುತ್ತಲಿನ ಮನುಷ್ಯ ಸಂಬಂಧಗಳೂ ಅದಕ್ಕೆ ಕಾರಣವಾಗುತ್ತವೆ.

ಚಿತ್ತಾಲರ 'ಅಪರಿಚಿತರು' ಕತೆಯಲ್ಲಿ ಬರುವ ಗಂಡು-ಹೆಣ್ಣಿನ ದಾಂಪತ್ಯ ಚಿತ್ರಣವು ಭಿನ್ನ ನೆಲೆಯದ್ದು. ಕಳೆದ ಹಲವಾರು ದಿನಗಳಿಂದ ಒಬ್ಬರ ನಂತರ ಮತ್ತೊಬ್ಬರು ಬಂದ ಅತಿಥಿಗಳ ಸತ್ಕಾರದಲ್ಲಿಯೇ ಸೋತು ಹೋಗಿದ್ದ ಗಂಡ ಹೆಂಡತಿಯರು ಮುಂದಿನ ಮೂರು ರಜಾ ದಿನಗಳನ್ನು ಆರಾಮವಾಗಿ ಕಳೆಯಲು ಯೋಜನೆ ಹಾಕಿಕೊಂಡಿದ್ದರು. ಆದರೆ ಇದ್ದಕ್ಕಿದ್ದಂತೆ ಅಪರಿಚಿತರ ಆಗಮನವಾಗುತ್ತದೆ. ಕೋಣೆಯೊಳಗೆ ಹೋಗಿ ಸೋಫಾದಲ್ಲಿ ಕುಳಿತು ಮಾತನಾಡುವ ದಂಪತಿಗಳ

ಚರ್ಚೆ ಹೀಗಿದೆ. "ಛೀ ಜಾನಕಿ ಈಗ ಸುಳ್ಳೆ ಹುಚ್ಚಿಯಂತೆ ಮಾಡಬೇಡ, ಯಾರಾದರೂ ನಮ್ಮಲ್ಲೆ ಬರುವವರಿದ್ದರೆ ಒಂದು ಪತ್ರವನ್ನಾದರೂ ಬರೆದು ತಿಳಿಸದೆ ಇರುತ್ತಿದ್ದರೆ...?"[೨] ಈ ಮಾತಿಗೆ ಜಾನಕಿ ಒಮ್ಮೆಲೆ ಕೆರಳಿ ಒಳಗೆ ಬಂದು 'ಧಡ್' ಎಂದು ಗಂಡನ ಎದುರಿನಲ್ಲಿ ಕುಳಿತಳು. ಗಂಡ ಹೆಂಡತಿಯರಿಬ್ಬರೂ ಒಬ್ಬರನ್ನೊಬ್ಬರು ದೂರಿ ಕಿರಿಕಿರಿ ಮಾಡಿಕೊಳ್ಳುತ್ತಿರುತ್ತಿರುವಾಗ ಕೆಳಗೆ ಕಾಂಪೌಂಡಿನ ಗೇಟು ತೆರೆದದ್ದು ಕೇಳಿಸಿತು. ಮುಂದೆ ಕ್ಷಣಗಳಲ್ಲಿ ಮಾಳಿಗೆಯ ಮೆಟ್ಟಿಲುಗಳ ಮೇಲೆ ಸ್ಪಷ್ಟವಾದ 'ಖಟ್... ಖಟ್... ಖಟ್...' ಹೆಜ್ಜೆಗಳು ಮೂರನೆಯ ಮಜಲಿಗೆ ಬಂದೊಡನೆಯೇ 'ಅದೋ ಅವರು ಬರುತ್ತಿದ್ದಾರೆ' ಎಂಬ ಭೀತಿಯ ಭಾವ ಮೂಡಿದ ಕಂಗಳಿಂದ ಗಂಡ ಹೆಂಡತಿಯರು ಒಬ್ಬರನ್ನೊಬ್ಬರು ನೋಡಿಕೊಂಡು ಒಮ್ಮೆಲೆ ಸೋಫಾದಿಂದ ಎದ್ದು ನಿಂತರು. ಇಬ್ಬರೂ ಭಯಭೀತರಾಗಿ ಮುಂದಿನ ಕ್ಷಣವನ್ನು ಒಂದು ಯುಗದಂತೆ ಕಳೆದರು. ಇಂತಹ ನಿಗೂಢ ವಾತಾವರಣದ ಸುತ್ತ ಕತೆ ಹೆಣೆದಿರುವ ಚಿತ್ತಾಲರು ದಾಂಪತ್ಯ ಪ್ರೇಮ, ಅತಿಥಿಗಳ ಸತ್ಕಾರ, ಸುಪ್ತ ಮನಸ್ಸಿನ ಒತ್ತಡಗಳು, ಅಪರಿಚಿತರ ಆಗಮನ ಇವೆಲ್ಲವೂ ಕೂಡ ಇಲ್ಲಿ ವ್ಯಕ್ತಗೊಂಡಿವೆ.

'ಉತ್ತುಮಿ' ಕತೆಯ ವಸ್ತುಸ್ಥಿತಿಯನ್ನು ಗಮನಿಸಿದಾಗ ಒಂದು ದಿನ ಗೆಳೆಯರ ಗುಂಪಿನಲ್ಲಿ ತಮತಮಗೆ ಲೈಂಗಿಕ ಪ್ರಜ್ಞೆ ಬಂದ ಮೊಟ್ಟಮೊದಲ ಅನುಭವ ಯಾವುದು ಎಂಬ ಬಗೆಗೆ ಚರ್ಚೆ ನಡೆಯುತ್ತಿತ್ತು. ಒಬ್ಬೊಬ್ಬರು ತಮ್ಮ ಅನುಭವಗಳನ್ನು ಹೇಳಿಕೊಂಡ ಮೇಲೆ ಬಂದುದು ಈ ಕತೆಗಾರನ ಸರದಿ. ಎರಡನೆಯ ಇಯತ್ತೆಯಲ್ಲಿ ಶಾಲೆ ಕಲಿಯುತ್ತಿರುವಾಗ ಕಲ್ಯಾಣಿ ಒಂದು ದಿನ ಶಾಲೆಗೆ ಕೆಂಪು ಮಶಿಯ ದೌತಿಯೊಂದನ್ನು ತಂದಿದ್ದಳು. ಆ ದಿನ ಅವಳು ಅದನ್ನು ಇತರರಿಂದ ಅಡಗಿಸಿ ತೋರಿಸಿದಾಗ ಹುಡುಗನಿಗಾದ ಆನಂದ ಅಷ್ಟಿಷ್ಟಲ್ಲ. "ಆ ಕೆಂಪು ಮಶಿಯಲ್ಲಿ ಅದೇನು ಆಕರ್ಷಣೆ ಆಕರ್ಷಣೆಯಿತ್ತೋ! : ಆ ದೌತಿಯನ್ನು ಅವಳಿಂದ ಎತ್ತಿ ಹಾಕಲು ಅವನು ಮಾಡಿದ ಸಾಹಸ ಅಷ್ಟಿಷ್ಟಲ್ಲ."[೩] ಕಲ್ಯಾಣಿಯು ಜೊತೆ ಈ ಹುಡುಗ ತುಂಬಾ ಸಲುಗೆಯಿಂದಿರುವುದನ್ನು ನೋಡಿ, ಇವನಿಗಿಂತ ಅನೇಕ ವರ್ಷ ದೊಡ್ಡವರಾದ ಹುಡುಗರು ಚೇಷ್ಟೆ ಮಾಡುತ್ತಿದ್ದರು. "ಏ ಪೋರಾ, ಆ 'ಸೂಳೆ ಮಗಳ' ಜೊತೆ ಅದೆಷ್ಟು ಸರಸವಾಡ್ತೀಯೋ? ಅವಳನ್ನು ಲಗ್ನಾ ಆಗ್ತಿಯೋ ನೋಡ್ತೆ; ಅಪ್ಪನಿಗೆ ಹೇಳ್ತೇನೆ ನೋಡು..."[೪] ಎಂದೆಲ್ಲಾ ಹೆದರಿಸುತ್ತಿದ್ದರು. ಲಗ್ನ ಅಥವಾ ಮದುವೆ ಎಂಬ ಮಾತು ಮುಖ್ಯವಾಗಿ ಅಲ್ಲಿನ ಸಡಗರ, ಸಮಾರಂಭಗಳಿಂದಾಗಿ ಅಷ್ಟಿಷ್ಟು ಅರ್ಥವಾದರೂ ಉತ್ತುಮಿ ಸೂಳೆ, ಕಲ್ಯಾಣಿ ಸೂಳೆಯ ಮಗಳು, ಇವೆಲ್ಲ ಹುಡುಗನಿಗೆ ನಿಗೂಢವಾಗಿಯೇ ಇದ್ದವು. ಇಲ್ಲಿ ಗಂಡು ಹೆಣ್ಣಿನ ಸಂಬಂಧವನ್ನು ಕುರಿತು ಪ್ರಶ್ನೆಗಳಿವೆ.

ಇಂತಹ ವಿಷಯದಲ್ಲಿ ಬಾಲ್ಯದ ಅನುಭವವನ್ನೇ ಲೇಖಕರು ಪ್ರೌಢಾವಸ್ಥೆಗೆ ತಂದು ಅದನ್ನು ವಿಸ್ತರಿಸುವ ಕ್ರಮ ಭಿನ್ನವಾದುದು. ನಿರೂಪಣೆ ಆರಂಭವಾದುದು ಲೈಂಗಿಕ ಪ್ರಜ್ಞೆಯ ಅನುಭವವನ್ನು ತಿಳಿಸುವ ಸಲುವಾಗಿ. ಆದರೆ ವಾಸ್ತವವಾಗಿ ಪ್ರಾಧಾನ್ಯ ದೊರೆತಿರುವುದು ಆ ಎಳೆಯ ವಯಸ್ಸಿನಲ್ಲೂ ಕಲ್ಯಾಣಿಯಂತಹ ಮೋಹಕ ಹುಡುಗಿಯ ಬಗೆಗೆ ಇವನಿಗಿದ್ದ ಆಕರ್ಷಣೆ ಮತ್ತು ಉತ್ತುಮಿಯಂತಹ ಸೂಳೆಯಲ್ಲಿದ್ದ ಮಾತೃವಾತ್ಸಲ್ಯ "ಇವುಗಳಿಗೆ ಕೆಂಪು ಮಶಿಯ ದೌತಿ ಉತ್ತುಮಿಕೆಯ ಅಪ್ಪುಗೆಗಳಿಗೆ ಫ್ರಾಯ್ಡ್ ಪಂಥೀಯ ಸಾಂಕೇತಿಕ ಅರ್ಥಗಳನ್ನು ಹಚ್ಚಿ ನೋಡಿದಾಗ ಮಾತ್ರ ಇವುಗಳಲ್ಲಿ ಲೈಂಗಿಕ ಪ್ರಜ್ಞೆಯ ಮೊದಲ ಅನುಭವವನ್ನು ಗುರುತಿಸಬಹುದು. ಮನೋವಿಶ್ಲೇಷಣ ಶಾಸ್ತ್ರದ ಹಿನ್ನೆಲೆಯಲ್ಲಿ 'ಕೆಂಪು ಮಶಿಯ ದೌತಿ' ಯೋನಿಯ ಸಂಕೇತವಾದರೆ, 'ಉತ್ತುಮಿಯ ಅಪ್ಪುಗೆ' ಬಾಲಕನ ಸುಪ್ತ ಕಾಮವು ಉದಾತ್ತೀಕರಣಗೊಂಡ ಸಂಕೇತವಾದೀತು"[೫] ಎಂದು ಅಭಿಪ್ರಾಯಪಡುವ ಗೋಪಾಲಕೃಷ್ಣಯ್ಯ ಕೆ. ಎಲ್ ಅವರ ಮಾತುಗಳು ಮೌಲಿಕವಾದವುಗಳೇ ಆಗಿವೆ. ಈ ಹಿನ್ನೆಲೆಯಲ್ಲಿ ಚಿತ್ತಾಲರ ಅನೇಕ ಕಥನಗಳು ಮತ್ತು ಅಲ್ಲಿನ ಪಾತ್ರಚಿತ್ರಣಗಳಲ್ಲಿ ಈ ಅಂಶಗಳು ಉಲ್ಲೇಖಗೊಂಡಿರುವುದನ್ನು ಕಾಣಬಹುದು.

ಇಲ್ಲಿನ ಕಥನಗಳ ವಸ್ತು, ಭಾಷೆ ಇವೆಲ್ಲಾ ಹಿಂದಿನ ಪರಂಪರೆಗಿಂತ ಭಿನ್ನವಾಗಿದ್ದು, ನಾವೀನ್ಯತೆಯಿಂದ ಕೂಡಿದೆ. ವೈಯಕ್ತಿಕ ಅನುಭವಗಳು ಲೋಕಾನುಭವದೊಂದಿಗೆ ಅನುಸಂಧಾನಗೊಂಡಾಗಲೇ ಸಾಹಿತ್ಯ ಜೀವತಾಳಲು ಸಾಧ್ಯ. ಅತ್ಯಂತ ಸೂಕ್ಷ್ಮವೂ, ಸಂಕೀರ್ಣವೂ ಆದ ಮನುಷ್ಯನ ಅಂತರ್ಯದ ಕಂಪನಗಳನ್ನು ಗುರುತಿಸುವಾಗ ಮನುಷ್ಯನನ್ನೇ ಶೋಧಿಸಲು ಆಯ್ದುಕೊಂಡ ಮನುಷ್ಯ ಸಂಬಂಧಗಳ ಪಾತ್ರಗಳು, ಚಿತ್ತಾಲರ ನಿಲುವು, ಚಿಂತನೆ ಬರಹದ ಮೂಲಕ ಪ್ರಜ್ಞಾವಂತ ಓದುಗ ವಲಯವನ್ನು ಸೃಷ್ಟಿಸುವ ಅಭಿವ್ಯಕ್ತಿಯ ಮಾದರಿಯದು. ಅನುಭವಕ್ಕೆ ಮೂರ್ತರೂಪ ಕೊಡಬಲ್ಲ ಭಾಷೆಯ ಮೇಲಿನ ಬಿಗಿ ಹಿಡಿತ, ಗಂಡು ಹೆಣ್ಣಿನ ಸಂವೇದನೆ, ಆರೋಗ್ಯಕಾರಿ ಸಮಾಜ ನಿರ್ಮಾಣದತ್ತ ಒಲವು, ಆ ಕಾರಣಕ್ಕಾಗಿಯೇ ಅವರ ಬರಹ ಒಂದಷ್ಟು ಭಿನ್ನವೂ ಆಗಿ ಕಾಣಿಸುತ್ತದೆ. ಈ ಚಿಂತನೆಯ ಕ್ರಮ ಹೊಸರೀತಿಯಲ್ಲಿ ಅಭಿವ್ಯಕ್ತಗೊಳ್ಳುತ್ತಲೇ ಸಾಗುತ್ತದೆ. ವ್ಯಕ್ತಿಯ ಸುತ್ತಲ ಪರಿಸರದಲ್ಲಿ ಮಾತ್ರ ನಿಂತುನೋಡದ ಲೇಖಕರು ಮನುಷ್ಯನ ಅಂತಃಕರಣದಲ್ಲಿ ಪ್ರವೇಶಿಸಿ ಯಾವುದೋ ಹೊಸ ಪರಿವರ್ತನೆಯೊಂದಿಗೆ ಅದನ್ನು ಸಾಮಾಜಿಕತೆಗೆ ತಲುಪಿಸುವ ಪ್ರಯತ್ನ ಮಾಡುತ್ತಾರೆ. ಈ ಹಿನ್ನೆಲೆಯಲ್ಲಿ ಗಂಡು ಹೆಣ್ಣಿನ ಸಂಬಂಧಗಳು ಸಾಂಸ್ಕೃತಿಕವಾಗಿ ವಿಕಾಸಗೊಳ್ಳುವ ಪ್ರಕ್ರಿಯೆಯ ಹಂತವಾಗಿ ಕಥನಗಳ ವಾಸ್ತವತೆ ಕಂಡುಬರುತ್ತದೆ.

ಪರಾಮರ್ಶನ ಗ್ರಂಥಗಳು

೧. ಯಶವಂತ ಚಿತ್ತಾಲ, "ಮೂರು ದಾರಿಗಳು", ಸಾಹಿತ್ಯ ಭಂಡಾರ, ಬೆಂಗಳೂರು, ೧೪ನೇ ಮುದ್ರಣ, ೨೦೧೭, ಪುಟ, ೧೮೭.

೨. ಯಶವಂತ ಚಿತ್ತಾಲ, "ಸಮಗ್ರ ಕತೆಗಳು", ಸಂಪುಟ-೧, ಪ್ರಿಸಂ ಬುಕ್ ಪ್ರೈ. ಲಿಮಿಟೆಡ್, ೨೦೦೯, ಪುಟ, ೧೮೨.

೩. ಯಶವಂತ ಚಿತ್ತಾಲ, "ಐವತ್ತೊಂದು ಕತೆಗಳು", ಗೀತಾ ಬುಕ್ ಹೌಸ್ : ಪ್ರಕಾಶಕರು, ಮೈಸೂರು ೨೦೦೯, ಪುಟ, ೧೨

೪. ಅದೇ,

೫. ಗೋಪಾಲಯ್ಯ ಕೆ.ಎಲ್., "ಯಶವಂತ ಚಿತ್ತಾಲ", ನವಕರ್ನಾಟಕ ಪ್ರಕಾಶನ, ೨೦೧೬.

೬. ಬಸವಣ್ಣ ಎಂ., 'ಈಡಿಪಸ್ ಕಾಂಪ್ಲೆಕ್ಸ್', ಅಭಿನವ ಪ್ರಕಾಶನ, ಬೆಂಗಳೂರು, ೨೦೧೫.

ಕನಕದಾಸರ ಕೀರ್ತನೆಗಳಲ್ಲಿ ಸಾಮಾಜಿಕತೆ

ಅಸಗೋಡು ಆನಂದಪ್ಪ .ಡಿ.

ಕರ್ನಾಟಕದ ಹರಿದಾಸ ಪರಂಪರೆಯಲ್ಲಿ ಕನಕದಾಸರು ವಿಶಿಷ್ಟಸ್ಥಾನವನ್ನು ಹೊಂದಿದ ಮಹಾನ್ ಸಂತ. ಮಹಾಂತ, ಭಕ್ತ, ದಾಸಶ್ರೇಷ್ಠ ಕಲಿ, ಕವಿ, ವಿಶ್ವಮಾನವ, ದಾರ್ಶನಿಕ ಎಂದೆಲ್ಲಾ ಜನರ ಮನಸ್ಸಿನಲ್ಲಿ ಒಡಮೂಡಿದ ಮಹಾಮಾನವತಾವಾದಿ. ಕನಕದಾಸರ ಸಾಹಿತ್ಯದಲ್ಲಿನ ಅನೇಕ ವಿಚಾರಗಳು ಸಾಮಾಜಿಕ, ಆಧ್ಯಾತ್ಮಿಕ, ವೈಚಾರಿಕತೆಯ ಹಿನ್ನಲೆಯನ್ನು ಒಳಗೊಂಡಿವೆ. ಕನಕ ಯಾವ ಮುಜುಗರವಿಲ್ಲದೇ ತನ್ನ ಕುಲದ ಬಗ್ಗೆ ಹೇಳಿಕೊಂಡಿದ್ದಾನೆ.

'ನಾವು ಕುರುಬರು ನಮ್ಮ ದೇವರು ಬೀರಯ್ಯ
ಕಾವ ನಮ್ಮಜ್ಜ ನರಕುರಿಯ ಹಿಂಡುಗಳ'

ಎಂದು ಕುಲದ ಬಗ್ಗೆ ಹೇಳಿದ್ದರೂ ಕುಲ ಜಾತಿಗಳನ್ನು ಮೀರಿ ನಿಂತ ಸಂತ. ಹರಿದಾಸನಾಗಿ ಹರನನ್ನು ಭಜಿಸಿದ ಭಕ್ತ. ಹರಿ-ಹರ ರ ಬಗ್ಗೆ ಹೇಳುತ್ತಾ

'ಆರು ಬಲ್ಲರು ಹರಿ ಹರಾದಿಗಳ ಮಹಿಮೆಯನು
ವಾರಿಜೋದ್ಭವ ಸುರೇಂದ್ರಾದಿಗಳಿಗಳವಲ್ಲಿ'

ಎನ್ನುತ್ತಾ ಎರಡು ಪಂಥಗಳನ್ನು ಸಮಾನವಾಗಿ ಕಂಡವನು. ಇದಲ್ಲದೇ ಆ ಸಂದರ್ಭದಲ್ಲಿ ಈತನಿಗೆ ಅಂದಿನ ಸಾಮಾಜಿಕ ಸ್ಥಿತಿಗತಿಗಳು ತುಂಬಾ ವ್ಯಥೆಯನ್ನುಂಟುಮಾಡುತ್ತಿದ್ದವು. ಆದ್ದರಿಂದಲೇ ಆತ ಸಾಮಾಜಿಕ ಚಳುವಳಿಯನ್ನು ಪ್ರಾರಂಭಿಸಿದ. ಸಾಮಾನ್ಯ ಜನರೊಂದಿಗೆ ಸಮಾನತೆಯ ಸ್ಥಾನಮಾನದ ವಿಚಾರಗಳಿಗೆ ಹೋರಾಟಕ್ಕಿಳಿದು ಜನಾಂಗಕ್ಕಾಗುತ್ತಿದ್ದ ನೋವು, ಅಪಮಾನ, ಬೇಸರ, ಕೀಳರಿಮೆಗಳನ್ನು ಭಕ್ತಿಯ ಆಚರಣೆಗಳಲ್ಲಿ ತೊಡಗಿಸಿಕೊಂಡೇ ಮಾನವೀಯ ಮೌಲ್ಯಗಳನ್ನು ಹೇಳುವ ಅನುಭಾವಿಯಾಗಿ ತನ್ನ ಅನುಭವಗಳನ್ನು ಸಾರುತ್ತಾ ಸಾಗಿದವನು ಕನಕ. ಬದುಕಿನ ಪ್ರತಿಕ್ಷಣಗಳನ್ನು ಜಾತಿಯ, ವರ್ಗದ, ಅಧಿಕಾರದ, ಸಂಪತ್ತಿನ, ಸ್ತುತಿಯ, ಹೀಯಾಳಿಕೆಯ, ಅಸೂಯೆಯ, ದಮನಿಕೆಯ, ಆರೋಪದ ಸತ್ಯ-ನಿತ್ಯಪರೀಕ್ಷೆಯ ಅಗ್ನಿ ದಿವ್ಯದಲ್ಲಿ ಅದ್ದಿಕೊಳ್ಳುತ್ತಾ ತನ್ನ ದೋಷ ದೌರ್ಬಲ್ಯಗಳನ್ನು

ಕಳೆದುಕೊಳ್ಳುತ್ತಾ ಮಾನವ ಕಲ್ಯಾಣದ ಕನವರಿಕೆಯಲ್ಲಿ, ಭೋದನೆಯಲ್ಲಿ, ಸಾಧನೆಯಲ್ಲಿ, ಸಿದ್ಧನಾಗಿ-ಬದ್ಧನಾಗಿ, ಪ್ರಬುದ್ಧನಾಗಿ ಎದ್ದು ನಿಂತವನು. ಕೆಳವರ್ಗದ ಜನಸಮುದಾಯಕ್ಕೆ ಘನತೆ ಗೌರವಗಳನ್ನು ತಂದುಕೊಟ್ಟವನು. ಬದುಕಿನುದ್ದಕ್ಕೂ ಸವಿಯಬಹುದಾದ ಅದ್ಭುತ ಮಾದರಿಗಳನ್ನು ನಿರ್ಮಿಸಿದವನು. ಅಲ್ಲದೇ ಸ್ವತಃ ತಾನು ಕೂಡಾ ಕುಲದ ಕಲಹದಲ್ಲಿ ನೊಂದು ಬೆಂದವನು. ಬಾಡ-ಬಂಕಾಪುರದ ಮಾಂಡಲೀಕನಾದರೂ ಜಾತಿಯ ಕಾರಣದಿಂದ ಅಪಮಾನ ನಿಂದನೆಗಳೊಂದಿಗೆ ಬೆಳೆದವನು. ಮಹಾಜ್ಞಾನಿಗಳೂ, ಶಾಸ್ತ್ರನಿಷ್ಠರಾದ ವ್ಯಾಸರಾಯರು ಮೊದಲಿಗೆ ಕನಕದಾಸರನ್ನು ಶಿಷ್ಯರನ್ನಾಗಿಸಿಕೊಳ್ಳಲು ಹಿಂದೆ-ಮುಂದೆ ನೋಡಿದರಲ್ಲದೆ "ಕುರುಬನಿಗೇನು ಮಂತ್ರವೂ ಕೋಣನ ಮಂತ್ರ" ಎಂದು ಅಪಹಾಸ್ಯದ ರೀತಿಯಲ್ಲಿ ಪ್ರಶ್ನಿಸುವುದು ಕನಕದಾಸರ ಜೀವಿತದ ಬಹುದೊಡ್ಡ ಅಪಮಾನವೇ ಆಗಿದೆ. ತಿಳಿಯದ ಅವಿವೇಕಿಗಳ ಬಾಯಲ್ಲಿ ಜಾತಿ-ಕುಲದ ಮಾತು ಸಹಜ, ಆದರೆ ವಿವೇಕಿಗಳೂ, ಪ್ರಾಜ್ಞರೂ ಕೂಡ ಕುಲವನ್ನೇ ದೊಡ್ಡದಾಗಿಸಿಕೊಂಡಿದ್ದ ರೀತಿ, ವರ್ತನೆ, ಕನಕರ ಅಂತಃಕರಣವನ್ನೇ ಕಲಕಿತ್ತ, ಹಾಗಾಗಿ ಅವರಿಂದ ಈ ರೀತಿಯ ಕೃತಿ ಹುಟ್ಟಲು ಸಾಧ್ಯವಾಯಿತು.

'ಆತ್ಮ ಯಾವಕುಲ ಜೀವ ಯಾವಕುಲ
ತತ್ತ್ವೇಂದ್ರಿಯ ಕುಲ ಪೇಳಿರಯ್ಯ
ಆತ್ಮಾಂತರಾತ್ಮ ನೆಲೆಯಾದಿಕೇಶವ
ಪ್ರೀತಿನಾದ ಮೇಲೆ ಯಾತರ ಕುಲವಯ್ಯ'

ಎಂದು ನೊಂದು ನುಡಿದಿದ್ದಾರೆ. ಅಲ್ಲದೇ ನೋವಿನಿಂದಲೇ ಅಂದಿನ ಸಮಾಜದಲ್ಲಿದ್ದ ಜಾತಿ ಪದ್ದತಿ ಮೇಲು ಕೀಳಿನ ಬಗ್ಗೆ ಹೇಳುತ್ತಾ ಜಾತಿಯನ್ನೇ ಮೇಲು ಎಂದು ತಿಳಿದು ಕಚ್ಚಾಡುವವರಿಗೆ

'ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ
ಕುಲದನೆಲೆಯನೇನಾದರು ಬಲ್ಲಿರಾ'

ಎಂದು ಪ್ರಶ್ನಿಸುತ್ತಾರೆ. ವ್ಯಂಗ್ಯಭರಿತ ಮಾತಿನಿಂದಲೇ ತಮ್ಮ ಸ್ಥಿತಿಯನ್ನು ಸಂಪೂರ್ಣವಾಗಿ ಬಯಲು ಗೊಳಿಸುತ್ತಾ

'ಕುಲವಲ್ಲದ ದಾಸ ಕುರುಬದಾಸ ನಾನಯ್ಯ
ಕಾಳಿದಾಸನ ಮನೆಯ ಕೀಳುದಾಸ
ಆಳುದಾಸ ನಾನು ಮೂಳದಾಸ" ಎನ್ನುತ್ತಾನೆ.

ಮತ್ಸರಿಗಳ ಕುಹಕಿಗಳ ನುಡಿಗಳಿಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸುವ ಕನಕದಾಸ ತನ್ನನ್ನು ಕುರುಬದಾಸ ಎಂದು ಹೆಮ್ಮೆಯಿಂದಲೇ ಹೇಳಿಕೊಳ್ಳುತ್ತಾನೆ. ಜಾತಿಯ

ಅಸಮಾನತೆಗೆ ಕನಕನ ಅಂತರಂಗ ಹೆಡೆಬಿಚ್ಚಿದ ನಾಗರಹಾವಿನಂತೆ ಬುಸುಗುಟ್ಟುತ್ತದೆ. ಹಾಗಾಗಿಯೇ ವ್ಯಂಗ್ಯ ಕುಹಕಗಳಿಂದಲೇ ಕೀಳುದಾಸ ಕುಲವಿಲ್ಲದ ಕುನ್ನಿದಾಸ, ಕುರುಬದಾಸ ಎಂದು ಉತ್ತರ ಕೊಡುತ್ತಾನೆ. ಇಲ್ಲೆಲ್ಲಾ ಕನಕನ ಜಾತಿಯ ಪ್ರಜ್ಞೆ ಹೊಗೆಯಾಡುತ್ತಿರುವುದನ್ನು ಕಾಣಬಹುದು. ದೇಹವನ್ನು ಸಮಾಜವಾಗಿ ಪರಿವರ್ತಿಸಿಕೊಂಡು ಕೀರ್ತನೆಗಳಲ್ಲಿ ಮಾತನಾಡುವ ಕನಕದಾಸರು ಅಡಿಗೆ ಮಾಡಬೇಕೆಂಬ ಪ್ರತಿಮೆಯಲ್ಲಿ ಸಮಾಜ ಬದಲಾವಣೆಯ ಪೂರ್ವ ಸಿದ್ಧತೆಯ ಕಾರ್ಯಕ್ರಮಗಳನ್ನು ಹೇಳಿದ್ದಾರೆ. ಮನುಷ್ಯನ ಹಸಿವನ್ನು ಹೋಗಲಾಡಿಸಲು ಬೇಕಾಗುವ ಪಥಾರ್ಥಗಳನ್ನು ಬೇಯಿಸಿಕೊಂಡು ಹಸಿವಿನ ಬಾಧೆಯನ್ನು ನೀಗಿಸಿಕೊಳ್ಳಲು ಬೇಕಾಗಿರುವ ಅಡಿಗೆಯ ಪರಿಕರಗಳು ಮಾನವನ ಬದುಕಿಗೆ ಪ್ರಮುಖವೆನಿಸುತ್ತವೆ. ಅಡಿಗೆಯನ್ನು ಮಾಡುವ ಪಥಾರ್ಥಗಳ ಜೊತೆಗೆ ಹೊಸದನ್ನು ಕಟ್ಟಿ ಹೇಳುವ ಪರಿಪಾಠ ದಾಸ ಚಳುವಳಿಯ ಕನಕದಾಸರ ಕಾವ್ಯಕೃತಿಯಲ್ಲಿ ಸಮಾಜಮುಖಿಯಾದ ಬೆಳವಣಿಗೆಗೆ ಪೂರಕವಾಗಿ ಬೆಳೆಯುತ್ತಾ ಹೋಗುತ್ತದೆ.

ಕನಕದಾಸರ ಕೀರ್ತನೆಯಲ್ಲಿ ಬರುವ ಅಡುಗೆ ಮಾಡಬೇಕೆನ್ನುವ ಕಾಯಕದಲ್ಲಿ ಸಮಾಜಕ್ಕೆ ಹಲವು ಭಾದೆಯ ಹಸಿವುಗಳು ಆವರಿಸಿಕೊಂಡಿವೆ. ಅವುಗಳನ್ನು ಹೋಗಲಾಡಿಸುವಲ್ಲಿ "ಜ್ಞಾನದ ಅಡಿಗೆಯನ್ನು ಮಾಡಬೇಕಣ್ಣಾ." ಎಂದು ಹೇಳುವುದರ ಮೂಲಕ ಅಡುಗೆ ಪದಕ್ಕೆ ಬೇರೊಂದು ಅರ್ಥವನ್ನು ಹೇಳುತ್ತಾರೆ. ಕನಕದಾಸರು ಮಾಡುತ್ತಿರುವ ಅಡಿಗೆ ಸಮಾಜದ ಬದಲಾವಣೆಗೆ ಬೇಕಾಗುವ ವಸ್ತುಗಳನ್ನು ಉಜ್ಜಿ, ತೊಳೆದು ಕಾಯಿಸುವ ಜ್ಞಾನದ ಅಡಿಗೆಯ ಕೆಲಸವಾಗಿದೆ. ಅಡಿಗೆ ಪದವಿಲ್ಲಿ ವಿವಿಧಾರ್ಥಗಳನ್ನು ಕೊಡುವಂಥದ್ದಾಗಿದೆ. ನಾಗರಿಕರು ಅಂಧಕಾರದಲ್ಲಿ ನಡೆದುಕೊಂಡು ಹೋಗುವ ದುಃಸ್ಥಿತಿಯನನ್ನು ತಲುಪಿದ್ದಾರೆ. ಅಡುಗೆ ಮಾಡಬೇಕಾಗಿರುವ ಪರಿಕರಗಳೆಲ್ಲಾ ಕಿಲುಬುಗಟ್ಟಿ ಧೂಳು ತುಂಬಿಕೊಂಡು ಕಸಕಡ್ಡಿಗಳೆಲ್ಲಾ ಕೆಡುತ್ತಿವೆ. ಅಂಥ ವಸ್ತುಗಳೆಲ್ಲಾ ಉಜ್ಜಿ ತೊಳೆದು ಸಮಾಜಕ್ಕೆ ಉಪಯುಕ್ತವಾದ ಅಡುಗೆ ಮಾಡುತ್ತಿದ್ದೇನೆ ಎನ್ನುವಲ್ಲಿ ಸಮಾಜದಲ್ಲಿ ಹರಡಿಕೊಂಡಿರುವ ಕೊಳಕು ಸಂಪ್ರದಾಯಗಳ ವಿರುದ್ಧ ಪ್ರತಿಭಟನೆ ಕಾಣುತ್ತದೆ. ಅರಿವಿನ ಬೆಳಕಿನೆಡೆಗೆ ಜನರನ್ನು ತರಬೇಕೆಂಬ ಆಂದೋಲನದ ವೇದಿಕೆಯನ್ನು ಕೀರ್ತನೆಗಳಲ್ಲಿ ರೂಪಿಸಿದ್ದಾರೆ. ಅಡಿಗೆಯನ್ನು ಮಾಡಬೇಕಣ್ಣ ಕೀರ್ತನೆಯಲ್ಲಿ ಹೀಗೆ ಹೇಳುತ್ತಾರೆ.

ಅಡಿಗೆಯನ್ನು ಮಾಡಬೇಕಣ್ಣ । ನಾನೀಗ ಸುಜ್ಞಾನ
ಅಡಿಗೆಯನ್ನು ಮಾಡಬೇಕಣ್ಣ
ಅಡಿಗೆಯನ್ನು ಮಾಡಬೇಕು ಮಥಿಸಬೇಕು ಮದಗಳನ್ನು
ಸಡಗರದಿ ಈ ಮನೆಯ ಸಾರಿಸಿ.

ಮನೆಯ ಒಳಗೆ ಬಿದ್ದರುವ ಧೂಳು ಕಸಕಡ್ಡಿ ಎಲ್ಲವನು ಗುಡಿಸಿ ಮನೆಯನ್ನು ಸಾರಿಸಬೇಕೆನ್ನುವಲ್ಲಿ ಸಮಾಜದಲ್ಲಿನ ಜನರ ನಡುವೆ ನಡೆಯುತ್ತಿರುವ ಆಗು ಹೋಗುಗಳ ಮಸುಕಾದ ಚಿಂತನೆಯ ಕ್ರಮವೊಂದನ್ನು ಹೇಳುತ್ತಿದ್ದಾರೆ. ಸಮಾಜದೊಳಗೆ ನಡೆಯುತ್ತಿರುವ ಕ್ರಿಯೆ, ಪ್ರತಿಕ್ರಿಯೆಗಳನ್ನು ಮನೆಯ ರೂಪಕದ ಮೂಲಕ ಹೇಳಿದ್ದಾರೆ. ಕನಕದಾಸರು ಭಕ್ತಿ ಪಂಥದ ಚಳುವಳಿಯ ಮೂಲಕ ಸಮಾಜದ ವಿಭಿನ್ನ ವಿಷಯಗಳನ್ನು ಶೋಧಿಸುವ ಹಾಗು ಸಾಮಾಜಿಕತೆಯನ್ನು ಕೈಗೆತ್ತಿಕೊಂಡಿರುವ ದೃಷ್ಟಿಕೋನ ಸಮಾಜಮುಖಿಯಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಧಿಕಾರದ ಶಕ್ತಿಯ ಮುಂದೆ ಮಾನವನ ಪ್ರೀತಿ, ವಿಶ್ವಾಸ ನಂಬಿಕೆಗಳು ಗೌಣವಾಗುತ್ತವೆ. ಅಧಿಕಾರಕ್ಕಾಗಿ ಕಚ್ಚಾಡುವ ಪ್ರವೃತ್ತಿ ಮುಂದುವರೆಯುತ್ತಿದೆ. ಅಧಿಕಾರದ ಆಸೆಗಾಗಿ ಮನುಷ್ಯ ಮನುಷ್ಯತ್ವವನ್ನೇ ಕಳೆದುಕೊಂಡು ಕೊಲೆ ಮಾಡುವ ಪ್ರವೃತ್ತಿ ನಡೆಯುತ್ತಲೇ ಇದೆ. ಕೆಲಸಕ್ಕೆ ಬಾರದಿರುವ ರಕ್ತ ಸಂಬಂಧಳಿಂದ ಮಾನವ ಸಂಬಂಧಗಳನ್ನು ತಿರಸ್ಕರಿಸುವಲ್ಲಿ ನೋವಿದೆ. ನಿರಾಶೆಯ ಮನಸ್ಸು ಎದ್ದು ಕಾಣಿಸುತ್ತದೆ. ಇಂಥ ಸಂದರ್ಭಗಳಲ್ಲಿ ದೈವವೊಂದನ್ನು ನೆಚ್ಚಿಕೊಳ್ಳುವ ಮನಸ್ಥಿತಿಯನ್ನು ಕನಕದಾಸರ ಕೀರ್ತನೆಗಳಲ್ಲಿ ಕಾಣಬಹುದು. ಒಟ್ಟಾರೆ ಕನಕದಾಸರು ಜಾತಿಯ ಅಪಮಾನಕ್ಕೆ ಸಿಲುಕಿದರೂ ಸಮಸ್ತ ಮನುಕುಲದ ಒಳಿತಿಗಾಗಿ ಶ್ರಮಿಸಿದ ಮಹಾ ಸಂತ. ಆತನ ಒಂದೊಂದು ಕೀರ್ತನೆಯೂ ಸಾಮಾಜಿಕ ಸಂದರ್ಭದಲ್ಲಿನ ನೋವಿಗೆ ಪ್ರತಿಕ್ರಿಯಯಾಗಿಯೇ ಬಂದಿವೆ ಎನ್ನುವುದನ್ನು ನಾವು ಮನಗಾಣಬೇಕು.

ಗ್ರಂಥಋಣ

೧. ಡಾ. ನರಸಿಂಹ ಮೂರ್ತಿ ಹೂವಿನಹಳ್ಳಿ : ಕನಕದಾಸರ ಕೃತಿಗಳಲ್ಲಿ ಸಮಾನತಾ ಸಮಾಜ : ೨೦೧೪ : ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ, ಕಾಗಿನೆಲೆ, ಹಾವೇರಿ ಜಿಲ್ಲೆ.

ಗಜಲ್‌ಗಳಲ್ಲಿ ಕಂಬನಿಯ ಕಣಿವೆ...

ಡಾ. ಮಲ್ಲಿನಾಥ ಎಸ್. ತಳವಾರ

"ನನಗೆ ಹಾಕಿದ್ದ ನಿರ್ಬಂಧದ ಬೇಡಿಗಳು ಅವಳಿಗಿಂತ ಭಿನ್ನವಾಗಿವೆ. ಆದರೂ, ಅವಳು ಬಂಧಮುಕ್ತಳಲ್ಲದಿದ್ದರೆ ನಾನೂ ಸ್ವತಂತ್ರನಲ್ಲ".
-ಔಡ್ರೆ ಲಾರ್ಡ್

ಮನುಷ್ಯ ತನ್ನ ಬೌದ್ಧಿಕ ಕಸರತ್ತಿನಿಂದಾಗಿಯೆ ಇತರ ಜೀವ ಸಂಕುಲಗಳಿಗಿಂತಲೂ ಭಿನ್ನವಾಗಿ ಕಾಣುತ್ತಾನೆ. ಇದು ನಾವು ಹೆಮ್ಮೆ ಪಡುವಂತ ಸಕಾರಾತ್ಮಕ ಬೆಳವಣಿಗೆಯೂ ಹೌದು, ನಾಚಿಕೆಯಿಂದ ತಲೆತಗ್ಗಿಸುವಂತ ನಕಾರಾತ್ಮಕ ಕ್ರಮವೂ ಇದೆ.ಯಾವ ಜೀವಿಗಳಲ್ಲೂ ಇರದ ಶೋಷಣೆ, ತಾರತಮ್ಯವೆ ತನ್ನ ಅಸ್ಮಿತೆ ಎನ್ನುವಷ್ಟರ ಮಟ್ಟಿಗೆ ಮನುಕುಲವನ್ನು ಆವರಿಸಿದೆ. ಪ್ರಕೃತಿಯ ಮಡಿಲಲ್ಲಿ ಸ್ತ್ರೀ-ಪುರುಷರು ಭೌತಿಕವಾಗಿ ಭಿನ್ನರೆ ಹೊರತು ಮಾನಸಿಕವಾಗಿಯಲ್ಲ. ಇಲ್ಲಿ ನಾವು ಗಮನಿಸಬೇಕಾದ ಮುಖ್ಯ ಅಂಶವೆಂದರೆ 'ಭಿನ್ನತೆ' ಎಂದರೆ ಅಸಹಾಯಕತೆ, ದೌರ್ಬಲ್ಯ ಎಂದಲ್ಲ!! ಆದರೆ ಪುರುಷನ ಮೆದುಳು ಮಾತ್ರ ಈ ಭಿನ್ನತೆಯನ್ನು ಬೇರೆ ರೀತಿಯಲ್ಲಿಯೆ ಅರ್ಥೈಸಿಕೊಂಡಿದೆ.ತಾನು ಮೇಲು, ಹೆಣ್ಣು ಕೀಳು ಎಂಬುದನ್ನು ಸಾರುತ್ತ, ಅದನ್ನೆ ಸಾಧಿಸುತ್ತ ಬಂದಿದ್ದಾನೆ. ಇವಾಗಲೂ ಅದನ್ನೆ ಚಾಚೂ ತಪ್ಪದೆ ಮಾಡುತಿದ್ದಾನೆ ಕೂಡ. ಯಾವತ್ತಿಗೂ ಇದು ಅವನಿಗೆ ತಪ್ಪು ಅನಿಸದಿರೋದೆ ಅವನ ಬುದ್ಧಿವಂತಿಕೆ ಮತ್ತು ಮನಸಾಕ್ಷಿಯ ಹೆಗ್ಗಳಿಕೆಯಾಗಿದೆ. ಎಷ್ಟರಮಟ್ಟಿಗೆ ಎಂದರೆ ಇತರರಿಂದ ಶೋಷಿತನಾದ ಪುರುಷನು ಸಹ ಸ್ತ್ರೀ ಶೋಷಣೆಗೆ ಮುಂದಾಗುತ್ತಾನೆ ಎಂದರೆ ಹೆಣ್ಣಿನ ದಮನದ ಪ್ರಮಾಣ ನಮಗೆ ಅರಿವಾಗದೆ ಇರದು!! ಹೆಣ್ಣನ್ನು ಹುಟ್ಟಲು ಬಿಡದ ನಮ್ಮ ಲಿಂಗ ವ್ಯವಸ್ಥೆ ಎಂಬ ಅಮಾನುಷ ಪದ್ಧತಿ ಹುಟ್ಟಿದ ಹೆಣ್ಣನ್ನು ಶಾಂತಿ, ನೆಮ್ಮದಿ ಹಾಗೂ ಸ್ವಾಭಿಮಾನದಿಂದ ಬದುಕಲು ಬಿಟ್ಟಿದ್ದು ಕಡಿಮೆಯೇ!! ಗಂಡು ಮೇಲು, ಹೆಣ್ಣು ಕೀಳು ಎಂಬ ಮದದ ಶ್ರೇಣೀಕರಣ ಮನೋಸ್ಥಿತಿಯು ಮಾನವನ ಮೂಲಭೂತ ಅಗತ್ಯಗಳಾದ ಆಹಾರ, ಆರೋಗ್ಯ, ಉಡುಗೆ-ತೊಡುಗೆ, ಶಿಕ್ಷಣ,

ಗೌರವ...ಎಲ್ಲದರಲ್ಲೂ ಕಾಣುತಿದ್ದೇವೆ. ಪುರುಷ ಪ್ರಧಾನ ಸಾಂಸ್ಕೃತಿಕ ನೆಲೆಯಲ್ಲಿ ಮಹಿಳೆಯನ್ನು ಮಹಿಳೆಯಾಗಿ ನೋಡದೆ ಏಕಕಾಲದಲ್ಲಿಯೆ ವೈಭವೀಕರಿಸುವುದು-ಉದಾಸೀನತೆ ಮಾಡುವುದು ನಡೆಯುತ್ತಿವೆ. ವಿಜ್ಞಾನ ಬೆಳೆಸಿದ ಮನುಷ್ಯ ವೈಜ್ಞಾನಿಕ ಮನಸನ್ನು ಬೆಳೆಸಿಕೊಳ್ಳಲು ಸಾಧ್ಯವಾಗದಂತಹ ಸಂಕೀರ್ಣ ಸ್ಥಿತಿಯಲ್ಲಿ ಇದ್ದಾನೆ. ಆದಾಗ್ಯೂ ಒಂದು ಆಶಾಕಿರಣ ಮುನ್ನೆಲೆಗೆ ಬರುತಿದೆ. ಇಂದು ಮಹಿಳಾ ಲೋಕವನ್ನು ಗ್ರಹಿಸುವ, ಅರ್ಥೈಸುವ ರೀತಿ ಬದಲಾಗಿದೆ, ಬದಲಾಗುತ್ತಿದೆ. ಹೆಂಗಳೆಯರ ಜೀವನವನ್ನು ಕುರಿತು ಚಿಂತಿಸುವ, ಶೋಧಿಸುವ ಹಾಗೂ ಪುನರ್ ನಿರ್ಮಿಸುವ ಪ್ರಯತ್ನಗಳು ನಡೆಯುತ್ತಿವೆ. ಲಿಂಗ ಸಮಾನತೆ ಸ್ಥಾಪಿಸುವ ಕಾಳಜಿ, ಕಕ್ಕುಲಾತಿ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಅಷ್ಟೇ ಅಲ್ಲ ; ವೈಯಕ್ತಿಕ ನೆಲೆಗಳಲ್ಲೂ ಪ್ರಕಟವಾಗುತ್ತಿವೆ. ಇವೆಲ್ಲದರ ಪ್ರತಿಫಲವೆಂಬಂತೆ ಸ್ತ್ರೀ ಸಂವೇದನೆಯ ಹೆಜ್ಜೆ ಗುರುತುಗಳು ಇಡೀ ಸಾರಸ್ವತ ಲೋಕವನ್ನೆ ಮುನ್ನಡೆಸುತ್ತಿವೆ. ನಮ್ಮ ಸಾಹಿತ್ಯ-ಸಾಂಸ್ಕೃತಿಕ ವಲಯದಲ್ಲಿ ಪ್ರೇಮಯುದ್ಧ, ಸೆಣೆಸಾಟ... ಮುಂತಾದವುಗಳನ್ನು ವಸ್ತುವನ್ನಾಗಿಟ್ಟುಕೊಂಡು ಬರೆಯುವಾಗ ಮುಖ್ಯವಾಗಿ ಹೆಣ್ಣನ್ನೇ ಕೇಂದ್ರ ಬಿಂದುವಾಗಿಟ್ಟುಕೊಂಡಿದ್ದಾರೆ. ಇದು ಹೆಚ್ಚು ಕಡಿಮೆ ಭೂಮಂಡದಲ್ಲಿರುವ ಎಲ್ಲ ಭಾಷೆಗಳ ಸಾಹಿತ್ಯ ಪ್ರಕಾರಗಳಲ್ಲಿ ಕಾಣಬಹುದು. ಕೆಲವಂತೂ ಹೆಣ್ಣಿನ ನೋವಿಗೆ ಅಕ್ಷರಶಃ ಮಿಡಿದಿವೆ, ಸಂತೈಸಿವೆ ; ಧೈರ್ಯ ತುಂಬಿವೆ. ಅತಿಥಿಗಳ ಸತ್ಕಾರ ಮಾಡುತ್ತ, ಹೆಣ್ಣಿನ ಹೃದಯದೊಂದಿಗೆ ಸಂಭಾಷಿಸುತ್ತ; ಕೋಮಲತೆಯನ್ನೆ ಮೈವೆತ್ತು ಗಂಡಿನ ಅಲ್ಲಲ್ಲ... ಇಡೀ ಸಾರಸ್ವತ ಲೋಕದ ಸಹೃದಯ ಓದುಗರ ಮನವನ್ನು ಮದಿರೆಯಂತೆ ಹೀರಿರುವ ಗಜಲ್ ನೋವು, ತಳಮಳ, ಸಂಕಟ, ಕಂಬನಿ, ಮುಲಾಮು, ಅಪ್ಪುಗೆ, ಸಂತೈಸುವಿಕೆಯನ್ನೆ ತನ್ನ ಅಶಅರ್ ಆಗಿ ಬಳಸಿಕೊಂಡಿದೆ.ಅಂತೆಯೇ 'ಹೆಣ್ಣು ಮಂದಹಾಸವನ್ನು ಬೀರಿದರೆ 'ಗಜಲ್' ಹುಟ್ಟುತ್ತದೆ ಎನ್ನಲಾಗುತ್ತದೆ.ಈ ಗಜಲ್ ಗಳಲ್ಲಿ ನಮ್ಮ ಸಾಮಾಜಿಕ ವ್ಯವಸ್ಥೆಯ ಅದರಲ್ಲೂ ಲಿಂಗ ತಾರತಮ್ಯದ ಪರಾಕಾಷ್ಠೆಯನ್ನು ಗುರುತಿಸಬಹುದು.ಹಿಂದಿಯ ಪ್ರಸಿದ್ಧ ಗಜಲ್ ಗೋ ಮೃದುಲಾ ಅರುಣಾ ರವರ ಒಂದು ಷೇರ್ ಸ್ತ್ರೀಯರ ಮನಸ್ಸಿನ ಚಿತ್ರಣವನ್ನೇ ತೆರೆದಿಡುತ್ತದೆ.

"ಅವನು ನನ್ನ ಹಣೆಯಲ್ಲಿ ತಾರೆಗಳನ್ನು ಸಿಂಗರಿಸುವವನಿದ್ದ
ನಾ ಯಾವಾಗಲೂ ತಲೆ ತಗ್ಗಿಸಿ ಇರಬೇಕು ಎನ್ನುವ ಷರತ್ತು ಇತ್ತು"

ತನ್ನ ಪ್ರಿಯತಮ/ಗಂಡ ಹಣೆಯಲ್ಲಿ ತಾರೆಗಳನ್ನು ತಂದು ಸಿಂಗರಿಸುತಿದ್ದಾನೆಂದು ಸಂಭ್ರಮಿಸಬೇಕೊ ಅಥವಾ ತನ್ನ ಸ್ವಾಭಿಮಾನವನ್ನೆ ನುಂಗಲು

ಹವಣಿಸುತಿದ್ದಾನೆಂದು ಮರುಕ ಪಡಬೇಕೊ ಎನ್ನುವ ಭಾವಗಳ ತುಮುಲ ಇಲ್ಲಿದೆ. ಪ್ರೀತಿ ತೋರಿಸೋಕೂ ಕೂಲಿ ಬಯಸುತ್ತಾರಾ, ಪ್ರೀತಿ ನಿರ್ಮಲ, ನಿಸ್ವಾರ್ಥ ಇಲ್ಲವೇ ಎನ್ನುವ ಚಿಂತನೆ ಒಂದು ಕ್ಷಣ ಮನಸನ್ನು ಅಧೀರಗೊಳಿಸುತ್ತದೆ!! ಅಂತೆಯೇ ಡಾ.ಭಾವನಾ ಅವರು ಗಂಡು ಕುಲಕ್ಕೆ, ಪುರುಷ ಪ್ರಧಾನ ಸಮಾಜದ ಧೋರಣೆಗಳ ವಾರಸುದಾರರಿಗೆ ಈ ರೀತಿಯಾಗಿ ಕೇಳಿದ್ದಾರೆ.

"ನನಗೆ ಅಳಿಸಿ ನಿಮಗೆ ಏನು ಸಿಕ್ಕಿತು
ಆತ್ಮವನ್ನೂ ನಗ್ನಗೊಳಿಸಿ ಏನು ಸಿಕ್ಕಿತು"

ಕನ್ನಡ ಗಜಲ್ ಸಾಹಿತ್ಯ ಅರ್ಧ ಶತಮಾನದ ಐತಿಹಾಸಿಕ ಪರಂಪರೆಯನ್ನು ಹೊಂದಿದೆ. ಅಸಂಖ್ಯಾತ ಗಜಲ್ ಪ್ರೇಮಿಗಳು ಗಜಲ್ ಗಳನ್ನು ಗುನುಗುತಿದ್ದಾರೆ, ಬರೆಯುತ್ತಿದ್ದಾರೆ; ಓದುತ್ತಿದ್ದಾರೆ.ಪ್ರೀತಿ, ಪ್ರೇಮ, ಪ್ರಣಯ, ವಿರಹಗಳೊಂದಿಗೆ ಗಜಲ್ ರಚನೆ ಆರಂಭವಾದರೂ ಇಂದು ಇಡೀ ವ್ಯವಸ್ಥೆಯ ಅನಾವರಣ ಮಾಡಲು ತುದಿಗಾಲಲ್ಲಿ ನಿಂತಂತಿದೆ!!ಈ ನೆಲೆಯಲ್ಲಿ ಇಂದು ಗಜಲ್ ಗಳಲ್ಲಿ ಇರದ ವಿಷಯಗಳೆ ಇಲ್ಲವೆಂದರೂ ನಡೆದೀತು.ಸ್ತ್ರೀ ಸಂವೇದನೆಯ ಪರಿಧಿಯಲ್ಲಿ ಹಲವಾರು ಗಜಲ್ ಗೋ ಅವರು ಮಹಿಳೆಯರು ಅನುಭವಿಸುತ್ತಿರುವ ಸಂಕಟಗಳ ಮಾಲೆಯನ್ನು ತಮ್ಮ ಗಜಲ್ ಗಳಲ್ಲಿ ಹೆಣೆದಿದ್ದಾರೆ, ಹೆಣೆಯುತ್ತಿದ್ದಾರೆ. ವೈಧವ್ಯದ ತೊಳಲಾಟ, ಭ್ರೂಣಹತ್ಯೆಯಂತ ಪಾಪಿಗಳ ಲೋಕ, ಕಾಮಪಿಪಾಸುಗಳ ಗಂಡಸ್ತನ, ಹಸಿಮಾಂಸ ಮಾರುವ ಕೆಂಪು ದೀಪದಡಿಯ ರಕ್ತದ ಕಲೆಗಳು, ಹೆತ್ತವರ ಕಂಬನಿಯಲಿ ಮಜ್ಜನಗೈಯುತ್ತಿರುವ ಮಕ್ಕಳು, ಮದುವೆಯಂಹ ಮುತ್ತಿನ ಸಂಕೋಲೆಯಂಥಹ ಹಲವು ಸಮಸ್ಯೆಗಳ ಕುರಿತು ಜಿಜ್ಞಾಸೆ ಮಾಡುತ್ತ ಸಾಮಾಜಿಕ ವ್ಯವಸ್ಥೆಯ ಅಧಃಪತನದ ಬಗೆಗೆ ಆತಂಕವನ್ನು ವ್ಯಕ್ತ ಪಡಿಸಿದ್ದಾರೆ.

ಮನುಷ್ಯ ಬುದ್ಧಿವಂತನಾದಂತೆ ಮತಿಹೀನನೂ ಆಗುತಿದ್ದಾನೆ. ಕೂತೂಹಲದ ಹಿಂದೆ ಬಿದ್ದಂತ ಮನುಷ್ಯ ವಿಜ್ಞಾನವನ್ನು ತನಗೊಲಿದಂತೆ ಬಳಸಿಕೊಳ್ಳಲು ಆರಂಭಿಸಿದನು.ಗರ್ಭದಲ್ಲಿರುವ ಮಗು ಯಾವುದೆಂದು ತಿಳಿಯಲು ಶಕ್ಯನಾದನು.ಇದುವೆ ಸ್ತ್ರೀ ಸಂಕುಲಕ್ಕೆ ಕೊಡಲಿ ಪೆಟ್ಟು ಹಾಕಲು ನಾಂದಿಯಾಡಿತು.ಅದರ ಫಲವೇ ಶಿಶು ಭ್ರೂಣಹತ್ಯೆ. ಅದೂ ಹೆಣ್ಣು ಮಗು ಎಂದು ಗೊತ್ತಾಗುತ್ತಲೆ ತೊಟ್ಟಿಲಲ್ಲಿ ತೂಗುವ ಮುಂಚೆಯೇ ಕಪನ್ ಸುತ್ತಿ ದಪನ್ ಮಾಡಲಾರಂಭಿಸಿದರು.ದುರಂತದ ಹಾಗೂ

ಆತಂಕದ ವಿಷಯವೆಂದರೆ ಭ್ರೂಣಹತ್ಯೆಗೆ ಮುನ್ನುಡಿ ಬರೆಯುತ್ತಿರುವವರೆಂದರೆ ಶೈಕ್ಷಣಿಕ ಹಾಗೂ ಸಾಮಾಜಿಕ ವ್ಯವಸ್ಥೆಯ ಮುನ್ನೆಲೆಯಲ್ಲಿ ಇರುವವರು!! ಇಂಥಹ ಶಿಶುಹತ್ಯೆಯ ಅಮಾನುಷ ಕೃತ್ಯವನ್ನು ನಮ್ಮ ಗಜಲ್ ಗೋ ಅವರು ತಮ್ಮ ಅಶಅರ್ ಮೂಲಕ ವಿಷಾದ ವ್ಯಕ್ತಪಡಿಸಿದ್ದಾರೆ, ಸಂಕಟ ಪಟ್ಟಿದ್ದಾರೆ ; ತಣ್ಣನೆಯ ಪ್ರತಿರೋಧ ಒಡ್ಡಿದ್ದಾರೆ. ಚಿದಾನಂದ ಸಾಲಿ, ಕೆ. ಸುನಂದಾ, ಡಾ.ರೇಖಾ ಪಾಟೀಲ, ಸಿದ್ಧರಾಮ ಹೊನ್ಕಲ್, ಮಹೇಶ್ ಬಿ. ಕವಲ್ದಾರ್, ಡಾ.ಜಯದೇವಿ ಗಾಯಕ್ವಾಡ್.... ಮುಂತಾದವರು ಪುರುಷ ಪ್ರಧಾನ ವ್ಯವಸ್ಥೆಯ ಭೋಗ ಸಂಸ್ಕೃತಿಯನ್ನು ಎಳೆ ಎಳೆಯಾಗಿ ಓದುಗರ ಮುಂದೆ ಬಿಡಿಸಿಟ್ಟಿದ್ದಾರೆ. ಅಕ್ಕ, ತಂಗಿ, ಅತ್ತೆ, ನಾದಿನಿ, ಮಗಳನ್ನು ಬಯಸದ ಗಂಡು ಜೀವ ಬಯಸೋದು ಮಾತ್ರ ತನ್ನನ್ನು ಭಗವಂತನ ಸ್ವರೂಪವೆಂದು ಪೂಜಿಸುವ, ಸೇವೆ ಮಾಡುವ ಹೆಂಡತಿಯನ್ನು!! ಇದನ್ನು ಕೆ.ಸುನಂದಾ ಅವರು 'ಸ್ತ್ರೀ' ಎಂಬ ರದೀಫ್ ಬಳಸಿಕೊಂಡು ಗಂಡಿನ ಧೋರಣೆಯನ್ನು ಪ್ರಶ್ನಿಸಿದ್ದರೆ, ಇದನ್ನೇ ವಿಭಿನ್ನ ರೀತಿಯಲ್ಲಿ ಅಂದರೆ ಪುರುಷ ಸ್ತ್ರೀಯರನ್ನು ಮಗು ಹೆರುವ ಯಂತ್ರವನ್ನಾಗಿ ಮಾರ್ಪಡಿಸಿಕೊಂಡಿರುವುದನ್ನು ರೇಖಾ ಪಾಟೀಲ ಅವರು ವಿಡಂಬಿಸಿದ್ದಾರೆ.ಇನ್ನೂ ಪುರುಷನ ಪೌರುಷಕ್ಕೆ ಕಾವಲುಗಾರರಾಗಿದ್ದ ಮನುವಿನ ವಾದವನ್ನು ಸಿದ್ದರಾಮ ಹೊನ್ಕಲ್ ಅವರು ಖಂಡಿಸಿದ್ದಾರೆ.

"ಎಂಥ ಅವಮಾನ, ಎಂಥ ಆರಾಧನೆ; ಬಗೆಹರಿಯದೀ ಬಂಧವ
ಮರವಾಗುವ ಮೊದಲೇ ಸಸಿಯಂತೆ ಕಡಿದುಬಿಟ್ಟೆ ದೇವತೆಯೇ"
–ಚಿದಾನಂದ ಸಾಲಿ (ಮೌನ)

"ಅಕ್ಕ, ತಂಗಿ, ಅತ್ತೆ, ನಾದಿನಿ, ಮಗಳು ಯಾರೂ ಬೇಡ
ಹೆಂಡತಿ ಮಾತ್ರವೇ ಏಕೆ ಬೇಕು ಎಂದು ಕೇಳುವಳು ಸ್ತ್ರೀ"
–ಕೆ. ಸುನಂದಾ (ಇನಿದನಿ)

"ಭ್ರೂಣಹತ್ಯೆ ಮಾಡುವರು ವರದಕ್ಷಿಣೆಗೆ ಬಲಿಕೊಡುವರು ನಿನ್ನನು
ವಂಶಾಭಿವೃದ್ಧಿಗೆ ಮಾತ್ರ ಹೆಣ್ಣು ಬೇಕಂತಾರೆ ಗಂಡಸರು"
–ಡಾ.ರೇಖಾ ಪಾಟೀಲ (ಚಿದಾನಂದ ಸಾಲಿ ಅವರ ಸಂಪಾದಿತ 'ಕನ್ನಡ ಗಜಲ್')

"ಹೆಣ್ಣು ಅಬಲೆ ತಂದೆ ಪತಿ ಮಕ್ಕಳ ಆಶ್ರಯದಿ ಇರಬೇಕೆಂದನು ಮನು
ಕಾಯುವ ಕೈಗಳೇ ಭ್ರೂಣಗಳ ಹಿಸುಕುತ್ತಿವೆ ಯಾರಿಗೆ ನೀಡಲಿ
ದೂರು ಸಾಕಿ"
–ಸಿದ್ಧರಾಮ ಹೊನ್ಕಲ್ (ಆತ್ಮಸಖಿಯ ಧ್ಯಾನದಲ್ಲಿ..)

"ಹೆಣ್ಣು ಹುಟ್ಟಿದಳು ಎಂದು ಜರಿಯುವಿರಿ
ನಮ್ಮ ಹುಟ್ಟಿಗೆ ಕಾರಣವ ಮರೆಯುವಿರಿ"
–ಮಹೇಶ ಬಿ. ಕವಲ್ದಾರ್ (ಮಲ್ಲಿಗೆಯ ಮೊಗ್ಗು)

"ದೇವರು ಧರ್ಮದ ಎಲ್ಲಾ ಗೋಡೆಗಳ ದಾಟಬೇಕಾಗಿದೆ
'ಜಯಾ' ಅನುದಿನವೀ ನಾಡಲ್ಲಿ ಹೆಣ್ಣಿನ ಮಲ್ಲಿಗೆಯ ನಗು ಅರಳಬೇಕಾಗಿದೆ"
–ಡಾ.ಜಯದೇವಿ ಗಾಯಕ್ವಾಡ್ (ಚಿದಾನಂದ ಸಾಲಿ ಅವರ
ಸಂಪಾದಿತ 'ಕನ್ನಡ ಗಜಲ್')

ಹೆಣ್ಣನ್ನು ಪೂಜಿಸುವ ನಾಡಿನಲ್ಲಿ ಇಂದು ಎಗ್ಗಿಲ್ಲದೆ ಹೆಣ್ಣಿನ ಹತ್ಯೆ ನಿರಾತಂಕವಾಗಿ ಸಾಗುತ್ತಿದೆ. ಸ್ತ್ರೀ–ಪುರುಷರ ಲಿಂಗಾನುಪಾತ ಅಸಮಾನತೆಯು ಗೂಡಾಗಿದೆ.ಆಧುನಿಕತೆಯ ಭರಾಟೆಯಲ್ಲಿ ಎಳೆ ಕಂದಮ್ಮಗಳ ಮಾರಣಹೋಮ ನಡೆಯುತ್ತಿದೆ.ಇದು ನಿಲ್ಲಬೇಕಿದೆ, ಮಹಿಳೆಯರು ತಮ್ಮ ಅಸಹಾಯಕತೆಯನ್ನು ಬದಿಗೊತ್ತಿ ಮುಂದಡಿ ಇಡಬೇಕಿದೆ; ಸ್ವಾವಲಂಬನೆಯ ಜೀವನವನ್ನು ಸಾಗಿಸಬೇಕಿದೆ.

ಮಂಗಳಸೂತ್ರದ ಘನತೆಯು 'ಸುಮಂಗಲಿ'ಯ ಪೂಜ್ಯತೆಯನ್ನು ಸೃಷ್ಟಿಸಿರುವುದರ ಜೊತೆ ಜೊತೆಗೆ 'ವಿಧವೆ' ಎಂಬ ಅಮಂಗಳೆಯನ್ನು ನೀಡಿದೆ. ಹೆಣ್ಣು ತನ್ನದಲ್ಲದ ತಪ್ಪಿಗೆ ವೈಧವ್ಯದ ಪಟ್ಟವನ್ನು ಹೊತ್ತು, ಇಡೀ ಸಮಾಜದ ದೂಷಣೆಗೆ ಗುರಿಯಾಗಿದ್ದಾಳೆ. ಯಾವ ಶುಭ ಕಾರ್ಯಗಳಿಗೂ ಅವಳನ್ನು ಆಮಂತ್ರಿಸದೆ ಮೂಲೆಯ ಅತಿಥಿಯನ್ನಾಗಿಸಿದ ಪರಿ ಶೋಚನೀಯ! ಇನ್ನೂ ಕೆಲವೆಡೆ ಆರ್ಥಿಕ ಅವಲಂಬನೆಯ ಕುಸಿತದಿಂದ ಕುಟುಂಬಗಳು ಬೀದಿ ಪಾಲಾಗಿರುವುದನ್ನೂ ಗುರುತಿಸಬಹುದು.ನಮ್ಮ ದೇಶದ ಗಡಿಯನ್ನು ಕಾಯುತ್ತಿರುವ ಸೈನಿಕರು ಹೆಂಡತಿಯರು ಯಾವಾಗಲೂ ತಮ್ಮ ತಾಳಿಯನ್ನು ಪೂಜಿಸುತ್ತ, ಗಂಡನ ಆಯುಷ್ಯವನ್ನು ಬೇಡುತ್ತ ಇರುತ್ತಾರೆ.ಅವರ ಮನಸ್ಸಿನಲ್ಲಿ ಯಾವಾಗಲೂ ವೈಧವ್ಯವು ಭೂತವಾಗಿ ಕಾಡುತ್ತಿರುತ್ತದೆ.

ಭಯ, ಆತಂಕ, ತೊಳಲಾಟ, ಭವಿಷ್ಯದ ಚಿಂತೆ..ಎಲ್ಲವೂ ಅವಳನ್ನು ಹರಿದು ಮುಕ್ಕುತ್ತಿರುತ್ತವೆ. ಇದನ್ನು ಎಚ್.ಎಸ್. ಮುಕ್ತಾಯಕ್ಕನವರ ಷೇರ್ ಒಂದರಲ್ಲಿ ಕಾಣಬಹುದು.

"ಸೈನಿಕನ ಪ್ರಿಯೆಯ ಹೃದಯದ ತುಂಬ ಏನೊ ಅವ್ಯಕ್ತ ದುಗುಡ
ವೈಧವ್ಯದ ವಿರೂಪ ಅಲ್ಲಿ ಮಾಡುತ್ತದೆ ಅಟ್ಟಹಾಸವನ್ನು"
-ಎಚ್. ಎಸ್. ಮುಕ್ತಾಯಕ್ಕ (ಮೈ ಔರ್ ಮೇರಿ ಲಮ್ಹೆ)

"ಹನ್ನೆರಡು ತುಂಬಲಿಲ್ಲ ಋತಿಮತಿಯಾದಳು ಎಂದೇ
ಇಪ್ಪತ್ತು ನಡೆದಿಲ್ಲ ಒಬ್ಬಂಟಿಯಾದಳು ಎಂದೆ"
-ಅಮೃತ ಎಂ.ಡಿ (ಭಾವನೆಗಳಿಲ್ಲದವಳ ಭಾವತೀರಯಾನ)

ಬಾಲ್ಯವಿವಾಹ ಎಂಬುದು ನಮ್ಮ ಪ್ರಜ್ಞಾವಂತ ಸಮಾಜಕ್ಕೆ ಅಂಟಿದ ಒಂದು ಕಪ್ಪು ಚುಕ್ಕೆ.ಮಗಳು ಋತಿಮತಿಯಾದಳೆಂದರೆ ಸಾಕು ಅವಳಿಗೆ ಮದುವೆ ಮಾಡಲು ಮುಂದಾಗುವಂತಹ ಪಾಲಕರಿಗೇನೂ ಬರವಿಲ್ಲ ನಮ್ಮಲ್ಲಿ.ಬೆಳೆದ ಮಗಳು ಮನೆಯಲ್ಲಿದ್ದರೆ ಉಡಿಯಲ್ಲಿ ಬೆಂಕಿ ಕೆಂಡ ಕಟ್ಟಿಕೊಂಡಂತೆ ಎಂಬ ಅನಿಷ್ಟ ಭಾವನೆ ಅಸಂಖ್ಯಾತ ಹೆತ್ತವರಲ್ಲಿ ಮನೆಮಾಡಿದೆ. ಇದನ್ನು ಅಮೃತ ಎಂ.ಡಿ ಅವರು ತುಂಬಾ ಸರಳವಾಗಿ ಮತ್ತು ನೇರವಾಗಿ ತಮ್ಮ ಗಜಲ ಒಂದರಲ್ಲಿ ದಾಖಲಿಸಿದ್ದಾರೆ.

ಮನುಷ್ಯ ಪುರುಷಾರ್ಥಗಳಲ್ಲಿ ಒಂದಾದ 'ಕಾಮ'ದ ಅರ್ಥವನ್ನು ಅಪಾರ್ಥವಾಗಿ ಅರ್ಥೈಸಿಕೊಂಡಿರೋದೆ ಹೆಚ್ಚು.ಅದರಲ್ಲಿ ತನ್ನ ದೊಡ್ಡಸ್ತಿಕೆ ಹುಡುಕುತ್ತಿರುವುದು ಅವಮಾನಕರ ಸಂಗತಿಯಾಗಿದೆ.ಪ್ರಕೃತಿಯ ಮಡಿಲಲ್ಲಿ ತನಗೆ ಸರಿಸಮಾನವಾದ ಹೆಣ್ಣನ್ನು ಬರಿ ಭೋಗದ ವಸ್ತುವೆಂದು ತಿಳಿದು, ಅದಕ್ಕಾಗಿ ಹಗಲಿರುಳು ಜೊಲ್ಲು ಸುರಿಸುತ್ತಿರುವವರ ಸಂಖ್ಯೆಯೆ ಹೆಚ್ಚು. ವಯಸ್ಸಿನ ಇತಿಮಿತಿಯಿಲ್ಲದೆ ಎಳೆಯ ಕಂದಮ್ಮಗಳಿಂದ ಹಿಡಿದು ತಾಯಿ, ಅಜ್ಜಿ ಸಮಾನರಾದ ವೃದ್ಧೆಯರನ್ನೂ ತನ್ನ ಕಾಮುಕ ಕಣ್ಣಿನಿಂದಲೇ ನೋಡುತಿದ್ದಾನೆ. ಹೆಣ್ಣನ್ನು ಏಕಕಾಲದಲ್ಲಿಯೆ ರಕ್ಷಿಸುವ ಹಾಗೂ ಭಕ್ಷಿಸುವ ಏಕೈಕ ಪ್ರಾಣಿಯೆಂದರೆ ಅದು ಮೀಸೆ ಹೊತ್ತ ಗಂಡು ಪ್ರಾಣಿ! ಹೆಣ್ಣಿಗೆ ತಾಯಿಯ ಗರ್ಭವೂ ಇಂದು ಸುರಕ್ಷಿತವಾದ ಸ್ಥಳವಾಗಿ ಉಳಿದಿಲ್ಲ!! ಇಂಥ ಅಮಾನತು ಅತ್ಯಾಚಾರಗಳನ್ನು ಪ್ರತಿ ಸಂವೇದನಾಶೀಲ

ಗಜಲ್ ಗೋ ತನ್ನ ಕಲಂ ನಿಂದ ತಿವಿಯುತ್ತಲೆ ಬಂದಿದ್ದಾರೆ. ಈ ಅತ್ಯಾಚಾರಕ್ಕೆ ಜಮೀನ್ದಾರಿ ಪದ್ಧತಿ, ಗೌಡಿಕೆಯ ದರ್ಬಾರ್, ಅಧಿಕಾರದ ಮದ, ದುಡ್ಡಿನ ಸೊಕ್ಕು... ಎಲ್ಲವೂ ಸಾಥ್ ನೀಡುತ್ತಿರುವುದನ್ನು ಡಾ.ಕಾಶೀನಾಥ ಅಂಬಲಗೆ ಅವರು ತಮ್ಮ ಗಜಲ್ ನ ಷೇರ್ ನಲ್ಲಿ ಪ್ರಸ್ತಾಪಿಸಿದ್ದಾರೆ.ಸಮಾಜದಲ್ಲಿ ನಡೆಯುತ್ತಿರುವ ಇಂಥ ಹೇಯ ಕೃತ್ಯಗಳನ್ನು ಕಂಡು, ಕೇಳಿ ಮನ ನೊಂದವರಿದ್ದಾರೆ.ದಾನವ್ವನಂತಹ ಹೆಂಗಳೆಯರ ಶೀಲವನ್ನು ಕಬಳಿಸಿದ, ಕಬಳಿಸುತ್ತಿರುವ ಪುಂಡರು ನಮ್ಮ ಸಮಾಜದ ಒಂದು ಭಾಗ ಎಂಬುದೇ ನಾಚಿಕೆಯ ಸಂಗತಿ. ಅಂತೆಯೇ ನಾಗೇಶ್ ಜೀ. ನಾಯಕ್ ರವರ ಷೇರ್ ನ ಮಿಸ್ರಾ-ಎ-ಸಾನಿ ಹೆಣ್ಣು ಜೀವದ ಸಂಕಟವನ್ನು ಅರುಹುತ್ತಿದೆ. 'ಈಗೀಗ ಗಂಡು ಕುಲಕೆ ಜೀವ ನೀಡುವೆನೆಂಬ ಭಯ ಕಾಡುತ್ತಿದೆ' ಈ ಮಿಸ್ರಾ ಓದುತ್ತಿದ್ದರೆ ತಾಯಿ ಗರ್ಭದ ಅಸಹಾಯಕತೆ, ಕಾಮವೇ ತನ್ನ ಗಂಡಸ್ತನ ಎಂದು ಬೀಗುವ ಪುರುಷರನ್ನು ಕಂಡು ತಲೆ ತನ್ನಿಂದ ತಾನೇ ನೆಲ ನೋಡುತ್ತದೆ!!ಈ ಅತ್ಯಾಚಾರದ ಅವಾಂತರಗಳನ್ನು ಶ್ರೀಮತಿ ಪ್ರಭಾವತಿ ದೇಸಾಯಿ, ಪ್ರೊ.ಇಟಗಿ ಈರಣ್ಣ, ದೊಡ್ಡಕಲ್ಲಹಳ್ಳಿ ನಾರಾಯಣಪ್ಪ, ಲಕ್ಷ್ಮೀ ದೊಡಮನಿ, ಶಮಾ ಜಮಾದಾರ, ಭಾಗ್ಯವತಿ ಕೆಂಭಾವಿ... ಮುಂತಾದ ಹಲವಾರು ಗಜಲ್ ಗೋ ಅವರು ತಮ್ಮ ಗಜಲ್ ಗಳಲ್ಲಿ ಮನ ಮಿಡಿಯುವಂತೆ ಪೋಣಿಸಿದ್ದಾರೆ.

"ರಸ ಹೀರಿ ಹಣ್ಣು ಸಿಪ್ಪೆ ತಿಪ್ಪೆಗೆ ಎಸೆಯಲಾಗಿತ್ತು
ಲೋಕ ಕಳಂಕಿಯೆನಲು ಕರುಳು ಸುಟ್ಟು ಬೂದಿಯಾಯಿತು ಸಖಿ"
-ಶ್ರೀಮತಿ ಪ್ರಭಾವತಿ ದೇಸಾಯಿ (ನಿನಾದ)

"ಊರ ಗೌಡನ ಮಗನಿಗೆ ಮೀಸೆ ಮೂಡಿದ್ದೇ ಕೆಟ್ಟ ಕಾಲ
ಯುವತಿಯರು ನದಿ ನೀರಿಗೆ ಬರೋದು ಬಿಟ್ಟದ್ದೇ ಕೆಟ್ಟ ಕಾಲ"
-ಡಾ. ಕಾಶೀನಾಥ ಅಂಬಲಗೆ (ಆಯ್ದ ಎಪ್ಪತ್ತೊಂದು ಕನ್ನಡ ಗಜಲ್ ಗಳು)

"ಮೈಯ ಎತ್ತರ ಅಳೆಯಬೇಡಿರಿ ಮನದ ಎತ್ತರ ಅಳೆಯಿರಿ
ಮೈಯ ಹತ್ತಿರ ಎಳೆಯಬೇಡಿರಿ ಮನವ ಹತ್ತಿರ ಎಳೆಯಿರಿ"
-ಪ್ರೊ. ಇಟಗಿ ಈರಣ್ಣ (ಚಿದಾನಂದ ಸಾಲಿ ಅವರ ಸಂಪಾದಿತ 'ಕನ್ನಡ ಗಜಲ್')

"ಅಸಂಖ್ಯ ಚೋಮ ತಾತರ ಕನಸಿನ ನೊಗ ನಿನ್ನ ಹೆಗಲ ಮೇಲೆಯೇ ಇರಲಿ
ದಾನವ್ವರ ಕೊನೆ ಉಸಿರ ಜ್ವಾಲೆ ನಿನ್ನ ಎದೆಯ ಮೇಲೆಯೇ ಉರಿಯುತಿರಲಿ"
–ದೊಡ್ಡಕಲ್ಲಹಳ್ಳಿ ನಾರಾಯಣಪ್ಪ (ಕಲ್ಲಳ್ಳಿ ಗಜಲ್)

"ಶತ ಶತಮಾನಗಳಿಂದಲೂ ಮಾನ ಕಾಯಲು ಮೊರೆ ಇಡುತಿದ್ದೇನೆ
ಈಗೀಗ ಗಂಡು ಕುಲಕೆ ಜೀವ ನೀಡುವೆನೆಂಬ ಭಯ ಕಾಡುತ್ತಿದೆ"
–ನಾಗೇಶ್ ಜೆ. ನಾಯಕ (ಗರೀಬನ ಜೋಳಿಗೆ)

"ಹೆಣ್ಣು ರಾತ್ರಿ ನಿರ್ಭಯವಾಗಿ ಹೊರಬೀಳುವುದು ಇಲ್ಲಿ ಸಾಧ್ಯವೆ
ಹಗಲಿನಲ್ಲೂ ಕೂಸು ಹೆದರುತಿರುವುದು ಕಂಡು ತಲೆ ತಗ್ಗಿಸಿದ್ದೇನೆ"
–ಲಕ್ಷ್ಮೀ ದೊಡಮನಿ (ಅರಳು ಮಲ್ಲಿಗೆ)

"ಅಂಗಳದಲಿ ಆಡುವ ಬಾಲೆಯ ಕೌಮಾರ್ಯ ಪ್ರೇರೇಪಿಸಿತೇ
ಅತೃಪ್ತ ಕಾಮಪಿಪಾಸುವಿನ ಬೇಟೆಯಾದವರಿಗೆ ನ್ಯಾಯ ಎಲ್ಲಿದೆ"
–ಶಮಾ ಜಮಾದಾರ (ಶಮಾ ಗಜಲ್)

"ಕಾಮವೇ ಪ್ರೇಮ ರೂಪದಲಿ ಇರುವುದನ್ನು ತಿಳಿಯಲಿಲ್ಲ ಭಾಗ್ಯ
ಮರುಳುಗಾಡಲಿ ಕಾಣದ ಕಡಲಿಗೆ ಹಂಬಲಿಸಿದ್ದು ನನ್ನದೇ ತಪ್ಪು"
–ಭಾಗ್ಯವತಿ ಕೆಂಭಾವಿ (ಒಲವಿನ ಮಧುಬಟ್ಟಲು)

ತವಾಯಿಫ್... ಗಂಡಿನ ಕಾಮತೃಷೆಗೆ ಬಲಿಯಾದ ಹೆಣ್ಣಿನ ರಕ್ತದ ಕಡಲು!! ಇದಕ್ಕೆ ಕಾರಣ ಹುಡುಕುತ್ತಾ ಹೋದರೆ ಒಂದು ನಗ್ನ ಪರಪಂಚವೆ ನಮ್ಮ ಕಣ್ಣ ಮುಂದೆ ಹಾದು ಹೋಗುತ್ತದೆ. ಮೌಢ್ಯತೆ, ಮದುವೆಯ ಹಿಂದೆ ಇರುವ ಜಾಲ, ಹೊಟ್ಟೆ ಬಾಕ ಸಂಸ್ಕೃತಿ, ಹಣಕಾಸಿನ ಹಗ್ಗ ಜಗ್ಗಾಟ, ಜಾತಿಯೆಂಬ ಕೆಸರಿನ ಮಡುವು, ಮುಖವಾಡದ ಮರೆಯಲ್ಲಿ ಹುದುಗಿರುವ ಗೋಮುಖ ವ್ಯಾಘ್ರದ ಕರಾಳತೆ... ಇವೆಲ್ಲವೂ ನಮ್ಮನ್ನು ಕೋಠೆಯ ಕತ್ತಲಿನೆಡೆಗೆ ಕರೆದೊಯ್ಯುತ್ತವೆ. ದುರಂತವೆಂದರೆ ಈ ಹಸಿ ಮಾಂಸದ ವ್ಯಾಪಾರವನ್ನು ಸಮರ್ಥಿಸುವ ಬುದ್ಧಿವಂತರಿರುವುದು ಬೌದ್ಧಿಕ

ಗುಲಾಮಗಿರಿಗೆ ಸಾಕ್ಷಿಯಾಗಿದೆ. ಅವರ ಆರೋಗ್ಯ, ನರಳಾಟ, ಜನರ ಮೂದಲಿಕೆ, ಅಭದ್ರತೆಯ ಚಿಂತೆ... ಎಲ್ಲವೂ ಅವಳನ್ನು ಹಿಂಡಿ ಹಿಪ್ಪೆ ಮಾಡುತ್ತವೆ. ವಯಸ್ಸಾದ ವೇಶ್ಯೆಯೊಬ್ಬಳು ತನ್ನ ಉಪಜೀವನಕ್ಕೆ ತಾನು ಅನುಭವಿಸಿದ ಕತ್ತಲಲ್ಲೆ ತನ್ನ ಕರುಳ ಬಳ್ಳಿಯನ್ನು ನೂಕುವ ಮಟ್ಟಕ್ಕೆ ಹೋಗುವುದು, ಹೋಗುತ್ತಿರುವುದು ನಮ್ಮ ಸಾಮಾಜಿಕ ವ್ಯವಸ್ಥೆಗೆ ಹಿಡಿದ ತುಕ್ಕಾಗಿದೆ.ಇದೊಂದು ಕಾಲಾಧಕಾರವಾಗಿ ಮನುಕುಲದ ನೈತಿಕತೆಯನ್ನೆ ಮಣ್ಣು ಪಾಲು ಮಾಡುತ್ತಿದೆ.ಈ ದಿಸೆಯಲ್ಲಿ ಗಜಲ್ ನ ಪರಂಪರೆಯನ್ನು ಗಮನಿಸಿದಾಗ ಮುಂಗೈಗೆ ಮಲ್ಲಿಗೆಯನ್ನು ಮುಡಿದುಕೊಂಡವರ ಚಿತ್ರಣ ನಮ್ಮ ಮುಂದೆ ಎದೆ ಸೆಟೆದು ನಿಲ್ಲುತ್ತದೆ.ನಂರುಶಿ ಕಡೂರು ಅವರು ದೇವರ ಹೆಸರಿನಲ್ಲಿ ನಡೆಯುತ್ತಿರುವ ಮಾಂಸದ ದಂಧೆಯನ್ನು ಬಯಲಿಗೆಳೆದಿದ್ದಾರೆ.ಇನ್ನೂ ವೈಟ್ ಕಾಲರ್ ಜನರು ಕತ್ತಲಲ್ಲಿ ತಿಂದು ತೇಗಿದನ್ನು ನೆನೆಸಿಕೊಂಡು ಚೇತನ್ ನಾಗರಾಳ ಅವರು ಮರುಕ ಪಟ್ಟಿರುವುದನ್ನು ಗಮನಿಸಬಹುದು.ಇದೇ ಜಾಡಿನಲ್ಲಿ ವಾಣಿ ಭಂಡಾರಿಯವರು ಈ ಜಾಲದ ಮೂಲವನ್ನು ಕೆದುಕಿದ್ದಾರೆ.

"ದೇವರ ಹೆಸರಲಿ ಪೂಜ್ಯರಿಗೆ ನೈವೇದ್ಯ ನೀಡಿರುವಳು ನಾನು
ಊರ ಗೌಡರ ತೀಟೆ ತೀರಿಸಲು ದಾಸಿ ಆಗಿರುವಳು ನಾನು"
–ನಂರುಶಿ ಕಡೂರು (ನೇರಿಶಾ)

"ನಿನ್ನನ್ನೇ ತಿಂದು ತೇಗಿ ಬಳಸಿದ ಬಕಾಸುರರೆಲ್ಲ ಮಹಾಂತರಾದರು
ಸೆರಗ ಹಾಸಿ ಸುಖದ ತುತ್ತುಣಿಸಿ ಜಾರಿಣಿಯಾದವಳು ನೀನು ಸಾಕಿ"
–ಚೇತನ್ ನಾಗರಾಳ (ಖಾಲಿ ಕೋಣೆಯ ಹಾಡು)

"ಸಂತೆಯ ಸರಕಾಗಿ ಹೋದಾಗ ಅವಳು ಬೆತ್ತಲಾಗಿದ್ದು ಅರಿವಿಗೆ ಬರಲಿಲ್ಲ
ಅರಿವೆ ಇಲ್ಲದ ಕಾಯಕ್ಕೆ ಸಂತೆಯಲ್ಲಿ ಚಿಂತೆ ಮಾಡುವ ಪುರುಸೋತ್ತು ಇರಲಿಲ್ಲ"
–ವಾಣಿ ಭಂಡಾರಿ (ಸಂತನೊಳಗಿನ ಧ್ಯಾನ)

ಒಬ್ಬ ತಾಯಿ ತನ್ನ ಮಕ್ಕಳನ್ನು ಕೂಲಿ– ನಾಲಿ ಮಾಡಿಯಾದರೂ, ಹೊಟ್ಟೆಗೆ ತಣ್ಣೀರು ಬಟ್ಟೆಯನ್ನು ಕಟ್ಟಿಕೊಂಡಾದರೂ, ಭಿಕ್ಷೆ ಬೇಡಿಯಾದರೂ ಕೆಲವೊಮ್ಮೆ ಮೈ ಮಾರಿಕೊಳ್ಳುವ ಸ್ಥಿತಿಗೆ ಹೋಗಿಯಾದರೂ ಮಕ್ಕಳ ಹೊಟ್ಟೆ ತುಂಬಿಸುತ್ತಾಳೆ.ಆದರೆ

ನೂರು ಮಕ್ಕಳು ಸೇರಿ ಒಬ್ಬ ತಾಯಿಯನ್ನು, ತಂದೆಯನ್ನು ನೋಡಿಕೊಳ್ಳುವಲ್ಲಿ ಸಾಕುವಲ್ಲಿ ಸೋಲುತಿದ್ದಾರೆ.'ವೃದ್ಧಾಶ್ರಮ' ಸಂಸ್ಕೃತಿ ತಂದೆ, ತಾಯಿ–ಮಕ್ಕಳ ಕರುಳು ಬಳ್ಳಿಗೆ ಕೊಳ್ಳಿಯನ್ನು ಇಡುತ್ತಿದೆ. 'ಮಾಡಿದುಣ್ಣೊ ಮಾರಾಯಾ' ಎಂಬುದನ್ನು ಮರೆತ ಎಷ್ಟೊ

ಮಕ್ಕಳು ತಮ್ಮ ಹೆತ್ತವರನ್ನು ವೃದ್ಧಾಶ್ರಮಕ್ಕೆ ತಳ್ಳುತ್ತಿರುವುದು ಶೋಚನೀಯ ಎಂದಿದ್ದಾರೆ ಮಹಾದೇವ ಪಾಟೀಲ ಅವರು.ಇನ್ನೂ ತಳವಾರ ಅವರು 'ಕಂದ' ಎನ್ನುವ ರದೀಫ್ ಬಳಸಿಕೊಂಡು ತಾಯಿಯ ಮನೋವೇದನೆಯನ್ನು ಸಾರಿದ್ದಾರೆ.

"ಜನ್ಮದಾತೆಯನ್ನು ವೃದ್ಧಾಶ್ರಮಕ್ಕೆ ಖುದ್ದು ನಾನೇ ಸೇರಿಸಿ ಬಂದಿದ್ದೆ
ಮುಂದಿನ ದಿನ ನನಗೂ ಇದೆ ಗತಿಯೆಂಬ ಭಯವು ನಾ ಮರೆತಿದ್ದೆ"
–ಮಹಾದೇವ ಎಸ್. ಪಾಟೀಲ (ಬಿಸಿಲು ಬಿದ್ದ ರಾತ್ರಿ)

"ನನಗಾಗಿ ಬದುಕುವುದನ್ನೇ ಮರೆತು ಹೋಗಿದ್ದವಳು ನಾನು ಮಲ್ಲಿ
ನೀ ತೋರಿಸಿದ ವೃದ್ಧಾಶ್ರಮ ಜೀವನದ ಪಾಠ ತಿಳಿಸಿತು ಕಂದ"
–ಡಾ. ಮಲ್ಲಿನಾಥ ಎಸ್. ತಳವಾರ (ಮಲ್ಲಿಗೆ ಸಿಂಚನ)

ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಮದುವೆ, ಕುಟುಂಬಕ್ಕೆ ತುಂಬಾ ಪ್ರಾಧಾನ್ಯತೆಯನ್ನು ನೀಡಲಾಗಿದೆ. ಇವುಗಳು ಮನುಷ್ಯನ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಆದರೆ ಈ ಮದುವೆ ಮತ್ತು ಕುಟುಂಬ ಎನ್ನುವ ಪರಿಕಲ್ಪನೆಯೆ ಪುರುಷ ಪ್ರಧಾನ ಸಮಾಜದ ಧೋರಣೆಗಳನ್ನು ಬೆಳೆಸುವ, ಬೆಳೆಸುತ್ತಿರುವ ಹಸಿರುಮನೆಯಾಗಿದೆ! ಹೆಣ್ಣಿಗೆ ನಯ, ವಿನಯ, ನಾಚಿಕೆಯೇ ಭೂಷಣ. ಯಾವತ್ತೂ ಂಬಾರ ಮನವನ್ನೂ ನೋಯಿಸಬಾರದು.ಸಹನಾಮೂರ್ತಿಯಾಗಿರಬೇಕು.ತ್ಯಾಗಿಯಾಗಿರಬೇಕು ಎಂದೆಲ್ಲ ಅವರಿಗೆ ಪ್ರತ್ಯೇಕ ಮೌಲ್ಯಗಳನ್ನು ಬೋಧಿಸಲಾಗಿದೆ, ಬೋಧಿಸಲಾಗುತ್ತಿದೆ. ಇದುವೇ ಅವರನ್ನು ಶೋಷಣೆಯಲ್ಲೂ ಕರ್ಮಫಲ ಹುಡುಕುವಂತೆ ಮಾಡಿದೆ.ಈ ದಿಸೆಯಲ್ಲಿ ಹಲವಾರು ಅಶಅರ್ ಗಳು ಹೇಗೆ ನಮ್ಮ ಕೌಟುಂಬಿಕ ವ್ಯವಸ್ಥೆ ಹೆಣ್ಣನ್ನು ಅಸಹಾಯಕಳನ್ನಾಗಿಸುತ್ತದೆ ಎಂಬುದರ ಮೇಲೆ ಬೆಳಕು ಚೆಲ್ಲುವ ಪ್ರಯತ್ನ ಮಾಡಿದ್ದಾರೆ.

"ಅತ್ತೆ ಮಾವಂದಿರ ನಿಂದನೆ ಹಿಂಸೆಯಾಗುತ್ತದೆ

ಎಲ್ಲವನು ತೊರೆದು ಹೋಗುವ ಧೈರ್ಯ ನನಗಿಲ್ಲ"

–ವಿದ್ಯಾವತಿ ಅಂಕಲಗಿ (ಸಾಠ್ ಗಜಲ್)

"ಬೆರಳಲ್ಲಿ ಬೆರಳಿರಿಸಿ ಜೊತೆಗೂಡಿ ನಡೆದಿದ್ದೆ ಸಂಭ್ರಮದ ಏಳು ಹೆಜ್ಜೆಗಳ
ರಕ್ತದ ಹೆಜ್ಜೆ ಗುರುತುಗಳಾಗಿ ಬಾಳ ಪುಟದಲ್ಲಿ ಉಳಿಯುತ್ತವೆಂದು ಗೊತ್ತಾಗಲಿಲ್ಲ"

–ಅರುಣಾ ನರೇಂದ್ರ (ಆತ್ಮಸಖಿ)

"ನನ್ನ ತವರು ದಾರಿ ಅಮ್ಮನಿಲ್ಲದ ಬದುಕು ಹಿಡಿದಿತ್ತು ಕವಲು ದಾರಿಯಲಿ
ದಾರಿ ಮಧ್ಯದಲ್ಲಿ ಮಡಿಲು ತುಂಬಿಸಿ ಜೀವ ನಡೆದಿತ್ತು ಕವಲು ದಾರಿಯಲಿ"

–ನೂರ್ ಅಹ್ಮದ್ ನಾಗನೂರ (ಕಣ್ಣಂಜಲ ಕನ್ನಡಿ)

"ಹೆತ್ತವರು ಕೈದೊಳೆದುಕೊಳ್ಳುವ ಕಾತುರತೆಗೆ ಹರಕೆಯ ಕುರಿ ನಾನು
ನಮ್ಮವ್ವ ಉಡಿಸಿದ ಸೀರೆಯ ನೀರಿಗೆಗಳನ್ನು ಕರಾಳ ಕೈಗಳು ಹಿಚಿಕಿವೆ ಸಾಕಿ"

–ಚಂದ್ರಶೇಖರ ಯಲ್ಲಪ್ಪ ಪೂಜಾರ (ಬೆಳಕ ನಿಚ್ಚಣಿಕೆ)

"ಜಾತಿಗಳ ಕತ್ತಿಗೆ ನೊಗವ ಬಿಗಿಯಬೇಕಾಗಿದೆ, ಬಿತ್ತಲು ಸ್ನೇಹ, ಪ್ರೀತಿ, ಮಮತೆ
ಹೆಣ್ಣಿನ ಮಾತಿಗೆ ದನಿ ಸಿಕ್ಕರೆ ದಿನವೆಲ್ಲ ದಸರಾ ಎಂಬುದು ಅರುಹಬೇಕು"

–ಪ್ರೇಮಾ ಹೂಗಾರ (ಪ್ರಣೀತೆ)

ಈ ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿದಾಗ ನಮ್ಮ ಕೌಟುಂಬಿಕ ವ್ಯವಸ್ಥೆ ಎಷ್ಟು ಇಬ್ಬಂದಿತನದಿಂದ ಕೂಡಿದೆ ಎಂಬುದು ಮನವರಿಕೆಯಾಗುತ್ತದೆ.ಇಲ್ಲಿ ವಿದ್ಯಾವತಿ ಅಂಕಲಗಿ ಅವರು ಅತ್ತೆ–ಮಾವಂದಿರ ಮಧ್ಯೆ ಹೆಣ್ಣು ಜಿಂಕೆಮರಿಯಂತೆ ಸಿಕ್ಕಿಬಿದ್ದು ನರಳುತಿರುವದನ್ನು ಉಲ್ಲೇಖಿಸಿದರೆ 'ಮದುವೆ' ಎನ್ನುವ ಬಂಧ ಹೇಗೆ ಹೆಣ್ಣಿಗೆ ಉರುಳಾಗಿದೆ, ಉರುಳಾಗುತಿದೆ ಎಂಬುದರ ಕುರಿತು ಅರುಣಾ ನರೇಂದ್ರ ಅವರು ವಿಷಾದ ವ್ಯಕ್ತಪಡಿಸಿದ್ದಾರೆ. ತಾಯಿಯಿಲ್ಲದ ತವರು, ಬಾಲ್ಯ ವಿವಾಹ, ಒತ್ತಾಯದ ಮದುವೆ, ಭೋಗದ ದಾಳ...ಇಂಥಹ ಹಲವು ವಿಷಯಗಳನ್ನು ಬೇರೆ

ಬೇರೆ ಆಯಾಮಗಳಲ್ಲಿ ನೂರ್ ಅಹ್ಮದ್ ನಾಗನೂರ, ಚಂದ್ರಶೇಖರ ಯಲ್ಲಪ್ಪ ಪೂಜಾರ ಅವರು ಮನಮುಟ್ಟುವಂತೆ ದಾಖಲಿಸಿದ್ದಾರೆ.ಇನ್ನೂ ಪ್ರೇಮಾ ಹೂಗಾರ ಅವರು ಜಾತಿ, ಮತ, ಪಂಥಗಳನ್ನು ದಿಕ್ಕರಿಸಿ ಸ್ನೇಹ, ಪ್ರೀತಿ, ಮಮತೆ... ಬಿತ್ತುತ್ತ ಸಾಗಬೇಕು.ಇದರಿಂದಲಾದರೂ ಹೆಣ್ಣಿಗೆ ಧ್ವನಿ ದೊರೆತರೆ ಇಡೀ ಭೂಮಂಡಲವೆ ಶಾಂತಿಯಿಂದ ಸಹಬಾಳ್ವೆ ನಡೆಸಲು ಸಾಧ್ಯ ಎಂದಿದ್ದಾರೆ.ಆ ದಿನವನ್ನು ಇವರು 'ದಸರಾ'ದ ದಿನಕ್ಕೆ ಹೋಲಿಸಿರುವುದು ತುಂಬಾ ಔಚಿತ್ಯಪೂರ್ಣವಾಗಿದೆ.

ಇಂದು ನಾವೆಲ್ಲ ವೈಜ್ಞಾನಿಕ ಯುಗದಲ್ಲಿದ್ದೇವೆ, ನಮ್ಮ ವಾಸವನ್ನು ಗ್ರಹಗಳಲ್ಲಿ ಆರಂಭಿಸಲು ಉತ್ಸುಕರಾಗಿದ್ದೇವೆ, ಪ್ರಪಂಚ ತುಂಬಾ ಕಿರಿದಾಗಿದೆ, ಅಂತರ್ಜಾಲದ ಮಾಯಾವಿಯಿಂದ ನಾವು ಏನೆಲ್ಲಾ ಸಾಧಿಸಿದ್ದೇವೆ ಎಂದು ಬೀಗಿದರೂ ಅದರ ತಳದಲ್ಲಿ ನಾವು ಕಳೆದುಕೊಂಡಿದ್ದೆ ಹೆಚ್ಚು.ಜೀವಸಂಕುಲದ ಎರಡು ಚಕ್ರಗಳೆಂದರೆ ಸ್ತ್ರೀ-ಪುರುಷರು. ಆದರೆ ಪುರುಷ ಮಾತ್ರ ಇದನ್ನು ಅಲ್ಲಗಳೆಯುತ್ತಲೆ ಅನಾದಿ ಕಾಲದಿಂದಲೂ ಹೆಣ್ಣನ್ನು ಒಂದು ಭೋಗದ ವಸ್ತುವೆಂದೆ ನೋಡುತ್ತಾ ಬಂದಿದ್ದಾನೆ. ತನ್ನ ಬೆಳವಣಿಗೆಗೆ ಅವಳನ್ನು ಏಣಿ ತರಹ ಬಳಸಿಕೊಂಡು ಬಿಸಾಡಿದ್ದಾನೆ. ಇದೆಲ್ಲದರ ಪರಿಣಾಮವೆಂಬಂತೆ ನಮ್ಮ ಸಾಮಾಜಿಕ ವ್ಯವಸ್ಥೆ ಪ್ರೀತಿಯಿಂದ ವಂಚಿತವಾಗಿದ್ದು, ಲಾವಾರಿಸ್ ಆಗಿ ಕಾಲವನ್ನು ನೂಕುತ್ತಿದೆ. ಈ ಕಾರಣಕ್ಕಾಗಿಯೇ ಮೇಯರ್ ಸನೇಹಿ ಯವರು ಜಗತ್ತಿನಲ್ಲಿ ಪ್ರೀತಿಯ ಕೊಡು ಕೊಳ್ಳುವಿಕೆ ಅವಶ್ಯಕತೆ ಇದೆ ಎಂದಿದ್ದಾರೆ.

> "ಇಂದು ಎಲ್ಲಕ್ಕಿಂತ ಹೆಚ್ಚಾಗಿ ಪ್ರೀತಿಯ ಅವಶ್ಯಕತೆ ಇದೆ
> ಇಂದು ಎಲ್ಲಕ್ಕಿಂತ ಹೆಚ್ಚಾಗಿ ಪ್ರೀತಿಯ ಕೊರತೆ ಇದೆ"

ಬರಹದ ಮೂಲ ಸ್ಥಾಯಿ ಭಾವವೇ ಸಂವೇದನೆ. ಸಂವೇದನೆಯನ್ನು ಹೊರತು ಪಡಿಸಿ ಸಾಹಿತ್ಯದ ಊಹೆ ಕೂಡ ಮಾಡಿಕೊಳ್ಳಲಾಗದು.ಸಂವೇದನೆ ಇರದೆ ಹೋದರೆ ಅದೊಂದು ಅಂಕಿ ಅಂಶಗಳ ಮೊತ್ತ ಇಲ್ಲವೇ ಘಟನೆಯನ್ನು ಪ್ರಚುರಪಡಿಸುವ ವರದಿ ಮಾತ್ರ ಆಗಬಲ್ಲದು.ಸಾಮಾಜಿಕ ವ್ಯವಸ್ಥೆಗೆ ಸ್ಪಂದಿಸದವರು ಲೇಖಕ/ಲೇಖಕಿಯರೆ ಅಲ್ಲ. ಈ ಹಿನ್ನೆಲೆಯಲ್ಲಿ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಸಾಮಾಜಿಕ ಸಂವೇದನೆಯನ್ನು ಕಾಣುತ್ತೇವೆ. 'ಮುಟ್ಟಿದರೆ ಮುನಿ' ಎನಿಸುವಷ್ಟು ಮೃದುವಾದ 'ಗಜಲ್' ಎನ್ನುವ ಸಾರಸ್ವತ ಲೋಕದ ಪ್ರಕಾರವೇ ಲಿಂಗಾಧಾರಿತವಾಗಿ ಸ್ತ್ರೀಲಿಂಗವಾಗಿದೆ. ಹೆಣ್ಣಿನ ಕೋಮಲತೆ, ಸರಳತೆ, ಒನಪು, ವಯ್ಯಾರ, ಸೌಂದರ್ಯ,

ತುಂಟಾಟ, ಸಂತೈಸುವಿಕೆ, ತಿಳಿಹೇಳುವ ಸೊಬಗು..ಎಲ್ಲವನ್ನೂ ತನ್ನೊಡಲಲ್ಲಿ ಕಾಪಿಟ್ಟುಕೊಂಡು ಬಂದಿದೆ, ಬರುತ್ತಿದೆ; ಬರಲೇಬೇಕು ಸಹ.ಇಂಥಹ ಗಜಲ್ ಗಳು ಸ್ತ್ರೀ ಸಂವೇದನೆಯ ತವರುಮನೆಯಾಗಿ ಮಹಿಳೆಯರು ಅನುಭವಿಸುತ್ತಿರುವ ಜ್ವಲಂತ ಸಮಸ್ಯೆಗಳಿಗೆ ಮಿಡಿಯುತ್ತಿವೆ. ಅಸಂಖ್ಯಾತ ಗಜಲ್ ಗೋ ಅವರು ಮಾನವೀಯ ನೆಲೆಯಲ್ಲಿ ಮನುಕುಲಕ್ಕೆ ಅಂಟಿದ ಸಾಮಾಜಿಕ ಸಮಸ್ಯೆಗಳಿಗೆ ಧ್ವನಿಯಾಗುತಿದ್ದಾರೆ, ಆಪ್ತ ಸಮಾಲೋಚಕರಾಗುತಿದ್ದಾರೆ.ಇದಕ್ಕಿಂತ ಮುಂದೆ ಹೋಗಿ ಸಮಸ್ಯೆಗಳ ಕಡೆಗೆ ಬೊಟ್ಟು ಮಾಡುವುದರ ಜೊತೆಗೆ ಪರಿಹಾರಗಳನ್ನು ಕಂಡುಕೊಳ್ಳುವ ಜರೂರಿ ಇದೆ. ಹಾಗಂತ ಉಪದೇಶ, ಪ್ರವಚನ ಆಗದೆ ಅನುಷಂಗೀಕವಾಗೀ ಚರ್ಚಿಸಬೇಕಾಗಿದೆ. ಈ ನೆಲೆಯಲ್ಲಿ ಸಾಹಿತ್ಯ ಸಮಾಜದ ಓರೆ ಕೋರೆಗಳನ್ನು ತಿದ್ದುವ ಕೆಲಸ ಮಾಡಬೇಕಿದೆ.

"All men should be feminists.
If men care about women's rights,
the world will be a better place."
-John Legend

ಕನ್ನಡ ರಂಗಭೂಮಿಯಲ್ಲಿ ರಂಗ ರೂಪಾಂತರ

ಪುನೀತ್ ಕುಮಾರ್

ಯಾವುದೇ ರಂಗಭೂಮಿಯಲ್ಲಿ ಈಗಾಗಲೇ ರಚನೆಗೊಂಡಿರುವ ನಾಟಕಗಳನ್ನು ಪ್ರಯೋಗಿಸುವ ಮೂಲಕ ಪ್ರೇಕ್ಷಕರ ಎದುರಿಗೆ ತರಲಾಗುತಿತ್ತು. ಇಂತಹ ನಾಟಕಗಳನ್ನು ರಂಗಸಜ್ಜಿಕೆ, ಅಭಿನಯ, ಸಂಗೀತ ಮುಂತಾದವುಗಳ ಮೂಲಕ ಆ ನಾಟಕವು ಅಪೇಕ್ಷಿಸುವ ರಂಗವ್ಯಾಕರಣಕ್ಕೆ ಅಳವಡಿಸಿ ಕೇವಲ ನಾಟಕ ಸಾಹಿತ್ಯವಾಗಿ ಉಳಿದಿದ್ದನ್ನು ಪ್ರದರ್ಶನ ನಾಟಕವಾಗಿ ಪರಿವರ್ತಿಸುವುದು ಸಾಮಾನ್ಯವಾಗಿತ್ತು. ಈ ಪ್ರಕ್ರಿಯೆ ಅವ್ಯಾಹತವಾಗಿ ರಂಗಭೂಮಿಯಲ್ಲಿ ಹಿಂದಿನಿಂದಲೂ ನಡೆದುಕೊಂಡು ಬರುತಿತ್ತು. ಆದರೆ ಇಪ್ಪತ್ತನೆಯ ಶತಮಾನದ ಜಾಗತಿಕಮಟ್ಟದಲ್ಲಿ ಆಧುನಿಕ ರಂಗಭೂಮಿಯು ತನ್ನ ಹಿಂದಿನ ಸಂಪ್ರದಾಯವನ್ನು ಮುರಿಯುವ ಕಡೆಗೆ ಗಮನ ಹರಿಸಿತು. ಈ ಸಂದರ್ಭದಲ್ಲಿ ನಾಟಕವಲ್ಲದಿದ್ದರೂ ಸಾಹಿತ್ಯದ ಇನ್ನಿತರೆ ಪ್ರಕಾರಗಳಾದ ಕತೆ, ಕಾದಂಬರಿ, ಕವಿತೆ, ಮಹಾಕಾವ್ಯಗಳನ್ನು ನಾಟಕವಾಗಿ ರೂಪಾಂತರ ಮಾಡಿಕೊಂಡು ರಂಗಭೂಮಿಯಲ್ಲಿ ಪ್ರದರ್ಶನ ಮಾಡಲಾಯಿತು. ಈ ಪ್ರಕ್ರಿಯೆಯನ್ನು ಸಿ.ಎನ್.ರಾಮಚಂದ್ರನ್ ಅವರು ಪ್ರಭೇದ-ಅನುವಾದ ಎಂದು ಗುರುತಿಸುತ್ತಾರೆ. “ಪ್ರಭೇದ-ಅನುವಾದವೆಂದರೆ ಮೊದಲಿಗೆ ಒಂದು ಭಾಷೆಯಲ್ಲಿ ಕಾದಂಬರಿಯಂತೆ/ನಾಟಕದಂತೆ/ಕಾವ್ಯದಂತೆ ಬರೆಯಲ್ಪಟ್ಟಿರುವ ಕೃತಿ ಆನಂತರ ಮತ್ತೊಂದು ಪ್ರಭೇದದಲ್ಲಿ ರಚಿಸಲ್ಪಡುವುದು. ಕಾದಂಬರಿ ನಾಟಕದಂತೆ, ನಾಟಕ ಕಾದಂಬರಿಯಂತೆ, ಕಾದಂಬರಿ ಕಾವ್ಯದಂತೆ ಇತ್ಯಾದಿ”.[೧] ಈ ಮೂಲಕ ರಂಗಭೂಮಿಯಲ್ಲಿ ಹೊಸ ನಾಟಕ ಶಕೆಯೊಂದು ಪ್ರಾರಂಭವಾಯಿತು. ಇಂತಹ ಪ್ರಯೋಗಗಳಿಂದ ರಂಗಭೂಮಿಯೂ ಹಿಂದೆಂದಿಗಿಂತ ಹೆಚ್ಚು ಸಂಪನ್ನವಾಯಿತು. ಆದರೆ ಈ ಎಲ್ಲ ಪ್ರಯೋಗಗಳ ಹಿಂದೆ ಕೆಲವು ಪ್ರಶ್ನೆಗಳು ನಮ್ಮನ್ನು ಕಾಡಲಾರಂಭಿಸುತ್ತವೆ. ಇಪ್ಪತ್ತನೆಯ ಶತಮಾನದಲ್ಲಿ ರಂಗಭೂಮಿಗೆ ನಾಟಕ ಸಾಹಿತ್ಯದ ಕೊರತೆ ಉಂಟಾಗಿದೆಯೇ? ಅಥವಾ ಇರುವ ನಾಟಕ ಸಾಹಿತ್ಯ ಪ್ರಯೋಗಕ್ಕೆ ಯೋಗ್ಯವಲ್ಲವೇ? ಇದರಲ್ಲಿ ಮೊದಲನೆಯ ಪ್ರಶ್ನೆಗಿಂತ ಎರಡನೆಯ ಪ್ರಶ್ನೆಗೆ ಉತ್ತರ ಸುಲಭ. ಯೋಗ್ಯವಾದ ನಾಟಕಗಳು ಎಲ್ಲ ಕಾಲಕ್ಕೂ ಇದ್ದೇ ಇವೆ. ಏಕೆಂದರೆ

ಇಂದಿಗೂ ನಾವು ಗ್ರೀಕ್ ಸಾಹಿತ್ಯದಲ್ಲಿ ರಚಿಸಲ್ಪಟ್ಟ ಸುಮಾರು ೨೫೦೦ ವರ್ಷಗಳ ನಾಟಕಗಳನ್ನು ರಂಗದಲ್ಲಿ ಪ್ರಯೋಗಿಸುತ್ತಿದ್ದೇವೆ. ಜತೆಗೆ ಆ ಕೃತಿಗಳನ್ನು ಓದು ಪಠ್ಯವಾಗಿಯೂ ಅಭ್ಯಾಸ ಮಾಡುತ್ತಿದ್ದೇವೆ. ನಮ್ಮ ಕಾಲದ ಕೆಲವು ನಾಟಕಗಳು ಕೂಡ ಈ ರೀತಿ ಕಾಲಾತೀತವಾಗಿ ನಿಲ್ಲುವಂತಹ ನಾಟಕ ಕೃತಿಗಳೇ. ಆದರೆ ಇದರಲ್ಲೂ ಒಂದು ಪ್ರಶ್ನೆ ಉದ್ಭವಿಸುತ್ತದೆ. ಹಾಗಾದರೆ ಅಂತಹ ಕಾಲಾತೀತವಾಗಿ ಉಳಿಯುವ ನಾಟಕ ಕೃತಿಗಳ ಸಂಖ್ಯೆ ಎಷ್ಟು? ಎಂದು ಕೇಳಿಕೊಂಡಾಗ ಇದು ಕೂಡ ಮೊದಲನೆಯ ಪ್ರಶ್ನೆಗೆ ಸೇರಿಕೊಳ್ಳುತ್ತದೆ. ನಾವು ನಾಟಕಗಳ ಸಂಖ್ಯೆಯ ಹಿನ್ನಲೆಯಲ್ಲಿ ನಾಟಕದ ಕೊರತೆಯನ್ನು ಹುಡುಕಿದಾಗ ಸ್ವಾಭಾವಿಕವಾಗಿ ಕಾಣುವುದು ನಾಟಕ ಪ್ರಯೋಗಗಳ ಸಂಖ್ಯೆ ಹೆಚ್ಚಾಗಿರುವುದು ಕಂಡುಬರುತ್ತದೆ. ಹೀಗಾಗಿ ಈ ಆಧುನಿಕ ರಂಗಭೂಮಿಯ ಸಂದರ್ಭದಲ್ಲಿ ನಾಟಕ ರಚನೆಯಲ್ಲಿ ಇಳಿಕೆ ಮತ್ತು ಪ್ರಯೋಗಗಳು ಹೆಚ್ಚಾಗಲು ಕಾರಣವೇನು? ಎಂಬುದನ್ನು ಹುಡುಕಿಕೊಳ್ಳುವುದು ಅವಶ್ಯಕವಾಗಿದೆ.

ಆಧುನಿಕ ಕನ್ನಡ ರಂಗಭೂಮಿಯ ಹಿನ್ನೆಲೆಯಲ್ಲಿ ಈ ಪ್ರಕ್ರಿಯೆಯನ್ನು ಗಮನಿಸಿದಾಗ ಕಾಣಸಿಗುವುದೇನೆಂದರೆ ಈ ಸಂದರ್ಭದಲ್ಲಿ ಭಾರತದ ರಾಷ್ಟ್ರೀಯ ನಾಟಕ ಶಾಲೆ(ಎನ್.ಎಸ್.ಡಿ) ಮತ್ತು ಕರ್ನಾಟಕದ ನೀನಾಸಂ ರಂಗಸಂಸ್ಥೆಗಳ ರಂಗಶಿಕ್ಷಣದಿಂದ ಇಡೀ ಹವ್ಯಾಸಿ ರಂಗಭೂಮಿಯ ಮೇಲೆ ಪ್ರಬಲವಾದ ಪ್ರಭಾವವನ್ನು ಉಂಟಾಯಿತು. ಇದರಿಂದಾಗಿ ಕನ್ನಡ ರಂಗಭೂಮಿಯಲ್ಲಿ ಅನೇಕ ರಂಗ ಚಟುವಟಿಕೆಗಳು ಬಿರುಸುಗೊಂಡವು. ಈ ಸಮಯದಲ್ಲಿ ಅನೇಕ ರಂಗ ತಂಡಗಳು ಹುಟ್ಟಿಕೊಂಡವು. ಒಂದು ಅಂಕಿ ಅಂಶಗಳ ಪ್ರಕಾರ ಈ ಸಂದರ್ಭದಲ್ಲಿ ಕರ್ನಾಟಕದಲ್ಲಿ ಇದ್ದಷ್ಟು ರಂಗ ತಂಡಗಳು ಬೇರೆ ಯಾವ ರಾಜ್ಯಗಳಲ್ಲೂ ಇರಲಿಲ್ಲ. ಬೇರೆ ರಾಜ್ಯದ ರಂಗತಂಡಗಳು ರೆಪರ್ಟರಿ ಕಟ್ಟಿಕೊಂಡು ನೈಪುಣ್ಯತೆಯಿಂದ ಕೂಡಿದ ನಾಟಕಗಳನ್ನು ಕಟ್ಟಿದ ಉದಾಹರಣೆಗಳು ಬಹಳಷ್ಟು ಸಿಗುತ್ತವೆ. ಆದರೆ ರಂಗತಂಡದ ಸಂಖ್ಯೆಯ ದೃಷ್ಟಿಯಿಂದ ನೋಡಿದಾಗ ಕನ್ನಡ ರಂಗಭೂಮಿಯೇ ಮುಂಚೂಣಿಯಲ್ಲಿತ್ತು. ಒಂದು ಅಂದಾಜಿನ ಪ್ರಕಾರ ಆಧುನಿಕ ರಂಗಭೂಮಿಯಲ್ಲಿ ೧೯೭೦-೮೦ರ ದಶಕದ ನಂತರ ಯಾವ ಕಾಲದಲ್ಲಿ ನೋಡಿದರೂ ಸುಮಾರು ನಾಲ್ಕುನೂರಕ್ಕೂ ಅಧಿಕ ರಂಗತಂಡಗಳು ಕಂಡುಬರುತ್ತವೆ. ಏಕ ಕಾಲದಲ್ಲಿ ಇಷ್ಟು ಸಂಖ್ಯೆಯ ರಂಗ ಚಟುವಟಿಕೆಗಳು ಭಾರತದ ಯಾವ ಭಾಷೆಯ ರಂಗಭೂಮಿಯಲ್ಲೂ ಕಂಡುಬರುವುದಿಲ್ಲ. ಈ ರೀತಿಯ ರಂಗ ತಂಡಗಳು ಹೆಚ್ಚಾಗಲು ಮತ್ತೊಂದು ಕಾರಣ ೮೦-೯೦ ರ ದಶಕಗಳಲ್ಲಿ ಸುಮಾರು ೨೦೦ಕ್ಕೂ ಹೆಚ್ಚು ನಿರ್ದೇಶಕರು

ಕನ್ನಡ ರಂಗಭೂಮಿಯಲ್ಲಿ ಕಾಣಸಿಗುತ್ತಾರೆ. ಇದು ಪ್ರತಿ ವರ್ಷವೂ ನೀನಾಸಂ ನಿಂದ ೧೫ ಜನ ರಂಗಶಿಕ್ಷಣ ಪಡೆದವರು ನಿರ್ದೇಶಕರಾಗಿ ಬರುತ್ತಿದ್ದರು. ಅವರು ತಮ್ಮ ತಮ್ಮ ಹಳ್ಳಿಗಳಿಗೆ, ಪಟ್ಟಣಗಳಿಗೆ ಹೋಗಿ ರಂಗತಂಡಗಳನ್ನು ಕಟ್ಟಿಕೊಂಡು ನಾಟಕ ಮಾಡಲು ಪ್ರಾರಂಭಿಸಿದರು. ಇಂತಹ ಆಧುನಿಕ ಕನ್ನಡ ರಂಗಭೂಮಿಯ ಕೆಲವು ಪ್ರಮುಖ ನಿರ್ದೇಶಕರ ಹೆಸರುಗಳನ್ನು ಡಿ.ಎಸ್.ಚೌಗಲೆಯವರು ಹೀಗೆ ಹೆಸರಿಸುತ್ತಾರೆ. 'ಹೊಸ ತಂತ್ರ, ಪ್ರಯೋಗ ಮತ್ತು ಅಭಿವ್ಯಕ್ತಿಯನ್ನು ತಮ್ಮದೇ ಆದ ಅನನ್ಯತೆಯಲ್ಲಿ ಕಟ್ಟುವ ಒಂದು ರಂಗ ನಿರ್ದೇಶಕರ ದಂಡು ನಮ್ಮ ಮಧ್ಯದಲ್ಲಿದೆ.ಬಿ.ಚಂದ್ರಶೇಖರ, ಪ್ರಸನ್ನ, ಆರ್.ನಾಗೇಶ್, ಸಿಜಿಕೆ, ಕ.ವೆಂ.ರಾಜಗೋಪಾಲ್, ಸಿಂಧುವಳ್ಳಿ ಅನಂತಮೂರ್ತಿ, ನ.ರತ್ನ, ತೋಂಟದಾರ್ಯ, ರಾಮಮೂರ್ತಿ, ಕಪ್ಪಣ್ಣ, ಜಯತೀರ್ಥ ಜೋಶಿ, ಅಶೋಕ ಬಾದರದಿನ್ನಿ, ಸಿ.ಬಸವಲಿಂಗಯ್ಯ, ಸುರೇಶ ಆನಗಳ್ಳಿ, ಲಕ್ಷ್ಮಿ ಚಂದ್ರಶೇಖರ್, ಬಿ.ಜಯಶ್ರೀ, ಟಿ.ಎಸ್.ನಾಗಾಭರಣ, ಬಿ.ವಿ.ರಾಜಾರಾಂ, ಸುರೇಂದ್ರನಾಥ, ಚಿದಂಬರರಾವ್ ಜಂಬೆ, ವೆಂಕಟರಮಣ ಐತಾಳ, ಕೆ.ವಿ.ಅಕ್ಷರ, ಇಕ್ಬಾಲ್‌ಅಹಮದ್, ರಘುನಂದನ್, ಬಿ.ಸುರೇಶ, ಪ್ರಮೋದ ಶಿಗ್ಗಾಂವ, ಪ್ರಕಾಶ ಬೆಳವಾಡಿ, ಪ್ರೇಮಾ ಕಾರಂತ, ಭಾಗೀರಥಿ, ಶ್ರೀಪತಿ, ಮಂಜನಬೈಲು, ದಾಕ್ಷಾಯಿಣಿ ಭಟ್, ಜೋಸೆಫ್, ಚಂಪಾಶೆಟ್ಟಿ, ಗರುಡ, ಮಂಗಳಾ ಎನ್, ಮುಂತಾದವರು.'[೨] ಇವರುಗಳು ರಂಗಭೂಮಿಯಲ್ಲಿ ತಮ್ಮದೇ ಛಾಪು ಮೂಡಿಸಿರುವ ನಿರ್ದೇಶಕರುಗಳು ಅಷ್ಟೇ ಇವರಲ್ಲದೇ ಇನ್ನೂ ಅನೇಕರು ಎಲೆಮರೆ ಕಾಯಿಯಂತೆ ಇದ್ದಾರೆ. ಹೀಗೆ ಇವರೆಲ್ಲರೂ ಪ್ರತ್ಯೇಕ ರಂಗತಂಡಗಳನ್ನು ಕಟ್ಟಿಕೊಂಡು ಕನ್ನಡ ರಂಗಭೂಮಿಯಲ್ಲಿ ನಾಟಕಗಳನ್ನು ಕಟ್ಟತೊಡಗಿದರು. ಈ ಸಂದರ್ಭದಲ್ಲಿ ಇಷ್ಟೂ ರಂಗತಂಡಗಳಿಗೆ ನಾಟಕಗಳನ್ನು ಒದಗಿಸುವಂತಹ ಜವಾಬ್ದಾರಿ ಕನ್ನಡ ನಾಟಕಕಾರರಿಗೆ ಇತ್ತು. ಆದರೆ ಇಷ್ಟು ಸಂಖ್ಯೆಯ ನಾಟಕಕಾರರು ಕನ್ನಡ ರಂಗಭೂಮಿಯಲ್ಲಿ ಎಂದಿಗೂ ಕಾಣಸಿಗುವುದಿಲ್ಲ. ಹೀಗಾಗಿಯೇ ನಾಟಕಗಳ ಕೊರತೆಯನ್ನು ಎದುರಿಸುತ್ತಿದ್ದ ಈ ಸಂದರ್ಭದ ಕನ್ನಡ ರಂಗಭೂಮಿಯ ರಂಗ ನಿರ್ದೇಶಕರು ಸಾಹಿತ್ಯದ ಬೇರೆ ಪ್ರಕಾರದಲ್ಲಿ ಸಿಗುವ ಕಥನ ಪಠ್ಯವನ್ನು ಆಶ್ರಯಿಸ ತೊಡಗಿದರು.

ಮತ್ತೊಂದು ಕಡೆ ಶಾಲಾ-ಕಾಲೇಜುಗಳಲ್ಲಿ ಹೊಸದಾಗಿ ರಂಗ ಶಿಕ್ಷಣ ಅಳವಡಿಸಿಕೊಳ್ಳುವ ಪ್ರಕ್ರಿಯೆ ಪ್ರಾರಂಭವಾಯಿತು. ಆ ಪ್ರಕ್ರಿಯೆಯ ಭಾಗವಾಗಿ ಶಾಲಾ ಕಾಲೇಜಿನ ಮಕ್ಕಳಿಗೆ ನಾಟಕ ಮಾಡಿಸಬೇಕಾಗಿತ್ತು. ಮಕ್ಕಳನ್ನು ರಂಗಭೂಮಿಯ ಕಡೆ ಆಕರ್ಷಿಸಲು ಗೇಯತೆ, ಸಂಗೀತ ಮುಂತಾದವುಗಳ ಬೇಡಿಕೆಯಿದ್ದ ನಾಟಕಗಳನ್ನು

ರಂಗ ನಿರ್ದೇಶಕರು ಹೆಚ್ಚಾಗಿ ಹುಡುಕತೊಡಗಿದ್ದರು. ಹಾಗೆಯೇ ಮಕ್ಕಳ ಶಾಲಾ-ಕಾಲೇಜಿನ ಪಠ್ಯಗಳನ್ನೇ ನಾಟಕವಾಗಿಸುವ ಮೂಲಕ ಅವರ ಪಠ್ಯಗಳನ್ನು ಅರ್ಥೈಸಲು ರಂಗಭೂಮಿಯ ಮಾರ್ಗವನ್ನು ಕಂಡುಕೊಂಡಿದ್ದರು. ಈ ಕಾರಣದಿಂದಾಗಿ ಹೆಚ್ಚು ಕಥನವುಳ್ಳ ಕಥೆಗಳನ್ನು ಎಲ್ಲರೂ ಆಶ್ರಯಿಸತೊಡಗಿದರು. ಈ ಹಿನ್ನೆಲೆಯಲ್ಲಿ ೧೯೮೦ರ ದಶಕದ ಸಂದರ್ಭದಲ್ಲಿ ಬೆಂಗಳೂರಿನ ಎನ್.ಎಮ್.ಕೆ.ಆರ್.ವಿ ಕಾಲೇಜಿಗೆ ಸುರೇಶ್ ಆನಗಳ್ಳಿಯವರು ಮೊದಲು ಮಾಡಿಸಿದ ನಾಟಕ 'ಕೆರೆಗೆ ಹಾರ'. ೮೦ರ ದಶಕದಲ್ಲಿ ಇದು ಹೆಚ್ಚು ಪ್ರಚಾರವನ್ನೂ ಸಹ ಪಡೆಯಿತು. ಹೀಗೆ ಶಾಲಾ-ಕಾಲೇಜು ರಂಗಭೂಮಿ, ಮಕ್ಕಳ ರಂಗಭೂಮಿ, ಹವ್ಯಾಸಿ ರಂಗಭೂಮಿಯ ಮೂಲಕ ಕನ್ನಡದಲ್ಲಿ ಬಿರುಸುಗೊಂಡ ರಂಗಚಟುವಟಿಕೆಗೆ ನಾಟಕಗಳ ಕೊರತೆ ಸಮಸ್ಯೆಯಾಗಿತ್ತು. ಈ ಸಮಯದಲ್ಲಿ ಕನ್ನಡ ರಂಗಭೂಮಿಗೆ ಒಂದು ವರ್ಷಕ್ಕೆ ಸುಮಾರು ನೂರಕ್ಕೂ ಹೆಚ್ಚು ನಾಟಕಗಳ ಅವಶ್ಯಕತೆ ಕಂಡುಬಂದಿತ್ತು. ಆದರೆ ಅವುಗಳನ್ನು ಬರೆಯುವ ನಾಟಕಕಾರರು ನಮ್ಮಲ್ಲಿ ಇರಲಿಲ್ಲ.

ಈ ನಾಟಕಕಾರರ ಕೊರತೆಗೆ ಮತ್ತೊಂದು ಕಾರಣ. ರಂಗಭೂಮಿಗೆ ಅವಶ್ಯವಿರುವ ನಾಟಕವನ್ನು ಈ ಕಥೆ, ಕಾದಂಬರಿ, ಕವಿತೆಗಳಲ್ಲಿ ಹುಡುಕಿದ ಹಾಗೆ, ರಂಗ ನಟರನ್ನು ತಯಾರಿಸಿದ ಹಾಗೆ, ನಿರ್ದೇಶಕರನ್ನು ತಯಾರಿಸಿದ ಹಾಗೆ, ರಂಗ ತಂತ್ರಜ್ಞರನ್ನು ತಯಾರಿಸಿದ ಹಾಗೆ ಮತ್ತು ರಂಗ ಚಟುವಟಿಕೆಗಳನ್ನು ವಿಸ್ತರಿಸಿದ ಹಾಗೆ ನಾಟಕಕಾರರನ್ನು ತಯಾರಿಸುವ ಕೆಲಸ ಹೆಚ್ಚಾಗಿ ನಡೆಯಲಿಲ್ಲ. ಸಮುದಾಯ ಮತ್ತು ಕನ್ನಡ ನಾಟಕ ಅಕಾಡೆಮಿಗಳು ಅಲ್ಲೊಂದು ಇಲ್ಲೊಂದು ನಾಟಕ ರಚನಾ ಶಿಬಿರಗಳನ್ನು ಮಾಡಿದ್ದು ಮಾತ್ರ ಕಾಣಸಿಗುತ್ತವೆ. ಅವು ಕೂಡ ಬೆರಳೆಣಿಕೆಯಷ್ಟು ಇದರಿಂದಾಗಿ ನಾಟಕಗಳ ಕೊರತೆಯನ್ನು ಪೂರೈಸಿಕೊಳ್ಳಲು ಈ ರೀತಿ ಬೇರೆ ಸಾಹಿತ್ಯ ಪ್ರಕಾರಗಳ ಅವಲಂಬನೆಯನ್ನು ಮಾಡಿದರು. ಮತ್ತೊಂದು ಕಡೆ ಕಥನ ಪಠ್ಯಗಳನ್ನು ರೂಪಾಂತರಗೊಳಿಸುವುದು ನಿರ್ದೇಶಕರಿಗೆ ಹೆಚ್ಚು ಸಮಸ್ಯೆ ಕೂಡ ಇರಲಿಲ್ಲ. ಏಕೆಂದರೆ ನಾಟಕಕಾರರ ಬಳಿ ನಾಟಕವನ್ನು ಬರೆಸಿ ಅದನ್ನು ರಂಗಭೂಮಿಗೆ ತಕ್ಕಹಾಗೆ ತಿದ್ದಿಸಲು ನಡೆಸುತ್ತಿದ್ದಂತಹ ತಿಕ್ಕಾಟಗಳೂ ಈ ಕಥನ ಪಠ್ಯಗಳ ಅಳವಡಿಕೆಯಲ್ಲಿ ಇರಲಿಲ್ಲ. ಇದರಿಂದ ನಾಟಕಕಾರರ ಪ್ರತಿರೋಧವು ಇರುತ್ತಿರಲಿಲ್ಲ. ಹಾಗಾಗಿ ಬಹುತೇಕ ಸಂದರ್ಭಗಳಲ್ಲಿ ನಿರ್ದೇಶಕರುಗಳೇ ಕಥನ ಪಠ್ಯ ರೂಪಾಂತರದ ಸ್ಕ್ರಿಪ್ಟ್ ರೈಟರ್‌ಗಳಾಗಿರುತ್ತಿದ್ದರು. ನಿರ್ದೇಶಕರು ಮೂಲ ಕೃತಿಕಾರರ ಬಳಿ ಪರವಾನಿಗೆ ಪಡೆದು ತಮಗೆ ಬೇಕಾದ ಹಾಗೆ ಎಡಿಟ್ ಮಾಡಿಕೊಂಡು ರಂಗಭೂಮಿಗೆ ಅಳವಡಿಸಿಕೊಂಡು ನಾಟಕ ಮಾಡುತ್ತಿದ್ದರು. ಈ ಮೂಲಕ ನಿರ್ದೇಶಕರಿಗೆ

ಅಭಿವ್ಯಕ್ತಿಯಲ್ಲಿ ಸ್ವಾತಂತ್ರ ಸಿಗುತಿತ್ತು. ಜೊತೆಗೆ ಶಾಲಾ-ಕಾಲೇಜು ರಂಗಭೂಮಿ, ಹವ್ಯಾಸಿ ರಂಗಭೂಮಿಯಲ್ಲಿ ಇದ್ದ ಕಡಿಮೆ ಬಂಡವಾಳವನ್ನು ಸರಿದೂಗಿಸಬೇಕಾದ ಹೊಣೆ ಹೊತ್ತಿದಂತಹ ನಿರ್ದೇಶಕರುಗಳು ನಾಟಕಕಾರರಿಗೆ ಕೊಡುವ ಸಂಭಾವನೆಯನ್ನು ಉಳಿಸುವುದರೊಂದಿಗೆ ರಂಗಭೂಮಿಯ ಅರ್ಥಿಕತೆ ನೋಡಿಕೊಳ್ಳುತ್ತಿದ್ದರು. ಹೀಗೆ ಹಳೆಯ ನಾಟಕಗಳನ್ನೇ ಮತ್ತೆ ಮತ್ತೆ ಮಾಡುವುದರಿಂದ ಬೇಸತ್ತು ಈ ಕಥನ ಪಠ್ಯದ ಕಡೆಗೆ ನಿರ್ದೇಶಕರು ಒಲವು ತೋರಿದರು. ಈ ಸಂದರ್ಭದಲ್ಲಿ ಕತೆಗಳು, ಕಾದಂಬರಿಗಳು, ಕವಿತೆಗಳು, ಕಾವ್ಯಗಳು ಎಲ್ಲವೂ ರಂಗಪಠ್ಯಗಳಾದವು. ಹೀಗೆ ೧೯೮೭ ರಲ್ಲಿ ಕುವೆಂಪುರವರ 'ನೆಪೋಲಿಯನ್ ಮತ್ತು ನಾಯಿ' ಕವಿತೆ ರಂಗರೂಪವಾಯಿತು. ಅದೇ ರೀತಿ 'ಕಲ್ಕಿ', 'ಬೊಮ್ಮನಹಳ್ಳಿ ಕಿಂದರಿಜೋಗಿ' ಕಥನ ಕವಿತೆಗಳು ರಂಗರೂಪವಾಗಿ ಯಶಸ್ಸು ಕಂಡವು. ತದ ನಂತರ ಇತರೆ ಕವಿಗಳ ಕಥನ ಕವಿತೆಗಳ ಕಡೆಗೆ ರಂಗಭೂಮಿಯ ದೃಷ್ಟಿ ಹರಿಯಿತು. ಆಗ 'ಭೂಮಿಗೀತ', 'ಮುಂಬೈ ಜಾತಕ', 'ಅಲ್ಲೆ ಕುಂತವರೆ', 'ಮೂಕನ ಮಕ್ಕಳು', 'ತಿರುಕನ ಕನಸು', 'ಗೋವಿನ ಕಥೆ', 'ಕೆರಗೆಹಾರ'ದಂತಹ ಅನೇಕ ಕಥನ ಕವನಗಳು ರಂಗ ತರಬೇತಿಯ ಶಿಬಿರದ ಭಾಗವಾಗಿ ರೂಪಾಂತರಗೊಂಡವು. ಆ ಮೂಲಕ ಇವುಗಳಲ್ಲಿ ಹುದುಗಿದ್ದ ನಾಟಕವನ್ನು ಹೊರತೆಗೆದು ನಾಟಕ ಮಾಡಲಾಯಿತು. ಇದರೊಂದಿಗೆ ರಂಗರೂಪಕದ ಸಾಧ್ಯತೆಯನ್ನು ಸಮರ್ಥಿಸಲಾಯಿತು.

ಇದೇ ಸಂದರ್ಭದಲ್ಲಿ ಹೊಸದಾಗಿ ಹುರುಪಿನಿಂದ ನಾಟಕ ಬರೆಯುವುದಕ್ಕೆ ಬಂದ ನಾಟಕಕಾರರಿಗೆ ನಾಟಕ ಕ್ಷೇತ್ರ ಅರ್ಥವೇ ಆಗಿರಲಿಲ್ಲ, ಅದರಲ್ಲೂ ಕೆಲವು ನಾಟಕಕಾರರು ಸಾಹಿತ್ಯದ ಬೇರೆ ಪ್ರಕಾರಗಳಂತೆ ಒಮ್ಮೆ ಬರೆದರೆ ನಾಟಕ ಮುಗಿದೇ ಹೋಯಿತು ಎಂದು ತಿಳಿದುಕೊಳ್ಳುತ್ತಿದ್ದರು. ಆದರೆ ನಾಟಕ ಎಲ್ಲಿಯ ವರೆಗೂ ಕೊನೆಯ ಪ್ರದರ್ಶನ ಆಗುತ್ತಿರುತ್ತದೆಯೋ ಅಲ್ಲಿಯ ವರೆಗೂ ಅದು ಇಂಪ್ರೂವೈಸ್ ಆಗುತ್ತಲೇ ಇರುವಂತಹದ್ದು. ಈ ಸರಳ ಸತ್ಯ ಕೆಲವು ಹೊಸ ನಾಟಕಕಾರರಿಗೆ ಅರ್ಥವಾಗಲಿಲ್ಲ. ಏಕೆಂದರೆ ನಾಟಕ ಎನ್ನುವುದು ಸಾಮೂಹಿಕವಾದ ರಂಗಕ್ರಿಯೆ, ಮತ್ತು ಸಾಮೂಹಿಕವಾದ ಸೃಷ್ಟಿ. ಹಲವು ಮನಸ್ಸುಗಳು ಇಲ್ಲಿ ಏಕ ಕಾಲದಲ್ಲಿ ಒಟ್ಟಿಗೆ ಕೆಲಸವನ್ನು ಮಾಡುತ್ತಿರುತ್ತವೆ. ಯಾರು ಏನೇ ಹೇಳಿದರೂ ಅವು ಬದಲಾಗುತ್ತಲೇ ಇರುತ್ತವೆ. ಹೀಗಾಗಿ ಕೆಲವೊಮ್ಮೆ ತುಂಬಾ ಗಂಭೀರ ನಾಟಕ ಕೂಡ ಹಾಸ್ಯ ನಾಟಕವಾಗಿ ರಂಗದ ಮೇಲೆ ಪರಿವರ್ತನೆಗೊಳ್ಳುತ್ತಿರುತ್ತವೆ. ಉದಾಹರಣೆಗೆ 'ಮುಖ್ಯಮಂತ್ರಿ' ನಾಟಕ. ಇದು ತುಂಬಾ ಗಂಭೀರವಾದ ಮತ್ತು ಇಡೀ ವ್ಯವಸ್ಥೆಯನ್ನು ಗೇಲಿಮಾಡುವ ನಾಟಕ. ಆದರೆ ಇಂದು ಅದು ಒಂದು ರೀತಿಯಲ್ಲಿ ನಗೆನಾಟಕವಾಗಿ ಮಾರ್ಪಟ್ಟಿದೆ.

ಇಂತಹ ಸಂದರ್ಭದಲ್ಲಿ ನಾಟಕದ ಮೂಲಸತ್ವವೇ ಮಾಯವಾಗುವ ಸಾಧ್ಯತೆ ಇರುತ್ತದೆ. ಹೀಗಾಗಿ ಒಂದು ನಾಟಕ ಕಲಾ ಅನುಭವದ ದೃಷ್ಟಿಯಿಂದ ಏನಾಯಿತು? ಮತ್ತು ನಮ್ಮ ರಾಜಕೀಯ ಮತ್ತು ಸಾಮಾಜಿಕ ಪ್ರಭಾವಗಳು ಪ್ರದರ್ಶನದಿಂದ ಪ್ರದರ್ಶನಕ್ಕೆ ಏನಾಗುತ್ತಿತ್ತು? ಎನ್ನುವ ಆಯಾಮಗಳ ಮೂಲಕ ಯೋಚಿಸಿದರೆ ಸಮಕಾಲೀನ ಸಂದರ್ಭದಲ್ಲಿ ಆ ಪ್ರಕಾರಗಳು ಬದಲಾಗಲು ಇದ್ದ ಒತ್ತಾಸೆಗಳು ಮತ್ತು ಸಾಂಸ್ಕೃತಿಕ ಒತ್ತಡಗಳು ಕಂಡುಬರುತ್ತವೆ.

ರಂಗಪ್ರಯೋಗವನ್ನು ಹೊರತುಪಡಿಸಿ ಇರುವ ಇತರೆ ಸಾಹಿತ್ಯ ಪ್ರಕಾರಗಳು ಓದುಗನ ಕೈಯಲ್ಲಿ ಕುವೆಂಪು ರವರು ಹೇಳುವಂತೆ 'ಕರತಲದ ರಂಗಭೂಮಿ'ಯಲ್ಲಿ ತೆರೆದುಕೊಂಡಿರುತ್ತವೆ ಮತ್ತು ಅದು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತವೆ. ಆದರೆ ಒಮ್ಮೆ ಆ ಕೃತಿ ಪ್ರಯೋಗಗೊಳ್ಳುತ್ತದೆ ಎಂದರೆ ಏಕಕಾಲದಲ್ಲಿ ದೃಶ್ಯರೂಪವಾಗಿ ಹಲವು ಪ್ರೇಕ್ಷಕನಿಗೆ ಮುಖಾಮುಖಿಯಾಗುತ್ತಿರುತ್ತದೆ. ಹೀಗಿರುವಾಗ ರಂಗರೂಪಾಂತರಕಾರ ಮತ್ತು ನಿರ್ದೇಶಕ ಆ ನಾಟಕೇತರ ಸಾಹಿತ್ಯವನ್ನು ಯಾವ ಬಗೆಯಲ್ಲಿ ಅರ್ಥೈಸಿಕೊಂಡಿದ್ದಾರೆ ಮತ್ತು ರಂಗದ ಮೇಲೆ ಯಾವ ಬಗೆಯಲ್ಲಿ ಅರ್ಥೈಸಲು ಯತ್ನಿಸುತ್ತಿದ್ದಾರೆ ಎಂಬುದು ಬಹು ಮುಖ್ಯವಾದ ಪಾತ್ರವಹಿಸುತ್ತದೆ. ಹೀಗೆ ಅರ್ಥೈಸಿಕೊಳ್ಳುವ ಮೂಲಕ ವಿವಿಧ ಸಾಹಿತ್ಯ ಪ್ರಕಾರಗಳನ್ನು ರಂಗಭೂಮಿಗೆ ಒಗ್ಗಿಸುವ ಕ್ರಿಯೆ ನಡೆಯುತ್ತಿರುತ್ತದೆ. ಏಕೆಂದರೆ ನಾಟಕ ಎಂಬುದಕ್ಕೆ ಅದರದ್ದೇ ಆದ ಚೌಕಟ್ಟು ಇದೆ. ಅಲ್ಲದೇ ಆ ಚೌಕಟ್ಟನ್ನು ಹೊಸ ಹೊಸ ಬಗೆಯಲ್ಲಿ ತಮ್ಮ ಪ್ರಯೋಗಗಳ ಮೂಲಕ ರಂಗ ಸಿದ್ಧಾಂತಗಳನ್ನು ಕಟ್ಟುತ್ತ ಹಾಗೆ ಅವುಗಳನ್ನು ರಂಗಭೂಮಿಯಲ್ಲಿ ಮುರಿಯುತ್ತಾ ಬಂದಿದ್ದಾರೆ. ಇದು ಅರಿಸ್ಟಾಟಲ್‌ನ 'ಕೆಥಾರ್ಸಿಸ್' ನಿಂದ ಹಿಡಿದು ಬ್ರೆಕ್ಟ್‌ನ 'ಎಪಿಕ್ ಥೀಯೇಟರ್' ಹಾದಿಯಾಗಿ ಹಲವು ಸಿದ್ಧಾಂತಗಳನ್ನು ಒಳಗೊಂಡಂತೆ ಪ್ರಯೋಗಗಳ ಮೂಲಕ ಹೊಸತನ್ನು ಹುಡುಕುತ್ತಾ ರಂಗಭೂಮಿ ಬೆಳೆಯುತ್ತಿದೆ. ಹೀಗಾಗಿ ಇತರ ಸಾಹಿತ್ಯ ಪ್ರಕಾರಗಳನ್ನು ರಂಗಭೂಮಿಗೆ ಒಗ್ಗಿಸಿಕೊಂಡು ಪ್ರಯೋಗಿಸಿಕೊಳ್ಳುವುದು ಕೂಡ ರಂಗಭೂಮಿಯ ಹೊಸತನದ ಹುಡುಕಾಟಗಳಲ್ಲಿ ಒಂದು. ಹೀಗೆ ಪ್ರಯೋಗಗಳ ಮೂಲಕ ಹೊಸತನವನ್ನು ಹುಡುಕುತ್ತಿರುವ ರಂಗಭೂಮಿ ಯಾವುದೇ ಕೃತಿಯನ್ನು ತನ್ನ ಚೌಕಟ್ಟಿಗೆ ಒಗ್ಗಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿರುತ್ತದೆ. ಆದರೆ ಹಾಗೆ ಒಗ್ಗಿಸಿಕೊಳ್ಳುತ್ತಲೇ ತನ್ನ ಪ್ರಯೋಗ ಮತ್ತು ಕೃತಿಯ ನಡುವೆ ಕಂದಕಗಳನ್ನು ಸೃಷ್ಟಿಸಿಕೊಂಡಿರುತ್ತದೆ. ಏಕೆಂದರೆ ಯಾವುದೇ ಸಾಹಿತ್ಯ ಪ್ರಕಾರದಲ್ಲೂ ಅದರದ್ದೇ ಆದ ಮಿತಿ ಮತ್ತು ಸಾಧ್ಯತೆಗಳು ಇದೆ. ಹೀಗಾಗಿ ನಾಟಕೇತರ ಸಾಹಿತ್ಯವಾದ ಕತೆ, ಕವನ, ಕಾವ್ಯ, ಕಾದಂಬರಿ, ಲೇಖನಗಳು ಯಾವುದೋ ಒಂದು

ಕಥಾ ತಿರುಳನ್ನು ಹೊಂದಿದ್ದರೂ ಅದು ನಾಟಕದ ಚೌಕಟ್ಟಿನ ಆಚೆಗೆ ನಿರೂಪಿತವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ನಾಟಕದ ನಿರೂಪಣಾ ಶೈಲಿಯೇ ಬೇರೆ, ಉಳಿದ ಸಾಹಿತ್ಯ ಪ್ರಕಾರದ ನಿರೂಪಣಾ ಶೈಲಿಯೇ ಬೇರೆಯಾಗಿರುತ್ತದೆ. ಏಕೆಂದರೆ ನಿರೂಪಣೆ ಅನ್ನುವುದು ಒಂದು ದೃಷ್ಟಿಕೋನ. ಆದರೆ ನಾಟಕದಲ್ಲಿ ಆ ದೃಷ್ಟಿಕೋನ ಕಳೆದು ಹೋಗುತ್ತದೆ.

ಅದೇನೇ ಇರಲಿ ಕನ್ನಡ ರಂಗಭೂಮಿಯಲ್ಲಿ ಇಂದು ರಂಗರೂಪಾಂತರಗಳು ತುಂಬಾ ಹೆಚ್ಚಿನ ಸಂಖ್ಯೆಯಲ್ಲಿ ನಡೆಯುತ್ತಿವೆ. ಬಹುಶಃ ರಂಗರೂಪಾಂತರಗಳನ್ನು ರಂಗದ ಮೇಲೆ ಪ್ರಯೋಗಿಸದ ರಂಗ ತಂಡಗಳನ್ನು ಹುಡುಕುವುದು ಕೊಂಚ ಕಷ್ಟದ ಕೆಲಸ. ಎಲ್ಲಾ ಪ್ರಮುಖ ರಂಗತಂಡಗಳು ಒಂದಲ್ಲಾ ಒಂದು ರಂಗರೂಪಾಂತರ ಪ್ರಯೋಗಿಸಿವೆ. ಈ ನಡುವೆ ಕೇವಲ ರೂಪಾಂತರ ನಾಟಕಗಳನ್ನು ಪ್ರಯೋಗಿಸುವುದಕ್ಕೆ 'ರೂಪಾಂತರ' ಎಂಬ ಒಂದು ರಂಗತಂಡವೇ ಇದೆ. ಇಂತಹ ಸಂದರ್ಭದಲ್ಲಿ ಹೀಗೆ ಪ್ರಯೋಗಗೊಂಡ ಎಲ್ಲಾ ರೂಪಾಂತರಗಳು ಪ್ರೇಕ್ಷಕನಿಗೆ ನಾಟಕದ ಅನುಭವವನ್ನು ನೀಡಲು ಸಾಧ್ಯವಾಗಿದೆಯೇ ಎಂದು ಪ್ರಶ್ನಿಸಿಕೊಂಡಾಗ ಉತ್ತರಿಸುವುದು ಕಷ್ಟದ ಕೆಲಸ. ಆದರೆ ಈ ನಡುವೆ ಯಶಸ್ವಿ ಪ್ರಯೋಗಗಳಾಗಿ ಕನ್ನಡ ರಂಗಭೂಮಿಯ ಜನಮಾನಸದಲ್ಲಿ ಉಳಿದ ಕೆಲವು ರಂಗರೂಪಾಂತರದ ಪ್ರಯೋಗಗಳನ್ನು ಹೆಸರಿಸುವುದಾದರೆ. ಬಿ.ವಿ.ಕಾರಂತರ 'ಬೊಮ್ಮನಹಳ್ಳಿ ಕಿಂದರಜೋಗಿ' ಸಿ.ಜಿ.ಕೆ ಯವರ 'ಒಡಲಾಳ' ಆರ್.ನಾಗೇಶ್‌ರವರ 'ಕೃಷ್ಣೇ ಗೌಡನ ಆನೆ' ಸಿ.ಬಸವಲಿಂಗಯ್ಯನವರ 'ಕುಸುಮಬಾಲೆ', ಹಾಗೆ ಇಂದು ಪ್ರೇಕ್ಷಕರಿಂದ ಹೆಚ್ಚು ಮನ್ನಣೆ ಪಡೆದು ರಂಗಭೂಮಿಯಲ್ಲಿ ಕ್ರಾಂತಿಯನ್ನೇ ಸೃಷ್ಟಿಸಿದ ನಾಟಕ 'ಮಲೆಗಳಲ್ಲಿ ಮದುಮಗಳು'. ಇವು ಕನ್ನಡ ರಂಗಭೂಮಿಯ ಇತಿಹಾಸದಲ್ಲಿ ದಾಖಲಾದ ಅಚ್ಚಳಿಯದ ರಂಗರೂಪಾಂತರಗಳು. ಒಟ್ಟಿನಲ್ಲಿ ಈ ರಂಗರೂಪಾಂತರಗಳಿಂದ ಕನ್ನಡ ರಂಗಭೂಮಿಯು ಸಮೃದ್ಧವಾಗಿ ಬೆಳೆಯುತ್ತಿರುವುದಂತೂ ನಿಜ.

ಕೊನೆ ಟಿಪ್ಪಣಿ

೧. ಭಾಷಾಂತರ ಸೈದ್ಧಾಂತಿಕ ಹಾಗೂ ಅನ್ವಯಿಕ ನೆಲೆಗಳು; ಸಿ.ಎನ್.ರಾಮಚಂದ್ರನ್, ಮನೋಹರ ಗ್ರಂಥ ಮಾಲ; ೨೦೧೫ ಪುಟ–೩.

೨. ಕನ್ನಡ–ಮರಾಠಿ ಆಧುನಿಕ ರಂಗಭೂಮಿ: ಡಾ.ಡಿ.ಎಸ್.ಚೌಗಲೆ; ಸಿರಿವರ ಪ್ರಕಾಶನ; ೨೦೧೫, ಪುಟ–೧೯೨.

ಗ್ರಂಥ ಋಣ

೧. ಕನ್ನಡ ರಂಗಭೂಮಿ ನಡೆದು ಬಂದ ದಾರಿ: (ಸಂ) ಶ್ರೀರಂಗ, ಕನ್ನಡ ರಂಗಭೂಮಿಯ ಹುಟ್ಟು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ೨೦೦೬.

೨. ಆಧುನಿಕ ಕನ್ನಡ ನಾಟಕ : ಡಾ.ಕೆ.ಮರುಳಸಿದ್ದಪ್ಪ, ಅಂಕಿತ ಪ್ರಕಾಶನ, ೨೦೦೯.

೩. ನೆನೆವ ಪರಿ : ಕೆ.ವೈ. ನಾರಾಯಣ ಸ್ವಾಮಿ; ಬರಹ ಪಬ್ಲಿಷಿಂಗ್ ಹೌಸ್; ಬೆಂಗಳೂರು, ೨೦೧೦.

೪. ಭಾಷಾಂತರ ಸೈದ್ಧಾಂತಿಕ ಹಾಗೂ ಅನ್ವಯಿಕ ನೆಲೆಗಳು: ಸಿ.ಎನ್.ರಾಮಚಂದ್ರನ್, ಮನೋಹರ ಗ್ರಂಥ ಮಾಲ; ೨೦೧೫.

೫. ಕನ್ನಡ–ಮರಾಠಿ ಆಧುನಿಕ ರಂಗಭೂಮಿ: ಡಾ.ಡಿ.ಎಸ್.ಚೌಗಲೆ; ಸಿರಿವರ ಪ್ರಕಾಶನ; ೨೦೧೫.

ಆಧುನಿಕ ಸಣ್ಣ ಕತೆಗಳು – ಒಂದು ಅವಲೋಕನ

ಡಾ. ಮಲ್ಲಿಕಾರ್ಜುನಯ್ಯ ಎಂ.ಟಿ

ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಹೊಸ ತಲೆಮಾರಿನ ಕತೆಗಾರರಾಗಿ, ಕಾದಂಬರಿಕಾರರಾಗಿ ವಸುಧೇಂದ್ರರು ಕಂಡುಬರುತ್ತಾರೆ. ಮೂಲತಃ ಇವರು ತಂತ್ರಜ್ಞಾನದ ವಿದ್ಯಾರ್ಥಿ ಆದಾಗ್ಯೂ ಸಾಹಿತ್ಯದಲ್ಲಿ ವಿಶೇಷವಾಗಿ ಆಸಕ್ತಿ ಬೆಳಸಿಕೊಂಡು ಓದಿದವರು ಹಾಗೂ ಬರೆದವರು. ವಸುಧೇಂದ್ರರು ಕತೆ, ಕಾದಂಬರಿ, ಪ್ರಬಂಧ, ಅನುವಾದ ಸಾಹಿತ್ಯಗಳಲ್ಲಿ ಕೃಷಿ ಮಾಡಿದ್ದಾರೆ.

ಕನ್ನಡದಲ್ಲಿ 'ಸಣ್ಣಕತೆ' ಎಂಬ ಪ್ರಕಾರಕ್ಕೆ ಒಂದು ಸ್ವರೂಪ ಕೊಟ್ಟವರು ಮಾಸ್ತಿ ಎಂಬುದು ಸ್ಪಷ್ಟ. ಮಾಸ್ತಿ ವೆಂಕಟೇಶ ಅಯ್ಯಂಗಾರರ ಮೊದಲ ಕಥಾಸಂಗ್ರಹ 'ಕೆಲವು ಸಣ್ಣ ಕತೆಗಳು' ಪ್ರಕಟವಾಯಿತು. 'ರಂಗಪ್ಪನ ಮದುವೆ' ಮತ್ತು 'ರಂಗಪ್ಪನ ದೀಪಾವಳಿ' ಇವರ ಮೊದಲ ಕತೆಗಳಾಗಿವೆ. ಮಾಸ್ತಿಯವರು ಈ ಸಂದರ್ಭದಲ್ಲಿ ಎಪ್ಪತ್ತೈದಕ್ಕೂ ಹೆಚ್ಚು ಕತೆಗಳನ್ನು ಪ್ರಕಟಿಸಿದರು. 'ಮೊಸರಿನ ಮಂಗಮ್ಮ', 'ವಸುಮತಿ' 'ವೆಂಕಟಶಾಮಿಯ ಪ್ರಣಯ', 'ಗೌತಮಿ ಹೇಳಿದ ಕತೆ', 'ಕೃಷ್ಣಮೂರ್ತಿಯ ಹೆಂಡತಿ' ಮುಂತಾದವುಗಳನ್ನು ನೋಡಬಹುದು. ಮಾಸ್ತಿಯವರನ್ನು ನೆನಪಿಸಿಕೊಳ್ಳದೆ ಕನ್ನಡ ಸಣ್ಣಕತೆಗಳ ಚರಿತ್ರೆ ಆರಂಭವಾಗುವುದೇಯಿಲ್ಲ. ಹಳ್ಳಿ–ಪಟ್ಟಣ, ಬಡವ–ಬಲ್ಲಿದ, ಆಳು–ಅಧಿಕಾರಿ ಈ ಎಲ್ಲಾ ವರ್ಗವನ್ನು ಬಹಳ ಹತ್ತಿರದಿಂದ ಬಲ್ಲ ಮಾಸ್ತಿಯವರು ತಮ್ಮ ಕತೆಗಳಲ್ಲಿ ಅವರ ಬದುಕನ್ನು, ಅವರ ಮನೋಏರಿಳಿತಗಳನ್ನು ತಮ್ಮ ಕತೆಗಳಲ್ಲಿ ಪಡಿಮೂಡಿಸಿದ್ದಾರೆ. ಮೊಸರಿನ ಮಂಗಮ್ಮ, ವೆಂಕಟಿಗನ ಹೆಂಡತಿ, ಬೀದಿಯಲ್ಲಿ ಹೋಗುವ ನಾರಿ ಇತ್ಯಾದಿ ಕತೆಗಳು ವಿಭಿನ್ನ ಮಹಿಳಾ ಪಾತ್ರಗಳನ್ನು ಪರಿಚಯಿಸುತ್ತವೆ. ತಾಯಿ–ಮಗ–ಸೊಸೆಯ ಸಂಕೀರ್ಣ ಸಂಬಂಧಗಳನ್ನು ಪರಿಚಯಿಸುವುದೇ ಮೊಸರಿನ ಮಂಗಮ್ಮ ಕತೆಯ ಉದ್ದೇಶ. ಮಾಸ್ತಿಯವರಲ್ಲದೆ ಆನಂದಕಂದ. ದೇವುಡು ನರಸಿಂಹಶಾಸ್ತ್ರಿ, ಸಿ.ಕೆ.ವೆಂಕಟರಾಮಯ್ಯ, ರಂ.ಶ್ರೀ ಮುಗಳಿ ಮುಂತಾದವರೂ ಸಣ್ಣ ಕತೆಗಳನ್ನು ಬರೆದಿದ್ದಾರೆ. ಕೊಡಗಿನ ಗೌರಮ್ಮ, ಶ್ಯಾಮಲಾದೇವಿ. ಚದುರಂಗ (ಸುಬ್ರಹ್ಮಣ್ಯರಾಜೆ ಅರಸ್) ಮಿರ್ಜಿ ಅಣ್ಣರಾಯ ಮುಂತಾದವರು ಸಣ್ಣ ಕತೆಗಳ ಪ್ರಕಾರವನ್ನು ಎತ್ತಿಹಿಡಿದರು. ಗೊರೂರು ರಾಮಸ್ವಾಮಿ ಅಯ್ಯಂಗಾರರು ಹಳ್ಳಿ ಜೀವನವನ್ನು ಸಾಹಿತ್ಯ ಜಗತ್ತಿಗೆ ಸಣ್ಣ ಕತೆಗಳ ಮೂಲಕ ತಂದರು.

ಪಾಮರರ ಜೀವನ ನೀರಸವಲ್ಲ ಅಂದರೆ ಎಲ್ಲ ಜೀವನವೂ ಸರಸ, ಜಟಿಲ, ಅಧ್ಭುತ ಎಂಬುದೇ ಸಣ್ಣ ಕತೆಗಾರನ ದರ್ಶನ. ಸಣ್ಣಕತೆ 'ಅಲ್ಪ ಜೀವಿಗಳ ಮಹಾಕಾವ್ಯ' ಎಂಬುದು ನಿಜ. ಇದಕ್ಕೆ ದರ್ಶನ – ವಿಶುದ್ಧಿಬೇಕು, ಬರೀ ಕಲಾದೃಷ್ಟಿ ಸಾಲದು. ಆಗ ಅಲ್ಪಜೀವಿಗಳ ಕತ್ತಲೆಕವಿದ ಕೋಣೆಯಲ್ಲಿ ಸಣ್ಣಕತೆ ದೀವಟಿಗೆಯಾಗಿ ಹೊಕ್ಕು ಕಸವನ್ನೂ ರಸವನ್ನೂ ಬೆಳಗಿಸಬಲ್ಲುದು. ಇಂದು ದೀನರೂ ದಲಿತರೂ ದುಃಖಿತರೂ ಜಗತ್ತಿನ ಸಂಗೀತದಲ್ಲಿ ಅಪಸ್ವರ ಬೆರಸುತ್ತಿದ್ದಾರೆ. ಸಂಧಿಕಾಲದ ದಿಗಿಲು ಮಾನವಜಾತಿಯನ್ನು ಮುಸುಕಿಕೊಂಡಿದೆ. ಯಾಕೆ ಬದುಕಬೇಕೆಂದು ಅನೇಕರು ಕೇಳುತ್ತಾರೆ, ಕೊರಗುತ್ತಾರೆ. ಹೇಗೆ ಬದುಕುಬೇಕೆಂದು ತಿಳಿಯದೆ ಹಲವರು ಬದುಕಿಗೆ ಶರಣುಹೊಡೆಯುತ್ತಾರೆ. ಇಂದಿನ ಜೀವನಕ್ಕೆ ಹುಚ್ಚು ಹಿಡಿಸುವ ದಂಗುಗೊಳಿಸುವ ಸಂಕೀರ್ಣತೆ, ವೈವಿಧ್ಯ ಬಂದಿದೆ. ಸುಮಾರು ಪ್ರತಿಯೊಂದು ವ್ಯಕ್ತಿ ಅಸಹನೆಯ ಜ್ವಾಲಾಮುಖಿಯಾಗಿ ಅಶಾಂತಿಯ ಅಗ್ನಿಕುಂಡವಾಗಿ ತೋರುತ್ತದೆ. ಅದನ್ನು ಇಡಿಗಣ್ಣಿನಿಂದ ನೋಡಿದಲ್ಲಿ ಸಾವಿರಾರು ಸನ್ನಿವೇಶಗಳೂ, ಹಲವಾರು ವ್ಯಕ್ತಿಗಳೂ ಸಣ್ಣಕತೆಯ ವಿಷಯವಾಗಲು ಹಾತೊರೆಯುತ್ತವೆ. ಅಂತೆಯೆ ಸಣ್ಣ ಕತೆಗೆ ಸಾಹಿತ್ಯದಲ್ಲಿ ಕದಲದ ಸ್ಥಾನವಿದೆ.

ಕನ್ನಡದಲ್ಲಿ ಸಣ್ಣಕತೆಗೆ ಹಳೆಯ ಪರಂಪರೆಯಿದೆ, ಅಂದರೆ ಅದಕ್ಕೆ ಪರಂಪರೆಯ ಹಳತನವೂ ಇದೆ. ಹೊಸ ಯುಗದಲ್ಲಿ ಇಂದು ಮೂಡಿಬಂದ ಸಣ್ಣಕತೆಯ ಪರಂಪರೆಯೆ ಬೇರೆ. ಸಂಖ್ಯೆಯಲ್ಲಿ ಅದು ಉಳಿದೆಲ್ಲಾ ಸಾಹಿತ್ಯ ರೂಪಗಳಿಗಿಂತ ಹೆಚ್ಚಿನದು. ವಿಷಯ, ತಂತ್ರ, ಶೈಲಿ, ದೃಷ್ಟಿ ಇವುಗಳ ವೈವಿಧ್ಯದಲ್ಲಿಯೂ ಹೆಚ್ಚಿನದು. ಜೀವನದ ಎಲ್ಲ ಮಟ್ಟಗಳೂ ಭಿನ್ನ ಭಿನ್ನ, ಪ್ರಕೃತಿಗಳು, ಪರಿಸರಗಳು, ಸಮಸ್ಯೆಗಳು ಇವುಗಳಲ್ಲಿ ಅದರ ವಿಷಯ ಹೊಕ್ಕಾಡಿದೆ. 'ರಂಗಪ್ಪ ದೀಪಾವಳಿ' ಯಿಂದ 'ಉಗ್ರಪ್ಪನ ಉಗಾದಿ'ಯ ವರೆಗೆ, 'ಮೋಚಿ' ಯಿಂದ 'ವೈಣಿಕ'ನ ವರೆಗೆ ಅದು ಸಂಚಾರಮಾಡಿದೆ. ಆದರೂ ಮೊನ್ನೆ ಮೊನ್ನಿನವರೆಗೆ ಲೇಖಕರ ಅನುಭವ ಪರಿಮಿತಿಯ ಮೂಲಕ ಮಧ್ಯವರ್ಗದ ಜೀವನಚಿತ್ರ ಸಣ್ಣ ಕತೆಯಲ್ಲಿ ಪ್ರಮುಖವಾಗಿತ್ತು. ಈಗ ಎಲ್ಲ ವರ್ಗಗಳೂ, ವಿಭಿನ್ನ ಅನುಭಗಳೂ ತಲೆದೋರುತ್ತಲಿವೆ. ಎನ್ನುತ್ತಾರೆ ವಿಮರ್ಶಕರು.

ಸಣ್ಣಕತೆಗೆ ಮೊದಲಿಗರು ಯಾರು ಎಂಬ ವಾದವಂತಿರಲಿ, ಒಂದು ವಿಶೇಷವಾದ ಅರ್ಥದಲ್ಲಿ ಮಾಸ್ತಿಯವರು ಸಣ್ಣಕತೆಗೆ 'ಜನಕ'ರು. ರಾಜರ್ಷಿಯಾದ ಜನಕನು ನೆಲದ ಒಡಲಲ್ಲಿ ದೊರೆತ ಸೀತೆಯನ್ನು ಎತ್ತಿಕೊಂಡು ಸಾಕಿದಂತೆ ಆರ್ಷದೃಷ್ಟಿಯುಳ್ಳ ಮಾಸ್ತಿಯವರು ಕನ್ನಡ ನೆಲದಲ್ಲಿ ದೊರೆತ ಸಣ್ಣಕತೆಯನ್ನು ಬೆಳೆಸಿ ಮುಂದೆ ತಂದರು. ಕನ್ನಡ ಜನಜೀವನ, ಸಂಸ್ಕೃತಿ ಇವುಗಳ ಅದ್ಭುತವಾದ ಅರಿವು

ಸಣ್ಣಕತೆಗಳಲ್ಲಿ ಮೂಡಿಬಂದಿದೆ. ಸಾಂಪ್ರದಾಯಿಕ ಜೀವನದ ಉತ್ತಮಾಂಶಗಳನ್ನು ಅವರಂತೆ ಕಂಡವರಿಲ್ಲ. ಸಮಾಜದ ದುರ್ಮುಖವು ಅವರಿಗೆ ಅರಿತುದಾದರೂ ಸುಮುಖಕ್ಕೆ ಅದು ಹಿನ್ನೆಲೆ ಮಾತ್ರ. ಸಮಾಜದ ದುರಂತ ಚಿತ್ರವು ಹೆಚ್ಚಾಗಿ ಕಾರಂತ, ಅ.ನ.ಕೃ. ಇಂಥವರ ಸಣ್ಣಕತೆಗಳಲ್ಲಿ ಕಾಣುತ್ತದೆ. ಮೂಢರೂಢಿಗಳು, ಮೋಸಸಂದರ್ಭಗಳು, ಅನೀತಿ–ಅತ್ಯಾಚಾರಗಳು ಇವರ ಬರವಣಿಗೆಯ ಹೊಡೆತಕ್ಕೆ ಸಿಕ್ಕಿರುತ್ತವೆ. ಜೀವನದಲ್ಲಿ ಆನಂದ, ಸ್ನೇಹಸೌಹಾರ್ದ, ಶೃಂಗಾರ ರಸಿಕತೆ ಇವು ಆನಂದ ಮತ್ತು ಗೋಪಾಲ–ಕೃಷ್ಣರಾಯರ ಕತೆಗಳಲ್ಲಿ ಕಂಡುಬರುತ್ತವೆ. ಕಳ್ಳಿಯ ಬಾಳಿನ ದರ್ಶನವನ್ನು ಆನಂದಕಂದರು ನಯವಾದ ನುಡಿಗಳಲ್ಲಿ ಮೊದಲು ಮಾಡಿಕೊಟ್ಟರು. ಆಮೇಲೆ ಗೊರೂರು, ಬಸವರಾಜ ಕಟ್ಟೀಮನಿ ಮೊದಲಾದವರು ಮಾಡಿಕೊಡುತ್ತಿದ್ದಾರೆ. ಕಾರ್ಮಿಕರ ಜೀವನಚಿತ್ರವೂ ಸಣ್ಣಕತೆಗಳಲ್ಲಿ ಹೆಮ್ಮೆ ಪಡುವಂತೆ ಪ್ರಕಟವಾಗಿದೆ.

ವಸುಧೇಂದ್ರರು ತಾವು ಹುಟ್ಟಿ ಬೆಳೆದ ಬಳ್ಳಾರಿ ಸೀಮೆಯ ಗಣಿಗಾರಿಕೆ, ಬಡವರನ್ನು ಒಕ್ಕಲೆಬ್ಬಿಸುವ ನೀತಿ, ಸಣ್ಣ ಜಮೀನ್ದಾರರನ್ನು ಜಮೀನುರಹಿತರನ್ನಾಗಿಸುವಿಕೆ, ಶ್ರೀಮಂತಿಕೆಯ ಅಟ್ಟಹಾಸ, ಕೆಂಪು ಧೂಳಿನಲ್ಲಿ ಕೃಷಿಯ ನೆಲಸಮ. ಬಹುತ್ವದ ವಿನಾಶ ಏಕತ್ವದ ಆರ್ಭಟ, ಹಣದ ಅಟ್ಟಹಾದ, ಶ್ರೀಮಂತಿಕೆಯು ಸಮಕಾಲೀನ ಸಾಮಾಜಿಕ, ರಾಜಕೀಯ, ಆರ್ಥಿಕಗಳ ಮೇಲೆ ಹಿಡಿತ ಸಾಧಿಸುವುದು ಇತ್ಯಾದಿ ಅಂಶಗಳನ್ನು ಅವರ ಕತೆಗಳಲ್ಲಿ ಕಾಣಬಹುದಾಗಿದೆ. ಬೆಂಗಳೂರು, ತುಮಕೂರು ಇತ್ಯಾದಿ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕ ಪದವಿಗಳಿಗೆ ವಸುಧೇಂದ್ರರ ಕತೆಗಳು ಪಠ್ಯ ಆಗಿವೆ. ಸಾಮಾಜಿಕ, ಪ್ರಾದೇಶಿಕ, ವಸ್ತುವಿನ ದೃಷ್ಟಿಯಿಂದ ಇವರ ಸಾಹಿತ್ಯ ಕೃಷಿ ಅನನ್ಯತೆಯನ್ನು ಪಡೆದಿದೆ. ಮೋಹನಸ್ವಾಮಿ ಕಥಾ ಸಂಕಲನ ತೆಲುಗು, ತಮಿಳು, ಮಲಯಾಳಂ, ಮರಾಠಿ, ಹಿಂದಿ, ಇಂಗ್ಲೀಷ್, ಸ್ಪ್ಯಾನಿಷ್ ಮುಂತಾದ ಭಾಷೆಗಳಿಗೆ ಭಾಷಾಂತರ ಆಗಿದೆ. ಮನೀಷೆ, ಯುಗಾದಿ, ಮಿಥುನ ಕಥಾ ಸಂಕಲನಗಳು ಏಳು ಬಾರಿ ಮರುಮುದ್ರಣ ಕಂಡಿವೆ. 'ನಮ್ಮಮ್ಮ ಅಂದರೆ ನನಗಿಷ್ಟ' ಎಂಬ ಪ್ರಬಂಧ ಸಂಕಲನ ಕೃತಿಯು ಇಪ್ಪತ್ತನೆಯ(೨೦೨೦) ಮುದ್ರಣವನ್ನು ಕಂಡು, ಇದರ ಹತ್ತೊಂಬತ್ತು ಸಾವಿರಕ್ಕೂ ಹೆಚ್ಚು ಪ್ರತಿಗಳು ಮಾರಾಟವಾಗಿವೆ. ಈ ಮೇಲ್ಕಂಡ ಮಾಹಿತಿಯ ಉದ್ದೇಶ ಅಪಾರ ಓದುಗ ಬಳಗವನ್ನು ಈ ಲೇಖಕರು ಹೊಂದಿದ್ದಾರೆ ಎನ್ನುವುದೇ ಆಗಿದೆ. ಸಂವೇದನೆ ಎಂಬುದು ಎಲ್ಲರಲ್ಲೂ ಯಾವುದಾದರೂ ಒಂದು ರೂಪದಲ್ಲಿ ಇದ್ದೇ ಇರುತ್ತದೆ. ಆದರೆ ಪ್ರತಿಭೆ ಎಂಬುದು ಕೆಲವರಲ್ಲಿ ಸರಿಗಟ್ಟಲಾಗದ ತೆರನಾಗಿರುತ್ತದೆ. ವಸುಧೇಂದ್ರರು ಈಗಾಗಲೇ

ಮನೀಷೆ, ಯುಗಾದಿ, ಚೇಳು, ಹಂಪಿ ಎಕ್ಸ್‌ಪ್ರೆಸ್, ಮೋಹನಸ್ವಾಮಿ, ವಿಷಮ ಭಿನ್ನರಾಶಿ ಎಂಬ ಆರು ಕಥಾಸಂಕಲನಗಳಲ್ಲಿ ಒಟ್ಟು ಅರವತ್ತಮೂರು ಕಥೆಗಳನ್ನೂ, ಕೋತಿಗಳು, ನಮ್ಮಮ್ಮ ಅಂದರೆ ನಂಗಿಷ್ಟ, ರಕ್ಷಕ ಅನಾಥ, ವರ್ಣಮಯ, ಐದು ಪೈಸೆ ವರದಕ್ಷಿಣೆ ಎಂಬ ಐದು ಪ್ರಬಂಧ ಸಂಕಲನಗಳಲ್ಲಿ ಎಂಬತ್ತಾರು ಪ್ರಬಂಧಗಳನ್ನೂ, ಹರಿಚಿತ್ತ ಸತ್ಯ, ತೇಜೋ–ತುಂಗಭದ್ರಾ ಎಂಬ ಕಾದಂಬರಿಗಳನ್ನೂ, ಶ್ರೀರಮಣರ 'ಮಿಥುನ' (ಏಳು ತೆಲುಗು ಕತೆಗಳು)ಎಂಬ ಅನುವಾದಿತ ಕಥಾಸಂಕಲನವನ್ನೂ, 'ಎವರೆಸ್ಟ್' ಎಂಬ (Into Thin Air by Jon Krakauer) ಅನುವಾದಿತ ಪರ್ವತಾರೋಹಣ ಕೃತಿಯನ್ನೂ ಕನ್ನಡ ಓದುಗ ವಲಯಕ್ಕೆ ನೀಡಿದ್ದಾರೆ. ಇವರ ಈ ಸಾಹಿತ್ಯವನ್ನು ಕನ್ನಡ ಓದುಗ ವಲಯ ಆಸ್ವಾದಿಸಿದೆ. ಟಿ.ಪಿ.ಅಶೋಕ, ಎಸ್.ಆರ್.ವಿಜಯಶಂಕರ್, ಓ.ಎಲ್.ನಾಗಭೂಷಣಸ್ವಾಮಿ ಇತ್ಯಾದಿಯವರಿಂದ ಪ್ರತಿಕ್ರಿಯೆಗಳು ಬಂದಿವೆ.

ಹೊಸಗನ್ನಡ ಸಾಹಿತ್ಯ ಸಂದರ್ಭದಲ್ಲಿ, ಹೊಸ ತಲೆಮಾರಿನ ಲೇಕಖರ ಸಾಲಿನಲ್ಲಿ ನಿಲ್ಲುವವರು ಕತೆಗಾರ ವಸುಧೇಂದ್ರ ಆಗಿದ್ದಾರೆ. ಇವರ ಒಟ್ಟು ಸಾಹಿತ್ಯವನ್ನು ಗಮನಿಸಿದಾಗ ಗ್ರಾಮೀಣ ಜೀವನ, ನಗರ ಜೀವನದ ವಿವಿಧ ವಿನ್ಯಾಸಗಳು, ಸಾಮಾಜಿಕ ಸ್ತರವಿನ್ಯಾಸ, ಬ್ರಾಹ್ಮಣ ಸಮುದಾಯದ ಪಲ್ಲಟಗೊಂಡ ಜೀವನ ಸ್ಥಿತಿ, ಲಿಂಗೀಯ ಪಲ್ಲಟಗಳ ಚಿತ್ರಣ ಇತ್ಯಾದಿಗಳನ್ನು ಚರ್ಚೆ ಮಾಡುವುದು ನನ್ನ ಅಧ್ಯಯನದ ಮಹತ್ವದ ಅಂಶಗಳಾಗಿವೆ. ರಂ ಶ್ರೀ ಮುಗಳಿಯವರು ಹೇಳುವಂತೆ –'ಸಾಹಿತ್ಯ ಜನಸುಲಭವಾಗಬೇಕು, ಎಂತವರಿಗೂ ತಿಳಿಯಬೇಕು ಎಂಬುದು ಯೋಗ್ಯ ಆದರ್ಶ. ಆದರೆ ಯಾವ ಸಾಹಿತ್ಯದಲ್ಲಿಯೂ ಸುಲಭವಲ್ಲದ ಪ್ರೌಢ ವಿಭಾಗವೊಂದು ಇದ್ದೇ ಇರುತ್ತದೆ. ಸುಲಭ ಶೈಲಿಯ ಸಾಹಿತ್ಯದಲ್ಲಿಯೂ ಎಲ್ಲವೂ ತಿಳಿದುಕೊಳ್ಳಲು ಸುಲಭವಾದ ಅಂತರಂಗವಿರುವುದಿಲ್ಲ.'[೨] ರಂ ಶ್ರೀ ಮುಗಳಿಯವರ ಈ ಮಾತು ವಸುಧೇಂದ್ರರ ಸಾಹಿತ್ಯದ ಓದಿಗೂ ಅನ್ವಯವಾಗುತ್ತದೆ.

'ಪ್ರಪಂಚದ ಲಲಿತ ಸಾಹಿತ್ಯವೆಲ್ಲಾ, ಅದು ಕಾವ್ಯವೇ ಇರಲಿ, ಕತೆಯೇ ಇರಲಿ, ನಾಟಕವೇ ಇರಲಿ ಅಂತರಂಗವನ್ನು ತೆರೆದು ತೋರುವ ಅಂತರ್ಲೋಕದ ದಶಾವತಾರವೇ. ಅಲ್ಲಿ ಮಾನವನ ಜಾಗ್ರತ ಮನಸ್ಸಿನ ಹಾಗೂ ಬಹಿರಂಗ ಜೀವನದ ಪ್ರತಿಬಿಂಬಗಳಷ್ಟೇ ಸ್ಫುಟವಾಗಿ ನಿಚ್ಚಳವಾಗಿ ಅಂತರ್ಮನದ ಅಜಾಗೃತ ಬದುಕಿನ ಚರ್ಯೆ–ಚೇಷ್ಟೆಗಳ ಬಿಂಬಗಳೂ ಆವಿಷ್ಕಾರಗೊಳ್ಳುತ್ತಿವೆ. ಆದ್ದರಿಂದಲೇ ಈ ಸಾಹಿತ್ಯ ಕೃತಿಗಳಿಗೆ ಮಾನವೀಯತೆಯ ಸಂದರ್ಭದಲ್ಲಿ ಅಮರವೂ ನಿತ್ಯನೂತನವೂ ಆದ ಸತ್ವವೂ, ಶಕ್ತಿಯೂ ತುಂಬಿ ನಿಲ್ಲುತ್ತದೆ.'[೩] ಕಾವ್ಯಮೀಮಾಂಸಕರು ಗುರುತಿಸಿದಂತೆ ಭಾವಗಳು, ವಿಭಾವಗಳು, ವ್ಯಭಿಚಾರಿಭಾವಗಳು, ಸಂಚಾರಿಭಾವಗಳು ಒಗ್ಗೂಡಿ

ರಸವಾಗುತ್ತದೆ. ಇದು ಕೃತಿಕಾರ ಹಾಗೂ ಓದುಗ ಇಬ್ಬರಿಗೂ ಅನ್ವಯ. ಲೇಖಕನ ಮನಸ್ಸು ಹಾಗೂ ಆತ ಸೃಜಿಸಿದ ಪಾತ್ರಗಳ ಮನಸ್ಸು ಹಾಗೂ ಸನ್ನಿವೇಶಗಳ ಆಧಾರದ ಮೇಲೆ ಸಂಶೋಧನೆಯನ್ನು ಸಂಶೋಧಕ ಕೈಗೊಳ್ಳುವುದೇ ಮನೋವೈಜ್ಞಾನಿಕ ಅಧ್ಯಯನ ಎನಿಸಿಕೊಳ್ಳುತ್ತದೆ. 'ಭಾಷೆ ಮತ್ತು ಸಾಹಿತ್ಯ ಮನುಷ್ಯನ ಮನಸ್ಸಿನ ಅಭಿವ್ಯಕ್ತ ರೂಪಗಳು. ಅವನ್ನು ಮನಸ್ಸಿನ ವಿಕಾಸದ ದ್ಯೋತಕಗಳೆಂದೂ ತಿಳಿಯಲಾಗುತ್ತದೆ. ಶಿಷ್ಟಸಾಹಿತ್ಯ, ಜಾನಪದ ಸಾಹಿತ್ಯ ಎಂದು ಗುರುತಿಸುವುದು ಅವುಗಳ ಭಾಷೆ ಮತ್ತು ಸಾಹಿತ್ತಿಕ ಗುಣಗಳಿಂದ ಮತ್ತು ಅವನ್ನು ರೂಪಿಸಿದ ಮನೋವೃತ್ತಿಯ ಅಭ್ಯಾಸದಿಂದ.'[೪]

'The Discriminant analysis aims at studying the effect of two or more predictor variabls on certain evaluation criterion. The evaluation criterion may be good or bad, like or dislike, successful or unsuccessful.'[೫]

ಸಣ್ಣಕತೆಗಳ ಓದಿಗೆ ಪ್ರತ್ಯೇಕ ಮೀಮಾಂಸೆ ಇನ್ನೂ ಬೆಳೆದಿಲ್ಲ. ಆ ಪ್ರಕ್ರಿಯೆ ಆಗಬೇಕಿದೆ. ಸದ್ಯಕ್ಕೆ ಕಾದಂಬರಿ ಹಾಗೂ ಕಾವ್ಯ ಮೀಮಾಂಸೆಯ ಮಾನದಂಡಗಳೇ ಕಥಾ ಸಾಹಿತ್ಯ ಓದಿಗೂ ಅನ್ವಯವಾಗುತ್ತಿವೆ. ಕತೆಯ ವಸ್ತು, ತಂತ್ರ, ವಿನ್ಯಾಸ, ಅದು ಬೀರುವ ಪರಿಣಾಮ, ಕತೆಯ ಕೇಂದ್ರ ಪಾತ್ರ ಹಾಗೂ ಕತೆಯ ಆಶಯದ ಮೂಲಕ ನನ್ನ ಗ್ರಹಿಕೆಗಳನ್ನು ಪ್ರಸ್ತುತಪಡಿಸುವ ಪ್ರಯತ್ನ ಮಾಡಿದ್ದೇನೆ. ಸಣ್ಣಕತೆ ಕೂಡ ಕಾವ್ಯದಂತೆ ಧ್ವನಿಯನ್ನು ಅಭಿವ್ಯಕ್ತಿಸುತ್ತಿರುತ್ತದೆ. ಹಾಗಾಗಿ ಸಣ್ಣಕತೆಗಳ ಓದು ಭೇತೋಹಾರಿಯೂ ಹೌದು, ಅನುಭವದ ಖನಿಯೂ ಹೌದು.

ಬ್ರಹ್ಮಸೃಷ್ಟಿ – ಬದುಕಿನ ವೈಚಿತ್ರ್ಯ

'ಬ್ರಹ್ಮಸೃಷ್ಟಿ' ಎಂಬ ಕಿರುಕತೆಯಲ್ಲಿ ಸಮಾಜದಲ್ಲಿ ವ್ಯಕ್ತಿಯನ್ನು ಇಂತಿಷ್ಟೇ ಎಂದು ಅಳೆಯಲು ಸಾಧ್ಯವಿಲ್ಲ. ಪ್ರತಿಯೊಬ್ಬ ವ್ಯಕ್ತಿಗೆ ವ್ಯಕ್ತಿ ವಿಶೇಷತೆ ಇರುತ್ತದೆ ಎಂಬ ಅಂಶವನ್ನು ತಿಳಿಸುತ್ತದೆ. ಅಷ್ಟೇ ಅಲ್ಲದೆ ಕೆಲವೊಮ್ಮೆ ಅಯಾ ವ್ಯಕ್ತಿಗೆ ನಾನು ಏನು? ನನ್ನ ಶಕ್ತಿ ಎಂತಾದ್ದು? ಎಂಬುದೂ ಕೂಡ ಅರಿಯವೊಲ್ಲದು ಎಂಬುದನ್ನು ಈ ಕತೆ ತಿಳಿಸುತ್ತದೆ. ಈ ಕತೆಯಲ್ಲಿ ಹಸಿರು ಮತ್ತು ಕೆಂಪು ಬಣ್ಣಗಳನ್ನು ಪರಸ್ಪರ ವಿರುದ್ಧವಾಗಿ ಗ್ರಹಿಸುವ ಹುಟ್ಟು ದೋಷದ ವ್ಯಕ್ತಿಯನ್ನು ಸಂಕೇತವಾಗಿ ಇಟ್ಟುಕೊಂಡಿದ್ದಾರೆ. ರೈಲ್ವೆಯಲ್ಲಿ ಉದ್ಯೋಗ ಪಡೆದಾಗ್ಯೂ ಕೆಂಪು–ಹಸಿರು ಬಾವುಟ

ತೋರಿಸುವ ಸಂದರ್ಭದಲ್ಲೂ, ಎಂದೂ ಕರ್ತವ್ಯದಲ್ಲಿ ಚ್ಯುತಿ ಉಂಟಾಗಲಿಲ್ಲ. ಸೃಷ್ಟಿಕ್ರಿಯೆಯನ್ನು ಮೀರುವುದಾಗಲೀ, ಬದಲಾಯಿಸುವುದಾಗಲೀ ಸಾಧ್ಯವಿಲ್ಲ. ಇರುವುದನ್ನು ಇರುವಂತೆಯೇ ಒಪ್ಪಿಕೊಳ್ಳುವುದೇ ಮೇಲು ಎಂಬ ಆಶಯವನ್ನು ಈ ಕತೆಯು ಹೊಂದಿದೆ.

ವ್ಯಕ್ತಿಜೀವನದ ವೈರುಧ್ಯಗಳು

'ಪುಸ್ತಕದ ಬದನೇಕಾಯಿ ಊಟಕ್ಕೆ ಬರುವುದಿಲ್ಲ' ಎಂಬ ಗಾದೆ ಮಾತಿನಂತೆ, ಆಚರಣೆಗಳು, ನಂಬಿಕೆಗಳು ಆಚರಣೆಯಲ್ಲಿ ಇದ್ದಾಗ್ಯೂ ಸಮಯ ಸಂದರ್ಭಾನುಸಾರ ವ್ಯತ್ಯಯಕ್ಕೆ ಒಳಗಾಗುತ್ತವೆ ಎಂಬುದನ್ನು 'ಬದನೆಕಾಯಿ' ಎಂಬ ಪುಟ್ಟ ಕತೆ ತಿಳಿಸುತ್ತದೆ. ಈ ಕತೆಯಲ್ಲಿ ನಿರೂಪಕ ಹಾಗೂ ಅವರ ತಾಯಿ ಪಾತ್ರ ಬರುತ್ತವೆ. ಕುಟುಂಬದೊಂದಿಗೆ ತಾಯಿಯನ್ನು ಕರೆದುಕೊಂಡು ಹೋದ ನಿರೂಪಕರು ಸ್ನೇಹಿತನ ಮನೆಯಲ್ಲಿ ತನ್ನ ಅಮ್ಮ ಮುಗುಮ್ಮಾಗಿ ಇದ್ದ ಬಗ್ಗೆ ಮನೆಗೆ ಬಂದಾಗ ವಿಚಾರಿಸುತ್ತಾನೆ. ಆಗ ತಾಯಿಯಿಂದ ಬಂದದ್ದು ಆಶ್ಚರ್ಯ ಸಂಗತಿ. 'ನಿನ್ನ ಗೆಳೆಯನ ಹಂಡತಿ ತನ್ನ ಗಂಡನನ್ನು ಹೆಸರು ಹಿಡಿದು ಕರೆಯುತ್ತಿದ್ದಳು' ಎಂಬುದೆ ಅವಳ ಬೇಜಾರಿಗೆ ಕಾರಣ. ಯಾವುದೇ ಸಂದರ್ಭದಲ್ಲಿ ಹೆಂಡತಿ ಗಂಡನಿಗೆ ಗೌರವ ಕೊಡಬೇಕೆಂಬುದು ಆಕೆಯ ವಾದ.

ಅಮ್ಮನ ವಾದ –'ಅಯ್ಯೋ ಆಕೆ ಗಂಡನ್ನ 'ಕಿಟ್ಟಿ' ಅನತ ಕರಿತಾಳಲ್ಲೋ ಗಂಡ ಅಂತ ಸ್ವಲ್ಪನಾದ್ರೂ ಮರ್ಯಾದೆ ಬೇಡ್ವೇನೋ? 'ನಿಂಗೇನು ಗೊತ್ತು ಒಂದೊಂದು ಸಲಾನೂ ಹೆಸರಿಟ್ಟು ಕರೆದಾಗಲೂ ಗಂಡನ ಆಯುಷ್ಯ ಒಂದು ದಿನ ಕಡಿಮೆ ಆಗ್ತದೆ' ಹೀಗೆ ಹೇಳುವ ಅಮ್ಮ, 'ಯಾರಮ್ಮ ನಿನಗೆ ಇದೆಲ್ಲಾ ಹೇಳಿದ್ದು' ಎಂದರೆ ಯಾವು ವಿದ್ಯಾಭ್ಯಾಸ ಮಾಡಿರದ ಅಮ್ಮ 'ಶಾಸ್ತ್ರದಲ್ಲಿ' ಬರೆದಿಟ್ಟಿದೆಯಂತೆ ಎಂದು ಸಮರ್ಥನೆ ಕೊಡುತ್ತಾಳೆ. ಆದರೆ ಇದೇ ಅಮ್ಮ ಮೊಮ್ಮಕ್ಕಳಿಗೆ ಪೌರಾಣಿಕ ಕತೆಯಾದ 'ಸೌಗಂಧಿಕ ಪುಷ್ಪಹರಣ' ಹೇಳುವಾಗ 'ವನವಾಸದಾಗೆ ಒಮ್ಮೆ ದ್ರೌಪದಿಗೆ ಭಲೊ 'ಘಂ' ಅನ್ನೋ ಹೂವಿನ ವಾಸನೆ ಬಂತು ಹೂವನ್ನು ಮುಡಕೋಬೇಕು ಅಂತ ಬಹಳ ಆಸೆ ಆಯ್ತು ಅದಕ್ಕೆ ಭೀಮನ ಹತ್ತಿರ ಹೋಗಿ 'ಭೀಮ ಹೆಂಗಾನ ಮಾಡಿ ಆ ಸುವಾಸನೆಯ ಹೂವನ್ನು ನಂಗೆ ತಂದುಕೊಡು' ಅಂತಂದಳು– ಎಂದು ಕತೆ ನಿರೂಪಿಸುತ್ತಾಳೆ.ಕತೆಯಲ್ಲಿ ಪತ್ನಿ ಗಂಡನ ಹೆಸರಿಟ್ಟು ಕರೆಯುವ ಸಂಗತಿ ಹೇಳುವ ಅಮ್ಮ ನಿಜ ಜೀವನದಲ್ಲಿ ಅದನ್ನು ಒಪ್ಪಲು ಸಿದ್ಧವಿಲ್ಲ. ಹೀಗೆ ವ್ಯಕ್ತಿಯ ವ್ಯಕ್ತಿತ್ವದ ವೈರುಧ್ಯಗಳನ್ನು ಈ ಕತೆ ನಿರೂಪಿಸುತ್ತದೆ.

ಜಾಗತೀಕರಣ

ಯುಗಾದಿ ಕಥಾ ಸಂಕಲನದ 'ಯುಗಾದಿ' ಕತೆಯು ಗೋಪಣ್ಣ ಮಾಸ್ತರರ ಬದುಕಿನ ಸುತ್ತ ನೇಯ್ದ ಕಥೆ. ಬಳ್ಳಾರಿಯ ಹಳ್ಳಿಯೊಂದರಲ್ಲಿ ೪೦ ವರ್ಷಗಳ ಕಾಲ ಕನ್ನಡ ಮಾಸ್ತರನಾಗಿ ಸೇವೆಸಲ್ಲಿಸಿ, ಸಾಫ್ಟ್‌ವೇರ್ ಎಂಜಿನಿಯರ್ ಉದ್ಯೋಗಿ ಆದ ಮಗ ಪ್ರಹ್ಲಾದನ ಸಲುವಾಗಿ ಬೆಂಗಳೂರಿಗೆ ಬಂದು ಅಲ್ಲಿ ಎದುರಿಸುವ ಅನಾಥ ಪ್ರಜ್ಞೆಯನ್ನು ಕಥೆ ಬಿಚ್ಚಿಡುತ್ತದೆ. ತಾವು ಅನುಸರಿಸುವ ಸಂಪ್ರದಾಯಕ್ಕೂ, ಮಗ ಸ್ವೀಕರಿಸಿರುವ ಆಧುನಿಕತೆಗೂ, ತಾನೂ ಮಗನಿಗಾಗಿ ಹುಡುಕಿಕೊಡುವ ಸರಕಾರಿ ಕೆಲಸಕ್ಕೂ, ಮಗನೇ ಹುಡುಕಿಕೊಳ್ಳುವ ಮಲ್ಟಿನ್ಯಾಷನಲ್ ಕಂಪನಿಯ ಉದ್ಯೋಗಕ್ಕೂ, ತಾನು ಜೀವಮಾನವಿಡೀ ದುಡಿದು ನಿವೃತ್ತಿಯ ಕೊನೆಗಾಲದಲ್ಲಿ ಸಾಲ ಮಾಡಿ ಕಷ್ಟಪಟ್ಟು ಮನೆ ಕಟ್ಟುವುದಕ್ಕೂ, ಲಕ್ಷಗಟ್ಟಲೆ ಸಂಪಾದಿಸುವ ಮಗ ವೃತ್ತಿಯ ಆರಂಭದಲ್ಲೇ ಅಳುಕಿಲ್ಲದೆ ಮನೆ ಖರೀದಿಸುವುದಕ್ಕೂ, ಸಾಲ ಮಾಡಲು ತಾನು ಭಯ ಪಡುವುದಕ್ಕೂ ಮಗ ಸಾಲದ ಮೂಲಕವೇ ಎಲ್ಲ ಸಾಮಾನುಗಳನ್ನು ಮನೆಯ ಒಳಗೆ ತಂದಿರಿಸಿಕೊಳ್ಳುವುದಕ್ಕೂ, ಜೀವನಕ್ಕೋಸ್ಕರ ತಾನು ಮನೆ ಕಟ್ಟುವುದಕ್ಕೂ, ಲಾಭದ ಆಸೆಯಿಂದ ಮನೆ ಖರಿದಿಸುವ–ಮಾರುವ ಮಗನಿಗೂ, ತಾನು ನೋಡುವ ಕನ್ನಡ ಕಾರ್ಯಕ್ರಮಕ್ಕೂ, ಮಗ ನೋಡುವ ಇಂಗ್ಲೀಷ್ ಕಾರ್ಯಕ್ರಮಕ್ಕೂ, ತನ್ನೂರಿನ ಕನ್ನಡ ಶಾಲೆಗಳೂ, ಬೆಂಗಳೂರಿನ ಕಾನ್ವೆಂಟ್‌ಗೂ ಹೋಲಿಸಿಕೊಳ್ಳುತ್ತಾ ಹೋಗುತ್ತಾರೆ ಗೋಪಣ್ಣ ಮಾಸ್ತರು.

ನಿವೃತ್ತಿಯ ಅನಂತರ ಎದುರಾದ ತನ್ನ ಒಂಟಿತನವನ್ನು ಕಳೆದುಕೊಳ್ಳಲು ಬೆಂಗಳೂರಿನಲ್ಲಿ ಕೆಲಸ ಹುಡುಕಲು ಪ್ರಯತ್ನಿಸಿ ಸೋತು ಜನರಿಂದ ಔಟ್‌ಡೇಟೆಡ್ ಆದ ಓಲ್ಡ್‌ಮ್ಯಾನ್ ಎಂದು ವ್ಯಾಖ್ಯಾನಿತರಾದಾಗ, ಇದರಿಂದ ಆಚೆ ಬರಲು ಮನಃಶಾಂತಿಗಾಗಿ ರಾಯರ ಮಠಕ್ಕೆ ಹೋದರೆ ಅಲ್ಲೂ, ದೇವಸ್ಥಾನಗಳೂ ವ್ಯವಹಾರದ ಕೇಂದ್ರಗಳಾಗಿ ಬದಲಾಗಿರುವುದು ಗೋಪಣ್ಣ ಮಾಸ್ತರನ್ನು ದಿಗಿಲುಕೊಳಿಸುತ್ತದೆ. ಹೊರಗಿನವರಿಗೆ ಲಕ್ಷಗಟ್ಟಲೆ ದುಡಿಯುವ ಮಗ–ಸೊಸೆ. ಫಳಫಳ ಹೊಳೆವ ಕಾರು. ಭವ್ಯ ಬಂಗಲೆ–ಎಲ್ಲವೂ ಗೋಪಣ್ಣ ಮಾಸ್ತರರಿಗೆ ಸ್ವರ್ಗದಲ್ಲಿ ಇರುವಂತೆ ತೋರುತ್ತದೆ. ಅವರಿಗೆ ಎಲ್ಲರನ್ನೂ ಕಳಕೊಂಡು ತಾನೆಲ್ಲೋ ಅನಾಥನಾಗಿ ಬದುಕುತ್ತಿರುವ ಭಾವ ಕಾಡುತ್ತದೆ."ಮಲ್ಟಿ ನ್ಯಾಷನಲ್ ಕಂಪನಿನಾಗೆ ಕೆಲಸ ಮಾಡೋದು ಅಂದರೆ ಏನಂತ ಅಂದುಕೊಂಡಿ ನೀನು? ಕನ್ನಡ ಸಾಲಿ ಮಾಸ್ತರ ಕೆಲಸ ಅಂತ ಮಾಡೀ ಏನು?" ಎಂದು ಮಗ ಪ್ರಹ್ಲಾದನೇ ಆಡುವ ಮಾತು ಗೋಪಣ್ಣ ಮಾಸ್ತರರನ್ನು ಪಾತಾಳಕ್ಕೆ ದೂಡಿದಂತಾಗುತ್ತದೆ. ಆದರೆ ಕಥೆಯ ಕೊನೆಗೆ ಪ್ರಹ್ಲಾದನ ಮಡದಿ ರೇಖಾಳಿಗೆ

ಪ್ರಸವದ ಸಮಯ ಬಂದಾಗ ಖಾಸಗಿ ಆಸ್ಪತ್ರೆಗಳು ಯಾವುವೂ ಸಿಗದೆ, ಸರ್ಕಾರಿ ಆಸ್ಪತ್ರೆಯಲ್ಲೇ ಹೆರಿಗೆ ಮಾಡಿಸಬೇಕಾದ ಸಂದರ್ಭ ಬಂದಾಗ, ಇದೇ ಸರ್ಕಾರಿ ಶಾಲೆಯಲ್ಲಿ ಗೋಪಣ್ಣ ಮಾಸ್ತರರ ಶಿಷ್ಯೆಯಾಗಿ ಸಾಧಾರಣ ಕುಟುಂಬದಲ್ಲಿ ಓದಿ ಸಾಮಾನ್ಯ ನರ್ಸ್ ಆಗಿರುವ ರಾಧಾಳೇ ನೆರವಿಗೆ ಬರುವುದು ಮುಖ್ಯವೆನಸುತ್ತದೆ. ಇಂಗ್ಲೀಷ್ ಕಲಿತು ಎಂಜಿನಿಯರಿಂಗ್ ಓದಿ ಅಮೇರಿಕಾದ ಕಂಪನಿಯಲ್ಲಿ ಕೆಲಸ ಗಿಟ್ಟಿಸಿ ವಿಮಾನದಲ್ಲೇ ಹಾರಾಡಿ ಎಲ್ಲವನ್ನೂ ಹಣದ ಮೂಲಕವೇ ಅಳೆಯುವ ಮಗ ಪ್ರಹ್ಲಾದನಿಗೂ, ಕನ್ನಡ ಶಾಲೆಯಲ್ಲಿ ಓದಿ ಕಷ್ಟಕಾಲದಲ್ಲಿ ಕೈಹಿಡಿದು ಮಾನವೀಯತೆಯನ್ನು ಮೆರೆಯುವ ಶಿಷ್ಯೆ ರಾಧಾಳಿಗೂ ಇರುವ ವ್ಯತ್ಯಾಸ ಅಪಾರವೆನಿಸುತ್ತದೆ, ಗೋಪಣ್ಣ ಮಾಸ್ತರರಿಗೆ. ಸಾಂಪ್ರದಾಯಿಕತೆ–ಆಧುನಿಕ, ಕನ್ನಡ–ಇಂಗ್ಲೀಷ್, ವ್ಯವಹಾರ–ಮಾನವೀಯತೆ ನಡುವೆ ನಡೆಯುವ ಸಂಘರ್ಷವನ್ನು ಕಥೆ ಸೊಗಸಾಗಿ ಕಟ್ಟಿಕೊಡುತ್ತದೆ.

ಲಿಂಗರಾಜಕಾರಣ – 'ಗೇ'ಗಳ ತಲ್ಲಣಗಳು, ಸಲಿಂಗಕಾಮ

ನಮ್ಮ ಭಾರತ ದೇಶದ ಸಂದರ್ಭದಲ್ಲಿ 'ಸಲಿಂಗಕಾಮ' (Gay Sex) ಎಷ್ಟು ಪ್ರಸ್ತುತ ಹಾಗೂ ಕಾಮದ ಬಗ್ಗೆ ಭಾರತೀಯರಲ್ಲಿ ಇರುವ ನಂಬಿಕೆಗಳು, ಆಚರಣೆಗಳ ಬಗ್ಗೆ ಸಮಾಜಶಾಸ್ತ್ರೀಯ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲು ಇವರ ಕತೆಗಳು ವಸ್ತುವನ್ನೊದಗಿಸುತ್ತವೆ. ಇದಕ್ಕೆ ಪೂರಕವಾಗಿ ಸಿ.ಆರ್.ಚಂದ್ರಶೇಖರ್‌ರವರ ಮನೋವೈಜ್ಞಾನಿಕ ಹಾಗೂ ಚ.ನ.ಶಂಕರರಾವ್ ರವರ ಭಾರತೀಯ ಸಮಾಜಶಾಸ್ತ್ರಕ್ಕೆ ಸಂಬಂಧಿಸಿದ ಚಿಂತನೆಗಳನ್ನು ಅನುಲಕ್ಷಿಸಿ, ಮೋಹನಸ್ವಾಮಿ ಕಥಾ ಸಂಕಲನದಲ್ಲಿನ 'ತುತ್ತತುದಿಯಲ್ಲಿ ಮೊತ್ತ ಮೊದಲು', 'ಕಗ್ಗಂಟು', 'ಕಾಶೀವೀರರು', 'ವಲ್ಲದ ತಾಂಬೂಲ', 'ಕಿಲಿಮಂಜಾರೋ', 'ತಗಣಿ', 'ದುರ್ಭಿಕ್ಷ ಕಾಲ', 'ಭಗವಂತ, ಭಕ್ತ ಮತ್ತು ರಕ್ತ', 'ಪೂರ್ಣಾಹುತಿ', 'ದ್ರೌಪದಮ್ಮನ ಕಥೆ', 'ಇವತ್ತು ಬೇರೆ' ಎಂಬ ಹನ್ನೊಂದು ಕತೆಗಳನ್ನು ಗಮನಿಸಬಹುದು. ಎರಡು ಸಾವಿರದ ಹದಿಮೂರರಲ್ಲಿ ಈ ಕಥಾಸಂಕಲನವನ್ನು ವಸುಧೇಂದ್ರರು ಹೊರತಂದರು. ಈ ಕಥಾ ಸಂಕಲನ ಪ್ರಕಟಗೊಂಡಾಗ ಕನ್ನಡಕ್ಕೆ ವಿಶೇಷ ಕೊಡುಗೆ ಎಂದ ಹಾಗೇಯೇ, ಒಂದಷ್ಟು ಚರ್ಚೆಯನ್ನೂ ಹುಟ್ಟುಹಾಕಿತು. ಸ್ವತಃ ವಸುಧೇಂದ್ರರೇ 'ಗೇ' ಗಳ ಬಗ್ಗೆ ಒಂದು ಲೇಖನವನ್ನು ಪ್ರಜಾವಾಣಿ ದಿನಪತ್ರಿಕೆಯಲ್ಲಿ ಬರೆದಿದ್ದಾರೆ. ಅಲ್ಲದೆ 'ಋಜಚ ಉಣಾಚಿಡಿಜುಚಿಟ' ಮುಂತಾದ ಪತ್ರಿಕೆಗಳು ಈ ಬಗ್ಗೆ ಚರ್ಚಿಸಿವೆ. ಸಮಾಜ ಶಾಸ್ತ್ರೀಯ ಹಿನ್ನೆಲೆಯಲ್ಲಿ 'ಸಲಿಂಗ ಕಾಮ' ಭಾರತ ಪರಿಸರದಲ್ಲಿ ಎಂತಹ ವ್ಯಾಖ್ಯಾನಕ್ಕೆ ಒಳಗಾಗಿದೆ ಎಂಬುದನ್ನು ಕಂಡುಕೊಳ್ಳುವ ಹಾಗೂ ವಿವರಿಸುವ ಪ್ರಯತ್ನ ಮಹತ್ವದ್ದಾಗುತ್ತದೆ.

ಹಾಗಾಗಿ ವಸುಧೇಂದ್ರರು ಆಧುನಿಕ ಕನ್ನಡ ಸಣ್ಣಕತೆಗಳ ಸಂದರ್ಭದಲ್ಲಿ ಬಹಳ ಮುಖ್ಯ ಕತೆಗಾರರಾಗುತ್ತಾರೆ.

ಗೊಂದಲದ ಮೋಹನ್

ಬದುಕನ್ನು ಕಟ್ಟಿಕೊಳ್ಳಬೇಕಾದ ತಾರುಣ್ಯದ ಸಂದಂರ್ಭದಲ್ಲಿ ಯುವ ಸಮುದಾಯ ಎದುರಿಸುವ ಗೊಂದಲಗಳು ಹಾಗೂ ತಳಮಳವನ್ನು ಇವರ ಅನೇಕ ಕತೆಗಳು ಚಿತ್ರಿಸುತ್ತವೆ. 'ಕಣ್ಣೆದುರು ನೋಡಲ್ಲಿ ಗೆದ್ದಲು ಮರ ಕೆಡವಿದೆ' ಎಂಬ ಸಣ್ಣಕತೆ ಇಂತಹಿದೇ ಹಿನ್ನೆಲೆ ಉಳ್ಳದ್ದು, ಈ ಕತೆಯಲ್ಲಿ ಮೋಹನ್ ಸಿವಿಲ್ ಇಂಜಿನಿಯರಿಂಗ್ ಪದವಿ ಮುಗಿಸಿ ಕೆಲಸದ ಹುಡುಕಾಟ ಮಾಡಿ ಅಂತಿಮವಾಗಿ ಬಂದು ಕೆಲಸ ಹಿಡಿಯುವ ಆ ತರುವಾಯ ಅನೇಕ ಗೊಂದಲಗಳಿಗೆ ಒಳಗಾಗುವ ಸನ್ನಿವೇಶ ಬರುತ್ತದೆ. ಮೋಹನನ ಸ್ನೇಹಿತ ರಾಜು, ಸುಮ ಎಂಬ ತನ್ನೂರಿನ ತನಗೆ ಹಿಂದೆ ಪರಿಚಿತಳಾದ ಹುಡುಗಿಯನ್ನು ಮದುವೆಯಾದಾತ. ಕತೆಯ ಶೀರ್ಷಿಕೆಯಲ್ಲಿ ಗೆದ್ದೆಲೆಂಬ ಚಿಕ್ಕ ಹುಳುವೆಂದು ದೊಡ್ಡ ಮರವನ್ನೇ ದಿನೇ ದಿನೇ ತಿಂದು ಕರಗಿಸಬಲ್ಲದು ಎಂಬ ಸಂಕೇತವನ್ನು ನೀಡುತ್ತದೆ. ಈ ಸಂಕೇತ, ಕತೆಯ ಮೋಹನ್‌ಗೆ ಅನ್ವಯವಾಗುತ್ತದೆ. ಮನಸ್ಸಿನ ಸಮಸ್ಯೆಯೊಂದು ಜೀವನಕ್ಕೆ ಕುತ್ತು ತರಬಹುದು ಅಥವಾ ಅನೆಮ್ಮದಿಯನ್ನು ಉಂಟುಮಾಡಬಹುದು ಎಂಬುದನ್ನು ಈ ಕತೆಯು ತಿಳಿಸುತ್ತದೆ.

ಮೋಹನನಿಗೆ ಜೀವನದಲ್ಲಿ ಅನೇಕ ಗೊಂದಲಗಳು ಹಾಗೂ ಜಿಜ್ಞಾಸೆಗಳು ಕಾಡುತ್ತವೆ. ತಾನು ಸಿವಿಲ್ ಇಂಜಿನಿಯರಿಂಗ್ ಮಾಡಿದ್ದು ತಪ್ಪು, ಇದಕ್ಕೆ ಹೆಚ್ಚು ಉದ್ಯೋಗಾವಕಾಶಗಳು ಲಭ್ಯವಿಲ್ಲ ಎಂಬುದರಿಂದ ಇವನ ಗೊಂದಲ ಆರಂಭವಾಗುತ್ತದೆ. ಇದೇ ಸಿವಿಲ್ ಇಂಜಿನಿಯರಿಂಗ್ ಓದಿದವರು ಕೆಲಸ ಪಡೆದಿರುತ್ತಾರೆ. ಅವರನ್ನು ನೋಡಿ ಮತ್ತೆ ಜಾಗ್ರತನಾಗುತ್ತಾನೆ. ಜೀವನದಲ್ಲಿ ಭರವಸೆ ಹೊಂದುತ್ತಾನೆ. ವಿವಾಹಕ್ಕೆ ಸಂಬಂಧಿಸಿದಂತೆ ತಾನು ಮನಸ್ಸಿನಲ್ಲಿ ಇಷ್ಟಪಟ್ಟ ಸುಮಾಳನ್ನು ವಿವಾಹವಾಗಲು ಬಯಕೆ ಇದ್ದರೂ ಅದನ್ನು ತೋರಗೊಡುವುದಿಲ್ಲ ಈತ ನಿರ್ಧಾರ ಮಾಡುವುದರೋಳಗೆ ರಾಜು ಸುಮಾಳನ್ನು ಮದುವೆ ಆಗುತ್ತಾನೆ. ನರಸಕ್ಕ ಕೂಲಿಯಾಕೆ ಆಗಿದ್ದರೂ ಕೇಶವನ ಕುಟುಂಬಕ್ಕೆ ಹತ್ತಿರದವಳಾಗಿದ್ದಳು ಎಂಬುದು ಕೇಶವ ಮತ್ತು ಪದ್ಮಕ್ಕನ ಸಂಭಾಷಣೆಯಿಂದ ತಿಳಿದುಬರುತ್ತದೆ.

ಕೇಶವ–"ನರಸಕ್ಕ ಏನು ಹೊರಗಿನಾಕಿಯೇನು? ನಮ್ಮನಿಯಾಗೇ ವರ್ಷಾನುಗಟ್ಟಲೆ ಇದ್ದಾಕಿ".

ಅದಕ್ಕೆ ಪದ್ಮಕ್ಕ "ಹೌದಪ್ಪ ಹೌದು, ಯಾರು ಇಲ್ಲ ಅಂದರು ಅಮ್ಮನ ಕಣ್ಣ ಮುಂದೇ ಅಪ್ಪ ಇಟ್ಟುಕೊಂಡ ಸೂಳಿ ಆಕಿ ಅಂತ ನಂಗೂ ಗೊತ್ತದೇಳು".
ಈ ಮಧ್ಯೆ ಕತೆಗಾರರು ಪ್ರಸ್ತಾಪಿಸುವ ವಿರುಪಾಕ್ಷನ ದೇವಸ್ಥಾನದಿಂದ ಬರುವ ಭಜನೆಯ ಹಾಡಿನ–'ಮಾಡಿ ಸಿಕ್ಕದಲ್ಲ, ಮಾಡಿನ ಗೂಡು ಸಿಕ್ಕದಲ್ಲ' 'ತುಪ್ಪದ ಬಿಂದಿಗೆ ತಿಪ್ಪೆಯ ಮೇಲೆ ದೊಪ್ಪನೆ ಬಿತ್ತಲ್ಲಾ' ಈ ಸಾಲುಗಳು ಹಾಗೂ ಅವುಗಳ ಧ್ವನಿ ಮಾರ್ಮಿಕವಾಗಿದೆ. ಕತೆಯ ಶೀರ್ಷಿಕೆಯಾದ 'ಹೊಟ್ಟೆಯೊಳಗಿನ ಗುಟ್ಟು' ಎಂಬಲ್ಲಿ ನರಸಕ್ಕನ ಗುಟ್ಟು ಗುಟ್ಟಾಗಿಯೇ ಉಳಿಯುತ್ತದೆ. ಇಲ್ಲಿ 'ತುಪ್ಪದ ಬಿಂದಿಗೆ' ಹಾಗೂ 'ತಿಪ್ಪೆ' ಇವುಗಳು ಓದುಗನನ್ನು ವಿವೇಚನೆಗೆ ಹಚ್ಚುತ್ತವೆ. ಹೀಗೆ ವಸುಧೇಂದ್ರರ ಕತೆ ಹಣೆಯುವ ಭಾಷಾ ಶೈಲಿ ವಿಶಿಷ್ಟವಾಗಿದೆ. ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಕತೆಗಾರ ವಸುಧೇಂದ್ರರು ಹೊಸ ಭರವಸೆಯ ಲೇಖಕರಾಗಿದ್ದಾರೆ.

ಅಡಿ ಟಿಪ್ಪಣಿಗಳು

೧.ಶೇಷಗಿರಿರಾವ್ ಎಲ್.ಎಸ್., ೧೯೮೬ ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ ಕನ್ನಡ ಸಾಹಿತ್ಯ ಪರಿಷತ್ತು ೨.ಬೆಂಗಳೂರು ಮುಗಳಿ ರಂ ಶ್ರೀ ೨೦೦೬ ಸಾಹಿತ್ಯೋಪಾಸನೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು

೩.ಕಾಯ್ಕಿಣಿ ಗೌರೀಶ ೧೯೮೧ ಕಾವ್ಯಾನಂದ ಚಿತ್ರಕೂಟ ಮೈಸೂರು

೪.ಶಿರೂರ ಬಿ.ವಿ. ೨೦೧೨ ಸಂಶೋಧನ ಸ್ವರೂಪ ಅನ್ನಪೂರ್ಣ ಪ್ರಕಾಶನ ಹುಬ್ಬಳ್ಳಿ

೫.Panneerselvam R 2013 RESEARCH METHODOLOGY PHI Learning Private Ltd. Delhi-02

ಆಕರ ಕೃತಿಗಳು

ವಸುಧೇಂದ್ರ ೧೯೯೮ ಮನೀಷೆ ಛಂದ ಪುಸ್ತಕ ಬೆಂಗಳೂರು.

ವಸುಧೇಂದ್ರ ೨೦೦೪ ಯುಗಾದಿ ಛಂದ ಪುಸ್ತಕ ಬೆಂಗಳೂರು.

ವಸುಧೇಂದ್ರ ೨೦೦೬ ಚೇಳು. ಛಂದ ಪುಸ್ತಕ ಬೆಂಗಳೂರು.

ವಸುಧೇಂದ್ರ ೨೦೧೦ ಹಂಪಿ ಎಕ್ಸಪ್ರೆಸ್ ಛಂದ ಪುಸ್ತಕ ಬೆಂಗಳೂರು.

ವಸುಧೇಂದ್ರ ೨೦೧೪ ಮೋಹನಸ್ವಾಮಿ ಛಂದ ಪುಸ್ತಕ ಬೆಂಗಳೂರು.

ವಸುಧೇಂದ್ರ ೨೦೧೭ ವಿಷಮ ಭಿನ್ನರಾಶಿ ಛಂದ ಪುಸ್ತಕಬೆಂಗಳೂರು.

ವಸುಧೇಂದ್ರ ೨೦೦೪ ಕೋತಿಗಳು ಛಂದ ಪುಸ್ತಕ ಬೆಂಗಳೂರು.

ವಾಙ್ಮಯ ಸೂಚಿ

೧. ಅಶೋಕ ಟಿ.ಪಿ. ೨೦೧೨ ಸಾಹಿತ್ಯ ಸಂಚಾರ ಅಕ್ಷರ ಪ್ರಕಾಶನ ಹೆಗ್ಗೋಡು
೨. ಅಶೋಕ ಟಿ.ಪಿ. ೨೦೨೦ ದೇವನೂರು ಕಥನ ಅಭಿನವ ವಿಜಯನಗರ ಬೆಂಗಳೂರು
೩. ಆಮೂರ ಜಿ ಎಸ್ ೨೦೦೬ ಕನ್ನಡ ಕಥನ ಸಾಹಿತ್ಯ:ಕಾದಂಬರಿ ಸಪ್ನ ಬುಕ್ ಹೌಸ್ ಬೆಂಗಳೂರು
೪. ಅಮೂರ ಜಿ.ಎಸ್. ೨೦೦೩ ಕನ್ನಡ ಕಥನ ಸಾಹಿತ್ಯ: ಸಣ್ಣಕತೆ
೫. ಕಲಬುರ್ಗಿ ಎಂ.ಎಂ. ೨೦೦೨ ಕನ್ನಡ ಸಂಶೋಧನಶಾಸ್ತ್ರ ಸಪ್ನ ಬುಕ್ ಹೌಸ್ ಬೆಂಗಳೂರು
೬. ಕರೀಗೌಡ ಬೀಚನಹಳ್ಳಿ, ೨೦೦೨ ಶತಮಾನದ ಸಣ್ಣಕತೆಗಳ ಸಮೀಕ್ಷೆ
೭. ಕೃಷ್ಣಮೂರ್ತಿ ಅಗ್ರಹಾರ ೨೦೦೬ ಸಂಸ್ಕೃತಿ ಕಥನ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು
೮. ಕುರ್ತುಕೋಟಿ ಕೀರ್ತಿನಾಥ ೨೦೦೨ ಯುಗಧರ್ಮ ಹಾಗೂ ಸಾಹಿತ್ಯ ದರ್ಶನ, ಮನೋಹರ ಗ್ರಂಥಮಾಲಾ ಧಾರವಾಡ
೯. ಕೋದಂಡರಾಮ ಎಸ್ ಕೆ ೧೯೯೬ ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ ಗಾಯತ್ರಿ ಸ್ಮಾರಕ ಗ್ರಂಥಮಾಲೆ ಮೈಸೂರು
೧೦. ಗೋವಿಂದರಾಜ ಗಿರಡ್ಡಿ, ೨೦೦೯ ಕಲ್ಪಿತ ವಾಸ್ತವ, ಸಾಹಿತ್ಯ ಪ್ರಕಾಶನ ಹುಬ್ಬಳ್ಳಿ.

ಬುಡಕಟ್ಟು ಸಮುದಾಯ ಮತ್ತು ಅನುಭಾವ ಪರಂಪರೆ.

ಡಾ.ಜೆ.ಕರಿಯಪ್ಪ ಮಾಳಿಗೆ

ಅನುಭಾವ ತತ್ತ್ವಶಾಸ್ತ್ರ ಮತ್ತು ಕಾವ್ಯಶಾಸ್ತ್ರದ ಪಾರಿಭಾಷಿಕ ಪದ. ಆಧ್ಯಾತ್ಮಿಕ ಜಗತ್ತಿನಲ್ಲಿ ವಿಭಿನ್ನ ಅರ್ಥವಲಯಗಳಲ್ಲಿ ಆವಿಷ್ಕಾರಗೊಳ್ಳುತ್ತಾ ಬಂದಿದೆ. ಆದರೆ ಅನುಭಾವವನ್ನು ಕೇವಲ ಆಧ್ಯಾತ್ಮಿಕ ವಿಚಾರಕ್ಕಷ್ಟೇ ಸೀಮಿತ ಮಾಡಿದರೆ ಅದರ ಅರ್ಥವೈಶಾಲ್ಯತೆಗೆ ಕಡಿವಾಣ ಹಾಕಿದಂತಾಗುತ್ತದೆ. ದೇವರು, ಜಗತ್ತು, ಆತ್ಮ, ಪರಮಾತ್ಮಗಳ ಸಂಬಂಧದ ಚಿಂತನೆಯ ಜೊತೆಗೆ ಅನುಭಾವ ಸಮಾಜ ಮತ್ತು ಮನುಷ್ಯ ಸಂಬಂಧದ ಸಾಮಾಜಿಕ ಸಂಗತಿಗಳನ್ನು ಒಳಗೊಂಡಿರುತ್ತದೆ. ಅನುಭಾವ ಮಾನವನ ಬುದ್ಧಿಶಕ್ತಿ, ತರ್ಕ ಮತ್ತು ಪ್ರಯೋಗ ಪರೀಕ್ಷೆಗಳಿಗೆ ನಿಲುಕುವಂಥದಲ್ಲ. ಅಂತರಂಗದ ರಹಸ್ಯ(ಅರಿವು)ವನ್ನು ಶೋಧಿಸುವಂತಹುದು. ಆ ಅರಿವು ಆಗಬೇಕಾದರೆ , ನೋಡುವ ನೋಟ ಅಂತರ್ಮುಖವಾಗಿ, ಸಾಧನೆಯ ಸಿದ್ಧಸ್ಥಿತಿಯಲ್ಲಿ ಸ್ಥಿರತೆಯನ್ನು ಹೊಂದಿರಬೇಕು. ಅಂದರೆ ಒಳಗಣ್ಣು ತೆರೆಯುವುದು. ಆಗ ಸಾಧಕನಿಗೆ ಹೊಸ ಜಗತ್ತು ಕಾಣಿಸುತ್ತದೆ. ಬುದ್ಧಿ ಮತ್ತು ತರ್ಕಗಳಿಗೆ ನಿಲುಕದ ಲೌಕಿಕ ಮತ್ತು ಅಲೌಕಿಕ ಪ್ರಪಂಚದ ಹೊಸ ತಿಳಿವಳಿಕೆ. ಧರ್ಮ, ದೇವರು, ವರ್ಣ ವರ್ಗ, ಜಾತಿ, ಲಿಂಗ, ಅಧಿಕಾರ, ಅಂತಸ್ತು ಇವುಗಳನ್ನು ಮೀರಿದ ಸಮಾನತೆಯ ಸೌಹಾರ್ದತೆಯ ನೆಲೆಯಲ್ಲಿ ಮಾನವಧರ್ಮವನ್ನು ಕಟ್ಟುವ, ಕಾಣುವ ಹಂಬಲ ಆ ಅನುಭಾವ ಪಥದ ಸಾಧಕರಿಗಿರುತ್ತದೆ. ಸ್ಥಾಪಿತ ಧರ್ಮದ ಚೌಕಟ್ಟುಗಳನ್ನು ಮೀರಿ, ಇಷ್ಟ ದೈವದ ಮೂಲಕ ಸಕಲ ದೈವಗಳ ಸತ್ಯವನ್ನು ತಿಳಿದವರಾಗಿರುತ್ತಾರೆ. ಅವರಿಗೆ ಶಾಸ್ತ್ರ ಸಿದ್ಧಾಂತಗಳ ಜ್ಞಾನಬೇಕಿಲ್ಲ. ಅನುಭಾವಿಗಳ ಪರಿಕಲ್ಪನೆಯ ದೈವ ನಂಬಿದ ಧರ್ಮಗಳ ನಂಬಿದ ದೇವರುಗಳ ಪ್ರತಿರೂಪ ಎಂದೇ ತಿಳಿದವರಾಗಿರುತ್ತಾರೆ. "ಅನುಭಾವಕ್ಕೆ ಯಾವುದೇ ಒಂದು ಧರ್ಮದ ಹಂಗಲ್ಲ. ಅದು ತಾರ್ಕಿಕವಲ್ಲ, ಅದು ಒಮ್ಮೆ ಜ್ಞಾನ, ಒಮ್ಮೆ ಭಕ್ತಿ, ಒಮ್ಮೆ ವಿರಕ್ತಿ, ಒಮ್ಮೆ ಹಠ, ಒಮ್ಮೆ ದೈನ್ಯ, ಒಮ್ಮೆ ಮೌನ, ಒಮ್ಮೆ ಮಾತು, ಒಮ್ಮೆ ಮಹಾಶಾಂತಿ, ಒಮ್ಮೆ ವೀರ ಕ್ರೋಧದಲ್ಲಿ ಮೆರೆಯುತ್ತ ಯಾವ ಹಿಡಿತಕ್ಕೂ ಹೊಡೆತಕ್ಕೂ ಸಿಕ್ಕದೆ ಸಾಗುವ ನಿಗೂಢ ನಡೆ-ನುಡಿ. ದೈವಿಕ ಅರಿವಿನ ಮಹಾ ಸಾಗರದಲ್ಲಿ ಹುಚ್ಚೆದ್ದು ಕುಣಿಯುವ ಮುಗ್ಧ ಮಕ್ಕಳಾಗಿರುತ್ತಾರೆ ಎನ್ನುವ ಬಿದರಹಳ್ಳಿ

ನರಸಿಂಹಮೂರ್ತಿಯವರ ಮಾತು ಅನುಭಾವದ ಸ್ವರೂಪವನ್ನು ತಿಳಿಸುತ್ತದೆ.

"ಇರುವುದೊಂದು ಕನ್ನಡಿಯ ನೂರಾರು ಜನಪಿಡಿಯೆ
ಸರಳಾಗಿ ಅವರವರ ರೂಪು ಕಾಣುವಂತೆ
ಹರಿಯ ಭಕ್ತರಿಗೆ ಹರಿ, ಹರನ ಭಕ್ತರಿಗೆ ಹರ
ನರರೇನು ಭಾವಿಸುವರದರಂತೆ ತೋರುವನು" ಎನ್ನುವ ದೈವ ಸಾಕ್ಷಾತ್ಕಾರದ ಸ್ವರೂವನ್ನು

ಬಾಲಲೀಲ ಮಹಾಂತ ಶಿವಯೋಗಿಗಳು ಹೇಳಿದ್ದಾರೆ. ಆಧ್ಯಾತ್ಮ-ಅನುಭಾವ ಎನ್ನುವ ಈ ಪರಿಭಾಷೆಗಳು ಪ್ರಸ್ತುತ ಅಕಾಡೆಮಿಕ್ ವಲಯದಲ್ಲಿ ಭಿನ್ನ ಭಿನ್ನ ಪರಿಕಲ್ಪನೆಗಳಾಗಿ ವ್ಯಾಖ್ಯಾನಿಸಲ್ಪಟ್ಟಿವೆ. ಇಂಗ್ಲಿಶ್ ನ 'ಮೆಟಾಫಿಸಿಕಲ್' ಎನ್ನುವ ಪದಕ್ಕೆ ಆಧ್ಯಾತ್ಮ ಎನ್ನುವ ಅರ್ಥದಲ್ಲಿ, 'ಮಿಸ್ಟಿಸಿಂ' ಎನ್ನುವ ಪದಕ್ಕೆ ಅನುಭಾವ ಎನ್ನುವ ಅರ್ಥದಲ್ಲಿ ಬಳಸಲಾಗುತ್ತಿದೆ.

ದೇಶದ ಮೂಲ ನಿವಾಸಿಗಳಾದ ಬುಡಕಟ್ಟು ಸಮುದಾಯಗಳಲ್ಲಿ ನೆಲೆಗೊಂಡಿರುವ ಆಧ್ಯಾತ್ಮ ಮತ್ತು ಅನುಭಾವದ ನೆಲೆಗಳನ್ನು ಶಿಷ್ಟ ಧಾರ್ಮಿಕ ನೆಲೆಗಳಿಂದ ಬೇರ್ಪಟ್ಟು ಸರಳವಾದ ಅರ್ಥದಲ್ಲಿ ರೂಢಿಯಲ್ಲಿರುವುದನ್ನು ಕಾಣಬಹುದಾಗಿದೆ. ಬುಡಕಟ್ಟು ಸಮುದಾಯಗಳಿಗೆ ಆಧ್ಯಾತ್ಮ ಅಥವಾ ಅನುಬಾವ ಎನ್ನುವುದನ್ನು ತಮ್ಮ ಬದುಕಿನ ನಡೆ ನುಡಿಯಲ್ಲಿಯೇ ಸೇರಿದ್ದು, ದೈನಂದಿನ ಬದುಕಿನ ಸಾರ್ಥಕತೆಯನ್ನು ಕಂಡುಕೊಳ್ಳಬಹುದಾದ ಮಾರ್ಗವಾಗಿದೆ. ಸಮುದಾಯಕ್ಕೆ ಆದರ್ಶವಾಗಿರಬೇಕೆಂಬ ತಿಳಿವಳಿಕೆಯಾಗಿಯೂ ಇರುವುದರಿಂದ ಆ ನೆಲೆಯಲ್ಲಿಯೆ ಬದುಕಿ ಬಾಳಿ ಪೂಜಾರ್ಹರಾಗಿರುವುದನ್ನುಕಾಣಬಹುದು. ಬುಡಕಟ್ಟು ಸಮುದಾಯಗಳು ಮೂಲತಃ ಅಲೆಮಾರಿಗಳು. ಪಾರಂಪರಿಕವಾಗಿ ಪಶುಪಾಲನೆ, ಬೇಟೆಯ ವೃತ್ತಿಯನ್ನೇ ಅವಲಂಬಿಸಿದ್ದು, ಕ್ರಮೇಣ ಕೃಷಿಯನ್ನಾಧರಿಸಿ ಬದುಕು ಸಾಗಿಸುತ್ತಿರುವುದನ್ನು ಕಾಣಬಹುದು. ಉಪಕಸುಬನ್ನಾಗಿ ಬೇರೆ ಬೇರೆ ವೃತ್ತಿಗಳಲ್ಲಿ ತೊಡಗಿಕೊಂಡಿದ್ದರೂ ಆರ್ಥಿಕವಾಗಿ ಅತ್ಯಂತ ಹಿಂದುಳಿದಿದ್ದಾರೆ. ಆದರೆ ತಮ್ಮ ಬದುಕನ್ನು ಕುರಿತ ನಂಬಿಕೆ, ಆಚರಣೆ, ತತ್ವಗಳಿಗೆ ಸಂಬಂಧಿಸಿದಂತೆ ಸಾಂಸ್ಕೃತಿಕ ಶ್ರೀಮಂತಿಕೆ ಇದೆ. ಪಾರಂಪರಿಕವಾಗಿ ಶಿವ ಸಂಪ್ರದಾಯದವರಾಗಿದ್ದು, ಕ್ರಮೇಣ ವೈಷ್ಣವ ಸಂಪ್ರದಾಯದ ಪ್ರಭಾವಕ್ಕೂ ಒಳಗಾಗಿದ್ದಾರೆ. ತಮ್ಮ ಮೂಲ ಶೈವ ಪರಂಪರೆಯನ್ನೂ ಅನುಸರಿಸುತ್ತಾ, ಜೊತೆಯಲ್ಲಿ ವೈಷ್ಣವ ಸಂಪ್ರದಾಯವನ್ನು ಬೆರಸಿಕೊಂಡು ವಿಶಿಷ್ಟ ರೀತಿಯ ಶೈವ-ವೈಷ್ಣವ ಸಂಪ್ರದಾಯದ ಆಚರಣೆಗಳನ್ನು ಇಂದಿಗೂ ಬುಡಕಟ್ಟು ಸಮುದಾಯಗಳಲ್ಲಿ ಕಾಣಬಹುದು. "ಇದಕ್ಕೆ ನಿದರ್ಶನವಾಗಿ ಈಗಲೂ ಈ ಸಮುದಾಯದ

ದೇವರಗುಡಿಗಳಲ್ಲಿ ಶಿವ ಮತ್ತು ವಿಷ್ಣುವಿನ ಕುರುಹುಗಳು ಜೊತೆ ಜೊತೆಯಾಗಿಯೇ ಇರುವುದನ್ನು ಹಾಗೂ ಸಂಪ್ರದಾಯ ಆಚರಣೆಗಳಲ್ಲಿ ಈ ಎರಡೂ ಪಂಥಗಳ ಸಂಕೇತಗಳು ಅರ್ಥ ಪೂರ್ಣವಾಗಿ ಬೆಸೆದುಕೊಂಡಿರುವುದನ್ನು ಕಾಣಬಹುದು. ಇಂಥ ಪ್ರಭಾವಿತ ಏಳು ಬೀಳಿನ ಜೀವನ ನಡೆಸಿದ ಈ ಸಮುದಾಯಗಳು ತನ್ನ ಅಸ್ಮಿತೆಯನ್ನು ಎಚ್ಚರಕೆಯಿಂದ ಸ್ಥಾಪಿಸಿಕೊಳ್ಳುತ್ತಾ ಬಂದಿದೆ. ಅದರ ಛಾಯೆಗಳು ಅವರ ಆಚರಣೆ ಸಂಪ್ರದಾಯ ಹಾಗೂ ಕಲೆ ಸಾಹಿತ್ಯಾದಿ ಅಭಿವ್ಯಕ್ತಿಗಳಲ್ಲಿ ಕಂಡುಬರುತ್ತವೆ."(ಜನಪದ ಮಹಾಕಾವ್ಯಗಳು ಮತ್ತು ಪ್ರತಿಸಂಸ್ಕೃತಿ ಡಾ.ಎಸ್.ಎಂ.ಮುತ್ತಯ್ಯ.)

ಬುಡಕಟ್ಟು ಸಮುದಾಯಗಳು ಸಸ್ಯಾರಾಧನೆ, ಪ್ರಾಣಿಯಾರಾಧನೆ ಹಾಗೂ ಪ್ರಕೃತಿಯೊಳಗಿನ ವಿಶೇಷಗಳ ಬಗೆಗಿನ ಆರಾಧನೆಯನ್ನು ಇಂದಿಗೂ ನಾವು ಗಿರಿಜನರಲ್ಲಿ ನಿಚ್ಚಳವಾಗಿ ಕಾಣಲು ಸಾಧ್ಯವಿದೆ. ನದಿ, ಸಮುದ್ರಗಳನ್ನು ಆರಾಧಿಸುವ ಜನರಿದ್ದಾರೆ. ಎಮ್ಮೆ, ಎತ್ತು ನಾಗ, ಹಂದಿ ಆನೆಗಳನ್ನು ಆರಾಧಿಸುವ ಜನರಿದ್ದಾರೆ, ತಮ್ಮ ನಡುವಿನ ನಾನಾ ವಿಧವಾದ ಸಸ್ಯಗಳನ್ನು ಆರಾಧಿಸುವ ಜನರಿದ್ದಾರೆ. ಹಾಗೆಯೆ ತಮ್ಮ ಪರಿಸರದ ಪಕ್ಷಿಗಳನ್ನು ತಮ್ಮ ಕುಲದೊಡನೆ ಗುರುತಿಸಿಕೊಂಡ ಜನರೂ ಇದ್ದಾರೆ. ಅವರ ಬುಡಕಟ್ಟಿನ ರಕ್ಷಣೆಗಾಗಿ ಹೋರಾಡಿದ ಅನೇಕ ವೀರರು ಅವರ ದೇವರುಗಳಾಗಿ ಪರಿವರ್ತಿತವಾಗಿ ಪೂಜೆಗೊಳ್ಳುತ್ತಿರುವ ನಾಯಕರೂ ಇದ್ದಾರೆ. ಬಹು ಮುಖ್ಯವಾಗಿ ಪ್ರಾಣಾರ್ಪಣೆ ಮಾಡಿದ ಮಹಿಳೆಯರೂ ವಿವಿಧ ರೀತಿಯಲ್ಲಿ ಪೂಜೆಗೊಳ್ಳುತ್ತಿದ್ದಾರೆ. ಆದರೆ ಕ್ರಮೇಣ ನಡೆದ ಹಲವು ಧಾರ್ಮಿಕ ಚಳುವಳಿಗಳ ಪ್ರಭಾವದಿಂದ ಬುಡಕಟ್ಟು ಸಮುದಾಯಗಳಲ್ಲಿ ಕೆಲವು ಮಹತ್ತರ ಬದಲಾವಣೆಗಳಾಗಿವೆ. ಮೂಲದಲ್ಲಿ ಸಸ್ಯಾರಾಧನೆ, ಪ್ರಾನಣಿಯಾರಾಧನೆ ಮತ್ತು ಕುಲದ ವೀರರ ಆರಾಧನೆಯಲ್ಲಿ ತೊಡಗಿದ್ದ ಇವರ ಮೇಲೆ ಹಲವು ರೀತಿಯ ದೇವರುಗಳ ಪ್ರಭಾವವಾಗಿದೆ. ಒಂದು ಕಾಲಕ್ಕೆ ತಮ್ಮ ಕುಲ ಹಾಗೂ ಪಂಗಡಗಳಿಗೆ ಗಿಡ ಮರಗಳ ಹೆಸರನ್ನೆ ಇಟ್ಟುಕೊಂಡು ಅವುಗಳ ಮೂಲಕವೇ ತಮ್ಮ ಅಸ್ತಿತ್ವವನ್ನು ಗುರುತಿಸಿಕೊಂಡ ಹತ್ತಾರು ಬುಡಕಟ್ಟುಗಳು ಇಂದಿಗೂ ಆ ಸಂಪ್ರದಾಯವನ್ನು ದೇವರ ಹೆಸರಿನಲ್ಲಿ ಮೀಸಲಿಟ್ಟ ಕಾಡುಗಳಲ್ಲಿ ದೇವರ ಕಾಡುಗಳಾಗಿ ಉಳಿದು ಬಂದಿರುವುದನ್ನು ಕಾಣಬಹುದಾಗಿದೆ. ಕರ್ನಾಟಕದಲ್ಲಿ ಸುಮಾರು ೫೦ ಬುಡಕಟ್ಟು ಸಮುದಾಯಗಳಿವೆ. ಶತಮಾನಗಳಿಂದಲೂ ತಮ್ಮ ಅನನ್ಯತೆಯನ್ನು ಉಳಿಸಿಕೊಂಡು ನಾಗರೀಕ ಸಮಾಜದಿಂದ ದೂರ ಉಳಿದು ತಮ್ಮತನವನ್ನು ಕಾಪಾಡಿಕೊಂಡು ಬಂದಿವೆ. ಅವೆಲ್ಲವು ತಮ್ಮದೇ ಆದ ಆಚಾರ, ವಿಚಾರಗಳನ್ನು, ರೂಢಿ ಸಂಪ್ರದಾಯಗಳನ್ನು ಕುಲ ಕಸುಬುಗಳನ್ನು, ವೇಷ ಭೂಷಣ

ಭಾಷೆಗಳನ್ನು, ನ್ಯಾಯ ನೀತಿಗಳನ್ನು ಹೊಂದಿ ಬಾಳುತ್ತಿವೆ. ತಮ್ಮದೇ ಆದ ಕುಲ ಸಂಬಂಧ, ರಕ್ತ ಸಂಬಂಧ ಕುಲ ದೇವತಾ ಚಿಹ್ನೆ, ಹಬ್ಬ ಆಚರಣೆ, ತಿಥಿ ಆಚರಣೆ, ಶವ ಸಂಸ್ಕಾರ, ಮೊದಲಾದ ಧಾರ್ಮಿಕ ಆಚರಣೆಗಳನ್ನು ಅನುಸರಿಸಿಕೊಂಡು ಬಂದಿವೆ.

ಬುಡಕಟ್ಟು ಸಮುದಾಯಗಳಲ್ಲಿನ ಅನುಬಾವ ಪರಂಪರೆಯಲ್ಲಿ ಸಾಂಸ್ಕೃತಿಕ ನಾಯಕರು ಪ್ರಮುಖವಾಗಿ ಕಾಣಬರುತ್ತಾರೆ. ಬುಡಕಟ್ಟು ಸಾಂಸ್ಕೃತಿಕ ನಾಯಕರಲ್ಲಿ ಎರಡು ಬಗೆಯವರಿದ್ದಾರೆ. ಶುದ್ಧ ಐತಿಹಾಸಿಕ ಕ್ರಮದಲ್ಲಿ ನಿರೂಪಿಸಲ್ಪಟ್ಟ ವೀರರ ಕಥನಗೀತೆಗಳು. ಎರಡನೆಯದು ಸಂಪೂರ್ಣ ಪೌರಾಣಿಕ ಆವರಣದ ಚೌಕಟ್ಟಿನಲ್ಲಿ ನಿರೂಪಸಲ್ಪಡುವ ಸಾಂಸ್ಕೃತಿಕ ನಾಯಕರುಗಳು. ಬುಡಕಟ್ಟು ಸಮುದಾಯವನ್ನು ಆವರಿಸಿಕೊಂಡು ಭಕ್ತಿ ಭಾವದಿಂದ ಗೌರವಿಸಲ್ಪಡುತ್ತಿದ್ದಾರೆ. ಇವರು ಶಿಷ್ಟ ಸಮುದಾಯಗಳ ಸಾಂಸ್ಕೃತಿಕ ನಾಯಕರಿಗಿಂತ ಬಿನ್ನ. ಇಲ್ಲಿನ ನಾಯಕರು ತಾವು ಸಮುದಾಯಕ್ಕಾಗಿ ಸಾಧಿಸಿದ ಕಾರ್ಯಗಳ ನೆಲೆಯಲ್ಲಿ ನಾಯಕರಾಗಿರುತ್ತಾರೆ. ಇವರಿಗೆ ಅಲೌಕಿಕ ಜೀವನಕ್ಕಿಂತ ಲೌಕಿಕ ಬದುಕಿನ ಬಗ್ಗೆಯೆ ಹೆಚ್ಚಿನ ಒಲವು. ನಾಯಕನಹಟ್ಟಿ ತಿಪ್ಪೇಸ್ವಾಮಿ, ಗಾದಿರಿ ಪಾಲನಾಯಕ, ಕುಮಾರ ರಾಮ, ಜಗಳೂರು ಪಾಪನಾಯಕ, ಜುಂಜಪ್ಪ, ಎತ್ತಪ್ಪ, ಮೊದಲಾದವರ ಬದುಕುಗಳು ಮತ್ತು ಅವರ ಸಾಧನೆಗಳು ವಾಸ್ತವ ನೆಲೆಯಲ್ಲಿ ಕೂಡಿರುತ್ತವೆ. ಒಂದೊಂದು ದೇಶಿ ಕಥನಗಳ ಸಾಂಸ್ಕೃತಿಕ ನಾಯಕರು ಬುಡಕಟ್ಟು ಸಮುದಾಯಗಳ ಅಂತಃಸಾಕ್ಷಿಯಾಗಿ ಪ್ರತಿನಿಧಿಸುತ್ತಿದ್ದಾರೆ. 'ಸಾಮಾನ್ಯವಾಗಿ ಬುಡಕಟ್ಟು ಸಮೂಹದಲ್ಲಿ ಶಿಷ್ಟ ದೇವತೆಗಳಿಗಿಂತ ಹೆಚ್ಚು ಆರಾಧನೆಗೊಳ್ಳುವವರು ಜನರ ನಡುವೆ ಆಗಿ ಹೋದ ವೀರರುಗಳೇ. ಕರ್ನಾಟಕದಲ್ಲಿ ಕೇವಲ ನೂರು ವರ್ಷಗಳ ಹಿಂದೆ ಮಡಿದ ವೀರರಿಂದ ಹಿಡಿದು ೧೩ನೇ ಶತಮಾನದಲ್ಲಿ ಆಗಿ ಹೋದ ಕುಮಾರರಾಮನವರೆಗೆ ಈ ಬುಡಕಟ್ಟು, ಐತಿಹಾಸಿಕ ಮತ್ತು ಸಾಂಸ್ಕೃತಿಕ ನಾಯಕರ ವಿವರಗಳನ್ನು ಗಮನಿಸಬಹುದಾಗಿದೆ. (ರಹಮತ್ ತರೀಕೆರೆ, (ಸಂ) ಧರ್ಮ, ಪುಟ:೪೨೧,)

ಬುಡಕಟ್ಟು ಸಮುದಾಯಗಳು ದೇವರೆಂದು ಒಪ್ಪಿಕೊಂಡಿರುವುದು ತಮ್ಮ ಕುಲದ ಹಿರಿಯರನ್ನು. ಹಿರಿಯರೆಂದರೆ ಆ ಸಮುದಾಯಗಳ ಸಾಂಸ್ಕೃತಿಕ ನಾಯಕರುಗಳು. ಅವರು ಆರಾಧಿಸುವ ದೈವಗಳೆಂದರೆ, ಪೆಟ್ಟಿಗೆ ದೈವಗಳು ಇಲ್ಲವೇ ಕೋಲು ದೇವರುಗಳು. ಇವುಗಳಲ್ಲಿ ಹಿರಿಯರು ಬಳಸಿದ ಕೋಲು, ಬಿಲ್ಲು, ಬಾಣ, ಖಡ್ಗ ಮತ್ತು ಕೊಳಲು ಹೀಗೆ ಅವರು ಬಳಸಿದ ಅಸ್ತ್ರಗಳು, ವಸ್ತ್ರಗಳು ಯಾವುದೇ ಇರಲಿ ಅವೆಲ್ಲವೂ ಪೂಜಾರ್ಹವಾದವುಗಳು.

ಬುಡಕಟ್ಟು ಕಥನಗಳಲ್ಲಿ ಇಂಥ ಸಾಂಸ್ಕೃತಿಕ ವೀರರ ಬಗೆಗೆ ರೋಚಕ ಸಂಗತಿಗಳು ನಿರೂಪಿಸಲ್ಪಟ್ಟಿವೆ. ಇಲ್ಲಿಯ ನಾಯಕರು ಹುಟ್ಟಿನಿಂದಲೇ ತಮ್ಮ ವೈಶಿಷ್ಟ್ಯತೆಯನ್ನು ಮೆರೆಯುತ್ತಾರೆ. "ಒಂದು ಸಮುದಾಯದಲ್ಲಿ ಅದರ ಸಾಕ್ಷಿ ಪ್ರಜ್ಞೆಯಂತೆ ಕಾಣಿಸಿಕೊಳ್ಳುವ ಒಬ್ಬ ನಾಯಕನ ಹುಟ್ಟು ಆ ಸಮುದಾಯದ ಒಳಗೆ ಒಂದು ವೈಚಾರಿಕ ಆವರಣವನ್ನು ಸೃಷ್ಟಿಸುತ್ತದೆ. ಆ ಮೂಲಕ ಅದು ಪ್ರಭುತ್ವ ಹುಟ್ಟು ಹಾಕಿದ ಬೌದ್ಧಿಕ ಶೂನ್ಯತೆಯನ್ನು ಸ್ಫೋಟಿಸಲು ಯತ್ನಿಸುತ್ತದೆ. ಈ ವೈಚಾರಿಕ ಅರಿವನ್ನ ಸೃಷ್ಟಿಸುವ ನಾಯಕ ಆ ಸಮುದಾಯದ ಒಟ್ಟು ಆಶೋತ್ತರಗಳ ಪ್ರತಿರೂಪ. ಅವನು ಆಯಾ ಸಮುದಾಯಗಳ ಕನಸುಗಳ ಜಗತ್ತಿನ ಬಲಿಷ್ಠ ಸಂಕೇತ. ಲೌಕಿಕಜಗತ್ತಿನ ಆಚೆಗೆ ಆ ಸಮುದಾಯಗಳು ತವಕಿಸುವ ಸ್ಮೃತಿ ಜಗತ್ತಿನ ಅಧಿಪತಿ. ಅವನು ಅಸಾಹಯಕ ಜೀವಿಗಳ ಒಟ್ಟು ಪ್ರತಿರೋಧದ ಅಸಾಮಾನ್ಯ ವ್ಯಕ್ತಿತ್ವ ಅದಕ್ಕಾಗಿಯೇ ಅಧೀನಗೊಂಡ ಎಲ್ಲಾ ಸಮುದಾಯಗಳ ಅಂತಃಸತ್ವಗಳ ಪ್ರತಿರೂಪದಂತೆ ಈ ನಾಯಕರು ಗೋಚರಿಸುತ್ತಾರೆ. ನಮ್ಮ ಪರಂಪರೆಯ ಎಲ್ಲಾ ಬಗೆಯ ಸ್ಥಾವರ ಸಂಸ್ಥೆಗಳಿಗೆ ಪ್ರತಿದ್ವಂದ್ವಿಯಾಗಿ ನಿಲ್ಲಬಲ್ಲ ಅನುಭಾವಿ ನಾಯಕರಿವರು" (ಮ್ಯಾಸಬೇಡರಕಥನಗಳು, ಎ.ಎಸ್.ಪ್ರಭಾಕರ ಪುಟ:೫)

ಬುಡಕಟ್ಟುಗಳ ದೈವಾರಾಧನೆಯಲ್ಲಿ ಗಮನಿಸ ಬೇಕಾದ ಪ್ರಮುಖ ಸಂಗತಿಯೆಂದರೆ, ಈ ಗುಂಪುಗಳ ದೈವಗಳಿಗೆ ಒಂದು ನಿರ್ದಿಷ್ಟವಾದ ಸ್ಥಳ ಮತ್ತು ಆಸ್ಥಾನವಿಲ್ಲ. ತಮ್ಮ ಜೀವನ ನಿರ್ವಹಣೆಯ ವಸ್ತುಗಳಂತೆ ದೇವರುಗಳನ್ನು ಒಂದು ಪೆಟ್ಟಿಗೆಯಲ್ಲಿಟ್ಟುಕೊಂಡಿರುತ್ತಾರೆ. ಇದಕ್ಕೆ ಉತ್ತಮ ನಿದರ್ಶನವಾಗಿ ಈ ಬುಡಕಟ್ಟುಗಳಲ್ಲಿ ಪ್ರಚಲಿತವಿರುವ ಪೆಟ್ಟಿಗೆ ದೇವರುಗಳ ಕಲ್ಪನೆಯನ್ನು ನೋಡಬಹುದು. ಮ್ಯಾಸಬೇಡರು ಮತ್ತು ಕಾಡುಗೊಲ್ಲರ ಅನೇಕ ದೇವರುಗಳು ಬಿದಿರಿನ ಪುಟ್ಟಿಯಲ್ಲಿರುತ್ತವೆ. ಮ್ಯಾಸ ಬೇಡರಲ್ಲಿ ಇಂಥ ಪೆಟ್ಟಿ ದೇವರುಗಳು ಇರುವುದನ್ನು ಈಗಲೂ ಗುರುತಿಸಬಹುದು. ಅಲೆಮಾರಿಗಳಾದ ಇವರು ಅವುಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಒಯ್ಯಲು ಸುಲಭವಾಗಲೆಂಬ ಉದ್ದೇಶದಿಂದ ತಮ್ಮ ದೇವರುಗಳನ್ನು ಪೆಟ್ಟಿಗೆಯಲ್ಲಿ ಇಟ್ಟಿರುತ್ತಾರೆ. ಇತ್ತೀಚೆಗೆ ಪೆಟ್ಟಿಗೆ ದೇವರುಗಳ ಜೊತೆಗೆ ಬೆಳ್ಳಿ ಬಂಗಾರದಿಂದ ಮಾಡಿದ ಉತ್ಸವಮೂರ್ತಿಗಳನ್ನು ಕಾಣಬಹುದು.

ಐತಿಹಾಸಿಕ ವ್ಯಕ್ತಿಯಾಗಿ, ಬುಡಕಟ್ಟು ನಾಯಕನಾಗಿ ಕುಮಾರರಾಮ ಕರ್ನಾಟಕ ಮತ್ತು ಆಂಧ್ರಪ್ರದೇಶದಲ್ಲಿ ಮನೆ ಮಾತಾಗಿರುವ ಸಾಂಸ್ಕೃತಿಕ ವೀರ. ರಾಯಚೂರು ಜಿಲ್ಲೆಯ ಕಮ್ಮಟದುರ್ಗದಲ್ಲಿ ಆಳ್ವಿಕೆ ನಡೆಸಿದ ಕಂಪಿಲರಾಯನ ಮಗ. ಕುಮಾರರಾಮನ ಸ್ವಭಾವ, ಸಾಹಸ ಜನಪದರ ಮನಸ್ಸನ್ನು ತೀವ್ರವಾಗಿ ಆಕರ್ಷಿಸಿದೆ. ಜನಪದ

ಸಂಸ್ಕೃತಿಯ ವೀರನಾಗಿ, ಸಾಂಸ್ಕೃತಿಕ ನಾಯಕನಾಗಿ ಕೊನೆಗೆ ದೇವರಾಗಿ ಆರಾಧಿಸಿಕೊಳ್ಳುತ್ತಿದ್ದಾನೆ. ಶೌಚಗುಣ ಸಂಪನ್ನನಾಗಿದ್ದ ಈತನ ನೆನಪಿನಲ್ಲಿ ವೀರಗಲ್ಲುಗಳಿವೆ, ಕಥನಗೀತೆಗಳಿವೆ, ಲಾವಣಿಗಳಿವೆ, ನಾಟಕಗಳಿವೆ, ಕಾದಂಬರಿಗಳಿವೆ, ಕೃಷಿಯತ್ತುಗಳಿವೆ, ಮುಖ್ಯವಾಗಿ ದೇವಸ್ಥಾನಗಳಿವೆ. ೧೪ನೆ ಶತಮಾನದ ರಾಜನೊಬ್ಬ ಸಮುದಾಯದ ಅಪಾರ ಗೌರವ, ಮನ್ನಣೆ ಮತ್ತು ಅಭಿಮಾನಾದರಗಳಿಂದ ಪೂಜೆಗೊಂಡ ವ್ಯಕ್ತಿತ್ವದವನಾಗಿದ್ದಾನೆ. ಆತನ ಜೀವನ ಮತ್ತು ಆದರ್ಶಗಳು ನಾಡಿನ ತುಂಬಾ ಹಬ್ಬಿವೆ. 'ಕನ್ನಡ ನಾಡಿನ ಉದ್ದಗಲಕ್ಕೂ ಕುಮಾರರಾಮನ ರತ್ನಾಜಿಯ ಕತೆಗಳು ಜನಪದರ ಬಾಯಲ್ಲಿದೆ. ಕುಮಾರರಾಮನ ಬಾಲ್ಯ, ಯೌವ್ವನ ಜನಪರ ಕೆಲಸಗು, ನೈತಿಕ ಗುಣ, ಶೀಲದಗುಣದ ಹಾಡುಗಳುಜನಜನಿತವಾಗಿವೆ. ಬುರ್ರಾ ಕಥಾ ಪ್ರಕಾರದಲ್ಲೂ ಇವನ ಚರಿತ್ರೆ ಇದೆ. ನೂರಾರು ಕತೆಗಳಿವೆ. ಐತಿಹ್ಯಗಳಿವೆ. ಅಷ್ಟೇ ಅಲ್ಲ ಕುಮಾರ ರಾಮನ ಮರಣದ ನಂತರ ಕೆಲವು ದೇವಾಲಯಗಳನ್ನು ಕಟ್ಟಿ ಇವನನ್ನು ಪೂಜಿಸಿದ ಜನತೆಯ ಮನೋಧರ್ಮದೊಳಗೆ ಕುಮಾರರಾಮ ಅಚ್ಚೊತ್ತಿದ ಚಿತ್ರವಾಗಿದ್ದಾನೆ. ರಾಮಗಡ, ಹೊಸಮಲೆ, ದುರ್ಗ, ಹಾವೇರಿ, ಸಿಡಿಗಿನಮೊಳ, ಮಲ್ಲಾಪುರ, ಇಂದ್ರಿಗಿ, ಮುಕ್ಕಂಪೆ, ಹೇಮಗುಡ್ಡ, ಸೊರಬ, ಶಿವಮೊಗ್ಗ, ಚಾಮರಾಜನಗರ, ಅಂಕೋಲ, ಹೊನ್ನಾವರ, ಹಳೇಬೀಡು, ಗುಳೇದಗುಡ್ಡ ಮೊದಲಾದ ಕಡೆ ಕುಮಾರರಾಮನ ದೇವಾಲಯಗಳಿವೆ. ಆನತೆ ಪ್ರೀತಿಯಿಂದ ಜಾತ್ರೆಗಳನ್ನು ಮಾಡುತ್ತಾರೆ. ಶೂಲದ ಹಬ್ಬ, ಕಳ್ಳರಾಮನ ಹಬ್ಬಗಳನ್ನು ಮಾಡುತ್ತಾರೆ. ಸಣ್ಣರಾಜ್ಯವೊಂದರ ರಾಜನೊಬ್ಬ ದೇವರಾದದ್ದು ಇತಿಹಾಸದಲ್ಲಿ ವಿಶೇಷ. ಇದರ ಹಿಂದಣ ಆತನ ಜನಪ್ರಿಯತೆ, ಜನಾನುರಾಗಿತನವನ್ನು ಚರಿತ್ರೆಯ ಬರಹಗಾರರು ಅರಿಯಬೇಕಿದೆ. ಬಳ್ಳಾರಿ, ಕೊಪ್ಪಳ, ಶಿವಮೊಗ್ಗ ಮೊದಲಾದ ಜಿಲ್ಲೆಗಳ ಕೆಲವು ಗ್ರಾಮಗಳಲ್ಲಿ ಕುಮಾರರಾಮನ ರುಂಡದ ಕಟ್ಟಿಗೆಯ ದೊಡ್ಡ ಮೂರ್ತಿಗಳನ್ನು ಮನೆಯಲ್ಲಿಟ್ಟುಕೊಂಡು ಪೂಜಿಸಲಾಗುತ್ತಿದೆ. ವಿಶೇಷವೆಮದರೆ ಬಳ್ಳಾರಿ ಜಿಲ್ಲೆಯ ಹಳ್ಳಿಯೊಂದರಲ್ಲಿ ಮೊಹರಂ ಆಚರಣೆಯಲ್ಲಿ ಕುಮಾರರಾಮನ ಹೆಸರಿನ ಪೀರಲುದೇವರನ್ನು ಕೂರಿಸುತ್ತಾರೆ'.(ಜಾಜಿ ದೇವೇಂದ್ರಪ್ಪ–ತಿಳಿದಷ್ಟೇ ಬಯಲು ಪುಟ ೮೫)

ಚಿತ್ರದುರ್ಗ ಪರಿಸರದ ಅನೇಕ ಹಟ್ಟಿಗಳಲ್ಲಿ ಗಾದಿರಿಪಾಲನಾಯಕನ ಆರಾಧನಾ ನೆಲೆಗಳಿವೆ. ಆತನ ಜನನ, ಪಶುಗಳ ರಕ್ಷಣೆ, ಸಂಸಾರ, ಕಟ್ಟೇಮನೆಗಳು, ಹುಲಿಮರಿಗಳ ಸಾಕುವಿಕೆ ಮತ್ತು ಅವುಗಳ ಸಾವು, ಹುಲಿಗಳೊಂದಿಗೆ ಹೋರಾಟ, ಮರಣ, ಗಂಜಿಗಟ್ಟೆಯಲ್ಲಿನ ಆರಾಧನಾ ನೆಲೆ ಮೊದಲಾದವುಗಳ ಹಿಂದೆ ರೋಚಕ ಕಥನಗಳಿವೆ.

ಆತನಿಗೆ ಸಂಬಂಧಿಸಿದ ಮಿಂಚೇರಿಯ ಜಾತ್ರೆಗಾಗಿ ನೂರಾರು ಜೋಡು ಎತ್ತಿನ ಗಾಡಿಯ ಪಯಣ ಮತ್ತು ಅರಣ್ಯ ಪರಿಷೆಯಂತೂ ಭಕ್ತಿ ಭಾವಗಳಿಂದ ಕೂಡಿದ ವಿಶಿಷ್ಟವಾದ ಜನಪದ ಆಚರಣೆಯಾಗಿದೆ. ಆತನ ಬದುಕು, ಸಾಧನೆ ಮತ್ತು ಆತನು ಬಳಸುತ್ತಿದ್ದ ಆಯುಧಗಳು ಬುಡಕಟ್ಟು ಸಮುದಾಯಗಳಲ್ಲಿ ಅನುಭಾವದ ನೆಲೆ ಪಡೆದುಕೊಂಡು ಪೂಜಾರಾಧನೆಯ ಮಹತ್ವ ಪಡೆದಿವೆ. ನಿಸರ್ಗ ಮತ್ತು ಮನುಷ್ಯ ಸಂಬಂಧವನ್ನು ಕಟ್ಟಿಕೊಡುವ ಶ್ರೇಷ್ಠಜೀವನ ದರ್ಶನ ಗಾದ್ರಿಪಾಲನಾಯಕನ ಕಥನಕಾವ್ಯದಲ್ಲಿ ಬರುತ್ತದೆ. ಇಲ್ಲಿನ ಪಶುಪಾಲಕ ಸಂಸ್ಕೃತಿಯವರ ದೇವರುಗಳು ಶ್ರಮಜೀವಿಗಳು. ಸಮುದಾಯಕ್ಕಾಗಿ, ಸಾಕುಪ್ರಾಣಿಗಳಿಗೆ ಅಪಾಯಗಳು ಬಂದಾಗ ಹೋರಾಡಿ ಸಾಹಸ ಮೆರೆದು ವೀರನಾಯಕರಾಗಿದ್ದಾರೆ. ಆ ವೀರರೆ ಬುಡಕಟ್ಟು ಸಮುದಾಯದ ದೇವರುಗಳು. ಬುಡಕಟ್ಟು ಸಮುದಾಯದವರು ದೇವರೆತ್ತುಗಳ ಜಾತ್ರೆ ನಡೆಸುತ್ತಾರೆ. ದೇವರೆತ್ತುಗಳನ್ನು ಕಾಯುವವರಿಗೆ ಕಿಲಾರಿಗಳೆನ್ನುತ್ತಾರೆ. ಈ ಸಮುದಾಯಕ್ಕೆ ದೇವರೆತ್ತುಗಳ ಸಗಣಿ ಪವಿತ್ರ ಮತ್ತು ಪ್ರಸಾದದ ಮಹತ್ವ ಇದ್ದು, ಸಗಣಿಯ ರಾಶಿಯನ್ನ ಗೌರವಿಸುವ, ಪೂಜಿಸುವ ಮನೋಭಾವ ಇದೆ. ಕತ್ತಿ, ಕಠಾರಿ, ಬಿಲ್ಲು ಬಾಣಗಳನ್ನು ದೇವರುಗಳ ಸಂಕೇತವಾಗಿ ಪೂಜಿಸುತ್ತಾರೆ. ಬೋರೇದೇವರು, ಬೋಸೇದೇವರು, ಚನ್ನಕ್ಯಾಸಯ್ಯ, ಕಂಪಳದೇವರು, ಬೊಮ್ಮದೇವರು, ಕಾಟನಾಯಕ, ಮೊದಲಾದ ದೇವರುಗಳ ಜೊತೆ ಗಾದ್ರಿಪಾಲನಾಯಕ, ಜಗಳೂರು ಪಾಪನಾಯಕ ನಾಯಕನಹಟ್ಟಿ ತಿಪ್ಪೇಸ್ವಾಮಿ ಮೊದಲಾದ ಸಾಂಸ್ಕೃತಿಕ ನಾಯಕರನ್ನು ಪೂಜಿಸುತ್ತಾರೆ.

೧೬ ಮತ್ತು ೧೭ ಶತಮಾನದಲ್ಲಿ ಬಾಳಿ ಬದುಕಿದ ಕರ್ಮಜೀವಿ ಕಾಯಕಯೋಗಿ ತಿಪ್ಪೇಸ್ವಾಮಿ ಸಮಾಜ ಸುಧಾರಕನಾಗಿ, ಜನಕಲ್ಯಾಣಕ್ಕೆ ತನ್ನನ್ನು ಅರ್ಪಿಸಿಕೊಂಡ ಅವಧೂತ. ಆಧುನಿಕ ಜಗತ್ತಿಗೆ ಆಶ್ಚರ್ಯಮೂಡಿಸುವ ಹಾಗೆ ಸಾಧುವಾಗಿ ಸಿದ್ಧನಾಗಿ, ಸಂತನಾಗಿ, ಯೋಗಿಯಾಗಿ ತನ್ನನ್ನು ನಂಬಿದ ಶ್ರದ್ಧಾಭಕ್ತಿಯುಳ್ಳ ಭಕ್ತ ಜನತೆಗೆ ಕೃಪೆ ತೋರಿ ಅವಧೂತನಾಗಿ ಅಪಾರಭಕ್ತ ಜನತೆಯನ್ನು ಹೊಂದಿರುವ ತಿಪ್ಪೇಸ್ವಾಮಿಯ ನೆಲೆಯಿಂದ ನಾಯಕನಹಟ್ಟಿ ಕ್ಷೇತ್ರ ನಿತ್ಯ ಯಾತ್ರಾಸ್ಥಳವಾಗಿದೆ. ಈತ ನಾಯಕನ ಹಟ್ಟಿಗೆ ಬಂದಾಗ ಶ್ರೇಷ್ಠ ಮಟ್ಟದ ಉಡುಪು ಈತನಿಗಿರಲಿಲ್ಲ. ಸಾಮಾನ್ಯ ಮ್ಯಾಸಬೇಡನಂತೆ ಬಾಗಿದ ಕೋಲು, ಹೆಗಲಲ್ಲಿ ತಂಗಿನ ಪರಟೆಗಳು, ಹರಕು ಕಂಬಳಿ, ಸೊಂಟದಿಂದ ಮೊಳಕಾಲಿನವರೆಗೆ ಧೋತಿ ಧರಿಸುತ್ತಿದ್ದ. ಪಶುಪಾಲಕರೊಂದಿಗೆ ಮಕ್ಕಳೊಂದಿಗೆ ಬೆರೆಯುತ್ತಿದ್ದು, ಹುಚ್ಚನಂತೆ ವರ್ತಿಸುತ್ತದ್ದನಂತೆ ಎನ್ನುವ ಡಾ. ವಿರುಪಾಕ್ಷಿ ಪೂಜಾರಹಳ್ಳಿಯವರ ಅಭಿಪ್ರಾಯಗಳು, ತಿಪ್ಪೇಸ್ವಾಮಿ

ಮ್ಯಾಸನಾಯಕ ಬುಡಕಟ್ಟುನಿಂದಲೇ ಬಂದಿರುವ ಅವಧೂತ ಎನಿಸುತ್ತದೆ. ತಿಪ್ಪೇಸ್ವಾಮಿ ಎನ್ನುವ ಹೆಸರು ಬುಡಕಟ್ಟು ಸಂಸ್ಕೃತಿಯ ಪ್ರತೀಕ. ತಿಪ್ಪೇಸ್ವಾಮಿ ಎಂಬ ಹೆಸರು ಶಿಷ್ಟರಲ್ಲಿ ಕಂಡು ಬಂದರೆ ಅದಕ್ಕೆ ಬುಡಕಟ್ಟು ಸಂಸ್ಕೃತಿಯೆ ಕಾರಣ ಎನ್ನುವ ಪ್ರೊ.ಬಿ.ಪಿ.ವೀರೆಂದ್ರ ಕುಮಾರ್ ಅವರ ಸಂಶೋಧನೆಯ ತಿಳಿವುಗಳು ಆತ ಬುಡಕಟ್ಟು ಮೂಲದವನೆಂದು ಗುರುತಿಸಿ ಒಟ್ಟಾರೆ ಮಧ್ಯ ಕರ್ನಾಟಕದಲ್ಲಿ ನಾಯಕನ ಹಟ್ಟಿ ತಿಪ್ಪೇಸ್ವಾಮಿ ಬಹುಮುಖ್ಯ ಸಾಂಸ್ಕೃತಿಕ ನಾಯಕನಾಗಿದ್ದಾನೆ. ಈತನ ಬಗ್ಗೆ ಹಲವಾರು ಪಾವಾಡ ಸಂಬಂಧದ ಕಥೆಗಳು ಹೇರಳವಾಗಿವೆ. ಬುಡಕಟ್ಟು ಸಮುದಾಯದ ಸಂತನಾಗಿದ್ದ ಎಂಬುದಕ್ಕೆ ಊರ ಹೊರಗಿನ ಈತನ ಸಮಾಧಿಯನ್ನು ಈಗಲೂ ಬೇಡ ಸಮುದಾಯದವರೆ ಪೂಜಿಸುತ್ತಿದ್ದಾರೆ. ಮಲೆ ಮಾದೇಶ್ವ ಮತ್ತು ಮಂಟೇಸ್ವಾಮಿಯಂತೆ ಜನಪ್ರಿಯತೆಯನ್ನು ಪಡೆದಿರುವ ದೈವ. ಇಂದು ಕ್ಷೇತ್ರದಲ್ಲಿ ನಡೆಯುವ ಆಚರಣೆಗಳು, ನಂಬಿಕೆಗಳು, ಜಾತ್ರೆ ಉತ್ಸವಗಳು ಜಾತಿ ಮತ ಭೇದಗಳನ್ನು ಮೀರಿ ಸಮಾನತೆಯ ಸೌಹಾರ್ದತೆಯ ನೆಲೆಯಲ್ಲಿ ನಡೆಯುತ್ತಿವೆ.

ಜಗಳೂರು ಪಾಪನಾಯಕ ಒಬ್ಬ ಪಶುಪಾಕನಾಗಿದ್ದು, ಬುಡಕಟ್ಟು ಸಮುದಾಯದ ಸಾಂಸ್ಕೃತಿಕ ನಾಯಕನಾಗಿ ಆರಾಧನೆಗೊಳ್ಳುತ್ತಾನೆ. ಬದುಕಿನಲ್ಲಿ ನಡೆದ ಮಹತ್ತರ ಘಟನೆಗಳಿಂದ ಆತನೊಬ್ಬ ಈ ಹೊತ್ತು ಜಾತಿ ಮತ ಧರ್ಮಗಳ ಎಲ್ಲೆ ಮೀರಿ ಮನೆ ದೇವರಾಗಿದ್ದಾನೆ. ಚಿತ್ರದುರ್ಗ ಪರಿಸರದಲ್ಲಿನ ಚಳ್ಳಕೆರೆಯ ಅಜ್ಜನಗುಡಿ ತುಂಬಾ ಜನಪ್ರಿಯತೆಯನ್ನು ಪಡೆದಿದೆ. ಈತನ ಚಟುವಟಿಕೆಗಳನ್ನು ನೋಡಿ ಹುಚ್ಚನೆಂದು ಕರೆದವರಿದ್ದಾರೆ. ಹಾಗೆ ದೇವಮಾನವನೆಂದು ಕರೆದವರೂ ಇದ್ದಾರೆ. 'ಜಗಳೂರಜ್ಜ ಮೂಲತಃ ಶೈವನಾಗಿದ್ದು, ಆತ ಒಮ್ಮೆ ತಿರುಪತಿಗೆ ಗೋವಿಂದನ ದರ್ಶನಕ್ಕಾಗಿ ಬರುತ್ತಾನೆ. ತಿರುಪತಿಗೆ ಬಂದವನು ಗುಡಿಗೆ ಹೋಗಿ ಗೋವಿಂದನ ದರ್ಶನ ಪಡೆಯುವುದೇ ಇಲ್ಲ. ಗೋವಿಂದನೇ ಗುಡಿಯಿಂದ ಹೊರಗೆ ಬಂದು ಆತನಿದ್ದಲ್ಲಿಗೆ ತೆರಳಿ ದರ್ಶನ ಕೊಡುತ್ತಾನೆ. ಇಲ್ಲಿ ಜಗಳೂರಜ್ಜನು ಪರಂಪರೆಯೊಂದು ನಿರ್ಮಿಸಿದ ಗುಡಿಯೆಂಬ ಸ್ಥಾವರ ಸಂಸ್ಥೆಯನ್ನು, ಅದು ಪವಿತ್ರೀಕರಿಸುವ ಮತ್ತು ಉನ್ನತೀಕರಿಸುವ ದೇವರೆಂಬ ನಂಬಿಕೆಯನ್ನು ಏಕಕಾಲಕ್ಕೆ ನಿರಾಕರಿಸುತ್ತಾನೆ. ಸ್ಥಾವರ ದೈವವನ್ನು ಕುರಿತ ನಂಬಿಕೆಗಳು ವಿಪರೀತವಾದಾಗ ಅನುಭಾವದ ಧಾರೆಯಲ್ಲಿ ಹುಟ್ಟಿದ ಜಗಳೂರಜ್ಜನೆಂಬ ಅನುಭಾವಿ ತನ್ನ ಆಧ್ಯಾತ್ಮಿಕ ಪ್ರತಿಭೆಯಿಂದ ದಂಗೆಯೊಂದನ್ನ ಸೃಷ್ಟಿಸುತ್ತಾನೆ. ಈತನಿಗೆ ಭಕ್ತಿ ಮತ್ತು ವೈಚಾರಿಕತೆಯ ಮಧ್ಯೆ ಕಂದರಗಳಿಲ್ಲ. ಮ್ಯಾಸ ಬೇಡರು ಜಗಳೂರಜ್ಜ ಮತ್ತು ವೆಂಕಟೇಶನ ಮಧ್ಯೆ ವ್ಯತ್ಯಾಸಗಳನ್ನು ಕಲ್ಪಿಸಿಕೊಳ್ಳುವುದೇ ಇಲ್ಲ." (ಮ್ಯಾಸಬೇಡರ ಕಥನಗಳು,

ಎ.ಎಸ್.ಪ್ರಭಾಕರ.ಪುಟ-೬)ಮೊಳಕಾಲ್ಮೂರು ತಾಲೂಕಿನ ಮನುಮೆತನ ಹಟ್ಟಿಯಲ್ಲಿ ಪೆದ್ದಯ್ಯ ನಾಯಕನೆಂಬುವನು ಚಿರತೆಯ ಜೊತೆ ಹೋರಾಡಿ ಪ್ರಾಣಬಿಟ್ಟಿದ್ದಾನೆ. ಆತನ ಹೆಸರಿನಲ್ಲಿ ಒಂದು ವೀರಗಲ್ಲು ಇದ್ದು, ಪ್ರತಿ ವರ್ಷ ಮಾರ್ಚ್ ತಿಂಗಳಲ್ಲಿ ಪೆದ್ದನಾಯಕನ ಹೆಸರಿನಲ್ಲಿ ಪರ ನಡೆಯುತ್ತದೆ.

ಬುಡಕಟ್ಟು ಸಮುದಾಯದಲ್ಲಿ ಹಲವಾರು ಮಹಾಸತಿಯರೂ ಕೂಡ ಆರಾಧನೆಗೆ ಒಳಗಾಗಿದ್ದಾರೆ. ಅವರ ಬಗ್ಗೆ ಕಥನಗೀತೆಗಳಿವೆ. ಸಹಗಮನ ಮಾಡಿದ ಸತಿಯರ ಆರಾಧನೆಗಳಿವೆ. ಅವರೆಲ್ಲಾ ಸಮುದಾಯ ಇಲ್ಲವೆ ಗ್ರಾಮಕ್ಕೆ ದೇವತೆಗಳೆನಿಸಿಕೊಂಡು ಪೂಜಾರ್ಹರಾಗಿದ್ದಾರೆ. ಬುಡಕಟ್ಟುಗಳ ಆರಂಭದ ಬದುಕಿನಲ್ಲಿ ಹೆಣ್ಣಿಗೆ ಗಂಡಿನಷ್ಟೇ ಪ್ರಾಧಾನ್ಯತೆ ಇದ್ದು ಯಾವುದೇ ತಾರತಮ್ಯ ಭಾವನೆಗಳು ಇರಲಿಲ್ಲ ಎಂಬುದಕ್ಕೆ ಅವರಲ್ಲೇ ಪ್ರಚಲಿತವಿರುವ ಕೆಲವು ಆಚರಣೆಗಳು ಹಾಗೂ ಕಥನಗಳಿಂದ ತಿಳಿದು ಬರುತ್ತದೆ. "ಸಂಪತ್ತಿನ ಕೇಂದರಿಕರಣವಿಲ್ಲದ ಪರಿಸ್ಥಿತಿಯ ಜನವರ್ಗಗಳಲ್ಲಿ ಹೆಣ್ಣು ಗಂಡಿಗೆ ಸಮಾನಳೂ ಅತ್ಯಂತ ಸಹ್ಯಳೂ ಆಗಿರುತ್ತಾಳೆ."(ಹಿ.ಶಿ. ರಾಮಚಂದ್ರೇಗೌಡ, ಜಾನಪದ: ಸಾಂಸಕೃತಿಕ ಆಯಾಮಗಳು, ಪುಟ:೧೮೫) ಮ್ಯಾಸಬೇಡರ ಕುಲಚರಿತೆಯ ನಿರೂಪಣೆಗಳಲ್ಲಿ ಪ್ರಸ್ತಾವಾಗುವ ಕೆಲವು ಮಹಿಳೆಯರನ್ನು ಗಮನಿಸಿವುದಾದರೆ ಮ್ಯಾಸ ಬೇಡರ ಬುಡಕಟ್ಟಿನ ಮೂಲ ಪುರುಷ ಚೆಟ್ಲುಗೊಂಡು ಮಲ್ಲಿನಾಯಕ. ಈತನ ಹೆಂಡತಿ ಚಂಚುಲಕ್ಷ್ಮಿ. ಇವರಿಗೆ ಹುಟ್ಟಿದ ಮೂವರು ಮಕ್ಕಳಲ್ಲಿ ಯರಮಂಚನಾಯಕ ಮ್ಯಾಸಬೇಡ ಸಮುದಾಯಕ್ಕೆಲ್ಲ ಆರಾಧ್ಯನೆನಿಸಿದ್ದಾನೆ. ಈತ ಕುಲವಿ;ಲ್ಲದವರಿಗೆ ಕುಲ, ನೆಲೆ ಇಲ್ಲದವರಿಗೆ ನೆರಳು ಕಲ್ಪಿಸಿದನಂತೆ. ಗಮನಿಸಬೇಕಾದ ಮುಖ್ಯ ಅಂಶಗಳೆಂದರೆ ಮುಸ್ಲಿಂ ಸಮುದಾಯದ ಹೆಣ್ಣುಮಗಳನ್ನು ಕುಲಕ್ಕೆ ಸೇರಿಸಿಕೊಂಡಿದ್ದಾನೆ. ಹಾಗೆ ಬ್ರಾಹ್ಮಣ ಸಮುದಾಯದ ಹೆಣ್ಣು ಮಗಳನ್ನುತನ್ನ ಕುಲದ ಒಬ್ಬನಿಗೆ ಮದುವೆ ಮಾಡಿಸಿದ್ದಾನೆ. ಇಂತಹ ಯರಮಂಚನಾಯಕನ ಬಗ್ಗೆ ದೀರ್ಘವಾದ ಕಥನಗಳಿದ್ದು, ಈಗಲೂ ಭಕ್ತಿ ಭಾವದಿಂದ ಹಾಡುವುದನ್ನು ಕಾಣಬಹುದು.

ಕಾಡುಗೊಲ್ಲರಲ್ಲಿ ಪ್ರಚಲಿತವಿರುವ ಕುಲಮೂಲ ಕಥನಗಳಲ್ಲಿ ಸಾಂಸ್ಕೃತಿಕ ನಾಯಕರ ಹುಟ್ಟಿನ ಬಗ್ಗೆ ಪ್ರಸ್ತಾಪವಾಗಿರುವ ವಿವರಗಳು. ಇಲ್ಲಿನ ಜುಂಜಪ್ಪ, ಎತ್ತಪ್ಪ, ಪಾತಪ್ಪ, ಕ್ಯಾತಪ್ಪ ಯಾರೇ ಇರಬಹುದು ಇವರೆಲ್ಲರ ಹುಟ್ಟು ವಿಶಿಷ್ಟ. ಶಿಷ್ಟ ಪುರಾಣಗಳಲ್ಲಿ ಹೇಳಿರುವಂತೆ ಪುರುಷನ ಪಾದದಿಂದ ಜನಿಸಿದವರಲ್ಲ. ಹುತ್ತ, ಬುತ್ತಿ, ತುಪ್ಪ ಇಂಥ ಜೀವದಾತುಗಳಿಂದ ಜನಿಸಿದವರು.(ಜನಪದ ಮಹಾಕಾವ್ಯಗಳು ಮತ್ತು ಪ್ರತಿಸಂಸ್ಕೃತಿ ಡಾ.ಎಸ್.ಎಂ.ಮುತ್ತಯ್ಯ.) ಕಾಡುಗೊಲ್ಲ ಸಮುದಾಯದ

ಜುಂಜಪ್ಪ ಐತಿಹಾಸಿಕ ವ್ಯಕ್ತಿಯಾದರೂ ಪೌರಾಣಿಕ ನೆಲೆಯ ಒಂದು ದೀರ್ಘ ಕಥಾನಕದೊಡನೆ ಬೆರೆತು ಕೇವಲ ಕಾಡುಗೊಲ್ಲ ಸಮುದಾಯವಲ್ಲದೆ ಈ ಪರಿಸರದ ಎಲ್ಲಾ ಸಮುದಾಯದವರಿಂದಲೂ ಆರಾಧಿಸಿಕೊಳ್ಳುತ್ತಿದ್ದಾನೆ. ಈತನ ಬಗ್ಗೆ ಇರುವ ಗದ್ಯ ಮತ್ತು ಪದ್ಯ ಪ್ರಕಾರಗಳ ಕಥನವನ್ನು ಗಣೆ ಎಂಬ ವಾದ್ಯದೊಂದಿಗೆ ಹಾಡುತ್ತಾರೆ.

ಅಂತಿಮವಾಗಿ ಬುಡಕಟ್ಟು ಸಮುದಾಯದ ಸಾಂಸ್ಕೃತಿಕ ನಾಯಕರು ಕಾಲ, ದೇಶ, ಸ್ಥಳ, ಇವುಗಳ ಎಲ್ಲೆಯನ್ನು ಮೀರಿ ತಮ್ಮದೊಂದು ಪರಂಪರೆಯನ್ನು ಹಬ್ಬ, ಜಾತ್ರೆ, ಉತ್ಸವ, ನಂಬಿಕೆ ಆಚರಣೆಗಳ ಮೂಲಕ ತಮ್ಮಗಳ ನೆನಪನ್ನು ಶಾಶ್ವತವಾಗಿ ಬಿಟ್ಟು ಹೋಗಿದ್ದಾರೆ. ಕೆಳವರ್ಗದ ಅಥವಾ ಬುಡಕಟ್ಟು ಮೂಲದ ಸಾಂಸ್ಕೃತಿಕ ನಾಯಕರೆಲ್ಲಾ ತಮ್ಮ ಸಮುದಾಯವನ್ನು ಮೀರಿ ಒಂದು ವಿಸ್ತಾರವಾದ ಪ್ರದೇಶಕ್ಕೆ ಸಾಂಸ್ಕೃತಿಕ ನಾಯಕರಾಗಿ ಕಂಡು ಬರುತ್ತಾರೆ. ಜನಾಂಗದ ಒಳಿತಿಗಾಗಿ, ಪ್ರಾಣಿ ಪಕ್ಷಿಗಳ ರಕ್ಷಣೆಗಾಗಿ ಹೋರಾಡಿ ತೀರಿಕೊಡವರ ಆಯುಧಗಳನ್ನೋ, ಇನ್ನಿತರೆ ಕುರುಹುಗಳನ್ನೋ ಇಟ್ಟು ಪೂಜಿಸುವುದರ ಜೊತೆಗೆ ಇಂಥ ವೀರರ ಹೆಸರುಗಳು ಶಾಸ್ವತವಾಗಿ ಉಳಿಯಲು ಬುಡಕಟ್ಟು ಸಮುದಾಯದವರು ತಮ್ಮ ಮನೆಗಳಿಗೆ, ಮನೆಯ ಸದಸ್ಯರುಗಳಿಗೆ ಇಟ್ಟುಕೊಳ್ಳುವ ಮೂಲಕ ನಿತ್ಯ ಆರಾಧನೆಗೊಳ್ಳುತ್ತಿರುವುದನ್ನು ಕಾಣಬಹುದು.

ಪರಾಮರ್ಶನ ಗ್ರಂಥಗಳು.

೧.ಧರ್ಮ, ವಿಶ್ವಕೋಶ, ೨೦೦೨, ಸಂ. ರಹಮತ್ ತರೀಕರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೨.ಜನಪದಮಹಾಕಾವ್ಯಗಳು ಮತ್ತು ಪ್ರತಿಸಂಸ್ಕೃತಿ, ೨೦೦೮, ಎಸ್.ಎಂ.ಮುತ್ತಯ್ಯ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು

೩.ಚಿತ್ರದುರ್ಗ ಜಿಲ್ಲೆಯ ಬುಡಕಟ್ಟು ವೀರರು, ೨೦೦೨, ಡಾ. ವಿರೂಪಾಕ್ಷಿ ಪೂಜಾರಹಳ್ಳಿ, ಪ್ರಸಾರಾಂಗ, ಕನ್ನಡ.ವಿಶ್ವವಿದ್ಯಾಲಯ, ಹಂಪಿ

೪.ಮ್ಯಾಸ ಬೇಡರ ಕಥನಗಳು, ೧೯೯೯, ಎ.ಎಸ್.ಪ್ರಭಾಕರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೫.ಬುಡಕಟ್ಟು ದೈವಾರಾಧನೆ೨೦೦೦, ಹಿ.ಚಿ.ಬೋರಲಿಂಗಯ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೬.ತಿಳಿದಷ್ಟೇ ಬಯಲು. ಜಾಜಿ ದೇವೇಂದ್ರಪ್ಪ. ೨೦೨೦. ಶ್ರೀ ಮರಡಿಲಿಂಗೇಶ್ವರ ಪ್ರಕಾಶನ. ಮೈಸೂರು.

ಲೇಖಕರ ಹೆಸರು & ವಿಳಾಸ

೧. ಡಾ. ಡಿ.ಕೆ ಚಿತ್ತಯ್ಯ ಪೂಜಾರ್
ಅಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ,
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು – ೫೬೦ ೦೫೬
ಮೊ: ೯೮೪೫೬ ೩೭೨೪೭

೨. ಡಾ. ಮೋಹನ ಕುಂಟಾರ್
ಪ್ರಾಧ್ಯಾಪಕರು,
ಪಯಸ್ವಿನಿ, ಶಾಂತಿನಗರ,
ಕಾಲೇಜು ರಸ್ತೆ,
ಹೊಸಪೇಟೆ ೫೮೩೦೦೧
ಮೊ: ೯೪೪೮೯ ೯೭೪೫೦

೩. ಡಾ. ನಿತ್ಯಾನಂದ .ಬಿ. ಶೆಟ್ಟಿ
ಪ್ರಾಧ್ಯಾಪಕರು,
ಡಾ. ಡಿ.ವಿ.ಗುಂಡಪ್ಪ
ಕನ್ನಡ ಅಧ್ಯಯನ ಕೇಂದ್ರ,
ತುಮಕೂರು ವಿಶ್ವವಿದ್ಯಾಲಯ,
ತುಮಕೂರು – ೫೭೨ ೧೦೧
ಮೊ : ೯೯೦೧೮ ೬೩೯೬೧

೪. ಡಾ. ಎಚ್.ಎಸ್ ಸತ್ಯನಾರಾಯಣ
'ಅಲಂಪು' ನಂ–೬
ಟೀಚರ್ಸ್ ಕಾಲನಿ, ಹೌಸಿಂಗ್ ಬೋರ್ಡ್,
ಜ್ಯೋತಿನಗರ ಅಂಚೆ,
ಚಿಕ್ಕಮಗಳೂರು – ೫೭೭ ೧೦೨
ಮೊ : ೮೧೪೭೫ ೪೪೪೫೪

೫. ಡಾ. ಎ.ರಘುರಾಂ
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಮಹಾರಾಣಿ ಮಹಿಳಾ ಕಲಾ,
ವಾಣಿಜ್ಯ & ನಿರ್ವಹಣಾ ಕಾಲೇಜು,
ಶೇಷಾದ್ರಿ ರಸ್ತೆ,
ಬೆಂಗಳೂರು – ೫೬೦ ೦೦೧
ಮೊ : ೯೪೪೯೭ ೭೯೨೧೭

೬. ಡಾ. ನೆಲ್ಲಿಕಟ್ಟೆ ಎಸ್.ಸಿದ್ದೇಶ್
ಸಹಾಯಕ ಪ್ರಾಧ್ಯಾಪಕರು, ಕನ್ನಡ ಭಾರತಿ,
ಜ್ಞಾನ ಸಹ್ಯಾದ್ರಿ, ಕುವೆಂಪು ವಿಶ್ವವಿದ್ಯಾಲಯ,
ಶಂಕರಘಟ್ಟ,
ಶಿವಮೊಗ್ಗ ಜಿಲ್ಲೆ – ೫೭೭ ೪೫೧
ಮೊ : ೯೪೮೧೪ ೧೬೯೮೯

೭. ಡಾ. ಗಿರೀಶ್ ಮೂಗ್ತಿಹಳ್ಳಿ
ಸಂಶೋಧಕರು,
ಶ್ರೀ ಅಮೃತೇಶ್ವರ ದೇವಾಲಯ ಸಮೀಪ,
ಚಿಕ್ಕಮಗಳೂರು – ೫೭೭ ೧೩೩
ಮೊ : ೮೦೭೩೪ ೦೩೧೧೨

೮. ಡಾ. ಬಸವರಾಜ.ಪಿ.ನಾಯಕ
ಕನ್ನಡ ಉಪನ್ಯಾಸಕರು,
ವಾರ್ಡ್ ನಂಬರ್ ೦೩, ಬ್ರಾಹ್ಮಣರ ಓಣಿ,
ದ್ಯಾಮವ್ವನ ಗುಡಿ ಹತ್ತಿರ,
ಸಿಂಧನೂರು – ೫೮೪ ೧೨೮
ರಾಯಚೂರು ಜಿಲ್ಲೆ
ಮೊ : ೮೬೧೮೨ ೨೭೭೫೫

೯. ಡಾ. ಸತ್ಯಮಂಗಲ ಮಹದೇವ
ನಂ.೧೨೧, ನಾರಾಯಣಪ್ಪ ಬಿಲ್ಡಿಂಗ್,
ಜಿ–ಎರಡನೇ ಅಡ್ಡರಸ್ತೆ,
ಕೆ.ಹೆಚ್.ಬಿ.ಮುಖ್ಯ ರಸ್ತೆ,
ಮನೋರಾಯನ ಪಾಳ್ಯ ಆರ್.ಟಿ.ನಗರ,
ಬೆಂಗಳೂರು – ೫೬೦ ೦೩೨
ಮೊ : ೯೭೪೦೯ ೪೧೧೨೬

೧೦. ಕರುಣಾಕರ. ಆರ್ .ಕೆ
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಮಹಾರಾಣಿ ಮಹಿಳಾ ಕಲಾ,
ವಾಣಿಜ್ಯ & ನಿರ್ವಹಣಾ ಕಾಲೇಜು,
ಶೇಷಾದ್ರಿ ರಸ್ತೆ,
ಬೆಂಗಳೂರು – ೫೬೦ ೦೦೧
ಮೊ : ೯೬೧೧೪ ೯೭೭೮೯

೧೧. ಡಾ.ಜಿ.ಎಸ್.ರಮೇಶ್
ವಿಶ್ರಾಂತ ಪ್ರಾಧ್ಯಾಪಕರು,
೩೫೮/೨ 'ಹದುಳ' ೨ನೇ ಕ್ರಾಸ್,
ವಿನಾಯಕನಗರ,
ತಿಪಟೂರು – ೫೭೨ ೨೦೧
ಮೊ : ೯೮೪೪೨ ೪೧೩೫೩

೧೨. ಡಾ. ರವಿಕುಮಾರ್ ಬಾಗಿ
ಕನ್ನಡ ಅಧ್ಯಾಪಕ, ನ್ಯಾಷನಲ್
ಪದವಿ ಕಾಲೇಜು,
ಬಸವನಗುಡಿ,
ಬೆಂಗಳೂರು – ೫೬೦ ೦೦೪
ಮೊ : ೮೪೯೬೮ ೪೯೯೯೨

೧೩. ಡಾ. ಮಂಜುನಾಥ ಪಾಳ್ಯ
ಸಹ ಪ್ರಾಧ್ಯಾಪಕರು,
ಕನ್ನಡ ಸ್ನಾತಕೋತ್ತರ ವಿಭಾಗ,
ಶ್ರೀ ಸತ್ಯಸಾಯಿ ಮಾನವ
ಅಭ್ಯುದಯ ವಿಶ್ವವಿದ್ಯಾಲಯ,
ಮುದ್ದೇನಹಳ್ಳಿ,
ಚಿಕ್ಕಬಳ್ಳಾಪುರ– ೫೬೨ ೧೦೧
ಮೊ : ೯೪೮೨೨ ೧೩೯೩೦

೧೪. ಡಾ. ಆರ್.ಮಹೇಶ್
ಪ್ರಾಂಶುಪಾಲರು,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಭರಮಸಾಗರ – ೫೭೭೫೦೧
ಚಿತ್ರದುರ್ಗ ತಾ & ಜಿಲ್ಲೆ.
ಮೊ : ೯೪೪೮೮ ೪೬೬೯೮

೧೫. ಡಾ ತಾರಾಮಣಿ. ಆರ್
ಸಹಾಯಕ ಪ್ರಾಧ್ಯಾಪಕರು,
ಕನ್ನಡ ವಿಭಾಗ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಕೆ.ಆರ್.ಪುರಂ,
ಬೆಂಗಳೂರು – ೫೬೦ ೦೩೬
ಮೊ : ೯೬೧೧೩ ೩೭೫೫೮

೧೬. ಡಾ. ಚಿತ್ತಯ್ಯ ಕೆ
ಸಹಾಯಕ ಪ್ರಾಧ್ಯಾಪಕರು,
ಕನ್ನಡ ವಿಭಾಗ,
ಹೆಚ್.ಪಿ.ಪಿ.ಸಿ.ಸರ್ಕಾರಿ ಪ್ರಥಮ
ದರ್ಜೆ ಕಾಲೇಜು,
ಚಳ್ಳಕೆರೆ – ೫೭೭ ೫೨೨
ಮೊ : ೯೪೪೮೫ ೬೭೧೧೮

೧೭. ಡಾ. ಧನಂಜಯ ಕುಂಬ್ಳೆ
ಸಹಾಯಕ ಪ್ರಾಧ್ಯಾಪಕರು,
ಎಸ್.ವಿ.ಪಿ.ಕನ್ನಡ ಅಧ್ಯಯನ ಸಂಸ್ಥೆ,
ಮಂಗಳೂರು ವಿಶ್ವವಿದ್ಯಾಲಯ,
ಮಂಗಳೂರು – ೫೭೪ ೧೯೯
ಮೊ : ೮೩೧೦೩ ೦೦೮೭೫

೧೮. ಡಾ. ಅಶೋಕ ಎನ್.ಎಸ್
ಸಹಾಯಕ ಪ್ರಾಧ್ಯಾಪಕರು,
ಎಸ್ ಜೆ ಆರ್ ಮಹಿಳಾ ಪದವಿ
ಕಾಲೇಜು, ರಾಜಾಜಿನಗರ,
ಬೆಂಗಳೂರು – ೫೬೦ ೦೧೦
ಮೊ : ೯೦೬೬೫ ೩೬೭೭೦

೧೯. ಡಾ. ಚೈತಾಲಿ. ಕೆ.ಎಸ್
ಸಹಾಯಕ ಪ್ರಾಧ್ಯಾಪಕರು,
ಕನ್ನಡ ವಿಭಾಗ,
ಸರ್ಕಾರಿ ಪ್ರಥಮ ದರ್ಜೆ
ಕಾಲೇಜು (ಸ್ವಾಯತ್ತ),
ಗುಬ್ಬಿ – ೫೭೨ ೨೧೬
ತುಮಕೂರು ಜಿಲ್ಲೆ.
ಮೊ : ೯೪೪೯೩ ೦೬೫೭೬

೨೦. ಡಾ. ಗುರುಪಾದ ಘಿವಾರಿ
ವಿಶ್ರಾಂತ ಕನ್ನಡ ಪ್ರಾಧ್ಯಾಪಕರು,
ಬಸವ ನಗರ,
ತಾಳಿಕೋಟೆ – ೫೮೬ ೨೧೪
ವಿಜಯಪುರ ಜಿಲ್ಲೆ.
ಮೊ : ೯೪೪೯೨ ೮೧೯೪೪

೨೧. ಪ್ರದೀಪ ಆರ್.ಎನ್
ಕನ್ನಡ ಸಂಶೋಧನಾ ವಿದ್ಯಾರ್ಥಿ,
ಕರ್ನಾಟಕ ಕೇಂದ್ರೀಯ
ವಿಶ್ವವಿದ್ಯಾಲಯ,
ಕಲಬುರಗಿ – ೫೮೫ ೩೬೭
ಮೊ : ೯೯೪೫೧ ೦೯೬೦೦

೨೨. ಡಾ.ರವಿಶಂಕರ್.ಎ.ಕೆ
ಸಹಾಯಕ ಪ್ರಾಧ್ಯಾಪಕರು,
ಕನ್ನಡ ವಿಭಾಗ,
ಕ್ರಿಸ್ತು ಜಯಂತಿ ಕಾಲೇಜು ಸ್ವಾಯತ್ತ,
ಬೆಂಗಳೂರು – ೫೬೦ ೦೭೭
ಮೊ : ೯೬೬೩೪ ೩೩೪೦೩

೨೩. ಡಾ. ಪಾವಗಡ
ರೇಣುಕಾಪ್ರಸಾದ್ ಪಿ.ಆರ್
ಮುಖ್ಯಸ್ಥರು, ಕನ್ನಡ ವಿಭಾಗ,
ಎಸ್.ಎಸ್.ಐ.ಬಿ.ಎಂ.
ಎಸ್.ಎಸ್.ಐ.ಟಿ. ಕ್ಯಾಂಪಸ್,
ತುಮಕೂರು – ೫೭೨ ೧೦೧
ಮೊ : ೯೪೪೮೮ ೯೨೬೫೫

೨೪. ಡಾ. ಮೇಘನಾ. ಕೆ
ಸಹಾಯಕ ಪ್ರಾಧ್ಯಾಪಕಿ,
ಕನ್ನಡ ಪದವಿ ಮತ್ತು ಸ್ನಾತಕೋತ್ತರ
ಅಧ್ಯಯನ ಕೇಂದ್ರ,
ಶ್ರೀ ಸತ್ಯಸಾಯಿ ಮಾನವ ಅಭ್ಯುದಯ
ವಿಶ್ವವಿದ್ಯಾಲಯ,
ಚಿಕ್ಕಬಳ್ಳಾಪುರ – ೫೬೨ ೧೦೧
ಮೊ : ೯೮೪೫೯ ೧೭೪೬೫

೨೫. ಅಸಗೋಡು ಆನಂದಪ್ಪ .ಡಿ
ಕನ್ನಡ ಉಪನ್ಯಾಸಕರು
ಎಸ್.ಜೆ.ಎಂ. ಪದವಿ ಪೂರ್ವ ಕಾಲೇಜು.
ಹೊಳಲ್ಕೆರೆ, ಚಿತ್ರದುರ್ಗ ಜಿಲ್ಲೆ.
ಮೊ : ೯೪೪೯೪ ೮೯೭೬೯

೨೬. ಡಾ. ಮಲ್ಲಿನಾಥ ಎಸ್
ತಳವಾರ
ಕನ್ನಡ ಪ್ರಾಧ್ಯಾಪಕರು,
ನೂತನ ಪದವಿ ಮಹಾವಿದ್ಯಾಲಯ,
ಕಲಬುರಗಿ – ೫೮೫ ೧೦೩
ಮೊ : ೯೯೮೬೩ ೫೩೨೮೮

೨೭. ಪುನೀತ್ ಕುಮಾರ್
ಸಂಶೋಧನಾ ವಿದ್ಯಾರ್ಥಿ,
ಸರ್ಕಾರಿ ಕಲಾ ಕಾಲೇಜು,
ಕನ್ನಡ ಸ್ನಾತಕೋತ್ತರ ಅಧ್ಯಯನ ಮತ್ತು
ಸಂಶೋಧನಾ ಕೇಂದ್ರ,
ಬೆಂಗಳೂರು – ೫೬೦ ೦೦೧
ಮೊ : ೯೦೬೬೬ ೬೪೬೮೮

೨೮. ಡಾ. ಮಲ್ಲಿಕಾರ್ಜುನಯ್ಯ ಎಂ.ಟಿ
ಅತಿಥಿ ಉಪನ್ಯಾಸಕರು, ಕನ್ನಡ ವಿಭಾಗ,
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ತುಮಕೂರು – ೫೭೨ ೧೦೧
ಮೊ : ೯೪೪೮೯ ೮೮೭೭೪

೨೯. ಡಾ.ಜೆ.ಕರಿಯಪ್ಪ ಮಾಳಿಗೆ
ಸಹ ಪ್ರಾಧ್ಯಾಪಕರು, ಕನ್ನಡ
ಸ್ನಾತಕೋತ್ತರ ಕೇಂದ್ರ,
ಸರ್ಕಾರಿ ಕಲಾ ಕಾಲೇಜು (ಸ್ವಾಯತ್ತ),
ಚಿತ್ರದುರ್ಗ – ೫೭೭ ೫೦೧
ಮೊ : ೯೪೮೨೧ ೦೮೭೫೬

ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಸಾಹಿತ್ಯ ಪತ್ರಿಕೆಗಳು ತುಂಬ ಪ್ರಮುಖ ಪಾತ್ರ ವಹಿಸುತ್ತವೆ. ಆ ನಿಟ್ಟಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿಸುತ್ತಿರುವ 'ಅನಿಕೇತನ' ತನ್ನದೇ ಆದ ಕಾರಣಗಳಿಂದ ಮಹತ್ವವನ್ನು ಪಡೆದಿದೆ. ಮಾಧ್ಯಮಗಳಲ್ಲಿ ಸಾಹಿತ್ಯದ ಚರ್ಚೆಗಳು ಹೆಚ್ಚು ಚಾಲ್ತಿಗೆ ಬರುತ್ತಿರುವುದು ತುಂಬಾ ಆಶಾದಾಯಕ ಬೆಳವಣಿಗೆಯಾಗಿದೆ. ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ಬೆಳೆಸಲು ಜೀವಮಾನವಿಡೀ ಶ್ರಮಿಸಿದವರ ಇತಿಹಾಸ ನಮ್ಮಲ್ಲಿದೆ. ತಮ್ಮದೇ ಆದ ಚಿಂತನೆಗಳ ಮೂಲಕ ಕರ್ನಾಟಕದ ಚರಿತ್ರೆಯನ್ನು ಕಟ್ಟಲು ಅನೇಕರು ಶ್ರಮಿಸಿದ್ದಾರೆ. ಅಂತಹ ಆದರ್ಶಗಳ ಹಿನ್ನೆಲೆಯಲ್ಲಿ ಸಾಮಾಜಿಕವಾಗಿ, ರಾಜಕೀಯವಾಗಿ, ಸಾಂಸ್ಕೃತಿಕವಾಗಿ ನಮ್ಮ ಚರಿತ್ರೆಯನ್ನು ಕಟ್ಟಿಕೊಳ್ಳುವ ದಿಸೆಯಲ್ಲಿ ಪ್ರಯತ್ನಗಳು ನಿರಂತರ ನಡೆಯಬೇಕಿದೆ.

ಓದುವ ಸಂಸ್ಕೃತಿಯೊಂದು ನಮ್ಮ ಬದುಕನ್ನು ಕಟ್ಟಬಲ್ಲದು, ಮುನ್ನಡೆಸಬಲ್ಲದು ಎಂಬ ತಿಳಿವಳಿಕೆಯನ್ನು ಸದಾ ನೆನಪಿನಲ್ಲಿಡಬೇಕಾಗಿದೆ. ಯುವ ಜನಾಂಗ ಮೊಬೈಲ್ ಗೀಳಿಗೆ ಬಿದ್ದು ನೋಡುವ ಸಂಸ್ಕೃತಿಯಲ್ಲಿ ಕಳೆದುಹೋಗುತ್ತಿರುವುದನ್ನು ನಿಯಂತ್ರಿಸಬೇಕಿದೆ. ವಿಭಿನ್ನವಾದ ಜ್ಞಾನಶಿಸ್ತುಗಳ ಕಡೆಗೆ ಅವರ ಗಮನ ಕೇಂದ್ರೀಕರಿಸುವಂತೆ ಮಾಡಲು ಶ್ರಮಿಸಬೇಕಾಗಿದೆ. ನಮ್ಮ ಶಿಕ್ಷಣ ವ್ಯವಸ್ಥೆ ಅಂತಹ ಕಿರುದಾರಿಗಳನ್ನು ಮಹಾಮಾರ್ಗವಾಗುವಂತೆ ಮಾಡಬೇಕಿದೆ. ಕರ್ನಾಟಕದ ಚರಿತ್ರೆ, ಕನ್ನಡ ಸಾಹಿತ್ಯ, ಕನ್ನಡ ಸಂಶೋಧನೆ ಮುಂತಾದ ವಿಚಾರಗಳ ಬಗೆಗಿನ ಅಧ್ಯಯನ, ಅನುಸಂಧಾನ ಮತ್ತಷ್ಟು ಹೆಚ್ಚಬೇಕಿದೆ. ಅಂತಹ ಪ್ರಯತ್ನಕ್ಕೆ ಈ ರೀತಿಯ ಸಂಚಿಕೆಗಳು ಸಹಕಾರಿಯಾಗಿವೆ.